MYSORE GOVERNMENT
166
ORIENTAL LIBRARY.
1239
22

* ವಿದ್ಯಾದಾಯಿನಿ *

(A Monthly Journal.)

ಭಾಗ ೨೨]　　ಜನವರಿ—೧೯೧೪　　[ಸಂಚಿಕೆ ೧.

ಗೌರ್ನಮೆಂಟ್ ಪ್ರಾಕ್ಟಿಸಿಂಗ್ ಸ್ಕೂಲ್

ಕಿಂಡರ್‌ಗಾರ್ಟ್ನ್ ಸೆಕ್ಷ್ನ್, ಮೈಸೂರು.

1913 ನೆಯ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ನಡೆಯಿಸತಕ್ಕ ಮಲ್ಲಿಗೆಯ ಜಾತಿ ವಿಮರ್ಶೆಯ ಸ್ಕೀಮ್

:O:

1. ಉದ್ದೇಶ—ಈ ಜಾತಿಯ ಹೂಗಳು ಸುವಾಸನೆಯುಳ್ಳವುಗಳಾಗಿಯೇ ಇರುವುವು ಇವು ಶ್ರೇಷ್ಠವಾದವುಗಳೆಂದು ನಮ್ಮ ಜನಗಳು ತಿಳಿದು ದೇವರ ಪೂಜೆಗೂ ತಾವು ಮುಡಿದುಕೊಳ್ಳುವುದಕ್ಕೂ ಉಪಯೋಗಿಸುತ್ತಿರುವರು. ಮಕ್ಕಳಿಗೆ ಒಂದು ವರ್ಷ ತುಂಬಿದ ಮೊದಲುಗೊಂಡು ಹೂವನ್ನು ಮುಡಿಸುವದಕ್ಕೆ ಪ್ರಾರಂಭಿಸುವರು. ಅನೇಕರು ತಮ್ಮ ಹಿತ್ತಲುಗಳಲ್ಲಿ ಈಜಾತಿಯ ಗಿಡಗಳನ್ನು ಬೆಳೆಯಿಸಿರುವರು. ಅಲ್ಲದೆ ಪಾಠಶಾಲೆಗೆ ಸಂಬಂಧಪಟ್ಟ ಮಕ್ಕಳ ಕೈತೋಟದಲ್ಲಿ ಈ ಜಾತಿಯ ಗಿಡಗಳನ್ನು ನಾವು ಹಾಕಿರುವೆವು. ಈ ಕಾರಣಗಳಿಂದ ಇಲ್ಲಿನ ಬಾಲಕರಿಗೆ ಇವುಗಳ ಪರಿಚಯವು ಸಾಮಾನ್ಯವಾಗಿರುವುದು. ಆದುದರಿಂದ ನಮ್ಮ ಪಾಠಶಾಲೆಯ ಬಾಲಕರುಗಳಿಂದ ಈಜಾತಿ ವಿಮರ್ಶೆಯನ್ನು ನಡೆಯಿಸುವುದು ಅನುಕೂಲವಾಗಿರುವುದು.

II. **ವಿಮರ್ಶೆಯನ್ನು ನಡೆಯಿಸತಕ್ಕ ಕ್ರಮ** — ಈಜಾತಿಯ ಗಿಡಗಳು ಬಹಳ ದಿವಸಗಳವರೆಗೂ ಜೀವಿಸಿರುತ್ತವೆ ಆದುದರಿಂದ ಇವುಗಳ ಉತ್ಪತ್ತಿ ಮೊದಲ್ಗೊಂಡು ಕೊನೆಯವರಿಗೂ ನಡೆಯಿಸುವದಕ್ಕಾಗುವದಿಲ್ಲ. ಆದುದರಿಂದ ಗಿಡವು ಚಿಗುರುವುದಕ್ಕೆ ಉಪಕ್ರಮವಾದಂದಿನಿಂದ ಹೂ ಬಿಡುವುದು ನಿಲ್ಲುವವರೆಗೆ ವಿಮರ್ಶೆಯನ್ನು ನಡೆಯಿಸಿದರೆ ಸಾಕಾಗಿರುತ್ತದೆ. ಹೀಗೆ ನಡೆಯಿಸುವದರಿಂದ ವಿಮರ್ಶೆಯನ್ನು ಸ್ವಲ್ಪ ಕಾಲದಲ್ಲಿಯೇ ಮುಗಿಸಬಹುದು. ಮತ್ತು ಮಕ್ಕಳು ಸಂಪೂರ್ಣವಾದ ವಿಷಯಜ್ಞಾನವನ್ನು ಹೊಂದುವರು.

III. **ವರ್ಣನೆ** —(1) ಗಿಡ — ಇವು ಸಾಮಾನ್ಯವಾಗಿ ಬಳ್ಳಿಗಳಾಗಿ ಬೆಳೆದು ಹಬ್ಬುವುವು. ಆದರೆ ಸುತ್ತುಮಲ್ಲಿಗೆಯು ಹಬ್ಬದೆ ಪೊದೆಯಾಗಿ ಬೆಳೆಯುವುದು. ಪಾರಿಜಾತವು ಸಣ್ಣ ಮರವಾಗುವುದು.

(2) **ಕಾಂಡ** — ಕಾಂಡವು ಹಬ್ಬುವ ಬಳ್ಳಿಯಾಗಿರುವುದು. ಬೇರುಗಳ ಮೂಲಕ ನೆಲದಿಂದ ತೆಗೆದುಕೊಂಡ ಆಹಾರವನ್ನು ಗಿಡದ ಎಲ್ಲಾ ಭಾಗಗಳಿಗೂ ತೆಗೆದುಕೊಂಡುಹೋಗಿ ಅವುಗಳನ್ನು ಪೋಷಿಸುತ್ತದೆ. ಒಂದು ಕೊಂಬೆಯನ್ನು ಕತ್ತರಿಸಿಬಿಟ್ಟರೆ ಸ್ವಲ್ಪ ಕಾಲದಲ್ಲಿಯೇ ಆ ಕೊಂಬೆಯು ಬಾಡುವುದು. ಆ ಕೊಂಬೆಯ ಕತ್ತರಿಸಿದ ಭಾಗವನ್ನು ನೀರಿನೊಳಗಿಟ್ಟರೆ ಆ ಕೊಂಬೆಯು ಮೊದಲಿನಂತೆಯೇ ಕೋಮಲವಾಗಿ ಆಗುವುದು. ಈ ಪರೀಕ್ಷೆಯಿಂದ ಮೇಲಿನ ಅಂಶವನ್ನು ಮಕ್ಕಳಿಗೆ ತಿಳಿಯಿಸುವುದು. ಬಲಿತ ಕಾಂಡವು ಒರಟಾದದ್ದಾಗಿಯೂ ಮಾಸಲು ಬೂದುಬಣ್ಣಕ್ಕೂ ಇರುವುದು. ಎಳೆಯ ಕಾಂಡವು ಹಸುರು ಬಣ್ಣಕ್ಕಿರುವುದು. ಕಾಂಡವನ್ನು ನೆಲದೊಳಗೆ ನೆಟ್ಟರೆ ಗಿಣ್ಣುಗಳಲ್ಲಿ ಬೇರುಗಳು ಹೊರಡುವುವು. ನೆಲದ ಮೇಲ್ಭಾಗದಲ್ಲಿರುವ ಕಾಂಡದ ಭಾಗದಿಂದ ಎಲೆ ಮೊಗ್ಗುಗಳು ಹೊರಟು ಶಾಖೆಗಳಾಗುವುವು. ಬಳ್ಳಿಯನ್ನು ನೆಲದಲ್ಲಿ ಹಬ್ಬುವಂತೆ ಮಾಡಿದರೆ ಗಿಣ್ಣುಗಳಿಂದ ಬೇರುಗಳು ನೆಲಕ್ಕಿಳಿಯುವುವು.

(3) **ಎಲೆ** — ಒಂದೊಂದು ಗಿಣ್ಣಿನಲ್ಲಿ ಎದುರುಬದುರಾಗಿ ಎರಡೆಲೆಗಳಿವೆ. ಮೇಲಿನ ಗಿಣ್ಣಿನ ಎಲೆಗಳು ಕೆಳಗಡೆಯ ಗಿಣ್ಣಿನ ಎಲೆಗಳಿಗೆ ಸಮಕೋಣದಲ್ಲಿವೆ

ಇದರಿಂದ ಗಾಳಿ, ಬೆಳಕು, ಗಿಡದ ಎಲ್ಲಾ ಭಾಗಗಳಿಗೂ ಬೀಳುವಂತೆ ದೇವರು ಅನುಕೂಲ ಮಾಡಿದ್ದಾನೆ. ಬಳ್ಳಿಯನ್ನು ತಿರುಗಿಸಿ ಎಲೆಗಳ ಹಿಂಭಾಗವು ಬಿಸಿಲಿಗೆ ಬೀಳುವಂತೆ ಮಾಡಿದರೂ ಸ್ವಲ್ಪ ಕಾಲದಲ್ಲೇ ಎಲೆಗಳ ಮೇಲ್ಭಾಗವೇ ಬಿಸಿಲಿನ ಕಡೆಗೆ ತಿರುಗಿಕೊಳ್ಳುವುದು. ಒಂದು ಬಳ್ಳಿಯ ಕುಡಿಯನ್ನು ನೆರಳಲ್ಲಿಟ್ಟರೂ ಬೆಳಕಿನ ಕಡೆಗೇ ಬೆಳೆದುಕೊಂಡು ಬರುವುದು. ಇದರಿಂದ ಗಿಡಕ್ಕೆ ಬಿಸಿಲನ್ನು ಕಂಡರೆ ಬಲು ಆಸೆಯೆಂಬುದನ್ನು ತಿಳಿಯಿಸುವುದು. ಮಲ್ಲೆ, ಜಾಜಿ ಗಿಡಗಳಲ್ಲಿ ಮಾತ್ರ ಸಂಯುಕ್ತ ಪತ್ರಗಳಿವೆ. ಉಳಿದ ಗಿಡಗಳಲ್ಲಿ ಸಾಮಾನ್ಯ ಎಲೆಗಳಿವೆ. ಪಾರಿಜಾತ ಸೂಜಿಮಲ್ಲಿಗೆ ಈ ಎಲೆಗಳ ತುದಿಯು ಚೂಪಾಗಿದೆ. ಉಳಿದ ಗಿಡದ ಎಲೆಗಳು ಬಾದಾಮಿಯ ಮಾಟಕ್ಕಿವೆ.

(4) ಮೊಗ್ಗೆ—ಮೊಗ್ಗೆಯಲ್ಲಿ ಎರಡು ವಿಧಗಳಿವೆ. ಕಾಂಡವಾಗಿ ಬೆಳೆಯ ತಕ್ಕದ್ದು ಒಂದನೆಯದು. ಹೂವಾಗತಕ್ಕದ್ದು ಎರಡನೇಯದು. ಬಳ್ಳಿಗಳ ತುದಿಯಲ್ಲಿಯೂ, ಗಿಣ್ಣುಗಳಲ್ಲಿಯೂ ಮೊಗ್ಗೆಗಳಿರುತ್ತವೆ. ಯಾವಾಗಲೂ ಬಳ್ಳಿಯ ತುದಿಯಲ್ಲಿರುವ ಮೊಗ್ಗೆಯೇ ಬೆಳೆಯುತ್ತಿರುವುದು. ಗಿಣ್ಣುಗಳಲ್ಲಿರುವ ಮೊಗ್ಗೆಗಳು ಬಹಳ ಸಣ್ಣಗೆ ಇದ್ದಂತೆಯೇ ಇರುವುವು. ತುದಿಯ ಮೊಗ್ಗೆಯ ಬೆಳವಣಿಗೆಯು ಕಾರಣಾಂತರಗಳಿಂದ ನಿಂತುಹೋದರೆ (ಹೂವಿನ ಮೊಗ್ಗೆಯಾಗಿ ಪರಿಣಮಿಸುವುದು) ಗಿಣ್ಣುಗಳಲ್ಲಿರುವ ಮೊಗ್ಗೆಗಳು ಬೆಳೆಯುವುದಕ್ಕೆ ಪ್ರಾರಂಭಿಸುವುವು. ದೇವರ, ಪ್ರತಿಯೊಂದು ಗಿಣ್ಣುಗಳಲ್ಲಿಯೂ ಮೊಗ್ಗೆಗಳನ್ನಿಟ್ಟಿರುವುದೇತಕ್ಕೆ? ಗಿಡವು ನಾಶವಾಗದಿರುವುದಕ್ಕೆ ಎಲೆ ಮೊಗ್ಗು ಮುಂದೆ ಶಾಖೆಯಾಗಿ ಪರಿಣಮಿಸುವುದು. ಹೂಮೊಗ್ಗು ಹೂಗೊಂಚಲಾಗಿ ಪರಿಣಮಿಸುವುದು.

(5) ಹೂಗೊಂಚಲು—ಹೂ ಬಿಡುವ ಕಾಲದಲ್ಲಿ ಗಿಣ್ಣುಗಳಿಂದ ಹೂವಿನ ಮೊಗ್ಗೆಗಳು ಬೆಳೆಯುವುದಕ್ಕೆ ಪ್ರಾರಂಭಿಸುವುವು. ಮತ್ತು ತುದಿಯಲ್ಲಿರುವ ಕಾಂಡವಾಗತಕ್ಕ ಮೊಗ್ಗೆಗಳು ಹೂವಿನ ಮೊಗ್ಗೆಗಳಾಗಿ ಪರಿಣಮಿಸುವುವು. ಇಂತಹ ಮೊಗ್ಗೆಗಳು ಸಾಧಾರಣವಾಗಿ ಬಳ್ಳಿಗಳ ತುದಿಗಳಲ್ಲೂ, ತುದಿಗಳ ಹತ್ತಿರವಿರುವ ಗಿಣ್ಣುಗಳಲ್ಲೂ ಬೆಳೆಯುವುದರಿಂದ ಹೂಗಳೆಲ್ಲಾ ಹೊರಗಡೆಗೆ ಕಾಣುತ್ತಾ ಸುವಾ

II. ವಿಮರ್ಶೆಯನ್ನು ನಡೆಯಿಸತಕ್ಕ ಕ್ರಮ — ಈಜಾತಿಯ ಗಿಡಗಳು ಬಹಳ ದಿವಸಗಳವರೆಗೂ ಜೀವಿಸಿರುತ್ತವೆ ಆದುದರಿಂದ ಇವುಗಳ ಉತ್ಪತ್ತಿ ಮೊದಲ್ಗೊಂಡು ಕೊನೆಯುವರಿಗೂ ನಡೆಯಿಸುವದಕ್ಕಾಗುವದಿಲ್ಲ. ಆದುದರಿಂದ ಗಿಡವು ಚಿಗುರುವುದಕ್ಕೆ ಉಪಕ್ರಮವಾದಂದಿನಿಂದ ಹೂ ಬಿಡುವುದು ನಿಲ್ಲುವವರೆಗೆ ವಿಮರ್ಶೆಯನ್ನು ನಡೆಯಿಸಿದರೆ ಸಾಕಾಗಿರುತ್ತದೆ. ಹೀಗೆ ನಡೆಯಿಸುವದರಿಂದ ವಿಮರ್ಶೆಯನ್ನು ಸ್ವಲ್ಪ ಕಾಲದಲ್ಲಿಯೇ ಮುಗಿಸಬಹುದು. ಮತ್ತು ಮಕ್ಕಳು ಸಂಪೂರ್ಣವಾದ ವಿಷಯಜ್ಞಾನವನ್ನು, ಹೊಂದುವರು.

III. ವರ್ಣನೆ —(1) ಗಿಡ — ಇವು ಸಾಮಾನ್ಯವಾಗಿ ಬಳ್ಳಿಗಳಾಗಿ ಬೆಳೆದು ಹಬ್ಬುವುವು. ಆದರೆ ಸುತ್ತುಮಲ್ಲಿಗೆಯು ಹಬ್ಬದೆ ಪೊದೆಯಾಗಿ ಬೆಳೆಯುವುದು. ಪಾರಿಜಾತವು ಸಣ್ಣ ಮರವಾಗುವುದು.

(2) ಕಾಂಡ — ಕಾಂಡವು ಹಬ್ಬುವ ಬಳ್ಳಿಯಾಗಿರುವುದು. ಬೇರುಗಳ ಮೂಲಕ ನೆಲದಿಂದ ತೆಗೆದುಕೊಂಡ ಆಹಾರವನ್ನು ಗಿಡದ ಎಲ್ಲಾ ಭಾಗಗಳಿಗೂ ತೆಗೆದುಕೊಂಡುಹೋಗಿ ಅವುಗಳನ್ನು ಪೋಷಿಸುತ್ತದೆ. ಒಂದು ಕೊಂಬೆಯನ್ನು ಕತ್ತರಿಸಿಬಿಟ್ಟರೆ ಸ್ವಲ್ಪ ಕಾಲದಲ್ಲಿಯೇ ಆ ಕೊಂಬೆಯು ಬಾಡುವುದು. ಆ ಕೊಂಬೆಯ ಕತ್ತರಿಸಿದ ಭಾಗವನ್ನು ನೀರಿನೊಳಗಿಟ್ಟರೆ ಆ ಕೊಂಬೆಯು ಮೊದಲಿನಂತೆಯೇ ಕೋಮಲವಾಗಿ ಆಗುವುದು. ಈ ಪರೀಕ್ಷೆಯಿಂದ ಮೇಲಿನ ಅಂಶವನ್ನು ಮಕ್ಕಳಿಗೆ ತಿಳಿಯಿಸುವುದು. ಬಲಿತ ಕಾಂಡವು ಒರಟಾದದ್ದಾಗಿಯೂ ಮಾಸಲು ಬೂದು ಬಣ್ಣಕ್ಕೂ ಇರುವುದು. ಎಳೆಯ ಕಾಂಡವು ಹಸುರು ಬಣ್ಣಕ್ಕಿರುವುದು. ಕಾಂಡವನ್ನು ನೆಲದೊಳಗೆ ನೆಟ್ಟರೆ ಗಿಣ್ಣುಗಳಲ್ಲಿ ಬೇರುಗಳು ಹೊರಡುವುವು. ನೆಲದ ಮೇಲ್ಭಾಗದಲ್ಲಿರುವ ಕಾಂಡದ ಭಾಗದಿಂದ ಎಲೆ ಮೊಗ್ಗುಗಳು ಹೊರಟು ಶಾಖೆಗಳಾಗುವುವು. ಬಳ್ಳಿಯನ್ನು ನೆಲದಲ್ಲಿ ಹಬ್ಬುವಂತೆ ಮಾಡಿದರೆ ಗಿಣ್ಣುಗಳಿಂದ ಬೇರುಗಳು ನೆಲಕ್ಕಿಳಿಯುವುವು.

(3) ಎಲೆ — ಒಂದೊಂದು ಗಿಣ್ಣಿನಲ್ಲಿ ಎದುರುಬದುರಾಗಿ ಎರಡೆಲೆಗಳಿವೆ. ಮೇಲಿನ ಗಿಣ್ಣಿನ ಎಲೆಗಳು ಕೆಳಗಡೆಯ ಗಿಣ್ಣಿನ ಎಲೆಗಳಿಗೆ ಸಮಕೋಣದಲ್ಲಿವೆ

ಇದರಿಂದ ಗಾಳಿ, ಬೆಳಕು, ಗಿಡದ ಎಲ್ಲಾ ಭಾಗಗಳಿಗೂ ಬೀಳುವಂತೆ ದೇವರು ಅನುಕೂಲ ಮಾಡಿದ್ದಾನೆ. ಬಳ್ಳಿಯನ್ನು ತಿರುಗಿಸಿ ಎಲೆಗಳ ಹಿಂಭಾಗವು ಬಿಸಿಲಿಗೆ ಬೀಳುವಂತೆ ಮಾಡಿದರೂ ಸ್ವಲ್ಪ ಕಾಲದಲ್ಲೇ ಎಲೆಗಳ ಮೇಲ್ಭಾಗವೇ ಬಿಸಿಲಿನ ಕಡೆಗೆ ತಿರುಗಿಕೊಳ್ಳುವುದು. ಒಂದು ಬಳ್ಳಿಯ ಕುಡಿಯನ್ನು ನೆರಳಲ್ಲಿಟ್ಟರೂ ಬೆಳಕಿನ ಕಡೆಗೇ ಬೆಳೆದುಕೊಂಡು ಬರುವುದು. ಇದರಿಂದ ಗಿಡಕ್ಕೆ ಬಿಸಿಲನ್ನು ಕಂಡರೆ ಬಲು ಆಸೆಯೆಂಬುದನ್ನು ತಿಳಿಯಿಸುವುದು. ಮಲ್ಲೆ, ಜಾಜಿ ಗಿಡಗಳಲ್ಲಿ ಮಾತ್ರ ಸಂಯುಕ್ತ ಪತ್ರಗಳಿವೆ. ಉಳಿದ ಗಿಡಗಳಲ್ಲಿ ಸಾಮಾನ್ಯ ಎಲೆಗಳಿವೆ. ಪಾರಿಜಾತ ಸೂಜಿಮಲ್ಲಿಗೆ ಈ ಎಲೆಗಳ ತುದಿಯು ಚೂಪಾಗಿದೆ. ಉಳಿದ ಗಿಡದ ಎಲೆಗಳು ಬಾದಾಮಿಯ ಮಾಟಕ್ಕಿವೆ.

(4) ಮೊಗ್ಗೆ—ಮೊಗ್ಗೆಯಲ್ಲಿ ಎರಡು ವಿಧಗಳಿವೆ. ಕಾಂಡವಾಗಿ ಬೆಳೆಯತಕ್ಕದ್ದು ಒಂದನೆಯದು. ಹೂವಾಗತಕ್ಕದ್ದು ಎರಡನೇಯದು. ಬಳ್ಳಿಗಳ ತುದಿಯಲ್ಲಿಯೂ, ಗಿಣ್ಣುಗಳಲ್ಲಿಯೂ ಮೊಗ್ಗೆಗಳಿರುತ್ತವೆ. ಯಾವಾಗಲೂ ಬಳ್ಳಿಯ ತುದಿಯಲ್ಲಿರುವ ಮೊಗ್ಗೆಯೇ ಬೆಳೆಯುತ್ತಿರುವುದು. ಗಿಣ್ಣುಗಳಲ್ಲಿರುವ ಮೊಗ್ಗೆಗಳು ಬಹಳ ಸಣ್ಣಗೆ ಇದ್ದಂತೆಯೇ ಇರುವುವು. ತುದಿಯ ಮೊಗ್ಗೆಯ ಬೆಳವಣಿಗೆಯು ಕಾರಣಾಂತರಗಳಿಂದ ನಿಂತುಹೋದರೆ (ಹೂವಿನ ಮೊಗ್ಗೆಯಾಗಿ ಪರಿಣಮಿಸುವುದು) ಗಿಣ್ಣುಗಳಲ್ಲಿರುವ ಮೊಗ್ಗೆಗಳು ಬಳೆಯುವುದಕ್ಕೆ ಪ್ರಾರಂಭಿಸುವುವು. ದೇವರು, ಪ್ರತಿಯೊಂದು ಗಿಣ್ಣುಗಳಲ್ಲಿಯೂ ಮೊಗ್ಗೆಗಳನ್ನಿಟ್ಟಿರುವುದೇತಕ್ಕೆ ? ಗಿಡವು ನಾಶವಾಗದಿರುವುದಕ್ಕೆ ಎಲೆ ಮೊಗ್ಗು ಮುಂದೆ ಶಾಖೆಯಾಗಿ ಪರಿಣಮಿಸುವುದು. ಹೂಮೊಗ್ಗು ಹೂಗೊಂಚಲಾಗಿ ಪರಿಣಮಿಸುವುದು.

(5) ಹೂಗೊಂಚಲು—ಹೂ ಬಿಡುವ ಕಾಲದಲ್ಲಿ ಗಿಣ್ಣುಗಳಿಂದ ಹೂವಿನ ಮೊಗ್ಗೆಗಳು ಬೆಳೆಯುವುದಕ್ಕೆ ಪ್ರಾರಂಭಿಸುವುವು. ಮತ್ತು ತುದಿಯಲ್ಲಿರುವ ಕಾಂಡವಾಗತಕ್ಕ ಮೊಗ್ಗೆಗಳು ಹೂವಿನ ಮೊಗ್ಗೆಗಳಾಗಿ ಪರಿಣಮಿಸುವುವು. ಇಂತಹ ಮೊಗ್ಗೆಗಳು ಸಾಧಾರಣವಾಗಿ ಬಳ್ಳಿಗಳ ತುದಿಗಳಲ್ಲೂ, ತುದಿಗಳಹತ್ತಿರವಿರುವ ಗಿಣ್ಣುಗಳಲ್ಲೂ ಬೆಳೆಯುವುದರಿಂದ ಹೂಗಳೆಲ್ಲಾ ಹೊರಗಡೆಗೆ ಕಾಣುತ್ತಾ ಸುವಾ

ಸನೆಯನ್ನು ಸುತ್ತಲೂ ಬೀರುತ್ತ ಗಿಡಕ್ಕೆ ಅಲಂಕಾರಪ್ರಾಯವಾಗಿರುವುವು. ಇದರಿಂದಲೇ ಗೊಂಚಲು ಮುಂದಕ್ಕೆ ಬೆಳೆದು ಒಂದೊಂದು ಗೊಂಚಲಲ್ಲಿ ಸಾಮಾನ್ಯವಾಗಿ ಮೂರು ಹೂಗಳಿರುವುವು. ಗೊಂಚಲಿನಲ್ಲಿರುವ ಹೂಗಳು ಗೊಂಚಲಿನ ಕೊನೆಯಿಂದ ಬುಡದ ಕಡೆಗೆ ಅರಳುವುವು. ಇದರಿಂದಲೇ ಗೊಂಚಲು ಮುಂದಕ್ಕೆ ಬೆಳೆದು ಇನ್ನೂ ಹೆಚ್ಚು ಹೂಗಳು ಬಿಡಲು ಮಾರ್ಗವಿಲ್ಲ. ಹೂವಿನ ಪಾತ್ರದಲ್ಲಿ ಸಾಮಾನ್ಯವಾಗಿ ಐದು ಭಾಗಗಳಿರುವುವು. ಇವು ಬುಡದಲ್ಲಿ ಪರಸ್ಪರ ಸೇರಿಕೊಂಡಿರುವುವು. ಸಾಮಾನ್ಯವಾಗಿ ಈ ಹೂಗಳಲ್ಲಿ ಒಂದುವರಸೆ ದಳಗಳಿರುವುವು ಸುತ್ತು ಮಲ್ಲಿಗೆಯಲ್ಲಿ ಅನೇಕ ವರಸೆ ದಳಗಳಿರುವುವು. ಕೆಲವು ಹೂದಳಗಳ ಮೇಲ್ಭಾಗವೂ ಮಾಸಲು ಕೆಂಪುಬಣ್ಣಕ್ಕಿರುವುವು. ಪಾರಿಜಾತದ ಹೂವಿನ ಕಾವು ಹವಳದ ಬಣ್ಣಕ್ಕಿರುವುದು. ಹೂವಿನ ಕಾವಿನೊಳಗೆ ಎರಡು ಕೇಸರಗಳಿರುವುವು. ಇವು ದಳಕ್ಕೆ ಅಂಟಿಕೊಂಡಿರುವುವು.

IV. ಉಪಯೋಗ:—(1) ಈಜಾತಿಯ ಹೂಗಳನ್ನು ಮುಖ್ಯವಾಗಿ ದೇವರಪೂಜೆಗೆ ಉಪಯೋಗಿಸುತ್ತಾರೆ.

(2) ಈ ಹೂಗಳಲ್ಲಿರುವ ಸುವಾಸನೆಯಿಂದಲೂ, ಅಂದದಿಂದಲೂ ಇವನ್ನು ಮುಡಿದುಕೊಳ್ಳುವುದಕ್ಕೆ ಉಪಯೋಗಿಸುತ್ತಾರೆ.

(3) ಈ ಹೂವನ್ನು ನೀರಿನಲ್ಲಿ ಕುದಿಸಿ ಬಟ್ಟಿ ಇಳಿಸಿ ಇದರಿಂದ ಎಣ್ಣೆ ತೆಗದು ಅತ್ತರ್ ತಯಾರುಮಾಡುತ್ತಾರೆ.

ಹೀಗೆ ಈ ಗಿಡಗಳಿಂದ ನಮಗೆ ಅನೇಕ ಪ್ರಯೋಜನಗಳಿವೆ. ಈ ಗಿಡಗಳು ನೋಡುವುದಕ್ಕೆ ಅಷ್ಟು ಅಂದವಾಗಿ ಕಾಣದಿದ್ದರೂ ಮನುಷ್ಯನಿಗೆ ಎಷ್ಟು ಉಪಯುಕ್ತವಾಗಿರುವುವು.

ಈ ವಿಮರ್ಶೆಗೆ ಸಂಬಂಧಪಟ್ಟ ಕೈಕೆಲಸ ಆಟ ಮುಂತಾದವುಗಳು.

(1) ಚಿತ್ರ:— (1) ಬಿಡಿಎಲೆ, (2) ಎರಡು ಎಲೆಗಳು ಸೇರಿರುವ ಕೊಂಬೆ, (3) ನಾಲ್ಕು ಎಲೆಗಳು ಸೇರಿರುವ ಕೊಂಬೆ, (4) ಹೂವಿನ ಮೊಗ್ಗು, (5) ಅರಳಿದ

ಹೂ, (6) ಮೊಗ್ಗುಗಳಿರುವ ಗೊಂಚಲು, (7) ಅತ್ತರು ತುಂಬಿರುವ ಸೀಸೆ, (8) ಮೊಗ್ಗುಗಳನ್ನು ಕಟ್ಟಿರುವ ಸರ.

(2) ಬ್ರಷ್:— (1) ಬಿಡಿಎಲೆ, (2) ಹೂವಿನ ಮೊಗ್ಗುಗಳು, (3) ಹೂವಿನ ಮೊಗ್ಗುಗಳಿರುವ ಗೊಂಚಲು, (4) ಹೂವಿನ ಸರ, (5) ಅತ್ತರುತುಂಬುವ ಸೀಸೆ, (6) ನೀರುಹಾಕುವ ಕೊಡ.

(3) ಮಣ್ಣಿನ ಕೆಲಸ:— (1) ಬಿಡಿಎಲೆಗಳು, (2) ಹೂವಿನ ಮೊಗ್ಗು, (3) ಅತ್ತರ್ ಸೀಸೆ, (4) ನೀರುಹಾಕುವ ಕೊಡ.

(4) ಕಾಗದ ಮಡಿಸುವುದು:— (1) ಹೂವಿನ ಬುಟ್ಟಿ, (2) ದೇವರ ಪಟದ ಚೌಕಟ್ಟು, (3) ಮಕ್ಕಳು ಕೂತುಕೊಳ್ಳುವ ಗಾಡಿ, (4) ಹೂಗಳನ್ನಿಡುವ ಸೀಸೆ, (5) ತೋಟದಲ್ಲಿರುವ ಬೆಂಚ್, (6) ಸೋಫಾ, (7) ಮನೆ, (8) ಅತ್ತರ್‌ಹಾಕುವ ಬಟ್ಟಲು.

(5) ಬಳೆಕಡ್ಡಿ ಮತ್ತು ನೂಲಿಡುವುದು:— (1) ಎಲೆಗಳು, (2) ಹೂವಿನ ಮೊಗ್ಗು, (3) ಹೂಮೊಗ್ಗಿನ ಗೊಂಚಲು, (4) ಹೂಹಾಕುವ ಬುಟ್ಟಿ, (5) ಅತ್ತರಿನ ಸೀಸೆ.

(6) ಮಣಿಪೋಣಿಸುವುದು:— (1) ಹೂವಿನ ಸರದಂತೆ ಮಣಿಗಳನ್ನು ಪೋಣಿಸುವುದು, (2) ದೇವಸ್ಥಾನದ ಮುಂಭಾಗ, (3) ಗರುಡಗಂಬ.

(7) ಕರಣದ ಕೆಲಸ III. IV. V. :— (1) ತೋಟದಲ್ಲಿರುವ ಮನೆ, (2) ದೇವಸ್ಥಾನದ ಮುಂಭಾಗ, (3) ಧ್ವಜಸ್ತಂಭ, (4) ಭಾವಿ, (5) ಕೊಳ, (6) ನೀರಿನ ತೊಟ್ಟಿ, (7) ತೋಟದಲ್ಲಿರುವ ಬೆಂಚು, (8) ಕುರ್ಚಿ, (9) ಸೋಫಾ,

(8) ಮರಳಿನ ಆಟ:— ತೋಟದಲ್ಲಿರುವ ಗಿಡ. ಹೂವಿನಗಿಡದ ಪಾತಿಗಳು.

9 ಆಟ— ಕಣ್ಣುಮುಚ್ಚಾಟ

ಘ್ರಾಣೇಂದ್ರಿಯ (ತಾಳ ಚತುರಸ್ರ)

I { ಹೂವಿದೆಯನ್ನ ಕೈಯೊಳಗೆ | ಅವ್ರದೊ ಜಾತಿ ಹೇಳು ಪೆಯಾ |
ಆದರೆ ಕೇಳ್ತ ವಾಸನೆಯಂ | ಘ್ರೇವಿಸಿ ಪೇಳ್ವೆ ನೋಡದೆಯೇ ||

II { ಹೂವಿನ ನಾಮಂ ಸುಯನೆಸೆಯಂ | ಘ್ರಾಣಿಸಿ ಪೇಳಲ್ ವಾಸನೆಯಿಂ |
ಊಹಗೆ ತಕ್ಕ ಸತ್ಫಲವು | ಈ ಹೂವೇ ಕೈ ಸೇರುವುದು ||

ಮೊದಲು ಮಕ್ಕಳೆಲ್ಲಾ ಗುಂಡಗೆ ಒಳಸಿ ನಿಂತು I ನೇ ನುಡಿಯನ್ನು ಹಾಡುವರು. ಒಬ್ಬ ಹುಡುಗನು ಕಣ್ಣು ಕಟ್ಟಿ ಮಧ್ಯದಲ್ಲಿ ನಿಂತುಕೊಳ್ಳುವನು. ಇನ್ನೊಬ್ಬ ಹುಡುಗನ ಕೈಗೆ ಹೂವಿನ ಜೊಂಪೆಯನ್ನು ಕೊಟ್ಟು ಅವನಿಂದ ಅದು ಇಂತಹುದೆಂದು ಊಹಿಸಿ ಹೇಳುವಂತೆ ಮಾಡಬೇಕು. ಅವನು ಸರಿಯಾದ ಹೆಸರನ್ನು ಹೇಳಿಬಿಟ್ಟರೆ ಆ ಹೂವನ್ನು ಅವನಿಗೆ ಕೊಟ್ಟುಬಿಡುವುದು. ಮೂಸಿನೋಡುವುದಕ್ಕೆ ಕೊಡುವ ಹೂವೂ ಅವನಿಗೆ ಪರಿಚಯವಾಗಿರಬೇಕು.

10 ಕಥೆ. ಮಲ್ಲಿಗೆಯ ಜೀವನ — ವೆಂಕಟೇಶನ ಮನೆಯ ಹಿತ್ತಿಲಲಿಲ್ಲಿ ಮಲ್ಲಿಗೆ, ದವನ, ಜಾಜಿ, ಸೇವಂತಿಗೆ ಇಂತಹ ಒಳ್ಳೇ ಹೂ ಗಿಡಗಳಿದ್ದುವು. ಮಲ್ಲಿಗೇ ಗಿಡ ಬಲು ದೊಡ್ಡದಾಗಿ ಹಬ್ಬಿ ಪೊದೆಪೊದೆಯಾಗಿತ್ತು. ಒಂದುದಿನ ವೆಂಕಟೇಶನು ಬಂದು ಗಿಡಗಳಕಡೆ ನೋಡಿ—'ಓಹೋ ಈ ಮಲ್ಲಿಗೆಯ ಪೊದರು ಬಲವಾಗಿ ಬೆಳೆದಿದೆ. ಇದರಿಂದ ಹೂ ಹೆಚ್ಚಾಗಿ ಬಿಡುವುದಿಲ್ಲ' ಅಲ್ಲದೆ ಹಸುರುಹಾವು ಮುಂತಾದ ಹುಳು ಹುಪ್ಪಟೆ ಸೇರಿತು, ಎಂದು ಹೆದರಿಕೊಂಡು ಮಲ್ಲಿಗೇ ಗಿಡದಲ್ಲಿ ಕೆಲವು ಬಳ್ಳಿಗಳನ್ನು ಕೊಯ್ದು ಗೋಡೆಯಿಂದ ಹೊರಕ್ಕೆ ಬಿಸಾಟುಬಿಟ್ಟನು. ಅದರ ಮೇಲೆ ಪಾತಿಯಲ್ಲಿದ್ದ ಒಂದು ಮುಂಕರಿ ಕಸವನ್ನೂ ಸುರಿದನು. ಆಗ ಮಳೆಗಾಲ. ಆ ಬಿಸಾಟಿದ್ದ ಬಳ್ಳಿಯು ಚಿಗುರಿತು. ಇನ್ನೂ ಸ್ವಲ್ಪಕಾಲದಮೇಲೆ ಎರಡು ಹೂಬಿಟ್ಟಿತು. ಅಲ್ಲಿದ್ದ ಒಂದು ಕಹಿಬೇವಿನ ಮರವು ಇದನ್ನು ಕಂಡು- 'ಇದೇನೇ ಬುಡವಿಲ್ಲದಿದ್ದರೂ ಇಲ್ಲಿಯೇ ಚಿಗುರಿಕೊಂಡೆ?' ಮಲ್ಲಿಗೆ—'ನಮಗೇನಪ್ಪ ಎಲ್ಲಿಯಾದರೂ ಸ್ವಲ್ಪ ಮಣ್ಣು ನೀರು ಸಿಕ್ಕಿದರೆ ಸಾಕು. ನಮ್ಮ ಬಳ್ಳಿಗಳನ್ನು ಕತ್ತರಿಸಿ ಹೂಳಿದರೂ ಬೆಳೆಯುತ್ತೇವೆ. ಮಹಾನುಭಾವಳಾದ ನಮ್ಮ ತಾಯಿ ಪ್ರಕೃತಿಯು

ಹೀಗೆ ನಮಗೆ ವರವನ್ನು ಕೊಟ್ಟಿದಾಳಪ್ಪ.' ಕರಿಬೇವು—'ಆದೇನೋಅಮ್ಮ. ಹೀಗೆಲ್ಲಿಯೂ ನಾನು ನೋಡಿರಲಿಲ್ಲ.' ಮಲ್ಲಿಗೆ—'ಅಯ್ಯೋಪಾಪ ಅಡಿಗೇಮನೆಯಲ್ಲಿ ಹೆಂಗಸರ ಜೊತೆಗೆ ಸೇರಿಕೊಂಡು ಸಾರು ಹುಳಿ ಮಜ್ಜಿಗೆಗಳ ರುಚಿ ನೋಡುವ ನಿನಗೆ ಈ ಪ್ರಪಂಚದ ಆಡಳಿತ ಹೇಗೆ ತಿಳಿದೀತು?' ಎಂದು ನಕ್ಕು—'ಅಯ್ಯ, ಕೇಳು, ನನ್ನಹಾಗೆಯೇ ಕಣಿಗಲೆ, ಪಾದರಿ, ಪಾರಿಜಾತ ಇಂತಹ ಹೂವಿನ ಗಿಡಗಳನ್ನು ಕೊಯ್ದು ನೆಟ್ಟರೂ ಚಿಗುರಿ ಗಿಡವಾಗುವುವು.' ಎಂದಿತು. ಆಗ್ಗೆ ಸರಿಯಾಗಿ ಏನೋ ಕೆಲಸಕ್ಕಾಗಿ ಆಕಡೆ ಬರುತಿದ್ದ ಒಬ್ಬ ಬ್ರಾಹ್ಮಣನು ಕಸದ ಮಧ್ಯೆ ಬಿದ್ದಿದ್ದ ಆ ಮಲ್ಲಿಗೆಯ ಅಂಟು ಹೂ ಬಿಟ್ಟಿರುವುದನ್ನು ಕಂಡು ಕೂಡಲೆ ಅದನ್ನು ತೆಗೆದು ಕೊಂಡುಹೋಗಿ ತನ್ನ ಮನೆಯ ಅಂಗಳದಲ್ಲಿ ನೆಟ್ಟನು. ಅದು ಅಲ್ಲಿ ದೊಡ್ಡದಾಗಿ ಬೆಳೆದು ಬುಟ್ಟಿಗಟ್ಲೆ ಹೂ ಬಿಡುತ ಬಂತು.

11. ಪದ್ಯ— ಮಾವಿನೊಳೇರಿ ಮಲ್ಲಿಗೆಗೆಸಾರಿ ಮರಂದದೊಳಳ್ದು ಚಾರಿಕೆಂ |
ದಾವರೆಗೋಡಿ ಕೇಸರದೊಳಾಡಿ ಕರು ಮಧುವೀಂಟಿಪಾಡಿಮು |
ಲ್ಲಾವರಮೆತ್ತಿ ಮಾಧವಿಯುಸೊತ್ತಿ ಮಹೋತ್ಸವದಿಂದೆ ಸುತ್ತಿಭೃಂ |
ಗಾವಳಿಭೂಳಿ ಯುಕ್ತಕುಸುಮಾಳಿ ಯೋಳಾಂತುದು ಚಾರುಕೇಳಿಯಂ ||

ಮೈಸೂರು ಗೌರ್ನಮೆಂಟ್ A. V. ಪ್ರಾಕ್ಟಿಸಿಂಗ್ ಸ್ಕೂಲ್

ಕಿಂಡರ್‌ಗಾರ್ಟನ್ ಸೆಕ್ಷನ್.

ನಲ್ಲಾ ಪ್ರೋಜುದೇಶ (ಮರಳುಕಾಡಿನ ವಿಷಯ)

I ನೆಯ ತರಗತಿ.

ನಾವು ಈ ಊರಿಂದ ಹೊರಟು ಮತ್ತೊಂದು ಊರಿಗೆ ಹೋಗುವಾಗ ದಾರಿಯಲ್ಲಿ ಹೊಲಗಳೂ, ಗದ್ದೆಗಳೂ, ತೋಟಗಳೂ ಸಿಕ್ಕುವುವು. ಮಳೆಗಾಲದಲ್ಲಿ ಇವುಗಳನ್ನು ನೋಡಿದರೆ ಹಸುರು ಬಣ್ಣಕ್ಕೆ ಸೊಗಸಾಗಿ ಕಾಣುತ್ತಿರುವುವು. ಎತ್ತರವಾದ ಬೆಟ್ಟಗಳು ಸಿಕ್ಕುವುವು. ರಸ್ತೆಗೆ ಜಲ್ಲಿಕಲ್ಲು, ಮಣ್ಣು, ಇವುಗಳನ್ನು ಹಾಕಿ ಹಳ

ಕೊಳ್ಳಗಳಿಲ್ಲದಂತೆ ಮಾಡಿರುವರು. ನದಿ ಮುಂತಾದುವುಗಳನ್ನು ಸುಲಭವಾಗಿ ದಾಟಲು ಅನುಕೂಲವಾದ ಸೇತುವೆಗಳನ್ನು ಕಟ್ಟಿರುವರು. ರಸ್ತೆಯ ಪಕ್ಕಗಳಲ್ಲಿರುವ ಸಾಲುಮರಗಳು ಬಿಸಿಲುಕಾಲದಲ್ಲಿ ದಾರಿಗರಿಗೆ ನೆರಳನ್ನು ಕೊಟ್ಟು ಆಯಾಸವನ್ನು ಹೋಗಲಾಡಿಸುವುವು. ಪ್ರಪಂಚದ ಎಲ್ಲ ಕಡೆಗಳಲ್ಲೂ ಹೀಗೆಯೇ ಇರುವುವೆಂದು ನೀವು ಊಹಿಸಬಹುದು. ಆದರೆ ಕೆಲವುಕಡೆ ಬರೀ ಮರಳು ಪ್ರದೇಶಗಳು ಇರುವುವು. ಒಂದೆರಡು ತಿಂಗಳು ನಡೆದರೂ ಆ ಪ್ರದೇಶಗಳನ್ನು ದಾಟಿಹೋಗುವುದಕ್ಕಾಗದಷ್ಟು ಅವು ದೊಡ್ಡವಾಗಿರುವುವು. ಅಲ್ಲಿ ಕಲ್ಲು, ಮಣ್ಣು ಸಿಕ್ಕುವುದಿಲ್ಲವಾದುದರಿಂದ ರಸ್ತೆಗಳನ್ನು ಮಾಡುವುದಕ್ಕಾಗುವುದಿಲ್ಲ. ಮಳೆಯೇ ಅಪರೂಪ ಸ್ವಲ್ಪ ಬಿದ್ದರೂ ಮರಳು ನೆಲವು ಹೀರಿಬಿಡುವುದರಿಂದ ಹಕ್ಕಿ ಕುಡಿಯುವಷ್ಟು ನೀರೂ ಸಿಕ್ಕುವುದಿಲ್ಲ. ಗಿಡಮರಗಳಂತೂ ಇಲ್ಲವೇ ಇಲ್ಲ. ಬಿಸಿಲಿನ ತಾಪವನ್ನು ಹೇಳಬೇಕಾದುದೇ ಇಲ್ಲ. ನೀವು ಬೇಸಗೆಯ ಮಧ್ಯಾಹ್ನದಲ್ಲಿ, ಕಾವೇರಿಯ ಮರಳಿನಲ್ಲಿ ಅಥವಾ ಧೂಳಿರುವ ರಸ್ತೆಯಲ್ಲಿ ನಡೆದುದನ್ನು ಜ್ಞಾಪಿಸಿಕೊಳ್ಳಿ. ಅದಕ್ಕಿಂತಲೂ ಎಷ್ಟೋಪಾಲು ಹೆಚ್ಚಾಗಿ ಸುಡುತಿರುವುದು. ಅಲ್ಲಿ ಒಂದು ಹನಿ ನೀರಿಲ್ಲದಿದ್ದರೂ ಬಿಸಿಲಿನ ಝಳದಿಂದ ನೋಡುವವರಿಗೆ ಹತ್ತಿರದಲ್ಲೇ ನೀರಿನ ಪ್ರದೇಶವು ಇರುವಂತೆ ಕಣ್ಣಿಗೆ ಕಾಣುತಿರುವುದು. ತಿಳಿಯದಿರುವವರು ನೀರಿದೆಯೆಂದು ಭ್ರಮಿಸಿ ಹಾಗೆ ಕಾಣುತಿರುವ ಕಡೆಗೆ ಹೋದರೆ ಆ ನೀರಿನ ಪ್ರದೇಶವು ದೂರದೂರಕ್ಕೆ ಹೋಗುತಿರುವುದು. ಎಷ್ಟು ದೂರ ನಡೆದರೂ ಅದು ಹತ್ತಿರವಿರುವಂತೆಯೇ ಕಾಣುತ ಅನೇಕರಿಗೆ ಆಯಾಸವನ್ನೂ ಬಾಯಾರಿಕೆಯನ್ನೂ ಹೆಚ್ಚಿಸಿ ಅವರನ್ನು ಕೊಂದುಬಿಟ್ಟಿರುವುದು. ಒಂದೊಂದುವೇಳೆ ಉರಿಗಾಳಿಯುಂಟಾಗಿ ಕಾದಿರುವ ಮರಳಿನ ಧೂಳನ್ನು ದಾರಿಗರ ಕಣ್ಣು, ಮೂಗು, ಬಾಯಿ, ಮುಂತಾದುವುಗಳಿಗೆ ತುಂಬಿಬಿಡುವುದು. ಅಂತಹ ದಾರಿಯಲ್ಲಿ ಪ್ರಯಾಣಮಾಡುವುದು ಎಷ್ಟು ಕಷ್ಟ! ನೀರಿಲ್ಲ! ನೆರಳಿಲ್ಲ! ಬಂಡಿ ಹೋಗುವುದಕ್ಕಾಗದು! ಕುದುರೆ ನಡೆಯಲಾರದು! ನೀರನ್ನೂ ಬುತ್ತಿಯನ್ನೂ ಕೈಯಲ್ಲೇ ತೆಗೆದುಕೊಂಡು ಕಷ್ಟಪಟ್ಟು ಮೆಲ್ಲಗೆ ನಡೆದು ಹೋಗೋಣವೆಂದರೆ ಒಂದೆರಡು ದಿವಸಗಳಲ್ಲಿ ಪ್ರಯಾಣವು ಮುಗಿಯುವುದಿಲ್ಲ. ಕೊನೆಗೆ

ಒಂದೆರಡು ತಿಂಗಳು ನಡೆದರೂ ಅಸಾಧ್ಯವಾಗಿರುವುದು. ಆದುದರಿಂದ ಜನರು ಆ ಪ್ರಯತ್ನವನ್ನೇ ಬಿಟ್ಟುಬಿಡಬೇಕಷ್ಟೆ. ಆದರೆ, ಆ ಮರಳುಕಾಡಿನ ದೇವತೆಯು ತನ್ನ ಬಣ್ಣದಂತೆಯೇ ಇರುವ ಒಂದು ಮಗುವನ್ನು ದಯಪಾಲಿಸಿದಾಳೋ ಎಂಬಂತೆ ಒಂದು ಪ್ರಾಣಿಯು ಇರುವುದು. ಅದು ಯಾವುದು ? ನೀವು ಹೇಳಬಲ್ಲಿರಾ ? ಅದು ಒಂಟೆ. ಅದನ್ನು ಬಿಟ್ಟರೆ ಇನ್ನು ಯಾವ ಪ್ರಾಣಿಯೂ ಅಲ್ಲಿ ನಡೆಯಲಾರದು; ಒಂಟೆಯು ಅಲ್ಲಿ ನಡೆಯುವಷ್ಟು ಸಂತೋಷವಾಗಿ ಇನ್ನೆಲ್ಲಿಯೂ ನಡೆಯಲಾರದು; ಮರಳುಕಾಡಿನಲ್ಲಿ ನಡೆಯಲು ತಕ್ಕಂತೆ ದೇವರು ಅದನ್ನು ನಿರ್ಮಾಣ ಮಾಡಿರುವನು. ಅದು ಅನೇಕ ದಿವಸಗಳವರೆಗೆ ಹುಲ್ಲು ತಿನ್ನದೆ ಇರಬಲ್ಲುದು. ಒಂದು ದಿವಸ ಹೆಚ್ಚು ನೀರು ಕುಡಿದು ತನ್ನ ಹೊಟ್ಟೆಯೊಳಗೆ ಇಟ್ಟುಕೊಂಡು ಬಹಳ ದಿವಸಗಳವರೆಗೂ ಉಪಯೋಗಿಸಿಕೊಳ್ಳುತಿರುವುದು. ಗಾಳಿಯಿಂದ ಎಬ್ಬಿಸಲ್ಪಟ್ಟ ಧೂಳು ಕಣ್ಣು ಮೂಗುಗಳಿಗೆ ತುಂಬಿಕೊಳ್ಳದಹಾಗೆ ಅವುಗಳನ್ನು ಮುಚ್ಚಿಕೊಳ್ಳುವಂತೆ ಚರ್ಮದ ಪರೆಗಳು ಬೆಳೆದಿರುವುವು. ಪಾದಗಳು ಮರಳಿನೊಳಗೆ ಹೂತುಹೋಗದಂತೆ ಅಗಲವಾಗಿಯೂ ರಬ್ಬರಿನಂತೆ ಮೆತ್ತಗೂ ಇರುವುವು. ಇಷ್ಟು ಅನುಕೂಲವಾಗಿರುವುದರಿಂದಲೇ ಒಂಟೆಯನ್ನು ಮರಳುಕಾಡಿನ ಹಡಗು ಎಂದು ಕರೆಯುವರು. ಪ್ರಯಾಣಿಕರು ಇವುಗಳಮೇಲೆ ಕುಳಿತು ಅಂತಹ ವಿಶಾಲವಾದ ಮರಳು ಕಾಡುಗಳನ್ನು ದಾಟುವರು.

ಮರಳುಕಾಡುಗಳು ನಿರ್ಜಲಪ್ರದೇಶಗಳಾಗಿದ್ದರೂ ಅಲ್ಲಲ್ಲಿ ನೂರಾರು ಮೈಲಿಗಳಿಗೆ ಒಂದೊಂದುಕಡೆ ತಗ್ಗಾಗಿಯೂ, ತೇವವಾಗಿಯೂ ಇರುವ ಸ್ಥಳಗಳು ಸಿಕ್ಕುವುವು. ಅಲ್ಲಿ ಬೇಕಾದಷ್ಟು ಖರ್ಜೂರದ ಮರಗಳು ಇರುವುವು. ನೆಲವು ಹುಲ್ಲಿನಿಂದ ಹಸುರಾಗಿರುವುದು, ಕೆಲವು ಜನಗಳು ಅಂತಹ ಸ್ಥಳಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತಿರುವರು. ಪ್ರಯಾಣಿಕರು ಅಲ್ಲಿ ತಂಗಿ ವಿಶ್ರಾಂತಿಯನ್ನು ಹೊಂದಿ ಮುಂದಕ್ಕೆ ಪ್ರಯಾಣ ಮಾಡುವರು.

ಎಸ್. ನಂಜುಂಡಯ್ಯ.

ಕಿಂಡರ್‌ಗಾರ್ಟೆನ್.

ಕಿಂಡರ್‌ಗಾರ್ಟೆನ್ ಎಂಬ ಮಾತಿಗೆ ಅನೇಕರು ಬಹುಮಟ್ಟಿಗೂ ತಪ್ಪು ಅರ್ಥವನ್ನು ತಿಳಿದುಕೊಂಡಿರುವರು. ಹಾಗೆ ತಿಳಿದುಕೊಂಡಿರುವವರಲ್ಲಿ ಹಲವರು ಫ್ರೋಬೆಲ್ಲನು ಏರ್ಪಡಿಸಿರುವ ಕೆಲವು ಕರಣಗಳನ್ನೂ ಕೈ ಕೆಲಸಗಳನ್ನೂ ಮಕ್ಕಳಿಗೆ ಹೇಳಿಕೊಡುವುದೇ ಈ ಕಿಂಡರ್‌ಗಾರ್ಟೆನ್ ಎಂಬ ಮಾತಿನ ಅರ್ಥವೆಂದು ಭಾವಿಸುವರು. ಆದರೆ ಕಿಂಡರ್‌ಗಾರ್ಟೆನ್ ಎಂಬುದು ಒಂದು ಪಾಠವಿಷಯವಲ್ಲ, ಅದೊಂದು ಬೋಧನವಿಧಾನ. ನಿಜವಾದ ಶಬ್ದಾರ್ಥವನ್ನೇ ನೋಡುವುದಾದರೆ 'ಮಕ್ಕಳ ತೋಟ' ವೆಂದು ಆಗುವುದು. ಯಾವ ತೋಟದಲ್ಲಿ ಮನುಷ್ಯವ್ಯಕ್ತಿಗಳೇ ಗಿಡಗಳೆಂದೂ ಹೂಗಳೆಂದೂ ಭಾವಿಸಲ್ಪಟ್ಟು ತಮ್ಮ ಸ್ವಭಾವಶಕ್ತಿಗಳಿಗನುಸಾರವಾಗಿ ಬೆಳೆಯಲು ಅವಕಾಶವು ಕೊಡಲ್ಪಡುವುದೋ ಅಂತಹ ತೋಟವೆಂದೆನಿಸಿಕೊಳ್ಳುವ ಪಾಠಕ್ರಮವೇ ಕಿಂಡರ್‌ಗಾರ್ಟೆನ್ ಎಂಬುದು. ಹಾಗಿಲ್ಲದೆ ಅವರ ಸ್ವಭಾವಾನುಗುಣವಾಗಿ ಪ್ರವರ್ತಿಸಲವಕಾಶವನ್ನು ತಪ್ಪಿಸಿ ತಾವು ಹೇಳಿದಂತೆ ಕೇಳುವಹಾಗೆ ಮಾಡಿ ಮಕ್ಕಳನ್ನು ಯಂತ್ರಗಳಂತೆ ಮಾಡಿಬಿಡುವುದು ಎಂದಿಗೂ ಕಿಂಡರ್‌ಗಾರ್ಟೆನ್ ಎನಿಸಿಕೊಳ್ಳಲಾರದು. ಹಾಗೆ ಯಂತ್ರಗಳಂತೆ ಮಕ್ಕಳನ್ನು ತಯಾರುಮಾಡುವ ಪದ್ಧತಿಯು ಇನ್ನು ಯಾವ ಹೆಸರಿನಿಂದಲಾದರು ಕರೆಯಲ್ಪಟ್ಟಾಗ್ಯೂ ಅದೇನೋ ಸುತರಾಂ ನಿಷಿದ್ಧವಾದ ಅಸಮಂಜಸಮಾರ್ಗ. ತೋಟಗಾರನು ತನ್ನ ತೋಟದಲ್ಲಿರುವ ಎಲ್ಲಾ ಗಿಡಗಳೂ ತಮ್ಮತಮ್ಮ ಸ್ವಭಾವಗಳಿಗನುಸಾರವಾಗಿ ಬೆಳೆಯುತ್ತಲೂ, ಪುಷ್ಪಿಸುತ್ತಲೂ ಫಲಿಸುತ್ತಲೂ ಬರುವುದನ್ನು ನೋಡಿಕೊಂಡು ಅವುಗಳಿಗನುಕೂಲವಾಗಿ ತನ್ನಿಂದ ಆಗುವಷ್ಟು ಸಹಾಯ ಮಾಡಿದರೆ ಆ ತೋಟವು ವೃದ್ಧಿಯಾಗುವುದೇ ಹೊರತು ಅವುಗಳ ಸ್ವಭಾವವನ್ನು ನಿಷೇಧಿಸಿ ಆ ಸಸ್ಯಗಳೆಲ್ಲ ತನ್ನ ಇಷ್ಟಾನುಸಾರವಾಗಿ ನಡೆಯಬೇಕೆಂದು ಅಪೇಕ್ಷಿಸುವುದಾದರೆ ಯಾರು ತಾನೆ ಅವನನ್ನು ಹುಚ್ಚನೆನ್ನಲಾರರು! ಅವನು ಬೀಜ ಬಿತ್ತುವುದಕ್ಕಿಂತ ಮೊದಲು ಭೂಮಿಯನ್ನು ಹದಗೊಳಿಸುವನು, ತನ್ನ ತೋಟದಲ್ಲಿ ಬೆಳೆಯುವ ಬಳ್ಳಿಗಳ ಇಷ್ಟವನ್ನು ನೆರವೇರಿಸು

ವುದಕ್ಕೋಸ್ಕರವೂ ಅವುಗಳ ಶ್ರೇಯೋವೃದ್ಧಿಗಾಗಿಯೂ ಆ ಸಮೀಪದಲ್ಲಿ ಏನನ್ನಾದರೂ ನಟ್ಟು ಅವು ಹಬ್ಬಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸುವನು, ಇತ್ಯಾದಿ ಸಹಾಯಗಳನ್ನೆಲ್ಲ ಮಾಡುವುದರಿಂದ ಅವನು ಪ್ರಕೃತಿಯ (Nature) ಉದ್ದೇಶಗಳಿಗೆ ನೇರವಾದಂತಾಗುವುದು. ಇದೇರೀತಿಯಾಗಿ, ಉಪಾಧ್ಯಾಯನಾದವನು ಮೊಟ್ಟಮೊದಲು ತಾನು ಪಾಠಹೇಳುವ ಮಕ್ಕಳ ಸ್ವಭಾವವನ್ನು ತಿಳಿಯಬೇಕಾದುದು ಅತ್ಯಾವಶ್ಯಕ ಮತ್ತು ಅದು ಮುಖ್ಯವಾದಪ್ರಥಮ ಕರ್ತವ್ಯ. ಪಾಠ ಹೇಳಿಕೊಡುವುದು ಎರಡನೆಯ ಕೆಲಸ. ಆದ್ದರಿಂದ ಪಾಠ ಹೇಳುವುದಕ್ಕಿಂತಲೂ ಮಕ್ಕಳ ಬುದ್ಧಿಯ ಸ್ವಭಾವವನ್ನು ಚೆನ್ನಾಗಿ ಪರಿಶೀಲಿಸಿ ತಿಳಿದು ನಡೆಯತಕ್ಕದ್ದು ಎಂಬುದು ಪ್ರತಿಯೊಬ್ಬ ಬೋಧಕರಿಗೂ ಮೇಲಾದ ಬುದ್ಧಿವಾದವಾಗಿರುವುದು. ಮತ್ತು ತಾವು ಉತ್ತಮರಾದ ಕಿಂಡರ್‌ಗಾರ್ಟನ್ ಉಪಾಧ್ಯಾಯರಾಗಬೇಕೆಂದು ಆಶೆಪಡುವ ಶಿಕ್ಷಕರಂತು ಎಳೆಯಮಕ್ಕಳ ಸ್ವಭಾವವನ್ನು ಚೆನ್ನಾಗಿ ವ್ಯಾಸಂಗಮಾಡಿದ ಹೊರತು ವಿಧಿಯೇ ಇಲ್ಲ. ಕೆಲವು ಕೈ ಕೆಲಸಗಳನ್ನು ಮಾಡಿಸುವುದೇ ಕಿಂಡರ್‌ಗಾರ್ಟನ್ ಎನಿಸಿಕೊಳ್ಳಲಾರದು. ಈ ಕ್ರಮದಲ್ಲಿ ಓದುವುದು, ಬರೆವಣಿಗೆ, ಗಣಿತ ಇವನ್ನು ಹೇಳಿಕೊಡುವುದೂ ಸೇರಿದೆ ಆದರೆ ಈ ಮೂರು ಪಾಠಗಳನ್ನು ಮಕ್ಕಳಿಗೆ ಆಟವಾಡುವ ರೀತಿಯಿಂದಲೇ ತಿಳಿಯಿಸಿಕೊಡಬೇಕೇ ಏನಾ ಅವರಿಗೆ 5, 6 ವರ್ಷ ವಯಸ್ಸಾಗುವವರೆಗೂ ಅದೇ ಒಂದು ಬೇರೆ ಪಾಠವೆಂದು ಅವರು ಪರಿಗಣಿಸುವ ರೀತಿಯಲ್ಲಿ ಲಂಬಿಸಿ ಬೋಧಿಸಕೂಡದು. ಫ್ರೊಬೆಲ್ಲನು ಏರ್ಪಡಿಸಿರುವವುಗಳಲ್ಲಿ ಸೇರಿದ ಕಾಗದ ಮಡಿಸುವುದು, ಚಾಪೆ ಹೆಣೆಯುವುದು, ಕಸೂತಿಯಕೆಲಸ, ಕಡ್ಡಿಗಳಿಂದ ಆಕೃತಿಗಳನ್ನು ಕಟ್ಟಿಸುವುದು ಮೊದಲಾದ ಕರಣಗಳನ್ನು ಮತ್ತು ಕೈ ಕೆಲಸಗಳನ್ನೂ ಬೋಧಿಸುವುದೇ ಕಿಂಡರ್‌ಗಾರ್ಟನ್ ಎಂದು ತಿಳಿದಿರುವ ಉಪಾಧ್ಯಾಯರು ತಮ್ಮ ಕೆಲಸದ ಸ್ವರೂಪವನ್ನೇ ಅರಿಯದವರು ಅಥವಾ ಭ್ರಾಂತರು ಎನಿಸಿಕೊಳ್ಳುವರು. ಕಿಂಡರ್‌ಗಾರ್ಟನ್‌ಗೆ ಈ ಮೇಲ್ಕಂಡವುಗಳೆಲ್ಲ ಇದ್ದಹೊರತು ತೀರದು ಎಂಬುದೇನೂ ಇಲ್ಲ. ಮಣ್ಣಿನಿಂದ ಮಾದರಿಗಳನ್ನು ಮಾಡಿಸುವುದು ಚಿತ್ರ ಬರೆಯುವುದು ಇವು ಅವುಗಳಿಗಿಂತ ಮುಖ್ಯ ಮತ್ತು ಅತ್ಯಾವಶ್ಯಕ. ಸಣ್ಣಮಕ್ಕಳ

ಕಣ್ಣಿಗೂ ಕೈಗೂ ಅಪಾಯಕರವೆಂಬ ಕಾರಣದಿಂದ ಕಸೂತಿಯ ಕೆಲಸ ಮತ್ತು ಎಂಬಾಸಿಂಗ್ ಎಂಬುದು ಇವನ್ನು ಈಚೆಗೆ ಎಷ್ಟೋ ಕಾಲದಿಂದ ನಿಷೇಧಿಸುತ್ತಿರುವರು. ಇವನ್ನು ಹಾಗೆ ನಿಷೇಧಿಸುವದಕ್ಕೆ ಬೇರೊಂದು ಮುಖ್ಯಕಾರಣವೂ ಉಂಟು, ಏನೆಂದರೆ—ವಿದ್ಯಾಭ್ಯಾಸಾಂಗವಾದ ಯಾವುದೊಂದು ಬೆಲೆಯೂ ಈ ಕೆಲಸಗಳಲ್ಲಿಲ್ಲ. ಈಗ ಪಾಶ್ಚಾತ್ಯರಾಜ್ಯಗಳ ಎಷ್ಟೋ ಕಿಂಡರ್‌ಗಾರ್ಟನ್ ಪಾಠಶಾಲೆಗಳಲ್ಲಿ ಕೂಡ ಈ ಕೆಲಸಗಳನ್ನು ಬೋಧಿಸುತ್ತಲೇ ಇಲ್ಲ. ತುಂಬ ಬೆಲೆಯಾದ ಮತ್ತು ನಾಜೋಕಾದ ಪದಾರ್ಥಗಳನ್ನು ಸೀಮೆಯಿಂದ ತರಿಸಿ ಅವುಗಳಿಂದ ಹಲವು ಬಗೆಯ ಕೈಕೆಲಸಗಳನ್ನು ಮಾಡಿಸುತ್ತ ಬಂದವರಿಗೆಲ್ಲಾ ತೋರಿಸಿ ಮೆಚ್ಚಿಸುವ ಕಿಂಡರ್‌ಗಾರ್ಟನ್ ಪಾಠಶಾಲೆಗಳು ಬಲು ಹೇರಳವಾಗಿವೆ. ಹಾಗೆ ನಡೆಯಿಸುವ ಕೆಲಸಗಳು ಮುದ್ದಾಗಿ ಮನೋಹರವಾಗಿ ತೋರುವುದುದಿಟ ಆದರೆ ಅಂತಹ ಆಡಂಬರಕ್ಕೆ ಪ್ರವರ್ತಿಸಬೇಕೆಂದು ಕಿಂಡರ್‌ಗಾರ್ಟನ್ ಕ್ರಮವು ತಿಳಿಸುವುದಿಲ್ಲ, ಅಥವಾ ಅಂತಹ ಸಾಮಾನುಗಳಿದ್ದರೂ ಅವನ್ನು ಉಪಯೋಗಿಸಲಿಕ್ಕೆ ಉಪಾಧ್ಯಾಯರಿಗೆ ಹೆಚ್ಚು ಕೌಶಲವೂ ಅವಶ್ಯಕ.

ಅನೇಕ ಉಪಾಧ್ಯಾಯರುಗಳು ಫ್ರೊಬೆಲ್ಲನ ಏರ್ಪಾಡಿನಲ್ಲಿರುವ ಕರಣಗಳನ್ನೂ ಕೈಕೆಲಸಗಳನ್ನೂ ಮಕ್ಕಳಿಂದ ಮಾಡಿಸಿಬಿಟ್ಟರೆ ಕಿಂಡರ್‌ಗಾರ್ಟನ್ ಬೋಧನೆಯ ಕೆಲಸವು ಮುಗಿಯಿತೆಂದು ತಪ್ಪುತಿಳಿದುಕೊಂಡಿರುವರು. ಆದರೆ ನಿಜಸ್ಥಿತಿಯು ಹಾಗಿಲ್ಲ. ಅವು ಕಿಂಡರ್‌ಗಾರ್ಟನ್ ಬೋಧನೆಗೆ ಸಹಾಯಕವಾದ ಅಂಶಗಳು. ಎಳೆಯಮಕ್ಕಳು ತಮ್ಮ ಪುಟ್ಟಬೆರಳುಗಳಿಂದ ಏನಾದರೂ ಕೆಲಸಮಾಡುವುದಕ್ಕೂ ಕೂಡ ಕಂಡವುಗಳನ್ನೆಲ್ಲ ಮುಟ್ಟಿಹಿಸುಕಿ ಪರೀಕ್ಷಿಸಿ ನೋಡುವುದಕ್ಕೂ ವಿಶೇಷವಾಗಿ ಆಶೆಪಡುವರು. ಮತ್ತು ಅವರಿಗೆ ಯಾವುದನ್ನಾದರೂ ಹೊಸಹೊಸದಾಗಿ ತಾವೇ ಸೃಷ್ಟಿಸಬೇಕೆಂಬ ಅಪೇಕ್ಷೆಯೂ ತುಂಬ ಇರುವುದು. ಮಕ್ಕಳಲ್ಲಿ ನೆಲೆಗೊಂಡಿರುವ ಈ ವಿಧವಾದ ಕಾರ್ಯಾಭಿನಿವೇಶವನ್ನು ತೃಪ್ತಿಗೊಳಿಸಲನುಕೂಲವಾಗಿ ಫ್ರೊಬೆಲ್ಲನು ತನ್ನ ಪದ್ಧತಿಯಲ್ಲಿ ಕರಣಗಳನ್ನೂ ಕೈ ಕೆಲಸಗಳನ್ನೂ ಏರ್ಪಡಿಸಿರುವನೇಹೊರತು ಅವುಗಳಿಗಿಂತ ಅತ್ಯಂತ ಮನೋಹರವಾದ ಆಕೃತಿಗಳನ್ನು ಮಾಡಿಸಿ

ಇತರರನ್ನು ಮೆಚ್ಚಿಸಬೇಕೆಂಬುದಕ್ಕಲ್ಲ. ಆದರೆ ಆಕರಣಗಳನ್ನು ಅವನ ಕ್ರಮದಂತೆಯೇ ಒಂದಾಗುತಹಿಂದನ್ನು ಉಪಯೋಗಿಸಬೇಕೆಂಬುದೇನೂ ಇಲ್ಲ. ಆತನು ಜರ್ಮನೀ ದೇಶದ ವಿದ್ಯಾರ್ಥಿಗಳಿಗೆ ಬೋಧಿಸುತ್ತಲಿದ್ದುದರಿಂದ ಅಲ್ಲಿಯ ಸನ್ನಿವೇಶಗಳಿಗನುಸಾರವಾಗಿ ಆ ಕ್ರಮವನ್ನು ಅನುಸರಿಸಬೇಕಾಗಿತ್ತು. ಆದರೆ ಈ ನಮ್ಮ ಇಂಡಿಯಾದೇಶದ ಮಕ್ಕಳಿಗೂ ಅದೇಕ್ರಮದಲ್ಲಿ ಚಾ, ಚೂ, ಬಿಡದೆ ಬೋಧಿಸಬೇಕೆಂಬುದೇನೂ ಇಲ್ಲ. ಯಾಕೆಂದರೆ ಸನ್ನಿವೇಶಗಳು, ಪದ್ಧತಿಗಳು, ಸ್ವಭಾವ ಇವುಗಳಲ್ಲಿ ಜರ್ಮನೀದೇಶದವರಿಗೂ ಇಂಡಿಯಾದೇಶದವರಿಗೂ ಎಷ್ಟೋಭೇದಗಳಿವೆ. ಆದ್ದರಿಂದ ಇಲ್ಲಿನ ಕಿಂಡರ್‌ಗಾರ್ಟನ್ ಉಪಾಧ್ಯಾಯರು ಫ್ರೋಬೆಲ್ಲನ ಶಿಕ್ಷಣಕ್ರಮದ ಮೂಲ ತತ್ವಗಳನ್ನು ಅರಿತು ನಡೆಯಬೇಕೇ ವಿನಾ ಎಲ್ಲವನ್ನೂ ಅವನು ನಡೆಸಿದಂತೆಯೇ ತಾವೂ ನಡೆಸಬೇಕೆಂದು ನಿಶ್ಚಯಿಸಿ ಕುರುಡುದಾರಿಯಲ್ಲಿ ಕೆಲಸಮಾಡಬಾರದು. ಆತನು ಪ್ರಕೃತಿ (Nature) ಯನ್ನು ಅನುಸರಿಸಿ ತನ್ನ ವಿದ್ಯಾರ್ಥಿಗಳಾದ ಮಕ್ಕಳಿಗೆ ಇಂದ್ರಿಯಶಿಕ್ಷಣದ ಮೂಲಕ ತಿಳಿವಳಿಕೆಯನ್ನು ಹೆಚ್ಚಿಸಿಕೊಡುತ್ತಿದ್ದರು. ನಾವೂ ಹೀಗೆಯೇ ಮಾಡಬಹುದು. ಆತನು ಚಾಪೆಯನ್ನು ಹೆಣೆಯುವ ಕೆಲಸವನ್ನು ಕಾಗದದ ಪಟ್ಟಿಗಳಿಂದ ಮಾಡಿಸುತ್ತಿದ್ದನು. ಇದರಿಂದ ಆ ಜರ್ಮನಿಯಲ್ಲಿ ಅಂತಹ ಯಾವುದೋಒಂದು ವಿಧವಾದ ಕೈಗಾರಿಕೆಗೆ ಅದು ಅನುಕೂಲವಾಗಿತ್ತೆಂದು ಊಹಿಸಬಹುದಾಗಿದೆ. ನಮ್ಮ ದೇಶದಲ್ಲಾದರೆ ಈ ಕೆಲಸದಲ್ಲಿ ಕಾಗದಕ್ಕೆ ಬದಲಾಗಿ ಓಲೆಯು ತೆಂಗಿನ ಅಥವಾ ಈಚಲ ಗರಿಯನ್ನು ಉಪಯೋಗಿಸಿಕೊಳ್ಳಬಹುದು. ಈ ದೇಶದಲ್ಲಿ ಮೇದರು ಎಷ್ಟೋಕಾಲದಿಂದ ಈ ಉಪಕರಣಗಳಿಂದಲೇ ತಟ್ಟಿ, ಪುಟ್ಟಿ, ಚಾಪೆ, ಮುಂತಾದವುಗಳನ್ನು ಮಾಡುತ್ತಿರುವುದು ನಮಗೆಲ್ಲ ತಿಳಿದಅಂಶವೇ. ಹೀಗೆಯೇ ಕಾಗದ ಮಡಿಸುವ ಕೆಲಸಕ್ಕೂ ಸೀಮೆಯಿಂದ ಅತ್ಯುತ್ತಮವಾದ ಕಾಗದವೇ ಬರಬೇಕೆಂಬುದೇನೂ ಇಲ್ಲ. ಸಾಮಾನ್ಯವಾದ ನಮ್ಮ ದೇಶದ ಒರಟುಕಾಗದವನ್ನಾದರೂ ಈ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದು. ಈ ಉದಾಹರಣೆಗಳಿಂದಲೇ ಫ್ರೋಬೆಲ್ಲನ ಏರ್ಪಾಡಿಗೆ ಸೇರಿರುವ ಹಲವು ಕೈ ಕೆಲಸಗಳನ್ನೂ ಇಲ್ಲಿನ ಸನ್ನಿವೇಶಗಳಿಗೆ ತಕ್ಕಂತೆಯೂ ಇಲ್ಲಿ ದೊರೆಯುವ ವಸ್ತುಗಳಿಗೆ ತಕ್ಕಂತೆಯೂ ಏರ್ಪಡಿಸಿಕೊಳ್ಳಬಹುದೆಂ

ಬುದು ಸ್ಪಷ್ಟವಾಗಿ ತಿಳಿಯಬರುವುದು. ಹೀಗಿಲ್ಲದೆ ಇಂಗ್ಲಿಷ್ ಪುಸ್ತಕಗಳಲ್ಲಿ ಹೇಳಿರುವ ಮಾರ್ಗವನ್ನೇ ಅನುಸರಿಸಿ ಹಾಗೆಯೇ ನಡೆಯಿಸಬೇಕೆಂದು ಯತ್ನಿಸುವ ನಮ್ಮ ದೇಶದ ಉಪಾಧ್ಯಾಯರು ತಮ್ಮ ಕೆಲಸದಲ್ಲಿ ಜಯಶೀಲರಾಗುವಂತೆ ಭರವಸೆ ಕಡಿಮೆ. ಯಾಕೆಂದರೆ ಅಂತಹ ‘ಇಂಗ್ಲಿಷ್ ಪುಸ್ತಕಗಳೆಲ್ಲ ಯೂರೋಪ್ ಅಥವಾ ಅಮೆರಿಕ ದೇಶಗಳ ಕಿಂಡರ್‌ಗಾರ್ಟೆನ್ ಪಾಠಶಾಲೆಗಳ ಉಪಾಧ್ಯಾಯರುಗಳಿಂದ ಆಯಾದೇಶಗಳ ಆಚಾರವ್ಯವಹಾರಗಳಿಗೂ ಸನ್ನಿವೇಶಗಳಿಗೂ ತಕ್ಕ ಕ್ರಮದಲ್ಲಿ ಒರೆಯಲ್ಪಟ್ಟವುಗಳು. ಆದ್ದರಿಂದ ನಮ್ಮ ದೇಶಕ್ಕೆ ಸಮಂಜಸವಾಗಲಾರವು. ಅಲ್ಲದೆ ಮಕ್ಕಳು ತಮ್ಮತಮ್ಮ ಮನೆಗಳಲ್ಲೂ ನೆರೆಹೊರೆಗಳಲ್ಲೂ ಬಳಕೆಯಾಗಿ ಯಾವುವನ್ನು ನೋಡುವರೋ ಅಂತಹ ಅಂಶಗಳೇ ಕಿಂಡರ್‌ಗಾರ್ಟೆನ್ ಶಿಕ್ಷಣಕ್ಕೆ ವಿಷಯವಾಗಬೇಕಾದುದು ಸಹಜವಾದಮಾರ್ಗ. ಒಂದೇದೇಶದ ಹಲವು ಪ್ರಾಂತ್ಯಗಳಲ್ಲಿ ಕಿಂಡರ್‌ಗಾರ್ಟೆನ್ ಏರ್ಪಾಡುಗಳು ಭಿನ್ನಭಿನ್ನವಾಗಿರುವ ಸಂಭವವೂ ಉಂಟೆಂಬುದಕ್ಕೆ ಇದೇ ಮೂಲಕಾರಣವಾಗಿದೆ. ಕಿಂಡರ್‌ಗಾರ್ಟೆನ್ ಬೋಧನೆಯ ಮೂಲತತ್ವಗಳೆಲ್ಲ ಒಂದೇ ಆದರೂ ಸನ್ನಿವೇಶಗಳ ಮಹಿಮೆಯಿಂದ ಬೇರೆಬೇರೆ ಮಾರ್ಗಗಳಲ್ಲಿ ನಡೆಯಿಸಲ್ಪಡುವುವು. ಒಂದು ಪಟ್ಟಣದ ಪಾಠಶಾಲೆಯಲ್ಲಿ ನಡೆಯುವ ಕಿಂಡರ್‌ಗಾರ್ಟೆನ್ ಬೋಧನೆಗೂ ಒಂದು ಹಳ್ಳಿಯಲ್ಲಿ ನಡೆಯುವ ಅದೇ ಬೋಧನೆಗೂ ಮಾರ್ಗಗಳು ಹಲವುತೆರವಾಗಿ ಭಿನ್ನಭಿನ್ನವಾಗಿರುವುವು. ಇಂತಹ ಭೇದಗಳು ಯೂರೋಪ್ ಅಮೇರಿಕಾಖಂಡಗಳ ಸಮಸ್ತದೇಶಗಳ ಪಾಠಶಾಲೆಗಳಲ್ಲೂ ತೋರುತ್ತಲೇಇವೆ. ಇಂತಹ ಕಾರಣದಿಂದಲೇ ಕಿಂಡರ್‌ಗಾರ್ಟನ್ ಪಾಠಕ್ರಮವನ್ನು ಇಂತಿಂತಹ ಉಪಕರಣಗಳಿಂದ ಹೀಗೆಹೀಗೆಯೇ ನಡೆಯಿಸಬೇಕೆಂದು ಸೂತ್ರರೂಪದಲ್ಲಿ ನಿರ್ಧರಿಸಿ ಹೇಳುವುದು ಅಸಮಂಜಸವಾಗಿ ತೋರುವುದು. ಆದ್ದರಿಂದ ಮಕ್ಕಳ ಶಿಕ್ಷಕರು ಯುಕ್ತವಾದ ಯಾವ ಪಾಠಗಳನ್ನು ಯಾವಯಾವ ಕೈಕೆಲಸಗಳನ್ನೂ ತಮ್ಮ ವಿದ್ಯಾರ್ಥಿಗಳಿಗೆ ಬೋಧಿಸಬೇಕೆಂಬುದನ್ನು ನಿರ್ಧರಿಸಿಕೊಳ್ಳುವುದರಲ್ಲಿ ತಮ್ಮ ವಿವೇಕವನ್ನು ಉಪಯೋಗಿಸಿಕೊಳ್ಳಬೇಕು. ಯಾವ ಕೈಕೆಲಸಗಳಾದರೂ ಯಾವ ಉಪಕರಣಗಳಾದರೂ ಚಿಂತೆಯಿಲ್ಲ. ಅವು ಫ್ರೊಬೆಲ್ಲನು ಯಾವ ಉದ್ದೇಶದಿಂದ ತನ್ನ ಉಪಕರಣಗಳನ್ನು ಏರ್ಪಡಿಸಿರುವನೋ ಆ ಪ್ರದೇಶವನ್ನು ನೆರವೇರಿಸುವಂತಿದ್ದರೆ ಸರಿ.

ಯಾರಾದರೂ ಪಾಠಶಾಲೆಗೆ ಬಂದು ಕಿಂಡರ್‌ಗಾರ್ಟನ್ ನೋಡಬೇಕೆಂದು ಅಪೇಕ್ಷಿಸಿದಾಗ ಮಕ್ಕಳು ಮಣಿಗಳಿಂದ ಮುದ್ದಾಗಿ ಮಾಡಿದ ಕುಕ್ಕೆಗಳು, ಪರಿಪರಿಯಾದ ರೀತಿಯಿಂದ ಹೆಣೆದು ಮಾಡಿದ ಕಾಗದದ ಚಾಪೆಗಳು, ತುಂಬ ಪ್ರೌಢಿಮೆಯನ್ನುಪಯೋಗಿಸಿ ಬರೆದ ಕೆಲವು ಪ್ರಾಣಿಗಳ ಮತ್ತು ಕೆಲವು ಸಸ್ಯಗಳ ಚಿತ್ರಗಳು ಇಂತಹವುಗಳನ್ನು ತೋರಿಸುವರು. ಈ ಕೆಲಸಗಳೊಳಗೆ ಯಾವುದೇ ಆಗಲಿ ವಿದ್ಯಾಭ್ಯಾಸವಿಚಾರಕ್ಕೆ ಸಂಬಂಧಪಟ್ಟಿರುವುದೆ ? ಇಂತಹ ಕೈಕೆಲಸಗಳು ನಮ್ಮ ದೇಶದ ಕಸಬುದಾರಿಯಲ್ಲೇನೋ ಇದ್ದವಾದರೂ ಈ ಕಿಂಡರ್‌ಗಾರ್ಟನ್ನಲ್ಲಿ ಯಾವ ಸಂಬಂಧವನ್ನೂ ಪಡೆದಿರುವುದಿಲ್ಲ. ಆದುದರಿಂದಲೇ ಈ ಉಪಕರಣಗಳೆಲ್ಲ ಇದ್ದಹೊರತು ಕಿಂಡರ್‌ಗಾರ್ಟನ್ ನಡೆಯಲಾರದು ಎಂದು ಹೇಳುವುದು ನಿಷಿದ್ಧ. ನಿಜವಾಗಿ ನೋಡಿದರೆ ಇಂತಹ ಉಪಾಧ್ಯಾಯರುಗಳು ಕಿಂಡರ್‌ಗಾರ್ಟನ್ ಶಿಕ್ಷಣಕ್ಕೆ ಅಗೌರವವನ್ನುಂಟುಮಾಡತಕ್ಕವರೇ ಎನ್ನಬಹುದು. ನಾವು ತುಂಬ ಅಂದಚಂದಗಳಿಂದ ಕೂಡಿದ ವಸ್ತುಗಳನ್ನೇ ಮಕ್ಕಳಿಂದ ಮಾಡಿಸಬೇಕೆಂದು ಈ ಕಿಂಡರ್‌ಗಾರ್ಟನ್ ಪದ್ಧತಿಯಲ್ಲಿ ನಿರೀಕ್ಷಿಸಬಾರದು. ಆ ರೀತಿಯಾಗಿ ಸಣ್ಣ ಮಕ್ಕಳು ಕೆಲಸಮಾಡುವುದು ಭಾವಿಕವಾಗಿಯೂ ಇಲ್ಲ. ಆದ್ದರಿಂದ ಒಂದುವೇಳೆ ಅಂತಹ ಕೆಲಸಗಳನ್ನು ಮಾಡಿಸಿದರೆ ಅಸ್ವಾಭಾವಿಕವಾಗಿ ನಡೆಸಿದಂತೆಯೇ ಆಗುವುದು. ಇದು ನಮಗೆ ಒಪ್ಪಿಗೆಯಿಲ್ಲ. ನಮ್ಮ ಕಿಂಡರ್‌ಗಾರ್ಟನ್ ಪದ್ಧತಿಯು ಪ್ರಕೃತಿಗೆ ಅನುಗುಣವಾಗಿ ನಡೆಯತಕ್ಕುದೆಂಬುದನ್ನು ನಾವು ಮೊದಲೇ ಹೇಳಿದೇವೆ. ಮಕ್ಕಳು ಬರೆಯುವ ಚಿತ್ರವು ನಿಷ್ಕರ್ಷೆಯಿಲ್ಲದೆ ವಕ್ರವಕ್ರವಾಗಿಯೇ ಇದ್ದೀತು. ಅವರು ಮಣ್ಣಿನಿಂದ ಮಾಡುವ ಆಕೃತಿಯು ಸೊಟ್ಟಸಟ್ಟಾಗಿ ಇದ್ದೀತು. ಹೀಗೆಯೇ ಅವರು ಮಾಡುವ ಕೆಲಸಗಳೆಲ್ಲ ನೋಡುವುದಕ್ಕೆ ಅಂದವಾಗಿಲ್ಲದೆಯೇ ಇದ್ದಾವು. ಆದರೂ ಏನೂ ಕೊರತೆಯಿಲ್ಲ. ಈ ಕೆಲಸಗಳೆಲ್ಲ ಮಕ್ಕಳು ತಮ್ಮ ಮನೋಭಿಪ್ರಾಯಗಳನ್ನು ಪ್ರಕಟಗೊಳಿಸುವುದಕ್ಕೆ ಇರತಕ್ಕ ಪರಿಪರಿಯಾದ ಸಾಧನೆಗಳೇ ವಿನಾ ಇವೇ ಪುರುಷಾರ್ಥಗಳಲ್ಲ. ಒಂದು ಮೊಲದ ವಿಷಯವಾಗಿ ಪ್ರಕೃತಿವಿಮರ್ಶೆಯು ನಡೆಯುತ್ತಿರುವಾಗ ಮಕ್ಕಳು ಮೊಲವನ್ನು ನೋಡುತ್ತ ಅದರ ಕಿವಿಯ ಮಾದರಿಯನ್ನು

ಜೇಡಿ ಮಣ್ಣಿನಲ್ಲಿ ಮಾಡುತ್ತ ಬರುವಾಗ ಅವರು ತಾವು ಮಾಡುವ ಆಕೃತಿಯ ಸ್ವರೂಪ ಮೊದಲಾದವುಗಳನ್ನು, ಆ ಮೊಲವನ್ನು ನೋಡಿನೋಡಿ ಪರೀಕ್ಷಿಸಿ ತಿಳಿಯುವುದರ ಮೂಲಕ ಬುದ್ಧಿಗೆ ಒಂದು ವಿಧವಾದ ಸಂಸ್ಕಾರವನ್ನು ಪಡೆಯುವರಷ್ಟೆ. ಅಂತಹ ಬುದ್ಧಿಸಂಸ್ಕಾರವು ನಮಗೆ ಅತ್ಯಾವಶ್ಯಕವಾದದ್ದು. ಅಲ್ಲದೆ ಅವರು ತಾವು ಗ್ರಹಿಸಿದ ಅಂಶಗಳನ್ನು ರಚನೆಯ ಮೂಲಕ ತೋರ್ಪಡಿಸುವರಷ್ಟೆ. ಆಗ ರಚನಾಶಕ್ತಿಗೆ ಕೆಲಸ ದೊರೆತು ಅವರ ಕಾರ್ಯಾಭಿನಿವೇಶಕ್ಕೆ ತೃಪ್ತಿಯುಂಟಾಗುವುದು. ಅನೇಕ ಉಪಾಧ್ಯಾಯರು, ಅವರಲ್ಲೂ ಮುಖ್ಯವಾಗಿ ನಮ್ಮ ದೇಶದ ಎ. ಇ. ಸ್ಕೂಲುಗಳಲ್ಲಿ ಕೆಲಸಮಾಡತಕ್ಕವರು, ಕಿಂಡರ್‌ಗಾರ್ಟೆನ್ ಪಾಠವನ್ನು ನಡೆಸುವುದಕ್ಕೆ ತಮ್ಮ ಸ್ಕೂಲುಗಳಿಗೆ ಸರಿಯಾಗಿ ಯಾವ ಉಪಕರಣಗಳನ್ನೂ ಸರ್ಕಾರದವರು ಒದಗಿಸಿಕೊಟ್ಟಿಲ್ಲವೆಂದು ಪೇಚಾಡುತ್ತಾರೆ. ಇದು ಅಷ್ಟು ಯುಕ್ತವಾಗಿಲ್ಲ. ನೂರಾರು ರೂಪಾಯಿ ಬೆಲೆಬಾಳುವ ಮತ್ತು ಸೀಮೆಯಲ್ಲಿ ತಯಾರಾದ ಉಪಕರಣಗಳೇ ಆಗಬೇಕೆಂಬುದೇನೂ ಇಲ್ಲ. ಸರ್ವಸಾಮಾನ್ಯವಾಗಿ ನಮ್ಮ ದೇಶದ ಎಂತಹ ಸಣ್ಣ ಊರಿನ ಅಂಗಡಿಗಳಲ್ಲೂ ದೊರೆಯಬಹುದು. ಅಗ್ಗವಾದ ವಸ್ತುಗಳಿಂದಲೇ ಈ ಶಿಕ್ಷಣವನ್ನು ಚೆನ್ನಾಗಿ ನಡೆಸುವುದು ಏನೂ ಕಷ್ಟವಾಗಿಲ್ಲ. ಈ ವಿಷಯದಲ್ಲಿ ಮೈಸೂರು ಗೌ|| ನಾರ್ಮಲ್‌ಸ್ಕೂಲ್ ಅ|| ಮಾಸ್ಟರೂ ಮತ್ತು “ಕಿಂಡರ್‌ಗಾರ್ಟೆನ್ ಕ್ರಮದಲ್ಲಿ ಮಕ್ಕಳ ವಿದ್ಯಾಭ್ಯಾಸ” ಪುಸ್ತಕ ಪ್ರಣೇತರೂ ಆಗಿರುವ ಮ|| ಎಂ. ವೆಂಕಟಸುಬ್ಬಯ್ಯ ಬಿ. ಎ ಯವರು ಇದೇ ಮಾಸಪತ್ರಿಕೆಯಲ್ಲಿ ಉಪಾಧ್ಯಾಯರು ತಮ್ಮತಮ್ಮ ಹಳ್ಳಿಗಳಲ್ಲಿ ದೊರೆಯುವ ಅಗ್ಗವಾದ ವಸ್ತುಗಳಿಂದ ಕಿಂಡರ್‌ಗಾರ್ಟೆನ್ ಬೋಧನೆಗೆ ತಕ್ಕ ಉಪಕರಣಗಳನ್ನು ಕಲ್ಪಿಸಿಕೊಳ್ಳಬಹುದು ಎಂದು ಹಿಂದೆ ಬರೆದಿರುವರು. ಗೋಳಕ್ಕೆ ಚೆಂಡು, ಸಿಲಿಂದರಕ್ಕೆ ರಸ್ತೆಯ ರೋಣಗಲ್ಲು ಸೇರು ಮೊದಲಾದವು, ಘನ ಕೆಲವೂ ತವರ (ಟಿನ್) ಡಬ್ಬಗಳು ಇಂತಹವುಗಳನ್ನೂ ಆಯಕ್ಕೆ ಇಟ್ಟಿಗೆಗಳು ಸರಳವೃತ್ತಿ ಮೊದಲಾದವುಗಳಿಗೆ ಗಾಜಿನ ಬಳೆ, ಹಂಚಿಕಡ್ಡಿ ಮುಂತಾದವುಗಳು ಮಾದರಿ ಮಾಡುವುದಕ್ಕೆ ಒಳ್ಳೇ ಜೇಡಿಮಣ್ಣು ಸಿಕ್ಕದಿದ್ದರೆ ಕಡೆಗೆ ಹುತ್ತದ ಮಣ್ಣನ್ನು ಹೀಗೆಯೇ ಅನೇಕ ವಸ್ತುಗಳನ್ನು ಒಂದು ಕಾಸಿನ ವೆಚ್ಚವೂ ಇಲ್ಲದೆ

ಅಥವಾ ಬಲು ಅಗ್ಗವಾಗಿ ಒದಗಿಸಿಕೊಂಡು ಪಾಠಹೇಳಬಹುದಾಗಿದೆ. ಇದಲ್ಲದೆ ಪ್ರಕೃತಿವಿಮರ್ಶೆಗೆ ಬೇಕಾಗುವ ಸಸ್ಯವನ್ನು ಬೆಳೆಸುವುದಕ್ಕೂ ಪ್ರಾಣಿಯನ್ನು ಸಾಕುವುದಕ್ಕೂ ಹಳ್ಳಿಯ ಸ್ಕೂಲುಗಳಲ್ಲಿರುವಷ್ಟು ಸೌಕರ್ಯವು ಪಟ್ಟಣಗಳ ಸ್ಕೂಲುಗಳಲ್ಲಿಲ್ಲ. ಇಂತಹ ಅನುಕೂಲತೆಯಿದ್ದರೂ ಅಲ್ಲಿನ ಉಪಾಧ್ಯಾಯರಿಗೆ ನಾರ್ಮಲ್ ಸ್ಕೂಲುಗಳಿಗೆ ಹೋಗಿ ಶಿಕ್ಷಣವಿದ್ಯೆಯಲ್ಲಿ (Training) ಪರಿಶ್ರಮವನ್ನು ಪಡೆದಿದ್ದರೂ ಕೂಡ ಸರಿಯಾಗಿ ಕೆಲಸಮಾಡದೆ ಎಲ್ಲಕ್ಕೂ ಇದೊಂದು ನೆಪವನ್ನು ಅಂದರೆ ತಮ್ಮ ಸ್ಕೂಲುಗಳಿಗೆ ಕಿಂಡರ್‌ಗಾರ್ಟನ್ ಉಪಕರಣಗಳನ್ನು ಸರ್ಕಾರದವರು ಕಳುಹಿಸಿಕೊಟ್ಟಿಲ್ಲವಾಗಿ ತಾವು ತಮ್ಮ ಯೋಗ್ಯತೆಯನ್ನು ತೋರ್ಪಡಿಸುವುದಕ್ಕೆ ಸರಿಯಾದ ಅವಕಾಶವಿಲ್ಲವೆಂದು ಸುಮ್ಮನೆ ಪೇಚಾಡುವುದು ನ್ಯಾಯವಾಗಿ ಒಪ್ಪತಕ್ಕ ಮಾತಾಗಿಲ್ಲ. ಸರ್ಕಾರದವರೂ ಈ ವಿಷಯವನ್ನು ಮೈಮರೆತಿಲ್ಲ. ದ್ರವ್ಯಾನುಕೂಲತೆಯಾದಂತೆಲ್ಲಾ ಸಾಧ್ಯವಾದಮಟ್ಟಿಗೂ ಉಪಕರಣಗಳನ್ನು ಆಗಾಗ್ಗೆ ಒದಗಿಸಿಕೊಡುತ್ತಲೇ ಇದಾರೆ. ಹಾಗೆ ಅವರೇ ಎಲ್ಲವನ್ನೂ ಅನುಕೂಲಪಡಿಸಿಕೊಟ್ಟ ಮೇಲೆ ತಮ್ಮ ಕೆಲಸಮಾಡೋಣವೆಂದು ಹೇಳುತ್ತ ಕಾಲಹರಣಮಾಡದೆ ತಮಗೆ ಸುಲಭಸಾಧ್ಯವಾದ ವಸ್ತುಗಳನ್ನಾದರೂ ದೊರಕಿಸಿಕೊಂಡು ತನ್ಮೂಲಕ ಪಾಠಹೇಳುವುದರಿಂದ ತಕ್ಕಮಟ್ಟಿಗಾದರೂ ಈ ಕಿಂಡರ್‌ಗಾರ್ಟನ್ ಎಂಬ ಎಳೆಯಮಕ್ಕಳ ಶಿಕ್ಷಣವನ್ನು ಸರಿಯಾಗಿ ನಡೆಸಿಕೊಂಡು ಬಂದು ನಮ್ಮ ದೇಶದ ಏಳಿಗೆಗೆ ಸಹಾಯ ಮಾಡತಕ್ಕದು ಎಲ್ಲಾ ಉಪಾಧ್ಯಾಯರಿಗೂ ಕರ್ತವ್ಯರೂಪವಾದ ಸ್ವದೇಶಸೇವೆ. ಸದ್ಯಕ್ಕೆ ಮುಖ್ಯವಾಗಿ ಕಿಂಡರ್‌ಗಾರ್ಟನ್ ಸ್ವರೂಪವನ್ನು ತಿಳಿದಿರುವ ಶಿಕ್ಷಕರಾದರೂ ಹಾಗೆಯೆ ಪ್ರಯತ್ನಪಟ್ಟು ಕೆಲಸಮಾಡುವುದು ಯಶಸ್ಕರ ಇಷ್ಟೇಅಲ್ಲ ಶ್ರೇಯಸ್ಕರವೂ ಹೌದು.

J. K. S.

ಮೈಸೂರು ದೇಶೀಯ ಪರೀಕ್ಷೆ—1914

ವಿಷಯಗಳು	ಪರೀಕ್ಷಕರ ಹೆಸರು ಮತ್ತು ವಿಳಾಸ
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೧ ನೇ ಭಾಗಕ್ಕೆ—ಶಿವಮೊಗ್ಗ ಗೌ॥ ಹೈಸ್ಕೂಲ್ ಹೆ॥ಮಾ॥ ಮೆ॥ ಬಿ. ವಾಸುದೇವರಾವ್. ಎಂ. ಎ. ಯವರು.
	೨ ನೇ ಭಾಗಕ್ಕೆ—ಬೆಂಗಳೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ದಿ ರೆವರೆಂಡ್ ಎ. ಆರ್. ಫುಲ್ಲರ್ ಬಿ. ಎ. ಯವರು.
ಇಂಗ್ಲೀಷು ಬರೆವಣಿಗೆ ಮತ್ತು ಉಕ್ತಲೇಖನ.	ಚನ್ನಪಟ್ಟಣದ ಗೌ॥ ಹೈಸ್ಕೂಲ್ ಆಕ್ಟಿಂಗ್ ಹೆ॥ ಮಾ॥ ಮೆ॥ ಆರ್. ಎ. ಕೃಷ್ಣಸ್ವಾಮಿಅಯ್ಯರ್. ಬಿ. ಎ. ಯವರು.
ಇಂಗ್ಲೀಷು ವಾಕ್ಯರಚನೆ (ಲೋವರ್ ಸೆಕಂಡರಿ ಪರೀಕ್ಷೆಗೆ)	ಬೆಂಗಳೂರು ಸೆಂಟ್ರಲ್ ಕಾಲೇಜ್ ಅಸಿಸ್ಟೆಂಟ್ ಪ್ರೊಫೆಸರಾದ ಮೆ॥ ಸಿ. ಆರ್. ನಾರಾಯಣರಾವ್. ಎಂ. ಎ. ಎಲ್. ಟಿ. ಯವರು.
ಭಾಷಾಂತರ (ಲೋವರ್ ಸೆಕಂಡರಿ ಪರೀಕ್ಷೆಗೆ)	ಮೈಸೂರು ಮಹಾರಾಜಾ ಕಾಲೇಜ್ ಉಪನ್ಯಾಸಕರಾದ ಮೆ॥ ಬಿ. ಎಮ್. ಶ್ರೀಕಂಠಯ್ಯ ಎಂ. ಎ. ಬಿ. ಎಲ್. ರವರು.
ಗಣಿತ—ಲೋವರ್ ಸೆಕಂಡರಿ ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ.	ಬೆಂಗಳೂರು ಸೆಂಟ್ರಲ್ ಕಾಲೇಜು ಗಣಿತ ಪ್ರೊಫೆಸರ್‌ರಾದ ಮೆ॥ ಎಂ. ಟಿ. ನಾರಾಯಣಅಯ್ಯಂಗಾರ್. ಎಂ. ಎ. ಯವರು.
ಗಣಿತ—ಲೋವರ್ ಸೆಕೆಂಡರಿ ಪರೀಕ್ಷೆಗೆ. (ಇಂಗ್ಲೀಷು ವಿದ್ಯಾರ್ಥಿಗಳು ಹೊರತು)	೧ ನೇ ಭಾಗಕ್ಕೆ—ಬೆಂಗಳೂರು ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಟಿ. ಸುಬ್ಬರಾವ್. ಬಿ. ಎ. ಯವರು.

ಗಣಿತ—(ಇಂಗ್ಲೀಷು ವಿದ್ಯಾರ್ಥಿಗಳು ಹೊರತು)	೨ ನೇ ಭಾಗಕ್ಕೆ—ಮೈಸೂರು ಮಹಾರಾಣೀ ಕಾಲೇಜ್ ಸಹಾಯೋಪಾಧ್ಯಾಯರಾದ ಮೆ|| ಕೆ. ಶ್ರೀನಿವಾಸಯ್ಯಂಗಾರ್‌ರವರು.
ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ—ಗಣಿತ, ರೇಖಾಗಣಿತ ಮತ್ತು ಲೋವರ್‌ಸೆಕೆಂಡರಿ ಪರೀಕ್ಷೆಗೆ ಕ್ಷೇತ್ರಗಣಿತ.	ಕೋಲಾರ ಹೈಸ್ಕೂಲ್ ಸಹಾಯೋಪಾಧ್ಯಾಯರಾದ, ಮೆ|| ಎಸ್. ವೆಂಕಟರಮಣಾಚಾರ್, ಬಿ. ಎ. ಯವರು.
ಕನ್ನಡ ಟೆಕ್ಸ್ಟ್ ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ.	ಮೈಸೂರು ಗಾ|| ನಾರ್ಮಲ್ ಸ್ಕೂಲ್ ಪಂಡಿತರಾದ ವೇ|| ಎಸ್. ತಿಮ್ಮಪ್ಪಯ್ಯಶಾಸ್ತ್ರಿಯವರು.
ಕನ್ನಡ ಅಡ್ವಾನ್ಸ್ ವ್ಯಾಕರಣ ಮತ್ತು ವಾಕ್ಯರಚನೆ. (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ)	ಬೆಂಗಳೂರು ಚಾಮರಾಜಪೇಟೆ ೫ ನೆ ರಸ್ತೆಯಲ್ಲಿರುವ ರಿಟೈರ್ಡ್ ಹೆ|| ಮಾ|| ಆರ್. ರಘುನಾಥರಾವ್, ಬಿ. ಎ. ಯವರು.
ಕನ್ನಡ ಟೆಕ್ಸ್ಟ್, ವ್ಯಾಕರಣ, ವಾಕ್ಯರಚನೆ. (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಬೆಂಗಳೂರು ಸಿಟಿ ಹಲಸೂರು ಪೇಟೆಯಲ್ಲಿರುವ ರಿಟೈರ್ಡ್ ಅಮಲ್ದಾರ್ ಮೆ|| ಎಂ. ಎಸ್. ಪುಟ್ಟಣ್ಣ, ಬಿ. ಎ. ಯವರು.
ಡಿಟೋ ಡಿಟೋ	ಮೈಸೂರು ಗೌರ್ನಮೆಂಟ್ ಓರಿಯಂಟಲ್ ಲೈಬ್ರೆರಿ ಪಂಡಿತರಾದ ವೇ|| ಎಂ. ಬಿ. ಶಾಮಾಚಾರ್‌ರವರು
ಡಿಟೋ ಡಿಟೋ	ಬೆಂಗಳೂರು ಮಲ್ಲೇಶ್ವರದಲ್ಲಿರುವ ಮೆ|| ಸಿ. ವಾಸುದೇವಯ್ಯ ನವರು.
ಡಿಟೋ ಡಿಟೋ	ಮೈಸೂರು ಮಹಾರಾಜಾಕಾಲೇಜು ಸಹಾಯೋಪಾಧ್ಯಾಯರಾದ ಮೆ|| ಬಿ. ಸುಬ್ಬರಾವ್, ಬಿ. ಎ. ಯವರು.

ವಿಷಯಗಳು	ಪರೀಕ್ಷಕರ ಹೆಸರು ಮತ್ತು ವಿಳಾಸ
ಕನ್ನಡ ಉತ್ತಲೇಖನ (ಲೋವರ್‌ಸೆಕೆಂಡರಿಪರೀಕ್ಷೆಗೆ)	ಮೈಸೂರು ಮಹಾರಾಜಾಕಾಲೇಜ್ ಸಹಾಯೋಪಾಧ್ಯಾಯರಾದ ಮೆ॥ ಕೆ. ಕೃಷ್ಣ ರಾವ್, ಬಿ. ಎ. ಎಲ್. ಟಿ. ಯವರು.
ಕನ್ನಡ ಕೈ ಬರವಣಿಗೆ. ಡಿಟೋ	ಬೆಂಗಳೂರು ಚಾಮರಾಜಪೇಟೆ ಗ॥ ಬಾಲಿಕಾ ಪಾಠಶಾಲಾ ಹೆಡ್ ಮಿಸ್ಟ್ರೆಸ್ ರಾದ ಎಗ್ಗಮ್ಮನವರು.
ಉರ್ದು ಟೆಕ್ಸ್ಟ್, ಅಡ್ವಾನ್ಸ್ ವ್ಯಾಕರಣ, ವಾಕ್ಯ ರಚನೆ. (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ) ಪರಿಷಿಯನ್ ಟೆಕ್ಸ್ಟ್, ವ್ಯಾಕರಣ, ವಾಕ್ಯರಚನೆ ಬರವಣಿಗೆ, ಮತ್ತು ಉಕ್ತಲೇಖನ. (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಶ್ರೀರಂಗಪಟ್ಟಣ ಗುಮ್ಮಜ್ ಹಜರತ್ ಅಬ್ದುಲ್‌ಕಾಲಿಕ್ ಅಮಿಾರ್, ಸಾಜೀವ್ ರವರು.
ಉರ್ದು ಟೆಕ್ಸ್ಟ್, ವ್ಯಾಕರಣ, ವಾಕ್ಯರಚನೆ, ಬರವಣಿಗೆ, ಉಕ್ತಲೇಖನ. (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ತುಮಕೂರು ಗುಬ್ಬಿ ಸಬ್‌ಡಿವಿಜನ್ ಅ॥ ಕಮಿಾಷಿನರ್‌ರಾದ ಹಜರತ್ ಎ. ಕೆ. ಸೈಯ್ಯದ್ ತಾಜಾಪೀರಾನ್, ಬಿ. ಎ. ಯವರು.
ಅರಬ್ಬಿ ಟೆಕ್ಸ್ಟ್, ವ್ಯಾಕರಣ, ಭಾಷಾಂತರ, ಪರಿಷಿಯನ್ ಟೆಕ್ಸ್ಟ್, ವ್ಯಾಕರಣ ಮತ್ತು ಭಾಷಾಂತರ. (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಗ॥ ನಾರ್ಮಲ್‌ಸ್ಕೂಲಿನಲ್ಲಿರುವ ಹಜರತ್ ಮೌಲ್ವಿ ಅಬ್ದುಲ್‌ಗಫರ್ ರವರು.

ಉರ್ದು ಗಣಿತ, ಉರ್ದು ರೇಖಾಗಣಿತ, ಉರ್ದು ಭೂಗೋಳ, ಉರ್ದು ಭೌತಿಕಶಾಸ್ತ್ರ (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ)	ಬೆಂಗಳೂರು ಹಿಂದೂಸ್ಥಾನಿ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರಾದ ಹಜರತ್ ಬಿ. ಮಹಮದ್‌ಬೇಗ್, ಬಿ. ಎ. ಯವರು.
ಉರ್ದು ಗಣಿತ, ಉರ್ದು ಭೂಗೋಳ, ಉರ್ದು ಕ್ಷೇತ್ರಗಣಿತ, ಉರ್ದು ಭಾಷಾಂತರ. (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಡಿಟೋ ಡಿಟೋ
ಉರ್ದು ವ್ಯವಸಾಯ, ಉರ್ದು ಆರೋಗ್ಯ, ಉರ್ದು ಹಿಂದೂಚರಿತ್ರೆ.	ಫ್ರೆಂಚ್‌ರಾಕ್ಸ್ ಆಕ್‌ಟಿಂಗ್ ಡೆಪ್ಯುಟಿ ಅಮಲ್ದಾರ್ ಹಜರತ್ ಅಬ್ದುಲ್‌ಅಜೀಜ್ ಖಾನ್, ಬಿ. ಎ. ಯವರು.
ಉರ್ದು ಆರೋಗ್ಯ, ಉರ್ದು ಹಿಂದೂಚರಿತ್ರೆ, ಉರ್ದು ವ್ಯವಸಾಯ (ಲೋವರ್‌ಸೆಕೆಂಡರಿ ಪರೀಕ್ಷೆಗೆ)	
ಸಂಸ್ಕೃತ ಟೆಕ್ಸ್ಟ್ ಮತ್ತು ವ್ಯಾಕರಣ. (ಅಪ್ಪರ್ ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಗೌ॥ ಓರಿಯಂಟಲ್ ಲೈಬ್ರರಿ ಪಂಡಿತರಾದ ವೇ॥ ಆರ್. ರಾಘವೇಂದ್ರಾಚಾರ್ಯರವರು.
ಸಂಸ್ಕೃತ ಟೆಕ್ಸ್ಟ್ ಮತ್ತು ಸಂಸ್ಕೃತ ವೈಬರಹ. (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಡಿಟೋ ಡಿಟೋ

ವಿಷಯಗಳು	ಪರೀಕ್ಷಕರ ಹೆಸರು ಮತ್ತು ವಿಳಾಸ
ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ ಸಂಸ್ಕೃತಭಾಷಾಂತರ. ಲೋವರ್‌ಸೆಕೆಂಡರಿ ಪರೀಕ್ಷೆಗೆ ಸಂಸ್ಕೃತ ವ್ಯಾಕರಣ, ಭಾಷಾಂತರ ಮತ್ತು ಸಂಸ್ಕೃತ ಉಕ್ತಲೇಖನ ಇವುಗಳಿಗೆ.	ಬೆಂಗಳೂರು ಸೆಂಟ್ರಲ್ ಕಾಲೇಜ್ ಸಹಾಯೋಪಾಧ್ಯಾಯರಾದ ಮೆ॥ ಎಂ. ಟಿ ನರಸಿಂಹಅಯ್ಯಂಗಾರ್, ಬಿ ಎ. ಯವರು.
ತೆಲುಗುಭಾಷೆ ಮತ್ತು ಎಲ್ಲಾ ತೆಲುಗು ಗ್ರಂಥಗಳಿಗೆ.	ಮೈಸೂರು ಗಾ॥ ಓರಿಯಂಟಲ್ ಲೈಬ್ರರಿ ಕ್ಯೂರೇಟರ್ ಮೆ॥ ಎ. ಮಹದೇವಶಾಸ್ತ್ರಿ ಬಿ. ಎ. ಯವರು.
ಆರೋಗ್ಯಶಾಸ್ತ್ರ (ಲೋವರ್‌ಸೆಕೆಂಡರಿ ಪರೀಕ್ಷೆಗೆ)	೧ ನೇ ಭಾಗಕ್ಕೆ—ಬೆಂಗಳೂರು ಪಶುವೈದ್ಯಇಲಾಖೆಯಲ್ಲಿರುವ ಮೆ॥ ಎಚ್. ನರಸಿಂಹ ಅಯ್ಯಂಗಾರ್ಯರವರು.
ಡಿಟೋ ಡಿಟೋ	೨ ನೇ ಭಾಗಕ್ಕೆ—ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಹಾಯೋಪಾಧ್ಯಾಯರಾದ ಮೆ॥ ಬಿ. ವೆಂಕಟನಾರಣಪ್ಪ ಎಂ. ಎ. ಯವರು.
ವ್ಯವಸಾಯಶಾಸ್ತ್ರ. (ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗಳಿಗೆ)	೧ ನೇ ಭಾಗಕ್ಕೆ—ತುಮಕೂರು ಡಿ॥ ಫಾರೆಸ್ಟ್ ಆಫೀಸರಾದ ಮೆ॥ ಪಿ. ಯಸ್. ಗೋವಿಂದರಾವ್ ಯವರು.
ಡಿಟೋ ಡಿಟೋ	೨ ನೇ ಭಾಗಕ್ಕೆ—ಮೈಸೂರು ಗಾ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಕೆ. ನರಸಿಂಹಅಯ್ಯಂಗಾರ್‌ರವರು.

ಭೌತಿಕಶಾಸ್ತ್ರ, ಆರೋಗ್ಯಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ನಕ್ಷೆ ಬರೆಯುವುದು. (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ)	ಬೆಂಗಳೂರು ಅಬ್ಜರ್‌ವೇಟರಿಯಲ್ಲಿರುವ ಎಚ್. ವೆಂಕಟೇಶಅಯ್ಯಂಗಾರ್ ಬಿ. ಎ. ಯವರು.
ಲೋವರ್ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ ಹಿಂದೂಚರಿತ್ರೆ.	ಮೈಸೂರು ಮಹಾರ್ರಾಣೀ ಕಾಲೇಜ್ ಆಕ್ಟಿಂಗ್ ಸೂಪರೆಂಟೆಂಡೆಂಟರಾದ ಶ್ರೀಮತಿ ಕೆ. ಡಿ. ರುಕ್ಮಿಣಿಯಮ್ಮ ಬಿ. ಎ. ಯವರು.
ಲೋವರ್‌ಸೆಕೆಂಡರಿ ಪರೀಕ್ಷೆಗೆ ಹಿಂದೂಚರಿತ್ರೆ.	ತುಮಕೂರು ಗೌ|| ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ|| ಟಿ. ಕೃಷ್ಣಮೂರ್ತಿ. ಬಿ. ಎ. ಯವರು.
ಲೋವರ್‌ಸೆಕೆಂಡರಿ ಪರೀಕ್ಷೆಗೆ ಹಿದೂಚರಿತ್ರೆ.	ಶಿವಮೊಗ್ಗಾ ಗೌ|| ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ|| ಜಿ. ಅನಂತರಾವ್. ಬಿ. ಎ. ಯವರು.
ಭೂಗೋಳ, ನಕ್ಷೆ ಬರೆಯುವುದು, ಇಂಗ್ಲೆಂಡ್ ದೇಶದ ಚರಿತ್ರೆ. (ಲೋವರ್‌ಸೆಕೇಡರಿ ಪರೀಕ್ಷೆಗೆ)	ಮೈಸೂರು ಮಹಾರಾಜಾಕಾಲೇಜ್ ಸಹಾಯೋಪಾಧ್ಯಾಯರಾದ ಮೆ|| ಕೆ. ನರಸಿಂಹಯ್ಯ. ಬಿ. ಎ. ಎಲ್. ಟಿ. ಯವರು.
ಭೂಗೋಳ ಮತ್ತು ನಕ್ಷೆ ಬರೆಯುವುದು. (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಮಹಾರಾಣೀಕಾಲೇಜ್ ಪ್ರೈಮರಿ ತರಗತಿಗೆ ಹೆಡ್ಮಿಸ್ಟ್ರೆಸ್‌ರಾದ ಶ್ರೀಮತಿ ಶ್ರೀರಂಗಮ್ಮ, ಬಿ ಎ. ಯವರು.
ಭೂಗೋಳ ಮತ್ತು ನಕ್ಷೆ ಬರೆಯುವುದು. (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಬೆಂಗಳೂರು ಗೌ|| ಹೈಸ್ಕೂಲ್ ಸಹಾಯೋಪಾದ್ಯಾಯರಾದ ಮೆ|| ಆರ್. ರಾಮರಾವ್, ಬಿ. ಎ ಯವರು.

ವಿಷಯಗಳು	ಪರೀಕ್ಷಕರ ಹೆಸರು ಮತ್ತು ವಿಳಾಸ
ಪಾಕಶಾಸ್ತ್ರ. (ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಬೆಂಗಳೂರು ಆರ್ಯಬಾಲಿಕಾ ಪಾಠಶಾಲಾ ಹೆಡ್ ಮಿಸ್ಟ್ರೆಸ್‌ರಾದ ಶ್ರೀಮತಿ ವೇಂಗಡಮ್ಮನವರು.
ಪಾಕಶಾಸ್ತ್ರ. (ಉರ್ದು ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಚನ್ನಪಟ್ಟಣದ ಗ॥ ಬಾಲಿಕಾ ಪಾಠಶಾಲೆಯ ಹೆಡ್‌ಮಿಸ್ಟ್ರೆಸ್‌ರಾದ ಸೈದಾಸ್ಯೆಯದ್ ಉತ್ತನೀಸಯವರು.
ಕಸೂತಿಕೆಲಸ. (ಲೋವರ್ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ)	ಮೈಸೂರು ವಿಕ್ಟೋರಿಯಾ ಬಾಲಿಕಾಪಾಠಶಾಲೆಯ ಸೂಪರೆಂಟೆಂಡೆಂಟರಾದ ಎಸ್ ಸಿ. ಇ. ಪಾರ್‌ಸನ್ಸ್‌ರವರು.

BANGALORE,
20th October, 1913.

M. SHAMA RAO,
President, Committee for the Management of the Local Examinations.

* ವಿದ್ಯಾದಾಯಿನಿ *

(A Monthly Journal.)

ಭಾಗ ೨] ಫೆಬ್ರವರಿ—೧೯೧೪ [ಸಂಚಿಕೆ ೨.

ವಿದ್ಯಾಭ್ಯಾಸದ ಪ್ರದರ್ಶನ ಬೆಂಗಳೂರು.

ಕಳೆದ ತಿಂಗಳು 27ನೇ ತಾರೀಖಿನಲ್ಲಿ ಈ ಪ್ರದರ್ಶನವು ಬೆಂಗಳೂರು ಗವರ್ನಮೆಂಟ್ ಹೈಸ್ಕೂಲಿನಲ್ಲಿ ತೆರೆಯಲ್ಪಡುವುದಕ್ಕೋಸ್ಕರ ಒಂದು ಸಭೆಯು ಸೇರಿತ್ತು. ನಮ್ಮ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್, ಸರ್, ಹ್ಯೂಡ್ಯಾಲಿ, ಕೆ. ಸಿ. ಐ. ಇ. ಸಿ. ಎಸ್. ಐ. ರವರು ಈ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದರು. ಲೇಡಿ ಡ್ಯಾಲಿಯವರು, ಶ್ರೀಮತ್ ಯುವರಾಜರವರು, ಮ|| ರಾ|| ನಂಜುಂಡಯ್ಯನವರು, ಮ|| ರಾ|| ಶಾಮರಾಯರವರು, ಮ|| ರಾ|| ಸಿ. ಶ್ರೀನಿವಾಸಅಯ್ಯಂಗಾರ್ಯರವರು, ಮ|| ರಾ|| ಅಣ್ಣಾಸಾಮಿ ಮೊದಲಿಯಾರ್ರವರು, ಡಾಕ್ಟರ್ ಅಚ್ಯುತರಾಯರವರು, ಮ|| ರಾ|| ಎಂ. ವೆಂಕಟಕೃಷ್ಣಯ್ಯನವರು, ಮೆ|| ಟೇಟರವರು, ಮ|| ರಾ|| ಸಿ. ಕೃಷ್ಣರಾಯರವರು ಇವರೇ ಮೊದಲಾದ ಅನೇಕ ದೊಡ್ಡಮನುಷ್ಯರೂ, ದೊರೆಸಾನಿಯವರೂ ಈ ಸಭೆಗೆ ದಯಮಾಡಿಸಿದ್ದರು. ಕೆಲವುಜನ ಬಾಲೆಯರು ಸ್ವಾಗತ ಪೂರ್ವಕವಾದ ಹಾಡುಗಳನ್ನು ಹೇಳಿದರು. ನಾಲ್ಕು ಐದು ವರ್ಷದ ಚಿಕ್ಕಹುಡುಗಿಯೊಬ್ಬಳು ವೀಣೆಯನ್ನು ನುಡಿಸಿದಳು ಮತ್ತೊಬ್ಬ ಹುಡುಗಿಯು ಗಾನಮಾಡಿದ್ದಳು. ತರುವಾಯ ಕಮಿಟಿಯ ಪ್ರೆಸಿಡೆಂಟರಾದ ಮ|| ರಾ|| ದಾಸಪ್ಪನವರು ಎಗ್ಜಿಬಿಷನ್ ಕಮಿಟಿಯ ರಿಪೋರ್ಟನ್ನು ಓದಿದರು. ಆ ರಿಪೋರ್ಟಿನ ಮುಖ್ಯ ತಾತ್ಪರ್ಯವೇ

ನೆಂದರೆ:—ಈ ಎಗ್ಜಿಬಿಷನ್ ಕಮಿಟಿಯ ವೈಸ್‌ಪ್ರೆಸಿಡೆಂಟ್‌ರೂ ಗವರ್ನ್‌ಮೆಂಟ್ ಹೈಸ್ಕೂಲ್ ಹೆಡ್‌ಮಾಸ್ಟರೂ ಆದ ಮ|| ರಾ|| ಎ. ಸುಬ್ರಹ್ಮಣ್ಯೈಯ್ಯರವರಿಗೆ ಒಂದು ವ್ಯಸನಕರವಾದ ಅಪಾಯವುಂಟಾಗಿ ಈ ದಿವಸ ಈ ಸಭೆಗೆ ಬರುವುದಕ್ಕೆ ಅನಾನುಕೂಲವಾದುದಕ್ಕೋಸ್ಕರ ನಾವೆಲ್ಲರೂ ತುಂಬ ವಿಷಾದಿಸುತ್ತೇವೆ. ದಸರಾಕಾಲದಲ್ಲಿ ಮೈಸೂರಲ್ಲಿ ವಿದ್ಯಾಭ್ಯಾಸದ ಪ್ರದರ್ಶನವು ನಡೆಯಿತು. ಅದು ಬಹಳ ಪ್ರಯೋಜನಕಾರಿಯಾಗಿ ಪರಿಣಮಿಸಿತು. ಸದರಿ ಪ್ರದರ್ಶನಗಳನ್ನು ನೋಡುವುದಕ್ಕೆ ಮೈಸೂರಿಗೆ ಹೋಗುವುದಕ್ಕೆ ಯಾರಿಗೆ ಅನುಕೂಲವಿರಲಿಲ್ಲವೋ ಅಂಥವರ ಪ್ರಯೋಜನಾರ್ಥವಾಗಿ ಸದರಿ ಪ್ರದರ್ಶನವು ಇಲ್ಲಿ ಮಾಡಲ್ಪಡಬೇಕೆಂದು ನಿಷ್ಕರ್ಷೆ ಮಾಡಲ್ಪಟ್ಟಿತು. ಮೈಸೂರು ಸಂಸ್ಥಾನದ ಸ್ಕೂಲುಗಳಲ್ಲಿ ವಿದ್ಯಾಭ್ಯಾಸದ ಕೆಲಸಗಳು ಹೇಗೆ ನಡೆಯುತ್ತವೋ ಪಾಠಕರು ಪ್ರೈಮರಿ ಸ್ಕೂಲುಗಳಲ್ಲಿಯೂ ವಿಲೇಜ್ ಸ್ಕೂಲುಗಳಲ್ಲಿಯೂ ತಮ್ಮ ಪಾಠಗಳು ಪ್ರಯೋಜನಕರವಾಗಬೇಕಾದರೆ ಯಾವ ರೀತಿಯಲ್ಲಿ ಪಾಠಪ್ರವಚನಗಳನ್ನು ನಡೆಸಬೇಕೋ ಸ್ಕೂಲು ಮ್ಯಾನೇಜ್‌ಮೆಂಟಿನಲ್ಲಿ ತಿದ್ದುಪಾಟುಗಳು ಎಷ್ಟುಮಟ್ಟಿಗೆ ನಡೆಸಲ್ಪಡಬೇಕೋ ಅಂಥ ತಿದ್ದುಪಾಟುಗಳ ಫಲವು ಡ್ರಾಯಿಂಗ್ ಮೂಲಕವಾಗಿಯೂ ಮಕ್ಕಳಿಂದ ರಚಿಸಲ್ಪಟ್ಟ ನಾನಾವಿಧವಾದ ವಸ್ತುಗಳ ಮೂಲಕವಾಗಿಯೂ ಹೇಗೆ ರಚಿಸಲ್ಪಟ್ಟಿರುವುವೋ ಇದನ್ನೆಲ್ಲಾ ವಿದ್ಯಾರ್ಥಿಗಳಿಗೂ ಪಾಠಕರಿಗೂ ವಸ್ತುಗಳ ಮೂಲಕವಾಗಿಯೂ ವಿದ್ಯಾರ್ಥಿಗಳು ಮಾಡುವ ಕೆಲಸಗಳ ಮೂಲಕವಾಗಿಯೂ ತೋರಿಸಬೇಕೆಂದು ಉದ್ದೇಶ ಮಾಡಲ್ಪಟ್ಟಿತು. ಈ ರೀತಿಯಾದ ಪ್ರದರ್ಶನಗಳಿಂದ ವಿದ್ಯಾರ್ಥಿಗಳಲ್ಲಿಯೂ ಪಾಠಕರಲ್ಲಿಯೂ ಒಬ್ಬರನ್ನೊಬ್ಬರು ಮಿಾರಿಸಬೇಕೆಂಬ ಹುರುಡು ಉಂಟಾಗುತ್ತದೆ. ಅಂಗಸಾಧನೆಗಳನ್ನೂ, ಅಭ್ಯಾಸದ ಪಾಠಗಳನ್ನೂ, ಚಿತ್ರಗಳನ್ನೂ ತೋರಿಸುವುದರಿಂದಲೂ ಬಹಳ ಚೆನ್ನಾಗಿ ಕೆಲಸ ಮಾಡಿದವರಿಗೆ ಇನಾಮುಗಳನ್ನು ಕೊಡುವುದರಿಂದಲೂ ವಿದ್ಯಾರ್ಥಿಗಳಿಗೂ, ಪಾಠಕರಿಗೂ ವಸ್ತುರಚನೆಯನ್ನು ಇನ್ನೂ ಚೆನ್ನಾಗಿ ಮಾಡುವಂತೆ ಪ್ರೋತ್ಸಾಹವು ಉಂಟಾಗುತ್ತದೆ. ಹೀಗೆ ಮಾಡಬೇಕೆಂಬ ಉದ್ದೇಶದಿಂದ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಆಲ್ಲಿನ ವಿದ್ಯಾರ್ಥಿಗಳ ಮತ್ತು ಪಾಠಕರ ಪ್ರಯೋಜನಾರ್ಥವಾಗಿ ಈ ಪ್ರದರ್ಶ

ನಗಳನ್ನು ಮಾಡಬೇಕೆಂದು ಸಂಕಲ್ಪ ಮಾಡಲ್ಪಟ್ಟಿತು. ಇಂಥ ಪ್ರದರ್ಶನಗಳಲ್ಲಿ ಇದೇ ಮೊದಲನೆಯದು. ಇದನ್ನು ಓಪನ್ ಮಾಡುವುದಕ್ಕೆ ತಾವು ಒಪ್ಪಿ ಇಲ್ಲಿ ದಯಮಾಡಿಸಿದ್ದಕ್ಕೋಸ್ಕರ ನಾವು ಬಹಳ ಕೃತಜ್ಞರಾಗಿದ್ದೇವೆ. ಸ್ಪಾಯಿಡ್ ಸೂಪರ್‌ವೈಜರಾದ ಮ|| ರಾ|| ಎಸ್. ಶ್ರೀನಿವಾಸರಾವ್, ಬಿ.ಎ. ರವರು ಈ ಪ್ರದರ್ಶನದ ಕೆಲಸಗಳನ್ನು ಉಪಕ್ರಮಿಸಿ ಬಹಳ ಮೆಹನತ್ತುಮಾಡಿ ಇದು ಮನೋಹರವಾಗಿರುವಂತೆ ಮಾಡಿರುತ್ತಾರೆ. ಈ ಪ್ರಾಂತ್ಯದ ಸ್ಕೂಲುಗಳ ಮತ್ತು ಕಾಲೇಜ್‌ಗಳ ಪಾಠಕರಿಗೂ, ವಿದ್ಯಾರ್ಥಿಗಳಿಗೂ ಆಸಕ್ತಿ ಹುಟ್ಟುವಂತೆ ಮಾಡಿದವರೇ ಇವರು. ಇವರು ಈ ಪ್ರದರ್ಶನದ ಕಮಿಟಿಯನ್ನು ಏರ್ಪಡಿಸುವ ಕೆಲಸವನ್ನು ಮಾಡಿದರು. ಈ ಕಮಿಟಿಯ ಮೆಂಬರುಗಳೆಲ್ಲರೂ ಬಹಳ ಶ್ರದ್ಧೆಯಿಂದ ಕೆಲಸಮಾಡಿ ಮಹಾಜನಗಳ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ರೆ|| ಮಾ|| ಫುಲ್ಲರವರೂ ಮಿಸ್. ಬಟ್ಲರ್‌ವರೂ ಕಮಿಟಿ ಮೆಂಬರುಗಳಾಗಿ ಸಹಾಯ ಮಾಡಿದ್ದಲ್ಲದೆ ಈ ಎಗ್ಜಿಬಿಷನ್ ಏರ್ಪಾಡು ಮಾಡುವುದರಲ್ಲಿ ಸಾಕ್ಷಾತ್ತಾಗಿ ಬಹಳ ಶ್ರದ್ಧೆಯನ್ನೂ ತೋರಿಸಿದರು. ಇವರಿಗೆ ನಾವು ಬಹಳ ಕೃತಜ್ಞರಾಗಿದ್ದೇವೆ. ಈ ಪ್ರದರ್ಶನವನ್ನು ಮಾಡುವುದರಲ್ಲಿ ಖರ್ಚಿನ ಬಾಬಿನಲ್ಲಿ ನಮಗೆ ಬಹಳ ತೊಂದರೆಯುಂಟಾಯಿತು. ಖರ್ಚಿಗಿಲ್ಲದೆ ಈ ಪ್ರದರ್ಶನವೇ ನಿಂತುಹೋಗಬಹುದೆಂಬ ಭಯವೂ ಉಂಟಾಗಿತ್ತು. ಆದರೆ ಈ ಕಮಿಟಿ ಸೆಕ್ರೆಟರಿಗಳ ಶಕ್ತಿಯಿಂದಲೂ ಶ್ರದ್ಧೆಯಿಂದಲೂ ಮಹಾಜನಗಳ ಔದಾರ್ಯದಿಂದಲೂ ಈ ಭಯವು ನಿವಾರಣೆಯಾಯಿತು. ಈ ಪ್ರದರ್ಶನದ ಖರ್ಚಿಗಾಗಿ ವಿದ್ಯಾಭಿಮಾನಿಗಳ ಸಹಾಯದಿಂದ 600 ರೂಪಾಯಿ ಚಂದಾ ವಸೂಲಾಯಿತು. ಪ್ರಥಮತಃ ಈ ಡಿಸ್ಟ್ರಿಕ್ಟಿನ ವಿದ್ಯಾರ್ಥಿಗಳಿಗೂ ಪಾಠಕರಿಗೂ ಮಾತ್ರ ಉಪಯೋಗಿಸುವಂತೆ ಈ ಪ್ರದರ್ಶನವನ್ನು ಮಾಡಬೇಕೆಂದು ಯೋಚಿಸಲ್ಪಟ್ಟಿತು. ಕ್ರಮೇಣ ಈ ಸಂಸ್ಥಾನದಲ್ಲಿರತಕ್ಕ ಸಮಸ್ತ ಸ್ಕೂಲುಗಳಿಗೂ ಮತ್ತು ಬೆಂಗಳೂರು ಕಂಟೋನ್‌ಮೆಂಟ್ ಸ್ಕೂಲುಗಳಿಗೂ, ಗ್ರಾಂಟ್ ಇನ್ ಏಡ್ ಸ್ಕೂಲುಗಳಿಗೂ ಪ್ರದರ್ಶನಕ್ಕೆ ಯೋಗ್ಯವಾದ ವಸ್ತುಗಳನ್ನು ಕಳುಹಿಸಬೇಕೆಂದು ಪ್ರಾರ್ಥನಾಪತ್ರಿಕೆಗಳು ಬರೆಯಲ್ಪಟ್ಟವು. ಈ ಸಂಸ್ಥಾನದ ಎಲ್ಲಾ ಸ್ಕೂಲುಗಳ ಪೈಕಿ 250 ಸ್ಕೂಲುಗಳಿಂದಲೂ ಅನೇಕ ಕೈಗಾ

ರಿಕೆ ಸ್ಕೂಲುಗಳಿಂದಲೂ ವಿದ್ಯಾಭ್ಯಾಸದ ಸರ್ವವಸ್ತು ಪ್ರದರ್ಶನಶಾಲೆಯಿಂದಲೂ ವಿಲಾಯಿತಿ ಸ್ಕೂಲುಗಳಿಂದಲೂ ಪ್ರದರ್ಶನಕ್ಕೆ ಅರ್ಹವಾದ ವಸ್ತುಗಳು ಬಂದಿರುತ್ತವೆ. ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನಿಂದ ಜೇಡಿಮಣ್ಣಿನ ಮಾದರಿಯ ವಸ್ತುಗಳು ಕಿಂಡರ್‌ಗಾರ್ಟೆನ್ ಮುಟ್ಟುಗಳು ಬಂದಿರುತ್ತವೆ. ಹೀಗೆ ಪ್ರದರ್ಶನಕ್ಕೆ ಬಂದಿರತಕ್ಕ ವಸ್ತುಗಳು ನಾನಾವಿಧವಾಗಿರುತ್ತವೆ. ಸ್ಕೂಲುಗಳಲ್ಲಿ ನಡೆಯತಕ್ಕ ಪ್ರತಿಯೊಂದು ಕೆಲಸದ ಅಭ್ಯಾಸ ಪಾಠಗಳು ಹಾಜರುಮಾಡಲ್ಪಟ್ಟಿರುತ್ತವೆ. ವಿದ್ಯಾರ್ಥಿಗಳ ಜಾಗರೂಕತೆಯನ್ನೂ, ವ್ಯಾಸಂಗವನ್ನೂ, ಚಮತ್ಕಾರವನ್ನೂ, ನಿರ್ಮಾಣಶಕ್ತಿಯನ್ನೂ, ಪಾಠಕರ ಶ್ರದ್ಧೆಯನ್ನೂ ತೋರಿಸುವುದರಲ್ಲಿ ಈ ವಸ್ತುಗಳು ವಿಶೇಷ ಪ್ರಯೋಜನಕರವಾಗಿವೆ. ಈ ವಸ್ತುಗಳೆಲ್ಲಾ ಕ್ರಮವಾದ ತರಗತಿಗಳಾಗಿ ವಿಂಗಡಿಸಲ್ಪಟ್ಟಿವೆ. ಪ್ರೇಕ್ಷಕರಿಗೆ ಈ ತಪ್ಸೀಲುಗಳೆಲ್ಲಾ ನೋಡಿದಕೂಡಲೆ ಗೊತ್ತಾಗುವುವು. ಭಾಷೆಗಳನ್ನು ಕಲಿಸುವುದರಲ್ಲಿ ಯಾವ ಯಾವ ಅಭ್ಯಾಸದ ಪಾಠಗಳು ಬರೆಯಲ್ಪಟ್ಟಿರುತ್ತವೋ ಅವುಗಳೆಲ್ಲಾ ಒಂದು ಕೊಠಡಿಯಲ್ಲಿ ಇಡಲ್ಪಟ್ಟಿರುತ್ತವೆ.

ಗಣಿತಶಾಸ್ತ್ರವನ್ನು ಶೋಧಿಸುವುದರಲ್ಲಿ ಆಧುನಿಕರು ಯಾವ ಅಭ್ಯಾಸದ ಪಾಠಗಳನ್ನು ಕಲಿಸಿರುತ್ತಾರೋ ಅವುಗಳ ಮಾದರಿಗಳು ತೋರಿಸಲ್ಪಟ್ಟಿರುವ ನೋಟ್‌ಬುಕ್ಕುಗಳು ಮತ್ತೊಂದು ಕೊಠಡಿಯಲ್ಲಿ ಇಡಲ್ಪಟ್ಟಿರುತ್ತವೆ. ಚರಿತ್ರೆ, ಭೂಗೋಳ ಮೊದಲಾದವುಗಳಿಗೆ ಸಂಬಂಧಪಟ್ಟ ಅಭ್ಯಾಸದ ಪಾಠಗಳೂ ಭೂಪಟಗಳೂ ಮತ್ತೊಂದು ಕೊಠಡಿಯಲ್ಲಿ ಇಡಲ್ಪಟ್ಟಿರುತ್ತವೆ. ಭೌತಿಕಶಾಸ್ತ್ರ, ರಸಾಯನಶಾಸ್ತ್ರ ಮೊದಲಾದ ಶಾಸ್ತ್ರವಿಷಯಗಳನ್ನು ತೋರಿಸುವ ಅಭ್ಯಾಸ ಪಾಠ ಪುಸ್ತಕಗಳು, ಕಾಗದ, ಮರ, ಜೇಡಿಮಣ್ಣು ಮೊದಲಾದವುಗಳಲ್ಲಿ ತೋರಿಸಲ್ಪಟ್ಟಿರುವ ಮಾದರಿಗಳು ಬಣ್ಣದ ಕೆಲಸಗಳು, ಹೊಲಿಗೇ ಕೆಲಸಗಳು, ಇವುಗಳಿಂದ ತಯಾರಾದ ವಸ್ತುಗಳೆಲ್ಲಾ ಬೇರೆ ಕೊಠಡಿಗಳಲ್ಲಿ ತೋರಿಸಲ್ಪಟ್ಟಿವೆ. ಕೈಗೆಲಸಗಳು ಕಣ್ಣು ಮುಚ್ಚಿಕೊಂಡು ಮಳೆ ಜೋಡಿಸುವುದು ಇವುಗಳಿಂದ ತಯಾರಾದ ವಸ್ತುಗಳು ಒಂದು ಕೊಠಡಿಯಲ್ಲಿ ತೋರಿಸಲ್ಪಟ್ಟಿದೆ. ಅಂಗಸಾಧನೆಗಳನ್ನು ಮಾಡಿ ತೋರಿಸತಕ್ಕವರು ಈ ಕಟ್ಟಡದಲ್ಲಿ ಮಾಡಿರತಕ್ಕ ಅಖಾಡಾದಲ್ಲಿ ತಮ್ಮ ಸಾಧನೆಯ ಕೌಶಲ್ಯ

ಗಳನ್ನು ತೋರಿಸುತ್ತಾರೆ. ಉಪನ್ಯಾಸಕರಿಗೋಸ್ಕರ ಏರ್ಪಾಡು ಮಾಡಲ್ಪಟ್ಟಿದೆ. ಕನ್ನಡದಲ್ಲಿ ಕೆಲವು ಉಪನ್ಯಾಸಗಳು ಮಾಡಲ್ಪಡುತ್ತವೆ. ಮ್ಯಾಜಿಕ್ ಲ್ಯಾಂಟರ್ನ್ ಉಪನ್ಯಾಸಗಳಿಗೂ ಏರ್ಪಾಡು ಮಾಡಲ್ಪಟ್ಟಿದೆ. ಈ ಪ್ರದರ್ಶನವನ್ನು ನೋಡತಕ್ಕವರಿಗೆ ಫೀಜು ಹಾಕಲ್ಪಟ್ಟಿಲ್ಲ. ವಿದ್ಯಾಭಿಮಾನಿಗಳೆಲ್ಲಾ ಇಲ್ಲಿನ ವಿದ್ಯಾಭ್ಯಾಸದ ಕ್ರಮಗಳನ್ನು ನೋಡಿ ಸಮಾಚೀನವಾದ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಅವಕಾಶವಾಗಲೆಂಬುವುದೇ ನಮ್ಮ ಮುಖ್ಯ ಉದ್ದೇಶ. ಫೀಜನ್ನೂ ಹಾಕದಿರುವುದಕ್ಕೆ ಇದೇ ಮುಖ್ಯಕಾರಣ. ಈ ಪ್ರದರ್ಶನಕ್ಕೆ ಸಹಾಯ ಮಾಡಿದವರನ್ನೆಲ್ಲಾ ನಾವು ವಂದಿಸುತ್ತೇವೆ. ನಮ್ಮ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರು ಹಿತೋಪದೇಶರೂಪವಾಗಿಯೂ, ಮಾರ್ಗದರ್ಶನರೂಪವಾಗಿಯೂ ನಮಗೆ ತುಂಬ ಸಹಾಯ ಮಾಡಿದರು. ಇದಕ್ಕಾಗಿ ನಾವು ತುಂಬಾ ಕೃತಜ್ಞರಾಗಿದೇವೆ. ಈ ಹೈಸ್ಕೂಲಿನ ಹೆಡ್‌ಮಾಸ್ಟರವರು ಈ ಸ್ಕೂಲು ಕಟ್ಟಡವನ್ನು ಈ ಪ್ರದರ್ಶನಕ್ಕೆ ಕೊಟ್ಟದ್ದಕ್ಕೋಸ್ಕರ ನಾವು ತುಂಬಾ ಕೃತಜ್ಞರಾಗಿದೇವೆ. ಈ ಪ್ರದರ್ಶನದ ಕಟ್ಟಡವನ್ನು ಅಲಂಕರಿಸುವುದರಲ್ಲಿ ಮ್ಯುನಿಸಿಪಲ್ ಅಧಿಕಾರಿಗಳು ಮತ್ತು ಗವರ್ನಮೆಂಟ್ ತೋಟಗಳ ಸೂಪರಿನ್‌ಟೆನ್‌ಡೆಂಟ್‌ರವರೂ, ನಮಗೆ ತುಂಬಾ ಸಹಾಯವನ್ನು ಮಾಡಿದರು. ಇದಕ್ಕಾಗಿ ಅವರು ನಮ್ಮ ವಂದನೆಗಳಿಗೆ ಪಾತ್ರರಾಗಿರುವರು. ಉಪನ್ಯಾಸಗಳನ್ನು ಮಾಡುವುದರಿಂದಲೂ ಮಾದರಿಯಾಗಿ ಪಾಠಗಳನ್ನು ಹೇಳುವುದರಿಂದಲೂ ನಮಗೆ ಅನೇಕ ದೊಡ್ಡಮನುಷ್ಯರೂ ಮತ್ತು ಘನತೆಯನ್ನು ಹೊಂದಿದ ಸ್ತ್ರೀಯರೂ ಸಹಾಯಮಾಡಿರುತ್ತಾರೆ. ಇವರನ್ನು ನಾವು ವಂದಿಸುತ್ತೇವೆ. ಈ ಪ್ರದರ್ಶನವನ್ನು ಓಪನ್ ಮಾಡುವುದಕ್ಕೆ ನಾವು ಒಪ್ಪಿದ್ದಕ್ಕೋಸ್ಕರವೂ ಈ ಸಭೆಯನ್ನಲಂಕರಿಸುವುದಕ್ಕೆ ಲೇಡಿ ಡ್ಯಾಲಿಯವರು ದಯಮಾಡಿಸಿದ್ದಕ್ಕೋಸ್ಕರವೂ ಈ ಪ್ರದರ್ಶನಕ್ಕೆ ದಯಮಾಡಿಸಿ ಶ್ರೀಮನ್ ಯುವರಾಜರವರು ನಮಗೆ ಅಸಾಧಾರಣವಾದ ಪ್ರೋತ್ಸಾಹವನ್ನು ಮಾಡಿದ್ದಕ್ಕೋಸ್ಕರವೂ ನಾವು ಅತ್ಯಂತ ಕೃತಜ್ಞರಾಗಿರುತ್ತೇವೆ. ತಾವು ಈ ಪ್ರದರ್ಶನಶಾಲೆಯನ್ನು ಓಪನ್ ಮಾಡಿ ವಿದ್ಯಾರ್ಥಿಗಳಿಗೂ ಪಾಠಕರಿಗೂ ಪ್ರೋತ್ಸಾಹ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಈರೀತಿಯಲ್ಲಿ ಮ|| ರಾ|| ದಾಸಪ್ಪನವರು ಈ ಪ್ರದರ್ಶನಶಾಲೆಯ ರಿಪೋರ್ಟನ್ನು ಓದಿದಕೂಡಲೆ ಕರ್ನಲ್ ಸರ್‌ಹ್ಯೂ ಡ್ಯಾಲಿಯವರು ಅಪ್ಪಣೆಕೊಡಿಸಿದ್ದೇನೆಂದರೆ :—

ಈ ಪ್ರದರ್ಶನದ ಕಮಿಟಿ ಪ್ರೆಸಿಡೆಂಟರಾದ ಮ|| ರಾ|| ದಾಸಪ್ಪನವರು ಓದಿದ ರಿಪೋರ್ಟು ಎಲ್ಲರಿಗೂ ಶ್ರುತವಾಯಿತು. ಮ|| ರಾ|| ಸುಬ್ರಹ್ಮಣ್ಯೈಯ್ಯರವರಿಗೆ ಉಂಟಾದ ವ್ಯಸನಕರವಾದ ಅಪಾಯಕ್ಕೋಸ್ಕರ ನಾನೂ ಈ ಕಮಿಟಿಯವರಂತೆಯೇ ವಿಷಾದಿಸುತ್ತೇನೆ. ಅವರಿಗೆ ಶೀಘ್ರದಲ್ಲಿಯೇ ಲಘುವಾಗಲೆಂದು ನಾನು ಕೋರುತ್ತೇನೆ. ಈ ಪ್ರದರ್ಶನದ ವಿಷಯದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ತುಂಬ ಪ್ರೋತ್ಸಾಹವನ್ನುಂಟುಮಾಡಿರುವರೆಂದು ಪ್ರೆಸಿಡೆಂಟರವರು ಶ್ರುತಪಡಿಸಿದರು. ಈ ಪ್ರದರ್ಶನಕ್ಕೆ ಶ್ರೀಮನ್ ಮಹಾರಾಜರವರ ಅಭಿಮಾನವೂ ಕೂಡ ಸಂಪೂರ್ಣವಾಗಿರುವುದು. ಅವರ ಅನುಮತಿಯಿಂದ ಈ ದಿವಸದ ಸಭೆಯಲ್ಲಿ ಈ ಅಗ್ರಾಸನ ಸಂಬಂಧವಾದ ಸಂತೋಷವನ್ನು ನಾನು ಹೊಂದಿರುತ್ತೇನೆ. ಈ ಪ್ರದರ್ಶನದ ಕಮಿಟಿಯವರೂ ಮತ್ತು ಪೋಷಕರೂ ಸರಕಾರದ ಸಹಾಯವಿಲ್ಲದೆ ಇದಕ್ಕೆ ಬೇಕಾದ ಖರ್ಚಿಗೆ ಸಂಪಾದಿಸಿರುವುದು ಶ್ಲಾಘನೀಯವಾದದ್ದು. ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿಯೂ ಇದೇರೀತಿಯಲ್ಲಿ ಪ್ರದರ್ಶನಗಳು ಮಾಡಲ್ಪಡುವುವೆಂದು ನಾನು ನಂಬಿಇದ್ದೇನೆ. ಈ ಪ್ರದರ್ಶನದ ವಿಷಯದಲ್ಲಿ ತಪ್ಪಿಲ್ಲುವಾರಾಗಿ ಕಮಿಟಿ ಪ್ರೆಸಿಡೆಂಟರವರು ರಿಪೋರ್ಟು ಮಾಡಿರುವರು. ಅವುಗಳನ್ನು ಕುರಿತು ನಾನು ವಿಶೇಷವಾಗಿ ಹೇಳತಕ್ಕದ್ದೇನೂ ಇರುವುದಿಲ್ಲ. ಡೆಮಾನಸ್ಟ್ರೇಷನ್ ಸೆಕ್ಷನ್ಸಿಗೆ ಸೇರಿದವರು ತೋರಿಸತಕ್ಕ ವಸ್ತುತತ್ವಗಳು ಮತ್ತು ದೇಶಭಾಷೆಯಲ್ಲಿಯೂ ಇಂಗ್ಲೀಷು ಭಾಷೆಯಲ್ಲಿಯೂ ಮಾಡಲ್ಪಡತಕ್ಕ ಉಪನ್ಯಾಸಗಳು ಪ್ರಯೋಜನಕರವಾಗಿಯೂ, ವಿದ್ಯಾಭಿವೃದ್ಧಿಗೆ ಸಾಧಕವಾಗಿಯೂ ಇರುವುವೆಂದು ನಾನು ನಂಬಿ ಇದೇನೆ. ಈಪ್ರದರ್ಶನಕ್ಕೆ ಸಹಾಯಮಾಡಿದವರಿಗೆಲ್ಲಾ ನಾನೂ ವಂದನೆಗಳನ್ನು ಮಾಡುತ್ತೇನೆ. ದಸರಾಕಾಲದಲ್ಲಿ ವಿದ್ಯಾಭ್ಯಾಸದ ಕೋರ್ಟನ್ನು ಓಪನ್ ಮಾಡುವಾಗ್ಗೆ ಶ್ರೀಮನ್ ಯುವರಾಜರವರು ಮಾಡಿದ ಉಪನ್ಯಾಸವನ್ನು ಇಲ್ಲಿ ಇರತಕ್ಕವರಲ್ಲಿ ಅನೇಕರು ಕೇಳಿರ

ಬಹುದು. ಅದನ್ನು ಓದದೆ ಇರತಕ್ಕವರು ಈಗಲಾದರೂ ಅದನ್ನು ಓದುವುದು ಉತ್ತಮ. ಓದಿರತಕ್ಕವರೂ ಕೂಡ ಪುನಃ ಅದನ್ನು ಓದಿ ಅವರು ಹೇಳಿರತಕ್ಕ ವಿಷಯಗಳನ್ನು ಪರ್ಯಾಲೋಚಿಸುವುದು ಉತ್ತಮ. ಏಕೆಂದರೆ—ಯೂರೋಪ್ ಖಂಡದಲ್ಲಿ ದೇಶಾಟನವನ್ನು ಮಾಡಿಕೊಂಡು ರಾಜಧಾನಿಗೆ ಬಂದಕೂಡಲೆ ಆ ದೇಶಾಟನದ ಮಹಿಮೆಯಿಂದ ಉಂಟಾಗತಕ್ಕ ಉತ್ತೇಜಕವಾದ ಅವರ ಅನುಭವಗಳು ಅವರ ಉಪನ್ಯಾಸದಲ್ಲಿ ಗರ್ಭೀಕರಿಸಲ್ಪಟ್ಟವೆ. ಸದರಿ ಉಪನ್ಯಾಸದಲ್ಲಿ ಶ್ರೀಮತ್ ಯುವರಾಜರವರು ವ್ಯವಸಾಯ, ಕೈಗಾರಿಕೆಗಳ ಅಭಿವೃದ್ಧಿ, ಧರ್ಮ, ಆರೋಗದೃಢಕಾಯತೆ ಮೊದಲಾದ ವಿಷಯಗಳಲ್ಲಿ ಬಹಳ ಯುಕ್ತಿಯುಕ್ತವಾಗಿಯೂ, ಅನುಷ್ಠೇಯಗಳಾಗಿಯೂ ಇರತಕ್ಕ ಅನೇಕ ವಿಷಯಗಳನ್ನು ತಿಳಿಸಿರುತ್ತಾರೆ. ಇಂಥ ಬಾಬುಗಳಿಗೆ ಶ್ರೀಮತ್ ಮಹಾರಾಜರವರ ಗವರ್ನಮೆಂಟಿನವರು ಬಹಳ ಗಮನವನ್ನು ಕೊಡುತ್ತಲಿದಾರೆ. ಶ್ರೀಮತ್ ಮಹಾರಾಜರವರು ತಮ್ಮ ಪ್ರಜೆಗಳು ಈ ಭಾಗಗಳಲ್ಲೆಲ್ಲಾ ಪ್ರವೀಣರಾಗಿ ಆತ್ಮಾವಲಂಬಿಗಳಾಗುವಂತೆ ಮಾಡಬೇಕೆಂದು ಬಹಳ ಕುತೂಹಲವುಳ್ಳವರಾಗಿರುತ್ತಾರೆ. ಪ್ರಜೆಗಳನ್ನೆಲ್ಲಾ ಉದ್ಧರಿಸಬೇಕೆಂಬುವುದರಲ್ಲಿ ಶ್ರೀಮತ್ ಮಹಾರಾಜರವರಿಗೆ ಇರತಕ್ಕ ಕುತೂಹಲವು ಅನ್ಯಾದೃಶವಾದದ್ದು. ಶ್ರೀಮತ್ ಮಹಾರಾಜರವರು ಪ್ರಜೆಗಳ ಕ್ಷೇಮವನ್ನೂ ಲಾಭವನ್ನೂ ತಮ್ಮ ಕ್ಷೇಮ ಮತ್ತು ಲಾಭವೆಂದು ಭಾವಿಸಿ ಈ ಕ್ಷೇಮಲಾಭಗಳು ಅತ್ಯುನ್ನತಸ್ಥಿತಿಗೆ ಹೇಗೆ ಬರಬೇಕೋ ಅದನ್ನು ನಿರಂತರದಲ್ಲಿಯೂ ಪರ್ಯಾಲೋಚಿಸುತ್ತಾ ಚೆನ್ನಾಗಿ ಪರ್ಯಾಲೋಚಿಸಲ್ಪಟ್ಟ ವಿಷಯಗಳನ್ನು ಜಾರಿಗೆ ತರುತ್ತಾ ಇರುತ್ತಾರೆ. ಈ ಇಷ್ಟಾರ್ಥಪ್ರಾಪ್ತಿಯ ವಿಷಯದಲ್ಲಿ ಇವರಿಗೆ ದೇವರ ಅನುಗ್ರಹವು ಉಂಟಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಪ್ರದರ್ಶನವು ತೆರೆಯಲ್ಪಟ್ಟಿತೆಂದು ಹೇಳುವುದರಲ್ಲಿ ನಾನು ತುಂಬಾ ಸಂತೋಷವುಳ್ಳವನಾಗಿರುತ್ತೇನೆ.

ಈರೀತಿಯಲ್ಲಿ ನಮ್ಮ ಬ್ರಿಟಿಷ್ ರೆಸಿಡೆಂಟರವರು ಅಪ್ಪಣೆಕೊಡಿಸಿದ ತರುವಾಯ ನಮ್ಮ ಇನ್ಸ್ಪೆಕ್ಟರ್ ಜನರಲ್ಲಾದ ಮ|| ರಾ|| ಎಂ. ಶಾಮರಾಯರವರು ಹೇಳಿದ್ದೇನೆಂದರೆ :—

ಈರೀತಿಯಲ್ಲಿ ಮ|| ರಾ|| ದಾಸಪ್ಪನವರು ಈ ಪ್ರದರ್ಶನಶಾಲೆಯ ರಿಪೋ ರ್ಟನ್ನು ಓದಿದಕೂಡಲೆ ಕರ್ನಲ್ ಸರ್‌ಹ್ಯೂ ಡ್ಯಾಲಿಯವರು ಅಪ್ಪಣೆಕೊಡಿಸಿದ್ದೇ ನೆಂದರೆ :—

ಈ ಪ್ರದರ್ಶನದ ಕಮಿಟಿ ಪ್ರೆಸಿಡೆಂಟರಾದ ಮ|| ರಾ|| ದಾಸಪ್ಪನವರು ಓದಿದ ರಿಪೋರ್ಟು ಎಲ್ಲರಿಗೂ ಶ್ರುತವಾಯಿತು. ಮ|| ರಾ|| ಸುಬ್ರಹ್ಮಣ್ಯಯ್ಯ ರವರಿಗೆ ಉಂಟಾದ ವ್ಯಸನಕರವಾದ ಅಪಾಯಕ್ಕೋಸ್ಕರ ನಾನೂ ಈ ಕಮಿಟಿಯ ವರಂತೆಯೇ ವಿಷಾದಿಸುತ್ತೇನೆ. ಅವರಿಗೆ ಶೀಘ್ರದಲ್ಲಿಯೇ ಲಘುವಾಗಲೆಂದು ನಾನು ಕೋರುತ್ತೇನೆ. ಈ ಪ್ರದರ್ಶನದ ವಿಷಯದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ತುಂಬ ಪ್ರೋತ್ಸಾಹವನ್ನುಂಟುಮಾಡಿರುವರೆಂದು ಪ್ರೆಸಿಡೆಂಟರವರು ಶ್ರುತಪಡಿಸಿದರು. ಈ ಪ್ರದರ್ಶನಕ್ಕೆ ಶ್ರೀಮತ್ ಮಹಾರಾಜರವರ ಅಭಿಮಾನವೂ ಕೂಡ ಸಂಪೂರ್ಣವಾ ಗಿರುವುದು. ಅವರ ಅನುಮತಿಯಿಂದ ಈ ದಿವಸದ ಸಭೆಯಲ್ಲಿ ಈ ಅಗ್ರಾಸನ ಸಂಬಂ ಧವಾದ ಸಂತೋಷವನ್ನು ನಾನು ಹೊಂದಿರುತ್ತೇನೆ. ಈ ಪ್ರದರ್ಶನದ ಕಮಿಟಿಯ ವರೂ ಮತ್ತು ಪೋಷಕರೂ ಸರಕಾರದ ಸಹಾಯವಿಲ್ಲದೆ ಇದಕ್ಕೆ ಬೇಕಾದ ಖರ್ಚಿಗೆ ಸಂಪಾದಿಸಿರುವುದು ಶ್ಲಾಘನೀಯವಾದದ್ದು. ಎಲ್ಲಾ ಡಿಸ್ಟ್ರಿಕ್ಟ್‌ಗಳ ಲ್ಲಿಯೂ ಇದೇರೀತಿಯಲ್ಲಿ ಪ್ರದರ್ಶನಗಳು ಮಾಡಲ್ಪಡುವುವೆಂದು ನಾನು ನಂಬಿ ಇದ್ದೇನೆ. ಈ ಪ್ರದರ್ಶನದ ವಿಷಯದಲ್ಲಿ ತಪ್ಸೀಲುವಾರಾಗಿ ಕಮಿಟಿ ಪ್ರೆಸಿಡೆಂಟರ ವರು ರಿಪೋರ್ಟು ಮಾಡಿರುವರು. ಅವುಗಳನ್ನು ಕುರಿತು ನಾನು ವಿಶೇಷವಾಗಿ ಹೇಳತಕ್ಕದ್ದೇನೂ ಇರುವುದಿಲ್ಲ. ಡೆಮಾನಸ್ಟ್ರೇಷನ್ ಸೆಕ್ಷನಿಗೆ ಸೇರಿದವರು ತೋರಿಸತಕ್ಕ ವಸ್ತುತತ್ವಗಳು ಮತ್ತು ದೇಶಭಾಷೆಯಲ್ಲಿಯೂ ಇಂಗ್ಲೀಷು ಭಾಷೆ ಯಲ್ಲಿಯೂ ಮಾಡಲ್ಪಡತಕ್ಕ ಉಪನ್ಯಾಸಗಳು ಪ್ರಯೋಜನಕರವಾಗಿಯೂ, ವಿದ್ಯಾ ಭಿವೃದ್ಧಿಗೆ ಸಾಧಕವಾಗಿಯೂ ಇರುವುವೆಂದು ನಾನು ನಂಬಿ ಇದೇನೆ. ಈಪ್ರದರ್ಶನಕ್ಕೆ ಸಹಾಯಮಾಡಿದವರಿಗೆಲ್ಲಾ ನಾನೂ ವಂದನೆಗಳನ್ನು ಮಾಡುತ್ತೇನೆ. ದಸರಾಕಾ ಲದಲ್ಲಿ ವಿದ್ಯಾಭ್ಯಾಸದ ಕೋರ್ಟನ್ನು ಓಪನ್ ಮಾಡುವಾಗ್ಗೆ ಶ್ರೀಮತ್ ಯುವರಾ ಜರವರು ಮಾಡಿದ ಉಪನ್ಯಾಸವನ್ನು ಇಲ್ಲಿ ಇರತಕ್ಕವರಲ್ಲಿ ಅನೇಕರು ಕೇಳಿರ

ಬಹುದು. ಅದನ್ನು ಓದದೆ ಇರತಕ್ಕವರು ಈಗಲಾದರೂ ಅದನ್ನು ಓದುವುದು ಉತ್ತಮ. ಓದಿರತಕ್ಕವರೂ ಕೂಡ ಪುನಃ ಅದನ್ನು ಓದಿ ಅವರು ಹೇಳಿರತಕ್ಕ ವಿಷಯಗಳನ್ನು ಪರ್ಯಾಲೋಚಿಸುವುದು ಉತ್ತಮ. ಏಕೆಂದರೆ-ಯೂರೋಪ್ ಖಂಡದಲ್ಲಿ ದೇಶಾಟನವನ್ನು ಮಾಡಿಕೊಂಡು ರಾಜಧಾನಿಗೆ ಬಂದಕೂಡಲೆ ಆ ದೇಶಾಟನದ ಮಹಿಮೆಯಿಂದ ಉಂಟಾಗತಕ್ಕ ಉತ್ತೇಜಕವಾದ ಅವರ ಅನುಭವಗಳು ಅವರ ಉಪನ್ಯಾಸದಲ್ಲಿ ಗರ್ಭೀಕರಿಸಲ್ಪಟ್ಟಿವೆ. ಸದರಿ ಉಪನ್ಯಾಸದಲ್ಲಿ ಶ್ರೀಮನ್ ಯುವರಾಜರವರು ವ್ಯವಸಾಯ, ಕೈಗಾರಿಕೆಗಳ ಅಭಿವೃದ್ಧಿ, ಧರ್ಮ, ಆರೋಗದೃಢಕಾಯತೆ ಮೊದಲಾದ ವಿಷಯಗಳಲ್ಲಿ ಬಹಳ ಯುಕ್ತಿಯುಕ್ತವಾಗಿಯೂ, ಅನುಷ್ಠೇಯಗಳಾಗಿಯೂ ಇರತಕ್ಕ ಅನೇಕ ವಿಷಯಗಳನ್ನು ತಿಳಿಸಿರುತ್ತಾರೆ. ಇಂಥ ಬಾಬುಗಳಿಗೆ ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು ಬಹಳ ಗಮನವನ್ನು ಕೊಡುತ್ತಲಿದಾರೆ. ಶ್ರೀಮನ್ ಮಹಾರಾಜರವರು ತಮ್ಮ ಪ್ರಜೆಗಳು ಈ ಭಾಗಗಳಲ್ಲೆಲ್ಲಾ ಪ್ರವೀಣರಾಗಿ ಆತ್ಮಾವಲಂಬಿಗಳಾಗುವಂತೆ ಮಾಡಬೇಕೆಂದು ಬಹಳ ಕುತೂಹಲವುಳ್ಳವರಾಗಿರುತ್ತಾರೆ. ಪ್ರಜೆಗಳನ್ನೆಲ್ಲಾ ಉದ್ಧರಿಸಬೇಕೆಂಬುವುದರಲ್ಲಿ ಶ್ರೀಮನ್ ಮಹಾರಾಜರವರಿಗೆ ಇರತಕ್ಕ ಕುತೂಹಲವು ಅನ್ಯಾದೃಶವಾದದ್ದು. ಶ್ರೀಮನ್ ಮಹಾರಾಜರವರು ಪ್ರಜೆಗಳ ಕ್ಷೇಮವನ್ನೂ ಲಾಭವನ್ನೂ ತಮ್ಮ ಕ್ಷೇಮ ಮತ್ತು ಲಾಭವೆಂದು ಭಾವಿಸಿ ಈ ಕ್ಷೇಮಲಾಭಗಳು ಅತ್ಯುನ್ನತಸ್ಥಿತಿಗೆ ಹೇಗೆ ಬರಬೇಕೋ ಅದನ್ನು ನಿರಂತರದಲ್ಲಿಯೂ ಪರ್ಯಾಲೋಚಿಸುತ್ತಾ ಚೆನ್ನಾಗಿ ಪರ್ಯಾಲೋಚಿಸಲ್ಪಟ್ಟ ವಿಷಯಗಳನ್ನು ಜಾರಿಗೆ ತರುತ್ತಾ ಇರುತ್ತಾರೆ. ಈ ಇಷ್ಟಾರ್ಥಪ್ರಾಪ್ತಿಯ ವಿಷಯದಲ್ಲಿ ಇವರಿಗೆ ದೇವರ ಅನುಗ್ರಹವು ಉಂಬಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಪ್ರದರ್ಶನವು ತೆರೆಯಲ್ಪಟ್ಟಿತೆಂದು ಹೇಳುವುದರಲ್ಲಿ ನಾನು ತುಂಬಾ ಸಂತೋಷವುಳ್ಳವನಾಗಿರುತ್ತೇನೆ.

ಈರೀತಿಯಲ್ಲಿ ನಮ್ಮ ಬ್ರಿಟಿಷ್ ರೆಸಿಡೆಂಟರವರು ಅಪ್ಪಣೆಕೊಡಿಸಿದ ತರುವಾಯ ನಮ್ಮ ಇನ್ಸ್ಪೆಕ್ಟರ್ ಜನರಲ್ಲಾದ ಮ|| ರಾ|| ಎಂ. ಶಾಮರಾಯರವರು ಹೇಳಿದ್ದೇನೆಂದರೆ :—

ಈ ದಿವಸ ನೀವುಗಳು (ಕರ್ನಲ್ ಸರ್ ಹ್ಯೂಡ್ಯಾಲಿ, ಲೇಡಿ ಡ್ಯಾಲಿಯವರು, ಶ್ರೀಮನ್ ಯುವರಾಜರವರು) ಈ ಸಭೆಗೆ ದಯಮಾಡಿಸಿ ಈ ಕಮಿಟಿಯವರಿಗೂ ನನಗೂ ಅತ್ಯಂತ ಪ್ರೋತ್ಸಾಹವನ್ನುಂಟುಮಾಡಿರುವಿರಿ. ಇದಕ್ಕೆ ನಾನು ಎಷ್ಟು ಕೃತಜ್ಞನಾಗಿದ್ದಾಗ್ಯೂ ಕಡಮೆಯಾಗಿರುವುದು. ತಾವು (ಸರ್ ಹ್ಯೂಡ್ಯಾಲಿಯವರು) ನಮ್ಮ ಪ್ರಾರ್ಥನೆಗಳನ್ನು ಲಾಲಿಸಿ ಇಲ್ಲಿಗೆ ದಯಮಾಡಿ ಈ ಪ್ರದರ್ಶನವನ್ನು ಓಪನ್ ಮಾಡಿ ಬಹುಜನ ವಿದ್ಯಾರ್ಥಿಗಳಿಗೂ ಪಾಠಕರಿಗೂ ಅತ್ಯಂತ ಸಂತೋಷವನ್ನುಂಟುಮಾಡಿದಿರಿ. ನಮ್ಮ ಭಾಷೆಯಲ್ಲಿ ಸತ್ಪುರುಷರನ್ನೂ ಘನತೆಯನ್ನು ಹೊಂದಿದ ಸ್ತ್ರೀಯರನ್ನೂ ಸುವಾಸನೆಯುಳ್ಳ ಪುಷ್ಪಕ್ಕೂ ಅದರ ಪರಿಮಳಕ್ಕೂ ಹೋಲಿಸುವುದುಂಟು. ತಾವು (ಸರ್. ಹ್ಯೂ ಡ್ಯಾಲಿಯವರು) ಪುಷ್ಪದಂತೆಯೂ ಲೇಡಿ ಡ್ಯಾಲಿಯವರು ಪರಿಮಳದಂತೆಯೂ ಭಾವಿಸಲ್ಪಟ್ಟು ಇರುತ್ತೀರಿ. ಈ ಸಂಸ್ಥಾನದ ವಿದ್ಯಾರ್ಥಿಗಳ ಯೋಗಕ್ಷೇಮ ಚಿಂತೆಯ ವಿಷಯದಲ್ಲಿಯೂ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನು ಕೊಡತಕ್ಕ ವಿಷಯದಲ್ಲಿಯೂ ನಿಮಗಿರುವ ನಿಸರ್ಗವಾದ ಪ್ರೀತಿಗೋಸ್ಕರ ನಾವು ಬಹಳ ಕೃತಜ್ಞರಾಗಿರುತ್ತೇವೆ. ಶ್ರೀಮನ್ ಯುವರಾಜರವರು ಈ ಸಂಸ್ಥಾನದ ಪ್ರಜೆಗಳಿಂದ ಮೂರ್ತೀಭವಿಸಿದ ವಿದ್ಯಾಭಿಮಾನ ದೇವತೆಯಂತೆ ಭಾವಿಸಲ್ಪಟ್ಟಿರುವರು. ಎಷ್ಟು ಕೆಲಸಗಳಿದ್ದಾಗ್ಯೂ ಈ ಸಭೆಗೆ ಬರುವುದೂ ಕೂಡ ಮುಖ್ಯವಾದ ಕೆಲಸವೆಂದು ಭಾವಿಸಿ ಶ್ರೀಮನ್ ಯುವರಾಜರವರು ಈ ಸಭೆಯನ್ನು ಅಲಂಕರಿಸುವುದಕ್ಕೆ ಬಂದದ್ದೇ ಇದಕ್ಕೆ ಸಾಕ್ಷಿಯಾಗಿದೆ. ತಮಗೂ, ಈ ಸಭೆಗೆ ಈ ದಿನ ದಯಮಾಡಿಸಿ ಪ್ರೋತ್ಸಾಹ ಮಾಡುವುದಕ್ಕುಪಕ್ರಮಿಸಿರತಕ್ಕ. ಎಲ್ಲಾ ದೊಡ್ಡಮನುಷ್ಯರಿಗೂ ನಾನು ತುಂಬಾ ಕೃತಜ್ಞನಾಗಿರುತ್ತೇನೆ.

ಈರೀತಿಯಲ್ಲಿ ವಿಜ್ಞಾಪಿಸಿ ಮ|| ರಾ|| ಶಾಮರಾಯರವರು ಸರ್. ಹ್ಯೂ ಡ್ಯಾಲಿಯವರನ್ನೂ, ಲೇಡಿ ಡ್ಯಾಲಿಯವರನ್ನೂ ಪ್ರದರ್ಶನಶಾಲೆಗಳಿಗೆ ಕರೆದುಕೊಂಡು ಹೋಗಿ ವಿದ್ಯಾರ್ಥಿಗಳಿಂದ ರಚಿಸಲ್ಪಟ್ಟ ಪ್ರತಿಯೊಂದು ವಸ್ತುವನ್ನೂ ತಪ್ಸೀಲುವಾರಾಗಿ ತೋರಿಸಿದರು. ಡೆಮಾನಸ್ಟ್ರೇಷನ್ ಕ್ಲಾಸುಗಳಲ್ಲಿ ಮಾದರಿಪಾಠ ಪ್ರವಚನಗಳು ತೋರಿಸಲ್ಪಟ್ಟವು. ಭೌತಿಕಶಾಸ್ತ್ರ, ರಸಾಯನಶಾಸ್ತ್ರ, ಗಣಿತ

ಶಾಸ್ತ್ರ, ಕೈಗಾರಿಕೆಗಳು, ನಾನಾವಿಧವಾದ ಶಿಲ್ಪಗಳು, ಚಿತ್ರಗಳು ಮೊದಲಾದವುಗಳಿಂದ ಕಲ್ಪಿಸಲ್ಪಟ್ಟಿದ್ದ ವಸ್ತುಗಳನ್ನೂ ನಾನಾವಿಧವಾದ ವ್ಯಾಯಾಮಗಳ ಕೌಶಲ್ಯವನ್ನೂ ನೋಡಿ ನಮ್ಮ ಬ್ರಿಟಿಷ್ ರೆಸಿಡೆಂಟರವರು ಲೇಡಿ ಡಾಲಿಯವರು, ಶ್ರೀಮತ್ ಯುವರಾಜರವರು ಮತ್ತು ಇತರ ದೊಡ್ಡಮನುಷ್ಯರು, ಹೆಂಗಸರು ತುಂಬಾ ಸಂತೋಷಪಟ್ಟರು. ಸುಮಾರು 2 ಘಂಟೆಗಳವರೆಗೂ ಎಲ್ಲಾ ಪದಾರ್ಥಗಳನ್ನೂ ನೋಡಿ ನಮ್ಮ ಬ್ರಿಟಿಷ್ ರೆಸಿಡೆಂಟರವರು ಮತ್ತು ನಮ್ಮ ಯುವರಾಜರವರು ಸದರಿ ಪ್ರದರ್ಶನಶಾಲೆಯಿಂದ ಅವರ ಬಿಡಾರಗಳಿಗೆ ತೆರಳಿದರು. ಆದಿನ ಸಾಯಂಕಾಲ 5 ಘಂಟೆಗೆ ಸರಿಯಾಗಿ ಸಂಪದಭ್ಯುದಯಕ್ಕೆ ಸಹಾಯಭೂತವಾದ ಉದ್ಯೋಗಗಳ ವಿಷಯದಲ್ಲಿ ಮ|| ರಾ|| ವೆಂಕಟಕೃಷ್ಣಯ್ಯನವರು ಕನ್ನಡದಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಮ|| ರಾ|| ಪುಟ್ಟಣ್ಣಸೆಟ್ಟರವರು ಅಗ್ರಾಸನವನ್ನು ವಹಿಸಿದ್ದರು ಈ ಉಪನ್ಯಾಸಕರ ಉಪನ್ಯಾಸವೂ, ಸಭಾಧ್ಯಕ್ಷರು ಮಾಡಿದ ಉಪನ್ಯಾಸವೂ, ಕೃಷಿ, ಕೈಗಾರಿಕೆ, ವಾಣಿಜ್ಯ, ಮಿತವ್ಯಯಾಸಕ್ತಿ ಮೊದಲಾದವುಗಳಿಗೆ ತುಂಬಾ ಸಹಾಯಕಾರಿಯಾಗಿತ್ತು.

ಮತನೀತಿಬೋಧೆ.

ಮಕ್ಕಳ ಶಿಕ್ಷಣವನ್ನು ಉತ್ತಮವಾದೊಂದು ಕ್ರಮದಲ್ಲಿ ನೇರ್ಪಡಿಸಿ ಪ್ರಖ್ಯಾತಿಗೊಂಡ ಫ್ರೋಬೆಲ್ಲನು ಮಕ್ಕಳಿಗೆ ಕಲಿಸಬೇಕಾದುದರಲ್ಲಿ ಮುಖ್ಯವಾದುದು ಒಳ್ಳೆಯತನ ಎಂದು ಹೇಳುತ್ತಿದ್ದನಲ್ಲದೆ ಆತನ ನಿಜವಾದ ಉದ್ದೇಶವೂ ಅದೇ ಆಗಿದ್ದಿತೆಂಬುದು ಆತನ ಕಾರ್ಯಗಳಿಂದಲೂ ತಿಳಿಯಬಂದಿದೆ. ಆದಿಯಿಂದಲೂ ಮಕ್ಕಳಿಗೆ ಒಳ್ಳೆಯತನವನ್ನು ಪ್ರೀತಿಸುವುದಕ್ಕೆ ಅಭ್ಯಾಸ ಮಾಡಿಸುತ್ತ ಬಂದರೆ ಅವರು ದೇವರನ್ನು ಪ್ರೀತಿಸುವುದನ್ನು ತಾವಾಗಿಯೇ ತಿಳಿದುಕೊಂಡು ಅದರಂತೆಯೇ ನಡೆಯದೆ ಇರರು. ಏಕೆಂದರೆ ಒಳ್ಳೆಯತನಕ್ಕೂ ದೇವರಿಗೂ ಸಮೀಪಸಂಬಂಧವುಂಟು. ಇಷ್ಟೇ

ಇದರಿಂದ ನಮಗೆಷ್ಟು ಸಂತೋಷವಾಗುತ್ತಿದೆ ನೋಡಿ! ಇಂತಹ ಬೆಳಕನ್ನೂ ಶಾಖ ವನ್ನು ಕೊಡುವ ಸೂರ್ಯನನ್ನು ಮಾಡಿದವರು ಯಾರು? ಸೂರ್ಯನನ್ನು ಮಾತ್ರವ ಲ್ಲದೆ ನಮ್ಮ ಅನುಕೂಲಕ್ಕಾಗಿ ದೇವರು ಇನ್ನು ಯಾವಯಾವುದನ್ನು ಮಾಡಿರು ವನು?'' ''ಇಂಪಾಗಿ ಹಾಡುವ ಹಕ್ಕಿಗಳು, ಬಿಸಿಲಿನ ತಾಪವನ್ನು ಹೋಗ ಲಾಡಿಸಿ ನೆರಳನ್ನು ಕೊಡುವುದಕ್ಕೆ, ನೋಡಲು ಅಂದವಾಗಿ ಕಾಣುವುದಕ್ಕೆ ಹೂಗಳನ್ನೂ ಹಣ್ಣುಗಳನ್ನೂ ಕೊಡುವುದಕ್ಕೆ ಮನೆಕಟ್ಟಿಕೊಳ್ಳುವುದಕ್ಕೆ ಮರಗಿ ಡಗಳನ್ನೂ, ಊಟಉಪಚಾರಗಳನ್ನೂ ಉಡುಗೆ ತೊಡುಗೆಗಳನ್ನೂ ಕೊಟ್ಟು ನಮ್ಮನ್ನು ಸಾಕುವುದಕ್ಕೆ ತಾಯನ್ನೂ, ನಮಗೆ ಬೇಕಾದುದನ್ನೆಲ್ಲಾ ಸಂಪಾದಿಸಿಕೊಂಡುಬರು ವುದಕ್ಕೆ ತಂದೆಯನ್ನೂ ದೇವರು ಅನುಗ್ರಹಿಸಿರುವನು.''

''ಇಂತಹ ಇನ್ನೂ ಎಷ್ಟೋ ಉಪಕಾರ ಮಾಡಿರುವ ಅಂತಹ ಭಗವಂತ ನನ್ನು ನಾವು ನಿತ್ಯವೂ ಪ್ರಾರ್ಥನೆ ಮಾಡಬೇಕು.''

ಈ ಮೇಲ್ಕಂಡಂತಹ ಯಾವುದಾದರೊಂದು ವಿಧವಾಗಿ ದೇವರ ವಿಷಯವನ್ನು ಪ್ರಸ್ತಾಪಿಸಿ ಆತನ ಮಹಿಮೆಯನ್ನು ತಕ್ಕಮಟ್ಟಿಗಾದರೂ ಸ್ಪಷ್ಟಪಡಿಸಿ ಬಳಿಕ ಸ್ತೋತ್ರಪಾಠಗಳನ್ನು ಹೇಳಿಸಬೇಕು. ಇಂತಹ ಸಲ್ಲಾಪಗಳಲ್ಲದೆ ಭಕ್ತರ ವಿಷಯ ದಲ್ಲಿ ಸ್ವಾಮಿಯು ತೋರಿಸಿರುವ ಅನುಗ್ರಹವನ್ನು ಬೋಧಿಸುವಂತಹ ಗಜೇಂದ್ರ ಮೋಕ್ಷ, ಕೃಷ್ಣಕುಚೇಲಸ್ನೇಹ ಇಂತಹ ಯಾವುದಾದರೊಂದು ಕಥೆಯನ್ನಾದರೂ ಹೇಳಬಹುದು. ನಮ್ಮಲ್ಲಿ ದೇವರ ವಿಷಯವನ್ನು ಬೋಧಿಸುವಂತಹ ಇನ್ನೂ ಅನೇಕ ಕಥೆಗಳಿರುವುವಾದರೂ ಕೇವಲ ಬಾಲ್ಯವಯಸ್ಸಿನ ಮಕ್ಕಳಿಗೆ ಯಾವ ಅಂಶಗಳನ್ನು ಯಾವ ರೀತಿಯಲ್ಲಿ ಎಷ್ಟು ಹೇಳಬೇಕು ಎಂಬುದನ್ನು ನಿರ್ಧರಿಸುವುದರಲ್ಲಿ ಉಪಾ ಧ್ಯಾಯರು ತಮ್ಮ ವಿವೇಕವನ್ನು ಉಪಯೋಗಿಸಬೇಕು.

ಎಳೆಯ ಮಕ್ಕಳ ತರಗತಿಗಳಲ್ಲಿ ದೇವರ ವಿಷಯವನ್ನು ಮಾತ್ರ ತಿಳಿಯಿಸ ತಕ್ಕ ಮತಬೋಧೆಯನ್ನೇ ಬೇರೆಯಾಗಿಯೂ, ಆಚಾರಬೋಧೆಯನ್ನು ಬೇರೆಯಾಗಿ ಯೂ ಬೋಧಿಸುವುದು ಸಾಧ್ಯವಲ್ಲಗಾಗಿ ಅವೆರಡೂ ಮಿಳಿತವಾಗಿರುವ ಕಥೆಗಳ ಮೂಲಕವೇ ಈ ಬೋಧನೆಯು ನಡೆಯಿಸಲ್ಪಡಬಹುದು.

ಮೇಲಿನ ತರಗತಿಗಳಲ್ಲಿ ನೀತಿಬೋಧೆಗೆ ಚರಿತ್ರೆಗಳಲ್ಲಿ ಬರುವ ಉದಾಹರಣೆಗಳನ್ನೂ ಉಪಯೋಗಿಸಿಕೊಳ್ಳಬೇಕು. ಲೋಕದಲ್ಲಿ ಧರ್ಮಕ್ಕೆ ಇರುವ ಕಷ್ಟವೂ ಅಧರ್ಮಕ್ಕೆ ಇರುವ ಸೌಕರ್ಯಗಳೂ, ಇಷ್ಟಾದರೂ ಕಟ್ಟಕಡೆಗೆ ಧರ್ಮ (ನ್ಯಾಯ)ವೇ ಜಯಿಸುವುದೆಂಬುದೂ ಚೆನ್ನಾಗಿ ಬೋಧಿಸಲ್ಪಡಬೇಕು. ಆದರೆ ಯಾವ ಸಂದರ್ಭಗಳಲ್ಲೇ ಆಗಲಿ ಭಯಂಕರವಾದ ಕ್ರೂರಕೃತ್ಯಗಳು, ಕೊಲೆ, ಯುದ್ಧ ಇಂತಹ ಅಂಶಗಳನ್ನು ಹೇಳದೆಯೇ ಇರುವುದು, ಅಥವಾ ವಿವರಿಸಿ ಹೇಳದಿರುವುದು ಮೇಲು. ಮಕ್ಕಳಿಗೇನೋ ಇಂತಹ ಕಥೆಗಳನ್ನೂ ಸಂಗತಿಗಳನ್ನೂ ಕೇಳುವುದರಲ್ಲಿ ಕೇವಲ ಕುತೂಹಲವಿರುವುದಾದರೂ ಆ ಮಕ್ಕಳ ಕೋಮಲವಾದ ಮನಸ್ಸಿಗೆ ಇಂತಹ ಅಭಿಪ್ರಾಯಗಳನ್ನು ತಿಳಿಸಿದರೆ ಅವು ಚೆನ್ನಾಗಿ ಅಂಟಿಹೋಗುವುದಲ್ಲದೆ ತಕ್ಕ ಸನ್ನಿವೇಶಗಳೊದಗಿದರೆ ಕಾಲಾನುಕಾಲಕ್ಕಾದರೂ ಕ್ರೂರಕೃತ್ಯಗಳನ್ನು ನಡೆಸುವುದಕ್ಕೂ ಹೇಸದ ಅಥವಾ ಅವನ್ನು ಧಿಕ್ಕರಿಸದ ದುರಾತ್ಮರಾದಾರೆಂಬ ಶಂಕೆಗೆ ಅವಕಾಶವಿರುವುದು. ಆದರೆ ಕೆಲವರು 'ಮಕ್ಕಳು, ಇಂತಹ ಕ್ರೂರಕೃತ್ಯಗಳ ಸ್ವರೂಪವನ್ನು ಮುಂದೆ ಯಾವವಿಧದಿಂದಲಾದರೂ ತಿಳಿಯಬೇಕಾಗುವುದಲ್ಲಾ, ಬಾಲ್ಯದಲ್ಲಿ ಮಾತ್ರ ಇದನ್ನು ಮುಚ್ಚುಮರೆ ಮಾಡುವುದರಿಂದ ಪ್ರಯೋಜನವೇನು ?' ಎಂದು ಆಕ್ಷೇಪಿಸುವರು. ಇದಕ್ಕೆ ಸಮಾಧಾನವುಂಟು. ಏನೆಂದರೆ:—ಪ್ರಯತ್ನಪೂರ್ವಕವಾದ ಬೋಧನೆಯಿಂದ ವಿಷಯಗಳು ಮನಸ್ಸಿಗೆ ಹತ್ತುವುದಕ್ಕೂ ಎಲ್ಲೋ ಯಾವುದೋ ಸಂದರ್ಭದಲ್ಲಿ ಒಂದು ಅಂಶವು ಗೋಚರವಾಗುವುದಕ್ಕೂ ಎಷ್ಟೋ ತಾರತಮ್ಯವುಂಟು. ಆದುದರಿಂದ ಅಂತಹ ಅಂಶಗಳನ್ನು ನಾವಾಗಿ ಮಕ್ಕಳಿಗೆ ತಿಳಿಸದೆ ಇರಬಹುದು. ಈ ಅಂಶಗಳು ತಾವಾಗಿ ತಿಳಿಯುವಕಾಲ ಬಂದಾಗ್ಗೆ ಇಂತಹವನ್ನು ನಿಷೇಧಿಸಬಲ್ಲ ಇತರ ಸುಗುಣಗಳೂ ಅವರಲ್ಲಿ ಬೆಳೆದೇ ಇರುವುವಾಗಿ ಯಾವ ಉಪಹತಿಯೂ ಇಲ್ಲ. ಇಷ್ಟೇ ಅಲ್ಲದೆ ಸಕಾಲದಲ್ಲಿ ತಾನಾಗಿ ಅರಳಬಲ್ಲ ಮೊಗ್ಗನ್ನು ತುಂಬಿ ಎಳೆಯದಾಗಿರುವಾಗಲೇ ಕೊಯ್ದು ಹೂವಾಗಬೇಕೆಂದು ಬಲಾತ್ಕಾರದಿಂದ ಅರಳಿಸುವುದು ಅಯುಕ್ತವಲ್ಲವೆ ?

ಪಾಠಶಾಲೆಯ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಸತ್ಯ, ಪ್ರಾಮಾಣಿಕತೆ, ಔದಾರ್ಯ, ದಯೆ, ನಿಗರ್ವಿತ್ವ, ದೈವಭಕ್ತಿ, ಪಾಪಭೀತಿ, ವಿನಯ, ಕಾಲಕ್ಕೆ ಸರಿ

ಯಾಗಿ ಕೆಲಸಮಾಡುವುದು, ಕಷ್ಟಪಟ್ಟು ಕೆಲಸಮಾಡುವುದು, ದೇಶಾಭಿಮಾನ ಇಂತಹ ಮುಖ್ಯವಿಷಯುಗಳನ್ನಾದರೂ ಬೋಧಿಸಬೇಕು. ಆದರೆ ಇದು ಒಳ್ಳೇದು, ಆದ್ದರಿಂದ ಆಚರಿಸಬೇಕು ಎಂದು ಸಾಕ್ಷಾತ್ತಾಗಿ ಬೋಧಿಸುವುದಕ್ಕಿಂತಲೂ ಬಾಲ ಕರಿಗೆ ನಿತ್ಯಗಟ್ಲೆ ಬಳಕೆಯಾದ ಹಲವು ಸಂಗತಿಗಳೊಡನೆ ಗರ್ಭೀಕರಿಸಿ ಬೋಧಿಸು ವುದು ಶ್ಲಾಘ್ಯವಾದ ಮಾರ್ಗ.

ನೀತಿಯನ್ನು ಸುಮ್ಮನೆ ಬೋಧಿಸಿಬಿಟ್ಟಮಾತ್ರಕ್ಕೇ ಉಪಾಧ್ಯಾಯರ ಜವಾಬ್ದಾರಿಯು ಮುಗಿದಂತಾಗದು. ಬಾಲಕರು ಅದರಂತೆ ಆಚರಿಸುತ್ತಾರೆಯೋ ಎಂಬುದನ್ನೂ ಸದಾ ಪರೀಕ್ಷಿಸುತ್ತ ಆ ವಿಷಯದಲ್ಲಿ ಒಂದು ಕಣ್ಣಿಟ್ಟೇ ಇರಬೇಕು. ಇವೆರಡಕ್ಕಿಂತಲೂ ಮುಖ್ಯವಾಗಿ ತಾವು ಹೇಳುವ ಸುಗುಣಗಳಿಗೆಲ್ಲ ತಾವು ಮಾದ ರಿಯಾಗಿರಬೇಕು. ಹಾಗಿಲ್ಲದಿದ್ದರೆ ತಾವೇ ಅಪಹಾಸ್ಯಕ್ಕೆ ಗುರಿಯಾಗುವರು. ಕಡೆಗೆ ಒಂದೊಂದು ವಿಷಯವನ್ನು ಒಂದೊಂದುವಾರವೆಲ್ಲಾ ಬೋಧಿಸಿದರೂ ಸರಿಯೇ. ಅಂತು ಅದು ಅವರಿಗೆ ಚೆನ್ನಾಗಿ ತಿಳಿದು ಮುಂದಕ್ಕೆ ಅವರು ಸದಾ ಅದನ್ನು ಆಚರಿಸುವಂತೆ ಆಗಬೇಕು.

J. K. Sastry.

ಮಾದರಿಯ ವಾಕ್ಯರಚನೆ

ಆನೆ.

ಪ್ರಪಂಚದಲ್ಲಿ ಈಗಿರುವ ಚತುಷ್ಪಾದ ಜಂತುಗಳಲ್ಲೆಲ್ಲಾ ಆನೆಯೇ ತುಂಬ ದೊಡ್ಡದಾಗಿಯೂ ಬಲಶಾಲಿಯಾಗಿಯೂ ಇರುವುದು. ಆನೆಗಳು ಆಫ್ರಿಕಾಖಂಡ ದಲ್ಲೂ, ಏಷ್ಯಕ್ಕೆ ಸೇರಿದ ಇಂಡಿಯಾ ಬರ್ಮಾದೇಶಗಳಲ್ಲೂ ಸಿಂಹಳ ಮೊದಲಾದ ಕೆಲವು ದ್ವೀಪಗಳಲ್ಲೂ ಇರುವುವು. ಆನೆಗಳು ಗಾತ್ರದಲ್ಲಿ ತುಂಬ ಸ್ಥೂಲವಾಗಿರು ವುದಲ್ಲದೆ ಎತ್ತರದಲ್ಲಿ ಸುಮಾರು ಎಂಟರಿಂದ ಹತ್ತು ಅಡಿಗಳವರೆಗೂ ಇರುವು ದುಂಟು. ಇದರ ಕೊರಳು ತುಂಬ ನೋಟಕಾಗಿರುವುದು. ಆದರೆ ಈ ಕೊರತೆ

ಯನ್ನು ಪರಿಹರಿಸಲಿಕ್ಕಾಗಿ ದೇವರು ಅನನ್ಯಸಾಧಾರಣವಾದ ಇನ್ನೊಂದು ಅವಯವವನ್ನು ಕೊಟ್ಟಿರುವನು. ಅದೇ ಸೊಂಡಿಲು. ಅಂದರೆ ಆನೆಯು ಕತ್ತು ಬಲು ಮೋಟಕಾಗಿರುವುದರಿಂದ ನೆಲಕ್ಕೆ ಬಗ್ಗಿ ಆಹಾರವನ್ನು ತೆಗೆದುಕೊಳ್ಳುವುದಕ್ಕೆ ಕೂಡ ಯತ್ನವಿಲ್ಲದಂತಾಗುತಿದ್ದುದನ್ನು ತಪ್ಪಿಸಲಿಕ್ಕಾಗಿ ಕತ್ತನ್ನು ಬಗ್ಗಿಸದೆಯೇ ನೆಲದ ಮೇಲಿನ ವಸ್ತುಗಳನ್ನು ಎತ್ತಿಕೊಳ್ಳುವುದಕ್ಕೂ ತನಗಿಂತ ಎತ್ತರವಾದ ಮರಗಳಿಂದಲೂ ಪ್ರಯೋಜನವನ್ನು ಪಡೆಯುವುದಕ್ಕೂ ದೇವರು ಆನೆಗೆ ಸೊಂಡಿಲೆಂಬ ಅವಯವವನ್ನು ಕೊಟ್ಟಿರುವನು. ಈ ಸೊಂಡಿಲು ಉದ್ದವಾಗಿಯೂ ಹೇಗೆಬೇಕಾದರೂ ತಿರುಗಿಸಬಲ್ಲ ರಚನೆಯುಳ್ಳುದಾಗಿಯೂ ನೆಲದಮೇಲೆ ಬಿದ್ದಿರುವ ಎಂತಹ ಸೂಕ್ಷ್ಮವಸ್ತುಗಳನ್ನಾದರೂ ಎತ್ತಿಕೊಳ್ಳಬಲ್ಲಷ್ಟು ಸೂಕ್ಷ್ಮವಾಗಿಯೂ ಮತ್ತು ಆನೆಗೆ ಮುಖ್ಯವಾದ ಸ್ಪರ್ಶೇಂದ್ರಿಯವಾಗಿಯೂ ಇರುವುದು. ಆನೆಯ ಇಂದ್ರಿಯಗಳು ಬಲುಸೂಕ್ಷ್ಮ. ಆದರೆ ಕಣ್ಣುಗಳು ದೇಹದ ಪ್ರಮಾಣಕ್ಕೆ ತಕ್ಕಷ್ಟಿಲ್ಲದೆ ಬಲುಸಣ್ಣವಾಗಿರುವುವು. ಗಂಡಾನೆಗಳಿಗೆ ಮಾತ್ರ ದಂತಗಳುಂಟು. ಅವು ಬಲವಾಗಿಯೂ ನುಣುಪಾಗಿಯೂ ಹೊಳಪಾಗಿಯೂ ಬಿಳುಪಾಗಿಯೂ ಇರುವುವು.

ಆನೆಗಳು ಕಾಡುಗಳಲ್ಲಿ ಹಿಂಡುಹಿಂಡಾಗಿ ಸಂಚರಿಸುತ್ತವೆ. ಪ್ರತಿಯೊಂದು ಹಿಂಡಿಗೂ ಒಂದೊಂದು ಯಜಮಾನನುಂಟು. ಸಾಮಾನ್ಯವಾಗಿ ತುಂಬ ಬಲಶಾಲಿಯಾದ ಗಂಡಾನೆಯೇ ಈ ಅಧಿಕಾರದಿಂದ ಆಳುವುದು. ಇದಕ್ಕೆ ಸಲಗನೆಂದು ಹೆಸರು. ಆ ಮಂದೆಯ ಇತರ ಆನೆಗಳೆಲ್ಲ ಇದರ ಆಜ್ಞೆಗೆ ಕಟ್ಟುಬಿದ್ದು ನಡೆಯುತ್ತದೆ.

ಆನೆಗಳಿಗೆ ನೀರ್ದೊಣೆಗಳನ್ನು ಕಂಡರೆ ಬಲುಸಂತೋಷ. ಆದುದರಿಂದ ಅವು ಬಹಳಹೊತ್ತು ನೀರಿನಲ್ಲಿ ಆಟವಾಡುತ್ತಿರುವುವು. ಅವು ಚೆನ್ನಾಗಿ ಈಜಬಲ್ಲವು. ಹಾಗೆ ಈಜುವಾಗ ತಮ್ಮ ಸೊಂಡಲಿನ ತುದಿಯನ್ನು ಮಾತ್ರ ಮೇಲಕ್ಕೆತ್ತಿಕೊಂಡು ಒಟ್ಟು ಮೈಯನ್ನೆಲ್ಲಾ ನೀರಿನಲ್ಲಿ ಮುಳುಗಿಸಿಕೊಳ್ಳುವುವು. ಅವು ಸೊಂಡಿಲಿನಲ್ಲಿ ನೀರು ತುಂಬಿಕೊಂಡು ಬೇಕಾದಷ್ಟನ್ನು ಕುಡಿದು ಮಿಕ್ಕುದನ್ನು ಮೈಮೇಲೆ ಸುರಿದುಕೊಂಡು ತಂಪುಮಾಡಿಕೊಳ್ಳುವುವು.

ಆನೆಗಳು ಮರಗಿಡಗಳ ಎಲೆಗಳು, ಕೆಲವು ಬೇರುಗಳು, ಹಣ್ಣು, ಹುಲ್ಲು ಮುಂತಾದುವುಗಳನ್ನು ತಿಂದು ಜೀವಿಸುತ್ತವೆ. ಅವು ತಮಗೆ ಬೇಕಾದಷ್ಟು ಆಹಾರವನ್ನು ಮಾತ್ರ ಪಡೆದು ಸುಮ್ಮನಿರುವುದಿಲ್ಲ. ಮಂದೆಮಂದೆಯಾಗಿ ಹೊರಟು ತಮ್ಮ ಆಹಾರವಸ್ತುಗಳನ್ನೆಲ್ಲಾ ತುಳಿದು ಧ್ವಂಸಮಾಡಿಬಿಡುತ್ತವೆ. ಆನೆಗಳು ತಮ್ಮಲ್ಲಿ ದುರ್ಬಲವಾದವುಗಳನ್ನೂ ಮರಿಗಳನ್ನೂ ಹೆಣ್ಣಾನೆಗಳನ್ನೂ ನಡುವೆ ಬಿಟ್ಟುಕೊಂಡು ಸುತ್ತಲೂ ಬಲವಾದವುಗಳು ಅವಕ್ಕೆ ಕಾವಲಿರುತ್ತ ಸಂಚರಿಸುವುವು.

ಸಂಗೀತವನ್ನು ಕೇಳುವರಲ್ಲೂ ಲಯಕ್ಕೆಸರಿಯಾಗಿ ಹೆಜ್ಜೆ ಹಾಕುತ್ತ ನಡೆಯುವುದರಲ್ಲೂ ಆನೆಗಳಿಗೆ ಬಲು ಇಷ್ಟ. ಅವು ಪಳಗಿದಮೇಲೆ ತುಂಬ ಸಾಧುಗಳಾಗಿ ತಮ್ಮ ಮಾವಟಿಗರು ಹೇಳಿದಂತೆ ನಡೆಯುವುದು. ಇಷ್ಟೇ ಅಲ್ಲದೆ ಅನೇಕ ಸಂದರ್ಭಗಳಲ್ಲಿ ತಮ್ಮ ಬುದ್ಧಿ ಕುಶಲತೆಯನ್ನು ವಿಶೇಷವಾಗಿ ತೋರಿಸುವುವು. ಇತರ ಪ್ರಾಣಿಗಳಂತೆ ಆನೆಗಳು ಹೆಚ್ಚು ಸಂತಾನಗಳನ್ನು ಪಡೆಯಲಾರವು. ಮತ್ತು ಪಳಗಿದಮೇಲಂತು ಪ್ರಾಯಶಃ ಅವು ಮರಿಹಾಕುವುದಿಲ್ಲ. ಆನೆಗಳು ಒಂದುಸಲಕ್ಕೆ ಒಂದೊಂದು ಮರಿಯನ್ನೇ ಹಾಕುವುವು. ಹೆಣ್ಣಾನೆಗೆ ಎರಡೇ ಮೊಲೆಗಳು. ಮರಿಗಳು ತಮ್ಮ ಬಾಯಿಂದ ಸ್ತನ್ಯಪಾನ ಮಾಡುವುವೇ ವಿನಾ ಸೊಂಡಿಲಿನಿಂದಲ್ಲ.

ಅತ್ಯಂತ ಪೂರ್ವಕಾಲದಲ್ಲಿ. ನಮ್ಮವರು ಆನೆಗಳಿಂದ ಯುದ್ಧಮಾಡಿಸುತ್ತಿದ್ದುದಲ್ಲದೆ ತಾವೂ ಅವುಗಳ ಮೇಲೆ ಕುಳಿತು ಯುದ್ಧಮಾಡುತ್ತಿದ್ದರು. ಈಗಾದರೋ ತುಂಬ ಭಾರವಾದ ವಸ್ತುಗಳನ್ನು ಹೊರುವುದಕ್ಕೆ ಅಥವಾ ಎಳೆಯುವುದಕ್ಕೆ ಪಿರಂಗಿಯ ಬಂಡಿಗಳನ್ನು ಎಳೆಯುವುದು ಮೊದಲಾದುವುಗಳಿಗೆ ಅವುಗಳನ್ನು ಉಪಯೋಗಿಸುತ್ತಾರೆ. ನಮ್ಮ ಇಂಡಿಯಾದೇಶದಲ್ಲಿ ಆನೆಗಳನ್ನು ಮರ್ಯಾದೆಗೋಸ್ಕರ ಅರಮನೆಗಳಲ್ಲೂ ಮಠಗಳಲ್ಲೂ ಇಟ್ಟುಕೊಂಡಿರುವರಲ್ಲದೆ ಶ್ರೀಮಂತರು ಉತ್ಸವ ಕಾಲಗಳಲ್ಲಿ ಮೆರವಣಿಗೆಗೆ ಉಪಯೋಗಿಸುವುದೂ ಉಂಟು. ಆನೆಯ ದಂತವು ಬಹಳ ಬೆಲೆ ಬಾಳುತ್ತದೆ. ಅದರಿಂದ ಬಾಚಣಿಗೆ ಭರಣಿ ಮೊದಲಾದ ನಾಜೋಕಾದ ವಸ್ತುಗಳನ್ನು ಮಾಡುವುದು ಮಾತ್ರವಲ್ಲದೆ ಮರದ ಸಾಮಾನುಗಳ ಚಿತ್ರವಿಚಿತ್ರವಾದ ಕೆತ್ತನೆಯ ಕೆಲಸದಲ್ಲಿ ಇದನ್ನು ಉಪಯೋಗಿಸುವುದೂ ಉಂಟು.

ಆನೆಯು ತನಗಾದ ಶ್ಲಾಘನೆಯನ್ನು ಅಥವಾ ದೂಷಣೆಯನ್ನು ತಿಳಿದುಕೊಳ್ಳಬಲ್ಲದು. ಅದು ತನ್ನ ಯಜಮಾನನ ಕೆಲಸವನ್ನು ನೆರವೇರಿಸಿದನಂತರ ಅವನಿಂದ ಏನಾದರೊಂದು ಬಹುಮಾನವನ್ನು ನಿರೀಕ್ಷಿಸುತ್ತದೆ. ಆನೆಗಳು ತಮಗೆ ಇತರರು ಮಾಡಿದ ಉಪಕಾರಗಳನ್ನಾಗಲಿ ಕೆಡಕುಗಳನ್ನಾಗಲಿ ಎಂದಿಗೂ ಮರೆಯುವುದಿಲ್ಲವಲ್ಲದೆ ಸಮಯಬಿದ್ದಾಗ ಮುಯ್ಯಿಗೆ ಮುಯ್ಯನ್ನು ತೀರಿಸದೆ ಬಿಡುವುದಿಲ್ಲ. ಆನೆಗಳಿಗೆ ಎಳೆಯಮಕ್ಕಳನ್ನೂ ಹುಡುಗಿಯರನ್ನೂ ಕಂಡರೆ ಕೇವಲ ಪ್ರೀತಿಯಾದ್ದರಿಂದ ಅಂತಹವರ ಸಂಗಡ ಸರಸವಾಡುವುದೂ ಉಂಟು.

ಆನೆಗಳ ಪ್ರಕೃತಿಯು ಎಂತಹುದು ಎಂಬುದು ಈ ಮುಂದಿನ ಒಂದೆರಡು ಉದಾಹರಣೆಗಳಿಂದ ವ್ಯಕ್ತವಾಗುವುದು. ಆನೆಗಳನ್ನು ಸಾಕಿದ್ದ ಒಬ್ಬಾನೊಬ್ಬ ಇಂಗ್ಲಿಷ್ ಸರದಾರನು ಆಗತಾನೇ ಹೊಸದಾಗಿ ಮಾಡಿದ್ದ ಒಂದು ಹಡಗನ್ನು ನೀರಿನೊಳಕ್ಕೆ ಎಳೆದುಕೊಂಡು ಹೋಗುವಂತೆ ತನ್ನ ಆನೆಗಳಲ್ಲೊಂದಕ್ಕೆ ಅಪ್ಪಣೆ ಮಾಡಿದನು. ಅದು ತನ್ನ ಸರ್ವಶಕ್ತಿಯನ್ನು ವಿನಿಯೋಗಿಸಿದರೂ ಆ ಕೆಲಸವು ಅಸಾಧ್ಯವಾಯಿತು. ಇದನ್ನು ಕಂಡು ಆತನು ಆ ಆನೆಯು ಏನೂ ಕೆಲಸಕ್ಕೆ ಬಾರದ್ದೆಂದು ತುಂಬ ಹೀಯಾಳಿಸಿ ಆ ಕೆಲಸಕ್ಕೆ ಮತ್ತೊಂದಾನೆಯನ್ನು ತರಹೇಳಿದನು. ಆದರೆ ಇದನ್ನೆಲ್ಲಾ ಕೇಳಿ ಆ ಆನೆಯು ತನಗಾದ ಅಪಮಾನವನ್ನು ಸಹಿಸಲಾರದೆ ಪುನಃ ಹೋಗಿ ಆ ಹಡಗನ್ನು ಅತ್ಯಂತ ಬಲಾತ್ಕಾರವಾಗಿ ಎಳೆಯಲು ಯತ್ನಿಸುತ್ತ ಅದೇ ಆಯಾಸದಿಂದ ಥಟ್ಟನೆ ಪ್ರಾಣಬಿಟ್ಟಿತು.

ಒಬ್ಬಾನೊಬ್ಬ ಮಾವಟಿಗನು ತನ್ನ ಆನೆಗೆ ಯಾವುದೋ ಒಂದು ಕೆಲಸವನ್ನು ತೋರಿಸಿ ಅದನ್ನು ಮಾಡಿದರೆ ಯಥೇಚ್ಛವಾಗಿ ಪಾನಕವನ್ನು ಕೊಡುವುದಾಗಿ ಆಸೆ ತೋರಿಸಿದನು. ಆದರೆ ತನ್ನ ಕೆಲಸವಾದಮೇಲೆ ತನ್ನ ಮಾತಿನಂತೆ ನಡೆಯದೆ ಹೋದನು. ಈ ಕೋಪದಿಂದ ಆ ಆನೆಯು ಅವನನ್ನು ಕೊಂದೇಬಿಟ್ಟಿತು. ಬಳಿಕ ಆ ಮಾವುತನ ಹೆಂಡತಿಯು ಅನಾಥಳಾಗಿ ತನ್ನ ಇಬ್ಬರು ಮಕ್ಕಳನ್ನೂ ತಂದು ಆ ಆನೆಯ ಕಾಲಿನ ಬಳಿಯಲ್ಲಿ ಕೆಡವಿ ಬೇಡಿಕೊಂಡಳು. ಆಗ ಅದು ತಾನು ದುಡುಕಿ ನಡೆಸಿದ ಕೆಲಸಕ್ಕಾಗಿ ತುಂಬನೊಂದುಕೊಂಡುದಲ್ಲದೆ ಅವುಗಳಲ್ಲಿ ಹಿರಿಯ

ಮಗುವನ್ನೆತ್ತಿ ತನ್ನ ಬೆನ್ನಮೇಲೆ ಕುಳ್ಳಿರಿಸಿಕೊಂಡಿತು. ಅಲ್ಲಿಂದ ಮುಂದಕ್ಕೆ ಅವನೇ ಅದರ ಮಾವಟಿಗನಾದನು. ಅವನನ್ನು ಹೊರತು ಮತ್ತೆ ಯಾರನ್ನೂ ಅದು ಬಿಡುತ್ತಿರಲಿಲ್ಲ.

ಒಬ್ಬಾನೊಬ್ಬ ದೊಡ್ಡ ಮನುಷ್ಯನು ಒಂದು ಮೃಗಶಾಲೆಗೆ ಹೋಗಿ ಅಲ್ಲಿನ ಒಂದು ಆನೆಯ ಮುಂದೆ ನಿಂತು ಅದಕ್ಕೆ ಸ್ವಲ್ಪ ರೊಟ್ಟಿಯ ಚೂರನ್ನು ಕೊಡುವುದಕ್ಕೆ ಹೋದನು. ಅದು ಕೇವಲ ಆಶೆಯಿಂದ ಸೊಂಡಿಲನ್ನು ನೀಡಿತು. ಆಗ ಕೈಯನ್ನು ಹಿಂದಕ್ಕೆ ಸೆಳೆದುಕೊಂಡನು. ಹೀಗೆಯೇ ತೋರಿಸುವುದು ಕೊಡದಿರುವುದು ಈ ವಿಧ ವಾಗಿ ಬೇಸರಪಡಿಸಿದುದರಿಂದ ಆ ಆನೆಯು ಕೋಪಗೊಂಡು ಆ ಮನುಷ್ಯನನ್ನು ಮೇಲಕ್ಕೆತ್ತಿ ಬಲವಾಗಿ ನೆಲಕ್ಕೆ ಬಡಿದು ಕೊಂದುಬಿಟ್ಟಿತು.

ಕಾಡಾನೆಗಳನ್ನು ಹಿಡಿಯುವ ಸ್ಥಳಕ್ಕೆ ಕೆಡ್ಡಾ ಎಂದು ಹೆಸರು. ನಮ್ಮ ಮೈಸೂರು ದೇಶದ ಕೆಡ್ಡಾ ಜಗತ್ಪ್ರಸಿದ್ಧವಾಗಿದೆ.

J. K. Sastry.

ಡ್ರಿಲ್ ಪಾಠ.

ವಿದ್ಯಾಭ್ಯಾಸ ಮಾಡಿಸುವುದರಲ್ಲಿ ಮಕ್ಕಳ ಎಲ್ಲಾ ವಿಧವಾದ ಶಕ್ತಿಗಳನ್ನು ಅಂದರೆ ದೈಹಿಕ ಮತ್ತು ಮಾನಸಿಕ ಶಕ್ತಿಗಳನ್ನು ಅಭಿವೃದ್ಧಿಪಡಿಸಬೇಕಾಗಿರುವುದ ರಿಂದ ಉಪಾಧ್ಯಾಯನು ಮಕ್ಕಳ ಬುದ್ಧಿಶಕ್ತಿಗಳನ್ನು ಬೆಳಸುವುದಕ್ಕೆ ಮಾತ್ರ ಗಮನ ಕೊಟ್ಟರೆ ಸಾಲದು; ಅವರ ದೈಹಿಕ ಶಕ್ತಿಗಳನ್ನು ಬೆಳಸುವುದಕ್ಕೂ ತಕ್ಕಮಟ್ಟಿಗೆ ಪ್ರಯತ್ನ ಮಾಡಬೇಕು. ಡ್ರಿಲ್‌ಪಾಠವನ್ನು ಇತರ ಪಾಠಗಳಹಾಗೆಯೇ ಒಂದು ಪಾಠವನ್ನಾಗಿ ಎಣಿಸುವುದರಿಂದ ಈ ಉದ್ದೇಶವು ನೆರವೇರುವುದು. ಆದರೆ ಈ ಪಾಠದ ಪೂರ್ಣಫಲವನ್ನು ಪಡೆಯಬೇಕಾದರೆ ಡ್ರಿಲ್ ಪಾಠವನ್ನು ನಡೆಸುವುದರ

ಉದ್ದೇಶವು ಇಂಥದೆಂದು ಉಪಾಧ್ಯಾಯನು ಚೆನ್ನಾಗಿ ತಿಳಿದಿರಬೇಕು. ಈ ವಿಷಯದಲ್ಲಿ ಸಾಮಾನ್ಯವಾಗಿ ಎರಡು ತಪ್ಪು ಅಭಿಪ್ರಾಯಗಳಿರುವುವು. ಅವು ಯಾವುವೆಂದರೆ:—

1. ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.
2. ಮಕ್ಕಳ ಬೇಜಾರನ್ನು ಕಳೆಯುವುದಕ್ಕೆ ಸಾಧನ.

ಈ ಎರಡು ಅಭಿಪ್ರಾಯಗಳೂ ತಪ್ಪಾದವುಗಳಾಗಿವೆ.

1. ಪಾಠಶಾಲೆಗೆ ಹೋಗುವವರು ಡ್ರಿಲ್‌ಹೊರತು ಮತ್ತಾವ ಅಂಗಸಾಧನವನ್ನೂ ಮಾಡದಪಕ್ಷದಲ್ಲಿ ಅವರ ಬೆಳೆವಳಿಗೆಗೆ ಕುಂದಕ ಬಾರದಿರುವುದಕ್ಕೋಸ್ಕರ ಈ ಸಾಧನವನ್ನು ಅವರಿಗೆ ಮಾಡಿಸುವದು ಆವಶ್ಯಕವಾಗಿದೆ. ಆದರೆ ವಸ್ತುತಃ ಬಾಲಕರು ಪಾಠಶಾಲೆಯ ಹೊರಗೆ ಕೆಲಸದಲ್ಲಾಗಲೀ ಅಥವಾ ಆಟದಲ್ಲಾಗಲೀ ದೈಹಿಕಸಾಧನೆಯಲ್ಲಿ ವಿಶೇಷವಾಗಿ ಕಾಲವನ್ನು ಕಳೆಯುತ್ತಾರೆ. ಅದಲ್ಲದೆ ಪ್ರತಿದಿವಸವೋ ಅಥವಾ ದಿನತಪ್ಪಿದಿನವೋ ಕಾಲುಗಂಟೆಹೊತ್ತು ಡ್ರಿಲ್ ಮಾಡೋಣದರಿಂದ ಅವರ ದೈಹಿಕಶಕ್ತಿಯಲ್ಲಿ ವಿಶೇಷ ಬದಲಾವಣೆಯಾಗಲಾರದು. ಪಾಠಶಾಲೆಗೆ ಹೋಗದೆಯೂ ಅಥವಾ ಹೋದರೂ ಡ್ರಿಲ್ ಮಾಡದೆಯೂ ಇರುವವರಲ್ಲನೇಕರು ಅದೇ ವಯಸ್ಸಿನ ಪಾಠಶಾಲೆಗೆ ಹೋಗುವ ಹುಡುಗರಿಗಿಂತ ಹೆಚ್ಚು ದೇಹಪುಷ್ಟಿಯುಳ್ಳವರಾಗಿಯೂ ಮತ್ತು ಶಕ್ತಿವಂತರಾಗಿಯೂ ಇರುವರು.

2. ಮಕ್ಕಳು ಬಹುಕಾಲ ಪಾಠಶಾಲೆಯಲ್ಲಿ ಕುಳಿತುಕೊಂಡದ್ದೇ ಆದರೆ ಅವರ ಅಂಗಗಳೆಲ್ಲವೂ ಚಲನೆಯಿಲ್ಲದೆ ಸೆಳೆತುಕೊಂಡು ಹೋಗುವವು. ಡ್ರಿಲ್‌ಮಾಡುವುದರಿಂದ ಅವರ ಅಂಗಗಳನ್ನು ಚಾಚುವುದಕ್ಕೆ ಸಹಾಯವೇನೋ ಆಗುವುದು. ಆದರೆ ಹುಡುಗರನ್ನು ಸ್ವೇಚ್ಛೆಯಾಗಿ ಆಟವಾಡುವುದಕ್ಕೆ ಬಿಡುವುದರಿಂದ ಈ ಉದ್ದೇಶವು ಮತ್ತಷ್ಟು ಚೆನ್ನಾಗಿ ನೆರವೇರುವುದು. ಆದ್ದರಿಂದ ಇದಕ್ಕಾಗಿ ನಾವು ಬಹಳ ತೊಡಕಾದ ಸಾಧನೆಗಳನ್ನು ಮಾಡಿಸುವ ಅವಶ್ಯಕತೆಯು ಕಡಮೆಯಾಗಿರುವುದು. ಅದಲ್ಲದೆ ಡ್ರಿಲ್ ಮಾಡುವುದರಲ್ಲಿ ಹೆಚ್ಚಾಗಿ ಚಿತ್ತನಿಗ್ರಹ ಮಾಡಬೇಕಾಗಿರುವುದರಿಂದ ಮನಸ್ಸಿಗೆ ಹೆಚ್ಚಾಗಿ ಆಯಾಸವಾಗುವುದೇ ಹೊರತು ಬೇಜಾರು ಕಳೆಯುವುದಿಲ್ಲ.

ಆದ್ದರಿಂದ ಪಾಠಶಾಲೆಯಲ್ಲಿ ಡ್ರಿಲ್ ನಡೆಸುವುದರಲ್ಲಿ ಬೇರೆ ಉದ್ದೇಶವಿರ ಬೇಕು. ಮಾಂಸಖಂಡಗಳನ್ನು ಬೆಳೆಸುವುದು ಇದರ ಮುಖ್ಯ ಆಶಯವಲ್ಲವೆಂಬುವು ದನ್ನು ನಾವು ತಿಳಿದೆವು. ಅಲ್ಲದೆ ಆಟಗಳಹಾಗೆ ಇದರಿಂದ ಮನಸ್ಸಿನ ಬೇಜಾರು ಕಳೆ ಯಲಸಾಧ್ಯವೆಂಬುದು ಗೊತ್ತಾಗಿದೆ. ಆದುದರಿಂದ ಇದರ ಉದ್ದೇಶವೇನಿರಬ ಹುದು ? ನೀವು ಸಾವಧಾನವಾಗಿ ಪರ್ಯಾಲೋಚಿಸಿದಲ್ಲಿ ಅಂಗಗಳನ್ನು ಉಪಯೋಗಿ ಸುವುದರಲ್ಲಿ ಕುಶಲತೆಯನ್ನುಂಟುಮಾಡುವುದು ಮತ್ತು ಅವುಗಳನ್ನು ನಮ್ಮ ಸ್ವಾಧೀ ನದಲ್ಲಿಟ್ಟುಕೊಳ್ಳುವ ಬಗೆಯನ್ನು ಕಲಿಸುವುದು ಇವೇ ಇದರ ಮುಖ್ಯ ಉದ್ದೇಶಗ ಳೆಂದುಗೊತ್ತಾಗುವುದು.

ಇತರ ಕೆಲಸಗಳಲ್ಲಿ ಕುಶಲತೆಯು ಸ್ವಾಭಾವಿಕವಾಗಿ ಯಾವರೀತಿಯಲ್ಲಿ ಬರುವುದಿಲ್ಲವೋ ಅದೇರೀತಿಯಲ್ಲಿ ಈ ವಿಷಯಗಳಲ್ಲಿಯೂ ಪ್ರಯತ್ನವಿಲ್ಲದೆ ಬರುವು ದಿಲ್ಲ. ಉದಾಹರಣೆಯಾಗಿ—ಮಕ್ಕಳು ಚೆನ್ನಾಗಿ ನಡೆಯಬೇಕಾದರೆ ಬಹುದೀರ್ಘ ಕಾಲ ತೆಗೆದುಕೊಳ್ಳುವರು. ಮತ್ತು ಬಹಳ ಶ್ರಮ ಪಡಬೇಕಾಗಿರುವುದು. ಚೆನ್ನಾಗಿ ಡ್ರಿಲ್ ಮಾಡಿರುವ ಒಂದು ತರಗತಿಯ ಬಾಲಕರು ಅಥವಾ ಒಬ್ಬ ಸಿಪಾಯಿಯು ನಡೆ ಯುವುದಕ್ಕೂ ಇತರರು ನಡೆಯುವುದಕ್ಕೂ ಎಷ್ಟು ವ್ಯತ್ಯಾಸವಿದೆ ! ಇತರ ತರಹೆಯ ಚಲನೆಗಳೂ ಹೀಗೆಯೇ. ಸರಿಯಾದ ರೀತಿಯಲ್ಲಿ ಪದೇಪದೇ ಚಲಿಸುವುದರಿಂದ ನಾವು ಅವುಗಳನ್ನು ಶೀಘ್ರವಾಗಿಯೂ ಅಂದವಾಗಿಯೂ ಮತ್ತು ಶ್ರಮವಿಲ್ಲದೆಯೂ ಮಾಡು ವುದಕ್ಕೆ ಸಾಧ್ಯವಾಗುವುದು. ಅಥವಾ ಬೇರೊಂದು ಉದಾಹರಣೆಯನ್ನು ಕೊಡಬ ಹುದು. ಬರೆವಣಿಗೆಯನ್ನು ಕಲಿಯುತ್ತಿರುವ ಒಬ್ಬ ಸಣ್ಣ ಹುಡುಗನು ಹಲಗೆ ಯನ್ನು ಬಿಗಿಯಾಗಿ ಹಿಡಿಯುವನು, ತನ್ನ ಶರೀರವನ್ನು ವಿಕಾರಮಾಡುವನು, ಲೇಖ ಣಿಕೆಯನ್ನು ಭದ್ರವಾಗಿ ಹಿಡಿಯುವನು ಮತ್ತು ಬರೆಯುತ್ತಿರುವಕಾಲದಲ್ಲಿ ನಾಲ ಗೆಯನ್ನು ಚಾಚುವನು. ಎಷ್ಟು ವ್ಯರ್ಥವಾದ ಶ್ರಮ ! ಅವನಿಗೆ ಚೆನ್ನಾಗಿ ಬರೆಯು ವುದಕ್ಕೆ ಬಂದಾಗ ಈ ಮಾಂಸಖಂಡಗಳೆಲ್ಲಾ ಬಿಡುಗಡೆಯಾಗುವವು. ಅಥವಾ ವಯ ಸ್ಕನಾದ ಪಾಠಶಾಲೆಗೆ ಬಂದಿರುವ ಒಬ್ಬ ಹುಡುಗನಿಗೆ ಆರಂಗುಲಕ್ಕೆ ಸರಿಯಾಗಿ ಹಿಂದೂ ಮುಂದೂ ಹೆಜ್ಜೆಯನ್ನಿಡುವಹಾಗೆ ಹೇಳಿದರೆ ಈ ಕೆಲಸವನ್ನು ಮಾಡುವಲ್ಲಿ

ಅವನಿಗೆ ಬೀಳುವಹಾಗಾಗುವುದು. ಈ ಮೇಲೆಹೇಳಿದ ಉದಾಹರಣೆಗಳಿಂದ ಸಾಮಾನ್ಯವಾದ ಚಲನೆಗಳನ್ನು ಕೂಡ ಅಭ್ಯಾಸವಿಲ್ಲದೆ ಮಾಡುವುದು ಕಷ್ಟವೆನ್ನುವುದೂ ಮತ್ತು ಹೀಗೆ ಡ್ರಿಲ್ ಅಭ್ಯಾಸವಾದಲ್ಲಿ ಎಲ್ಲಾ ಚಲನೆಗಳನ್ನೂ ಸುಲಭವಾಗಿಯೂ ಮತ್ತು ಶೀಘ್ರವಾಗಿಯೂ ಮಾಡುವುದಕ್ಕಾಗುವುದೆನ್ನುವುದು ಗೊತ್ತಾಗುವುದು.

ಈ ಡ್ರಿಲ್ ಪಾಠವನ್ನು ನಡೆಸುವುದರಲ್ಲಿ ಅನ್ಯದೇಶೀಯ ಕ್ರಮಗಳನ್ನನುಸರಿಸುವ ಆಗತ್ಯವಿಲ್ಲ. ನಮ್ಮ ದೇಶದಲ್ಲಿಯೇ ಮೊದಲಿನಿಂದಲೂ ವಾಡಿಕೆಯಲ್ಲಿರುವ ಸಾಧನೆಗಳಿಂದಲೇ ಎಲ್ಲಾ ಪ್ರಯೋಜನಗಳೂ ಉಂಟಾಗುವವು. ಆದ್ದರಿಂದ ಸರಿಯಾದ ರೀತಿಯಲ್ಲಿ ಪೂರ್ವಾಚಾರಕ್ರಮದ ಪ್ರಕಾರ ಸಾಧನೆಯನ್ನು ಮಾಡಿಸಿದಲ್ಲಿ ನಮ್ಮ ಬಾಲಕರ ಬುದ್ಧಿಯಲ್ಲಿಯೂ ಮತ್ತು ದೇಹದಲ್ಲಿಯೂ ಲವಲವಿಕೆಯುಂಟಾಗುವುದು.

ಡ್ರಿಲ್ ಪಾಠಗಳನ್ನು ನಡೆಸುವಾಗ ಸಾಮಾನ್ಯವಾಗಿ ಗಮನಿಸಬೇಕಾದ ಅಂಶಗಳಾವುವೆಂದರೆ :—

(1) ಇತರತರಹೆಯ ಕೆಲಸಗಳಲ್ಲಿ ಕೌಶಲ್ಯವನ್ನು ಸಂಪಾದಿಸಬೇಕಾದರೆ ಬುದ್ಧಿಯನ್ನುಪಯೋಗಿಸಬೇಕು, ಮತ್ತು ಸಂಕಲ್ಪಪೂರ್ವಕವಾಗಿ ಕೆಲಸವನ್ನು ಮಾಡಬೇಕು. ದೇಹಶಕ್ತಿಗಳನ್ನು ಬೆಳೆಸಬೇಕಾದರೂ ಈತೆರದಲ್ಲಿಯೇ ಕೆಲಸವನ್ನು ಮಾಡಬೇಕು. ಬಾಲಕರು ಡ್ರಿಲ್ ಮಾಡುವ ಕಾಲದಲ್ಲಿ ತಮ್ಮ ಮನಸ್ಸನ್ನೆಲ್ಲಾ ಅವುಗಳ ಮೇಲಿಟ್ಟ ಹೊರತು ಅವುಗಳನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲ. ಬೇಕಾಬಿಟ್ಟಿ ಮಾಡುವ ನಿರ್ಜೀವವಾದ ಡ್ರಿಲ್‌ನಿಂದ ಯಾವವಿಧವಾದ ಪ್ರಯೋಜನವೂ ಆಗಲಾರದು. ಸಾಮಾನ್ಯವಾದ ಸಾಧನೆಗೂ, ಕಡೆಗೆ ಸುಮ್ಮನೆ ನಿಲ್ಲಬೇಕಾದರೂ ಕೂಡ, ಮನಸ್ಸು ಅನ್ಯಾಕ್ರಾಂತವಾಗಿರಕೂಡದು.

2. ಚಲನೆಯಾಗುವ ಅಂಗವನ್ನಲ್ಲದೆ ದೇಹವನ್ನೆಲ್ಲಾ ಸರಿಯಾದ ಸ್ಥಾನದಲ್ಲಿಡುವುದು ಆವಶ್ಯಕ. ಉದಾಹರಣೆಯಾಗಿ ಭುಜವನ್ನು ತಲೆಯಮೇಲೆತ್ತಿದಾಗ ಕಾಲನ್ನು ನೆಲದಮೇಲೆ ಭದ್ರವಾಗಿಯೂ, ಶರೀರವನ್ನು ನೆಟ್ಟಗೂ, ಎದೆಯನ್ನು ಮುಂದೆ ಚಾಚಿಕೊಂಡೂ ಇರಬೇಕು.

3. ಅಪ್ಪಣೆ ಕೊಟ್ಟೊಡನೆಯೇ ಅದನ್ನು ನಡೆಸಬೇಕು. ಇದು ಬಹಳ ಅವ
ಶ್ಯಕ. ಸರಿಯಾಗಿ ಡ್ರಿಲ್ ಅಭ್ಯಾಸಮಾಡಿದ ಬಾಲಕರು ಉಪಾಧ್ಯಾಯನ ಬಾಯಿಂದ
ಅಪ್ಪಣೆ ಹೊರಟೊಡನೆಯೇ ಚಲನೆಯನ್ನು ಮಾಡುವರು. ಇದಕ್ಕೆ ಪದೇಪದೇ
ಅಭ್ಯಾಸವೇ ಕಾರಣ.

4. ಸಾಧ್ಯವಾದಮಟ್ಟಿಗೆ ಸಾಧನಗಳನ್ನು ಬದಲಾಯಿಸುತ್ತಿರಬೇಕು. ಏತ
ಕ್ಕೆಂದರೆ—ಯಾವುದಾದರೂ ಒಂದು ಮಾಂಸಖಂಡವನ್ನು ವೃದ್ಧಿಗೊಳಿಸುವುದು ನಮ್ಮ
ಉದ್ದೇಶವಲ್ಲ, ಎಲ್ಲಾ ಅಂಗಗಳನ್ನೂ ನಮ್ಮ ಹತೋಟಿಗೆ ತಂದುಕೊಳ್ಳುವುದೇ ನಮ್ಮ
ಕೋರಿಕೆ. ಅಲ್ಲದೆ ಕೆಲವುವೇಳೆ ಸಾಧನಗಳನ್ನು ಬದಲಾಯಿಸಿದಾಗ್ಯೂ ಒಂದೇ
ಅಂಗವು ಸೋತುಹೋಗುವುದು. ಕೈ, ಕಾಲು, ಶರೀರ ಈರೀತಿಯಾಗಿ ಬದಲಾಯಿ
ಸುತ್ತಿರಬೇಕು. ಹೀಗೆ ಮಾಡಿದಲ್ಲಿ ಯಾವ ಅಂಗವನ್ನು ಬೇಕಾದರೂ ಜಾಗ್ರತೆಯಾ
ಗಿಯೂ ಶ್ರಮವಿಲ್ಲದೆಯೂ ಉಪಯೋಗಿಸುವ ಶಕ್ತಿ ಬರುವುದು.

5. ಉಪಾಧ್ಯಾಯನು ಸ್ಥಳವನ್ನು ವಿಶೇಷವಾಗಿ ಬದಲಾಯಿಸಬಾರದು. ಹೊ
ಸಸಾಧನೆಯನ್ನು ಕಲಿಸುವಾಗ ಅನೇಕವೇಳೆ ಪ್ರತಿಯೊಬ್ಬ ಹುಡುಗನಹತ್ತಿರಲೂ ಹೋ
ಗಬೇಕಾಗುವುದು. ಆದರೆ ಬಾಲಕರಿಗೆ ಸಾಧನಗಳನ್ನು ಮಾಡುವರೀತಿ ತಿಳಿದ ಮೇಲೆ
ಉಪಾಧ್ಯಾಯನು ತನ್ನ ಕಣ್ಣು ಎಲ್ಲರಮೇಲೂ ಇರುವಂತೆ ಒಂದೇ ಸ್ಥಳದಲ್ಲಿರಬೇಕು.

6. ಡ್ರಿಲ್‌ಪಾಠದಲ್ಲಿ ಉಪಾಧ್ಯಾಯನು ಯಾವಾಗಲೂ ಬಾಲಕರ ತಪ್ಪು
ಗಳನ್ನು ತಿದ್ದುತ್ತಿರಬೇಕು. ಹುಡುಗರೆಲ್ಲರಮೇಲೂ ಗಮನವಿಟ್ಟು ಸರಿಯಾದ ರೀತಿ
ಯಲ್ಲಿ ಸಾಧನಗಳನ್ನು ಮಾಡದಿರುವ ಬಾಲಕರ ತಪ್ಪುಗಳನ್ನು ತಿಳಿಸುತ್ತಿರಬೇಕು.
ಮಾಡುವ ಕ್ರಮವನ್ನು ತೋರಿಸಿದರೆ ಸಾಲದು. ತಪ್ಪುಗಳನ್ನು ತಿದ್ದದಪಕ್ಷದಲ್ಲಿ ಬಾ
ಲಕರ ಕೈಯಲ್ಲಿ ಕಾಪಿಪುಸ್ತಕಗಳನ್ನು ಕೊಟ್ಟು ತಾವೇ ಬರೆಯುವುದನ್ನು ಕಲಿತು
ಕೊಳ್ಳುವುಕ್ಕೆಬಿಟ್ಟರೆ ಎಷ್ಟು ಪ್ರಯೋಜನವೋ ಅಷ್ಟೇ ಪ್ರಯೋಜನವಾಗುವುದು.

ಮೇಲೆ ತಿಳಿಸಿರುವ ವಿಷಯಗಳಿಗನುಸಾರವಾಗಿ ಡ್ರಿಲ್‌ಪಾಠವನ್ನು ನಡೆಸಿದ
ಪಕ್ಷದಲ್ಲಿ ಬಾಲಕರಿಗೆ ವಿಶೇಷವಾಗಿ ಪ್ರಯೋಜನವುಂಟಾಗುವದೆಂಬುವದರಲ್ಲಿ ಸಂದೇ
ಹವಿಲ್ಲ.

ಪಾಠಶಾಲೆಯಲ್ಲಿ ಪರಸ್ಪರ ಸಹಾಯ

(Co-operation in School)

1. ಪರಸ್ಪರ ಸಹಾಯವು ನಮ್ಮ ಇಂಡಿಯಾದೇಶದಲ್ಲಿ ಬಹಳ ಹೀನಸ್ಥಿತಿಯ ಲ್ಲಿತ್ತು; ಈಗಲಾದರೂ ಪರಸ್ಪರ ಸಹಾಯವು ಉನ್ನತಸ್ಥಿತಿಯಲ್ಲಿದೆಯೆಂದು ಹೇಳು ವುದಕ್ಕಾಗುವುದಿಲ್ಲ. ಪರಸ್ಪರ ಸಹಾಯವು ಪಶ್ಚಿಮದೇಶಗಳಲ್ಲಿ ತುಂಬ ಪ್ರಚಾ ರದಲ್ಲಿದೆ. ನಮ್ಮಲ್ಲಿ ಈಚೆಗೆ ಬಂದಿರುವ ಸಹಪ್ರವೃತ್ತಿಯು ಪಶ್ಚಿಮದೇಶೀಯರದಾಗಿದೆ. ಪಶ್ಚಿಮದೇಶೀಯರಿಂದ ನಾವುಗಳು ಪಡೆದಿರುವ ಗುಣಗಳಲ್ಲಿ ಇದೊಂದಾಗಿರುತ್ತದೆ. ನಮ್ಮಲ್ಲಿ ಪೂರ್ವದಿಂದಲೂ ಈ ಗುಣವಿದ್ದಿದ್ದಲ್ಲಿ ನಮ್ಮ ದೇಶದ ಚರಿತ್ರೆಯು ಸಂಪೂ ರ್ಣವಾಗಿ ಬೇರೆ ವಿಧವಾಗಿರುತ್ತಿತ್ತು. ಪರಸ್ಪರ ಸಹಾಯವು ಪಾಶ್ಚಾತ್ಯರ ಮುಖ್ಯ ಗುಣವಾಗಿರುತ್ತದೆ. ಸ್ವದೇಶದಲ್ಲಿಯಾಗಲಿ, ಪರದೇಶದಲ್ಲಿಯಾಗಲಿ ಎಲ್ಲಿ ದ್ದರೂ ಪಶ್ಚಿಮದೇಶದವರು ಈ ಗುಣವನ್ನು ಮಾತ್ರ ಬಿಡುವುದಿಲ್ಲ. ನಾವೆಲ್ಲರೂ ಪರಸ್ಪರ ಅನುರಾಗಿಗಳಾಗಿದ್ದು ಕಾರ್ಯಗಳನ್ನು ಜರುಗಿಸಬೇಕೆಂದು ವಿಶೇಷವಾಗಿ ಮಾತನಾಡುತ್ತೇವೆ, ಆದರೆ ಮಾತನಾಡುವಂತೆ ಕೆಲಸವನ್ನು ಮಾಡದೆ ಇರು ವುದು ಪೂರ್ವದಿಂದಲೂ ನಮ್ಮ ದುರ್ಗುಣವಾಗಿದೆ. ಈಗಲಾದರೂ ಇತರ ದೇಶೀ ಯರು ಪರಸ್ಪರ ಸಹಾಯದಿಂದ ಹೊಂದಿರುವ ಪ್ರಯೋಜನಗಳನ್ನೂ ಉನ್ನತಸ್ಥಿತಿ ಯನ್ನೂ ನಾವು ನೋಡಿ ಅದರಂತೆ ನಡೆದುಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ.

2. ನಾವು ನಮ್ಮ ಸಂಸಾರಗಳ ಕ್ಷೇಮಕ್ಕುಂತಾದ ಪ್ರತಿಯೊಂದು ವಿಷಯದಲ್ಲೂ ಐಕಮತ್ಯದಿಂದ ಪರಸ್ಪರ ಸಹಾಯಕರಾಗಿ ನಾವು ಕೆಲಸಮಾಡಬೇಕು. ನಮ್ಮ ಮನೆಗಳವರಲ್ಲಿಯೂ ನೆರೆಹೊರೆಯವರಲ್ಲಿಯೂ ಸರಕಾರದಲ್ಲಿಯೂ ಪಾಠಶಾಲೆಗಳ ಲ್ಲಿಯೂ ಜನಾಂಗದಲ್ಲಿಯೂ ಪರಸ್ಪರ ಸಹಾಯವೆಂಬುದನ್ನು ಪ್ರಚಾರಪಡಿಸುವುದ ರಿಂದ ಅನೇಕ ಪ್ರಯೋಜನಗಳುಂಟು. ಇವುಗಳಲ್ಲಿ ಪಾಠಶಾಲೆಯಲ್ಲಿ ಪರಸ್ಪರಸಹಾ ಯದಿಂದ ಆಗುವ ಸೌಖ್ಯವನ್ನು ಕುರಿತು ಮಾತ್ರ ಯೋಚಿಸಿ ನೋಡೋಣ.

3. ನಮ್ಮ ಪಾಠಶಾಲೆಗಳಲ್ಲಿ ಜಾತಿ, ಬಣ್ಣ, ಐಶ್ವರ್ಯ ಈ ಮೊದಲಾದ ಭೇದಗಳು ಯಾವುವೂ ಇಲ್ಲದೆ ನಾವೆಲ್ಲರೂ ವಿದ್ಯಾಭ್ಯಾಸಕ್ಕಾಗಿ ಸೇರುತ್ತೇವೆ. ನಾವು ಪಾಠಶಾಲೆಯಲ್ಲಿ ಓದುಬರಹ ಕಲಿಯುವುದು ಮಾತ್ರಕ್ಕೇ ವಿದ್ಯಾಭ್ಯಾಸವೆಂದು ಹೆಸರಲ್ಲ, ಈರೀತಿಯಾದ ಅಭಿಪ್ರಾಯವು ನಮ್ಮಲ್ಲಿ ಕೆಲವರಿಗೆ ಇರಬಹುದು, ಇದು ತಪ್ಪೆಂದು ತಿಳಿಯಬೇಕು. ಪ್ರಾಪಂಚಿಕ ವಿಷಯಗಳನ್ನು ತಿಳಿದು ಯಾವಯಾವ ವಿಷಯಗಳಲ್ಲಿ ನಾವು ಹೇಗೆ ನಡೆದುಕೊಳ್ಳಬೇಕು. ಒಳ್ಳೇ ಗುಣಾಢ್ಯರಾಗುವುದು, ಇತರರು ನಮ್ಮಂತೆ ಎಂಬುದನ್ನು ತಿಳಿದುಕೊಳ್ಳುವುದು, ಜಾತಿ ಬಣ್ಣ ಐಶ್ವರ್ಯ ಎಂಬ ಭೇದಗಳನ್ನು ಬಿಟ್ಟು ಪರಸ್ಪರ ಅನುರಾಗಿಗಳಾಗಿ ಒಬ್ಬರಿಗೊಬ್ಬರು ಸಹಾಯಮಾಡುವುದು ಮೊದಲಾದ ಈ ವಿಷಯಗಳನ್ನೆಲ್ಲಾ ಕಲಿಯುವುದು ನಿಜವಾದ ವಿದ್ಯಾಭ್ಯಾಸವೆನ್ನಿಸಿಕೊಳ್ಳುವುದು.

4. ಉಪಾಧ್ಯಾಯರಿಗಿಂತ ಮೊದಲು, ವಿದ್ಯಾರ್ಥಿಗಳು ಪರಸ್ಪರ ಸಹಾಯಕರಾಗಿರಬೇಕು. ಎಲ್ಲಾ ವಿಧವಾದ ವಿದ್ಯಾರ್ಥಿಗಳು ಪಾಠಶಾಲೆಯಲ್ಲಿ ಒಟ್ಟು ಸೇರುತ್ತೇವೆ. ಒಬ್ಬನು ಬುದ್ಧಿವಂತನು, ಒಬ್ಬನು ದಡ್ಡನು; ಒಬ್ಬನು ದರಿದ್ರನು, ಒಬ್ಬನು ಐಶ್ವರ್ಯವಂತನು ಹೀಗೆಲ್ಲರೂ ಇರುತ್ತಾರೆ. ಬುದ್ಧಿವಂತರೇ ಒಟ್ಟಾಗಿ ದಡ್ಡರನ್ನು ನಿರಾಕರಿಸುವುದು ಯುಕ್ತವಲ್ಲ. ದಡ್ಡರನ್ನು ತಮ್ಮಂತೆ ಬುದ್ಧಿವಂತರನ್ನಾಗಿ ಮಾಡುವುದು ಬುದ್ಧಿವಂತರ ಕರ್ತವ್ಯ. ಹೀಗಿರುವುದರಿಂದ ದಡ್ಡ ವಿದ್ಯಾರ್ಥಿಗಳೂ ಸುಖವನ್ನು ಹೊಂದುವರು. ಬುದ್ಧಿವಂತರ ಕೌಶಲ್ಯವೂ ವೃದ್ಧಿಗೊಳ್ಳುವುದು. ಇದರಿಂದ ಪಾಠಶಾಲೆಯೇ ಒಟ್ಟಾಗಿ ಉನ್ನತಿಯನ್ನು ಪಡೆಯುವುದು. ಹೀಗೆಯೇ ಐಶ್ವರ್ಯವಂತರಾದವರು ದರಿದ್ರರನ್ನಾಗಿ ಹೀಯಾಳಿಸದೆ ತಮ್ಮ ಕೈಲಾದ ಸಹಾಯವನ್ನು ಮಾಡಬೇಕು. ದರಿದ್ರನಿಗೆ ಈಕಾಲದ ವಿದ್ಯಾಭ್ಯಾಸಕ್ಕೆ ತಕ್ಕ ಸಲಕರಣೆಗಳನ್ನು ಸಂಪೂರ್ಣವಾಗಿ ಪಡೆಯುವುದು ಅಸಾಧ್ಯ. ಆದ್ದರಿಂದ ಐಶ್ವರ್ಯವಂತರಾದವರು ಅವರನ್ನು ನಿರಾಕರಿಸಿಬಿಟ್ಟರೆ ದರಿದ್ರನ ಸಂಕಟವು ಹೆಚ್ಚಾಗುತ್ತಾ ನಷ್ಟವನ್ನು ಹೊಂದುವನು. ಹೀಗಿರುವುದರಿಂದ ಶ್ರೀಮಂತರಾದ ವಿದ್ಯಾರ್ಥಿಗಳು, ತಮ್ಮ ಬಡಸಹಪಾಠಿಗಳಿಗೆ ಅವರ ಯೋಗ್ಯತೆಗೆ ಮೀರಿದ ಪುಸ್ತಕಗಳನ್ನೂ ಇತರ ಸಲಕರಣಗಳನ್ನೂ ಒದಗಿಸಿ ಅವರ ಕಷ್ಟವನ್ನು ನಿವಾರಣೆ ಮಾಡುವುದು ಧರ್ಮವಾಗಿದೆ. (ಸಶೇಷ)

✱ ವಿದ್ಯಾದಾಯಿನಿ ✱

(A Monthly Journal.)

ಭಾಗ ೨] ಮಾರ್ಚಿ—೧೯೧೪. [ಸಂಚಿಕೆ ೩.

ವ್ಯಾಸಂಗ.

ಉಪಾಧ್ಯಾಯರು ಕೇವಲ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಎಂತಹ ಉತ್ತಮವಾದ ಮಾರ್ಗದಲ್ಲಿ ಪಾಠಗಳನ್ನು ಬೋಧಿಸಿದರೂ ವಿದ್ಯಾರ್ಥಿಗಳು ಸರಿಯಾದ ಕ್ರಮದಲ್ಲಿ ವ್ಯಾಸಂಗಮಾಡಿ ತಮ್ಮಲ್ಲಿ ತಿಳಿವಳಿಕೆಯನ್ನು ನೆಲೆಗೊಳಿಸಿಕೊಂಡಲ್ಲದೆ ಆ ಬೋಧನೆಯು ಸಫಲವಾಗುವುದಿಲ್ಲ. ಕೇವಲ ಸಣ್ಣವಯಸ್ಸಿನ ಮತ್ತು ಸಣ್ಣ ತರಗತಿಯಲ್ಲೋದತಕ್ಕ ಮಕ್ಕಳು ಹೊರತು ಉಳಿದ ಸಕಲ ವಿದ್ಯಾರ್ಥಿಗಳೂ ಸ್ವಪ್ರಯತ್ನದಿಂದ ವ್ಯಾಸಂಗಮಾಡಲೇಬೇಕು. ಮತ್ತು ವಿದ್ಯಾರ್ಥಿಯ ವಯಸ್ಸು, ತರಗತಿಯ ಯೋಗ್ಯತೆ, ಇವು ಹೆಚ್ಚುತ್ತ ಬಂದಂತೆಲ್ಲ ಗುರುಮುಖತಃ ಆಗುವ ಬೋಧನೆಯು ಕಡಿಮೆಯಾಗುತ್ತಲೂ ಸ್ವಂತ ವ್ಯಾಸಂಗವು ಹೆಚ್ಚಾಗುತ್ತಲೂ ಬರಬೇಕು. ಚಿಕ್ಕಂದಿನಲ್ಲಿ ಕೈಹಿಡಿದುಕೊಂಡು ನಡೆಯಿಸುವುದು; ದೊಡ್ಡವರಾಗುತಬಂದಂತೆಲ್ಲಾ ಅದನ್ನು ಕಡಿಮೆಮಾಡುತ್ತಬಂದು ದಾರಿಯನ್ನು ಮಾತ್ರ ತೋರಿಸುವುದು ಯುಕ್ತವಷ್ಟೆ. ಹಾಗೆಯೇ ಉಪಾಧ್ಯಾಯರೂ ತಮ್ಮ ವಿದ್ಯಾರ್ಥಿಗಳಿಗೆ ಬಾಲ್ಯದಲ್ಲಿ ಕೇವಲ ಸಣ್ಣ, ಪುಟ್ಟ, ಅಂಶಗಳನ್ನೂ ಕೂಡ ಚೆನ್ನಾಗಿ ವಿಸ್ತರಿಸಿ ಬೋಧಿಸುತ್ತ ತುಂಬ ಸಹಾಯಮಾಡುವರು. ಮಕ್ಕಳು ವಯಸ್ಕರಾಗುತ್ತ ಬಂದರೆ ಅವರ ಬುದ್ಧಿಶಕ್ತಿಗಳು ಕ್ರಮೇಣ ಬೆಳೆಯುತ್ತ ಬರುವುದರಿಂದ ಅವರು ಸ್ವಪ್ರಯತ್ನದಿಂದಲೇ

ಹೊಸಹೊಸ ಸಂಗತಿಗಳನ್ನು ಸ್ವಲ್ಪಸ್ವಲ್ಪವಾಗಿ ತಿಳಿಯುತ್ತ ಬರಬೇಕು. ಆಗ ಉಪಾಧ್ಯಾಯರು ಮೊದಲಿನಂತೆ ಸಾಮಾನ್ಯಾಂಶಗಳಿಗೆಲ್ಲಾ ಹೆಚ್ಚುಗಮನ ಕೊಡದೆ ಮುಖ್ಯಾಂಶಗಳನ್ನು ಮಾತ್ರ ಬೋಧಿಸುವರಾಗಿ ಉಳಿದ ಸಮಸ್ತವನ್ನು ತಿಳಿದುಕೊಳ್ಳತಕ್ಕ ಭಾರವೂ ವಿದ್ಯಾರ್ಥಿಗಳ ಭಾಗಕ್ಕೇ ಬೀಳುವುದು. ಇದನ್ನು ನಿರ್ವಹಿಸುವುದು ವ್ಯಾಸಂಗದಿಂದಲೇ ಸಾಧ್ಯ.

ಉಪಾಧ್ಯಾಯರು ಸಾಕ್ಷಾತ್ತಾಗಿ ಬೋಧಿಸದ ಅಂಶಗಳನ್ನು ತಿಳಿದುಕೊಳ್ಳುವುದಕ್ಕೆ ಮಾತ್ರವೇ ವ್ಯಾಸಂಗವು ಆವಶ್ಯಕವೆಂದು ತಿಳಿಯಬಾರದು, ಅವರು ಬೋಧಿಸಿದುದು ಬುದ್ಧಿಯಲ್ಲಿ ನೆಲೆಗೊಳ್ಳುವುದಕ್ಕೂ ವ್ಯಾಸಂಗವು ಅತ್ಯಾವಶ್ಯಕ. ಈಯಂಶವನ್ನು ಪ್ರಾರಂಭದಲ್ಲೇ ಹೇಳಿವೆ. ಅವರು ಬೋಧಿಸಿದುದು ಬುದ್ಧಿಯಲ್ಲಿ ನೆಲೆಗೊಂಡರಲ್ಲವೆ ಹೊಸ ಅಂಶಗಳನ್ನು ತಿಳಿದುಕೊಳ್ಳುವುದಕ್ಕೆ ಯೋಗ್ಯತೆ ಬರುವುದು ? ಅದೇ ತಿಳಿಯದ ಮೇಲೆ ಇನ್ನು ಸ್ವತಃ ತಿಳಿದುಕೊಳ್ಳುವುದೇನು ?

ಅಂತು ಯಾವ ವಿಧವಾಗಿ ನೋಡಿದರೂ ವಿದ್ಯಾರ್ಥಿಗೆ ವ್ಯಾಸಂಗವು ಅತ್ಯಾವಶ್ಯಕವೆಂದಾಯಿತು. ಸಾಮಾನ್ಯವಾಗಿ ಎಲ್ಲ ವಿದ್ಯಾರ್ಥಿಗಳಿಗೂ ಇದು ತಿಳಿದ ಅಂಶವೇ ಆದರೂ ಅನೇಕರು ವ್ಯಾಸಂಗಮಾಡುವುದಿಲ್ಲ. ಇದಕ್ಕೆ ಅಹಂಕಾರ, ತಾತ್ಸಾರ ಅಥವಾ ಸೋಮಾರಿತನ ಇಂತಹವುಗಳೇ ಕಾರಣಗಳಾಗಿರುವುವು. ಹಾಗೆ ವ್ಯಾಸಂಗಕ್ಕೆ ಹಿಂದೆಗೆಯುತಕ್ಕವರಿಗೆ ಫಲವೂ ಹಿಂದಾಗುವುದು ಯುಕ್ತವೇ ಸರಿ. ಆದರೆ ಅನೇಕರು ತಾವು ವ್ಯಾಸಂಗಮಾಡಿದರೂ ತಕ್ಕ ಫಲವಾಗಲಿಲ್ಲವೆಂದೂ ಅದಕ್ಕೆ ತಮ್ಮ ನಿರ್ಭಾಗ್ಯದಶೆಯೇ ಕಾರಣವೆಂದೂ ಹಲುಬುತ್ತಾರೆ. ಹಾಗೆ ಒಂದುವೇಳೆ ಸರಿಯಾಗಿ ವ್ಯಾಸಂಗ ಮಾಡಿದ್ದರೂ ನಿಷ್ಫಲವಾಗುವುದೇನೋ ತುಂಬ ಶೋಚನೀಯವೇ. ಆದರೆ ವ್ಯಾಸಂಗವೆಂದರೇನು, ಅದರ ಸ್ವರೂಪವನ್ನು ಚೆನ್ನಾಗಿ ತಿಳಿದು ಅದರಂತೆ ನಡೆದೂ ಅವರಿಗೆ ಫಲವಾಗಲಿಲ್ಲವೆ, ಎಂಬುದನ್ನು ನಾವು ವಿಚಾರಮಾಡುತ್ತ ಹೋದರೆ ಅಂತಹವರಿಗೆ ಅದರ ನಿಜವಾದ ಸ್ವರೂಪವು ಗೊತ್ತಿಲ್ಲವೆಂದೂ ಯಾವುದೋ ಒಂದು ಕುರುಡುದಾರಿಯನ್ನೇ ವ್ಯಾಸಂಗವೆಂದು ಭಾವಿಸಿ ಭ್ರಾಂತಿಗೊಂಡಿರುವರೆಂದೂ ಹೇಳಬಹುದು. "ನಾನು ಇದನ್ನು ಇಪ್ಪತ್ತು ಸಲ ಓದಿ

ದೆನು, ಆದರೂ ಬರಲಿಲ್ಲ, ಇದಕ್ಕಿಂತಲೂ ಇನ್ನೇನು ಮಾಡುವುದಕ್ಕಾದೀತು?'' ಎಂದು ಹೇಳುವುದು ಕೂಡ ತಿಳಿಗೇಡಿತನದ ಮಹಿಮೆಯೇ. ಸುಮ್ಮನೆ ಅನೇಕವೇಳೆ ಅಥವಾ ಘಂಟೆಗಳಗಟ್ಲೆ ಓದಿಬಿಡುವುದೇ ವ್ಯಾಸಂಗವೆಂದು ಹೇಳುವುದೂ ನಿಷಿದ್ಧ. ವ್ಯಾಸಂಗಮಾಡುವುದೆಂಬರೆ ಈ ಮುಂದಿನ ಅಂಶಗಳನ್ನೆಲ್ಲ ಅತ್ಯಾವಶ್ಯಕವಾಗಿ ಲಕ್ಷ್ಯವಿಟ್ಟು ತಿಳಿದು ಆಚರಿಸತಕ್ಕದ್ದು.

1. **ವ್ಯಾಸಂಗವು ನಿತ್ಯವೂ ತಪ್ಪದೆ ನಡೆಯಬೇಕು**— ಅನೇಕ ವಿದ್ಯಾರ್ಥಿಗಳು ಮೊದಲಿನಿಂದಲೂ ನಿತ್ಯಗಟ್ಲೆ ಕೆಲಸ ಮಾಡದೆ ಸೋಮಾರಿತನದಿಂದ ವ್ಯರ್ಥವಾಗಿ ಕಾಲ ಕಳೆದು ಪರೀಕ್ಷೆಯು ಸಮಿಾಪಿಸಿದಾಗ, ಮನೆ ಹತ್ತಿಕೊಂಡಾಗ ಬಾವಿಯನ್ನು ತೋಡಲೆಳಸುವ ಹೆಡ್ಡರಂತೆ ಆಗ ವಿಶೇಷ ಪ್ರಯತ್ನದಿಂದ ಹೆಚ್ಚಾಗಿ ಶ್ರಮಪಡುವರು. ಇದು ಬಹಳ ಕೆಟ್ಟ ಪದ್ಧತಿ. ಒಬ್ಬ ಮನುಷ್ಯನು 5 ದಿನಗಳಲ್ಲಿ 100 ಮೈಲಿಗಳನ್ನು ನಡೆಯಬೇಕಾಗಿದೆಯೆಂದು ಭಾವಿಸಿಕೊಳ್ಳೋಣ. ಅವನು ದಿನ 1 ಕ್ಕೆ 20 ಮೈಲಿಗಳಂತೆ ನಡೆಯುತ್ತ ಹೋದರೆ ನಿರಾಯಾಸವಾಗಿ ಕ್ಲೃಪ್ತಕಾಲದಲ್ಲಿ ತಾನು ಹೋಗಬೇಕಾದ ಸ್ಥಳವನ್ನು ತಲಪುವನು. ಹಾಗಿಲ್ಲದೆ ಮೊದಲಿನ ಮೂರು ದಿನಗಳು ಒಂದು ಹೆಜ್ಜೆಯೂ ನಡೆಯದೆ ಸುಮ್ಮನೆ ಇದ್ದು ಕಡೆಯ ಎರಡು ದಿನಗಳಲ್ಲಿ ದಿನ 1ಕ್ಕೆ 50 ಮೈಲಿಗಳಂತೆ ನಡೆಯತೊಡಗಿದರೆ ಆ ಕ್ಲೃಪ್ತಕಾಲದಲ್ಲಿ ಆ ಸ್ಥಳವನ್ನು ಸೇರುವುದಕ್ಕಾಗುವುದಿಲ್ಲ. ಅಥವಾ ಒಂದುವೇಳೆ ಹಾಗೆ ಸೇರಿದರೂ ದೇಹಾರೋಗ್ಯವನ್ನು ಕಳೆದುಕೊಂಡು ಯಾವುದಾದರೊಂದು ಬಗೆಯ ರೋಗಕ್ಕೆ ಈಡಾಗುವನು. ಹೀಗೆಯೇ ವಿದ್ಯಾರ್ಥಿಯಾದವನೂ ನಿತ್ಯಗಟ್ಲೆ ಕ್ರಮವಾಗಿ ವ್ಯಾಸಂಗಮಾಡದೆ ಕಡೆಯಲ್ಲಿ ಮಾತ್ರ ಹೆಚ್ಚು ಕಷ್ಟಪಟ್ಟು ಓದುವುದರಿಂದ ತನ್ನ ಆರೋಗ್ಯವನ್ನು ಕಳೆದುಕೊಳ್ಳುವನಲ್ಲದೆ ತನ್ನ ಜೀವಮಾನದಲ್ಲಿ ಸದಾ ಉದ್ಯೋಗಿಯಾಗದಿರುವಂತಹ ಇದೊಂದು ಕೆಟ್ಟ ಚಾಳಿಯನ್ನು ತಾನಾಗಿ ಕಲ್ಪಿಸಿಕೊಳ್ಳುವನು. ಇಷ್ಟೇ ಅಲ್ಲದೆ ಆತನು ಪರೀಕ್ಷೆಯಲ್ಲಿ ಜಯಪಡೆಯುವ ಭರವಸೆಯೂ ಕಡಿಮೆ. ಆದಿಯಿಂದ ವ್ಯರ್ಥವಾಗಿ ಕಳೆದ ಹೆಚ್ಚು ಕಾಲವನ್ನು ಕಡೆಯಲ್ಲಿ ಹೆಚ್ಚು ಕೆಲಸ ಮಾಡುವುದರಿಂದ ಪುನಃ ಪಡೆಯಲಾದೀತೆ? ಪರೀಕ್ಷಾಕಾಲಗಳಲ್ಲಿ ಹೀಗೆ ಹೆಚ್ಚಾಗಿ ಶ್ರಮಪಟ್ಟು ವ್ಯಾಸಂಗ

ಮಾಡುವುದರಿಂದ ದೇಹಕ್ಕೆ ಆಯಾಸವೂ ಬುದ್ಧಿಗೆ ಜುಗುಪ್ಸೆಯೂ ಆಗುವುದೇನೂ ಅತಿಶಯವಲ್ಲ. ದೇಹ ಬುದ್ಧಿಗಳೆರಡೂ ಅಸ್ವಸ್ಥವಾಗಿರುವಾಗ ಪರೀಕ್ಷೆಯಲ್ಲಿ ಬರೆಯುವ ಉತ್ತರವುತಾನೆ ಎಷ್ಟುಮಟ್ಟಿಗೆ ಸಮರ್ಪಕವಾಗಿದ್ದೀತು ! ಉತ್ತರದ ಸ್ವರೂಪವು ಹಾಗಿದ್ದರೆ ಇನ್ನು ತೇರ್ಗಡೆಯಾಗುವ ಬಗೆ ಹೇಗೆ ? ನೋಡಿದಿರಾ ! ನಿತ್ಯಗಟ್ಲೆ ತಪ್ಪದೆ ವ್ಯಾಸಂಗ ಮಾಡದಿದ್ದರೆ ಎಷ್ಟು ಅನರ್ಥಗಳುಂಟಾಗುವುವು !

ನಿತ್ಯಗಟ್ಲೆ ತಪ್ಪದೆ ಕೆಲಸಮಾಡುವುದರಲ್ಲಿ ಈ ನಿಯಮಗಳನ್ನೂ ಅನುಸರಿಸಬೇಕು :—

(i) ವ್ಯಾಸಂಗಕ್ಕೆ ಇಂತಹಹೊತ್ತು ಇಷ್ಟುಹೊತ್ತು ಎಂದು ಗೊತ್ತುಮಾಡಿಕೊಳ್ಳಬೇಕು. ಪಾಠಶಾಲೆಗಳಲ್ಲಿ ಇಂತಿಂತಹ ಹೊತ್ತಿನಲ್ಲಿ ಇಂತಿಂತಹ ಪಾಠವೇ ನಡೆಯಬೇಕೆಂದು ಗೊತ್ತಾಗಿ ತಿಳಿಸುವುದಕ್ಕೆ ವೇಳಾಪತ್ರಿಕೆಗಳನ್ನು ಮಾಡಿಟ್ಟುಕೊಂಡಿರುವರು. ಮನೆಯ ವ್ಯಾಸಂಗಕ್ಕೂ ಹಾಗೆಯೇ ನಿರ್ಧರಮಾಡಿಕೊಳ್ಳಬೇಕು. ಹಾಗಿಲ್ಲದೆ ಬೇಕುಬೇಕಾದಾಗ ಬೇಕುಬೇಕಾದುದನ್ನು ಓದುತ್ತ ಸ್ವೇಚ್ಛೆಯಾಗಿ ಪ್ರವರ್ತಿಸಿದರೆ ತುಂಬ ತೊಡಕಾಗುವುದು, ಎಲ್ಲ ಪಾಠಗಳೂ ನಡೆಯದೆ ಕೆಲವು ಬಿಟ್ಟುಹೋಗುವುದು, ಕಾಲಹರಣವಾಗುವುದು ಮೊದಲಾದ ನಷ್ಟಗಳು ಸಂಭವಿಸುವುವು. ಮೊದಲು ಒಂದು ಪುಸ್ತಕವನ್ನು ತೆರೆದು ಕೆಲವು ಪಙ್ಕ್ತಿಗಳನ್ನೋದುವುದು, ಬಳಿಕ—ಈಗ ಇದು ಬೇಡ, ಇನ್ನೊಂದನ್ನು ಓದೋಣ—ಎಂದು ಮತ್ತೊಂದಕ್ಕೆ ಹಾರುವುದು ಇಂತಹ ಚಾಪಲ್ಯದಿಂದ ಯಾವುದೂ ಸರಿಯಾಗಿ ನಡೆಯದೆ ಹೋಗುವುದು. ಆದ್ದರಿಂದ ಮನೆಯ ವ್ಯಾಸಂಗಕ್ಕೂ ಒಂದು ವೇಳಾಪತ್ರಿಕೆ ಇದ್ದರೆ ಇಷ್ಟು ಗಂಟೆಯಿಂದ ಇಷ್ಟು ಗಂಟೆಯವರೆಗೆ ಇಂತಹ ಪಾಠವನ್ನು ಓದಬೇಕೆಂದು ಅದು ನಿರ್ಬಂಧಿಸುವುದು. ನಾವು ಕ್ಲ್ಪಪ್ತಕಾಲಗಳಲ್ಲಿ ಆಹಾರವನ್ನು ತೆಗೆದುಕೊಂಡರೆ ಹೇಗೆ ಸರಿಯಾಗಿ ಜೀರ್ಣಿಸುವುದೋ ಹಾಗೆಯೇ ಕ್ಲ್ಪಪ್ತಕಾಲಗಳಲ್ಲಿ ಆಯಾ ಪಾಠಗಳನ್ನು ವ್ಯಾಸಂಗ ಮಾಡುವುದರಿಂದ ಅವು ಬುದ್ಧಿಯಲ್ಲಿ ಚೆನ್ನಾಗಿ ನೆಲೆಗೊಳ್ಳುವುವು. "ನಾವು ಕಾಸುಗಳನ್ನು ಎಚ್ಚರಿಕೆಯಿಂದ ಕೂಡಿಹಾಕುತ್ತ ಬಂದರೆ ಆ ಕಾಸುಗಳೇ ರೂಪಾಯಿಗಳನ್ನು ಕೂಡಿಹಾಕಬಲ್ಲವು," ಎಂದು ಪಾಶ್ಚಾತ್ಯರಲ್ಲಿ ಒಂದು ಗಾದೆ

ಯುಂಟು. ಹಾಗೆಯೇ ನಾವು ವ್ಯಾಸಂಗದಲ್ಲಿ ನಿಮಿಷಗಳಿಂದು ತಾತ್ಸಾರಮಾಡದೆ ಕಾಲವನ್ನು ಉಯೋಗಿಸಿಕೊಳ್ಳುತ್ತ ಬಂದರೆ ಇದು ಕ್ರಮೇಣ ಘಂಟೆಗಟ್ಲೆ ವ್ಯಾಸಂಗ ಮಾಡಿದಂತೆಯೇ ಆಗುವುದು. ಉದಾ:—ದಿನ 1 ಕ್ಕೆ 15 ನಿಮಿಷದಂತೆ ಕೈಬರಹ ವನ್ನು ಬರೆಯುತ್ತ ಬಂದರೆ ಒಂದು ತಿಂಗಳಲ್ಲಿ 7½ ಘಂಟೆ ಹೊತ್ತು ಬರೆವಣಿಗೆ ಯನ್ನು ನಡೆಯಿಸಿದಂತೆ ಆಗುವುದಿಲ್ಲವೆ? ಈವಿಷಯವಾಗಿ "ಕ್ಷಣಶಃಕಣಶಶ್ಚೈವ ವಿದ್ಯಾಮರ್ಥಂಚ ಸಾಧಯೇತ್" ಅಂದರೆ ವಿದ್ಯೆ, ದ್ರವ್ಯ ಇವೆರಡರ ಸಂಪಾದನೆಯ ವಿಚಾರದಲ್ಲೂ ಒಂದು ಕಾಸನ್ನಾಗಲಿ ಒಂದು ಕ್ಷಣವನ್ನಾಗಲಿ ವ್ಯರ್ಥಪಡಿಸದೆ ಸಾಧಿಸಿಕೊಳ್ಳಬೇಕು ಎಂದು ಒಂದು ನೀತಿವಚನವುಂಟು.

(ii) ಕಷ್ಟವಾದ ಪಾಠಗಳನ್ನು ಮೇಲಾದ ಕಾಲಗಳಲ್ಲಿ ಓದಬೇಕು. ರಾತ್ರಿ ನಿದ್ರೆಯಿಂದ ವಿಶ್ರಾಂತಿಯನ್ನು ಪಡೆದಿರುವುದರಿಂದ ಸಾಮಾನ್ಯವಾಗಿ ಬೆಳಗಿನವೇಳೆ ಬುದ್ಧಿಯು ತುಂಬ ಚುರುಕಾಗಿದ್ದು ಕ್ಲಿಷ್ಟಾಂಶಗಳನ್ನೂ ತಿಳಿದುಕೊಳ್ಳಬಹುದು. ಆದುದರಿಂದ ಆಗ-ಅದರಲ್ಲೂ ಮುಖ್ಯವಾಗಿ ಬೆಳಗಿನಜಾವದಲ್ಲಿ—ಕಷ್ಟವಾದ ಪಾಠ ಗಳನ್ನು ಓದಬೇಕು. ಊಟವಾದಕೂಡಲೆ ವ್ಯಾಸಂಗಮಾಡುವುದು ಅಥವಾ ವ್ಯಾಸಂ ಗಮಾಡಿದ ಕೂಡಲೆ ಮಲಗುವುದು ಇವೆಂಡೂ ಕೆಟ್ಟುವು.

(iii) ಪಾಠಗಳನ್ನು ಬದಲಾಯಿಸುತ್ತ ವ್ಯಾಸಂಗ ಮಾಡುವುದರಿಂದ ಬುದ್ಧಿಗೆ ವಿಶ್ರಾಂತಿಯನ್ನು ಕೊಡಬೇಕೇ ಹೊರತು ಏನೂಮಾಡದೆ ಸುಮ್ಮನೆ ಕುಳಿತಿರುವುದೇ ವಿಶ್ರಾಂತಿಯೆಂದು ತಿಳಿಯಬಾರದು. ಅನೇಕರು ಯಾವುದಾದರೊಂದು ಪಾಠವನ್ನೇ ಬಹಳಹೊತ್ತಿನವರೆಗೆ ಓದುತ್ತಿದ್ದು ಬಳಿಕ ಅದರಿಂದ ಆದ ಆಯಾಸದ ಪರಿಹಾರ ಕ್ಕೆಂದು ಸ್ವಲ್ಪಕಾಲ ಏನೂಮಾಡದೆ ಸುಮ್ಮನೆ ಕುಳಿತುಬಿಡುವರು. ಇದು ಸರಿ ಯಾದ ವ್ಯಾಸಂಗವೆಂದಾಗಲಿ ಅಥವಾ ವಿಶ್ರಾಂತಿಯೆಂದಾಗಲಿ ಎನಿಸಿಕೊಳ್ಳಲಾರದು. ಇದರಿಂದ ವೃಥಾ ಆಯಾಸ, ವೃಥಾ ಕಾಲಹರಣ, ಈ ಎರಡು ದುಷ್ಫಲಗಳೇ ಹೆಚ್ಚಾಗಿ ಉಂಟಾಗತಕ್ಕವುಗಳು. ಆದುದರಿಂದ ಒಂದು ಪಾಠವನ್ನು ಒಂದೆರಡು ಘಂಟೆಗಳಷ್ಟು ಹೊತ್ತು ವ್ಯಾಸಂಗ ಮಾಡಿದನಂತರ ಅದನ್ನು ಬಿಟ್ಟು ಮತ್ತೊಂದು ಪಾಠವನ್ನು ವ್ಯಾಸಂಗ ಮಾಡಬೇಕು. ಮತ್ತು ಮೊದಲಿನ ಪಾಠವೂ ಬಳಿಕ ಓದತಕ್ಕ ಎರಡನೆಯ

ಪಾಠವೂ ಪರಸ್ಪರ ಭಿನ್ನಸ್ವರೂಪವುಳ್ಳವುಗಳಾಗಿರಬೇಕು. ಅಂದರೆ ಒಂದು ಪಾಠದಿಂದ ಊಹಾಶಕ್ತಿಗೆ ಹೆಚ್ಚು ಕೆಲಸ ದೊರೆಯುವುದಾಗಿದ್ದರೆ ಅದರ ಮುಂದಿನ ಪಾಠವೂ ಅಂತಹುದೇ ಆಗಿರದೆ ಕಲ್ಪನೆ, ರಚನೆ, ಇಂತಹ ಇತರ ಶಕ್ತಿಗಳಿಗೆ ಉತ್ತೇಜಕವಾಗಿರಬೇಕು. ಭಾಷೆಯ ಪಾಠಗಳಾದನಂತರ ಗಣಿತ ಬಳಿಕ ಕೈಕೆಲಸ ಇಂತಹ ಬದಲಾವಣೆಗಳು ಇರಬೇಕು.

2. ಅರ್ಥವನ್ನು ತಿಳಿದುಕೊಳ್ಳುತ್ತ ಓದಬೇಕು—ಅರ್ಥವು ಮನಸ್ಸಿಗೆ ತಿಳಿಯದಿದ್ದರೂ ಗಿಣಿಯಂತೆ ಪದಗಳ ಸರಣಿಯನ್ನು ಗಟ್ಟಿಮಾಡಿ ಒಪ್ಪಿಸುವ ಕೆಟ್ಟಪದ್ಧತಿಯು ನಮ್ಮ ವಿದ್ಯಾರ್ಥಿಗಳಲ್ಲಿ ಬಲವಾಗಿ ಬೇರೂರಿದೆ. ಇದೇ ಕುರುಡುಪಾಠವೆಂಬುದು. ಅನೇಕರು ರೇಖಾಗಣಿತದಲ್ಲಿ ಉಪಯೋಗಿಸುವ A B C ಮುಂತಾದ ಇಂಗ್ಲೀಷು ಅಕ್ಷರಗಳೇ ಮುಖ್ಯವೆಂದು ಭಾವಿಸಿ ಅವನ್ನು ಬಲವಾಗಿ ಗಟ್ಟಿಮಾಡುತ್ತಾರೆ. ಇದು ಕೇವಲ ಶೋಚನೀಯಾಂಶ. ಇದರಿಂದ ಪರೀಕ್ಷೆಗಳಲ್ಲಿ ಅಪಜಯವಾಗುವುದೇ ಸ್ವತಸ್ಸಿದ್ಧ. ಆದುದರಿಂದ ಹಾಗೆ ಮಾಡದೆ ಅಭಿಪ್ರಾಯವನ್ನು ಚೆನ್ನಾಗಿ ಗ್ರಹಿಸಿಕೊಂಡು ಅದನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕನುಕೂಲವಾಗಿ ಇದಾದ ಮೇಲೆ ಇದು ಎಂಬಂತಹ ಯಾವುದಾದರೊಂದು ಸಂಬಂಧವನ್ನು ಗುರುತಿಟ್ಟುಕೊಂಡು ನಡೆಯಿಸುವ ವ್ಯಾಸಂಗವೇ ಉತ್ತಮವಾದುದು. ಆದರೆ ಪದಸರಣಿಯನ್ನು ಗಟ್ಟಿಮಾಡಲೇಕೂಡದೆಂಬುದೇನೂ ಇಲ್ಲ. ಅರ್ಥವತ್ತಾಗಿ ಅದನ್ನು ಗಟ್ಟಿಮಾಡತಕ್ಕದ್ದು ಬಲುಒಳ್ಳೆಯದು. ಪದಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದಕ್ಕೆ ಇನ್ನೊಂದುಪಾಯವುಂಟು. ಹೋಲಿಕೆ ಅಥವಾ ವ್ಯತ್ಯಾಸ ತೋರತಕ್ಕ ಪದಗಳನ್ನು ಗೊತ್ತುಮಾಡಿಕೊಂಡಿದ್ದು ಒಂದರ ಸಹಾಯದಿಂದ ಮತ್ತೊಂದನ್ನು ಜ್ಞಾಪಿಸಿಕೊಳ್ಳಬಹುದು. ಎರಡು ಭಾಷೆಗಳನ್ನು ಕಲಿಯತಕ್ಕವರಿಗೆ ಈ ವಿಷಯದಲ್ಲಿ ತುಂಬ ಸೌಕರ್ಯವುಂಟು. ಸಮಾನಾರ್ಥವುಳ್ಳ ಎರಡು ಭಾಷೆಗಳ ಪದಗಳನ್ನು ಹೋಲಿಸಿಕೊಳ್ಳುವುದಕ್ಕೆ ಅನುಕೂಲ. ಉದಾ—ತಂದೆಯೆಂಬ ಅರ್ಥವನ್ನು ಕೊಡತಕ್ಕ ಪದವು ಸಂಸ್ಕೃತದಲ್ಲಿ 'ಪಿತೃ' ಎಂಬುದು, ಇಂಗ್ಲೀಷಿನಲ್ಲಿ ಫಾದರ್ (Father) ಎಂಬುದು ; ಹೀಗೆಯೇ ತಾಯಿಯೆಂಬ ಅರ್ಥದಲ್ಲಿ 'ಮಾತೃ' ಎಂದು ಸಂಸ್ಕೃತದಲ್ಲಿ, ಮದರ್ (Mother)

ಎಂದು ಇಂಗ್ಲೀಷಿನಲ್ಲಿ ಉಂಟು. ಇಂತಹ ಹೋಲಿಕೆಗಳಿಂದ ತಿಳಿದುಕೊಂಡ ಪದಗಳು ಅಥವಾ ಅವುಗಳ ಸರಣಿಯು ಎಂದಿಗೂ ಮರೆತುಹೋಗುವುದಿಲ್ಲ.

೩. **ಅವಧಾನವಿಟ್ಟು ವ್ಯಾಸಂಗ ಮಾಡಬೇಕು**—ನಾವು ಒಂದು ಕೆಲಸ ಮಾಡುತ್ತಿರುವಾಗ ಇನ್ನಾವುದರ ಮೇಲೋ ಮನಸ್ಸಿಟ್ಟುಕೊಂಡಿದ್ದರೆ ಆಗ ನಾವು ಮಾಡುವ ಕೆಲಸದಲ್ಲಿ ಅವಧಾನವಿಟ್ಟಿಲ್ಲವೆಂದು ಹೇಳಬೇಕಾಗುವುದು. ನಮ್ಮ ಮನಸ್ಸಿಗೆ ಸದಾ ಏನೇನೋ ತೋರುತ್ತಿರುತ್ತದೆ. ಮನಸ್ಸು ಯಾವ ಯಾವ ಕಡೆಯೋ ಹೋಗಿ ಏನೇನನ್ನೋ ಯೋಚನೆ ಮಾಡುತ್ತಿರುತ್ತದೆ. ಹೀಗೆ ಚಪಲಸ್ವಭಾವವುಳ್ಳ ಮನಸ್ಸನ್ನು ನಮಗೆ ಬೇಕಾದ ಯಾವುದಾದರೂ ಒಂದು ವಿಷಯದಲ್ಲಿ ಮಾತ್ರ ಪ್ರವರ್ತನಮಾಡಿಸಿ ಅದನ್ನು ಅಲ್ಲೇ ತಡೆಯುವುದು ಅವಧಾನ ಅಥವಾ ಗಮನ ಎನಿಸಿಕೊಳ್ಳುವುದು. ಅವಧಾನವಿಲ್ಲದೆ ಮಾಡಿದ ವ್ಯಾಸಂಗವು ನಿಷ್ಫಲ. ಮನಸ್ಸು ಇನ್ನೆಲ್ಲೋ ಇರುವಾಗ ಇಲ್ಲಿ ಓದಿದ್ದನ್ನು ಅದು ಹೇಗೆ ಗ್ರಹಿಸೀತು ? ಆದುದರಿಂದ ಓದುವಾಗ ಮನಸ್ಸನ್ನೆಲ್ಲಾ ಆ ಪಾಠದ ವಿಷಯದಲ್ಲೇ ತಡೆದಿರಬೇಕು. ಅನೇಕರು ತಾವು ಎಷ್ಟೋ ಸಲ ಓದಿದ್ದರೂ ತಮಗೇನೂ ಬರಲಿಲ್ಲವೆಂದು ಹಲುಬುವರಷ್ಟೆ. ಅವರಿಗೆ ಹಾಗೆ ಆಗುವುದಕ್ಕೆ ಅವರು ಸರಿಯಾಗಿ ಗಮನವಿಟ್ಟು ಓದದೆ ಇರುವುದೇ ಕಾರಣವೆನ್ನಬಹುದು. ವ್ಯಾಸಂಗಕ್ಕೆ ಇದರಷ್ಟು ಮುಖ್ಯವಾದುದು ಇನ್ನು ಯಾವುದೂ ಇಲ್ಲ. ಹೀಗೆ ಅವಧಾನವಿಡಬೇಕಾದರೆ ಸುತ್ತಮುತ್ತಲೂ ಯಾವ ಗದ್ದಲವೂ ಇರಕೂಡದೆಂಬುದೇನೋ ಸಹಜವಾದರೂ ಅಂತಹ ಗದ್ದಲದಲ್ಲಿ ಕೂಡ ನಾವು ಮನಸ್ಸನ್ನು ಬಿಗಿಹಿಡಿದು ನಮ್ಮ ಪಾಠದಲ್ಲಿ ನಿಲ್ಲಿಸುತ್ತ ಓದುವ ಅಭ್ಯಾಸ ಮಾಡುವುದು ಉತ್ತಮ. ಇದರಿಂದ ವ್ಯಾಸಂಗಕ್ಕೆ ಅನುಕೂಲವಾಗುವುದು ಮಾತ್ರವಲ್ಲದೆ ಮನಸ್ಸನ್ನು ಅದು ಹೋದದಾರಿಯಲ್ಲೇ ಬಿಟ್ಟುಬಿಡದೆ ಹದ್ದಿನಲ್ಲಿಟ್ಟುಕೊಳ್ಳುವಂತಹ ಒಂದು ಒಳ್ಳೆಯ ನಡತೆಯೂ ನಮಗೆ ಅಭ್ಯಾಸವಾಗುವುದು. ಹಾಗಿಲ್ಲದೆ ಒಂದು ನೊಣ ಹಾರಿದರೆ, ಬೀದಿಯಲ್ಲಿ ಬಂಡಿಗಳು ಹರಿದಾಡುತ್ತಿದ್ದರೆ ಕೂಡ ಮನಸ್ಸನ್ನು ಆ ಕಡೆಗೆ ಹರಿಬಿಡುತ್ತ ಕೈಯಲ್ಲೇನೋ ಸುಮ್ಮನೆ ಪುಸ್ತಕವನ್ನು ಹಿಡಿದಿರುವುದು, ಬಾಯಿಂದ ಹೇಳುತ್ತಲೂ ಇರುವುದು, ಇಂತಹುದು ವ್ಯಾಸಂಗವೆನಿಸಿಕೊಳ್ಳಬಲ್ಲುದೆ?

4. ಫಲವನ್ನು ಸಾಧಿಸಲೇಬೇಕೆಂಬ ದೃಢಸಂಕಲ್ಪವಿರಬೇಕು—'ನಾನೇನೋ ಓದುತ್ತೇನೆ, ತಿಳಿಯುತ್ತದೋ ಇಲ್ಲವೋ, ನನಗೆ ತೇರ್ಗಡೆಯಾಗುತ್ತದೋ ಇಲ್ಲವೋ,' ಎಂದು ಸಂಶಯದಿಂದ ಅಳುಕುತ್ತ ಮಾಡಿದ ವ್ಯಾಸಂಗವು ಚೆನ್ನಾಗಿ ನಡೆಯದು. ಅಲ್ಲದೆ ಇಂತಹ ವಿದ್ಯಾರ್ಥಿಯ ಮನೋಭಾವಕ್ಕೆ ತಕ್ಕಂತೆ ಇವನಿಗೆ ಪರೀಕ್ಷೆಯಲ್ಲಿ ಅಪಜಯವಾಗುವುದೂ ಏನೂ ಅತಿಶಯವಿಲ್ಲ. ಎಂತಹ ಕಷ್ಟಕಾರ್ಯಕ್ಕೇ ಆದರೂ ನಾವು ದೃಢಸಂಕಲ್ಪದಿಂದ ಯತ್ನಿಸಿದರೆ ದೇವರು ಪ್ರಾಯಶಃ ಸಹಾಯ ಮಾಡುವನು. ಈವಿಷಯವಾಗಿ ದೇವರಲ್ಲಿ ನಂಬಿಕೆಯೂ ಇರಬೇಕು. ಸಾಗರಗಳನ್ನು ಪರಸ್ಪರ ಸೇರಿಸುವುದು, ಬೆಟ್ಟಗಳನ್ನು ಕೊರೆಯುವುದು, ಮೈಲಿಗಟ್ಲೆ ಆಳವುಳ್ಳ ಸಮುದ್ರಗಳಮೇಲೆ ಓಡಾಡುವುದು ಇಂತಹ ಪರಮಸಾಹಸಗಳನ್ನು ಕೂಡ ಮನುಷ್ಯರು ಮಾಡಿಯೂ, ಮಾಡುತ್ತಲೂ, ಇರುವರು. ಇವೆಲ್ಲಾ ನೆರವೇರುವುದಕ್ಕೆ ಕಾರಣವಾವುದು? ಅದನ್ನು ಮಾಡಿದವರ ದೃಢಸಂಕಲ್ಪ, ಮತ್ತು ದೃಢಪ್ರಯತ್ನ. ನಾವು ಮಾಡಬೇಕಾದ ಕರ್ತವ್ಯವನ್ನು ಮನಃಪೂರ್ವಕವಾಗಿ ಮಾಡಿದರೆ ಅದು ಸಿದ್ಧಿಸಲೇ ಸಿದ್ಧಿಸುವುದೆಂದು ನಂಬಿ ಉತ್ಸಾಹದಿಂದ ಇರಬೇಕೇ ವಿನಾ ಅಳುಕುತ್ತ ನಿರಾಶೆಯಾಗಿರಬಾರದು.

5. ಹೆಚ್ಚಾಗಿ ಓದಬೇಕೆಂಬುದಕ್ಕಿಂತಲೂ ಚೆನ್ನಾಗಿ ಓದಬೇಕೆಂಬುದು ಮುಖ್ಯ. ಬರೀ ನಿರ್ಬಂಧದಿಂದ ಆಯಾ ಹೊತ್ತಿನಲ್ಲಿ ಆಯಾ ಪಾಠಗಳನ್ನು ಉದ್ದಕ್ಕೂ ಓದಿಬಿಡುವುದು ಮಾತ್ರವೇ ಸಾಲದು ; ಅದನ್ನು ಚೆನ್ನಾಗಿ ಮುಂದಟ್ಟು ಮಾಡಿಕೊಳ್ಳಬೇಕು. ಒಂದು ಅಂಶವು ತಿಳಿಯದಿದ್ದರೆ ಅದನ್ನು ಹಾಗೆಯೇ ಬಿಟ್ಟುಬಿಡದೆ ಪುನಃ ಪುನಃ ಯೋಚಿಸಿ ನೋಡಬೇಕು. ಕಡೆಗೂ ತಿಳಿಯದೆ ಹೋದರೆ ಅದನ್ನು ಗುರುತಿಟ್ಟುಕೊಂಡಿದ್ದು ಸಮಯ ದೊರೆತಾಗ ಇತರರಿಂದ ತಿಳಿದುಕೊಳ್ಳಬೇಕು. ಅಂತು ವ್ಯಾಸಂಗ ಮಾಡಿದಷ್ಟು ಚೆನ್ನಾಗಿ ಮನಸ್ಸಿನಲ್ಲಿ ನೆಲೆಗೊಳ್ಳಬೇಕು. ಹಾಗಿಲ್ಲದೆ ಸ್ವಲ್ಪ ಸ್ವಲ್ಪ ತಿಳಿದಹಾಗಿರುವುದು ತಿಳಿಯದಂತೆಯೂ ಇರುವುದು, ಹೀಗಾಗುವುದಾದರೆ ಆ ವ್ಯಾಸಂಗದಿಂದ ಏನೂ ಫಲವಿಲ್ಲ. ವ್ಯಾಸಂಗಮಾಡತಕ್ಕ ಪುಸ್ತಕಗಳ ಅಥವಾ ಪುಟಗಳ ಸಂಖ್ಯೆಯು ಹೆಚ್ಚಾಗಿ ನಡೆಯಿತು ಎಂಬುದರಲ್ಲಿ ಏನೂ ಸಂತೋಷಕ್ಕೆ ಅವ

ಕಾಶವಿಲ್ಲ. ಅವುಗಳ ಪೈಕಿ ಎಷ್ಟು ಅಂಶವು ಚೆನ್ನಾಗಿ ತಿಳಿದು ಬುದ್ಧಿಯಲ್ಲಿ ನೆಲೆಗೊಂಡಿತು ಎಂಬುದು ಮುಖ್ಯವಾದದ್ದು. ಇಪ್ಪತ್ತು ಪುಟಗಳನ್ನು ಉದ್ದಕ್ಕೆ ಓದಿ ಅರ್ಧ ಅರ್ಧ ತಿಳಿದುಕೊಳ್ಳುವುದಕ್ಕಿಂತಲೂ ಎರಡು ಪುಟಗಳನ್ನೇ ಆದರೂ ಚೆನ್ನಾಗಿ ತಿಳಿದುಕೊಳ್ಳುವುದು ಉತ್ತಮವಾದದ್ದು. ಆದರೆ ಯಾವಾಗಬೇಕಾದರೂ ಜ್ಞಾಪಕಕ್ಕೆ ತಂದುಕೊಳ್ಳಬಹುದಾದ ಮಟ್ಟಿಗೆ ವ್ಯಾಸಂಗ ಮಾಡುವುದು ಒಂದುಸಲಕ್ಕೆ ಸಾಧ್ಯವಾಗದು. ವ್ಯಾಸಂಗವು ಅನೇಕವೇಳೆ (ದಿನ) ನಡೆಯಬೇಕು.

6. **ಸ್ವಂತವಾಗಿಯೇ ಕಷ್ಟಪಟ್ಟು ವ್ಯಾಸಂಗ ಮಾಡಬೇಕು** — ಸೋಮಾರಿಗಳಾದ ಕೆಲವು ವಿದ್ಯಾರ್ಥಿಗಳು ಉಪಾಧ್ಯಾಯರು ನೇಮಿಸಿದ್ದ ಮನೆಗೆಲಸಗಳನ್ನು ಮಾಡುವುದರಲ್ಲಿ ಸ್ವತಃ ಪ್ರವರ್ತಿಸದೆ ನೋಟ್ಸಿನ ಪುಸ್ತಕಗಳಿಂದ ಅರ್ಥವನ್ನು ಎತ್ತಿ ಬರೆಯುವುದು, ಅಚ್ಚಿನಪುಸ್ತಕಗಳನ್ನು ನೋಡಿಕೊಂಡು ಲೆಕ್ಕದ ನ್ಯಾಸವನ್ನೂ ಉತ್ತರವನ್ನೂ ಬರೆಯುವುದು, ಅಥವಾ ತನ್ನ ಜತೆಗಾರನಾದ ಮತ್ತೊಬ್ಬ ವಿದ್ಯಾರ್ಥಿಯು ಮಾಡಿದ ಕೆಲಸವನ್ನು ನಕಲು ಮಾಡಿಕೊಂಡು ಹೋಗಿ ಉಪಾಧ್ಯಾಯರಿಗೆ ತೋರಿಸುವುದು, ಇಂತಹ ಕೆಟ್ಟನಡತೆಗಳನ್ನು ಪಡೆದಿರುವರು. ಇವರು ಉಪಾಧ್ಯಾಯರನ್ನು ಈರೀತಿಯಾಗಿ ತಾವು ಮೋಸಗೊಳಿಸುವರಾಗಿ ಭಾವಿಸಿಕೊಂಡಿರುವರಾದರೂ ವಸ್ತುತಃ ಇದರಿಂದ ಫಲಿತಾಂಶದಲ್ಲಿ ತಮಗೇ ಮೋಸವಾಗುವುದು. ಹೀಗೆ ಸದಾ ಇತರರನ್ನೇ ನಂಬಿ ಬಾಳುವುದಾದರೆ ಇವರಿಗೆ ಸ್ವತಃ ಯೋಗ್ಯತೆಯು ಬರುವುದುಂಟೆ? ಅಥವಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವ ಭರವಸೆಯಾದರೂ ಉಂಟೊ? ನಾವು ತಿನ್ನುವ ಆಹಾರವನ್ನು ಇನ್ನೊಬ್ಬನು ತಿನ್ನಲಿಯೆಂದು ಬಿಟ್ಟುಬಿಟ್ಟು ನಾವು ಊಟಮಾಡಿದಂತೆ ನಟಿಸಿದರೆ ನಮಗೆ ಹೊಟ್ಟೆ ತುಂಬುವುದೆ? ಬಲವು ಬರುವುದೆ? ನಾವು ಆಡಬೇಕಾದ ಆಟವನ್ನು ಇನ್ನೊಬ್ಬರಿಂದ ಆಡಿಸಿದರೆ ಆ ಆಟದಿಂದ ಉಂಟಾಗುವ ಸಂತೋಷವು ನಮಗೆ ತಿಳಿಯುವುದೆ? ಆದುದರಿಂದ ಯಾವುದನ್ನೇ ಆಗಲಿ ತಾವೇ ಸ್ವತಃ ಶ್ರಮಪಟ್ಟು ತಿಳಿದುಕೊಳ್ಳುತ್ತ ವ್ಯಾಸಂಗ ಮಾಡಬೇಕು. ಇದರಿಂದ ಸದ್ಯಃ ಫಲ ಮಾತ್ರವಲ್ಲದೆ ಇನ್ನೊಬ್ಬರ ಹಂಗಿಲ್ಲದೆ ಬಾಳಬಹುದಾದ

ಸ್ವಾತಂತ್ರ್ಯವೆಂಬ ಒಳ್ಳೆಯ ನಡತೆಯೂ ಅಭ್ಯಾಸವಾಗುವುದು. ಹಾಗಿಲ್ಲದೆ ಇದ್ದರೆ ಯಾವಾಗ್ಗೂ ಇನ್ನೊಬ್ಬರನ್ನೇ ನಂಬಿಕೊಂಡು ದೈನ್ಯದಿಂದ ಬೇಡಿಕೊಳ್ಳುವಂತಹ ಹೀನಸ್ವಭಾವವುಂಟಾಗುವುದು.

7. **ಆಯಾದಿನದ ಪಾಠಗಳನ್ನು ಮಾತ್ರವಲ್ಲದೆ ಹಳೆಯ ಪಾಠಗಳನ್ನು ಆವೃತ್ತಿ ಮಾಡುತ್ತಿರಬೇಕು** — ಹಿಂದಿನ ಪಾಠವು ಚೆನ್ನಾಗಿ ನೆನಪಿನಲ್ಲಿದ್ದರೆ ಮುಂದೆ ಕಲಿಯುವ ಪಾಠವು ಚೆನ್ನಾಗಿ ತಿಳಿಯುವುದು. ಗಣಿತ, ಚರಿತ್ರೆ, ವ್ಯಾಕರಣ ಇಂತಹ ಕೆಲವು ಪಾಠಗಳಲ್ಲಂತು ಈಯಂಶವು ಚೆನ್ನಾಗಿ ಸ್ಪಷ್ಟಪಡುವುದು. ಉದಾ :— ಲ. ಸಾ. ಅ. ವೇ ಮರೆತುಹೋಗಿದ್ದರೆ ಭಿನ್ನರಾಶಿಯ ಸಂಕಲನವು ತಿಳಿಯುವುದೆ? ಅಕ್ಬರನ ಚರಿತ್ರೆಯು ಚೆನ್ನಾಗಿ ನೆನಪಿರದಿದ್ದರೆ ಔರಂಗ್‌ಜೇಬನಿಗೂ ಅವನಿಗೂ ಇರುವ ವ್ಯತ್ಯಾಸವನ್ನು ತಿಳಿಯಲಾದೀತೆ? ವಿಭಕ್ತಿಗಳನ್ನೇ ಮರೆತವನು ತತ್ಪುರುಷ ಸಮಾಸದ ಬೋಧನೆಯನ್ನು ಗ್ರಹಿಸಿಯಾನೆ? ಹಿಂದುಮುಂದಿನ ಪಾಠಗಳನ್ನು ಸಂಬಂಧಿಸಿಕೊಂಡು ವ್ಯಾಸಂಗ ಮಾಡಿದರೆ ಪರಿಪೂರ್ಣವಾದ ತಿಳಿವಳಿಕೆಯಾಗುವುದು. ಅದೇ ಉತ್ತಮವಾದುದು. ಅಪೂರ್ಣವಾದ ಜ್ಞಾನವು ನಿಷ್ಫಲ. ಹೇಗೆಂದರೆ,—ತೆಂಗಿನಜುಂಗನ್ನು ಚೆನ್ನಾಗಿ ಒಡಿದು ಹದಮಾಡಿ ರಾಶಿಹಾಕಿದ್ದ ಮಾತ್ರಕ್ಕೇ ಏನುಪ್ರಯೋಜನ? ಅದನ್ನು ಸರಿಯಾಗಿ ಜೋಡಿಸಿ ಹೊಸೆದು ಹಗ್ಗಮಾಡಿದರಲ್ಲವೆ ಆಳವಾದ ಬಾವಿಯ ನೀರನ್ನಾದರೂ ಸುಲಭವಾಗಿ ಪಡೆಯಬಹುದು? ಆಗಾಗ್ಗೆ ಹಿಂದಿನ ಪಾಠಗಳನ್ನು ಆವೃತ್ತಿಮಾಡುವುದು ಸರ್ವಥಾ ಮುಖ್ಯ. ಪರೀಕ್ಷಾಕಾಲಗಳಲ್ಲಂತು ಅತ್ಯಾವಶ್ಯಕ.

8. **ಕಷ್ಟವಾದ ಮತ್ತು ಮುಖ್ಯವಾದ ಅಂಶಗಳನ್ನು ಆಗಾಗ್ಗೆ ಬರೆದಿಟ್ಟುಕೊಳ್ಳಬೇಕು** — ಬರವಣಿಗೆಯೂ ವ್ಯಾಸಂಗಕ್ಕೆ ಒಂದು ಉತ್ತಮವಾದ ಮಾರ್ಗ. ಆದರೆ ಇದನ್ನು ಓದುವುದರಷ್ಟು ಜಾಗ್ರತೆಯಾಗಿ ನಡೆಸಲಾಗುವುದಿಲ್ಲವಾಗಿ ಹೆಚ್ಚುಕಾಲವು ಕಳೆದುಹೋಗುವುದು. ಆದ್ದರಿಂದ ಎಲ್ಲವನ್ನೂ ಬರೆಯಲಾಗದಿದ್ದರೂ ತುಂಬ ಕಷ್ಟವಾದ ಮತ್ತು ಮುಖ್ಯವಾದ ಅಂಶಗಳು, ತಾನು ಓದಿದ

ಪಾಠದ ಸಾರಾಂಶಗಳು, ಇವನ್ನಾದರೂ ಬರೆಯುತ್ತಿರುವುದು ಒಳ್ಳೆಯದು. ಇದರಿಂದ ವಿಷಯವು ಮನಸ್ಸಿನಲ್ಲಿ ಚಿರಸ್ಥಾಯಿಯಾಗಿರುವುದು ಮಾತ್ರವೇ ಅಲ್ಲದೆ ಪರೀಕ್ಷೆಗಳಲ್ಲಿ ಉತ್ತರ ಬರೆಯುವುದಕ್ಕೂ ತುಂಬ ಸಹಾಯವಾಗುವುದು. ಹೇಗೆಂದರೆ,–ಇಂತಿಂತಹ ಪ್ರಶ್ನೆಗೆ ಇಷ್ಟೇ ಉತ್ತರ, ಇದನ್ನು ಈ ಮಾರ್ಗದಲ್ಲಿ ಬರೆಯಬಹುದು, ಇದೇ ಮೊದಲಾದುದೆಲ್ಲ ಇದರಿಂದ ಬಲುನಿಷ್ಕರ್ಷೆಯಾಗಿ ತಿಳಿಯುವುದು. ಮತ್ತು ಬರೆವಣಿಗೆಯಲ್ಲಿ ಸರಿಯಾಗಿರುವ ಮನುಷ್ಯನಿಗೆ ತನ್ನಲ್ಲಿ ತನಗೆ ನಂಬಿಕೆಯೂ ಹುಟ್ಟುತ್ತದೆ.

ವ್ಯಾಸಂಗದ ವಿಷಯವಾಗಿ ಒಬ್ಬ ವಿದ್ವಾಂಸನು ಈರೀತಿ ಹೇಳಿರುವನು-

"ವಿಷಯವನ್ನು ಬುದ್ಧಿಗೆ ಕಲಿಸುವುದಕ್ಕೆ ದೇವರು ಹಲವು ಇಂದ್ರಿಯಗಳನ್ನು ಕೊಟ್ಟಿರುವನು. ಸಾಧ್ಯವಾದಮಟ್ಟಿಗೂ ಹೆಚ್ಚು ಇಂದ್ರಿಯಗಳಿಂದ ನಾವು ಕೆಲಸಮಾಡಿಸಿದಷ್ಟೂ ವಿಷಯವು ಬುದ್ಧಿಯಲ್ಲಿ ಬಲವಾಗಿ ಬೇರೂರುವುದು ; ಆದುದರಿಂದಲೇ ಗಟ್ಟಿಯಾಗಿ ಓದಬೇಕು, ಮತ್ತು ಬರೆಯಬೇಕು. ಇವೆರಡರಿಂದ ನಡೆಯುವ ವ್ಯಾಸಂಗವೇ ಉತ್ತಮವಾದುದು ಎನ್ನುವುದು. ಗಟ್ಟಿಯಾಗಿ ಓದುವುದರಿಂದ ಬಾಯಿ ಕೆಲಸಮಾಡುವುದು ಮಾತ್ರವಲ್ಲದೆ ಬಾಯಿಂದ ಹೇಳಿದ್ದನ್ನು ಕಿವಿಯೂ ಕೇಳುವುದು. ಓದಿದ ಅಂಶವು ಚೆನ್ನಾಗಿ ತಿಳಿದಿದೆಯೋ ಇಲ್ಲವೆ ಎಂಬುದನ್ನು ಕಣ್ಣೂ ಪರೀಕ್ಷಿಸುವುದಕ್ಕೆ ಬರೆವಣಿಗೆಯೂ ಸಹಕಾರಿಗಳು. ಇದಲ್ಲದೆ ಬರೆವಣಿಗೆಯಿಂದ ಇತರ ಪ್ರಯೋಜನಗಳು ಎಷ್ಟೋ ಇರುವುವು."

ವ್ಯಾಸಂಗ ಮಾಡತಕ್ಕವರು ತಿಳಿದಿರಬೇಕಾದ ಇತರ ಕೆಲವು ನಿಯಮಗಳು—

(1) ಹೆಚ್ಚು ಬೆಳಕಿನಲ್ಲಿ ಅಥವಾ ತಕ್ಕಷ್ಟು ಬೆಳಕಿಲ್ಲದೆಡೆ ಓದಬಾರದು. (2) ಓದುವಾಗ ಬೆಳಕು ಎಡಗಡೆಯಿಂದ ಬರುತ್ತಿರಬೇಕು. (3) ಕೇವಲ ಸಣ್ಣ ಅಕ್ಷರದ ಪುಸ್ತಕಗಳನ್ನು ರಾತ್ರಿವೇಳೆ ಓದಬಾರದು. (4) ನಿತ್ಯವೂ ತಕ್ಕಷ್ಟು ಅಂಗಸಾಧನೆ ಮಾಡುತ್ತಿರಬೇಕು.

J. K. S.

ಪಾಠಶಾಲೆಯಲ್ಲಿ ಪರಸ್ಪರ ಸಹಾಯ.

(48 ನೆಯ ಪುಟದ ಶೇಷ.)

5. ಇದೂ ಅಲ್ಲದೆ ನಿಜವಾಗಿ ವಿದ್ಯಾವಂತರಾಗಬೇಕಾದರೆ ತುಂಬಾ ಪ್ರಯಾಸವಿದೆ. ಓದುಬರಹ ಮಾತ್ರವನ್ನು ಯೋಚಿಸಿದ ಪಕ್ಷದಲ್ಲಿ ಒಬ್ಬ ವಿದ್ಯಾರ್ಥಿಯೇ ಎಲ್ಲವನ್ನೂ ಓದುವುದು ಅಸಾಧ್ಯ. ಆದುದರಿಂದ ಪ್ರತಿ ತರಗತಿಯವರೂ ಒಟ್ಟಾಗಿ ಸೇರಿ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಯೋಗ್ಯತಾನುಸಾರವಾಗಿ ವ್ಯಾಸಂಗ ಮಾಡಿ ತಾನು ಪಡೆದಿರುವ ಜ್ಞಾನವನ್ನು ತನ್ನ ಸಹೋದರ ಸಮಾನರಾದ ಸಹಪಾಠಿಗಳಿಗೆ ತಿಳಿಸಬೇಕು. ಈ ಅನುಕೂಲಕ್ಕೋಸ್ಕರವಾಗಿ ವಿದ್ಯಾನಿಲಯಗಳಲ್ಲಿ ಸಂಘಗಳನ್ನು ಏರ್ಪಡಿಸುವುದಕ್ಕೆ ತಮ್ಮ ಉಪಾಧ್ಯಾಯರ ಸಹಾಯವನ್ನು ತೆಗೆದುಕೊಳ್ಳಬೇಕು.

ಈ ತರಹವಾದ ಸಂಘಗಳಲ್ಲಿ ಪ್ರತಿಯೊಂದೂ ಈಗಿನ ಪಾಠಶಾಲೆಗಳಲ್ಲಿ ಇರುವಂತೆ ಕಾಣಬರುತ್ತದೆ. ಆದರೆ ಇದನ್ನು ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ನಡೆಸಿಕೊಂಡು ಪ್ರಯೋಜನಹೊಂದಿರುತ್ತಾರೆಂಬುದು ಹೇಳುವುದು ಕಷ್ಟ; ಕೆಲವರು ಹೊಂದಿರಬಹುದು. ಆದರೆ ಎಲ್ಲರೂ ಹೊಂದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಇದು ವಿದ್ಯಾರ್ಥಿಗಳ ತಪ್ಪೇಹೊರತು ಮತ್ತಾರದೂ ಅಲ್ಲ.

6. ವಿದ್ಯಾರ್ಥಿಗಳಿಗಾಗಿ (Boarding House) ಎಂಬ ನಿಲಯಗಳನ್ನು ಸ್ಥಾಪಿಸಿರುತ್ತಾರೆ. ಅಲ್ಲಿರುವುದಕ್ಕೆ ಅನುಕೂಲವಿಲ್ಲದವರೆಲ್ಲರೂ ಒಟ್ಟಾಗಿ ಸೇರಿ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ದುಡ್ಡು ಖರ್ಚುಮಾಡಿ ಒಟ್ಟಾಗಿರುವುದರಿಂದ ಅನೇಕ ಪ್ರಯೋಜನಗಳಿವೆ. ಹೀಗೆ ಮಾಡುವುದರಿಂದ ದ್ರವ್ಯವು ಉಳಿಯುವುದು. ಎಲ್ಲರಿಗೂ ಸುಲಭವಾಗಿ ವಿದ್ಯಾಭ್ಯಾಸವಾಗುತ್ತದೆ. ದ್ರವ್ಯದ ಅನುಕೂಲ

ಎಲ್ಲದವರೆಲ್ಲರೂ ಸೇರಿ ಮನೆಗಳಲ್ಲಿ ತಮ್ಮ ಶಕ್ತಿಯಿದ್ದಂತೆ ತಮಗೆ ಯಾವ ವಿದ್ಯೆ ಚೆನ್ನಾಗಿ ಬರುತ್ತದೋ ಅದನ್ನು ಇತರರಿಗೆ ಅಭ್ಯಾಸಮಾಡಿಸಿ ದ್ರವ್ಯಸಂಪಾದಿಸಬಹುದು, ಒಟ್ಟಾಗಿ ಎಲ್ಲರೂ ಪುಸ್ತಕ ಮೊದಲಾದುವನ್ನು ಒದಗಿಸಿಕೊಂಡು ಸುಲಭವಾಗಿ ವ್ಯಾಸಂಗಮಾಡಲೂ ಬಹುದು.

7. ಇದೇರೀತಿ ಆಟಪಾಟಗಳಲ್ಲಿಯೂ ಸಹ ಪರಸ್ಪರ ಸಹಾಯವನ್ನು ಪ್ರಚಾರಕ್ಕೆ ತರುವುದರಿಂದ ಅತ್ಯಂತ ಸುಖವುಂಟು. ಈ ಪರಸ್ಪರ ಅನುರಾಗವನ್ನು ಪಾಠಶಾಲೆಗೇ ಬಿಟ್ಟುಬಿಡಬಾರದು. ನೂರುಜನ ವಿದ್ಯಾರ್ಥಿಗಳಲ್ಲಿ ಕನಿಷ್ಠಪಕ್ಷ ಹತ್ತುಜನರಾದರೂ ಒಳ್ಳೇಸ್ಥಿತಿಗೆ ಬರುವರು. ಹೀಗೆ ಉನ್ನತಪದವಿಗೆ ಬಂದವರು ಪೂರ್ವಸಂಪರ್ಕವನ್ನು ನೆನಪಿನಲ್ಲಿಟ್ಟುಕೊಂಡು ತಮ್ಮ ಜತೆಗಾರರಿಗೆ ಸಹಾಯಮಾಡಬೇಕು. ವಿದ್ಯಾರ್ಥಿಗಳ ವಿಷಯವಾಗಿ ಹೇಳಿದ್ದಾಯಿತು.

8. ವಿದ್ಯಾರ್ಥಿಗಳಿಗೂ, ಉಪಾಧ್ಯಾಯರಿಗೂ ಸಹ ಇದೇ ರೀತಿಯಾದ ಪರಸ್ಪರ ಅನುರಾಗವಿರಬೇಕು. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಪರಸ್ಪರ ಸಹಾಯಕರಾಗಿರುವುದರಿಂದ ಇಬ್ಬರಿಗೂ ಸುಖ. ಗುರುಗಳಿಗೆ ತಮ್ಮ ಶಿಷ್ಯರು ಬುದ್ಧಿವಂತರಾಗಬೇಕು, ಒಳ್ಳೆಯ ಪದವಿಯನ್ನು ಪಡೆಯಬೇಕು, ಎಂಬುದು ಮನಸ್ಸಿನಲ್ಲಿದ್ದೇ ಇರುತ್ತದೆ. ಹೀಗಾಗುವುದರಿಂದ ಅವರಿಗೆ ಯಶಸ್ಸೂ, ಸಂತೋಷವೂ ಉಂಟಾಗುತ್ತದೆ. ಹಾಗಲ್ಲದೆ ಉಪಾಧ್ಯಾಯರು ಹೆಚ್ಚು ಸಂಬಳವನ್ನು ಪಡೆಯುತ್ತಾರೆ, ಅವರು ನಮ್ಮನ್ನು ವಿದ್ಯಾವಂತರನ್ನಾಗಿ ಮಾಡುವುದು ಅವರ ಕರ್ತವ್ಯ, ಎಲ್ಲವನ್ನೂ ಅರೆದು ನಮಗೆ ಕುಡಿಸಲಿ, ಎಂದು ವಿದ್ಯಾರ್ಥಿಗಳು ಯೋಚಿಸಬಾರದು. ಉಪಾಧ್ಯಾಯರೂ ನಮ್ಮಂತೆ ಮನುಷ್ಯರು. ದೇವತೆಗಳಲ್ಲ; ನಮಗೆ ವಿದ್ಯಾಭ್ಯಾಸವನ್ನು ಮಾಡಿಸುವುದೇ ಅವರಿಗೆ ಕರ್ತವ್ಯವಾದರೂ ಅವರು ಹೇಳಿದ್ದನ್ನು ಮನಸ್ಸಿಗೆ ತೆಗೆದುಕೊಂಡು ಪಾಠಶಾಲೆಗೆ ಹೋದರೆ, ಇಬ್ಬರಿಗೂ ಸುಖ; ಉಪಾಧ್ಯಾಯರು ಹೇಳುವುದೂ ಚೆನ್ನಾಗಿ ತಿಳಿಯುತ್ತದೆ; ಅವರು ಮುಂದಿನ ಪಾಠಗಳನ್ನು ಮಾಡುವುದಕ್ಕೂ ಸುಲಭವಾಗಿರುತ್ತದೆ, ವಿದ್ಯಾರ್ಥಿಗಳಮೇಲೆ ಪ್ರೀತಿಯೂ,

ಉಲ್ಲಾಸವೂ ಉಂಟಾಗುತ್ತದೆ. ಹೀಗೆ ಪರಸ್ಪರ ಸಹಾಯಜ್ಞಾನವಿಲ್ಲದೆ ಪಾಠಶಾಲೆಗೆ ಹೋದರೆ ಇಬ್ಬರಿಗೂ ಕಷ್ಟ. "ವಿದ್ಯಾರ್ಥಿಗಳಿಗೆ ಬರುವುದಿಲ್ಲ, ಉಪಾಧ್ಯಾಯರಿಗೆ ಮರೆಯುವುದಿಲ್ಲ" ಎಂಬ ಗಾದೆಯು ಸುಳ್ಳಾಗುವುದಿಲ್ಲ. ಯಾವ ಉಪಾಧ್ಯಾಯರಾಗಲೀ ಸರ್ವಸಮರ್ಥರಲ್ಲ! ಅದೂ ಅಲ್ಲದೆ ಕಾಲವೂ ಬಹಳ ಸ್ವಲ್ಪವಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ವಿಷಯವಾಗಿ ಹೇಳಿದಾಗ ಮೇಲೆ ಸೂಚಿಸಿದಂಥ ಸಂಘಗಳನ್ನು ಏರ್ಪಡಿಸಿಕೊಂಡು ಎಲ್ಲರೂ ಸೇರಿ ಉಪಾಧ್ಯಾಯರೊಡನೆ ಚರ್ಚಿಸಿ ತಿಳಿದುಕೊಳ್ಳುವುದರಿಂದ ಉಪಾಧ್ಯಾಯರು ತಿಳಿಸಲು ವೇಳೆಯಿಲ್ಲದ ಅಂಶಗಳು ವಿದ್ಯಾರ್ಥಿಗಳಿಗೆ ತಿಳಿಯಬರುತ್ತವೆ. ವಿದ್ಯಾರ್ಥಿಗಳೆಲ್ಲರೂ ಸೇರಿ ಚರ್ಚಿಸಿದನಂತರ ಗುರುಗಳು ಹೆಚ್ಚು ತಿಳಿವಳಿಕೆಯುಳ್ಳವರಾದಕಾರಣ ಅವರ ತಪ್ಪನ್ನು ತೋರಿಸಿ ಸರಿಯಾದ ವಿಷಯಗಳನ್ನು ಹೇಳಬಹುದು. ಈರೀತಿ ಸಂಘಗಳನ್ನು ಮಾಡಿಕೊಳ್ಳುವುದರಿಂದ ಮೇಲೆ ಹೇಳಿದ ಪ್ರಯೋಜನಗಳಲ್ಲದೆ ಇತರ ಪ್ರಯೋಜನಗಳೂ ಲಭಿಸುವುವು. ಹತ್ತುಜನರು ಸೇರಿದ ಸ್ಥಳದಲ್ಲಿ ಮಾತನಾಡುವ ಧೈರ್ಯ ಬರುತ್ತದೆ. ಗ್ರಹಣಶಕ್ತಿ, ವಿಮರ್ಶನಾಶಕ್ತಿ, ಜಾಗ್ರತೆಯಾಗಿ ಯೋಚನೆ ಮಾಡುವುದು, ಮುಂತಾದ ಮುಖ್ಯ ಗುಣಗಳನ್ನು ವಿದ್ಯಾರ್ಥಿಗಳು ಪಡೆಯುತ್ತಾರೆ.

9. ಈತೆರನಾದ ನಡೆವಳಿಕೆಯು ಪಾಠಶಾಲೆಗೆ ಮಾತ್ರ ನಿರ್ಮಿತವಾದ್ದಲ್ಲ. ಎಲ್ಲಾಕಡೆಯಲ್ಲಿಯೂ ಗುರುಶಿಷ್ಯರು ಒಬ್ಬರಿಗೊಬ್ಬರು ಸಹಾಯಕರಾಗಿರಬೇಕು. ವಿದ್ಯಾರ್ಥಿಗಳು ಉಪಾಧ್ಯಾಯರೊಂದಿಗೆ ಸೇರೋಣದರಿಂದ ವಿದ್ಯಾರ್ಥಿಗಳ ಗುಣಾವಗುಣಗಳು ಗುರುಗಳ ಗೋಚರಕ್ಕೆ ಬಂದು ಅವರು ತಕ್ಕ ಮಾರ್ಗಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಅವರ ಕಷ್ಟವನ್ನು ಹೋಗಲಾಡಿಸುವುದಕ್ಕೆ ಸುಲಭವಾಗುತ್ತದೆ. ಈ ರೀತಿಯಲ್ಲಿ ಪರಸ್ಪರ ಸಹಾಯದಿಂದ ಗುರುಶಿಷ್ಯರಿಗೂ, ಪಾಠಶಾಲೆಗೂ, ಪರಿಣಾಮದಲ್ಲಿ ಜನಾಂಗಕ್ಕೂ ಸಹ ಅನೇಕಾನೇಕ ಪ್ರಯೋಜನವಿರುವುದೆಂಬುದು ಪರಸ್ಪರ ಸಹಾಯವನ್ನು ಪ್ರಚಾರಗೊಳಿಸಿದ ಹೊರತು ತಿಳಿಯುವುದು ಕಷ್ಟ.

10. ಗುರುಶಿಷ್ಯರಲ್ಲಿ ಮಾತ್ರವೇ ಅಲ್ಲದೆ ಉಪಾಧ್ಯಾಯ ಉಪಾಧ್ಯಾಯರಲ್ಲೂ ಸಹ ಈ ಪರಸ್ಪರ ಸಹಾಯವಿರಬೇಕು. ಹಾಗಿದ್ದಲ್ಲಿ ಅವರ ಕಾರ್ಯಗಳು,

ಸುಲಭವಾಗಿ, ತಮಗೂ ತಮ್ಮ ವಿದ್ಯಾರ್ಥಿಗಳಿಗೂ ಸುಖವನ್ನುಂಟುಮಾಡುವುದಕ್ಕೆ ಸಹಾಯಕಾರಿಗಳಾಗುತ್ತವೆ.

ಈಚೆಗೆ ಈ ವಿಧವಾದ ಪರಸ್ಪರ ಸಹಾಯಜ್ಞಾನ ಮತ್ತು ಅದರ ಉಪಯೋಗಗಳು ನಮ್ಮ ದೇಶೀಯರಿಗೆ ತಿಳಿದುಬರುತ್ತಾ ಇವೆ ಎಂಬ ಅಂಶವು ಪ್ರತಿನಿತ್ಯವೂ ನಡೆಯುತ್ತಿರುವ ಸಂಘಗಳಿಂದಲೂ, ಜನರ ಪರಸ್ಪರ ಅನುರಾಗದಿಂದಲೂ, ವರ್ತಮಾನ ಪತ್ರಿಕೆಗಳಿಂದಲೂ ತಿಳಿದುಬರುತ್ತದೆ.

ವಿದ್ಯಾರ್ಥಿ.

ಪ್ರಶ್ನಪತ್ರಿಕೆ.

V. ತರಗತಿ.

ಗಣಿತ. (ಕಾಲ 2 ಘಂಟೆ)

I. (a) ಅಪವರ್ತನ, ಸಾಮಾನ್ಯಾಪವರ್ತ್ಯ, ದಶಮಾಂಶ ಭಿನ್ನರಾಶಿ ಎಂದರೇನು? ಉದಾಹರಣೆಗಳೊಡನೆ ತಿಳಿಸಿ.

(b) $\dfrac{.004 \div .0005}{2.432 + 3.576}$ (ಭಿನ್ನರಾಶಿ ಮಾಡಿಕೊಳ್ಳದೆ ಮಾಡಬೇಕು).

(c) $\dfrac{1\frac{1}{2} + 2\frac{1}{3}}{2\frac{1}{3} + 3\frac{1}{4}} \div \dfrac{\frac{5}{7}}{1 + \dfrac{1}{2 + \dfrac{1}{2 + \frac{1}{3}}}}$ ಇದನ್ನು ಸುಲಭರೂಪದಲ್ಲಿ ಮಾಡಿರಿ.

II. 16 ಒಲೆಗಳು 1 ದಿನಕ್ಕೆ 10 ಗಂಟೆಮೇರೆ ಕೆಲಸಮಾಡಿ 6 ಟನ್ ಇಟ್ಟಿಗೆಗಳನ್ನು 15 ದಿನಗಳಲ್ಲಿ ಸುಟ್ಟರೆ 12 ಒಲೆಗಳು 1912 ನೇ ಇಸವಿ ಜನವರಿ 1 ನೇ ತಾ|| ನಲ್ಲಿ ಆರಂಭಿಸಿ ದಿನ 1 ಕ್ಕೆ 8 ಗಂಟೆ ಕೆಲಸಮಾಡಿ 24 ಟನ್ ಇಟ್ಟಿಗೆಗಳನ್ನು ಯಾವ ದಿವಸ ಪೂರ್ತಿಯಾಗಿ ಸುಡುವುವು? (ಅನುಪಾತ ರೀತಿಯಲ್ಲಿ ಮಾಡಿ)

III. 9 ಕೋಳಿಗಳಿಗೆ 5 ಬಾತುಗಳು ಬರುವುವು. 7 ಬಾತುಗಳಿಗೆ 4 ಕುರಿಗಳು ಬರುವುವು. 9 ಕುರಿಗಳಿಗೆ 7 ಸೀಮೆಯ ಕೋಳಿಗಳು ಬರುವುವು. ಒಂದು ಸೀಮೆಯಕೋಳಿಗೆ £ 0-13-6 ಬೆಲೆಯಾದರೆ 1 ಕೋಳಿಗೆಷ್ಟು ?

(ಈ ಲೆಕ್ಕವನ್ನು ಶೃಂಖಲಾಪದ್ಧತಿ (Chain rule) ಯಲ್ಲಿ ಮಾಡಿ)

IV. A ಯು B ಗೆ 1 ಕುದುರೆಯನ್ನು 50% ಲಾಭಕ್ಕೆ ಮಾರಿದನು. ಆದರೆ B ಯು ತಾನು ಗೊತ್ತುಮಾಡಿಕೊಂಡ ಹಣದಲ್ಲಿ ಅರ್ಧಮಾತ್ರ A ಗೆ ಕೊಟ್ಟರೆ A ಗೆ ಶೇ, ನಷ್ಟವೇನು ?

V. ಒಬ್ಬ ಪೋಲೀಸಿನವನು 100 ಗಜ ಮುಂದಿರುವ ಕಳ್ಳನನ್ನು ಹಿಡಿಯಲು ಹೊರಡುವನು. ಪೋಲೀಸಿನವನು 6 ನಿಮಿಷಕ್ಕೊಂದು ಮೈಲಿಯೂ, ಕಳ್ಳನು 10 ನಿಮಿಷಕ್ಕೊಂದು ಮೈಲಿಯೂ ಹೋಗುತ್ತಿದ್ದರೆ ಪೋಲೀಸಿನವನ ಉದ್ದೇಶವು ಎಲ್ಲಿ ಯಾವಾಗ ನೆರವೇರುವುದು ?

VI. 1 ವಸ್ತುವಿಗೆ £ 4-17-6 ಆದರೆ 675 ವಸ್ತುಗಳ ಬೆಲೆಯನ್ನು ರೂಢಿಗಣಿತ ಮಾರ್ಗದಲ್ಲಿ ಮಾಡಿ ತಿಳಿಸಿ.

VII. ಒಬ್ಬ ಕೂಲಿಯವನು 20 ಗಜ ಉದ್ದ 18 ಗಜ ಅಗಲದ ರೂಮಿಗೆ 1 ಚ.ಗಜಕ್ಕೆ 4 ಆಣೆಯಂತೆ ಗಾರೆಹಾಕಿ ಬಂದ ಹಣವನ್ನು 5% ರಂತೆ ಬಡ್ಡಿಗೆ ಹಾಕುತ್ತಾನೆ. 3 ವರ್ಷಕ್ಕೆ ಬಂದ ಬಡ್ಡಿಯಲ್ಲಿ 1 ರೂ.ಗೆ 4 ಕಾಸಿನಂತೆ ತೆರಿಗೆ ಕೊಟ್ಟು ಉಳಿದ ಹಣಕ್ಕೆ ಒಂದು ಪೆಟ್ಟಿಗೆಯನ್ನು ಕೊಂಡರೆ ಆ ಪೆಟ್ಟಿಗೆಯ ಬೆಲೆಯೇನು ? ಅದನ್ನು ಎಷ್ಟಕ್ಕೆ ಮಾರಿದರೆ 4% ಲಾಭ ಬರುವುದು ?

ಮ್ಯಾಜಿಕ್ ಲ್ಯಾಂಟ್ರ್ನ್ ಮೂಲಕ ವಿದ್ಯಾಭ್ಯಾಸ ಮಾಡಿಸುವುದು.

ಈಚೆಗೆ ಮ್ಯಾಜಿಕ್‌ಲ್ಯಾಂಟ್ರ್ನ್ ಎಂಬ ಯಂತ್ರವು ಬಹಳ ಪ್ರಚಾರಕ್ಕೆ ಬಂದಿರುತ್ತದೆಯಾದುದರಿಂದ ಆ ಯಂತ್ರದ ವಿಷಯವಾಗಿ ಹೆಚ್ಚಾಗಿ ಹೇಳಬೇಕಾದ್ದು ಅವಶ್ಯಕವಿರುವುದಿಲ್ಲ. ನಾವು ಅದರ ಉಪಯೋಗಗಳನ್ನು ತಿಳಿಯುವುದು ಮುಖ್ಯವಾಗಿರುತ್ತದೆ. ಮ್ಯಾಜಿಕ್‌ಲ್ಯಾಂಟ್ರ್ನ್ ಎಲ್ಲರಿಗೂ ಉಪಯೋಗಕರವಾದುದು. ಆದರೆ ವಿದ್ಯಾಭ್ಯಾಸಮಾಡಿಸುವುದರಲ್ಲಿ ಇದರಿಂದ ಯಾವ ಪ್ರಯೋಜನಗಳಿವೆ ಎಂಬುದನ್ನು ವಿಚಾರಿಸೋಣ.

ಚಿಕ್ಕಚಿಕ್ಕ ಮಕ್ಕಳಿಗೆ ಪಾಠಹೇಳುವುದು ಬಹಳ ಕಷ್ಟ. ವಯಸ್ಸಾದ ಬಾಲಕರಿಗೆ ಹೇಳುವಂತೆ ಮಕ್ಕಳಿಗೆ ಪಾಠಹೇಳುವುದು ಸುಲಭವಲ್ಲ. ಹೆಚ್ಚಾದ ಮತ್ತು ಕಷ್ಟವಾದ ವಿಷಯಗಳನ್ನು ಅವರು ಗ್ರಹಿಸಲು ಶಕ್ತರಲ್ಲ. ಬರೀಬಾಯಿಯಿಂದ ಮಾತ್ರ ಹೇಳಿದುದನ್ನು ಅವರು ತಿಳಿದುಕೊಳ್ಳಲಾರರು. ಆದುದರಿಂದಲೇ ಮಕ್ಕಳಿಗೆ ಕಿಂಡರ್‌ಗಾರ್ಟನ್ ಕ್ರಮದಲ್ಲಿ ವಿಷಯಗಳನ್ನು ತಿಳಿಸಬೇಕೆಂಬುದು. ಅವರ ಬುದ್ಧಿಯು ತುಂಬ ಸೂಕ್ಷ್ಮವಾಗಿರುತ್ತದೆ. ಸರಿಯಾದ ವಿಧದಲ್ಲಿ ಅವರನ್ನು ಶಿಕ್ಷಿಸದಪಕ್ಷದಲ್ಲಿ ಅವರು ಮುಂದೆ ಕಷ್ಟಕ್ಕೆ ಗುರಿಯಾಗುತ್ತಾರೆ. ಅವರಿಗೆ ಸುಲಭವಾಗಿಯೂ, (ಕಷ್ಟವೆಂದು ತೋರದಂತೆಯೂ), ಬೇಸರತೋರದಂತೆಯೂ ಚಿತ್ರ ಮುಂತಾದವುಗಳೊಡನೆ ಪಾಠ ಹೇಳಬೇಕು. ಹೀಗೆ ಮಾಡಿದಲ್ಲಿ ಅವರ ಸರ್ವೇಂದ್ರಿಯಗಳಿಗೂ ಕೆಲಸ ದೊರೆತು ಅವುಗಳ ಎಲ್ಲ ಶಕ್ತಿಗಳೂ ಬೆಳೆದು ಹೆಚ್ಚು ಜ್ಞಾನಾರ್ಜನೆಗೆ ಅವಕಾಶ ಉಂಟಾಗುವುದು.

ಚಿಕ್ಕ ಮಕ್ಕಳಿಗೆ ಚಿತ್ರಪಟಗಳನ್ನು ನೋಡಲು ತುಂಬಾ ಕುತೂಹಲ. ಚಿತ್ರಗಳ ಮೂಲಕ ನೋಡಿದ ವಿಷಯವನ್ನು ಚೆನ್ನಾಗಿ ಗ್ರಹಿಸುತ್ತಾರೆ, ತುಂಬ ದಿನಗಳವರೆಗೂ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಇದು ಸಾಮಾನ್ಯವಾಗಿ ನಮ್ಮಗಳಿಗೆಲ್ಲ ತಿಳಿದಿದೆ. ಆದುದರಿಂದ ಮಕ್ಕಳಿಗೆ ಬಹು ಜಾಗರೂಕರಾಗಿ ಚಿತ್ರ ಮುಂತಾದವುಗಳ

ಸಹಿತ ಪಾಠ ಹೇಳಬೇಕು. ಈಗ್ಗೆ ಸ್ವಲ್ಪದಿನಗಳ ಹಿಂದೆ 'ಮಾಂಟೆಸೋರಿ' ಎಂಬು ವರು ಈತೆರದ ವಿದ್ಯಾಭ್ಯಾಸಕ್ರಮವನ್ನು ಕುರಿತು ವಿಶೇಷವಾಗಿ ಬರೆದಿರುತ್ತಾರೆ. ಯೂರೋಪ್ ಮತ್ತು ಅಮೇರಿಕಾ ಖಂಡಗಳಲ್ಲಿ ಈ ಕ್ರಮವು ವಿಶೇಷ ಪ್ರಚಾರಕ್ಕೆ ಬರುತ್ತಾ ಇದೆ.

ವರ್ಷಕ್ಕೆ ಒಂದೆರಡಾವರ್ತಿ ಕೆಲವು ಜನರು ಜೀವನೋಪಾಯಕ್ಕಾಗಿ ಮ್ಯಾಜಿಕ್‌ಲ್ಯಾಂಟ್ರ್ನ (ಲ್ಯಾಂಟರ್ನ) ಗಳನ್ನು ತೆಗೆದುಕೊಂಡು ಊರಿಂದೂರಿಗೆ ಬಂದು ಒಂದೆರಡಾಣೆಗಳಿಗೆ ಕೆಲವು ಚಿತ್ರಗಳನ್ನು ತೋರಿಸುತ್ತಾರೆ. ಇವರು ತೋರಿಸುವ ಚಿತ್ರಗಳೆಲ್ಲಾ ವಿನೋದಕರಗಳಾಗಿಯೂ ನಗುವನ್ನುಂಟುಮಾಡುವುವುಗಳಾಗಿಯೂ ಇರುತ್ತವೆಯೇ ಹೊರತು ಉಪಯುಕ್ತಗಳಾಗಿರುವುವು ಕಡಿಮೆ. ತೋರಿಸಿದ ಪಠಗಳಿಂದ ಮಕ್ಕಳು ಹೊಸವಿಷಯುಗಳನ್ನು ಕಲಿಯಲು ಈ ಎರಡು ಕಾರಣಗಳಿಂದ ಅವಕಾಶವಿರುವುದಿಲ್ಲ. ಸರಿಯಾದ ಪಠಗಳನ್ನು ತೋರಿಸದೆ ಇರುವುದೊಂದು ಮತ್ತು (ಪಠಗಳ ವಿಷಯುವಾಗಿ) (ತೋರಿಸುವ ಜನರು) ಉಪನ್ಯಾಸಮಾಡಲು ಅರ್ಹರಾಗಿರದೇ ಇರುವುದು ಮತ್ತೊಂದು. ಈ ಯಂತ್ರದಿಂದ ಉಪಯೋಗ ಹೊಂದಬೇಕಾದರೆ ಪ್ರತಿಯೊಂದು ಪಾಠಶಾಲೆಯಲ್ಲಿಯೂ ಒಂದೊಂದನ್ನು ಇಟ್ಟುಕೊಂಡು ಆಗಿಂದಾಗ್ಗೆ ಅಂದಂದಿನ ಪಾಠಕ್ಕೆ ಬೇಕಾದ ಚಿತ್ರಗಳನ್ನು ತೋರಿಸಿ ಬಾಲಕರಿಗೆ ಚೆನ್ನಾಗಿ ತಿಳಿಯುವಂತೆ ಸುಲಭವಾಗಿ ವಿವರಿಸಬೇಕು. ಮ್ಯಾಜಿಕ್‌ಲ್ಯಾಂಟ್ರ್ನಗಳ ಮೂಲಕ ಪಾಠ ಹೇಳುವುದು ಸುಲಭವೆಂದೂ, ವಿದ್ಯಾರ್ಥಿಗಳು, ಮುಖ್ಯವಾಗಿ ಚಿಕ್ಕಮಕ್ಕಳು ಪಾಠಗಳನ್ನು ಚೆನ್ನಾಗಿ ಗ್ರಹಿಸುತ್ತಾರೆಂದೂ ಈ ಯಂತ್ರಗಳನ್ನು ಉಪಯೋಗಿಸಿದವರಲ್ಲನೇಕರು ಅಭಿಪ್ರಾಯಪಟ್ಟಿರುತ್ತಾರೆ. ಮ್ಯಾಜಿಕ್‌ಲ್ಯಾಂಟ್ರ್ನ ಮೂಲಕ ಎಲ್ಲಾ ಪಾಠವನ್ನೂ ಅಭ್ಯಾಸಮಾಡಿಸಬಹುದು. ಅದರಲ್ಲಿಯೂ ಭೂಗೋಳ ಚರಿತ್ರೆ ಮುಂತಾದವುಗಳನ್ನು ಕಲಿಸುವುದರಲ್ಲಿ ಇದರ ಉಪಯೋಗವು ಹೇರಳವಾಗಿರುತ್ತದೆ.

ಉದಾಹರಣೆ:—ಒಬ್ಬ ಚಿಕ್ಕ ಬಾಲಕನಿಗೆ ಗ್ರಹಣವು ಹೇಗೆ ಉಂಟಾಗುತ್ತದೆ, ಭೂಮಿಯು ಗುಂಡಾಗಿದೆ, ಎಂಬ ವಿಷಯಗಳನ್ನು ತಿಳಿಸಬೇಕೆಂದು ಊಹಿಸೋಣ. ಭೂಗೋಳದಲ್ಲಿ "ಭೂಮಿಯ ನೆರಳು ಚಂದ್ರನಮೇಲೆ ಬಿದ್ದರೆ ಚಂದ್ರ

ಗ್ರಹಣವಾಗುತ್ತದೆ ಚಂದ್ರನ ನೆರಳು ಭೂಮಿಯ ಮೇಲೆ ಬಿದ್ದರೆ ಸೂರ್ಯಗ್ರಹಣವಾಗುತ್ತದೆ, ಸಮುದ್ರದ ದಡದಲ್ಲಿ ನಿಂತು ದೂರದಲ್ಲಿ ಬರುವ ಹಡಗನ್ನು ನೋಡಿದರೆ ಮೊದಲು ಬುಡ ಮಾತ್ರ ಕಾಣುತ್ತದೆ, ಅನಂತರ ಮಧ್ಯಭಾಗ ಕಾಣುತ್ತದೆ, ಆಮೇಲೆ ಪೂರ್ತಿಯಾಗಿ ಕಾಣುತ್ತದೆ'' ಎಂದು ವಾಚಾ ಹೇಳಿದರೆ ಅವನು ಈ ವಿಷಯಗಳನ್ನು ತಿಳಿದುಕೊಳ್ಳುವುದು ಕಷ್ಟ. ಬೋರ್ಡಿನಮೇಲೆ ಚಿತ್ರವನ್ನು ಬರೆದು ವಿವರಿಸಿದರೆ ಉತ್ತಮ. ಆದರೆ ಚಿತ್ರದಲ್ಲಿಯೂ ಭೂಮಿ ಸೂರ್ಯಚಂದ್ರರ ಚಲನೆಗಳನ್ನು ತೋರ್ಪಡಿಸುವುದು ಕಷ್ಟ, ಇದನ್ನೆಲ್ಲಾ ಮ್ಯಾಜಿಕ್‌ಲ್ಯಾಂಟರ್ನ್ ಮೂಲಕ ನಿಜವೆನ್ನುವಂತೆ ಸುಲಭವಾಗಿ ವಿವರಿಸಬಹುದು. (ಸಮುದ್ರ, ಹಡಗು ಇವು ಚಲಿಸುವುದು ತೋರಿಸುವುದಕ್ಕೆ ಆಗುವುದಿಲ್ಲ.) ಈರೀತಿಯಾಗಿ ವಾರಕ್ಕೊಂದೆರಡಾವರ್ತಿ ಮ್ಯಾಜಿಕ್‌ಲ್ಯಾಂಟರ್ನ್ ಪ್ರದರ್ಶನದಿಂದ ಸುಲಭವಾಗಿ ಪಾಠಹೇಳಿ ಗುರುಶಿಷ್ಯರಿಬ್ಬರೂ ಶ್ರಮವನ್ನು ಕಡಿಮೆಮಾಡಿಕೊಳ್ಳಬಹುದು. ಈ ಯಂತ್ರವು ಇಷ್ಟು ಉಪಯೋಗಕರವಾದುದೆಂದು ತಿಳಿದುಬಂದಿದ್ದರೂ ಇದರ ಉಪಯೋಗವನ್ನು ನಮ್ಮ ದೇಶದವರು ಅಷ್ಟಾಗಿ ಪಡೆಯುತ್ತಾ ಇಲ್ಲದಿರುವುದು ಶೋಚನೀಯವಾಗಿದೆ. ಮ್ಯಾಜಿಕ್‌ಲ್ಯಾಂಟರ್ನ್ ಬಹಳ ಸುಲಭಕ್ರಯಕ್ಕೆ ದೊರೆಯುತ್ತದೆ. ಅದರಿಂದ ಉಂಟಾಗುವ ಪ್ರಯೋಜನಗಳನ್ನು ಯೋಚಿಸಿದರೆ ನಾವು ಕೊಡುವ ಬೆಲೆ ತುಂಬಾ ಕಡಿಮೆ. ಈ ಯಂತ್ರದ ರಚನೆಯು ಸುಲಭವಾಗಿರುವುದರಿಂದ ಚಿಕ್ಕ ಮಕ್ಕಳು ಸಹ ಪಟಗಳನ್ನು ತೋರಿಸಬಹುದು. ಬೇಕಾದಂಥಾ ಪಟಗಳೂ ಯಂತ್ರದ ಜತೆಯಲ್ಲಿಯೇ ಸುಲಭಕ್ರಯಕ್ಕೆ ದೊರೆಯುತ್ತವೆ.

ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ವಿಷಯವಾಗಿ ಎಲ್ಲ ಸಹಾಯವನ್ನೂ ಸರ್ಕಾರದವರೇ ಮಾಡಬೇಕೆಂಬ ಅಭಿಪ್ರಾಯವು ಅನೇಕ ಜನರಿಗೆ ಇದೆ. ಇದು ತಪ್ಪು. ಸರ್ಕಾರದವರಿಗೆ ಅನೇಕಾನೇಕವಾಗಿ ಇಲಾಖೆಗಳಿವೆ. ಆದುದರಿಂದ ಎಲ್ಲ ಸಹಾಯವನ್ನೂ ಅವರೇ ಮಾಡಿಯಿರುವುದಿಲ್ಲ. ಪ್ರಜೆಗಳು ಒಗ್ಗಟ್ಟಾಗಿ ಪರಸ್ಪರ ಸಹಾಯದಿಂದ ಕೆಲಸ ಮಾಡಬೇಕು. ಅವರಿಗೆ ಮೀರಿದುದನ್ನು ಸರಕಾರದವರು ಮಾಡುತ್ತಾರೆ. ಪ್ರತಿಪಾಠಶಾಲೆಯ ಉಪಾಧ್ಯಾಯರೂ ಸ್ವಲ್ಪ ದ್ರವ್ಯವನ್ನು ಸೇರಿಸಿ

ವಿದ್ಯಾರ್ಥಿಗಳ ತಂದೆತಾಯಿಗಳಿಗೂ ಈ ಯಂತ್ರದಿಂದ ಆಗುವ ಪ್ರಯೋಜನವನ್ನು ತಿಳಿಸಿ ಅವರ ಸಹಾಯವನ್ನೂ ಪಡೆಯಬಹುದು. ದೇಶಾಭಿಮಾನಿಗಳಾದ ಐಶ್ವರ್ಯವಂತರೂ ಸಹ ಸಹಾಯಮಾಡಲು ಸಿದ್ಧರಾಗಿರುತ್ತಾರೆ. ಉತ್ಸಾಹಸಂಪನ್ನರಾದ ಉಪಾಧ್ಯಾಯರುಗಳಿಂದಲೇ ನಮ್ಮ ದೇಶವು ಉನ್ನತಸ್ಥಿತಿಗೆ ಬರಬೇಕಾದುದರಿಂದ ಅವರೇ ಈ ಕಾರ್ಯಗಳನ್ನು ಮೊದಲು ಮಾಡಬೇಕು. ನಮ್ಮ ಮೈಸೂರು ಸರ್ಕಾರದವರು ವಿದ್ಯಾಭ್ಯಾಸದ ವಿಷಯಗಳಲ್ಲಿ ಉತ್ಸಾಹಶಾಲಿಗಳಾದವರಿಗೆ ತಕ್ಕ ಸಹಾಯವನ್ನು ಮಾಡಲು ಸಿದ್ಧರಾಗಿರುತ್ತಾರೆ. ಪರಸ್ಪರ ಸಹಾಯದಿಂದ ಅನೇಕ ಕಠಿಣವಾದ ಕೆಲಸಗಳೂ ಸುಲಭವಾಗಿ ಜರಗುತ್ತವೆ.

ಯೂರೋಪ್, ಅಮೇರಿಕಾ ಈ ದೇಶಗಳವರು ಮ್ಯಾಜಿಕ್ ಲ್ಯಾಂಟ್ರ್ನ್ ಯಂತ್ರದ ಉಪಯೋಗವನ್ನು ತಿಳಿದವರಾಗಿ, ಪ್ರತಿ ಪಾಠಶಾಲೆಯಲ್ಲಿಯೂ ಉಪಯೋಗಿಸಿ ಅಧಿಕ ಪ್ರಯೋಜನವನ್ನು ಹೊಂದುತ್ತಾ ಇದ್ದಾರೆಂದು ತಿಳಿದುಬರುತ್ತದೆ. ಇದೇ ರೀತಿಯಲ್ಲಿ ನಮ್ಮ ದೇಶಬಾಂಧವರಾದ ಉಪಾಧ್ಯಾಯರುಗಳೂ ಸಹ ತಮ್ಮ ಕಾರ್ಯದಲ್ಲಿ ಆಸಕ್ತರಾಗಿ ದೇಶೋನ್ನತಿಗೆ ಸಹಾಯರಾಗಬೇಕೆಂದು ಕೋರುತ್ತೇನೆ.

ಸ್ಕೂಲ್ ಡಿಸಿಪ್ಲಿನ್ (ತಿದ್ದುವಿಕೆ).

ತಿದ್ದುವಿಕೆಯ ಉದ್ದೇಶವು ಸಾಮಾನ್ಯವಾಗಿ ಎರಡೆಂದು ಹೇಳಬಹುದು.

(1) ಪಾಠಶಾಲೆಯಲ್ಲಿ ನಡೆಯುವ ಬೋಧನೆಯ ಕೆಲಸವು ಯಥಾಕ್ರಮವಾಗಿ ನಡೆಯುವುದಕ್ಕೆ ಬೇಕಾದ ಅನುಕೂಲ್ಯವನ್ನು ಸಂಪಾದಿಸುವಿಕೆ. ಅಂದರೆ ಗದ್ದಲವಿಲ್ಲದಿರುವುದು, ಹೇಳಿದ ಕೆಲಸವನ್ನು ಮಕ್ಕಳು ಮಾಡುವುದು ಇಂತಹ ಅನುಕೂಲ್ಯವನ್ನು ಹೊಂದುವುದು.

(2) ಮಕ್ಕಳು ದೊಡ್ಡವರಾದಮೇಲೆ ಲೋಕವ್ಯವಹಾರಕ್ಕೆ ಸೇರುವಾಗ ಗುಣವಂತರಾಗಿರುವಂತೆ ಮಾಡುವುದು.

ಈ ಎರಡನೆಯ ಉದ್ದೇಶದಿಂದ ಮಾಡುವ ಉಪಾಧ್ಯಾಯರ ಕೆಲಸವನ್ನು ನೀತ್ಯನುಶಾಸನವೆಂದು ಹೇಳುವುದುಂಟು. ನೀತ್ಯನುಶಾಸನವೆಂದರೆ ಮಕ್ಕಳಲ್ಲಿರುವ ದುರ್ಗುಣಗಳನ್ನು ಉತ್ಪಾಟನೆಮಾಡಿ ಅವರಲ್ಲಿ ಸುಗುಣಗಳನ್ನು ನೆಲೆಯಾಗಿ ನಿಲ್ಲಿಸುವುದು.

ಪಾಠಕಾಲದಲ್ಲಿ ತಿದ್ದುವಿಕೆಯನ್ನು ಸರಿಯಾಗಿ ಸಂಪಾದಿಸಿ ಮಕ್ಕಳನ್ನು ನೀತಿವಂತರನ್ನಾಗಿ ಮಾಡಬೇಕಾದರೆ ಉಪಾಧ್ಯಾಯರಲ್ಲಿ ಕೆಲವು ವಿಶೇಷ ಲಕ್ಷಣಗಳಿರಬೇಕು.

(i) ತಾವು ಪಾಠ ಹೇಳತಕ್ಕ ವಿಷಯದಲ್ಲಿ ತಲಸ್ಪರ್ಶಿಯಾದ ಜ್ಞಾನವಿರಬೇಕು. ಇದರಿಂದ ಮಕ್ಕಳು ಉಪಾಧ್ಯಾಯರನ್ನು ಗೌರವಿಸುವಂತಾಗುವುದು.

(ii) ಉಪಾಧ್ಯಾಯರು ದಯಾಳುವಾಗಿರಬೇಕು. ಹೀಗಿದ್ದರೆ ಮಕ್ಕಳಿಗೂ ತಮಗೂ ಪರಸ್ಪರ ಅನುಕೂಲ್ಯಹುಟ್ಟಿ ತಿದ್ದುವಿಕೆಯ ಕೆಲಸವು ಸುಲಭವಾಗುವುದು.

(iii) ಉಪಾಧ್ಯಾಯರು ನ್ಯಾಯಪರರಾಗಿರಬೇಕು. ಹೀಗಿದ್ದರೆ ಉಪಾಧ್ಯಾಯರಲ್ಲಿ ಮಕ್ಕಳಿಗೆ ನಂಬಿಕೆಹುಟ್ಟಿ ಅವರ ವಿಷಯದಲ್ಲಿ ಏಕರೀತಿಯಾಗಿ ವಿಧೇಯರಾಗಿರುವರು. ಅಲ್ಲದೆ ಅವರು ಮಾಡುವ ದಂಡನೆಗಳಿಗೆ ಆಕ್ಷೇಪಿಸದೆಯೂ ಇರುವರು.

(iv) ಉಪಾಧ್ಯಾಯರು ಖಂಡಿತವಾಗಿರಬೇಕು. ಹೀಗಿದ್ದರೆ ಅವರು ಹೇಳಿದ ಮಾತನ್ನೂ ಕೊಟ್ಟ ಹುಕುಂಮ್ಮನ್ನೂ ಮಕ್ಕಳು ಥಟ್ಟನೆ ನಡೆಸುವರು.

(v) ತಾವು ಉಪದೇಶಮಾಡುವ ಗುಣಗಳಿಗೆಲ್ಲಾ ಉಪಾಧ್ಯಾಯರು ಮಾದರಿಯಾಗಿರಬೇಕು. ಚಿಕ್ಕತನದಲ್ಲಿ ಮಕ್ಕಳಿಗೆ ಅನುಕರಣಶಕ್ತಿಯು ಬಲವಾಗಿರುವುದರಿಂದ ಸಂಸರ್ಗದಿಂದ ಗುಣದೋಷಗಳು ತಾವಾಗಿಯೇ ಬಂದು ಬಿಡುವುವು. ಆದ್ದರಿಂದ ಉಪಾಧ್ಯಾಯರಲ್ಲಿ ಸುಗುಣಗಳು ತುಂಬಿದ್ದರೆ ವಿಶೇಷ ಯತ್ನವಿಲ್ಲದೆ ಮಕ್ಕಳು ನೀತಿವಂತರಾಗುವುದಕ್ಕೆ ಅವಕಾಶ ದೊರೆಯುವುದು. ಅಲ್ಲದೆ ಗುಣವಂತನಾದ ಉಪಾಧ್ಯಾಯನನ್ನು ಮಕ್ಕಳೂ ಅವರ ತಾಯಿತಂದೆಗಳೂ ಗೌರವಿಸುವುದರಿಂದ ಅವರ ಕೆಲಸವೂ ತಿದ್ದುವಿಕೆಯ ಕೆಲಸವೂ ಸುಲಭವಾಗಿ ನಡೆಯುವುದು.

(vi) ಉಪಾಧ್ಯಾಯರಿಗೆ ಅಧಿಕಾರವನ್ನು ಚಲಾಯಿಸುವುದಕ್ಕೆ ತಕ್ಕ ಆಕಾರವಿರಬೇಕು. ಇದೇನೋ ಉಪಾಧ್ಯಾಯರ ಇಚ್ಛಾನುಸಾರ ಒರತಕ್ಕದ್ದಲ್ಲ. ಆದ್ದರಿಂದ ಕೆಲವರಿಗೆ ಈ ಅಂಶದಲ್ಲಿ ಕೊರತೆಯಿರಬಹುದು. ಆದರೂ ಇಂತಹ ಆಕಾರವು ತಿದ್ದುವಿಕೆಯನ್ನು ಸಂಪಾದಿಸಲು ಸಹಾಯಮಾಡುವುದೆಂಬುವುದರಲ್ಲಿ ಸಂಶಯವಿಲ್ಲ. ಆದರೆ ಒಟ್ಟಿನಲ್ಲಿ ಉಪಾಧ್ಯಾಯರು ನೋಡುವುದಕ್ಕೆ ಉಪಾಧ್ಯಾಯರಂತೆ ಕಾಣಿಸಿಕೊಳ್ಳಬೇಕು. ಇದರಿಂದ ತಮ್ಮ ಅಪ್ಪಣೆಗಳನ್ನು ಜಾರಿಯಲ್ಲಿ ತರುವುದು ಸುಲಭವಾಗುವುದು.

ಮೇಲಿನ ಅರ್ಥದಲ್ಲಿ ತಿದ್ದುವಿಕೆಯುಂಟಾಗಬೇಕಾದರೆ ಮಕ್ಕಳಲ್ಲಿ ಮುಖ್ಯವಾದ ಕೆಲವು ಸುಗುಣಗಳನ್ನುಂಟುಮಾಡಬೇಕು. ಆ ಗುಣಗಳು ಮಕ್ಕಳಲ್ಲಿ ನೆಲೆಗೊಳ್ಳಬೇಕಾದರೆ, ಮಧ್ಯದಲ್ಲಿ ಬಿಡದೆ ಅನೇಕಕಾಲ ಆ ಗುಣಗಳಿಗನುಸಾರವಾಗಿ ಕೆಲಸಮಾಡಿಸುತ್ತ ಒರಬೇಕು. ಈ ಗುಣಗಳು ಯಾವುವೆಂದರೆ,—

I. ಕ್ರಮ —ಕ್ರಮವೆಂದರೆ ನಡೆಯತಕ್ಕ ಕೆಲಸಗಳೆಲ್ಲಾ ತಕ್ಕ ಕಾಲದಲ್ಲಿ ತಕ್ಕ ಸ್ಥಳದಲ್ಲಿ ನಡೆಯುವುದು. ಇಂತಹ ಪದಾರ್ಥಗಳು ಇಲ್ಲಿಲ್ಲೇ ಇರಬೇಕು, ಇಂತಹ ಕೆಲಸಗಳು ಹೀಗೆಯೇ ನಡೆಯಬೇಕು ಎಂಬ ನಿಯಮಗಳಿರಬೇಕು. ಇದಕ್ಕಾಗಿ ಮುಖ್ಯೋಪಾಧ್ಯಾಯರು ಮೇಲೆ ಹೇಳಿದ ನಿಯಮಗಳನ್ನೆಲ್ಲಾ ಗೊತ್ತುಮಾಡಿ ಆಮೇಲೆ ಅವುಗಳಿಗೆ ಅನುಸಾರವಾಗಿ ಕೆಲಸ ನಡೆಯುವುದೆಂಬುದನ್ನು ಜಾಗರೂಕತೆಯಿಂದ ನೋಡಿಕೊಳ್ಳುತ ಒರಬೇಕು. ಕ್ರಮವಿಲ್ಲದಿದ್ದರೆ ಸ್ಕೂಲಿನಲ್ಲಿ ನಡೆಯುವ ಕೆಲಸದಲ್ಲಿ ಅರ್ಧಪಾಲು ವ್ಯರ್ಥವಾಗುವುದು. ಉಪಾಧ್ಯಾಯರಿಗೆ ಬೇಸರ ಹುಟ್ಟಿ ಕೆಲಸವೇ ಬೇಡವೆಂದು ತೋರುವುದು. ಆದ್ದರಿಂದ ಮೊದಲಿಂದಲೂ ಕ್ರಮವನ್ನು ಹೇಗಾದರೂ ಉಂಟುಮಾಡಬೇಕು.

ಸ್ಕೂಲಿನ ವಿಷಯದಲ್ಲಿ ಕೆಲವು ಕ್ಲೃಪ್ತವಾದ ನಿಯಮಗಳನ್ನು ಮಾಡಿ ಎಲ್ಲರಿಗೂ ಅವುಗಳನ್ನು ತಿಳಿಯಪಡಿಸಿ ಅನಂತರ ಜಾರಿಯಲ್ಲಿ ತರಬೇಕು.

ಅತಿಯಾದ ನಿಯಮಗಳನ್ನುಮಾಡುವುದು ಸರಿಯಲ್ಲ. ನಿಯಮಗಳ ಸಂಖ್ಯೆ ಹೆಚ್ಚಿದರೆ ಅವುಗಳನ್ನೆಲ್ಲಾ ಜ್ಞಾಪಕದಲ್ಲಿಟ್ಟು ನಡೆಸುವುದು ಕಷ್ಟವಾಗುವುದು ಆದ್ದ

ರಿಂದ ಆವಶ್ಯಕವಾಗಿರುವ ವಿಷಯಗಳಲ್ಲಿ ಮಾತ್ರ ನಿಯಮಗಳನ್ನು ಮಾಡಬೇಕು. ಕ್ರಮವೆಂಬುದು ಒಂದು ದಿವಸದಲ್ಲಿ ಸಾಧ್ಯವಾಗತಕ್ಕದಲ್ಲ. ಅನೇಕಕಾಲ ಶ್ರಮಪಟ್ಟು ಉಪಾಧ್ಯಾಯರು ಸ್ಕೂಲಿನಲ್ಲಿ ಈ ಗುಣವನ್ನು ಬಳಕೆ ಮಾಡಬೇಕು.

II. **ಗಮನ**. ಪಾಠಶಾಲೆಯಲ್ಲಿ ಹೇಳಿಕೊಡುವ ಪಾಠಗಳನ್ನು ಕಲಿಯುವುದಕ್ಕೆ ಗಮನವು ಹೇಗೆ ಆವಶ್ಯಕವೋ ಹಾಗೆಯೇ ಮುಂದಕ್ಕೆ ಲೋಕವ್ಯವಹಾರದಲ್ಲಿ ಕೆಲಸಮಾಡಿ ಪೂರ್ಣಫಲವನ್ನು ಪಡೆಯುವುದಕ್ಕೂ ಇದು ಆವಶ್ಯಕ. ಈ ಗಮನವು ಅಂದರೆ ಅವಧಾನವು ಎರಡು ವಿಧವಾಗಿರುವುದು.

(i) ಪದಾರ್ಥ ವೈಚಿತ್ರ್ಯದಿಂದ ಉಂಟಾಗತಕ್ಕ ಅವಧಾನ. ಉದಾಹರಣೆ ಮಗುವು ಗಂಟೆಯ ಶಬ್ದವನ್ನು ಗಮನವಿಟ್ಟು ಕೇಳುವುದು.

(ii) ಉದ್ದೇಶದ ಗೌರವದಿಂದ ಉಂಟಾಗತಕ್ಕ ಅವಧಾನ. ಉದಾಹರಣೆ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಗಮನವಿಟ್ಟು ಉತ್ತರ ಬರೆಯತಕ್ಕದ್ದು.

ಇವುಗಳಲ್ಲಿ ಮೊದಲನೆಯದು ಪರತಂತ್ರವಾದ ಅವಧಾನ. ಎರಡನೆಯದು ಸ್ವತಂತ್ರವಾದುದು.

ಇವೆರಡು ವಿಧವಾದ ಅವಧಾನಗಳಲ್ಲಿ ಚಿಕ್ಕತನಕ್ಕೆ ಪರತಂತ್ರವಾದ ಅವಧಾನವೇ ಸಹಜವಾದುದು. ಆದ್ದರಿಂದ ಮಕ್ಕಳಿಗೆ ಹೃದ್ಯವಾದ ವಿಷಯವನ್ನು ತೆಗೆದುಕೊಂಡು ಬೋಧಿಸಬೇಕೆಂದು ಹೇಳುವರು ಹೀಗೆ ಮಕ್ಕಳಿಗೆ ಹೃದ್ಯವಾದ ವಿಷಯವನ್ನು ತೆಗೆದುಕೊಂಡು ಮನೋಹರವಾದ ದಾರಿಯಲ್ಲಿ ಹೇಳುತ್ತ ಕಾಲಕ್ರಮವಾಗಿ ತಾವೇ ಸ್ವತಂತ್ರವಾಗಿ ಕೆಲಸದಲ್ಲಿ ಅವಧಾನವನ್ನಿಡುವಂತೆ ಮಕ್ಕಳನ್ನು ಮಾಡಿದರೆ, ಅವರಲ್ಲಿ ಅವಧಾನವು ಬೆಳೆಸಂತಾಗುವುದು. ಇದು ಅನೇಕ ಕಾಲದಲ್ಲಿ ನಡೆಯಬೇಕಾದ್ದರಿಂದ ಉಪಾಧ್ಯಾಯರು ತಾಳ್ಮೆಯಿಂದ ಕೆಲಸಮಾಡಬೇಕು.

ಅವಧಾನವನ್ನು ಮಕ್ಕಳಲ್ಲಿ ಹೆಚ್ಚಿಸಬೇಕಾದರೆ ಅವರಿಗೆ ಪದಾರ್ಥದಲ್ಲಿ ಸಹಜವಾಗಿರುವ ಕುತೂಹಲವನ್ನು ಉಪಯೋಗಿಸಿಕೊಳ್ಳಬೇಕು. ಮತ್ತು ಅವರಲ್ಲಿ ಅವಧಾನ ಹುಟ್ಟದಿರುವುದಕ್ಕೆ ಕಾರಣವೇನೆಂದು ಪದೇಪದೇ ಆಲೋಚಿಸುತ್ತಿರಬೇಕು

(1) ದೇಹದಲ್ಲೋ ಬುದ್ಧಿಯಲ್ಲೋ ಆಲಸ್ಯವಿದ್ದರೆ ಗಮನ ಹುಟ್ಟುವುದಿಲ್ಲ.

(2) ಸ್ವಾಭಾವಿಕವಾಗಿ ಮಂದಬುದ್ಧಿಯುಳ್ಳವರು ಹೆಚ್ಚು ಗಮನವನ್ನಿಡ ಲಾರರು.

(3) ಇನ್ನು ಕೆಲವರ ಬುದ್ಧಿಯು ದುಡುಕಾಗಿರುವುದರಿಂದ ಪ್ರಕೃತದಲ್ಲಿ ತಾಳ್ಮೆಯಿಂದ ಗಮನವಿಡದೇ ಹೋಗುವರು.

(4) ಮತ್ತೆ ಕೆಲವರು ಗಮನವಿಡಲು ಸಮರ್ಥರಾದರೂ ಅಪ್ರಕೃತ ವಿಷ ಯವನ್ನೇ ಆಲೋಚಿಸುವ ಸ್ವಭಾವವುಳ್ಳವರಾದ್ದರಿಂದ ಗಮನವಿಡುವುದಿಲ್ಲ. ಇದ ನ್ನೆಲ್ಲಾ ಅರಿತು ಸಂದರ್ಭಾನುಸಾರ ನಡೆಯಬೇಕು.

ಮೇಲೆ ಹೇಳಿದಂತೆ ಮಕ್ಕಳ ದೋಷದಿಂದಲೇ ಗಮನ ಹುಟ್ಟದಿರುವುದೆಂಬುದು ನಿಶ್ಚಯವಿಲ್ಲ. ಉಪಾಧ್ಯಾಯರ ದೋಷಗಳಿಂದಲೂ ಮಕ್ಕಳಿಗೆ ಪಾಠದಲ್ಲಿ ಗಮನ ವುಂಟಾಗುವುದಿಲ್ಲ. ಅವು ಯಾವುವೆಂದರೆ:—

(1) ಉತ್ಸಾಹವಿಲ್ಲದೆ ಪಾಠ ಹೇಳುವುದು.

(2) ಅವಸರವಾಗಿ ಕೂಗುವುದು.

(3) ಉತ್ಸಾಹಕರವಾದ ನಿದರ್ಶನಗಳನ್ನು ಕೊಡದಿರುವುದು.

(4) ತಪ್ಪುದಾರಿಯಲ್ಲಿ ಬೋಧಿಸುವುದು ಇವೆಲ್ಲಾ ಮಕ್ಕಳ ಅಸವಧಾನ ವನ್ನು ಹೆಚ್ಚಿಸುತ್ತವೆ.

ಪಾಠ ದೋಷದಿಂದಲೂ ಮಕ್ಕಳಿಗೆ ಗಮನ ಹುಟ್ಟದಿರುವುದು ಸಹಜ.

(1) ಕಷ್ಟವಾದ ವಿಷಯವನ್ನು ಹುಡುಗರ ಯೋಗ್ಯತೆ ತಿಳಿಯದೆ ಆರಿಸಿ ಕೊಂಡು ಬೋಧಿಸುವುದು.

(2) ಪರಸ್ಪರ ಅಸಂಬದ್ಧವಾದ ವಿಷಯಗಳನ್ನು ಒಂದೇಪಾಠದಲ್ಲಿ ಹೇಳಿ ಕೊಡುವುದು.

(3) ತರಗತಿಯ ಯೋಗ್ಯತೆಗೆ ಸುಲಭವಾದ ವಿಷಯವನ್ನು ಬೋಧಿಸುವುದು.

ಇಂತಹವೆಲ್ಲಾ ಮಕ್ಕಳ ಅಲಕ್ಷ್ಯಕ್ಕೆ ಕಾರಣಗಳು.

ಇವುಗಳ ಜತೆಗೆ ಕೆಲವು ಬಾಹ್ಯಕಾರಣಗಳಿಂದಲೂ ಗಮನ ಕೆಡುವುದು.

❀ ವಿದ್ಯಾದಾಯಿನಿ ❀

(A Monthly Journal.)

ಭಾಗ ೨೨] ಏಪ್ರಿಲ್—೧೯೧೪. [ಸಂಚಿಕೆ ೪

ಮೈಸೂರು ಶ್ರೀಮನ್ಮಹಾರಾಜರವರ ಗೌರ್ನಮೆಂಟ್ ಎ. ವಿ. ಪ್ರಾಕ್ಟಿಸಿಂಗ್ ಸ್ಕೂಲ್—ಕಿಂಡರ್‌ಗಾರ್ಟನ್ ಸೆಕ್ಷನ್.

ಹಿಮಂತಋತುವಿನ ಅಂತ್ಯದಲ್ಲೂ ವಸಂತಋತುವಿನ ಆದಿಯಲ್ಲೂ ಇರುವ ಪ್ರಕೃತಿಸ್ಥಿತಿಯ ವಿಮರ್ಶೆ :—

[I] ಉದ್ದೇಶ :—ಹಿಮಂತಋತುವು ಕಳೆದು ವಸಂತಋತುವು ಬರುವಾಗ ಪ್ರಕೃತಿಯಲ್ಲಿ ಅನೇಕ ಬದಲಾವಣೆಗಳು ಉಂಟಾಗುವುವು. ಈ ಬದಲಾವಣೆಗಳನ್ನು ಮಕ್ಕಳು ಎಚ್ಚರಿಕೆಯಿಂದ ನೋಡುವುದು ಆವಶ್ಯಕವು. ಇದು ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ನಡೆಯುವುದರಿಂದ ಈ ಕಾಲವು ಈ ಪರೀಕ್ಷೆಗೆ ಅನುಕೂಲವಾದುದು. ಈಗ ಮಕ್ಕಳು ಸೂರ್ಯನ ಗತಿಯಲ್ಲುಂಟಾಗತಕ್ಕ ಬದಲಾವಣೆಗಳನ್ನೂ, ಆಕಾಶದಲ್ಲಿ ನಕ್ಷತ್ರಗಳೂ ಚಂದ್ರನೂ ಪ್ರಕಾಶಿಸುವ ರೀತಿಯನ್ನೂ, ಈಕಾಲದಲ್ಲಿ ಕಾಣುವ ಮುಖ್ಯ ನಕ್ಷತ್ರಗಳನ್ನೂ, ಮರಗಿಡಗಳಲ್ಲೂ ಪ್ರಾಣಿಗಳಲ್ಲೂ ಕಾಣಬರುವ ವ್ಯತ್ಯಾಸಗಳನ್ನೂ ತಿಳಿಯಬೇಕು. ಈ ವಿಮರ್ಶೆಯು ಪಾಠಶಾಲೆಯ ಹೊರಗಡೆಯೇ ಮುಖ್ಯವಾಗಿ ನಡೆಯಬೇಕಾದುದು.

[II] ಉಪಾಧ್ಯಾಯರು ಮಾಡಬೇಕಾದ ಸಿದ್ಧತೆ :—ಈ ವಿಮರ್ಶೆಯು ಸಸ್ಯಶಾಸ್ತ್ರ, ಭೌತಿಕಶಾಸ್ತ್ರ, ಮತ್ತು ಭೂಗೋಳಶಾಸ್ತ್ರ, ಇವುಗಳಲ್ಲಿ ಸ್ವಲ್ಪಮಟ್ಟಿಗೆ

ಪರಿಚಯವನ್ನು ಉಪಾಧ್ಯಾಯರಲ್ಲಿ ಅಪೇಕ್ಷಿಸುವುದು. ಇದರ ಜತೆಗೆ ಅವರು ಈ ಕಾಲದಲ್ಲಿ ಪ್ರಕೃತಿಯನ್ನು ಕ್ರಮವಾಗಿ ಪರೀಕ್ಷಿಸುತ ತಮ್ಮ ಅನುಭವವನ್ನೂ ಪಾಠದಲ್ಲಿ ಉಪಯೋಗಿಸಬೇಕು.

[III] ಪರೀಕ್ಷೆ :—(1) ಸೂರ್ಯನ ತಾಪ ಮತ್ತು ಚಲನೆ—ಸೂರ್ಯನು ಈ ಕಾಲದಲ್ಲಿ ಆಗ್ನೇಯದಲ್ಲಿ ಉದಯಿಸುವನು. ಕ್ರಮಕ್ರಮವಾಗಿ ಉತ್ತರಕ್ಕೆ ಬರುತ್ತಿರುವನು. ಇವನ ತಾಪವು ಬಲುಕಡಿಮೆ. ಕ್ರಮವಾಗಿ ಹೆಚ್ಚುತ ಬರುವುದು. ಗಾಳಿಯಲ್ಲಿ ಚಳಿ ಹೆಚ್ಚು. ಸೂರ್ಯನು ಉದಯಿಸುವುದು ನಿಧಾನ. ಅಸ್ತವಾಗುವುದು ಬಲುಬೇಗ. (ಒಂದು ಕಬ್ಬಿಣದ ಸರಳನ್ನು ನೆಲದಲ್ಲಿ ನೆಟ್ಟು ಆಗಾಗ ಅದರ ನೆರಳನ್ನು ಮಕ್ಕಳು ಗುರ್ತಿಸುವಂತೆ ಮಾಡುವುದು).

(2) ಆಕಾಶದ ಸ್ಥಿತಿ :—ಆಕಾಶವು ಈ ಕಾಲದಲ್ಲಿ ಸಾಮಾನ್ಯವಾಗಿ ನಿರ್ಮಲವಾಗಿರುವುದು. ಚಂದ್ರನೂ ನಕ್ಷತ್ರಗಳೂ ಬಹಳ ಚೆನ್ನಾಗಿ ಹೊಳೆಯುತ್ತಿರುವುವು. ಇತರಕಾಲಗಳಲ್ಲಿ ಕಾಣಿಸದ ಕೆಲವು ಸಣ್ಣ ನಕ್ಷತ್ರಗಳು ಕೂಡ ಈಕಾಲದಲ್ಲಿ ಕಾಣಿಸುತ್ತಿರುವುವು. ಬಲುಪ್ರಕಾಶಮಾನವಾದ ನಕ್ಷತ್ರಗಳನ್ನು ಸಾಯಂಕಾಲದವೇಳೆಯಲ್ಲಿಯೂ ಬೆಳಗಿನ ವೇಳೆಯಲ್ಲಿಯೂ ನೋಡಬಹುದು. ಜನವರಿ ತಿಂಗಳಲ್ಲಿ ಒಂದೊಂದು ದಿವಸ ಆಕಾಶವು ಮೋಡಗಳಿಂದ ಮುಚ್ಚಲ್ಪಟ್ಟಿರುವುದು. ಇಂತಹ ದಿನಗಳಲ್ಲಿ ರಾತ್ರಿವೇಳೆ ಚಳಿ ಕಡಮೆ. ಮೋಡವಿಲ್ಲದಿರುವ ದಿವಸಗಳಲ್ಲಿ ಚಳಿ ಹೆಚ್ಚು. (ಒಂದೊಂದುದಿವಸ ಸಾಯಂಕಾಲದವೇಳೆಯಲ್ಲಿ ಬಾಲಕರಿಗೆ ನಕ್ಷತ್ರಗಳನ್ನು ತೋರಿಸಬೇಕು.)

(3) ಮರಗಿಡಗಳ ಸ್ಥಿತಿ :—ಕೆಲವು ಮರಗಳಲ್ಲಿ ಎಲೆಗಳು ಉದುರುತ್ತಿರುವುವು. ಇನ್ನು ಕೆಲವಲ್ಲಿ ಹೊಸ ಎಲೆಗಳು ಚಿಗುರುತ್ತಿರುವುವು. ಕೆಲವು ಮರಗಳಲ್ಲಿ ಹಣ್ಣು ಪಕ್ವವಾಗುತ್ತಿರುವುವು. ಕೆಲವು ಮರಗಳಲ್ಲಿ ಹೊಸ ತೊಗಟೆಗಳು ಬೆಳೆದು ಹಳೇ ತೊಗಟೆಗಳು ಉದುರಿಹೋಗುತ್ತಿರುವುವು. ಮೇಲ್ಗಡೆಯೇ ಬೇರುಬಿಡುವ ಪೈರುಗಳು ಒಣಗಿ ಕೊಯ್ಲಿಗೆ ಬಂದಿರುವುವು. ಆಳಕ್ಕೆ ಬೇರುಬಿಡುವ ಪೈರು

ಗಳು ಇನ್ನೂ ಹಸುರಾಗಿರುವುವು. (ಬಾಲಕರನ್ನು ಆಗಾಗ ಹೊರಗೆ ಕರೆದುಕೊಂಡು ಹೋಗಿ ಮೇಲ್ಕಂಡ ವಿಷಯಗಳನ್ನು ಅನುಭವ ಮಾಡಿಸಬೇಕು.

(4) ಪ್ರಾಣಿಗಳ ಸ್ಥಿತಿ :—ಈ ಕಾಲದಲ್ಲಿ ಕ್ರಿಮಿಗಳು ವಿಶೇಷವಾಗಿಲ್ಲ. ಕೋಶಾವಸ್ಥೆಯಲ್ಲಿ ಗೂಡಿನೊಳಗೆ ಅಡಗಿಕೊಂಡಿರುವುವು. ಇರುವೆಗಳು ತಮ್ಮ ಆಹಾರವನ್ನು ಗೂಡಿನೊಳಗೆ ಶೇಖರಿಸಿಕೊಳ್ಳುತ್ತಿರುವುವು. ಜೇನುಗಳು ತಮ್ಮ ಗೂಡುಗಳಲ್ಲಿದ್ದುಕೊಂಡು ಜೇನನ್ನು ಕುಡಿಯುತ್ತಿರುವುವು. ಕೆಲವು ಪ್ರಾಣಿಗಳು ಮಲಗಿ ವಿಶೇಷವಾಗಿ ನಿದ್ದೆಮಾಡುತ್ತಿರುವುವು. ಸುಗ್ಗಿಯ ಕಾಲಕ್ಕೆ ಸರಿಯಾಗಿ ಅನ್ಯದೇಶಗಳಿಂದ ಪಕ್ಷಿಗಳು (ಮಾಘಪಕ್ಷಿ ಮುಂತಾದವು) ಆಹಾರಕ್ಕಾಗಿ ಗುಂಪುಗುಂಪಾಗಿ ಬರುತ್ತಿರುವುವು. ನಮ್ಮ ಚರ್ಮದ ಮೇಲಣ ಪೊರೆಯು ಒಡೆದು ಉದುರಿ ಹೊಸ ಚರ್ಮವು ಹುಟ್ಟುವುದು. ಮೈ ಬೆವರುವುದು ಕಡಿಮೆ. (ಈ ವಿಷಯಗಳನ್ನು ಮಕ್ಕಳ ಅನುಭವಕ್ಕೆ ತರಬೇಕು.)

ಸಂಖ್ಯೆ	ಈ ವಿಮರ್ಶೆಗೆ ಸಂಬಂಧಪಟ್ಟ ಕೆಲಸಗಳು ಮುಂತಾದುವು.	ವಿವರ.
1	ಚಿತ್ರ	(1) ಸೂರ್ಯ (2) ಮಂಜಿನಿಂದ ಮುಚ್ಚಲ್ಪಟ್ಟಿರುವ ಸೂರ್ಯ (3) ಸೂರ್ಯನ ಗತಿಯನ್ನು ತೋರಿಸುವ ಯಂತ್ರ (4) ಚಂದ್ರ (5) ನಕ್ಷತ್ರಸಮುದಾಯಗಳು (6) ಹಣ್ಣು ಎಲೆಗಳು (7) ಚಿಗುರು ಎಲೆಗಳು (8) ಹಣ್ಣುಗಳು (9) ಧಾನ್ಯದ ತೆನೆಗಳು (10) ಹಸುರಾಗಿರುವ ಪೈರುಗಳ ಕಾಯಿ ಹೂ ಮುಂತಾದವುಗಳು (11) ಹುಳುಗಳ ಗೂಡುಗಳು (12) ಜೇನು ಗೂಡು (13) ಪಕ್ಷಿಗಳ ಗರಿಗಳು.
2	ಪ್ರಾವರ್ಕ ...	(1) ಮುಳುಗುವಾಗ ಕಾಣುವ ಸೂರ್ಯ (2) ಚಂದ್ರ (3) ಹಣ್ಣು ಎಲೆಗಳು (4) ಚಿಗುರೆಲೆಗಳು (5) ಹಣ್ಣುಗಳು (6) ಧಾನ್ಯದ ತೆನೆಗಳು.
	ಮಣ್ಣಿನ ಕೆಲಸ ...	(1) ಎಲೆಗಳು (2) ಹಣ್ಣುಗಳು (3) ಹುಳುಗಳ ಗೂಡುಗಳು.
	ಕಾಗದ ಮಡಿಸುವದು ...	(1) ಅಂಗಿ (2) ಷರಾಯಿ (3) ಚಡ್ಡಿ (4) ಬೂಟ್ಸು (5) ಟೋಪಿ (6) ಗುಡಿಸಲು (7) ಮನೆ (8) ಡೇರೆ (9) ಹೊರ (10) ಗೂಡೆ.
	ಬಳೆಕಡ್ಡಿ ಮತ್ತು ನೂಲಿಡುವದು.	(1) ಸೂರ್ಯ (2) ಚಂದ್ರ (3) ನಕ್ಷತ್ರಸಮುದಾಯಗಳು (4) ಎಲೆಗಳು (5) ಹಣ್ಣುಗಳು.

6	ಮಣಿಪ್ರೋಣಿಸುವುದು ...	(1) ಬಾಗಿಲು ಕಿಟಕಿಗಳ ಪರದೆಗಳಿಗಾಗಿ ಸಾನಾಬಣ್ಣದ ಮಣಿಗಳನ್ನು ಸರಗಳಾಗಿ ಪೋಣಿಸುವುದು.
7	ಕರಣ	(1) ಗುಡಿಸಲು (2) ಮನೆ (3) ಬಿಸಿನೀರು ತುಂಬುವ ತೊಟ್ಟಿ (4) ಒಲೆ.
8	ಪುರಪಾಟ	(1) ಮೈದಾನದಲ್ಲಿರುವ ಮರಗಳಲ್ಲಿ ಕೆಲವು ಎಲೆ ಉದುರುವುದನ್ನೂ ಕೆಲವು ಚಿಗುರುವುದನ್ನೂ ಕೆಲವು ಹಣ್ಣು ಬಿಟ್ಟಿರುವುದನ್ನೂ ತೋರಿಸುವ ಆಟ. (2) ಧಾನ್ಯಗಳನ್ನು ಒಕ್ಕಣೆಮಾಡುವುದನ್ನು ತೋರಿಸುವ ಆಟ.
9	ಆಟ	(1) ಧಾನ್ಯವನ್ನು ಕುಟ್ಟುವುದು.
10	ಕಥೆ	ಒಂಬಯರ್ ಕಥೆ. (ಬೇರೆ ಕಾಗದದಲ್ಲಿ ಬರೆದಿದೆ)
11	ಪದ್ಯಗಳು	(1) ತೆರೆಯದ ಗವಾಕ್ಷಗಳು | ಮುರಿವಗ್ನಿಸೂರ್ಯರುಂ | ಗುರುವಸನಗಳುಮಿಾವುವೆಮಗೆ ಮುದವ || ತರಳ ! ನೋಡಾಗಸದೆ | ನೀರುಮಲವನಾಂತು ಜಂ ! ದಿರನು ಕಂಗೊಳಿಪನೀಶಿಶಿರದಲ್ಲಿ ||

ಕಥೆ.

ಸಂಭಾಷಣೆ:—ಈಗ ರಾತ್ರಿ ಏಳು ಘಂಟೆಯಲ್ಲಿ ಆಕಾಶವನ್ನು ನೋಡಿದರೆ ಹಗಲು ಹತ್ತು ಘಂಟೆ ಸಮಯದಲ್ಲಿ ಸೂರ್ಯನಿರುವ ಸ್ಥಳದಲ್ಲಿ ಓರಿಯನ್ ಎಂಬ ನಕ್ಷತ್ರವಿರುವುದು. ಇದು ಆಯಾಕಾರವುಳ್ಳದಾಗಿರುವುದು. ನಾಲ್ಕು ಮೂಲೆಗಳಲ್ಲೂ ಪ್ರಕಾಶಮಾನವಾದ ಒಂದೊಂದು ನಕ್ಷತ್ರವಿದೆ. ಮಧ್ಯದಲ್ಲಿ ಮೂರು ನಕ್ಷತ್ರಗಳಿವೆ. ಇವುಗಳ ಬಳಿಯಲ್ಲಿ ಸಣ್ಣಗಿರುವ ಬೇರೆ ಮೂರು ನಕ್ಷತ್ರಗಳಿರುವುವು.

ಕಥೆ:—ಗಗನಮಂಡಲವೆಂಬ ದೇಶದಲ್ಲಿ ಹೈಮಂತವೆಂಬ ಒಂದು ಊರು ಇದ್ದಿತು. ಆ ಊರಿನಲ್ಲಿ ಒಬ್ಬ ಮಹಾಶೂರನಿದ್ದನು. ಅವನಿಗೆ ಓರಿಯಾನ್ ಎಂದು ಹೆಸರು. ಅವನು ಶೂರನೇನೋ ಅಹುದು, ಆದರೆ ಆ ಕಾರ್ಯಕ್ಕೆ ತಕ್ಕ ಇತರ ಸುಗುಣಗಳಾವುವೂ ಅವನಲ್ಲಿರಲಿಲ್ಲ. ಅವನ ದುರ್ಗುಣಗಳು ಎಷ್ಟು ದಿವಸ ತಾನೇ ಹೊರಪಡದೆ ಇದ್ದಾವು? ಒಂದು ದಿವಸ ಅವನು ಒಂದು ದೊಡ್ಡ ತಪ್ಪನ್ನು ಮಾಡಿದುದರಿಂದ ದೊರೆಯು ಅವನ ಕಣ್ಣನ್ನು ಕೀಳಿಸಿದನು. ಆಮೇಲೆ ಆ ಓರಿಯಾನನು ಸೂರ್ಯನನ್ನು ಕುರಿತು ತಪಸ್ಸು ಮಾಡಲು ಸೂರ್ಯನು ಪ್ರತ್ಯಕ್ಷನಾಗಿ—ನಿನಗೇನು ಬೇಕು ಎಂದು ಕೇಳಿದನು. ಓರಿಯಾನನಿಗೆ ಬೇಟೆಯಾಡುವುದರಲ್ಲಿ ಬಹಳ ಆಶೆಯಿದ್ದುದರಿಂದ ಯಾವ ಮೃಗಗಳಿಂದಲೂ ತನಗೆ ಮರಣವಿಲ್ಲದಿರುವಂತೆಯೂ ತಾನು ಕಳೆದುಕೊಂಡಿದ್ದ ಕಣ್ಣು ಬರುವಂತೆಯೂ ಎರಡು ವರಗಳನ್ನು ಕೇಳಿಕೊಂಡನು. ಸೂರ್ಯನಾರಾಯಣನು—ಹಾಗೆಯೇ ಆಗಲಿ ಎಂದು ಈ ಎರಡು ವರಗಳನ್ನೂ ದಯಪಾಲಿಸಿದನು. ಆಮೇಲೆ ಓರಿಯಾನನು ಬಹಳ ಅಹಂಕಾರದಿಂದ ಯಾವಾಗಲೂ ಬೇಟೆಯಲ್ಲೇ ಕಾಲವನ್ನು ಕಳೆಯುತ ಸಿಕ್ಕಿದ ಮೃಗಗಳನ್ನೆಲ್ಲ ಕೊಲ್ಲುತ್ತ ಬಂದನು. ಇವನ ಕೆಟ್ಟ ನಡತೆಗಳನ್ನು ದೇವರು ನೋಡಿ ಒಂದು ಚೇಳಿನಿಂದ ಕುಟುಕಿಸಿ ಇವನನ್ನು ಕೊಲ್ಲಿಸಿಬಿಟ್ಟನು.

ರಾತ್ರಿ ಆಕಾಶದಲ್ಲಿ ನೋಡಿರಿ. ಓರಿಯಾನನು ಕಾಣಿಸುವನು. ಓರಿಯಾನನಿಗೆ ಮಧ್ಯದಲ್ಲಿರುವ ಮೂರು ನಕ್ಷತ್ರಗಳೇ ಇವನ ನಡುಕಟ್ಟು. ಇವರ ಹತ್ತಿರ

ರುವ ಮೂರು ಸಣ್ಣ ನಕ್ಷತ್ರಗಳೇ ನಡುಕಟ್ಟಿನಲ್ಲಿರುವ ಕತ್ತಿ. ಓರಿಯೊನನಿಗೆ ದಕ್ಷಿಣದಲ್ಲಿರುವ ನಕ್ಷತ್ರಗಳ ಗುಂಪೇ ಮೊಲವು. ಇದಕ್ಕೂ ಓರಿಯೊನನಿಗೂ ಪೂರ್ವದಿಕ್ಕಿನಲ್ಲಿರುವ ನಕ್ಷತ್ರಗಳ ಗುಂಪುಗಳೆರಡೂ ಅವನ ಎರಡು ಬೇಟೆನಾಯಿಗಳು.

ಪುಸ್ತಕಗಳು ಮತ್ತು ಅವುಗಳನ್ನು ಓದುವ ಕ್ರಮ.

ಮನುಷ್ಯವರ್ಗಕ್ಕೆ ತಿಳಿವಳಿಕೆಯನ್ನು ಹೆಚ್ಚಿಸಿಕೊಡುವ ವಿಷಯದಲ್ಲಿ ಬರೆವಣಿಗೆಯೂ ಮತ್ತು ಅಚ್ಚಿನ ಯಂತ್ರವು ಮಾಡುತ್ತಿರುವ ಸಹಾಯವು ಇಷ್ಟಿಷ್ಟೆಂದು ನಿರ್ಧರಿಸಿ ಹೇಳುವುದು ಅಸಾಧ್ಯ. ಬಾಯಿಂದ ಹೇಳತಕ್ಕ ಮಾತುಗಳು ಕೆಲವರ ಕಿವಿಗಳಿಗೆ ಮಾತ್ರ ತಲಪುತ್ತವೆ. ಮತ್ತು ಹಾಗೆ ಬಾಯಮಾತಿನಿಂದ ಕೇಳಿ ತಿಳಿದ ಅಂಶವು ಮರಳಮೇಲೆ ಬರೆದ ಬರೆವಣಿಗೆಯಂತೆ ಬಹಳಕಾಲ ನೆನಪಿನಲ್ಲಿ ನಿಲ್ಲದೆ ಕೆಲವುಕಾಲದೊಳಗೆ ಮರೆತೇಹೋಗುವ ಸಂಭವವೂ ಉಂಟು. ಅಚ್ಚಿನ ಯಂತ್ರವಾದರೋ ಏಕತ್ರ ಸೇರದೆ ಯಾವಯಾವ ಸ್ಥಳಗಳಲ್ಲೋ ಇರತಕ್ಕ ಅನೇಕ ಜನಗಳಿಗೂ ವಿಷಯವನ್ನು ಚೆನ್ನಾಗಿ ತಿಳಿಯಿಸಿಕೊಡುವುದಲ್ಲದೆ ಹಾಗೆ ಪುಸ್ತಕಗಳ ಮೂಲಕ ಪಡೆದ ಜ್ಞಾನವು ಬರೀ ಬಾಯಿಮಾತಿನಿಂದ ಪಡೆದುದಕ್ಕಿಂತಲೂ ಹೆಚ್ಚುಕಾಲ ಅಥವಾ ಶಾಶ್ವತವಾಗಿಯೇ ಬುದ್ಧಿಯಲ್ಲಿ ನೆಲೆಗೊಳ್ಳುವುದು. ಬಾಯಿಂದ ಹೇಳುವ ಮಾತುಗಳು ನೂರಾರು ಜನಗಳಿಗೆ ಮಾತ್ರ ತಿಳಿಯಬಹುದು; ಆದರೆ ಅಚ್ಚಾದ ಅಂಶಗಳು ಲಕ್ಷಾಂತರ ಜನಗಳಿಗೆ ಗೋಚರವಾಗತಕ್ಕ ಸಂಭವವುಂಟು. ಒಬ್ಬ ಬೋಧಕನು ಮೃತನಾದರೂ ಅವನ ಬೋಧನೆಯ ವಿಷಯಗಳು ಅಚ್ಚಾಗಿದ್ದರೆ ಆ ಪುಸ್ತಕಗಳನ್ನು ಓದತಕ್ಕವರ ಭಾಗಕ್ಕೆ ಆತನು ಸರ್ವದಾ ಜೀವಿಸಿದ್ದಂತೆಯೇ. ಅಂದರೆ ಒಬ್ಬ ಗ್ರಂಥಕರ್ತನು ಗತಿಸಿದರೂ ಆತನ ಗ್ರಂಥವು ಸಾಯದೆ ಸರ್ವತ್ರ ಪುಸ್ತಕರೂಪದಲ್ಲಿ ಮೆರೆಯುತ್ತ ಆತನಿಗೆ ಪ್ರತಿನಿಧಿಯಾಗಿ ಜ್ಞಾನೋಪದೇಶವನ್ನು ಕೊಟ್ಟು ಆತನಿಗೆ ಶಾಶ್ವತವಾದ ಕೀರ್ತಿಯನ್ನುಂಟುಮಾಡಿಕೊಡುವುದು.

ಪುಸ್ತಕಗಳಿಂದ ಉಂಟಾಗುವ ಪ್ರಯೋಜನಗಳು ಅಪಾರವಾಗಿವೆ. ಈಗ್ಗೆ 2000 ವರ್ಷಗಳ ಹಿಂದೆ ರೋಮ್ ಪಟ್ಟಣದಲ್ಲಿದ್ದ ಜಗತ್ಪ್ರಸಿದ್ಧನಾದ ಕೇಟೋ ಎಂಬಾತನು ತನಗಿಂತ ಪೂರ್ವದಲ್ಲಿ ಘನವಿದ್ವಾಂಸರಾಗಿದ್ದು ಗತಿಸಿಹೋದಂತಹವರ ಸಹವಾಸವನ್ನು ಪಡೆಯಬೇಕೆಂದೂ ತಾನೂ ಬೇಗ ಮೃತನಾದರೆ ಅವರ ಸಂಗಡ ಸೇರಬಹುದೆಂದೂ ನಂಬಿ ಹಾರೈಸುತ್ತಿದ್ದನು. ಈಗಿನಕಾಲದ ನಾವಾದರೋ ಹಿಂದಿನವರಿಂದ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಬೇಕೆಂದು ಮರಣವನ್ನು ಬಯಸಬೇಕಾಗಿಲ್ಲ, ಯಾಕೆಂದರೆ ಮಹಾಪಂಡಿತರಾದ ಪೂರ್ವಿಕ ಮಹಾಶಯರೆಲ್ಲ ಪುಸ್ತಕರೂಪದಲ್ಲಿ ನಮಗೆ ಇದ್ದಲ್ಲಿಯೇ ಸುಲಭವಾಗಿ ದೊರೆಯುವರು. ನಮ್ಮ ಅಂಗೈಯಲ್ಲಿ ಅಡಕವಾಗುವ ಮಟ್ಟಿಗೆ ಪುಟ್ಟದಾದ ಪುಸ್ತಕದ ರೂಪದಲ್ಲಿ ಎಂತಹ ಗ್ರಂಥಕರ್ತರಾದರೂ ನಮ್ಮ ಸ್ನೇಹಿತರಾಗಿ ನಮ್ಮ ಸಂಗಡವೇ ಇರುವರು. ಒಂದು ಸಣ್ಣ ಮರದ ಬೀರುವಿನ ಖಾನೆಗಳಲ್ಲಿ ಯಾವುಯಾವುದೋ ಕಾಲದ ಯಾವಯಾವ ಶಾಸ್ತ್ರಗಳಲ್ಲೋ ದಕ್ಷಕರಾದ ಕುಶಲಶಿಖಾಮಣಿಗಳೆಲ್ಲ ನಮಗೆ ಯಾವಾಗ ಯಾವ ವಿಷಯದಲ್ಲಿ ಬೇಕಾದರೂ ತಿಳಿವಳಿಕೆಯನ್ನೂ ಅನುಭವವನ್ನೂ ಹೆಚ್ಚಿಸಿ ಕೊಡುವುದಕ್ಕೋಸ್ಕರ ಸರ್ವದಾ ಸನ್ನದ್ಧರಾಗಿ ನಮ್ಮ ಸಮಯವನ್ನೇ ಪರೀಕ್ಷಿಸುತ್ತಿರುವರು. ಉಪನ್ಯಾಸಕರು ವಿಷಯಗಳನ್ನೂ ಅಂಶಗಳನ್ನೂ ಚರ್ಚಿಸಿ ತಿಳಿಸುವರು. ಚರಿತ್ರಕಾರರು ಹಿಂದಿನ ಕಥೆಗಳನ್ನೆಲ್ಲ ತಿಳಿಯಹೇಳುವರು. ಪದ್ಯಗ್ರಂಥಕಾರರು ತಮ್ಮ ವಾಗ್ವೈಖರಿಯಿಂದ ವಾಚಕರಿಗೆ ಮನಸ್ಸೋಲ್ಲಾಸವನ್ನು ಬೀರುವರು. ಒಟ್ಟೇನು ! ಪುಸ್ತಕಗಳು ಸರ್ವದಾ ಸನ್ನಿಹಿತವಾದ ಜ್ಞಾನಭಂಡಾರವೇ. ಯುದ್ಧವಿಷಯಕವಾದ ಪುಸ್ತಕಗಳನ್ನು ಓದುವಾಗ ನಾವು ರಣರಂಗವನ್ನು ಪ್ರತ್ಯಕ್ಷವಾಗಿ ನೋಡಿದಂತೆಯೇ ಆಗುವುದು. ಪ್ರಯಾಣವಿಷಯಕವಾದ ಪುಸ್ತಕಗಳನ್ನು ಓದುವಾಗ ನಾವೇ ಎಷ್ಟೋ ಪರ್ವತಗಳನ್ನು ಹತ್ತುವಂತೆಯೂ ಎಷ್ಟೋ ದೇಶಗಳನ್ನು ಕಣ್ಣಾರ ನೋಡುವಂತೆಯೂ ಅನುಭವವಾಗುವುದು. ಪುಸ್ತಕಗಳು ನಮ್ಮ ಸಂಗಡ ಇದ್ದರೆ ನಾವು ಈಚಿನವರಾದರೂ ಪೂರ್ವಕಾಲದ ಸ್ಥಿತಿಯನ್ನು ಆಗ ಪ್ರತ್ಯಕ್ಷವಾಗಿದ್ದವರಂತೆಯೇ ತಿಳಿಯಲು ಅನುಕೂಲ.

ಪ್ರಕೃತಕಾಲದಲ್ಲಿ ಇಂಗ್ಲೀಷಿನಷ್ಟು ಹೆಚ್ಚು ಪ್ರಚಾರವುಳ್ಳ ಭಾಷೆಯು ಪ್ರಪಂಚದಲ್ಲಿ ಮತ್ತಾವುದೂ ಇಲ್ಲವೆನ್ನಬಹುದು. ಪ್ರಪಂಚದ ಎಲ್ಲಾ ಜನಾಂಗಗಳ ಭಾಷೆಗಳಲ್ಲಿರುವ ಸಕಲಸಾರವೂ ಇಂಗ್ಲಿಷ್ ಭಾಷೆಗೆ ಪರಿವರ್ತಿಸಲ್ಪಟ್ಟಿದೆ. ಆದುದರಿಂದಲೇ ಇಂಗ್ಲಿಷ್ ಭಾಷೆಯೊಂದರಲ್ಲಿ ಪರಿಣತ ಪಾಂಡಿತ್ಯವನ್ನು ಸಂಪಾದಿಸಿದ ಮಾತ್ರದಿಂದಲೆ ಇತರ ಸಮಸ್ತ ಭಾಷೆಗಳನ್ನೂ ಓದುವುದರಿಂದ ಆಗಬಹುದಾದಷ್ಟು ಪ್ರಯೋಜನಗಳನ್ನು ಪಡೆಯಬಹುದಾಗಿದೆ.

ಯಾವುದಾದರೊಂದು ಭಾಷೆಯಲ್ಲಿರುವ ಸಮಸ್ತ ಪುಸ್ತಕಗಳನ್ನೂ ಓದುವುದು ಕೂಡ ಮನುಷ್ಯಮಾತ್ರದವರಿಗೆ ಅಸಾಧ್ಯ. ಒಂದು ವೇಳೆ ಸಾಧ್ಯವಾಗುವುದಾದರೂ ಅನಾವಶ್ಯಕ. ಒಂದು ಪುಸ್ತಕ ಭಂಡಾರದಲ್ಲಿರುವ ಸಾವಿರಾರು ಪುಸ್ತಕಗಳನ್ನು ಸುಮ್ಮನೆ ಓದಿ ಮುಗಿಸುವುದಕ್ಕಿಂತಲೂ ಉತ್ತಮರಾದ ಗ್ರಂಥಕರ್ತರಿಂದ ರಚಿಸಲ್ಪಟ್ಟ ಶ್ರೇಷ್ಠವಾದ ಕೆಲವು ಪುಸ್ತಕಗಳನ್ನು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡು ಬುದ್ಧಿಸಂಸ್ಕಾರವನ್ನುಂಟುಮಾಡಿಕೊಳ್ಳುವುದು ಹೆಚ್ಚು ಪ್ರಯೋಜನಕರ. ದೇಹಕ್ಕೆ ಶಾಖವನ್ನುಂಟುಮಾಡಿಕೊಳ್ಳುವುದಕ್ಕೆ ಮನೆಯಲ್ಲಿರುವ ಬಟ್ಟೆಗಳನ್ನೆಲ್ಲಾ ಹೊದೆದುಕೊಂಡು ಮುಸುಕುಹಾಕಿಕೊಳ್ಳುವುದಕ್ಕಿಂತಲೂ ಅಂಗಸಾಧನೆಯನ್ನು ಮಾಡುವುದು ಮೇಲಲ್ಲವೆ? ಇಷ್ಟೇ ಅಲ್ಲದೆ ಪುಸ್ತಕಗಳೆಂದಮಾತ್ರಕ್ಕೇ ಎಲ್ಲವೂ ಒಳ್ಳೆಯವಾಗಿರವು. ಅವುಗಳಲ್ಲಿ ಎಷ್ಟೋ ಪುಸ್ತಕಗಳು ನಮ್ಮನ್ನು ತಪ್ಪುದಾರಿಗೆಳೆದು ನಮ್ಮ ನಡತೆಯನ್ನು ಕೆಡಿಸಿಯಾವು. ಇನ್ನೂ ಕೆಲವು ಪುಸ್ತಕಗಳು ಯಾವುದೋ ಒಂದು ವಿಧವಾದ ಒಳ್ಳೆಯ ಫಲಕ್ಕೋಸ್ಕರ ಹಲವುಬಗೆಯ ಕೆಟ್ಟ ಕೆಲಸಗಳನ್ನು ಮಾಡುವುದೂ ಅಯುಕ್ತವಲ್ಲವೆಂದು ನಮ್ಮನ್ನು ಪ್ರೇರಿಸಿಯಾವು.

ಓದುವುದರಿಂದ ಲಾಭವನ್ನು ಪಡೆಯಬೇಕಾದರೆ ನಾವು ಓದುವುದಕ್ಕೆ ಅರ್ಹವಾದ ಪುಸ್ತಕಗಳನ್ನು ಆರಿಸಿಕೊಳ್ಳುವುದು ಮಾತ್ರವೇ ಸಾಲದು. ಅವನ್ನು ಯೋಗ್ಯವಾದ ರೀತಿಯಲ್ಲಿ ಓದಲೂಬೇಕು. ಒಂದೇವಿಧವಾದ ಪುಸ್ತಕವನ್ನು ಅನೇಕರು ಓದಿದರೂ ಅವರವರ ಉದ್ದೇಶಕ್ಕೂ ವ್ಯಾಸಂಗಕ್ಕೂ ತಕ್ಕಂತೆ ಅವರು ಪರಸ್ಪರ ಭಿನ್ನಭಿನ್ನಫಲಗಳನ್ನು [illegible]

ವಾದರೂ ವಿಷವನ್ನೂ ಶೇಖರಿಸಲಾರವು. ಜೇಡನು ವಿಷವನ್ನು ಕೂಡಿಹಾಕುವುದು ಆದರೆ ದುಂಬಿಗಳು ಅವುಗಳಿಂದ ಮಕರಂದವನ್ನು ತಂದು ಶೇಖರಿಸಿ ಜೇನುತುಪ್ಪವನ್ನು ಮಾಡುವುವು. ಆದುದರಿಂದ ಯಾವುದಾದರೊಂದು ಪುಸ್ತಕವನ್ನು ನಾವು ಯಾವ ಉದ್ದೇಶದಿಂದ ಓದುವೆವೋ ಫಲವು ತದನುಗುಣವಾಗಿಯೇ ಲಭಿಸುವುದು. ಒಂದು ಪುಸ್ತಕದ ಒಂದು ವಿಷಯವು ಒಬ್ಬನಿಗೆ ನೀತಿಬೋಧಕವಾಗಬಹುದು, ಮತ್ತೊಬ್ಬರಿಗೆ ಬುದ್ಧಿಕೌಶಲವನ್ನು ಹೆಚ್ಚಿಸಬಹುದು. ಇನ್ನೊಬ್ಬರಿಗೆ ಮನೋವ್ಯಾಪಾರಗಳನ್ನು ಉದ್ರೇಕಗೊಳಿಸಬಹುದು. ಇತರರಿಗೆ ಬರೀ ವಿನೋದಕರವಾಗಿ ಮಾತ್ರ ಇರಬಹುದು. ಒಂದು ಪಾತ್ರೆಯಲ್ಲಿ ನೀರು ಕುದಿಯುತ್ತಿರುವುದನ್ನು ನೋಡಿದರೆ ಒಂದು ಮಗುವು ವಿನೋದದಿಂದ ಸೋಜಿಗಪಡುವುದು, ಗೃಹಿಣಿಯು ತನ್ನ ಅಡಿಗೆಯ ಹದವನ್ನು ತಿಳಿದಾಳು, ಆವಿಯ ಶಕ್ತಿಯ ಮರ್ಮವನ್ನು ತಿಳಿದ ಜೇಮ್ಸ್ ವಾಟ್ ನಂತಹ ಶಾಸ್ತ್ರಜ್ಞನು ತನ್ನ ಶಾಸ್ತ್ರೀಯಾಂಶಗಳಿಗೆ ತಕ್ಕ ಶೋಧನೆಯನ್ನಾಗಿ ಉಪಯೋಗಿಸಿಕೊಂಡಾನು. ಹೀಗೆ ಪುಸ್ತಕಗಳೂ ತಮ್ಮನ್ನು ಉಪಯೋಗಿಸಿಕೊಳ್ಳತಕ್ಕವರ ಯೋಗ್ಯತೆ, ಉದ್ದೇಶ, ಶ್ರದ್ಧೆ ಇವುಗಳಿಗೆ ತಕ್ಕ ಫಲವನ್ನು ಕೊಡುವುವು.

ತಿಳಿವಳಿಕೆಯನ್ನು ಪಡೆಯುವುದಕ್ಕೆ ಓದುವುದು ಒಂದು ಮಾರ್ಗವಾಗಿದೆ. ಆದರೆ ಓದಿದ ವಿಷಯವು ವಶಪಟ್ಟು ಬುದ್ಧಿಸ್ಥವಾಗಬೇಕಾದರೆ ಓದಿದ್ದರ ವಿಷಯವಾಗಿ ಚೆನ್ನಾಗಿ ಪರ್ಯಾಲೋಚಿಸಬೇಕು. ನಾವು ಓದಿದ್ದನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಓದುವಾಗ ಅದರಮೇಲೆ ಗಮನವಿಟ್ಟಿರಬೇಕು. ಓದಿದ್ದನ್ನು ಚೆನ್ನಾಗಿ ಜ್ಞಾಪಕವಿಟ್ಟುಕೊಳ್ಳಬೇಕಾದರೆ ಅದನ್ನು ಪುನಃಪುನಃ ಆವೃತ್ತಿಮಾಡುತ್ತಿರಬೇಕು. ಓದಿದ್ದನ್ನು ಚೆನ್ನಾಗಿ ತಿಳಿದುಕೊಂಡು ಅದರಿಂದ ಬುದ್ಧಿಯನ್ನು ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಓದಿದ್ದರ ವಿಷಯವಾಗಿ ಆಗಾಗ್ಗೆ ಶ್ರದ್ಧೆಯಿಂದ ಮನನ ಮಾಡುತ್ತಿರಬೇಕು. ಸಮುದ್ರಯಾನ, ಪ್ರಯಾಣ ಇಂತಹವುಗಳನ್ನು ವರ್ಣಿಸತಕ್ಕ ಪುಸ್ತಕಗಳನ್ನು ಓದುವುದರಲ್ಲಿ ಅಲ್ಲಿ ವರ್ಣಿಸಲ್ಪಟ್ಟ ಅಂಶಗಳನ್ನು ಸ್ವತಃ ಮನಸ್ಸಿನಲ್ಲಿಪರ್ಯಾಲೋಚಿಸುವುದು; ಓದಿದ್ದರ ಅಭಿಪ್ರಾಯವು ಚೆನ್ನಾಗಿ ಮನಸ್ಸಿಗೆ ಹತ್ತುವುದಕ್ಕೋಸ್ಕರ ತಕ್ಕ ನಕ್ಷೆಗಳನ್ನೂ ಚಿತ್ರಗಳನ್ನೂ ಉಪಯೋಗಿಸಿಕೊಳ್ಳುವುದೂ

ಮೇಲಾದ ಮಾರ್ಗ. ಚರಿತ್ರೆ, ಒಬ್ಬಾನೊಬ್ಬ ಮಹನೀಯನ ಜೀವನಚರಿತ್ರೆ, ವೃತ್ತಾಂತಕಥನ ಇಂತಹವುಗಳನ್ನು ವ್ಯಾಸಂಗಮಾಡುವುದರಲ್ಲಿ ಓದಿದಮೇಲೆ ಪುಸ್ತಕವನ್ನು ಮುಚ್ಚಿ ನಾವೇ ಮನಸ್ಸಿನಲ್ಲಿ ಭಾವಿಸಿ ತಿಳಿಯುವುದು, ಹಾಗೆ ತಿಳಿದುದನ್ನು ಯಾರಾದರೂ ಸ್ನೇಹಿತರಿಗೆ ಹೇಳುವುದು ಹೀಗೆ ಮಾಡಬಹುದು. ತರ್ಕಶಾಸ್ತ್ರ, ತತ್ವಶಾಸ್ತ್ರ ಮೊದಲಾದ ಆಲೋಚನಾಶಕ್ತಿಯನ್ನು ಬಲಪಡಿಸತಕ್ಕ ಶಾಸ್ತ್ರಗಳನ್ನಾದರೆ ಓದುತ್ತಿರುವಾಗಲೇ ನಡುನಡುವೆ ಒಂದೊಂದು ಘಟ್ಟಕ್ಕೆ ನಿಲ್ಲಿಸಿಕೊಳ್ಳುವುದು, ಅಲ್ಲಿ ಕವಿಯ ಆಶಯವೇನು, ಆತನು ಹಾಗೆ ಅಭಿಪ್ರಾಯಪಟ್ಟಿರುವುದಕ್ಕೆ ಏನೇನು ಕಾರಣಗಳು, ನಮ್ಮ ಬುದ್ಧಿಗೆ ತೋರುವ ಇತರಕಾರಣಗಳು ಯಾವುವು, ಮೊದಲಾದವುಗಳನ್ನೆಲ್ಲಾ ಯೋಚಿಸಿ ಊಹಿಸಬೇಕು. ಯಾವುದನ್ನೇ ಆಗಲಿ ನಾವು ಓದಿದ್ದನ್ನು ನಮ್ಮ ಸ್ವಂತ ಮಾತಿನಿಂದ ಬರೆದಿಡುವುದರಿಂದ ಉಂಟಾಗುವ ಪ್ರಯೋಜನವು ಅಪಾರವಾದುದು. ಹೇಗೆಂದರೆ-ಇದರಿಂದ ನಮ್ಮ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಇತರರಿಗೆ ತಿಳಿಯಪಡಿಸುವ ಶಕ್ತಿಯು ಹೆಚ್ಚುವುದು. ಮಾತ್ರವಲ್ಲದೆ ನಾವು ಓದಿದ ಅಂಶಗಳಲ್ಲಿ ನಿಷ್ಕೃಷ್ಟವಾದ ಜ್ಞಾನವೂ ಉಂಟಾಗುವುದು. ಯಾಕೆಂದರೆ-ತನಗೇ ಚೆನ್ನಾಗಿ ತಿಳಿಯದಿದ್ದುದನ್ನು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುವುದಕ್ಕೂ ಕಷ್ಟವಾಗುವುದೆಂಬುದು ಸ್ಪಷ್ಟವಾಗಿಯೇ ಇದೆ. ಹೀಗಿರುವಲ್ಲಿ ಒಂದು ಪುಸ್ತಕದಲ್ಲಿರುವ ಸಾರಾಂಶವನ್ನು ನಮಗೆನಾವೇ ಆಗಲಿ ಅಥವಾ ಇತರರಿಗೇ ಆಗಲಿ ತಿಳಿಯಹೇಳುವುದು ಅಷ್ಟು ಸುಲಭವಾದ ಕೆಲಸವಲ್ಲ. ಅದಕ್ಕೆ ನಿಷ್ಕೃಷ್ಟವಾದ ವಿಷಯಜ್ಞಾನವೂ ಚಾತುರ್ಯವೂ ಭಾಷಾಶುದ್ಧಿಯೂ ಅತ್ಯಾವಶ್ಯಕ. ಓದಿದ್ದನ್ನು ನಮ್ಮಷ್ಟಕ್ಕೆ ನಾವೇ ಹೇಳಿಕೊಳ್ಳುತ್ತ ಪುನಃ ಪುನಃ ಆವೃತ್ತಿ ಮಾಡಿಕೊಳ್ಳುವುದಕ್ಕಿಂತಲೂ ಇತರರಿಗೆ ಹೇಳುವುದು ಉತ್ತಮ. ಯಾಕೆಂದರೆ-ಅವರಿಗೆ ಚೆನ್ನಾಗಿ ತಿಳಿಯುವಂತೆ ಹೇಳಬೇಕಾದರೆ ಮುಖ್ಯವಾಗಿ ನಮ್ಮಲ್ಲಿರುವ ವಿಷಯಜ್ಞಾನವೂ ಭಾಷಾಜ್ಞಾನವೂ ಏಕಮುಖವಾಗಿ ಕಲೆತು ಕೆಲಸಮಾಡುವುವು. ಹೀಗೆ ಹೇಳಿದ್ದರಲ್ಲಿ ಒಂದುವೇಳೆ ಸಂಭವಿಸಬಹುದಾದ ದೋಷಗಳನ್ನು ಆ ಸ್ನೇಹಿತರು ತಿದ್ದುವುದಕ್ಕೂ ಅವಕಾಶವುಂಟು. ಇದರೂ ನಾವು ಓದಿದ್ದರ ಮುಖ್ಯಾಂಶಗಳನ್ನು ಬರೆದಿಡುವುದರಲ್ಲೂ

ತುಂಬ ಪ್ರಯೋಜನಗಳುಂಟು. ಬರೆವಣಿಗೆಯಲ್ಲಿ ಅಭಿಪ್ರಾಯಗಳನ್ನು ಮಾತಾಡುವಾಗ ಉಪಯೋಗಿಸುವುದಕ್ಕಿಂತಲೂ ಮೇಲಾದ ಕ್ರಮದಲ್ಲಿ ಉತ್ತಮವಾದ ಮಾರ್ಗದಲ್ಲಿ ಉಪಯೋಗಿಸುವುದಕ್ಕೆ ಅವಕಾಶವುಂಟು.

ಓದುಗಾರಿಕೆಯಲ್ಲಿ ಅಭಿರುಚಿಯನ್ನುಂಟುಮಾಡತಕ್ಕದ್ದು ಉಪಾಧ್ಯಾಯರ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಲೋಕದಲ್ಲಿ ಸಮಸ್ತ ವಿಷಯಗಳೂ ಸಾಮಾನ್ಯವಾಗಿ ಗ್ರಂಥಗಳಾಗಿ ಏರ್ಪಡಿಸಲ್ಪಟ್ಟು ಪುಸ್ತಕಗಳಲ್ಲಿ ಅಡಕವಾಗಿವೆ. ಆದುದರಿಂದ ಓದುವುದೊಂದರಲ್ಲಿ ಆಸಕ್ತಿಯು ಹುಟ್ಟಿದರೆ ಎಂತಹ ವಿಷಯಗಳನ್ನಾದರೂ ತಿಳಿದುಕೊಳ್ಳುವುದಕ್ಕೆ ಸಹಾಯವಾಗುವುದರಲ್ಲಿ ಏನೇನೂ ಸಂಶಯವೇ ಇಲ್ಲ.

J. K.

ಕೈಗೆಲಸಗಳಿಂದ ಚಿಕ್ಕ ವಿದ್ಯಾರ್ಥಿಗಳಿಗೆ ಉಂಟಾಗುವ ಪ್ರಯೋಜನಗಳು.

ಕೈಗೆಲಸ ಅಂದರೆ, ಪೇಪರ್ ಸ್ಲಾಯ್ಡ್, ಮರದ ಸ್ಲಾಯ್ಡ್, ಬೆತ್ತ ಹೆಣೆಯುವುದು, ಕ್ಲೇಮಾಡಲಿಂಗ್ ಕಸೂತಿ ಹಾಕುವುದು ಇವೇ ಮುಂತಾದುವು; ಮತ್ತು ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಸಲು ಅನುಕೂಲವಾದುವುಗಳು. ಈಚೆಗೆ ನಮ್ಮ ದೇಶದ ಪಾಠಶಾಲೆಗಳಲ್ಲಿ ಕೈಗೆಲಸವನ್ನು ಕಲಿಸುತ್ತಿದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಉಂಟಾಗುವ ಪ್ರಯೋಜನಗಳು ಯಾವುವೆಂಬುದನ್ನು ತಿಳಿಯುವುದು ಆವಶ್ಯಕ.

ಚಿಕ್ಕ ಮಕ್ಕಳು ಐದುವರುಷ ಮೊದಲು ಎಂಟುಹತ್ತು ವರುಷಗಳವರೆಗೆ, ಆಟದಮೇಲೆ ಇಚ್ಛೆಯುಳ್ಳವರಾಗಿರುತ್ತಾರೆ; ಅವರ ಮೆದುಳು ಬಹು ಸೂಕ್ಷ್ಮಸ್ಥಿತಿಯಲ್ಲಿರುತ್ತದೆ. ಕಠಿಣವಾದ ಮತ್ತು ಹೆಚ್ಚು ವಿಷಯಗಳನ್ನು ತಿಳಿಯಲು ಅವರಿಗೆ ಶಕ್ತಿಸಾಲದು. ಬಲಾತ್ಕಾರದಿಂದ ಅವರನ್ನು ಓದಿಸಿದಲ್ಲಿ ಅವರ ಬುದ್ಧಿ ಹೆಚ್ಚು ಕಡಿಮೆ

ಯಾಗಿ ಮುಂದೆ ಕಷ್ಟಕ್ಕೆ ಗುರಿಯಾಗುತ್ತಾರೆ. ಆದುದರಿಂದ ಅವರ ಮೆದಳು ಬಲವಾಗುವ ನಿಮಿತ್ತವಾಗಿ ಕೈಗೆಲಸವನ್ನು ಮಾಡಿಸಬೇಕೆಂಬುದು ಅನುಭವದಿಂದ ತಿಳಿದುಬಂದಿದೆ. ಮೆದಳು ಬಲವಾದ ಹಾಗೆಲ್ಲಾ ಕಠಿಣವಾದ ಮತ್ತು ಹೆಚ್ಚು ವಿಷಯಗಳನ್ನು ಗ್ರಹಿಸಲು ಬಾಲಕರಿಗೆ ಶಕ್ತಿಯುಂಟಾಗುತ್ತದೆ.

ನಾಜೂಕಾದ ಕೈಗೆಲಸಗಳನ್ನು ಮಾಡಿದಹಾಗೆಲ್ಲಾ ಮೆದಳಿನ ಶಕ್ತಿ ಹೆಚ್ಚಾಗುತ್ತದೆ. ಕಸೂತಿ, ರಂಗವಲ್ಲಿ ಮುಂತಾದವುಗಳನ್ನು ಚೆನ್ನಾಗಿ ಬಲ್ಲ ಹುಡುಗಿಯರು ಓದುಬರಹದಲ್ಲಿಯೂ ರಂಗವಲ್ಲಿ ಕಸೂತಿಗಳನ್ನರಿಯದ ಗಂಡು ಹುಡುಗರಿಗಿಂತ ಶಕ್ತರೆಂಬ ವಿಷಯದಲ್ಲಿ ಅನುಮಾನವಿಲ್ಲ. ಆದುದರಿಂದ ಕೈಗೆಲಸವನ್ನು ಚೆನ್ನಾಗಿ ಕಲಿಸುತ್ತಾ ಜತೆಯಲ್ಲಿ ಓದು ಬರಹಗಳನ್ನು ಕಲಿಸುವುದು ಅತ್ಯುತ್ತಮ.

ಕೈಗೆಲಸದಿಂದ ಚಿಕ್ಕ ಮಕ್ಕಳಿಗೆ ತಿದ್ದುವಿಕೆಯುಂಟಾಗುತ್ತದೆ. ಗಮನಶಕ್ತಿ, ಶುಚಿತ್ವ, ಕಣ್ಣರಿಕೆ, ವಿಚಾರಣಾಶಕ್ತಿ, ಆತ್ಮನಿಷ್ಠೆ, ಸಹನಶಕ್ತಿ ಇವೇ ಮೊದಲಾದ ಗುಣಗಳು ಅಭಿವೃದ್ಧಿಗೆ ಬರುತ್ತವೆ. ಇವೂ ಅಲ್ಲದೆ, ಊಹಾಶಕ್ತಿ, ಜಾಗರೂಕತೆ, ಧೈರ್ಯ, ಚಮತ್ಕಾರ ಈ ಅನೇಕ ಗುಣಗಳನ್ನು ವಿದ್ಯಾರ್ಥಿಗಳು ಪಡೆಯುತ್ತಾರೆ.

ಮಕ್ಕಳಿಗೆ ಸ್ಥಿರಚಿತ್ತವಿರುವುದಿಲ್ಲವೆಂದು ಹಿಂದೆ ಹೇಳಿದೆ. ಸ್ಥಿರಚಿತ್ತವಿಲ್ಲದೆ ಓದುವುದು, ಕಠಿಣವಾದ ವಿಷಯಗಳನ್ನು ಗ್ರಹಿಸುವುದು ಅಸಾಧ್ಯ. ಕೈಗೆಲಸದಿಂದ ಸ್ಥಿರಚಿತ್ತ ಹೇಗೆ ಲಭಿಸುವುದೆಂದರೆ ಒಬ್ಬ ಬಾಲಕನು ಕಾಗದವನ್ನು ಕತ್ತರಿಸಿ ಒಂದು ಮನೆಯನ್ನು ಮಾಡಬೇಕೆಂದು ಊಹಿಸೋಣ. ಇದನ್ನು ಮಾಡುವಾಗ ಎಲ್ಲಿಯೋ ಬೇರೇಕಡೆ ನೋಡುತ್ತಾ ಇತರ ಯೋಚನೆ ಮಾಡುತ್ತಾ ಕಾಗದ ಕತ್ತರಿಸಿದಲ್ಲಿ ಡೊಂಕುಡೊಂಕಾಗಿ ಕೆಲಸವೆಲ್ಲಾ ಕೆಟ್ಟು ಹೋಗುತ್ತದೆ. ಒಂದೆರಡು ಸಾರಿ ಹೀಗಾದಲ್ಲಿ ಉಪಾಧ್ಯಾಯರು ನಿಂದಿಸುವರು. ಅಲ್ಲದೆ ಜತೆಗಾರರಿಗೆ ನಂಬರು ಹೆಚ್ಚಾಗಿ ಬರುವುದು. ಇದನ್ನೆಲ್ಲಾ ನೋಡಿ ತಾನು ಗಮನಕೊಟ್ಟು ಸ್ಥಿರಚಿತ್ತದಿಂದ ಕೆಲಸ ಮಾಡಬೇಕೆಂಬ ಅಭಿಪ್ರಾಯವು ಬಾಲಕನಿಗೆ ಉಂಟಾಗುತ್ತದೆ. ಕಾಗದಗಳನ್ನು ಕತ್ತರಿಸಿ ಒಂದಕ್ಕೊಂದನ್ನು ಅಂಟಿಸುವಾಗ ಕೊಳೆ ಮಾಡುವುದು, ಡೊಂಕುಡೊಂಕಾ ಗೀರಿಸುವುದು ಇದಕ್ಕೆಲ್ಲಾ ನಂಬರು ಕಡಿಮೆಯಾಗುತ್ತದೆ ಎಂದು ಉಪಾಧ್ಯಾಯರು

ಹೇಳಿದಲ್ಲಿ ವಿದ್ಯಾರ್ಥಿಗಳು ಬಹು ಜಾಗರೂಕತೆಯಿಂದ ಕೆಲಸಮಾಡುತ್ತಾರೆ. ಪ್ರತಿ ದಿನವೂ ಹೀಗೆ ಮಾಡುತ್ತಾ ಇರುವುದರಿಂದ ಗಮನಶಕ್ತಿಯೂ, ಖಚಿತ್ವವೂ, ಎಚ್ಚರಿಕೆಯೂ ಹೆಚ್ಚಾಗುತ್ತವೆ.

ಮಾದರಿಗಾಗಿ ಕೊಟ್ಟ ವಸ್ತುವಿನಂತೆ ವಿದ್ಯಾರ್ಥಿಗಳು ಪದಾರ್ಥಗಳನ್ನು ಮಾಡಬೇಕಾದರೆ ಕಣ್ಣನ್ನು ಚೆನ್ನಾಗಿ ಬಿಟ್ಟು ಬುದ್ಧಿಯನ್ನು ಉಪಯೋಗಿಸಿ ನೋಡಬೇಕು. ಕೂಡಲೆ ತಿಳಿಯದ ಪಕ್ಷದಲ್ಲಿ ಇನ್ನೊಂದಾವೃತ್ತಿ ಚಮತ್ಕಾರದಿಂದ ನೋಡುತ್ತಾರೆ. ಒಬ್ಬೊಬ್ಬರೇ ಒಂದೊಂದು ಕೆಲಸವನ್ನು ಮಾಡಬೇಕಾದ್ದರಿಂದ ಸಹನಶಕ್ತಿ, ಧೈರ್ಯ ಉಂಟಾಗುತ್ತದೆ. ಒಂದಾವೃತ್ತಿ ಮಾಡಿದ ಕೆಲಸವನ್ನು ಚೆನ್ನಾಗಿ ನೋಡಿ ಮಾಡುವುದರಿಂದ ಜ್ಞಾಪಕದಲ್ಲಿ ನಿಂತುಹೋಗುತ್ತದೆ. ಮರೆಯುವುದಿಲ್ಲ. ಒಬ್ಬ ಹುಡುಗಿ ಒಂದು ಬಾರದ ಟೋಪಿಯನ್ನು ಹಾಕುವುದು ಕಲಿತರೆ ಜೀವಮಾನವೆಲ್ಲಾ ಅದನ್ನು ಮಾತ್ರ ಮರೆಯುವುದಿಲ್ಲ.

ಬಾಲ್ಯದಲ್ಲಿ ಕಲಿತ ಈ ಗುಣಗಳು ಸ್ಥಿರವಾಗಿ ನೆಲಸುವುವು, ಮತ್ತು ಅದರಿಂದ ಮುಂದೆ ಅತ್ಯಂತ ಅನುಕೂಲವೂ ಸುಖವೂ ಉಂಟು. ಇದೂ ಅಲ್ಲದೆ ಕೈಕೆಲಸ ಅಭ್ಯಾಸವಿರುವುದರಿಂದ ಜೀವನೋಪಾಯವೂ ಸುಲಭವಾಗುತ್ತದೆ.

ಕೈಗೆಲಸ ಹೆಚ್ಚಾಗಿ ಮಾಡಿಸಬೇಕೋ, ಓದುಬರಹ ಹೆಚ್ಚಾಗಿ ಮಾಡಿಸಬೇಕೋ ಎಂಬ ಪ್ರಶ್ನೆ ಹೊರಡಬಹುದು. ಹಿಂದೆ ಹೇಳಿದ ಇಂಥಾ ಗುಣಗಳೆಲ್ಲಾ ಕೈಗೆಲಸದಿಂದ ಉಂಟಾಗುವ ಕಾರಣದಿಂದ 10–12 ವರುಷಗಳವರೆಗೆ ಹೆಚ್ಚು ಕೈಕೆಲಸದೊಂದಿಗೆ ಸ್ವಲ್ಪಮಟ್ಟಿಗೆ ಓದುಬರಹ ಕಲಿಸುವುದೇ ಅತ್ಯುತ್ತಮವಾಗಿ ತೋರುತ್ತದೆ.

ತರಗತಿ-- -ಕನ್ನಡ I.

ಪ್ರಕೃತಿಪಾಠ (ಹೂವಿನ ವಿಷಯ)

ಉಪಕರಣಗಳು :—ನಾನಾವಿಧವಾದ ಹೂವುಗಳು, ಭೂತಕನ್ನಡಿ, ಅತ್ತರ್.

ವಿಷಯ.	ಬೋಧನ ಕ್ರಮ.
I ಅರ್ಥವಿವರಣೆ :--	
ಗಿಡದಲ್ಲಿ ಮುಂದಕ್ಕೆ ಬೀಜವನ್ನುಂಟುಮಾಡುವ ಭಾಗಕ್ಕೆ ಹೂವೆಂದು ಹೆಸರು.	ಹೂವಿನಿಂದ ಬೀಜವಾಗುವುದನ್ನು ತಕ್ಕ ಪ್ರಶ್ನೆಗಳಿಂದ ಹೊರಟು ಅದರ ಮುಖ್ಯ ಕೆಲಸವನ್ನು ಹೇಳಿಸುವುದು.
II ಭಾಗಗಳು ಮತ್ತು ಅವುಗಳ ಕೆಲಸಗಳು:-	
(1) ತೊಟ್ಟು—ಹೂವಿಗೆ ಗಿಡದಿಂದ ಆಹಾರವನ್ನು ಒದಗಿಸಿಕೊಡುವುದು, ಮತ್ತು ಹೂವನ್ನು ಮೇಲಕ್ಕೆತ್ತಿ ಬಿಸಿಲಿಗೆ ಒಡ್ಡುವುದು.	ಬಾಲಕರ ಕೈಗೆ ಇಲ್ಲಿ ವಿವರಿಸಿರುವ ಎಲ್ಲ ಭಾಗಗಳೂ ಇರುವ ಹೂವುಗಳನ್ನು ಕೊಟ್ಟು ಅವರೇ ಕ್ರಮವಾಗಿ ಪರೀಕ್ಷಿಸುವಂತೆ ಮಾಡಿ ಈ ಭಾಗಗಳ ಉಪಯೋಗವನ್ನು ತಿಳಿಸುವುದು. ಪರೀಕ್ಷೆಗೆ ಅವಶ್ಯಕವಾದಾಗ ಭೂತಕನ್ನಡಿಯನ್ನು ಉಪಯೋಗಿಸುವುದು.
(2) ಪಾತ್ರೆ—ಸಣ್ಣ ಮೊಗ್ಗನ್ನು ಮುಚ್ಚಿಕೊಂಡು ಕಾಪಾಡುವುದು. ಮತ್ತು ದೊಡ್ಡ ಹೂವಿಗೆ ಆಧಾರವಾದ ಬಟ್ಟಲಾಗಿರುವುದು.	(ಕರಿಹಲಗೆ—ಆವೃತ್ತಿ)

ವಿಷಯ.	ಬೋಧನ ಕ್ರಮ.
(3) ದಳ–ಬಣ್ಣದಿಂದಲೂ, ವಾಸನೆಯಿಂದಲೂ ಪ್ರಾಣಿಗಳನ್ನು ಆಕರ್ಷಿಸುವುದು.	
(4) ಕೇಸರ–ತನ್ನಲ್ಲಿರುವ ಹಳದಿಯ ಧೂಳಿನಿಂದ ಬೀಜವಾಗುವುದಕ್ಕೆ ಸಹಾಯಮಾಡುವುದು.	
(5) ಫಲಕ–ಕೇಸರದಿಂದ ಉದುರಿದ ಹಳದಿಯ ಧೂಳನ್ನು ತೆಗೆದುಕೊಂಡು ಬೀಜವಾಗುವುದಕ್ಕೆ ಸಹಾಯ ಮಾಡುವುದು.	
(6) ಬೀಜಕೋಶ ಅಥವ ಕಾಯಿ–ಗಿಡದ ವಂಶಾಭಿವೃದ್ಧಿಗೆ ಬೇಕಾದ ಬೀಜಗಳನ್ನುಂಟುಮಾಡುವುದು.	
III ಭಾಗಗಳಲ್ಲಿರುವ ವ್ಯತ್ಯಾಸಗಳು :–	
(i) ತೊಟ್ಟು–ಉದ್ದವಾಗಿರುವುದು(ದಾಸವಾಳ.) ಅಥವ ಗಿಡ್ಡಾಗಿರುವುದು (ದಾಳಿಂಬ.)	ಪ್ರತಿಯೊಂದು ವ್ಯತ್ಯಾಸಕ್ಕೂ ಹೂವುಗಳನ್ನು ನಿದರ್ಶನವಾಗಿ ಕೊಟ್ಟು ಸ್ಥಿರಪಡಿಸುವುದು.

(ii) ಬಿಡಿಬಿಡಿಯಾಗಿರುವುದು (ಸೂರ್ಯಕಾಂತಿ)
ಅಥವ ಸೇರಿಕೊಂಡಿರುವುದು (ಉಮ್ಮತ್ತಿ)

,, — ಹಸುರುಬಣ್ಣವಾಗಿರುವುದು (ಮಲ್ಲಿಗೆ)
ಅಥವ ಹಳದಿಬಣ್ಣವಾಗಿರುವುದು. (ಕಾನ, ಕರ್ಣಕುಂಡಲ)

(iii) ದಳ-ಬಿಡಿಬಿಡಿಯಾಗಿರುವುದು. (ದಾಸವಾಳ)

,, —ಸೇರಕೊಂಡಿರುವುದು. (ಕುಂಬಳ)

,, —ಬಿಳುಪಾಗಿರುವುದು. (ಮಲ್ಲಿಗೆ)

,, —ನಾನಾಬಣ್ಣಕ್ಕಿರುವುದು.

(iv) ಕಾಯಿ-ಹೂವಿನ ಒಳಗೆ ಇರುವುದು. (ಅಗಸೆ)
—ಹೂವಿನ ಹೊರಗೆ ಇರುವುದು. (ಹೀರೆ)

IV ಉಪಯೋಗಗಳು :—

(a) ಬೀಜವನ್ನುಂಟುಮಾಡುವುದಕ್ಕೆ.
(b) ದೇವರಪೂಜೆಗೆ.
(c) ಮನೆಯನ್ನೂ, ಶರೀರವನ್ನೂ ಅಲಂಕರಿಸುವುದಕ್ಕೆ.
(d) ಅತ್ತರ್ ಮೊದಲಾದ ಪರಿಮಳದ್ರವ್ಯವನ್ನು ಮಾಡುವುದಕ್ಕೆ.

(ಕಲಿಪಲಗೆ ಆವೃತ್ತಿ)

ಈ ಉಪಯೋಗಗಳನ್ನು ಬಾಲಕರೊಡನೆ ತಕ್ಕ ಸಂಭಾಷಣೆಯಿಂದ ಹೇಳಿಸುವುದು.

(ಕರೀಹಲಗೆ ಆವೃತ್ತಿ)

ಒಟ್ಟು ಪ್ರಸರಾವೃತ್ತಿ

ಉಪಾಧ್ಯಾಯರ ಸಲಹೆ.

1. ಈಗ ಒಂದೊಂದು ಸ್ಕೂಲಿನಲ್ಲಿ ಒಂದೊಂದು ಕಾಲದಲ್ಲಿ ವಾರ್ಷಿಕಪರೀಕ್ಷೆಗಳು ಇನ್ಸ್ಪೆಕ್ಟರುಗಳಿಂದ ನಡೆಯಿಸಲ್ಪಟ್ಟು ವಿದ್ಯಾರ್ಥಿಗಳಿಗೆ ಕ್ಲಾಸ್ ಪ್ರಮೋಷನ್‌ಗಳು ಕೊಡಲ್ಪಡುತ್ತಿರುವುವು. ಇದರಿಂದುಂಟಾಗುವ ತೊಂದರೆಗಳು ಪ್ರಾಯಶಃ ಸರಿಯಾಗಿ ಕೆಲಸ ಮಾಡುತ್ತಿರುವ ಎಲ್ಲ ಸ್ಕೂಲ್ಮಾಸ್ಟರುಗಳಿಗೂ ಗೊತ್ತಿವೆ. ಈಗ ಒಂದು ಸ್ಕೂಲಿನಲ್ಲಿ ಜನವರಿಯಲ್ಲಿ ಪರೀಕ್ಷೆ ನಡೆದು ಕ್ಲಾಸ್ ಪ್ರಮೋಷನ್‌ಗಳು ಕೊಡಲ್ಪಟ್ಟಿವೆಯೆಂದು ಇಟ್ಟುಕೊಳ್ಳೋಣ. ಮತ್ತೊಂದು ಸ್ಕೂಲಿನಲ್ಲಿ ಜೂನ್ ತಿಂಗಳಲ್ಲಿ ಪರೀಕ್ಷೆ ನಡೆದು ಕ್ಲಾಸ್ ಪ್ರಮೋಷನ್ ಹೊಂದಿದ ಒಬ್ಬ ವಿದ್ಯಾರ್ಥಿಯು ಜುಲೈ ತಿಂಗಳಲ್ಲಿ ಮೊದಲನೆಯ ಸ್ಕೂಲಿಗೆ ಎರಡನೆಯ ಸ್ಕೂಲಿನಿಂದ ಲೀವಿಂಗ್ ಸರ್ಟಿಫಿಕೇಟು ತಂದು ಸೇರಿದರೆ ಅವನಿಗೆ ಪಾಠ ನಡೆಸುವುದು ಹೇಗೆ ? ಮೊದಲನೆಯ ಸ್ಕೂಲಿನಲ್ಲಿ ನಡೆದಿರುವ ಪಾಠಗಳಿಂದ ಮುಂದಕ್ಕೆ ನಡೆಸಿದರೆ ವಿದ್ಯಾರ್ಥಿಯು ಎಷ್ಟು ಬುದ್ಧಿವಂತನಾಗಬಹುದು ? ಅಥವಾ ಮೊದಲಿಂದಲೂ ಪ್ರಾರಂಭಿಸಿ ಪಾಠ ನಡೆಸಲು ಸಾಧ್ಯವೇ ? ಇಂತಹ ತೊಂದರೆಗಳಿಲ್ಲದಂತಾಗಲು ಎಲ್ಲ ಸ್ಕೂಲುಗಳಲ್ಲೂ ಒಂದೇಕಾಲದಲ್ಲಿ, ಅಥವಾ ಒಂದೇ ತಿಂಗಳಲ್ಲಿಯಾದರೂ ವಾರ್ಷಿಕ ಪರೀಕ್ಷೆಗಳು ನಡೆಯಬೇಕು. ಆದುದರಿಂದ ಈ ಪರೀಕ್ಷೆಗಳನ್ನು ಇನ್ಸ್ಪೆಕ್ಟರುಗಳೇ ನಡೆಸಬೇಕೆಂದರೆ ಸಾಧ್ಯವಿಲ್ಲ. ಇದಕ್ಕಾಗಿ ಶಕ್ತರಾದ, ತಯಾರಾದ ಉಪಾಧ್ಯಾಯರುಗಳನ್ನೇ ಹೆಡ್ಮಾಸ್ಟರುಗಳನ್ನಾಗಿ ಮಾಡಿ ಆ ಕೆಲಸವನ್ನು ಅವರಿಗೇ ವಹಿಸಬೇಕು. ಮತ್ತು ತರಬಿಯತ್ತಾಗದಿರುವ ಒಬ್ಬರೇ ಮಾಸ್ಟರಿರುವ ಸ್ಕೂಲುಗಳನ್ನು ಪರೀಕ್ಷಿಸಲು ಆಯಾ ಪ್ರಾಂತದ ಮಧ್ಯರಾಷ್ಟ್ರದಲ್ಲಿರುವ ಶಕ್ತರಾದ ಉಪಾಧ್ಯಾಯರನ್ನು ಗೊತ್ತುಮಾಡಬೇಕು. ಅಥವಾ ಇನ್ಸ್ಪೆಕ್ಟಿಂಗ್ ಸ್ಕೂಲ್ಮಾಸ್ಟರುಗಳನ್ನು ಗೊತ್ತುಮಾಡಿ ಅವರು ಸ್ಕೂಲ್ ಪರೀಕ್ಷೆಗಳನ್ನು ನಡೆಸುವುದಲ್ಲದೆ ಹೊಸ ಹೊಸ ಬೋಧನ ಕ್ರಮಗಳನ್ನು ಪ್ರಚಾರಪಡಿಸುವಂತೆ ಏರ್ಪಡಿಸಬೇಕು. ಹೀಗೆ ಮಾಡುವುದರಿಂದ ಮೇಲ್ಕಂಡ ಮತ್ತು ಇತರ ತೊಂದರೆಗಳು ತಪ್ಪುವುದಲ್ಲದೆ [illegible]

ಹೆಚ್ಚುವುದು. ಇದರಮೇಲೆ ಇನ್‌ಸ್ಪೆಕ್ಟರ್‌ಗಳು ಆಗಾಗ್ಗೆ ಬಂದು ಸ್ಕೂಲಿನ ಒಟ್ಟು ಸ್ಥಿತಿಯನ್ನು ನೋಡಿಕೊಂಡು. ಏನಾದರೂ ಅಕ್ರಮಗಳಿದ್ದರೆ ಸರಿಪಡಿಸಿಕೊಂಡು ಹೋಗಬಹುದು.

೨. ಈಗ ಅನೇಕರು ಅಪ್ಪರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದರೂ ಇಂಗ್ಲಿಷಿನ ಗಂಧವೇ ಇಲ್ಲದವರಾಗಿರುತ್ತಾರೆ. ಆದರೆ ದೇಶವೆಲ್ಲ ಇಂಗ್ಲಿಷ್‌ಮಯವಾಗುತ್ತಿದೆ. ಆದುದರಿಂದ ನಾಲ್ವರು ಸೇರಿ ಮಾತನಾಡುವಕಡೆ ಅಪ್ಪರ್ ಸೆಕೆಂಡರಿಪ್ಯಾಸ್ ಮಾಡಿದವರೂ ಸೇರಿದರೆ ಸ್ವಲ್ಪಮಟ್ಟಿಗೆ ವಿಷಯಗಳು ತಿಳಿದಿದ್ದರೂ ಕಿವುಡರಂತೆಯೂ, ಮೂಗರಂತೆಯೂ ಇರಬೇಕಾಗಿರುವುದು. ಆದುದರಿಂದ ಅಪ್ಪರ್ ಸೆಕೆಂಡರಿ ತರಗತಿಗಳಲ್ಲಿ ಈಗ ಸಂಸ್ಕೃತವು ದ್ವಿತೀಯಭಾಷೆಯಾಗಿರುವಂತೆ ಸ್ವಲ್ಪಮಟ್ಟಿಗೆ ಇಂಗ್ಲಿಷನ್ನು ತೃತೀಯಭಾಷೆಯನ್ನಾಗಿ ಕಲಿಸುವಂತೆ ಏರ್ಪಡಿಸಬೇಕು.

೩. ಪಂಡಿತತರಗತಿಗಳಲ್ಲಿ ಈಗ ಬರೀ ಭಾಷಾಭಾಗವನ್ನೇ ಹೆಚ್ಚಾಗಿ ಹೇಳಿಕೊಡುತಿರುವರು. ಅವುಗಳಲ್ಲಿ ಯಾವುದನ್ನಾದರೂ ಸ್ವಲ್ಪ ಕಡಿಮೆಮಾಡಿ ಅಪ್ಪರ್ ಸೆಕೆಂಡರಿಯ ಮುಂದಕ್ಕೆ ಇರುವ ಸೈನ್ಸ್ ವಿಷಯಗಳನ್ನು ಹೇಳಿಕೊಡುವಂತೆ ಏರ್ಪಡಿಸುವುದರಿಂದ ವಿಜ್ಞಾನಾರ್ಜನೆಗೆ ಅತ್ಯಂತ ಸಹಾಯವಾಗುವುದು,

4. ಉಪಾಧ್ಯಾಯರನೇಕರ ವಾಕ್ಯರಚನೆಯಂತೂ ಅತ್ಯಂತ ಹಿಂದಿರುವುದು. ಟ್ರೈನಿಂಗ್‌ಆಗಿ ಬಂದವರೂ ವಾಕ್ಯರಚನೆಗೆ ಗಮನಕೊಟ್ಟಿರುವಂತೆ ಕಾಣಬರುವುದಿಲ್ಲ. ಆದುದರಿಂದ ಇಂಗ್ಲಿಷ್ ಟ್ರೈನಿಂಗ್ ತರಗತಿಯಲ್ಲಿ ವಾಕ್ಯರಚನೆಯನ್ನು ಬರೆಸಿ ಸರಿಪಡಿಸಿಕೊಡುತಿರುವಂತೆ ಕನ್ನಡ ಟ್ರೈನಿಂಗ್ ತರಗತಿಗಳಲ್ಲೂ ವಾಕ್ಯರಚನಾ ಶಕ್ತಿಯನ್ನು ಸರಿಪಡಿಸಿಕೊಡುವಂತೆ ಏರ್ಪಡಿಸಬೇಕು.

ಈರೀತಿಯಲ್ಲಿ ಪ್ರಾರ್ಥಿಸುವ

ವಿದ್ಯಾಭ್ಯಾಸೋತ್ಸಾಹಿ.

ಸ್ಕೂಲ್ ಡಿಸಿಪ್ಲಿನ್

(78 ನೇ ಪುಟದ ಶೇಷ)

(1) ತಕ್ಕಷ್ಟು ಗಾಳಿ ಬೆಳಕು ತರಗತಿಯೊಳಕ್ಕೆ ಬಾರದಿರುವುದು.

(2) ಪಕ್ಕದ ತರಗತಿಯಲ್ಲಿ ಗದ್ದಲವಾಗುವುದು.

(3) ಊರಮಧ್ಯದಲ್ಲಿ ಸಂತೆ, ಜನಸಂಘ ಸೇರುವ ಸ್ಥಳ ಇವುಗಳ ಸಮೀಪದಲ್ಲಿ ಪಾಠಶಾಲೆ ಇರುವುದು ಇವೆಲ್ಲಾ ಇದಕ್ಕುದಾಹರಣೆಗಳಾಗಿವೆ.

ಗಮನವನ್ನು ಹೆಚ್ಚಿಸುವುದಕ್ಕೆ ಉಪಾಯಗಳು,

I. ಮಕ್ಕಳ ಯೋಗ್ಯತೆಗೆ ತಕ್ಕ ಪಾಠವನ್ನು ಆರಿಸಿಕೊಳ್ಳುವುದು.

II. ಒಂದೊಂದುಕಾಲದಲ್ಲಿ ಒಂದೇ ವಿಷಯವನ್ನು ಕುರಿತು ಪಾಠಹೇಳಬೇಕು. ಅಸಂಬದ್ಧವಾದ ಅನೇಕ ವಿಷಯಗಳನ್ನು ಜೊತೆಗೂಡಿಸಬಾರದು. ಒಂದು ವಿಷಯಕ್ಕೆ ಸೇರಿದ ಬೇರೆಬೇರೆ ಭಾಗಗಳನ್ನು ಹೇಳುವಾಗ ಅವುಗಳಿಗೆಲ್ಲಾ ಪರಸ್ಪರ ಸಂಬಂಧವನ್ನು ಕಲ್ಪಿಸಿ ಆ ದಿವಸದ ಮುಖ್ಯಾಂಶಕ್ಕೆ ಹೊಂದಿಸಿ ಪಾಠದಲ್ಲಿ ಐಕ್ಯವನ್ನುಂಟುಮಾಡಬೇಕು,

III. ಮಕ್ಕಳಿಗೆ ಬೇಜಾರಾಗುವುದರೊಳಗೆ ಪಾಠವು ಮುಗಿಯುವಂತಿರಬೇಕು.

IV. ಆರಿಸಿಕೊಂಡ ವಿಷಯವನ್ನು ಮಕ್ಕಳ ಸ್ವಭಾವಕ್ಕೂ, ವಯಸ್ಸಿಗೂ ಸರಿಹೋಗುವ ದಾರಿಯಲ್ಲಿ ಬೋಧಿಸಬೇಕು.

V. ಪಾಠಶಾಲೆಯ ಕಾಲದಲ್ಲಿ ಉಚಿತವಾದ ಕೆಲಸಗಳನ್ನು ಕೊಟ್ಟು ಮಕ್ಕಳಿಂದ ಮಾಡಿಸುತ್ತಾಬಂದರೆ ಅವರಲ್ಲಿ ಗಮನಶಕ್ತಿಯು ವೃದ್ಧಿಯಾಗಲು ಸಹಾಯವಾಗುವುದು. ಏಕೆಂದರೆ ಸೋಮಾರಿತನಕ್ಕೆ ಅವಕಾಶವಿದ್ದಷ್ಟೂ ಗಮನವು ಕ್ಷೀಣವಾಗುವುದು.

ಮೇಲೆ ಹೇಳಿದ ಅಂಶಗಳ ಜತೆಗೆ ಪಾಠಕಾಲದಲ್ಲಿ ಮಕ್ಕಳ ಅವಧಾನವನ್ನು ಹೆಚ್ಚಿಸುವುದಕ್ಕೆ ಕೆಲವು ಸಣ್ಣ ಉಪಾಯಗಳುಂಟು. ಮಕ್ಕಳಿಗೆ ಬೇಸರವಾಯಿತೆಂದು ತೋರಿದಾಗ ಅವುಗಳನ್ನು ಉಪಯೋಗಿಸಿಕೊಳ್ಳಬಹುದು. ಅವು ಯಾವುವೆಂದರೆ —

(i) ಒಂದೆರಡು ನಿಮಿಷ ಡ್ರಿಲ್ ಮಾಡಿಸುವುದು.

(ii) ಒಟ್ಟೊಟ್ಟು ಉತ್ತರಗಳನ್ನು ಮಕ್ಕಳಿಂದ ಸ್ವಲ್ಪಹೊತ್ತು ಹೇಳಿಸುವುದು.

(iii) ಉಪಾಧ್ಯಾಯರೇ ಪ್ರಶ್ನಿಸುವುದಕ್ಕೆ ಬದಲಾಗಿ ಮಕ್ಕಳೇ ಒಬ್ಬರನ್ನೊಬ್ಬರು ಪ್ರಶ್ನೆಮಾಡುವಂತೆ ಮಾಡುವುದು.

(iv) ಪ್ಲೇಸ್ ಕೊಡಿಸುವುದು ಮುಂತಾದುವು.

III. **ಉದ್ಯೋಗ**—ಎಂದರೆ ಮನಃಪೂರ್ವಕವಾಗಿ ಯಾವಾಗಲೂ ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಲೇ ಇರುವುದು.

ಈ ಗುಣವು ಸರ್ವರಿಗೂ ಸಾಧ್ಯವಾದುದು. ಈ ಉದ್ಯೋಗವು ನಮ್ಮ ಸ್ಕೂಲಿನ ಕೆಲಸಕ್ಕೆ ಸಹಾಯವಾಗುವುದಲ್ಲದೆ ಲೋಕವ್ಯವಹಾರದಲ್ಲೂ ಪ್ರಯೋಜನಕಾರಿಯಾಗುವುದು. ಉದ್ಯೋಗಿಯಾಗಿರುವವನಿಗೆ ಗೌರವವುಂಟು. ಮನಸ್ಸು ಬಂದಾಗ ಕೆಲಸ ಮಾಡುವುದು, ಬಾರದಾಗ ಬಿಡುವುದು, ತುಂಬಾ ಸೋಮಾರಿಯಾಗಿರುವುದು, ಇವೆಲ್ಲಾ ಉದ್ಯೋಗಕ್ಕೆ ವಿರುದ್ಧವಾದವುಗಳು-ಇವುಗಳು ಮಕ್ಕಳಲ್ಲಿ ಕಾಣಿಸಿಕೊಂಡರೆ ಒಡನೆಯೇ ಖಂಡಿತ ತಪ್ಪಿಸಬೇಕು. ಪ್ರತಿದಿವಸವೂ ಕ್ಲುಪ್ತಕಾಲದಲ್ಲಿ ಬಿಡದೆ ಕೆಲವುವರ್ಷ ಮಕ್ಕಳಿಂದ ಕೆಲಸಮಾಡಿಸುತ್ತ ಬಂದರೆ ಅವರಲ್ಲಿ ಉದ್ಯೋಗವು ನೆಲೆಗೊಳ್ಳುವುದು. ಮಕ್ಕಳಲ್ಲಿ ಉದ್ಯೋಗವನ್ನುಂಟುಮಾಡುವುದರಲ್ಲಿ ಸಹಕಾರಿಯಾದ ಕೆಲವು ಅಂಶಗಳನ್ನು ಉಪಾಧ್ಯಾಯರು ತಿಳಿಯಬೇಕು. ಯಾವುವೆಂದರೆ—

a ಬಾಲಕರನ್ನು ಸರಿಯಾಗಿ ವರ್ಗೀಕರಿಸುವುದು. ಹೊಸಹುಡುಗರನ್ನು ಸೇರಿಸಿಕೊಳ್ಳುವುದರಲ್ಲೂ ಹಳೇ ಹುಡುಗರಿಗೆ ಪ್ರಮೋಷನ್ ಕೊಡುವುದರಲ್ಲೂ ವರ್ಗೀಕರಣದ ನಿಯಮಗಳಿಗೆ ಗಮನಕೊಡಬೇಕು. ಯೋಗ್ಯತೆಗೆ ಮೀರಿದ ತರಗತಿಗೆ ಸೇರಿಸಿದರೆ ಕಾರ್ಯವು ಹುಡುಗರಿಗೆ ಸಾಧ್ಯವಲ್ಲದೇ ಹೋಗಿ ಸೋಮಾರಿತನಕ್ಕೆ ಅವಕಾಶವಾಗುವುದು. ಯೋಗ್ಯತೆಗೆ ಕಡಿಮೆಯಾದ ತರಗತಿಗೆ ಸೇರಿಸಿದರೆ ಕೆಲಸವು ಲಘುವಾಗಿ ತೋರಿ ಅಶ್ರದ್ಧೆ ತೋರುವುದರಿಂದ ಉದ್ಯೋಗವು ಕಡಿಮೆಯಾಗುವುದು.

b ಒಳ್ಳೆಯ ವೇಳಾಪತ್ರಿಕೆಯನ್ನು ರಚಿಸಿ ಅದಕ್ಕನುಸಾರವಾಗಿ ಕೆಲಸವನ್ನು ನೆರವೇರಿಸುತ್ತಾ ಬರಬೇಕು. ಉದ್ಯೋಗವೆಂಬುವುದು ಒಂದು ದಿವಸದಲ್ಲಿ ಬರತಕ್ಕ

ಗುಣವಲ್ಲ. ಬಹುಕಾಲ ಏಕರೀತಿಯಾಗಿ ಕೆಲಸಮಾಡುತ್ತಾ ಬಂದರೆ ಈ ಗುಣವು ಬಂದೀತು. ಆದ್ದರಿಂದ ವೇಳಾಪತ್ರಿಕೆಯಂತೆ ನಿಶ್ಚಿತ ಕೆಲಸವಾಗಬೇಕು.

c ಪ್ರೋಗ್ರೆಸ್ ರೆಜಿಸ್ಟರನ್ನು ಪ್ರತಿ ತರಗತಿಗೂ ಇಡಬೇಕು. ಒಂದೊಂದು ತಿಂಗಳಲ್ಲಿ ನಡೆಯಬೇಕಾದ ಪಾಠಗಳನ್ನು ನಿಷ್ಕರ್ಷಿಸಿ ಅದರಂತೆ ಪಾಠ ಸಾಗುವಹಾಗೆ ನೋಡಿಕೊಳ್ಳಬೇಕು ಇದರಿಂದ ಒಂದು ಕಾಲದಲ್ಲಿ ವೇಗವಾಗಿ ನಡೆಯುವುದು ಮತ್ತೊಂದು ಕಾಲದಲ್ಲಿ ಸಾವಕಾಶವಾಗಿ ನಡೆಯುವುದು ಇವೆಲ್ಲಾ ತಪ್ಪಿ ದಿನನಿತ್ಯ ಏಕರೀತಿಯಾಗಿ ಪಾಠ ನಡೆಯುವುದು.

d ಆಗಾಗ್ಗೆ ನಡೆದ ಪಾಠಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷಿಸುತ್ತಿರಬೇಕು. ಪರೀಕ್ಷೆಯ ಫಲಿತಾಂಶವನ್ನು ರೆಜಿಸ್ಟರಿನಲ್ಲಿ ಬರೆದಿಟ್ಟಿದ್ದು ಅದರ ನಕಲನ್ನು ಹುಡುಗರ ತಾಯಿತಂದೆಗಳಿಗೆ ಇಲ್ಲವೆ ಪೋಷಕರಿಗೆ ಕಳುಹಿಸಿಕೊಡಬೇಕು.

e ಉಪಾಧ್ಯಾಯರು ಉತ್ಸಾಹದಿಂದ ಪಾಠಹೇಳುತ್ತಾ ಮಕ್ಕಳಿಗೆ ಶಾಲೆಯ ಕೆಲಸದಲ್ಲಿ ಅಭಿರುಚಿಯನ್ನು ಹುಟ್ಟಿಸಬೇಕು. ಇದರಿಂದ ಬೇಸರವಿಲ್ಲದೆ ಕೆಲಸಮಾಡುವಹಾಗೆ ಮಕ್ಕಳಿಗೆ ಉತ್ತೇಜನವು ಆಗುವುದು.

f ಉಪಾಧ್ಯಾಯರು ತಾವು ಸರ್ವದಾ ಕೆಲಸದಲ್ಲಿ ನಿರತರಾಗಿದ್ದು ಉದ್ಯೋಗಕ್ಕೆ ಮಕ್ಕಳಿಗೆ ಮೇಲ್ಪಂಕ್ತಿಯಾಗಿರಬೇಕು.

g ಉದ್ಯೋಗಕ್ಕೆ ವಿರುದ್ಧವಾದ ಗುಣಗಳು ಮಕ್ಕಳಲ್ಲಿದ್ದರೆ ಆ ಕಾರಣವನ್ನು ವಿವೇಚಿಸಿ ತಪ್ಪಿಸಬೇಕು. ಅವು ಯಾವುವೆಂದರೆ

(i) ಸೋಮಾರಿತನ. ಇದನ್ನು ತಪ್ಪಿಸುವುದರಲ್ಲಿ ಮಕ್ಕಳ ಪೋಷಕರ ಸಹಾಯವು ಆವಶ್ಯಕ. ಇದರ ಜತೆಗೆ ಸ್ಕೂಲಿನಲ್ಲಿ ತಕ್ಕ ಪ್ರೋತ್ಸಾಹ ಕೊಟ್ಟು ಸ್ವಲ್ಪ ಸ್ವಲ್ಪ ಉದ್ಯೋಗದ ದಾರಿಗೆ ಹುಡುಗರನ್ನು ತರಬೇಕು. ಇದು ಸಾಧ್ಯವಾಗದಿದ್ದರೆ ಚೆನ್ನಾಗಿ ದಂಡಿಸಬೇಕು.

(ii) ಚಿತ್ತಸ್ಥೈರ್ಯವಿಲ್ಲದಿರುವುದು. ಇದು ಮಕ್ಕಳಿಗೆ ಸ್ವಾಭಾವಿಕ ಸಹಜವಾದುದು. ಆದುದರಿಂದ ಮಕ್ಕಳಿಗೆ ಅಭಿರುಚಿ ಹುಟ್ಟಿಸುವಂತಹ ಉದ್ಯೋಗಗಳನ್ನು

ತೋರಿಸಿ ನೋಡನೋಡಲು ಕೆಲಸ ಮಾಡಿಸುತ್ತಾ ಒಂದು ಚಿತ್ತಸ್ಥೈರ್ಯವನ್ನುಂಟು ಮಾಡಬೇಕು.

(iii) ಕೆಲಸಮಾಡುವುದರಲ್ಲಿ ಕ್ರಮ ತಿಳಿಯದೇ ಇರುವುದು. ಸಂದರ್ಭದಲ್ಲಿ ಸರಿಯಾದ ಕ್ರಮವನ್ನು ಉಪಾಧ್ಯಾಯರು ತಿಳಿಸಿಕೊಡಬೇಕು.

IV. **ವಿಧೇಯತೆ**— ಮೇಲ್ಪಟ್ಟವರ ಅಧಿಕಾರಕ್ಕೆ ಒಳಪಡುವುದಕ್ಕೆ ವಿಧೇಯತೆಯೆಂದು ಹೆಸರು. ಈ ಗುಣವು ಮಕ್ಕಳಲ್ಲಿ ಅತ್ಯವಶ್ಯಕ. ಏಕೆಂದರೆ ಅವರಿಗೆ ಯುಕ್ತಾಯುಕ್ತ ವಿವೇಚನೆಯಿಲ್ಲದಿರುವುದರಿಂದ ಮತ್ತೊಬ್ಬರ ಮಾತನ್ನು ಕೇಳದೆ ಅವರು ಸ್ವತಂತ್ರರಾಗಿರುವುದಾದರೆ ಅನೇಕ ಕೇಡುಗಳಿಗೆ ಗುರಿಯಾಗಬಹುದು ಆದುದರಿಂದ ಹೇಗಾದರೂ ಮಾಡಿ ಮಕ್ಕಳಲ್ಲಿ ವಿಧೇಯತೆಯನ್ನುಂಟುಮಾಡಬೇಕು. ತಮ್ಮ ಇಷ್ಟಾನುಸಾರ ನಡೆಯುವುದನ್ನು ಬಿಟ್ಟು ಇತರರ ಮತಕ್ಕನುಸಾರವಾಗಿ ನಡೆಯುವುದನ್ನು ಕಲಿಸಬೇಕು. ಈರೀತಿಯಾಗಿ ಪ್ರಥಮದಲ್ಲಿ ಪೂರ್ಣವಾದ ವಿಧೇಯತೆಯನ್ನು ಹುಟ್ಟಿಸಿ ವಿವೇಕ ಹೆಚ್ಚುತಾ ಹೆಚ್ಚುತಾ ಸ್ವಾತಂತ್ರ್ಯವನ್ನು ಸ್ವಲ್ಪಸ್ವಲ್ಪ ಕೊಡುತ್ತಾ ಬರಬೇಕು.

ವಿಧೇಯತೆಯನ್ನು ಮಕ್ಕಳಲ್ಲಿ ಉಂಟುಮಾಡುವುದಕ್ಕೆ ಎರಡು ದಾರಿಗಳಿವೆ.

(i) ಮಕ್ಕಳನ್ನು ಪ್ರೀತಿಸುತ್ತಾ ಒಳ್ಳೆಯಮಾತಿನಲ್ಲೇ ಅವರನ್ನು ನಮಗೆ ವಿಧೇಯರಾಗುವಂತೆ ಮಾಡಿಕೊಳ್ಳುವುದು ಒಂದು. ಇದು ಉತ್ತಮ. ಇದು ಸಾಧ್ಯವಿಲ್ಲದಿದ್ದರೆ ಮಧ್ಯಮಪಕ್ಷದಲ್ಲಿ ಅಂದರೆ

(ii) ಹೆದರಿಕೆಯಿಂದಲಾದರೂ ವಿಧೇಯತೆಯನ್ನು ಮಕ್ಕಳಲ್ಲಿ ಉಂಟುಮಾಡಲೇಬೇಕು- ಈ ಗುಣವನ್ನು ಕಲಿಸುವುದರಲ್ಲಿ ಉಪಾಧ್ಯಾಯರು ಕೆಲವು ಅಂಶಗಳನ್ನು ಮರೆಯಬಾರದು.

a. ಅಪ್ಪಣೆಕೊಡುವಾಗ ಮೊದಲು ಚೆನ್ನಾಗಿ ಪರಿಶೀಲಿಸಿ ಕೊಡಬೇಕು.

b. ನಿಧಾನವಾಗಿಯೂ ಗಂಭೀರವಾಗಿಯೂ ಕೆಲಸಗಳನ್ನು ನಡೆಸಬೇಕು. ಅತಿ ಮೆಲ್ಲಗೆ ಮಾತಾಡುವುದೂ ದಂಡಿಸದೇ ಬಾಯಲ್ಲೇ ಬೆದರಿಸುವುದೂ ಇವೆಲ್ಲಾ ವಿಧೇ [illegible]

೮ ಮಕ್ಕಳಿಂದ ಗೌರವವನ್ನು ಸಂಪಾದಿಸಬೇಕು.

೧೦ ಅನ್ಯಾಯಯುಕ್ತಿಯನ್ನು ಕಂಡವರನ್ನು ಚೆನ್ನಾಗಿ ದಂಡಿಸಬೇಕು.

೧೧. ಸತ್ಯ—ನಡತೆಯೆಂಬ ಮನೆಗೆ ಸತ್ಯವು ಕಂಬವೆನ್ನುವರು. ಅಂದರೆ ಸತ್ಯದ ಮೇಲೆ ನಿಂತಿಲ್ಲದ ನಡತೆಯು ವ್ಯರ್ಥ. ಸಾಕ್ಷಾತ್ತಾಗಿ ಅಸತ್ಯವನ್ನು ನುಡಿಯದಿದ್ದರೂ ಮಕ್ಕಳು ಪರೋಕ್ಷವಾಗಿ ಅಸತ್ಯವನ್ನು ತೋರ್ಪಡಿಸುವರು. ಅತ್ಯುಕ್ತಿ, ದ್ವಂದ್ವಾರ್ಥವುಳ್ಳ ಮಾತು, ಮರೆಮಾಚುವುದು, ಮಾತುಕೊಟ್ಟು ತಪ್ಪುವುದು, ಮಾಡಿದ ತಪ್ಪಿಗೆ ಸಮಾಧಾನಗಳನ್ನು ಕಲ್ಪಿಸುವುದು, ಕಾಪಿ ಮಾಡುವುದು, ಕಾಪಿ ಮಾಡುವವರಿಗೆ ಸಹಾಯಮಾಡುವುದು, ಇವೆಲ್ಲಾ ಅಸತ್ಯವೇ.

ಇಂತಹ ಅಸತ್ಯವು ಮಕ್ಕಳಲ್ಲಿ ಕಾಣುವುದಕ್ಕೆ ಅನೇಕ ಕಾರಣಗಳುಂಟು. ಅವು ಯಾವುವೆಂದರೆ

(1) ಉಪಾಧ್ಯಾಯರು ಅತಿ ಕ್ರೂರಿಯಾಗಿದ್ದರೆ ಅವರ ಕ್ರೌರ್ಯವನ್ನು ತಪ್ಪಿಸಿಕೊಳ್ಳುವುದಕ್ಕೆ ಮಕ್ಕಳು ಸುಳ್ಳು ಹೇಳುವುದುಂಟು.

(2) ಜಂಭವಿದ್ದರೆ ತಮ್ಮ ಯೋಗ್ಯತೆಯನ್ನು ಪ್ರಕಟಿಸಬೇಕೆಂಬ ಅಭಿಲಾಷೆಯಿಂದ ಸುಳ್ಳು ಹೇಳುವುದುಂಟು.

(೩) ಸ್ವಾರ್ಥಪರತೆ ಹೆಚ್ಚಾಗಿದ್ದರೆ ತಮ್ಮ ಇಷ್ಟಾನುಸಾರ ನಡೆಯಲೆಂದು ಸುಳ್ಳುಹೇಳುವುದುಂಟು.

(4) ಕಲ್ಪನಾಶಕ್ತಿ ಹೆಚ್ಚಾಗಿ ವಿಕಾರವಿದ್ದರೆ ಸುಳ್ಳು ಹೇಳುವುದುಂಟು.

(5) ತಮಾಷೆಗಾಗಿ ಸುಳ್ಳು ಹೇಳುವುದುಂಟು. ಹೀಗೆ ಅಸತ್ಯಕ್ಕೆ ಇರುವ ಕಾರಣಗಳನ್ನು ಪರಿಶೀಲನೆ ಮಾಡಿ ಕಾರಣಕ್ಕನುಸಾರವಾಗಿ ನಡೆಯುತ್ತಾ ಸತ್ಯವನ್ನು ನೆಲೆಗೊಳಿಸಬೇಕು.

ಇದನ್ನು ನೆಲೆಗೊಳಿಸಲು ಉಪಾಧ್ಯಾಯರು ಜ್ಞಾಪಕದಲ್ಲಿಡಬೇಕಾದ ಅಂಶಗಳು.

(ಸಶೇಷ)

ವಿದ್ಯಾದಾಯಿನಿ

(A Monthly Journal.)

ಭಾಗ ೨] ಮೇ—೧೯೧೪. [ಸಂಚಿಕೆ ೫

ಪಾಠಕರ ಮಹಾಸಭೆ.

ನಾಗರಿಕತೆಯುಳ್ಳ ದೇಶಗಳಲ್ಲೆಲ್ಲಾ ಪಾಠಕರ ಮಹಾಸಭೆಯು ನಡೆಯುವುದು. ಈ ಸಭೆಗೆ ವಿದ್ಯಾಭಿಮಾನಿಗಳೆಲ್ಲರೂ ಕರೆಯಲ್ಪಡುವರು. ಎಲ್ಲಾ ಪಾಠಕರೂ ಮತ್ತು ವಿದ್ಯಾಭಿಮಾನಿಗಳೂ ಸೇರಿ ವಿದ್ಯಾಭ್ಯಾಸಕ್ರಮಗಳಲ್ಲಿ ನ್ಯೂನಾತಿರೇಕಗಳು ಇರುವುವೇ ಅಥವಾ ಇಲ್ಲವೇ ಎಂಬ ವಿಷಯವನ್ನು ಪರ್ಯಾಲೋಚಿಸುವರು. ವಿದ್ಯಾಭ್ಯಾಸವು ಅತ್ಯುತ್ತಮಸ್ಥಿತಿಗೆ ಬರಬೇಕಾದರೆ ತಿದ್ದುಪಾಟುಗಳು ಏನಾದರೂ ಆವಶ್ಯಕವೆ ಎಂಬ ವಿಷಯವನ್ನು ಪರ್ಯಾಲೋಚಿಸುವುದು ಮುಖ್ಯ. ಮದರಾಸು ಸಂಸ್ಥಾನದಲ್ಲಿ ಪ್ರತಿವರುಷವು ಇಂಥಾ ಸಭೆಯೊಂದು ನಡೆಯುವುದು. ತಿದ್ದುಪಾಟುಗಳನ್ನು ಸೂಚಿಸತಕ್ಕವರಿಗೆಲ್ಲಾ ಅದರಲ್ಲಿ ಅವಕಾಶವು ಕೊಡಲ್ಪಡುವುದು. ಸರ್ ಪಿ. ಎನ್. ಕೃಷ್ಣಮೂರ್ತಿಗಳ ಕಾಲದಲ್ಲಿ ಈ ಸಂಸ್ಥಾನದಲ್ಲಿಯೂ ಇಂಥಾ ಸಭೆಯು ಒಂದು ಏರ್ಪಡಿಸಲ್ಪಟ್ಟಿತ್ತು. ಆದರೆ ಎಲ್ಲಾ ಪಾಠಕರೂ, ಎಲ್ಲಾ ವಿದ್ಯಾಭಿಮಾನಿಗಳೂ ಸದರಿ ಸಭೆಗೆ ದಯಮಾಡಿಸಿ ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಆ ಸಭೆಯಲ್ಲಿ ಅವಕಾಶವು ಮಾಡಲ್ಪಟ್ಟಿರಲಿಲ್ಲ. ಇಂಥಾ ಏರ್ಪಾಡು ಮಾಡಲ್ಪಡುವುದಕ್ಕೆ ಆ ಸಭೆಯು ಅವಕಾಶ ಮಾಡಲ್ಪಡುವುದೆಂದು ನಂಬಲ್ಪಟ್ಟಿತು. ಆ ಸಭೆಯು ಒಂದು ವರುಷದಲ್ಲಿಯೇ ನಿಂತುಹೋಯಿತು. ಈಗ ಎಕ್ಸಾಮಿನರ್

ಕಾನ್‌ಫರೆನ್ಸು ಏರ್ಪಾಡಾದಮೇಲೆ ಎಡ್ಯುಕೇಷನ್ ಕಮಿಟಿ ಒಂದಾಯಿತು. ಈ ಕಮಿಟಿಯವರು ಪ್ರತಿ ತಿಂಗಳಲ್ಲಿಯೂ ಮೀಟಿಂಗ್‌ಮಾಡಿ ವಿದ್ಯಾಭ್ಯಾಸದ ಅಭಿವೃದ್ಧಿಗೋಸ್ಕರ ಬಹಳ ಮೆಹನತ್ತನ್ನು ಮಾಡುತ್ತಲಿದಾರೆ. ಆದರೆ ವಿದ್ಯಾಭ್ಯಾಸದಲ್ಲಿ ಪ್ರತಿದಿವಸವೂ ಕೆಲಸಮಾಡತಕ್ಕ ಜನಗಳು ಸೇರಿ ಯಾವತಿದ್ದುಪಾಟುಗಳನ್ನು ಪರ್ಯಾಲೋಚಿಸಿದರೆ ವಿದ್ಯಾಭ್ಯಾಸದ ಕ್ರಮವೂ ಒಳ್ಳೇಸ್ಥಿತಿಗೆ ಬರುವುದೋ ಆ ಏರ್ಪಾಡುಗಳು ಸಮಗ್ರವಾಗಿ ನಡೆಯುತ್ತಲಿಲ್ಲ. ಸರ್ಕಾರದವರು ಯಾವಯಾವ ಏರ್ಪಾಡುಗಳಿಗೆ ಉತ್ತೇಜನವನ್ನು ಕೊಡಬಹುದೋ ಅಂಥಾವಿಷಯಗಳು ಮಾತ್ರ ಪರ್ಯಾಲೋಚಿಸಲ್ಪಡುತ್ತಲಿವೆ. ಅದು ಅತ್ಯಂತ ಅವಶ್ಯಕವಾದುದು. ಸರ್ಕಾರದವರು ಮಾಡತಕ್ಕ ಕೆಲಸಗಳನ್ನು ಮ|| ವಿಶ್ವೇಶ್ವರೈಯ್ಯನವರು ತಮ್ಮ ದಿವಾನ್‌ಗಿರಿಯಲ್ಲಿ ಬಹಳ ವಿಚಕ್ಷಣೆಯಿಂದ ಜನಸಮ್ಮತಿಯುತ ನಡೆಯಿಸಬೇಕೆಂಬುದು ಅವರ ಅಭಿಪ್ರಾಯ. ಇದರಜತೆಗೆ ಪಾಠಕರ ಕಾನ್‌ಫರೆನ್ಸ್ ಮಹಾಸಭೆಯು ನಡೆಯುವುದಕ್ಕೆ ಅವಕಾಶ ಕೊಡಲ್ಪಟ್ಟರೆ ಪಾಠಕರು ವಿದ್ಯಾಭಿವೃದ್ಧಿಯ ವಿಷಯದಲ್ಲಿ ಸರ್ಕಾರದವರು ಏನುಮಾಡಬೇಕೋ ಅದನ್ನು ಪಾಠಕರು ಹೇಗೆ ಕೆಲಸಮಾಡಿದರೆ ಇತೋಪ್ಯತಿಶಯವಾಗಿವಿದ್ಯಾಭ್ಯಾಸದ ಕೆಲಸಗಳು ನಡೆಯುವುದೋ ಅದನ್ನು ಪರ್ಯಾಲೋಚಿಸಿ ಸಾರಭೂತವಾದ ವಿಷಯಗಳನ್ನು ಸರ್ಕಾರಕ್ಕೆ ತಿಳಿಸುವುದಕ್ಕೆ ಅವಕಾಶವಾಗುವುದು. ಇದರಿಂದ ಸರ್ಕಾರದವರು ಮಾಡುತ್ತಲಿರುವ ದುಂದುಖರ್ಚು ಸಾರ್ಥಕವಾಗುವುದು. ನಮ್ಮ ಇನ್‌ಸ್ಪೆಕ್ಟರ್ ಜನರಲ್‌ರಾದ ಮ|| ಶ್ಯಾಮರಾಯರವರು ನಮ್ಮ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ಲರಾದ ಮ|| ಕೃಷ್ಣರಾಯರವರೂ ವಿದ್ಯಾಭ್ಯಾಸವು ಅತ್ಯುತ್ತಮಸ್ಥಿತಿಗೆ ತರಲ್ಪಡುವುದಕ್ಕೆ ಏನುಮಾಡಲ್ಪಡಬೇಕೋ ಅದನ್ನು ಅನೇಕವರುಷಗಳು ಪರ್ಯಾಲೋಚಿಸಿ ನಿಷ್ಕರ್ಷೆಮಾಡಿರತಕ್ಕವರಾಗಿರುತ್ತಾರೆ. ಈ ದೇಶೀಯರಲ್ಲಿ ವಿದ್ಯಾಭ್ಯಾಸವನ್ನು ಅತ್ಯುತ್ತಮಸ್ಥಿತಿಗೆ ತರಬೇಕೆಂಬ ಅಭಿನಿವೇಶವು ಇವರಿಗೆ ವಿಶೇಷವಾಗಿರುವುದು. ಬೆಂಗಳೂರಿನಲ್ಲಿ ಎಡ್ಯುಕೇಷನಲ್ ಅಸೋಸಿಯೇಷನ್ ಎಂಬುದಾಗಿಯೂ ಮೈಸೂರಿನಲ್ಲಿ ಎಡ್ಯುಕೇಷನಲ್ ಯೂನಿಯನ್ ಎಂಬುದಾಗಿಯೂ ಎರಡು ಪಾಠಕಮಹಾಸಭೆಗಳು ಏರ್ಪಾಡಾಗಿರುವುವು. ಈ ಸಭೆಗಳು ಪ್ರತಿವರ್ಷವೂ ಕಾನ್‌ಫರೆನ್

ನನ್ನು ಸೇರಿಸಬೇಕೆಂದು ಸಂಕಲ್ಪಮಾಡಿರುವವು. ಈ ಸಂಕಲ್ಪಕ್ಕೆ ನಮ್ಮ ಇನ್ಸ್ಪೆಕ್ಟರ್ ಜನರಲ್‌ರವರು ಪ್ರೋತ್ಸಾಹವನ್ನು ಮಾಡಬೇಕೆಂದಿರುವುದಾಗಿ ತಿಳಿಯಬರುತ್ತದೆ. ಇವರ ಪ್ರೋತ್ಸಾಹದಿಂದ ಈ ಕಾನ್ಫರೆನ್ಸು ಮಾಡಲ್ಪಟ್ಟು ಅದರ ಪ್ರಯೋಜನವು ಸಂಸ್ಥಾನಕ್ಕೆ ಉಂಟಾಗಲೆಂದು ನಾವು ಕೋರುತ್ತೇವೆ. ಮೈಸೂರು ಎಡ್ಯುಕೇಷನ್ ಯೂನಿಯನ್ನಿನವರು ಎರಡು ಮೀಟಿಂಗ್‌ಗಳನ್ನು ಮಾರ್ಚಿತಿಂಗಳಲ್ಲಿ ನಡೆಸಿದರು. ಮತಬೋಧನೆ ಪಾಠಶಾಲೆಗಳಲ್ಲಿ ಆವಶ್ಯಕವೆ? ವಿದ್ಯಾಭ್ಯಾಸದ ವಿಚಾರವಾಗಿ ತಾಯಿತಂದೆಗಳ ಮುಖ್ಯಕರ್ತವ್ಯವೇನು ? ಎಂಬ ವಿಚಾರನನ್ನು ಚರ್ಚಿಸಿದರು.

ವಿದ್ಯಾರ್ಥಿಗಳ ಹಿತೋಪದೇಶದ ಕಮಿಟಿ.

ವಿಲಾಯಿತಿಯಲ್ಲಿ ಇಂಡಿಯಾದೇಶದಿಂದ ವ್ಯಾಸಂಗಾರ್ಥವಾಗಿ ಹೋಗತಕ್ಕ ಭಾರತೀಯವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ಮಾಡುವುದಕೋಸ್ಕರಭಾರತೀಯರಲ್ಲಿ ಅಭಿಮಾನಿಗಳಾದ ಮಹಾಜನಗಳು ಸೇರಿ ಒಂದು ಕಮಿಟಿಯನ್ನು ಮಾಡಿರುವರು. ಇಂಥಾಕಮಿಟಿಗಳು ಎಲ್ಲೆಲ್ಲಿಯೂ ಆವಶ್ಯಕ. ಲಂಡನ್ ಮೊದಲಾದ ದೊಡ್ಡಪಟ್ಟಣಗಳಲ್ಲಂತೂ ಅತ್ಯಂತ ಆವಶ್ಯಕ. ವಿದ್ಯಾರ್ಥಿದಶೆಯು ಅಜಿತೇಂದ್ರಿಯರಾದವರಿಗೆ ಬಹಳ ಅಪಾಯಕರವಾದದ್ದು. ಈ ದಶೆಯಲ್ಲಿ ಒಳ್ಳೆಸಹವಾಸವು ದೊರೆತರೆ ಅವರು ಪರೀಕ್ಷೆಗಳನ್ನು ಕೊಟ್ಟು ಇಷ್ಟಾರ್ಥಸಿದ್ಧಿಯನ್ನು ಹೊಂದುವರು. ಕೆಟ್ಟಸಹವಾಸಕ್ಕೆಬಿದ್ದರೆ ಮಾಡಬಾರದ ಕೆಲಸಗಳನ್ನು ಮಾಡಿ ಭಯಂಕರವಾದ ಅನರ್ಥಗಳಿಗೂ ಗುರಿಯಾಗುವರು. ನಮ್ಮ ದೇಶದಿಂದ ವಿಲಾಯಿತಿಗೆ ಹೋಗತಕ್ಕವರು ದುರ್ಮಾರ್ಗಗಳಿಗೆ ಬಿದ್ದು ಕೆಟ್ಟು ಹೋಗದಂತೆ ಮಾಡುವುದಕ್ಕೋಸ್ಕರ ಅವರಿಗೆ ಮಾರ್ಗದರ್ಶನವನ್ನು ಮಾಡುವುದಕ್ಕೆ ಈ ಭರತಖಂಡದಲ್ಲಿ ಅಭಿಮಾನಿಗಳಾದ ಆಂಗ್ಲೇಯರು ಹೇಗೆ ಹಿತೋಪದೇಶ ಸಭೆಯನ್ನು ವಿಲಾಯತಿಯಲ್ಲಿ ಏರ್ಪಡಿಸಿರುವರೋ ಹಾಗೆಯೇ ಇಂಡಿಯಾದೇಶದ ಪ್ರತಿಯೊಂದು ದೊಡ್ಡಪಟ್ಟಣದಲ್ಲಿಯೂ ಇಂಥಾ ಸಭೆ

ಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳು ದುರ್ಮಾರ್ಗ ಪ್ರವರ್ತಕರಾಗದಂತೆ ಮಾಡುವುದು ಮಹಾಜನಗಳಿಗೂ ಸರ್ಕಾರದವರಿಗೂ ಮುಖ್ಯ ಕರ್ತವ್ಯವು. ಎಲ್ಲಾ ಪಟ್ಟಣಗಳಲ್ಲಿಯೂ ಸೇಕಡ ೩೦ ಜನ ವಿದ್ಯಾರ್ಥಿಗಳಿಗೆ ಕಡಮೆಯಿಲ್ಲದೆ ಸುಶಿಕ್ಷಿತರು ಇರುತ್ತಾರೆ. ಉಳಿದವರಲ್ಲಿ ಅನೇಕರು ಅಶಿಕ್ಷಿತರಾಗಿರಬಹುದು. ಅವರಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿಯು ಹುಟ್ಟುವಂತೆ ಮಾಡುವುದಕ್ಕೆ ಸರಿಯಾದ ಏರ್ಪಾಡುಗಳು ಇರುವುದಿಲ್ಲ. ಅವರ ತಂದೆತಾಯಿಗಳೂ ಪೋಷಕರೂ ತಮ್ಮ ಉದರನಿಮಿತ್ತವಾದ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಇವರಿಗೆ ವಿದ್ಯಾಭ್ಯಾಸವು ಸರಿಯಾಗಿ ನಡೆಯುವುದೇ ಇಲ್ಲವೇ ಎಂದು ನೋಡಿಕೊಳ್ಳುವುದಕ್ಕೆ ಕೂಡ ಅವರಿಗೆ ಅವಕಾಶವು ಇರುವುದಿಲ್ಲ. ಪಾಠಶಾಲೆಗಳಿಗೆ ಬಂದ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳತಕ್ಕ ಕ್ರಮವು ಸಮಗ್ರವಾಗಿರುವುದು. ಪಾಠಶಾಲೆಗಳಿಗೆ ಹೋಗದೆ ತಪ್ಪಿಸಿಕೊಂಡು ದುರ್ಮಾರ್ಗಪ್ರವರ್ತಕರ ಸಹವಾಸವನ್ನು ಸೇರಿ ಅಶಿಕ್ಷಿತರಾಗಿರತಕ್ಕವರನ್ನು ಸುಶಿಕ್ಷಿತರನ್ನಾಗಿ ಮಾಡುವುದೇ ಉದ್ಯೋಗವಾಗಿ ಉಳ್ಳ ಹಿತೋಪದೇಶದ ಸಂಘಗಳಿಲ್ಲದೆ ಇರುವುದು ಬಹಳ ಅನರ್ಥಕ್ಕೆ ಹೇತುವಾಗಿದೆ. ಮೆಹನತ್ತುಮಾಡಿ ಬುದ್ಧಿ ಶಕ್ತಿಯಿಂದಲೂ, ದೇಹಶಕ್ತಿಯಿಂದಲೂ ಧರ್ಮದಿಂದ ಬೇಕಾದದ್ದನ್ನು ಸಂಪಾದಿಸಿಕೊಳ್ಳತಕ್ಕವರು ವಿರಳರಾಗುತ್ತಲಿದಾರೆ. ಮಾಡಬಾರದ ಕೆಲಸಗಳನ್ನು ಮಾಡಿ ಶಿಕ್ಷೆಗೆ ಗುರಿಯಾಗತಕ್ಕವರು ಕೂಡ ಹೆಚ್ಚುತ್ತಲಿದಾರೆ. ಅನೇಕರಿಗೆ ಪಾಠಶಾಲೆಗಳಲ್ಲಿ ಕಲಿಯತಕ್ಕ ಧರ್ಮೋಕ್ತಿಗಳು ಸಹಕಾರಿಯಾಗುವುದಿಲ್ಲ. ಇದು ತುಂಬ ಶೋಚನೀಯವಾದುದು. ಕೆಟ್ಟಮೇಲೆ ಬುದ್ಧಿಬಂದು ಪ್ರಯೋಜನವಿಲ್ಲ. ಕೆಡುವುದಕ್ಕಿಂತ ಮುಂಚೆಯೇ ಬುದ್ಧಿಬರುವಂತೆ ಮಾಡತಕ್ಕ ಹಿತೋಪದೇಶದ ಸಭೆಗಳು ಪ್ರತಿಷ್ಠಿಸಲ್ಪಡಬೇಕು. ಪ್ರತಿಯೊಂದು ಪಾಠಶಾಲೆಯವರೂ ತಮ್ಮ ವಿದ್ಯಾರ್ಥಿಗಳ ಕ್ಷೇಮಚಿಂತೆಗೋಸ್ಕರ ಇಂಥಾ ಸಭೆಯೊಂದನ್ನು ಇಟ್ಟುಕೊಳ್ಳಬೇಕು. ಪ್ರತಿಯೊಂದು ಪಟ್ಟಣದಲ್ಲಿರತಕ್ಕ ಎಲ್ಲಾ ಪಾಠಶಾಲೆಗಳ ಮುಖಂಡರೂ ಸೇರಿ ಬಂದು ಸೆಂಟ್ರಲ್ ಸಭೆಯನ್ನು ಇಟ್ಟುಕೊಳ್ಳಬೇಕು. ಎಲ್ಲಾ ಪಾಠಶಾಲೆಗಳಲ್ಲಿಯೂ ವಾರಕ್ಕೊಂದು ದಿವಸವಾದರೂ ಸುಶಿಕ್ಷಿತರಿಗೆ ಉಂಟಾಗತಕ್ಕ ಪ್ರಯೋಜನಗಳನ್ನೂ, ಅಶಿಕ್ಷಿತರಿಗೆ

ಉಂಟಾಗತಕ್ಕ ಅನರ್ಥಪರಂಪರೆಗಳನ್ನೂ ತೋರಿಸಿ ಉಪನ್ಯಾಸಗಳು ಮಾಡಲ್ಪಡಬೇಕು. ಸೆಂಟ್ರಲ್‌ಸಭೆಯವರು ಸಕಲ ವಿದ್ಯಾರ್ಥಿಗಳಿಗೂ ಪ್ರಯೋಜನವಾಗುವಂತೆ ಅವರು ಒದುಕತಕ್ಕ ಮಾರ್ಗಗಳನ್ನು ಅವರಿಗೆ ತಿಳಿಸುವುದಕ್ಕೋಸ್ಕರ ವಾಗ್ಮಿಗಳಿಂದ ಉಪನ್ಯಾಸಗಳನ್ನು ಮಾಡಿಸಬೇಕು. ವಿದ್ಯಾರ್ಥಿಗಳು ಮೇಧಾವಿಗಳಾಗಬೇಕಾದರೂ, ಇಷ್ಟಾರ್ಥಗಳನ್ನು ಹೊಂದಬೇಕಾದರೂ ವಿದ್ಯಾರ್ಥಿದಶೆಯಲ್ಲಿ ವೀರ್ಯಗ್ರಹರೂಪವಾದ ಬ್ರಂಹಚರ್ಯವನ್ನು ಅವಲಂಬಿಸಿ ಸದ್ವಿದ್ಯಾರ್ಜನೆಗೋಸ್ಕರ ಹೇಗೆ ತಪಸ್ಸನ್ನು ಮಾಡಬೇಕೋ ಅದನ್ನು ಅವರಿಗೆ ಸರಿಯಾಗಿ ತಳಿಯುವಂತೆ ಮಾಡಿಸಬೇಕು. ಹಿತೋಪದೇಶದ ಸಭೆಗಳಿಗೆ ಇದೇ ಮುಖ್ಯವಾದ ಗುರಿ, ಸರ್ಕಾರದವರೂ ಮತ್ತು ಎಲ್ಲಾ ಪಟ್ಟಣದ ಮಹಾಜನಗಳೂ ಇದಕ್ಕೆ ತಮ್ಮ ಗಮನವನ್ನು ಕೊಡುವರೆಂದು ನಂಬುತ್ತೇವೆ.

ಬಲಾತ್ಕಾರವಾದ ಪ್ರೈಮರಿ ವಿದ್ಯಾಭ್ಯಾಸ.

ವಿದ್ಯೆಯು ಅನೇಕ ಮುಖವಾಗಿರುವುದು. ಬರೆಯುವುದು, ಓದುವುದು, ಲೆಕ್ಕಮಾಡುವುದು, ಹೀಗೆ ನಾನಾವಿಧವಾದ ಲೌಕಿಕಶಾಸ್ತ್ರಗಳನ್ನು ಅಭ್ಯಾಸಮಾಡುವುದು, ವ್ಯವಸಾಯ, ವ್ಯಾಪಾರ, ಕೈಗಾರಿಕೆ ಮೊದಲಾದವುಗಳಲ್ಲಿ ಪ್ರವೇಶವನ್ನು ಹೊಂದುವುದು, ಅನ್ನವಸ್ತ್ರಗಳನ್ನು ಧರ್ಮದಿಂದ ಸಂಪಾದಿಸಿಕೊಂಡು ಸ್ವತಂತ್ರರಾಗಿರುವುದಕ್ಕೆ ಸಾಧಕವಾದ ವಿದ್ಯೆಗಳು ಅನೇಕವಾಗಿರುವುವು. ಇವುಗಳಿಗೆಲ್ಲಾ ಅಸ್ತಿಭಾರಪ್ರಾಯವಾದುದು ಪ್ರೈಮರೀ ವಿದ್ಯಾಭ್ಯಾಸ. ಈ ವಿದ್ಯಾಭ್ಯಾಸವನ್ನು ಸ್ತ್ರೀಪುರುಷರೆಲ್ಲರೂ ಮಾಡಬೇಕು. ಈ ಅಸ್ತಿಭಾರವು ಇಲ್ಲದೆ ಇದ್ದರೆ ಯಾವಕೆಲಸದಲ್ಲಿ ಪ್ರವರ್ತಿಸಿದಾಗ್ಯೂ ಅದರಲ್ಲಿ ಅತ್ಯುತ್ತಮಸ್ಥಿತಿಗೆ ಬರುವುದಕ್ಕೆ ಪ್ರತಿಬಂಧಕಗಳು ಗೊತ್ತಿಲ್ಲದಹಾಗೆ ಉಂಟಾಗುವುವು. ಯಾವುದಾದರೊಂದು ವಿದ್ಯೆಯಲ್ಲಿ ಸಂಪೂರ್ಣಪಾಂಡಿತ್ಯವುಳ್ಳವರಾಗಿಯೂ, ಇತರ ವಿದ್ಯೆಗಳಲ್ಲಿ ಸಾಮಾನ್ಯಪಾಂಡಿತ್ಯವುಳ್ಳವರಾಗಿಯೂ ಇರುವಂತೆ ಮಾಡಿಕೊಳ್ಳುವುದು ಎಲ್ಲರಿಗೂ ಆವಶ್ಯಕ. ಈ ವಿಷ

ಯಕ್ಕೆ ಪ್ರಥಮಗಮನವು ಕೊಡಲ್ಪಡಬೇಕು. ಯೂರೋಪ್, ಅಮೇರಿಕ ಮತ್ತು ಜಪಾನ್ ದೇಶಗಳಲ್ಲಿ ಬಾಲ್ಯದಲ್ಲಿ ಕಡ್ಡಾಯವಾಗಿ ವಿದ್ಯಾಭ್ಯಾಸವನ್ನು ಮಾಡಿಸು ವರು. ಸೇಕಡ ೯೬ ಮೊದಲುಗೊಂಡು ೧೦೦ರ ವರೆಗೂ ಆ ದೇಶಗಳಲ್ಲಿ ಓದುಬರಹ ಗಳನ್ನು ಬಲ್ಲವರಿರುತ್ತಾರೆ. ಅತ್ಯುತ್ತಮವಾದ ಯೂನಿವರ್ಸಿಟಿ ಪರೀಕ್ಷೆಗಳನ್ನು ಕೊಟ್ಟು ಸಕಲ ಶಾಸ್ತ್ರವಿಶಾರದರೆನ್ನಿಸಿಕೊಂಡಿರತಕ್ಕವರು ಕೂಡ ಸರಕಾರದ ಉದ್ಯೋಗಗಳಲ್ಲಿ ಆಸಕ್ತಿಯನ್ನು ಬಿಟ್ಟು ಕೈಗಾರಿಕೆ, ವ್ಯವಸಾಯ, ವ್ಯಾಪಾರ ಮೊದಲಾದವುಗಳಲ್ಲಿ ಶ್ರದ್ಧೆಯಿಂದಲೂ, ಧರ್ಮದಿಂದಲೂ ಕೆಲಸಮಾಡಿ ಕೋಟೀಶ್ವರ ರಾಗಿರುತ್ತಾರೆ. ಅನೇಕ ವರ್ತಕರ ಆಯತಿಯು ಇಂಡಿಯಾದೇಶದ ಘನಹೊಂದಿದ ವೈಸ್ರಾಯಿಯವರ ಆಯತಿಗಿಂತಲೂ ಬಹಳ ಹೆಚ್ಚಾಗಿರುತ್ತದೆ. ಈ ವಿಷಯಗಳನ್ನು ನಮ್ಮ ಜನಗಳು ತಿಳಿದುಕೊಳ್ಳಬೇಕು. ನಮ್ಮ ದೇಶದಲ್ಲಿಯೂ ಕೂಡ ಈ ಸ್ವತಂತ್ರ ವಾದ ವೃತ್ತಿಗಳಿಂದ ಜೀವಿಸತಕ್ಕವರಲ್ಲಿ ಅನೇಕರ ಸ್ಥಿತಿಯು ಸರಕಾರದ ಅಧಿಕಾರಿ ಗಳ ಪೈಕಿ ಬಹುಜನಗಳ ಸ್ಥಿತಿಗಿಂತ ಎಷ್ಟೋ ಉತ್ತಮವಾಗಿರುವುದು. ಸರಕಾರದ ಉದ್ಯೋಗದಲ್ಲಿ ಸೇರಿದವರು ಯಾವುದಾದರೊಂದು ಪ್ರಮಾದದಿಂದ ಕೆಲಸಗಳನ್ನು ಕಳೆದುಕೊಂಡು ಅನರ್ಥಕ್ಕೆ ಗುರಿಯಾಗುವುದುಂಟು. ಕೆಲಸಮಾಡಿ ಪೆನ್‌ಷನ್ ವಗೈ ರೆಗಳಿಂದ ರಿಟೈರಾಗಿ, ಬಂದ ಪೆನ್‌ಷನ್ನಲ್ಲಿ ಜೀವನಕ್ಕೆ ಸಾಲದೆ ನಾನಾವಿಧವಾದ ತಾಪತ್ರಯಗಳನ್ನು ಪಡುವುದೂ ಉಂಟು. ಶ್ರದ್ಧೆಯಿಂದಲೂ, ಪ್ರಾಮಾಣಿಕತೆಯಿಂ ದಲೂ, ವಿದ್ಯಾವಿನಯಾದಿ ಸದ್ಗುಣಗಳ ಬಲದಿಂದಲೂ ಕೆಲಸಮಾಡತಕ್ಕವರಿಗೆ ಹೀನಸ್ಥಿತಿಯು ಎಂದಿಗೂ ಬರುವುದಿಲ್ಲ. ವಿದ್ಯೆಯ ಬಲದಿಂದ ಸರಕಾರದಉದ್ಯೋ ಗದಲ್ಲಿ ಒಳ್ಳೆಯಸ್ಥಿತಿಗೆ ಬರುವುದಕ್ಕಿಂತ ಕೃಷಿ, ವಾಣಿಜ್ಯಾದಿಗಳಲ್ಲಿ ಬಹಳಬೇಗ ಅಭಿ ವೃದ್ಧಿಗೆ ಬರಬಹುದು. ಬಹುಜನಗಳು, ವಿದ್ಯಾವಂತರಾದ ಮಾತ್ರದಿಂದಲೇ ಈ ಕೆಲ ಸವನ್ನು ಮಾಡುವುದು ತಪ್ಪೆಂದು ತಿಳಿದುಕೊಂಡು ಕೆಟ್ಟುಹೋಗುವರು. ಹೀಗಾಗ ದಿರಬೇಕಾದರೆ ಯೂರೋಪ್, ಅಮೇರಿಕಾಖಂಡಗಳಲ್ಲಿಯೂ ಜಪಾನ್‌ದೇಶದಲ್ಲಿಯೂ ಹೇಗೆ ಜನಗಳು ಆತ್ಮಾವಲಂಬಿಗಳಾಗುತ್ತಾರೋ ಅದನ್ನು ಪರಿಶೀಲಿಸಿ ತಿಳಿದುಕೊ ಳ್ಳುವುದು ಆವಶ್ಯಕ. ಆ ದೇಶದಲ್ಲಿ ಅಲಸರಾಗದೆ ಕೆಲಸಮಾಡುವ ಅಭ್ಯಾಸವು ಸ್ತ್ರೀ

ಪುರುಷರಿಗೆಲ್ಲಾ ಉಂಟಾಗಿರುವುದು, ಮಕ್ಕಳು ಮೊದಲುಗೊಂಡು ವೃದ್ಧರವರೆಗೂ ಖಾಯಿಲೆಯಲ್ಲಿರತಕ್ಕವರು ವಿನಾ ಎಲ್ಲರೂ ಕೆಲಸಮಾಡಿ ಸ್ವಶಕ್ತಿಯಿಂದ ಜೀವಿಸುವರು. ನಮ್ಮ ದೇಶದಲ್ಲಿ ಸಂಪಾದಿಸತಕ್ಕವರು ಒಬ್ಬರಾದರೆ ಅವರ ಸಂಪಾದನೆಯಿಂದ ಉದರಪೋಷಣವನ್ನು ಮಾಡಿಕೊಂಡು ಸರಿಯಾದ ಉದ್ಯೋಗವೂ ಇಲ್ಲದೆ ಪರಸ್ಪರ ಕಲಹಗಳನ್ನು ಮಾಡುತ್ತಾ ಸ್ವರ್ಗಪ್ರಾಯವಾಗಿರಬೇಕಾದ ಮನೆಯನ್ನು ನರಕವಾಗಿ ಪರಿಣಮಿಸುವಂತೆ ಮಾಡತಕ್ಕ ಜನಗಳು ಅನೇಕರಿರುವರು. ನಮ್ಮ ದೇಶದಲ್ಲಿ ದಾರಿದ್ರ್ಯವು ರೂಢಮೂಲವಾಗುವುದಕ್ಕೆ ಇದೇ ಮುಖ್ಯಕಾರಣ. ಭೋಗ್ಯವಸ್ತುಗಳನ್ನು ನಿರ್ಮಾಣ ಮಾಡುವುದರಲ್ಲಿ ಅಸಮರ್ಥರಾದವರು ಬದುಕಿರುವುದೇ ತಪ್ಪು. ಅಂಥವರನ್ನು ಶಿಕ್ಷೆಗೆ ಗುರಿಮಾಡಬೇಕೆಂಬುವುದೇ ಧರ್ಮಶಾಸ್ತ್ರವಾಗಿರುತ್ತದೆ. ಮನೆ, ಮಠ, ಉದ್ಯೋಗ ಮೊದಲಾದವುಗಳನ್ನು ಹೊಂದದೆ ಇರತಕ್ಕ ಜನಗಳು ನೇಕಚಾಲು ಜಾಮೀನನ್ನು ಕೊಡಬೇಕೆಂದು ಕಾನೂನಿನ ವಿಧಿಯು ಇರುವುದು. ಇದು ಅತ್ಯಂತ ಆವಶ್ಯಕವಾದದ್ದು. ಸ್ತ್ರೀ ಪುರುಷರು ಒಳ್ಳೇ ಕೆಲಸಗಳಲ್ಲಿ ಉದ್ಯುಕ್ತರಾಗಿರುವಂತೆ ಮಾಡುವುದು ತಂದೆತಾಯಿಗಳಿಗೆ ಹೇಗೋಹಾಗೆ ಸರಕಾರದವರಿಗೂ ಮುಖ್ಯಕರ್ತವ್ಯವು. ಈ ಕರ್ತವ್ಯದ ನಿರ್ವಹಣಾರ್ಥವಾಗಿ ವಿದ್ಯಾಭ್ಯಾಸವು ಎಲ್ಲರಿಗೂ ಬಲಾತ್ಕಾರವಾಗಿ ಮಾಡಲ್ಪಡುವಂತೆ ಪಾಶ್ಚಾತ್ಯರಲ್ಲಿ ಏರ್ಪಾಡಿರುವುದು. ಜಪಾನ್ ದೇಶೀಯರು ಪಾಶ್ಚಾತ್ಯರಿಂದ ಈ ಏರ್ಪಾಡನ್ನು ಕಲಿತುಕೊಂಡು ಪಾಶ್ಚಾತ್ಯರಿಗಿಂತಲೂ ಹೆಚ್ಚು ಮೆಹನತ್ತನ್ನು ಮಾಡಿ ಆಬಾಲವೃದ್ಧರಲ್ಲಿ ಯಾರೂ ಅನುದ್ಯೋಗಿಗಳಾಗಿ ಇರದಂತೆ ಮಾಡಿಕೊಂಡು ಇದ್ದಾರೆ. ಗ್ರಾಮಾಂತರಗಳಲ್ಲಿ ಪ್ರತಿಯೊಬ್ಬರೂ ಕೆಲಸಮಾಡಿದಹೊರತು ಜನಗಳಿಗೆ ಜೀವನವಾಗುವುದಿಲ್ಲ. ಮಕ್ಕಳೂಕೂಡ ಕೂಲಿಯನ್ನು ಮಾಡದೆ ಇದ್ದರೆ ಬಾಳುವುದು ಕಷ್ಟವಾಗುತ್ತದೆ. ಇದರಿಂದ ಸರಕಾರದವರು ಪ್ರಮುಖಪಟ್ಟು ವಿದ್ಯಾಭ್ಯಾಸದ ಏರ್ಪಾಡುಗಳನ್ನು ಮಾಡಿಸಿದಾಗ್ಯೂ ಅದರ ಪ್ರಯೋಜನಗಳನ್ನು ಒಕ್ಕಲಿಗರ ಮತ್ತು ಕೂಲಿಯವರ ಮಕ್ಕಳು ಹೊಂದುವುದಕ್ಕಾಗುವುದಿಲ್ಲ. ಅವರು ಸರಕಾರದ ವಿದ್ಯಾಭ್ಯಾಸದ ಏರ್ಪಾಡುಗಳ ಪ್ರಯೋಜನವನ್ನು ಹೊಂದುವುದಕ್ಕೆ ಸಾಧಕವಾಗುವಹಾಗೆ ಏರ್ಪಾಡುಗಳಾಗಬೇಕು. ಉಪಪನ್ನರಾದ

ವರ ಮಕ್ಕಳಿಗೆ ಬೆಳಗ್ಗೆ ೭ ರಿಂದ ೧೧ ಘಂಟೆಯವರೆಗೂ, ಮಧ್ಯಾಹ್ನೋತ್ತರ ೩ ರಿಂದ ೫ ಘಂಟೆಯವರೆಗೂ ಪಾಠಶಾಲೆಯು ನಡೆಯುವುದು. ಈ ೬ ಘಂಟೆಗಳ ಕಾಲದಲ್ಲಿಯೂ ಓದುಬರಹ, ಲೆಖ್ಖಾಚಾರ, ಭೂಗೋಳ, ಚರಿತ್ರೆ, ನಾನಾವಿಧವಾದ ಲೌಕಿಕ ಶಾಸ್ತ್ರಗಳು, ಇವುಗಳೆಲ್ಲಾ ಪಾಠಗಳು ನಡೆಯುವುವು. ಇದರ ಜತೆಗೆ ಕೈಗಾರಿಕೆ, ವ್ಯಾಪಾರ, ಕೃಷಿ ಮೊದಲಾದವುಗಳಲ್ಲಿಯೂ ಪ್ರವೇಶವನ್ನು ಉಂಟುಮಾಡುವುದಕ್ಕೆ ಏರ್ಪಾಡುಗಳನ್ನು ಮಾಡಬೇಕು. ಓದುಬರಹ ಲೆಖ್ಖಾಚಾರಗಳಿಗೆ ದಿನಕ್ಕೆ ಎರಡು ಘಂಟೆಗಳಿಗಿಂತಲೂ ಹೆಚ್ಚಾದ ಕಾಲವು ಆವಶ್ಯಕವಿಲ್ಲ. ಬಾಕಿ ಮೂರು ಘಂಟೆಗಳನ್ನಾದರೂ ಉಪಯುಕ್ತವಾದ ಕೈಗಾರಿಕೆಗಳನ್ನು ಕಲಿಸುವುದಕ್ಕೆ ವಿನಿಯೋಗಿಸಬೇಕು. ಬಡಗಿಕೆಲಸ, ಬಟ್ಟೆಗಳನ್ನು ತಯಾರುಮಾಡತಕ್ಕ ಕೆಲಸ, ನೇಗಿಲು ಮೊದಲಾದ ಕಬ್ಬಿಣದ ಸಾಮಾನುಗಳನ್ನು ಮಾಡತಕ್ಕ ಕೆಲಸ, ನಾನಾವಿಧವಾದ ಲೋಹಗಳಲ್ಲಿ ಪಾತ್ರೆಗಳೇ ಮೊದಲಾದವುಗಳನ್ನು ಮಾಡುವ ಕೆಲಸ, ಪ್ರತಿಯೊಂದು ಭೋಗ್ಯವಸ್ತುವನ್ನು ನಿರ್ಮಾಣ ಮಾಡತಕ್ಕ ಕೆಲಸ ಇವುಗಳನ್ನೆಲ್ಲಾ ಪರಿಶೀಲಿಸಿ ಯಾವ ಪದಾರ್ಥಗಳಿಗೆ ಗಿರಾಕಿಯು ಚೆನ್ನಾಗಿರುವುದೋ ಅವುಗಳಲ್ಲಿ ಶಿಕ್ಷೆಯನ್ನು ಸ್ತ್ರೀಪುರುಷರಿಗೆ ಕಲ್ಪಿಸಿದುದೇ ಆದರೆ ಪ್ರತಿಯೊಬ್ಬರಿಗೂ ಅವರ ಬುದ್ಧಿಶಕ್ತಿಯಿಂದಲೂ, ದೇಹಶಕ್ತಿಯಿಂದಲೂ ಸ್ವತಂತ್ರವಾಗಿ ಜೀವನಮಾಡಿಕೊಳ್ಳುವ ಯೋಗ್ಯತೆಯು ಬರುವುದು. ಉಪಪನ್ನರಾದ ಜನಗಳ ಮಕ್ಕಳಿಗೆ ಈ ಏರ್ಪಾಡೇ ಇರಬಹುದು. ಅನುಪಪನ್ನರಾದವರು ಬಹುಜನಗಳಿರುತ್ತಾರೆ. ಮಕ್ಕಳನ್ನೂ ಕೂಡ ಅವರು ಕೆಲಸವನ್ನು ಬಿಡಿಸಿ ಪಾಠಶಾಲೆಗಳಿಗೆ ಕಳುಹಿಸುವುದಕ್ಕೆ ಕೆಲವುಕಾಲಗಳಲ್ಲಿ ಆಗುವುದಿಲ್ಲ. ದನಗಳನ್ನು ಕಾಯುವುದು, ಪೈರುಗಳನ್ನು ಕಾಯುವುದು, ಕುರಿಗಳನ್ನು ನೋಡಿಕೊಳ್ಳುವುದು, ಇವೇ ಮೊದಲಾದ ಅನೇಕ ಕೆಲಸಗಳು ಮಕ್ಕಳಿಗೂ ಕೂಡ ವಿಶೇಷವಾಗಿರುವುವು. ಇಂಥ ಜನಗಳು ಅವರ ಕೆಲಸಗಳ ಜತೆಗೆ ಪ್ರೈಮರಿ ವಿದ್ಯಾಭ್ಯಾಸವನ್ನು ಹೊಂದಿ ತನ್ಮೂಲಕ ಲೋಕವ್ಯವಹಾರ ಜ್ಞಾನವನ್ನು ಹೊಂದಿ ಉಪಪನ್ನರಾಗುವಂತೆ ಏರ್ಪಾಡುಗಳು ಮಾಡಲ್ಪಡಬೇಕು. ಹೀಗೆ ಮಾಡಬೇಕಾದರೆ ಬೆಳಗ್ಗೆ ಇಂಥಾ ವಿದ್ಯಾರ್ಥಿಗಳಿಗೆ ೭ ರಿಂದ ೮ ಘಂಟೆಯವರೆಗೂ, ಸಾಯಂಕಾಲ ೭ ರಿಂದ

೮ ಘಂಟೆಯುವರೆಗೂ ಪ್ರತಿದಿವಸವೂ ಪಾಠ ನಡೆಯುವಂತೆ ಏರ್ಪಾಡು ಮಾಡಿ ವ್ಯವಸಾಯದ ಗಲಾಟೆ ಇಲ್ಲದೆ ಇರತಕ್ಕ ಕಾಲಗಳಲ್ಲಿ ಅವರಿಗೆ ಹೆಚ್ಚು ಅವಕಾಶವು ದೊರೆತಪಕ್ಷದಲ್ಲಿ ಅದನ್ನು ವಿದ್ಯಾಭ್ಯಾಸಕ್ಕೂ ಕೈಗಾರಿಕೆಗಳಿಗೂ ವಿನಿಯೋಗಿಸುವಂತೆ ಏರ್ಪಾಡನ್ನು ಮಾಡಬೇಕು. ಓದುಬರಹಗಳ ಮೂಲಕ ಅವರು ಬೇಕಾದ ಗ್ರಂಥಗಳನ್ನು ತಾವೇ ಓದಿ ತಿಳಿದುಕೊಳ್ಳುವಂತೆ ಏರ್ಪಾಡು ಮಾಡುವುದು ಸರಕಾರದವರಿಗೆ ಮುಖ್ಯಕರ್ತವ್ಯ. ಇದರ ಜತೆಗೆ ಭೂಗೋಳ, ಚರಿತ್ರೆ, ಆರೋಗ್ಯಶಾಸ್ತ್ರ, ಸ್ಯಾನಿಟರಿಶಾಸ್ತ್ರ, ಕೃಷಿ, ಕೈಗಾರಿಕೆಗಳು, ವ್ಯಾಪಾರಧರ್ಮಗಳು, ತಮ್ಮ ಹಕ್ಕುಬಾಧ್ಯತೆಗಳನ್ನು ಸಮಗ್ರವಾಗಿ ತಿಳಿದುಕೊಂಡು ಬದುಕುವುದಕ್ಕೆ ಎಷ್ಟುಮಟ್ಟಿಗೆ ಕಾನೂನುಗಳ ಪರಿಚಯವು ಆವಶ್ಯಕವೋ ಅಷ್ಟುಮಟ್ಟಿಗೆ ಅವುಗಳನ್ನು ವ್ಯಾಸಂಗ ಮಾಡುವುದು, ಸರಕಾರದವರು ಮಾಡತಕ್ಕ ದುಷ್ಟನಿಗ್ರಹಶಿಷ್ಟಪರಿಪಾಲನೆಯ ಕ್ರಮಗಳಿಂದ ನಮಗೆ ಉಂಟಾಗುವ ಲಾಭಗಳಿಗೆ ಪ್ರತಿಫಲವಾಗಿ ನಾವು ಹೇಗೆ ರಾಜಭಕ್ತಿ ವಿಶ್ವಾಸಗಳನ್ನು ತೋರಿಸಬೇಕೋ ಅವನ್ನು ತೋರಿಸುವುದು, ಯಥೋಚಿತವಾಗಿ ಸರಕಾರದ ಖರ್ಚನ್ನು ವಹಿಸುವುದಕ್ಕೋಸ್ಕರ ದ್ರವ್ಯರೂಪವಾಗಿಯೂ, ಮೈಹನತ್ತಿನರೂಪವಾಗಿಯೂ ನಮ್ಮ ಕರ್ತವ್ಯವನ್ನು ನೆರವೇರಿಸುವುದು, ಅದನ್ನು ತಿಳಿದುಕೊಂಡು ಅನುಷ್ಠಾನಕ್ಕೆ ತರುವುದು ಇವುಗಳಿಗೆಲ್ಲಾ ಏರ್ಪಾಡಾಗಬೇಕು. ನಮ್ಮ ಗವರ್ನಮೆಂಟಿನವರು ಶೀಘ್ರದಲ್ಲಿಯೇ ಅನೇಕ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ವಿದ್ಯಾಭ್ಯಾಸವು ಸರ್ವರಿಗೂ ದೊರೆಯುವಂತೆ ಮಾಡುತ್ತಾರೆ. ಅದರ ಫಲವನ್ನು ಹೊಂದಿ ಈ ಸಂಸ್ಥಾನದ ಪ್ರಜೆಗಳು ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ಇನ್ನೂ ಅತಿಶಯವಾಗಿ ತೋರಿಸುವರೆಂದು ನಂಬಿ ಇದ್ದೇವೆ. ಓದುಬರಹಗಳಿಗೆ ಏರ್ಪಾಡನ್ನು ಮಾಡಿ ಬಾಕಿ ವಿಷಯಗಳನ್ನು ತಿಳಿಸುವುದಕ್ಕೆ ಸಮರ್ಥರಾದ ಜನಗಳಿಂದ ಉಪನ್ಯಾಸಗಳ ಏರ್ಪಾಡನ್ನು ಪಾಶ್ಚಾತ್ಯರು ಮಾಡಿರುತ್ತಾರೆ. ಬಡಬಗ್ಗರ ಮಕ್ಕಳು ತಾವಾಗಿ ಓದಿ ಆವಶ್ಯಕವಾದ ಶಾಸ್ತ್ರಗಳನ್ನು ಕಲಿತುಕೊಳ್ಳುವುದಕ್ಕೆ ಸಾಕಾದಷ್ಟು ಅವಕಾಶವೂ ಅನುಕೂಲತೆಯೂ ಇರುವುದಿಲ್ಲ. ಅಂಥವರು ತಿಳಿದುಕೊಳ್ಳುವುದಕ್ಕೆ ಆವಶ್ಯಕವಾದ ವಿಷಯಗಳನ್ನು ತಿಳಿಸುವುದಕ್ಕೆ ಸಮ

ಪ್ರಕವಾದ ಉಪನ್ಯಾಸಗಳ ಏರ್ಪಾಡನ್ನು ಮಾಡಿದರೆ ಕ್ಲೇಶವಿಲ್ಲದೆ ಜನಗಳಿಗೆ ವಸ್ತುತತ್ವಜ್ಞಾನವೂ, ಲೋಕವ್ಯವಹಾರಜ್ಞಾನವೂ ಉಂಟಾಗುವುವು. ಈ ವಿಷಯಕ್ಕೂ ನಮ್ಮ ಸರಕಾರದವರು ಸಂಪೂರ್ಣವಾದ ಗಮನವನ್ನು ಕೊಡಬೇಕೆಂದು ನಿಷ್ಕರ್ಷೆ ಮಾಡಿಕೊಂಡಿರುತ್ತಾರೆ. ಇದರ ಫಲವು ನಮ್ಮ ಜನಗಳಿಗೆ ಸಂಪೂರ್ಣವಾಗಿ ಶೀಘ್ರದಲ್ಲಿಯೇ ಉಂಟಾಗಬಹುದು.

ಪ್ರಕೃತಿ ಶಾಸ್ತ್ರ.

ಪಕ್ಷಿಗಳು.

ಚತುಷ್ಪಾದಿಗಳಾದ ತಿರ್ಯಗ್ಜಂತುಗಳು ದೇಹದ ಒಳಗಿನ ಅವಯವಗಳ ರಚನೆಯ ವಿಷಯದಲ್ಲಿ ಬಹುಮಟ್ಟಿಗೂ ಮನುಷ್ಯನನ್ನು ಹೋಲುತ್ತವೆ. ಪಕ್ಷಿಗಳಾದರೋ, ಈ ವಿಷಯದಲ್ಲಿ ಮನುಷ್ಯಶರೀರದೊಡನೆ ಹೋಲದೆ ಸುತರಾಂ ವ್ಯತ್ಯಸ್ತವಾದ ರಚನೆಯನ್ನು ಪಡೆದಿರುತ್ತವೆ. ಇದಕ್ಕೆ ಮುಖ್ಯ ಕಾರಣವೇನೆಂದರೆ—ನಾವು ಸರ್ವದಾ ನೆಲದ ಮೇಲೆಯೇ ವಾಸಮಾಡತಕ್ಕವರು, ಅವು ತಮ್ಮ ಹೆಚ್ಚು ಕಾಲದಲ್ಲೆಲ್ಲಾ ವಾಯುಮಂಡಲದಲ್ಲೇ ಹಾರಾಡುತ್ತಿರತಕ್ಕವುಗಳು. ಆದುದರಿಂದಲೇ ಆ ಸ್ವಭಾವಕ್ಕೆ ಅನುಗುಣವಾದ ದೇಹದ ರಚನೆಯನ್ನು ಪಡೆದಿರುವುವು.

ಪಕ್ಷಿಗಳ ಮೈಯ ಹೊರಭಾಗವನ್ನು ನೋಡುವುದರಿಂದಲೇ ಅವು ವೇಗವಾಗಿ ಸಂಚರಿಸಲನುಕೂಲಿಸುವಂತೆ ನಿರ್ಮಿಸಲ್ಪಟ್ಟಿವೆಯೆನ್ನಬಹುದು. ಮೈಯ ಮುಂಭಾಗವು ಚೂಪಾಗಿರುವುದರಿಂದ ಅವು ಸರಾಗವಾಗಿ ವಾಯುಮಂಡಲದಲ್ಲಿ ನುಗ್ಗಿ ವಾಯುವನ್ನು ಭೇದಿಸಿಕೊಂಡು ಹೋಗಲು ಅನುಕೂಲವಾಗಿರುವುದು. ಹೀಗೆ ಮೊದಲು ಸಮಮಟ್ಟದಲ್ಲಿ ಸ್ವಲ್ಪದೂರ ಹಾಯ್ದುಹೋದನಂತರ ಅವು ನಿಧಾನವಾಗಿ ಮೇಲಕ್ಕೇರುವುವು. ಇಳಿಯುವಾಗಲೂ ಹೀಗೆಯೇ ಮೊದಲು ಮೈಯ ಮುಂಭಾಗವನ್ನು ಕೆಳಕ್ಕೆ ಓರೆಯಾಗಿ ನುಗ್ಗಿಸುವುವು. ಈ ಎರಡು ಪಕ್ಕಗಳಲ್ಲೂ ಪುಕ್ಕಗಳು ಸೇರಿಕೊಂಡಿರುವುವು. ಮತ್ತೂ ರೆಕ್ಕೆಗಳು ಬಡಿಯುತ್ತಿರುವುವು. ಅವರೆ

ರೆಕ್ಕೆಗಳ ಪ್ರಯತ್ನವು ಹಾರುವಾಗ ಮಾತ್ರ ಹೆಚ್ಚು, ಇಳಿಯುವಾಗ ಹಾಸಿದ ಚಾಪೆಯಂತೆ ನಿಶ್ಚಲವಾಗಿದ್ದು ತಾನು (ಪಕ್ಷಿಯು) ಇರಗುವ ಸ್ಥಳವು ಸಮೀಪಿಸಿದಾಗ ಮಾತ್ರ ಮಡಿಸಿಕೊಳ್ಳುವುವು. ಹಕ್ಕಿಯನ್ನು ವಾಯುಸಾಗರದಲ್ಲಿ ಓಡಾಡುವ ದೋಣಿಯೆಂದು ಕರೆಯಬಹುದು. ಈ ದೋಣಿಗೆ ರೆಕ್ಕೆಗಳೇ ಹುಟ್ಟುಗಳು.

ಪಕ್ಷಿಗಳ ಹೊರಮೈಯ ವಿಷಯವನ್ನು ಪರಿಶೀಲಿಸುವಾಗ ಗರಿಗಳ ಸ್ಥಾನವನ್ನೂ ರಚನೆಯನ್ನೂ ಮುಖ್ಯವಾಗಿ ಗಮನಿಸಬೇಕು. ಗರಿಗಳೆಲ್ಲ ಸರಿಯಾದ ಸ್ಥಳದಲ್ಲಿ ಒಂದೇ ಕಡೆಗೆ ಅಂದರೆ ಹಿಮ್ಮೊಗವಾಗಿರುವಂತೆ ನಿರ್ಮಿಸಲ್ಪಟ್ಟಿವೆ. ಇದರಿಂದ ಮೈಯು ಬೆಚ್ಚಗಿರುವುದಕ್ಕೂ ವಾಯುವಿನಿಂದ ತಡೆಯಲ್ಪಡದೆ ನುಗ್ಗಿ ವೇಗವಾಗಿ ಚಲಿಸುವುದಕ್ಕೂ ಮತ್ತು ಕೋಮಲವಾದ ಅಂಗಾಂಗಗಳನ್ನು ಇತರ ವಿಘ್ನಗಳಲ್ಲಿ ರಕ್ಷಿಸುವುದಕ್ಕೂ ತುಂಬ ಅನುಕೂಲ.

ಈ ಗರಿಗಳೆಲ್ಲಾ ಹಿಮ್ಮೊಗವಾಗಿರುವುದು ಮಾತ್ರವಲ್ಲದೆ ಒಂದು ಕ್ರಮವಾದ ಮತ್ತು ಅಂದವಾದ ರೀತಿಯಲ್ಲಿ ಒಂದರಮೇಲೊಂದರಂತೆ ಜೋಡಿಸಲ್ಪಟ್ಟಿರುತ್ತವೆ. ಈ ಗರಿಗಳ ಕೆಳಗೆ ಮೈಯ ಮೇಲ್ಗಡೆ ಕೇವಲ ಮೃದುವಾದ ಮತ್ತೂ ಶಾಖವಾದ ತುಪ್ಪಳವುಂಟು. ವಾಯುಗುಣದಿಂದ ಆಗುವ ಶೀತೋಷ್ಣಗಳ ವ್ಯತ್ಯಾಸದಿಂದ ಬಾಧೆಯುಂಟಾಗದಂತೆ ದೇಹದ ಹೊರಭಾಗದಲ್ಲಿರುವ ರೆಕ್ಕೆಪುಕ್ಕಗಳು ನೇರ್ಪಡಿಸಲ್ಪಟ್ಟಿವೆ.

ಆದರೆ ರೆಕ್ಕೆಪುಕ್ಕಗಳು ಗರಿಗಳು ಎದುರುಗಾಳಿಯ ಅಥವಾ ಬಿರುಗಾಳಿಯ ಬಡಿತದಿಂದ ಅಕ್ರಮವಾಗಿ ಕೆದರಿ, ಮಳೆ ಚಳಿಗಳ ಹೊಡೆತದಿಂದ ಕೆಟ್ಟುಹೋಗಿದ್ದರೆ ಸರಿಮಾಡಿಕೊಳ್ಳುವುದಕ್ಕೂ ಪ್ರಕೃತಿಯು ತಕ್ಕ ಏರ್ಪಾಡನ್ನು ಮಾಡಿದಾಳೆ. ಇದಕ್ಕಾಗಿ ಪಕ್ಷಿಗಳ ಮೈಯಲ್ಲಿ ಹಿಂದುಗಡೆ ಒಂದು ಗಂಟು ಇರುವುದು. ಅದರಲ್ಲಿ ಎಣ್ಣೆಯಂತಹ ಒಂದು ಬಗೆಯ ವಸ್ತುವು ಸರ್ವದಾ ಇದ್ದೇ ಇರುವುದು. ಮೇಲೆ ಕಂಡಂತೆ ರೆಕ್ಕೆಪುಕ್ಕಗಳ ಗರಿಗಳು ಕೆಟ್ಟುಹೋದಾಗ ಹಕ್ಕಿಯು ತನ್ನ ಕೊಕ್ಕಿನಿಂದ ಆ ಎಣ್ಣೆಯನ್ನು ತೆಗೆದು ಅವಕ್ಕೆ ಸವರಿ ಬಾಚಿದಂತೆ ಸರಿಮಾಡಿಕೊಳ್ಳುವುದು. ಈ ಗ್ರಂಥಿಯು ಬೆನ್ನುಮೂಳೆಯ ತುದಿಯಲ್ಲಿ ಆಸನದ ಹತ್ತಿರ ಇರುವುದು. ಇದರ

ನೋಡಿದರೆ ಕೇವಲ ಸಣ್ಣ ಗರಿಗಳು ಗುಂಪಾಗಿ ಬೆಳೆದಿರುವುವು. ಆದುದರಿಂದಲೇ ಪಕ್ಷಿಗಳು ತಮ್ಮ ರೆಕ್ಕೆಪುಕ್ಕಗಳು ವಕ್ರವಕ್ರವಾಗಿ ಕೆದರಿಹೋದಾಗ ಅವನ್ನು ನೇರ್ಪಡಿಸಿಕೊಳ್ಳುವುದಕ್ಕಿಂತ ಮೊದಲು ತಲೆಯನ್ನು ಹಿಂದಕ್ಕೆ ತಿರುಗಿಸಿಕೊಂಡು ಕೊಕ್ಕಿನಿಂದ ಆ ಗ್ರಂಥಿಯನ್ನು ಹಿಂಡಿ ಎಣ್ಣೆಯನ್ನು ಹೊರಡಿಸಿಕೊಂಡು ಬಳಿಕ ಬೇಕಾದೆಡೆಗೆ ಬಳಿದುಕೊಳ್ಳುವುವು. ಇಂತಹ ಜಿಡ್ಡನ್ನು ಅದು ಕೊಡುತ್ತಿರುವುದರಿಂದಲೇ ಗರಿಗಳ ಕೂದಲುಗಳು ಒಂದಕ್ಕೊಂದು ಬಲು ಸೊಗಸಾಗಿ ಸೇರಿಕೊಂಡಿರುವುವು. ಮನೆಗಳಲ್ಲಿ ಸಾಕುವ ಕೋಳಿ ಮೊದಲಾದ ಪಕ್ಷಿಗಳ ದೇಹದಲ್ಲಿ ಇಂತಹ ಎಣ್ಣೆಯು ಹೆಚ್ಚಾಗಿ ಉತ್ಪತ್ತಿಯಾಗಲು ತಕ್ಕ ಅನುಕೂಲವಿಲ್ಲ. ಅವು ಜನಗಳ ರಕ್ಷಣೆಗೊಳಪಟ್ಟು ಶೀತೋಷ್ಣಗಳಿಗೊಳಗಾಗದಂತೆ ರಕ್ಷಿಸಲ್ಪಡುತ್ತಲಿರುವುದರಿಂದ ಈ ಎಣ್ಣೆಯು ಅಷ್ಟು ಆವಶ್ಯಕವಿಲ್ಲವೆಂದು ಭಾವಿಸಿಯೇ ಪ್ರಕೃತಿಯು ಅದನ್ನು ಕಡಿಮೆ ಮಾಡಿರಬಹುದೆಂದು ತೋರುವುದು. ಸ್ವೇಚ್ಛೆಯಾಗಿ ಸಂಚರಿಸತಕ್ಕ ಕಾಡು ಪಕ್ಷಿಗಳಲ್ಲಿ ಇದು ಹೆಚ್ಚಾಗಿ ಉತ್ಪತ್ತಿಯಾಗುವುದು. ಉದಾಹರಣೆ—ಕೋಳಿಯ ಮೈಯ ಮೇಲೆ ಕೆಲವು ಮಳೆಹನಿಗಳು ಬಿದ್ದರೂ ಅದು ಬೇಗ ತೊಯ್ದುಹೋಗುವುದು ; ಆದರೆ ಸದಾ ನೀರಿನಲ್ಲೇ ವಾಸಮಾಡುವ ಬಾತು, ಹಂಸ ಮೊದಲಾದವುಗಳು ಹುಟ್ಟಿದಂದಿನಿಂದ ನೀರಿನಲ್ಲೇ ಇದ್ದರೂ ರೆಕ್ಕೆಪುಕ್ಕಗಳು ನೆನೆಯದಿರುವಂತೆ ತಕ್ಕಷ್ಟು ಜಿಡ್ಡನ್ನು ಪಡೆದಿರುತ್ತವೆ. ಹೀಗೆ ಪ್ರಕೃತಿಯು ಆಯಾ ಪಕ್ಷಿಗಳ ಸ್ಥಿತಿಗತಿಗಳಿಗನುಕೂಲವಾಗಿ ಅಂದರೆ ಅವುಗಳ ಆವಶ್ಯಕತೆಗೆ ತಕ್ಕಷ್ಟು ಜಿಡ್ಡು ಪದಾರ್ಥವನ್ನು ಶೇಖರಿಸಿಟ್ಟಿರುವಳು. ಈ ವಿಧವಾದ ಎಣ್ಣೆಯಿರುವುದರಿಂದಲೇ ಕೆಲವು ಪಕ್ಷಿಗಳ ಮಾಂಸವು ಬಲು ಸುವಾಸನೆಯುಳ್ಳುದಾಗಿರುವುದೆಂದೂ, ಇನ್ನು ಕೆಲವು ಪಕ್ಷಿಗಳ ಮಾಂಸವು ಸಹಿಸಲಾರದಷ್ಟು ವಾಸನೆಯನ್ನು ಪಡೆದಿರುವುದೆಂದೂ ಹೇಳುವರು. ಹಾಗೆ ಹೆಚ್ಚು ವಾಸನೆಯುಳ್ಳವುಗಳ ಮಾಂಸವನ್ನು ಆಹಾರವಾಗಿ ಉಪಯೋಗಿಸುವುದಿಲ್ಲ. ಹೀಗೆ ಈ ಎಣ್ಣೆಯು ಮಾಂಸವನ್ನು ಕೆಡಿಸಿ ಆಹಾರಕ್ಕೆ ಅಯೋಗ್ಯವನ್ನಾಗಿ ಮಾಡುವುದಾದರೂ ಗರಿಗಳನ್ನು ಮಾತ್ರ ಚೆನ್ನಾಗಿ ಕಾಪಾಡಬಲ್ಲದು. ಮತ್ತು ಇಂತಹ ಪಕ್ಷಿಗಳ ಗರಿಗಳನ್ನು ನಾವು ತೆಗೆದು ಎಷ್ಟು ವರ್ಷ

ಗಳ ಕಾಲ ಯಾವಯಾವುವೋ ವಸ್ತುಗಳನ್ನು ಮಾಡಿ ಉಪಯೋಗಿಸಿದರೂ ಕೆಡದೆ ಬಾಳಿಕೆ ಬರುವುವು.

ಗರಿಗಳಿಂದ ಹಕ್ಕಿಗಳಿಗೆ ಆಗುವ ಸಹಾಯವು ಅಪಾರವಾದುದು. ಮತ್ತು ಗರಿಗಳ ರಚನೆಯು ವಿಚಿತ್ರವಾಗಿಯೂ ಮತ್ತೂ ಶ್ಲಾಘ್ಯವಾಗಿಯೂ ಇರುವುದು. ಪ್ರತಿಯೊಂದು ಗರಿಯ ಬುಡದಲ್ಲಿರುವ ಕಡ್ಡಿಯೂ ಆ ಹಕ್ಕಿಯ ಯೋಗ್ಯತೆಗೆ ತಕ್ಕಂತೆ ಬಲವಾಗಿ ನಿರ್ಮಿಸಲ್ಪಟ್ಟಿರುವುದು. ಇವು ಬಲವಾಗಿರುವುದಕ್ಕೂ ಭಾರವಿಲ್ಲದೆ ಇರುವುದಕ್ಕೂ ಅನುಕೂಲವಾಗಿ ಒಳಗೆ ಪೊಳ್ಳಾಗಿಯೂ ಕೊಂಬಿನಂತಹ ವಸ್ತುವಿನಿಂದ ರಚಿಸಲ್ಪಟ್ಟುದಾಗಿಯೂ ಇರುವುದು. ಕೊಳವಿಯಂತೆ ಪೊಳ್ಳಾಗಿರುವ ಈ ಕಡ್ಡಿಯ ಒಳಗಡೆ ಬೆಂಡಿನಂತಹ ಒಂದು ಪದಾರ್ಥವಿರುವುದು. ಇದು ಗರಿಗಳ ಎರಡು ಪಕ್ಕಗಳಲ್ಲಿಯೂ ಇರುವ ಕೂದಲುಗಳು ಚೆನ್ನಾಗಿ ಬೆಳೆಯಲು ತಕ್ಕ ಆಹಾರ ಸಾಮಗ್ರಿಗಳನ್ನು ಕೊಟ್ಟು ಪೋಷಿಸುವುದು. ಈ ಗರಿಗಳೆಲ್ಲ ತಮ್ಮ ತಮ್ಮ ಯೋಗ್ಯತೆಗೆ ತಕ್ಕ ಕೆಲಸಗಳನ್ನು ಮಾಡುವಂತೆ, ಅಂದರೆ ಕೇವಲ ಉದ್ದವಾದ ಮತ್ತು ಪಟುವಾದವುಗಳು ಹಾರುವುದರಲ್ಲಿ ಹೆಚ್ಚು ಸಹಾಯ ಮಾಡುವಂತೆಯೂ ಸಣ್ಣದಾದ ಮತ್ತು ವಿಶೇಷ ಪಟುವಾಗಿಲ್ಲದವುಗಳು ಸ್ವಲ್ಪಮಟ್ಟಿಗೆ ಸಹಾಯ ಮಾಡುವಂತೆಯೂ ನಿಯಮಿಸಲ್ಪಟ್ಟು ಉಚಿತವಾದ ಸ್ಥಳಗಳಲ್ಲಿ ಜೋಡಿಸಲ್ಪಟ್ಟಿವೆ. ಗರಿಗಳ ಪಕ್ಕಗಳಲ್ಲಿರುವ ಕೂದಲುಗಳು ನೇರವಾಗಿಯೂ ಮತ್ತು ಬಲು ಚಲುವಾಗಿಯೂ ನೇಯಿಸಲ್ಪಟ್ಟಿವೆ. ಹೀಗೆ ಗರಿಗಳ ಎರಡು ಪಕ್ಕಗಳಲ್ಲೂ ವರಸೆಯಾದ ಹಲವು ಕೂದಲುಗಳಿಲ್ಲದೆ ಕೇವಲ ಉದ್ದವಾದ ಒಂದೊಂದೇ ಎಳೆಯಿಂದ ರಚಿಸಲ್ಪಟ್ಟಿದ್ದ ಪಕ್ಷದಲ್ಲಿ ಆಕಸ್ಮಾತ್ತಾಗಿ ಗರಿಯೇನಾದರೂ ಮುರಿದುಹೋದರೆ ಮುಂದಕ್ಕೆ ಅದು ಪುನಃ ಬೆಳೆಯಲವಕಾಶವಿಲ್ಲದೆ ಆ ಗರಿಯೇ ಅನುಪಯುಕ್ತವಾಗಿ ಹೋಗಬೇಕಾಗಿದ್ದಿತು. ಆದರೆ ಆ ರೀತಿಯಾಗಿ ಹಕ್ಕಿಗೆ ನಷ್ಟವಾಗದೆ ಗರಿಯ ಒಂದು ಭಾಗವು ಮುರಿದುಹೋದರೂ ಪುನಃ ಅದು ಬೇಗನೆ ಸರಿಗೂಡಿಕೊಳ್ಳುವುದಕ್ಕೆ ಅನುಕೂಲವಾಗಿ ಗರಿಯ ಪ್ರತಿಯೊಂದು ಕೂದಲೂ ಒಂದೊಂದು ಗರಿಯ ರಚನೆಯನ್ನೇ ಪಡೆದಿರುವಂತೆ ಏರ್ಪಡಿಸಲ್ಪಟ್ಟಿದೆ. ಗರಿಯ ಉಭಯಪಾರ್ಶ್ವಗಳ ಕೂದಲುಗಳೂ

ಬುಡದ ಬಳಿಯಲ್ಲಿ ಉದ್ದವಾಗಿಯೂ ತುದಿಯ ಕಡೆಗೆ ಹೋಗುತ ಬಂದಂತೆಲ್ಲ ಸಣ್ಣ ವಾಗಿಯೂ ಇರುವುವು. ಮತ್ತು ಇವು ಒಂದಕ್ಕೊಂದು ಸಮಾಂತರವಾಗಿ ಜೋಡಿ ಸಲ್ಪಟ್ಟಿದ್ದರೂ ಒಟ್ಟಿನಲ್ಲಿ ನೋಡಿದರೆ ತುದಿಯ ಕಡೆಯಲ್ಲಿ ಅರ್ಧವೃತ್ತಾಕಾರವಾಗಿ ಕಾಣುವುವು. ಹೀಗಿರುವುದರಿಂದ ಒಂದರಿಂದ ಮತ್ತೊಂದಕ್ಕೆ ತೊಂದರೆಯಾಗದಿ ರುವುದು ಮಾತ್ರವಲ್ಲದೆ ಪರಸ್ಪರ ಸಹಾಯವೇ ಆಗುವುದು. ಗರಿಗಳ ಮಧ್ಯದ ಕಡ್ಡಿಯ ಪದರಗಳು ತುದಿಯ ಕಡೆಗೆ ಬರುತ ಬರುತ ಕಡಮೆಯಾಗುತ್ತಲೂ ಸಣ್ಣಗಾಗುತ್ತಲೂ ಬಂದು ಮೊನೆಯಲ್ಲಿ ಐಕ್ಯವಾಗುವುವು. ಆದುದರಿಂದಲೇ ಗರಿಯು ಆಕಡೆ ತುಂಬ ಹಗುರವಾಗಿರುವುದು. ಎಲ್ಲಾ ಗರಿಗಳೂ ಮೇಲ್ಗಡೆಗಿಂತ ಕೆಳಗಡೆ ತುಂಬ ನುಣುಪಾಗಿಯೂ ಮೃದುವಾಗಿಯೂ ಇರುವುವು. ಈ ಗರಿಗಳು ವರಸೆವರಸೆಯಾಗಿ ಒಂದು ಪದರದ ಕೆಳಗೆ ಮತ್ತೊಂದು ಪದರವು ಬರುವಂತೆ ಜೋಡಿ ಸಲ್ಪಟ್ಟಿರುವುದರಿಂದ ಹಕ್ಕಿಯ ಅಪೇಕ್ಷೆಯಂತೆ ಬೇಕಾದಾಗ ಬೀಸಣಿಗೆಯ ಹಾಗೆ ಬಿಚ್ಚಿ ತೆರೆಯುವುದಕ್ಕೂ ಅಥವಾ ಮಡಿಸಿಕೊಳ್ಳುವುದಕ್ಕೂ ಅನುಕೂಲವುಂಟು.

ಆಕಾಶದಲ್ಲಿ ಹಾರಾಡುವ ಪ್ರಾಣಿಗಳಿಗೆ ರೆಕ್ಕೆಗಳು ಅತ್ಯಂತ ಮುಖ್ಯವಾದ ಅವಯವಗಳು. ಇವುಗಳಿಲ್ಲದೆ ಇದ್ದಲ್ಲಿ ಆ ಪ್ರಾಣಿಗಳು ನೆಲವನ್ನು ಬಿಟ್ಟು ಕದಲು ವುದಕ್ಕೇ ಆಗುತಿರಲಿಲ್ಲ. ಕೆಲವು ಪ್ರಾಣಿಗಳಲ್ಲಿ ರೆಕ್ಕೆಗಳು ಒಟ್ಟು ದೇಹವನ್ನೆಲ್ಲ ಸಮತೂಕದಲ್ಲಿಟ್ಟಿರುವುದಕ್ಕೆ ಅನುಕೂಲವಾಗುವಂತೆ, ಅಂದರೆ ಎರಡು ರೆಕ್ಕೆಗಳನ್ನು ಹಿಡಿದು ಹಕ್ಕಿಯನ್ನು ಮೇಲಕ್ಕೆತ್ತಿದರೆ ಅದರ ದೇಹದ ಮುಂಭಾಗವೂ ಹಿಂಭಾ ಗವೂ ಒಂದೇ ಮಟ್ಟದಲ್ಲಿರುವಂತೆ ಮಾಡುವಹಾಗೆ ಏರ್ಪಡಿಸಲ್ಪಟ್ಟಿವೆ. ಆದರೆ ಪಕ್ಷಿಗಳ ಮುಂಭಾಗದಲ್ಲಿ ಕಾಲುಗಳಿರುವುವು. ಹಿಂಭಾಗದಲ್ಲಿ ಏನೂ ಇಲ್ಲ. ಆದು ದರಿಂದ ಮುಂಭಾರವಾಗಬೇಕಾಗಿದ್ದಿತು ; ಆದರೆ ಹಾಗೆ ಆಗದೆ ಹಿಂದುಗಡೆಯ ತೂಕವನ್ನು ಸಮಗಟ್ಟುವುದಕ್ಕೋಸ್ಕರ ಪ್ರಕೃತಿಯು ಹಕ್ಕಿಯ ಹಿಂದುಗಡೆ ಉದ್ದ ವಾದ ಕೆಲವು ಗರಿಗಳನ್ನು ಇಟ್ಟಿರುವಳು. ಇವಕ್ಕೆ ಪುಕ್ಕಗಳೆಂದು ಹೆಸರು. ಪುಕ್ಕ ಗಳು ತೂಕವನ್ನು ಸರಿಯಾಗಿಟ್ಟಿರುವುದಕ್ಕೆ ಮಾತ್ರವಲ್ಲದೆ ಹಕ್ಕಿಯು ಇಷ್ಟಪಟ್ಟಾ ಗೆಲ್ಲ ಇವು ಒಟ್ಟಿಗೆ ಮೇಲಕ್ಕೆ ಅಥವಾ ಕೆಳಕ್ಕೆ ವಾಲುತ್ತವೆ. ಇವು ಇತರ ಗರಿ

ಗಳ ಹಾಗೆ ಮೇಲ್ಗಡೆಯಲ್ಲೇ ಇಲ್ಲದೆ ಸಾಕ್ಷಾತ್ತಾಗಿ ದೇಹದ ಮೂಳೆಗೇ ಅಂಟಿ ಕೊಂಡಿರುವುದು. ಈ ಗರಿಗಳ ಮೇಲ್ಗಡೆ ಒಂದು ಪಕ್ಕದ ಕೂದಲುಗಳು ಉದ್ದ ವಾಗಿಯೂ ಮತ್ತೊಂದು ಪಕ್ಕದವು ಮೊಟಕಾಗಿಯೂ ಇರುವುವು. ಚತುಷ್ಪಾದಿ ಪ್ರಾಣಿಗಳಿಗೆ ಕಾಲುಗಳು ದೇಹದ ತೂಕವನ್ನು ಹೇಗೆ ಸಮವಾಗಿ ವಹಿಸುವವೋ ಹಾಗೆಯೇ ರೆಕ್ಕೆಗಳು ಹಕ್ಕಿಗಳ ದೇಹವನ್ನು ವಾಯುಮಂಡಲದಲ್ಲಿ ಸಮವಾಗಿ ತೂಗುವುವು. ಹಕ್ಕಿಗಳು ನೆಲದ ಮೇಲಿಂದ ಗಗನಕ್ಕೆ ಹೋಗಬೇಕಾದರೆ ಮೊದಲು ಕಾಲುಗಳನ್ನು ಸಡಿಲಿಸಿಕೊಂಡು ನೆಗೆಯುವುವು. ಉತ್ತರಕ್ಷಣದಲ್ಲೇ ತಮ್ಮ ರೆಕ್ಕೆ ಗಳಿಂದ ಮೈಯ ಕೆಳಭಾಗವನ್ನು ಬಡಿದುಕೊಳ್ಳುವುವು. ಇದರಿಂದ ಕೆಳಗಡೆ ಗಾಳಿಯ ಒತ್ತಡವು ಹೆಚ್ಚಿ ಹಕ್ಕಿಯನ್ನು ಮೇಲಕ್ಕೆ ಏರಿಸುವುದು. ಆದರೆ ಅದೇ ಸಮಯ ದಲ್ಲಿ ಹಕ್ಕಿಯ ಬೆನ್ನಕಡೆ ಅಂದರೆ ಮೇಲ್ಗಡೆಯೂ ಗಾಳಿಯ ಒತ್ತಡವಿರುವುದರಿಂದ ಪಕ್ಷಿಯು ಮೇಲಕ್ಕೆ ಏರುವುದಕ್ಕೆ ಅವಕಾಶವೇ ಇಲ್ಲದಿರಬಹುದಾಗಿದ್ದಿತು; ಆದರೆ ಮೇಲ್ಗಡೆಯ ಗಾಳಿಯ ಒತ್ತಡವನ್ನು ಕಡಿಮೆ ಮಾಡಿಕೊಳ್ಳುವುದಕ್ಕೋಸ್ಕರ ಹಕ್ಕಿ ಯು ತನ್ನ ರೆಕ್ಕೆಗಳನ್ನು ಬಿಚ್ಚಿ ತೆರೆಯದೆ ಮುಡಿಸಿಕೊಂಡು ಅವುಗಳ ಬುಡದಭಾಗವು ಮೇಲ್ಗಡೆಗೆ ಚೂಪಾಗಿರುವಂತೆ ಮಾಡಿಕೊಳ್ಳುವುದು. ಬಳಿಕ ತನಗೆ ಇಷ್ಟಬಂದಷ್ಟು ದೂರಕ್ಕೆ ಹೋದಾಗ ರೆಕ್ಕೆಗಳನ್ನು ಇನ್ನೊಂದುಸಲ ಒದರಿ ವಿಸ್ತಾರವಾಗಿ ಹರಡಿ ಕೊಂಡು ಅದೇ ಮಟ್ಟದಲ್ಲಿ ಎಷ್ಟು ದೂರಕ್ಕೆ ಬೇಕಾದರೂ ಹೋಗುವುದು. ಹಕ್ಕಿ ಗಳು ತುಂಬ ಮೇಲಕ್ಕೆ ಏರಬೇಕೆಂದು ಉದ್ದೇಶಿಸಿ ನೆಲದಿಂದ ನೆಗೆಯುವಾಗ ಮೊದಲು ಸಾಮಾನ್ಯವಾಗಿ ಎದುರುಗಾಳಿಯ ಕಡೆಗೇ ಹೋಗುವುವು. ವಿಸ್ತಾರವಾದ ರೆಕ್ಕೆ ಗಳುಳ್ಳ ದೊಡ್ಡ ಹಕ್ಕಿಗಳು ನೆಲದಿಂದ ಮೇಲ್ಗಡೆಗೆ ಅಷ್ಟು ಸುಲಭವಾಗಿ ಹಾರಲಾ ರವು. ಯಾಕೆಂದರೆ ಅವುಗಳ ದೊಡ್ಡ ರೆಕ್ಕೆಗಳನ್ನು ಅಲ್ಲಾಡಿಸಿಕೊಳ್ಳುವುದಕ್ಕೆ ಕೆಳ ಗಡೆ ತಕ್ಕಷ್ಟು ಸ್ಥಳವಿರುವುದಿಲ್ಲ. ಮತ್ತು ಹಾಗೆ ನೆಗೆಯುವಾಗ ರೆಕ್ಕೆಗಳ ಕೆಳ ಗಡೆ ತಕ್ಕಷ್ಟು ಗಾಳಿಯಿರುವುದಿಲ್ಲವಾಗಿ ಭಾರವಾದ ಮೈಯು ಮೇಲಕ್ಕೇರು ವುದು ಕಷ್ಟ.

ರೆಕ್ಕೆಗಳನ್ನು ಪ್ರಸರಿಸುವುದು ಮುಡಿಸುವುದು ಈ ಕೆಲಸಗಳು ಸುಲಭವಾಗಿ

ನಡೆಯುವುದಕ್ಕೋಸ್ಕರ ಅವುಗಳ ಬುಡದಲ್ಲಿ ಎದೆಯ ಮೂಳೆಗೆ ಸಂಬಂಧಿಸಿಕೊಂಡು ಎರಡು ಕಡೆಯೂ ಸಂಕಲ್ಪಾಧೀನ ಮಾಂಸಖಂಡಗಳಿರುವುವು. ಚತುಷ್ಪಾದಿಗಳ ಎದೆಯ ಪಕ್ಕಗಳಲ್ಲೂ ಇಂತಹ ಮಾಂಸಖಂಡಗಳಿರುವುವಾದರೂ ಹೋಲಿಸಿ ನೋಡಿದರೆ ಅವು ಪಕ್ಷಿಗಳ ಶರೀರದಲ್ಲಿ ನಡೆಯುವಷ್ಟು ಸುಲಭವಾಗಿಯೂ ಹೆಚ್ಚಾಗಿಯೂ ಕೆಲಸ ಮಾಡಲಾರವು. ಚತುಷ್ಪಾದಿಗಳೂ ಮತ್ತು ಮನುಷ್ಯನೂ ಎದೆಯ ಪಕ್ಕಗಳಲ್ಲಿರುವ ಮುಂಭಾಗದ ಅವಯವಗಳಾದ ತೋಳುಗಳಿಗಿಂತಲೂ ಹಿಂದುಗಡೆಯಲ್ಲಿರುವ ತೊಡೆ ಮೊದಲಾದವುಗಳಲ್ಲಿ ಹೆಚ್ಚು ಬಲವನ್ನೂ ಚಟುವಟಿಕೆಯನ್ನೂ ಪಡೆದಿರುವರು. ಪಕ್ಷಿಗಳಾದರೊ ಈ ವಿಷಯದಲ್ಲಿ ಸಂಪೂರ್ಣವಾಗಿ ಭಿನ್ನಸ್ವಭಾವವುಳ್ಳವಾಗಿರುತ್ತವೆ. ಆದುದರಿಂದಲೇ ಎದೆಯ ಮೂಳೆಗೆ ಸಂಬಂಧಿಸಿಕೊಂಡಿರುವ ಪಕ್ಷಿಯ ರೆಕ್ಕೆಗಳು ಅವುಗಳ ತೊಡೆ ಕಾಲು ಅಥವಾ ಹಿಂಭಾಗದ ಅವಯವಗಳು, ಇವುಗಳಿಗಿಂತ ತುಂಬ ಪಟುವಾಗಿರುವುವು. ಒಂದು ಪಕ್ಷಿಯು ತನ್ನ ಶಕ್ತಿಗೆ ಅನುಗುಣವಾಗಿ ರೆಕ್ಕೆಗಳಿಂದ ಕೆಲಸ ಮಾಡುವುದಕ್ಕೂ ನಾವು ನಮ್ಮ ತೋಳುಗಳಿಂದ ಕೆಲಸ ಮಾಡುವುದಕ್ಕೂ ಹೋಲಿಕೆಮಾಡಿ ನೋಡುವಲ್ಲಿ ಅವುಗಳ ಶಕ್ತಿಯು ಅಪಾರವಾದುದುಯೆನ್ನಬಹುದು. ಒಂದು ಹಂಸವು ತನ್ನ ರೆಕ್ಕೆಯಿಂದ ಒಬ್ಬ ಮನುಷ್ಯನ ಕಾಲನ್ನು ಮುರಿಯಬಲ್ಲದು. ಒಂದು ಬಲವಾದ ಹದ್ದು ತನ್ನ ರೆಕ್ಕೆಯಿಂದ ಬಡಿದು ಒಬ್ಬ ಮನುಷ್ಯನನ್ನು ಕೊಲ್ಲಬಲ್ಲದು. ಮತ್ತು ಈ ರೆಕ್ಕೆಗಳಿಗೆ ಇರತಕ್ಕ ಚಾತುರ್ಯವೂ ಚಟುವಟಿಕೆಯೂ ಅಸಾಧಾರಣವಾದುವು. ಮನುಷ್ಯನ ಯಾವ ಬುದ್ಧಿಶಕ್ತಿಯೇ ಆಗಲಿ ಯಾವ ಯಂತ್ರವೇ ಆಗಲಿ ಇಷ್ಟು ಹಗುರವಾದ ಸಾಧನದಿಂದ ಇಂತಹ ದೊಡ್ಡ ಕೆಲಸಗಳನ್ನು ನಡೆಸಲಾರದು. ಆದುದರಿಂದಲೇ ಗಗನದಲ್ಲಿ ವಿಮಾನಗಳನ್ನು ನಡೆಯಿಸುವುದಕ್ಕೋಸ್ಕರ ಮನುಷ್ಯರು ಅನೇಕ ಶತಮಾನಗಳಿಂದ ಪಡುತ್ತಿರುವ ಸಾಹಸವು ಇನ್ನೂ ಚೆನ್ನಾಗಿ ಸಿದ್ಧಿಸಿಲ್ಲ. ಅಥವಾ ಕ್ವಚಿತ್ ಸಿದ್ಧಿಸಿದ್ದರೂ ಸಂಗಡಲೇ ಏನಾದರೊಂದು ತೊಂದರೆಯನ್ನು ಪಡೆದೇ ಇರುತ್ತದೆ. ದೃಷ್ಟಾಂತವಾಗಿ— ಈಗ ವಿಮಾನಗಳೆಂದು ಕರೆಯಲ್ಪಡುತ್ತಿರುವ ಆಕಾಶಯಾನಗಳು ಪಕ್ಷಿಗಳಂತೆ ಎಷ್ಟು ಮೇಲಕ್ಕಾದರೂ ಎಷ್ಟು ದೂರವಾದರೂ ಹಾರಬಲ್ಲವಾದರೂ ಅವುಗಳ

ವೇಗದ ಪರಿಮಾಣಕ್ಕೆ ಮೀರಿದಷ್ಟು ಹೆಚ್ಚು ತೂಕವನ್ನು ಪಡೆದಿರುವುದರಿಂದ ಭಾರದ ವಿಷಯದಲ್ಲಿ ಒಂದು ವಿಧವಾದ ನ್ಯೂನತೆಯನ್ನು ಪಡೆದಿರುವಂತೆಯೇ ಆಯಿತು.

ಹಕ್ಕಿಗಳ ತಲೆಯು ಯಾವ ಕಡೆಗೆ ತಿರುಗಿಸಬೇಕಾದರೂ ಅನುಕೂಲವಾಗಿರುವಂತಹ ರಚನೆಯನ್ನು ಪಡೆದಿರುತ್ತದೆ. ಹೀಗಿರುವುದರಿಂದಲೇ ದೇಹದ ಯಾವ ಭಾಗವನ್ನೇ ಆದರೂ ಕೊಕ್ಕಿನಿಂದ ಸರಿಮಾಡಿಕೊಳ್ಳಬಲ್ಲುದು.

ಕಾಲುಗಳಲ್ಲಿ ಬೆರಳುಗಳು ನಮಗಿರುವಂತೆ ಮುಂದುಗಡೆಗೆ ಮಾತ್ರವೇ ಇಲ್ಲದೆ ಹಿಂದುಗಡೆಗೂ ಇರುವುದರಿಂದ ಮರದ ಕೊಂಬೆಗಳ ಮೇಲೆ ಕುಳಿತುಕೊಳ್ಳುವಾಗ ಅವನ್ನು ಭದ್ರವಾಗಿ ಹಿಡಿದುಕೊಳ್ಳಲು ಅನುಕೂಲ. ಜಲಚರಜೀವಿಗಳಾದ ಪಕ್ಷಿಗಳು ನೀರಿನಲ್ಲಿ ಈಜಾಡುವುದಕ್ಕೆ ಅನುಕೂಲವಾಗಿ ಬೆರಳುಗಳ ನಡುವೆ ಚರ್ಮದ ಪರೆಯನ್ನುಳ್ಳ ಜಾಲಪಾದಗಳನ್ನು ಪಡೆದಿರುತ್ತವೆ.

ಹಕ್ಕಿಗಳ ರೆಕ್ಕೆಪುಕ್ಕಗಳು ತುಪ್ಪಳ ಇವು ಮಾತ್ರ ಹಗುರವಾಗಿರುವುವಲ್ಲದೆ ಅವುಗಳ ಅಸ್ಥಿಗಳೂ ಕೂಡ ಬಲು ತೆಳುವಾದ ಕೊಳವೆಗಳಂತಿರುವ ಪೊಳ್ಳಾದ ಮೂಳೆಗಳಿಂದ ಮಾಡಲ್ಪಟ್ಟಿವೆ.

J. Krishna Sastry.

ಸ್ಕೂಲ್ ಡಿಸಿಪ್ಲಿನ್

(96 ನೇ ಪುಟದ ಶೇಷ)

(1) ತಾವು ನಡೆದುಕೊಳ್ಳುವ ಮಾರ್ಗದಿಂದ ಎಲ್ಲರೂ ಸತ್ಯವನ್ನು ಹೇಳುವರೆಂದು ಉಪಾಧ್ಯಾಯರು ನಿರೀಕ್ಷಿಸುವಂತೆ ಮಕ್ಕಳಿಗೆ ನಂಬಿಕೆಯನ್ನುಂಟುಮಾಡಬೇಕು.

(2) ಸ್ಕೂಲಿನಲ್ಲಿ ಸಂದರ್ಭಸಿಕ್ಕಿದಾಗ ಸುಳ್ಳು ಹೇಳುವುದು ನೀಚತನವೆಂತಲೂ ಕೆಟ್ಟತನವೆಂತಲೂ ಸ್ಪಷ್ಟಪಡಿಸಬೇಕು.

(3) ಪರೀಕ್ಷಿಸದೆ ಯಾರನ್ನೂ ಮೊದಲು ಸುಳ್ಳುಗಾರರೆಂದು ಹೇಳಲೇ ಕೂಡದು.

(4) ಮೊದಲು ಸಲ ಸುಳ್ಳನ್ನು ಹೇಳಿದರೆ ಆಶ್ಚರ್ಯವನ್ನು ತೋರ್ಪಡಿಸಬೇಕು. ಮತ್ತೊಮ್ಮೆ ಸುಳ್ಳು ಹೇಳಿದರೆ ಸುಳ್ಳು ಹೇಳಿದವನನ್ನು ಬಹುಕಾಲ ನಂಬದೆ ಆಚರಿಸಬೇಕು.

(5) ಅಸತ್ಯವನ್ನು ಕಂಡರೆ ಮೊದಲು ತಕ್ಕ ಶಿಕ್ಷೆಯನ್ನು ವಿಧಿಸಬೇಕು.

ಚಾಡೀ ಹೇಳುವ ದುರ್ಗುಣವು ಹುಡುಗರಲ್ಲಿರುವುದು. ಇದು ಒಂದೊಂದು ವೇಳೆ ಸತ್ಯವನ್ನು ಬಿಟ್ಟಿರದೇ ಇರಬಹುದು. ಆದರೂ ಚಾಡಿ ಹೇಳುವುದನ್ನು ತಪ್ಪಿಸಬೇಕು. (ಚಾಡಿ ಕೇಳುವುದನ್ನು ಬಿಟ್ಟರೆ ಹೇಳುವುದು ನಿಲ್ಲುವುದು) ಯಾಕಂದರೆ ಇದರ ಉದ್ದೇಶವು ಕೆಟ್ಟದ್ದು. ಈ ಕೆಟ್ಟ ಉದ್ದೇಶವು ಇರುವುದರಿಂದ ನಡೆದದ್ದನ್ನು ನಡೆದಂತೆಯೇ ಹೇಳದೆ ಸ್ವಲ್ಪಮಟ್ಟಿಗಾದರೂ ಬದಲಾಯಿಸುವಂತೆ ಆಗುವುದು. ಇದು ಸುಳ್ಳಿಗೆ ದಾರಿಯಾಗಿರುವುದರಿಂದ ಇದನ್ನು ತಪ್ಪಿಸಬೇಕು.

VI. **ಪ್ರಾಮಾಣಿಕತೆ**—ಮಾತಿನಲ್ಲಿ ಹೇಳಿದರೆ ಯಾವುದು ಅಸತ್ಯವಾಗುವುದೋ ಅಂತಹುದನ್ನು ಬಾಯಲ್ಲಿ ಹೇಳುವುದಕ್ಕೆ ಬದಲಾಗಿ ಕೈಯಲ್ಲಿ ಮಾಡುವುದಕ್ಕೆ ಅಥವಾ ಮನಸ್ಸಿನಲ್ಲಿ ಯೋಚಿಸುವುದಕ್ಕೆ ಅಪ್ರಾಮಾಣಿಕತೆಯೆಂದು ಹೆಸರು. ಇತರರೊಡನೆ ವ್ಯವಹರಿಸುವುದರಲ್ಲಿ ಪ್ರಾಮಾಣಿಕತೆಯು ಆವಶ್ಯಕವಾಗಿರಬೇಕು. ಇತರರ ಒಡವೆಗೆ ಆಶಿಸದಿರುವುದು, ಇತರರ ಸ್ವಾತಂತ್ರ್ಯವನ್ನು ಕಡಿಮೆ ಮಾಡಲು ಯತ್ನ ಮಾಡದಿರುವುದು, ಇಂತಹುವೆಲ್ಲಾ ಪ್ರಾಮಾಣಿಕತೆಗೆ ಸೇರಿರುವುದು. ಅತಿಯಾದ ಅಭಿಮಾನವನ್ನು ತನ್ನಲ್ಲಿಟ್ಟುಕೊಂಡು ಸ್ವಾರ್ಥಪರನಾಗಿರುವುದರಿಂದ ಅಪ್ರಾಮಾಣಿಕತೆಯು ಹುಟ್ಟುವುದು. ಮಕ್ಕಳಲ್ಲಿ ಪ್ರಾಮಾಣಿಕತೆಯನ್ನುಂಟು ಮಾಡುವಾಗ ಸತ್ಯದ ವಿಷಯದಲ್ಲಿ ಬರೆದಿರುವುದನ್ನು ಜ್ಞಾಪಕದಲ್ಲಿಟ್ಟಿರಬೇಕು.

VII. **ದಯೆ**—ಅಂದರೆ ಇತರರಿಗೆ ಹೆಚ್ಚು ಸುಖವನ್ನುಂಟುಮಾಡುವುದು ಅಥವಾ ಅವರಿಗಿರುವ ದುಃಖವನ್ನು ಕಡಿಮೆ ಮಾಡುವುದು. ಎಂದು ಈ ಶಬ್ದದ ಅರ್ಥ. ಇದಕ್ಕೆ ಬದಲಾಗಿ ಇತರರ ಸುಖವನ್ನು ಕಡಿಮೆ ಮಾಡುವುದು ಅಥವ ಇತರರ ದುಃಖವನ್ನು ಹೆಚ್ಚಿಸುವುದು ನಿರ್ದಯತ್ವವೆನ್ನಿಸಿಕೊಳ್ಳುವುದು. ಈ ದಯೆಯನ್ನು ವೃದ್ಧಿ ಮಾಡಲು—

(1) ಉಪಾಧ್ಯಾಯರು ದಯಾವಂತರಾಗಿರಬೇಕೆಂದು ಮೇಲೆಯೇ ತಿಳಿಸಿದೆ.

(2) ದಯಾಗುಣವೇ ಮುಖ್ಯವಾಗಿ ಉಳ್ಳ ಶಿಬಿ–ದಧೀಚಿ–ಮಾಂಧಾತ–ಜೀಮೂತ, ಮೊದಲಾದವರ ಕಥೆಗಳನ್ನು ಹೇಳುವುದರಿಂದಲೂ ವೃದ್ಧಿಗೊಳಿಸಬಹುದು.

(3) ಕ್ರೌರ್ಯವು ಕಂಡುಬಂದಾಗ ಮಕ್ಕಳನ್ನು ದಂಡಿಸುವುದರಿಂದಲೂ

(4) ಪಾಠಶಾಲೆಯಲ್ಲಿ ಪ್ರಾಣಿಗಳನ್ನು ಸಾಕುವುದರಿಂದಲೂ ವೃದ್ಧಿಗೊಳಿಸಬಹುದು.

ದಯೆಯೊಂದು ಇದ್ದರೆ ಧಾರಾಳವೂ ಮರ್ಯಾದೆಯೂ ಮತ್ತು ಇತರ ಕೆಲವು ಸುಗುಣಗಳೂ ತಾವಾಗಿಯೇ ಬರುವುವು. ದಯೆಯಿಲ್ಲದಿರುವುದು ಅನೇಕವಿಧ. 1. ಇತರರು ಕಷ್ಟಪಡುತಿದ್ದರೆ ಅನುತಾಪಪಡದಿರುವುದು. 2. ಸಮಯದಲ್ಲಿ ನಿರ್ದಾಕ್ಷಿಣ್ಯವಾಗಿರುವುದು. 3. ನಡೆನುಡಿಗಳಲ್ಲಿ ಮರ್ಯಾದೆಯಿಲ್ಲದಿರುವುದು, 4. ಇತರರನ್ನು ಪರಿಹಾಸ್ಯಮಾಡುವುದು. 5. ದುರ್ಬಲರನ್ನು ಹೊಡೆವುದು–ಬೈಯುವುದು. 6. ತಿರ್ಯಗ್ಜಂತುಗಳನ್ನು ಹಿಂಸಿಸುವುದು. 7. ಹೀನಹೆಸರಿನಿಂದ ಕರೆಯುವುದು, ಇವೆಲ್ಲಾ ದಯೆಗೆ ವಿರುದ್ಧವಾದ ಕಾರ್ಯಗಳು. ಇವುಗಳನ್ನೆಲ್ಲಾ ಮಕ್ಕಳಲ್ಲಿ ತಪ್ಪಿಸಬೇಕು. ಮುಂದಾಲೋಚನೆಯಿಲ್ಲದೆ ಕೆಲಸ ಮಾಡುವುದರಿಂದಲೂ, ಕ್ರೂರಕೃತ್ಯದಿಂದಲೂ ನಮ್ಮಂತೆ ಇತರರಿಗೂ ವ್ಯಥೆಯುಂಟಾಗುವುದೆಂಬ ಭಾವನೆಯು ಚಿಕ್ಕ ವಯಸ್ಸಿನಲ್ಲಿ ಇಲ್ಲದಿರುವುದರಿಂದಲೂ ಮಕ್ಕಳು ಹೀಗೆ ನಡೆದುಕೊಳ್ಳುವರು. ಆದ್ದರಿಂದ ಅವರೊಡನೆ ಈ ವಿಷಯವಾಗಿ ಆಗಾಗ್ಗೆ ಸ್ಪಷ್ಟವಾಗಿ ಮಾತಾಡುವುದರಿಂದ ಕ್ರೂರಕೃತ್ಯವನ್ನು ಬಿಟ್ಟು ದಯಾವಂತರಾಗುವರು.

VIII. **ಅಂದವಾಗಿಯೂ ಶುಚಿಯಾಗಿಯೂ ಇರುವುದು** – ಇದನ್ನು ಮಕ್ಕಳಲ್ಲಿರುವ ಸೌಂದರ್ಯಾಭಿನಿವೇಶದ ಸಹಾಯದಿಂದ ವೃದ್ಧಿಗೊಳಿಸಬಹುದು. ಇವುಗಳ ಪೈಕಿ ಶುಚಿತ್ವವಿದ್ದಲ್ಲಿ ಅಂದವು ತಾನಾಗಿಯೇ ಬರುವುದು. ಈ ಗುಣಗಳನ್ನು ವೃದ್ಧಿಮಾಡಲು ಅನುಸರಿಸಬೇಕಾದುವು—

(1) ಸ್ಕೂಲಿನಲ್ಲಿರುವ ಎಲ್ಲಾ ಪದಾರ್ಥಗಳೂ ಅಂದವಾಗಿರಬೇಕು. ಮತ್ತು ಶುಚಿಯಾಗಿಡಲ್ಪಟ್ಟಿರಬೇಕು.

(೨) ಪ್ರತಿದಿನವೂ ಒಂದೆರಡುಸಲ ಸ್ಕೂಲನ್ನೆಲ್ಲಾ ಗುಡಿಸಬೇಕು.

(3) ಅಲ್ಲಲ್ಲಿ ಶಾಯಿ ಚೆಲ್ಲುವುದು. ಗೋಡೆಯ ಮೇಲೆ ಬರೆಯುವುದು. ಉಗುಳುವುದು-ಕಾಗದಗಳನ್ನು ಹರಿದುಹಾಕುವುದು, ಇದನ್ನೆಲ್ಲಾ ತಪ್ಪಿಸಬೇಕು.

(4) ಪ್ರತಿ ದಿವಸವೂ ಬೆಂಚು, ಕುರ್ಚಿ, ಕಿಟಕಿ, ಕದ, ಇವುಗಳ ಧೂಳು ಹೊಡೆಸಬೇಕು-ಆಗಾಗ್ಗೆ ಸ್ಕೂಲನ್ನೆಲ್ಲಾ ಚೆನ್ನಾಗಿ ತೊಳೆಸಬೇಕು.

(5) ವರ್ಷಕ್ಕೊಂದೆರಡು ಸಲ ಸುಣ್ಣವನ್ನು ತೊಡೆಸಬೇಕು.

(6) ಸ್ಕೂಲಿಗೆ ಕಕ್ಕಸು ಇರಬೇಕು.

(7) ಕಾಂಪೌಂಡಿನಲ್ಲಿ ಒಂದೊಂದು ಭಾಗವನ್ನೂ ಒಂದೊಂದು ಕಾರ್ಯಕ್ಕಾಗಿ ವಿನಿಯೋಗಿಸಬೇಕು. ಅಲ್ಲಲ್ಲಿ ಹೂವಿನ ಕುಂಡಗಳಲ್ಲಿ ಗಿಡಗಳನ್ನಿಡಬೇಕು.

(8) ಉಪಾಧ್ಯಾಯರು ತಾವು ಶುಚಿಯಾದ ಬಟ್ಟೆಯನ್ನು ಹಾಕಿಕೊಂಡು ಇರುತ್ತ, ಮಾಡುವ ಕೆಲಸಗಳನ್ನೆಲ್ಲಾ ಅಂದವಾಗಿ ಮಾಡುತ್ತ ಮಕ್ಕಳಿಗೆ ಮೇಲು ಪಙ್ತಿಯಾಗಿರಬೇಕು.

(9) ಕೊಳೆಬಟ್ಟೆಯನ್ನು ಹಾಕಿಕೊಂಡು ಬರುವುದು, ತಲೆ ಬಾಚಿಕೊಳ್ಳದೆ ಬರುವುದು, ಇಂತಹುದನ್ನು ಕಂಡರೆ ಹುಡುಗರ ಪೋಷಕರೊಡನೆ ಮಾತಾಡು ತಿರಬೇಕು.

IX. **ಮಾಡಬೇಕಾದ ಕೆಲಸವನ್ನು ತಪ್ಪದೆ ಮಾಡುವುದು**—ಇದರಿಂದ ಮಕ್ಕಳಲ್ಲಿ ಉದ್ಯೋಗವು ಹೆಚ್ಚುವುದಕ್ಕೆ ಕಾರಣವಾಗುವುದು. ಮಕ್ಕಳು ಸ್ಕೂಲಿಗೆ ದಿನವೂ ತಪ್ಪದಂತೆ ಬರುವಹಾಗೆ ಮಾಡಿದರೆ ಮುಂದಕ್ಕೆ ಅವರು ಲೋಕವ್ಯವಹಾರ ದಲ್ಲಿ ಹಿಡಿದ ಕೆಲಸವನ್ನು ತಪ್ಪದೆ ನಡೆಸುವರು. ಸ್ಕೂಲಿಗೆ ತಪ್ಪದೆ ಬರಬೇಕಾದರೆ ಈ ಮುಂದಿನ ಅಂಶಗಳಿಗೆ ಗಮನ ಕೊಡಬೇಕು.

(1) ಚೆನ್ನಾಗಿ ಪಾಠಹೇಳುವುದರಿಂದ ಮಕ್ಕಳಿಗೆ ಸ್ಕೂಲಿನ ಕೆಲಸದಲ್ಲಿ ಅಭಿ ರುಚಿಯನ್ನು ಹುಟ್ಟಿಸಬೇಕು.

(2) ಸ್ಕೂಲಿನ ಕೆಲಸವು ಪ್ರಯೋಜನಕರವಾದುದೆಂದು ಪೋಷಕರು ನಂಬು ವಂತೆ ಮಾಡಬೇಕು.

(3) ಹಾಜರಿ ಮತ್ತು ಪ್ರೋಗ್ರೆಸ್ ರಿಜಿಷ್ಟರುಗಳನ್ನು ಇಟ್ಟು ಎಷ್ಟು ದಿವಸ ಬರಲಿಲ್ಲ, ಅದರಿಂದ ಉಂಟಾದ ನಷ್ಟ, ಇನನ್ನೆಲ್ಲಾ ತಿಳಿಸಬೇಕು.

(4) ಅಪ್ಪಣೆಯಿಲ್ಲದೆ ತಪ್ಪಿಸಿಕೊಂಡ ಹುಡುಗನ ವಿಷಯದಲ್ಲಿ ಅವನ ತಂದೆ ತಾಯಿಗಳಿಗೆ ಬರೆದು ಕಾರಣವನ್ನು ತಿಳಿದುಕೊಳ್ಳಬೇಕು. ಸರಿಯಾದ ಕಾರಣವಿಲ್ಲವಿದ್ದರೆ ದಂಡಿಸಬೇಕು.

(4) ತಪ್ಪದೆ ಬರುವವರಿಗೆ ಬಹುಮಾನ ಕೊಡಬೇಕು.

X. ಮಾಡುವ ಕೆಲಸವನ್ನು ಹೊತ್ತಿಗೆ ಸರಿಯಾಗಿ ಮಾಡುವುದು—

ಈ ಗುಣವನ್ನು ಕಲಿಸುವುದಕ್ಕೂ ಮಕ್ಕಳು ಸ್ಕೂಲಿಗೆ ಹೊತ್ತಿಗೆ ಸರಿಯಾಗಿ ಬರುವಂತೆ ಮಾಡಬೇಕು. ಇದು ಬಂದರೆ ಮುಂದೆ ಲೋಕವ್ಯವಹಾರದಲ್ಲೂ ಹಾಗೆಯೇ ಆಗುವರು. ಇದಕ್ಕೆ ದಾರಿಗಳು—

(1) ಉಪಾಧ್ಯಾಯರು ತಾವು ಕ್ಲುಪ್ತವಾಗಿ ಬರಬೇಕು.

(2) ಒಂದು ಹೊತ್ತು ಗೊತ್ತುಮಾಡಿ ಅದಕ್ಕೆ ಮೀರಿಬಂದವರಿಗೆ ಲೇಟೆಂದು ಗೊತ್ತುಮಾಡಿ ಅದರಂತೆ ಖಂಡಿತವಾಗಿ ನಡೆಸುತ್ತಾ ಬರಬೇಕು.

(3) ಸ್ಕೂಲಿನ ಗಡಿಯಾರವನ್ನು ಏಕರೀತಿಯಾಗಿಟ್ಟಿರಬೇಕು.

(4) ಮಾಡುವ ಕೆಲಸಕಾರ್ಯಗಳಲ್ಲಿಯೂ ಯಾವುದಾದರೂ ಕಾರಣದಿಂದ ಹೆಚ್ಚುಕಡಿಮೆಯಾಗಬೇಕಾದರೆ ಬದಲಾವಣೆಯನ್ನು ಮುಂಚಿತವಾಗಿ ಎಲ್ಲರಿಗೂ ತಿಳಿಸಬೇಕು.

(5) ಪ್ರತಿದಿನವೂ ವೇಳಾಪತ್ರಿಕೆಯಲ್ಲಿ ಮೊದಲನೆಯ ಹೊತ್ತಿನಲ್ಲಿ ಒಳ್ಳೆಯ ಪಾಠವನ್ನಿಡಬೇಕು. ಇಂತಹ ಮುಖ್ಯ ಪಾಠವು ಹೋಗುತ್ತೆಂಬ ಭೀತಿಯಿಂದ ಮಕ್ಕಳು ಸರಿಯಾಗಿ ಬರುವರು.

(6) ಹೊತ್ತಾಗಿ ಬಂದ ಮಕ್ಕಳನ್ನು ಸರಿಯಾದ ಕಾರಣವಿದ್ದರೆ ಹೊರತು ಶಿಕ್ಷಿಸದೆ ಬಿಡಬಾರದು.

(7) ಒಂದು ದಿವಸವೂ ಹೊತ್ತುಮೀರದೆ ಬಂದವರಿಗೆ ಬಹುಮಾನ ಕೊಡಬೇಕು.

ಮಕ್ಕಳಲ್ಲಿ ಮೇಲೆ ಹೇಳಿದ ಗುಣಗಳನ್ನುಂಟುಮಾಡಿ ಅವರ ನಡತೆಯನ್ನು ನಮಗೆ ಬೇಕಾದ ದಾರಿಯಲ್ಲಿ ತಿದ್ದಲು ಇರುವ ಸಹಾಯವು.

ಈ ಹತ್ತುಗುಣಗಳನ್ನುಂಟುಮಾಡುವುದು ಸುಲಭವಲ್ಲ. ಆದುದರಿಂದ ಉಪಾಧ್ಯಾಯರು ಮನಃಪೂರ್ವಕವಾಗಿಯೂ ಜಾಗರೂಕತೆಯಿಂದಲೂ ಒಬ್ಬೊಬ್ಬ ಹುಡುಗನ ಶೀಲಸ್ವಭಾವವನ್ನು ವಿಮರ್ಶೆ ಮಾಡುತ್ತಲೂ ತಿದ್ದುತ ಬರಬೇಕು. ಹೀಗೆ ಮಾಡಿದರೂ ಮಕ್ಕಳಿಗೆ ನಡತೆಯನ್ನು ಕಲಿಸುವುದು ಕಷ್ಟ. ಆದರೆ ದೈವವಶಾತ್ ಅವರಲ್ಲಿ ಕೆಲವು ಶಕ್ತಿಗಳು ಹುಟ್ಟಿದಾಗಿನಿಂದ ಇವೆ. ಈ ಸಂಗತಿಗಳನ್ನು ತಿಳಿದು ನಡತೆಯನ್ನು ತಿದ್ದುವುದಕ್ಕೆ ಯತ್ನಿಸಿದರೆ, ತಿದ್ದುವಿಕೆಯ ಕೆಲಸವು ಸುಲಭವಾಗುವುದು.

1. ಚಟುವಟಿಕೆ ಅಥವಾ ಕಾರ್ಯಾಭಿನಿವೇಶ—ಇದು ಚಿಕ್ಕತನದಲ್ಲಿ ಬಹಳ ಹೆಚ್ಚಾಗಿರುವುದು. ಈ ವಯಸ್ಸಿನಲ್ಲಿ ಮಕ್ಕಳ ದೇಹದಲ್ಲೂ ಇಂದ್ರಿಯಗಳಲ್ಲೂ ಚಟುವಟಿಕೆಯು ವಿಶೇಷವಾಗಿರುವುದು, ಬುದ್ಧಿಯಲ್ಲಿ ಸಹ ಉಂಟು ಚಟುವಟಿಕೆಯೆಂದರೆ ಕೆಲಸ ಮಾಡುವುದಕ್ಕೆ ಬೇಕಾದ ಶಕ್ತಿ ದೇಹದಲ್ಲಿ ಚಟುವಟಿಕೆಯಿರುವುದರಿಂದ ಕೈಗೆ ಸಿಕ್ಕುವ ಪದಾರ್ಥಗಳನ್ನು ತೆಗೆದುಕೊಂಡು ಆಡುವುದು-ಅವುಗಳನ್ನು ಹಾಳುಮಾಡುವುದು--ಓಡಾಡುವುದು-ಕುಣಿದಾಡುವುದು-ಇವೆಲ್ಲಾ ಮಕ್ಕಳಲ್ಲಿ ವಿಶೇಷವಾಗಿ ಕಂಡುಬರುವುವು ಇಂದ್ರಿಯಗಳಲ್ಲಿ ಚಟುವಟಿಕೆಯು ಇರುವುದರಿಂದ ಕಂಡ ಪದಾರ್ಥಗಳನ್ನೆಲ್ಲಾ ಪರೀಕ್ಷಿಸುವುದು-ಸಮಸ್ತ ವಿಷಯದಲ್ಲೂ ಕುತೂಹಲವಿರುವುದರಿಂದ ಕಂಡವರನ್ನೆಲ್ಲಾ ಪ್ರಶ್ನೆ ಕೇಳುತ್ತಿರುವುದು-ಇಂತಹ ಚಟುವಟಿಕೆ ಇರುವುದರಿಂದ ಮಕ್ಕಳಿಂದ ಕೆಲಸಮಾಡಿಸುವುದು ಸುಲಭವಾಗುವುದು. ಮಕ್ಕಳ ಸ್ವಭಾವವನ್ನು ಅರಿತು ಅದಕ್ಕನುಸಾರವಾಗಿ ಅವರಿಗೆ ಕೆಲಸ ಕೊಡುತ್ತ ಅವರನ್ನು ದಾರಿಗೆ ತರಬಹುದು. ಯಾಕೆಂದರೆ-ಯಾವಗುಣವನ್ನು ಮಕ್ಕಳಲ್ಲಿ ನೆಲೆಗೊಳಿಸಬೇಕಾದರೂ ಆ ಗುಣಕ್ಕನುಸಾರವಾಗಿ ತಪ್ಪದೆ ಅವರಿಂದ ಕೆಲಸ ಮಾಡಿಸಬೇಕು. ಇಂತಹ ಕೆಲಸಕ್ಕೆ ಮಕ್ಕಳಲ್ಲಿರುವ ಚಟುವಟಿಕೆಯು ದೊಡ್ಡ ಸಹಾಯ.

2. ಅನುಕರಣ--ಎಂದರೆ ಇತರರು ಮಾಡಿದಂತೆ ತಾನು ಮಾಡುವುದು. ಮಗುವು ತಾನು ಕಂಡದ್ದನ್ನೆಲ್ಲಾ ಪ್ರತಿಫಲಿಸಿ ನಡೆಸುವುದು. ಮಕ್ಕಳು ಆಡುವ ಆಟಗಳನ್ನೂ, ಹೇಳುವ ಮಾತುಗಳನ್ನೂ ವಿಚಾರ ಮಾಡಿದರೆ ಅವರು ದೊಡ್ಡವರ

ನಡೆನುಡಿಗಳನ್ನು ಎಷ್ಟರಮಟ್ಟಿಗೆ ಅನುಕರಿಸುವರೆಂಬುವುದು ತಿಳಿದುಬರುವುದು. ಅದರಲ್ಲಿ ಮುಖ್ಯವಾಗಿ ದೊಡ್ಡವರೆಂದು ತಾವು ಯಾರನ್ನು ಗೌರವಿಸುವರೋ ಅವರ ಕೃತ್ಯಗಳನ್ನನುಕರಿಸುವುದರಲ್ಲಿ ಮಕ್ಕಳಿಗೆ ಬಹಳ ಆಶೆಯು ಇರುವುದು. ಈ ಕಾರಣ ದಿಂದ ಉಪಾಧ್ಯಾಯರು ಎಲ್ಲ ಅಂಶಗಳಲ್ಲೂ ಮಕ್ಕಳಿಗೆ ಮಾದರಿಯಾಗಿರಬೇಕು. ಹೀಗಿದ್ದರೆ ಅನುಕರಣದ ಬಲದಿಂದ ಅನೇಕ ಸುಗುಣಗಳು ಉಪಾಧ್ಯಾಯರನ್ನು ನೋಡುವುದರಿಂದಲೇ ಮಕ್ಕಳಿಗೆ ಪ್ರಯತ್ನವಿಲ್ಲದೆ ಬಂದುಬಿಡುವುವು. ಇದರ ಜತೆಗೆ ಮಕ್ಕಳಿಗೆ ಸ್ಕೂಲಿನಲ್ಲೂ ಹೊರಗಡೆಯೂ ಒಳ್ಳೆಯ ಸಹವಾಸವು ಇದ್ದರೆ ತಿದ್ದು ವಿಕೆಯ ಕೆಲಸವು ಮುಕ್ಕಾಲುಪಾಲು ಸುಲಭವಾಗುವುದು.

3. ಕುತೂಹಲ---ಮೇಲೆ ವಿವರಿಸಿದ ಬುದ್ಧಿಯ ಚಟುವಟಿಕೆಗೆ ಕುತೂ ಹಲವೆಂದು ಹೆಸರು. ಇದು ಇರುವುದರಿಂದ ಹೊಸವಿಷಯಗಳನ್ನು ತಿಳಿಯಿಸು ವುದು ಸುಲಭವಾಗುವುದು. ಮಕ್ಕಳಲ್ಲಿ ಕುತೂಹಲವಿಲ್ಲದಿದ್ದರೆ ಅವರಲ್ಲಿ ಅವಧಾ ನವೇ ಹುಟ್ಟುತ್ತಿರಲಿಲ್ಲ. ಅವಧಾನವಿಲ್ಲದಿದ್ದರೆ ಉದ್ಯೋಗವೇ ಬರುತ್ತಿರಲಿಲ್ಲ ಸಹಜವಾದ ಕುತೂಹಲವನ್ನು ಬೆಳೆಯಿಸುವಾಗ ಉಪಾಧ್ಯಾಯರು ಜೋಪಾನವಾ ಗಿದ್ದು, ಅಸಂಗತವಾದ ವಿಷಯದಲ್ಲಿ ಕುತೂಹಲವನ್ನು ಕಡಿಮೆ ಮಾಡಬೇಕು. ಆ ಮಾರ್ಗದಲ್ಲಿ ಕುತೂಹಲವು ಪ್ರವರ್ತಿಸಿದರೆ ದುರ್ಗುಣವೆನ್ನಿಸಿಕೊಳ್ಳುವುದು. ಈದುರ್ಗುಣಕ್ಕೆ ಹೊಂಚಿಕೇಳುವುದು ಮುಂತಾದುವು ಉದಾಹರಣೆಯಾಗಿವೆ.

4. ಸ್ಪರ್ಧೆ—ಎಂದರೆ ಇತರರದ್ದು ಮೀರಿಸಬೇಕೆಂಬ ಅಥವಾ ಅವರಿಗೆ ಸಮಾನವಾಗಬೇಕೆಂಬ ಇಚ್ಛೆ. ಈ ಸ್ಪರ್ಧೆ ಇರುವುದರಿಂದ ತಮ್ಮನ್ನು ಅಭಿವೃದ್ಧಿಪ ಡಿಸಿಕೊಳ್ಳುವುದಕ್ಕೆ ಮಕ್ಕಳು ಯತ್ನಿಸುವರು. ಇದರಿಂದ ಉದ್ಯೋಗ, ಅವಧಾನ ಮುಂತಾದುವುಗಳನ್ನು ಅವರಲ್ಲಿ ನೆಲೆಗೊಳಿಸುವುದಕ್ಕೆ ಸೌಕರ್ಯ ಹುಟ್ಟುವುದು.

ಸ್ಪರ್ಧೆಯು ಕೆಟ್ಟರೆ ಅಸೂಯೆಯೆನಿಸಿಕೊಳ್ಳುವುದು. ಅಸೂಯೆಯಿಂದ ತನ್ನನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಬದಲಾಗಿ ಮತ್ತೊಬ್ಬರನ್ನು ಕೆಳಗೆ ತರು ವುದಕ್ಕೆ ಯತ್ನಿಸುವರು. ಇದು ಕೆಟ್ಟದ್ದು. ಆದ್ದರಿಂದ ಅಸೂಯೆ ಹುಟ್ಟದಂತೆ ಮಕ್ಕಳಲ್ಲಿ ಪರಸ್ಪರ ಸ್ಪರ್ಧೆಯನ್ನು ಹುಟ್ಟಿಸಿ ಅವರಿಂದ ಕೆಲಸಮಾಡಿಸುತ್ತ ಬರಬೇಕು.

ಸಾಮಾನ್ಯವಾಗಿ ಫಲಬರುವವರಿಗೆ ಸ್ಪರ್ಧೆಯನ್ನು ಹೊಂದಿರುವಂತೆ ಮಾಡಬೇಕೇ ಹೊರತು ಫಲಬಂದಮೇಲೆಯೂ ಸ್ಪರ್ಧೆಯನ್ನು ಉಂಟಾಗಿರುವಂತೆ ಮಾಡಬಾರದು.

(ಸಶೇಷ)

ಮೈಸೂರು ಪಾಠಶಾಲೆಯ ಕಟ್ಟಡಕ್ಕೆ ಸಹಾಯಮಾಡಿದ್ದು.

ಶ್ರೀ ಶಿವಗಂಗಾಸ್ವಾಮಿಗಳವರು ಮೈಸೂರಿಗೆ ಸವಾರಿ ದಯಮಾಡಿಸಿದ್ದಾಗ್ಗೆ ಕಟ್ಟಡದ ಬಳಿ ಬಿಜಯಮಾಡಿ ತುಂಬ ಸಂತೋಷಪಟ್ಟದ್ದಲ್ಲದೆ, ಈ ಕಟ್ಟಡದ ಖರ್ಚಿಗೋಸ್ಕರ 100 ರೂಪಾಯಿಗಳನ್ನು ಕೊಡುವುದಾಗಿಯೂ ಅಪ್ಪಣೆ ಮಾಡಿದ್ದಾರೆ. ಮತ್ತು ನಮ್ಮ ಶ್ರೀಮನ್ ಯುವರಾಜರವರು ಈ ಬಗ್ಗೆ 2000 ರೂಪಾಯಿಗಳನ್ನು ನಗದಾಗಿ ಸಹಾಯ ಮಾಡಿರುತ್ತಾರೆ. ಶ್ರೀ ಸ್ವಾಮಿಗಳವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸಿರುತ್ತೇನಲ್ಲದೆ, ಶ್ರೀಮನ್ ಯುವರಾಜರವರಿಗೂ ರಾಜಕುಟುಂಬಕ್ಕೂ ಶ್ರೀ ಭಗವಂತನು ಆಯುರಾರೋಗ್ಯೈಶ್ವರ್ಯಾದಿಗಳನ್ನು ನಿರಂತರವೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಮತ್ತು ಕಟ್ಟಡಕ್ಕೆ ಇನ್ನೂ ಅನೇಕ ಸಹಾಯಗಳು ಆಗಬೇಕಾಗಿರುವುದರಿಂದ, ಧಾರ್ಮಿಕರಾದ ಇತರ ಮಹನೀಯರುಗಳೂ ದಯವಿಟ್ಟು ಇದೇರೀತಿಯಲ್ಲಿ ತಮ್ಮ ತಮ್ಮ ಕೈಯಲ್ಲಾದಮಟ್ಟಿಗೆ ಜಾಗ್ರತೆಯಾಗಿ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಎಸ್. ಕೃಷ್ಣರಾವ್,
ಹೆಡ್ಮಾಸ್ಟರ್.

ವಿದ್ಯಾದಾಯಿನಿ

(A Monthly Journal.)

ಭಾಗ ೨೦] ಜೂನ್—೧೯೧೪. [ಸಂಚಿಕೆ ೬

ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು.

1912–13 ನೆಯ ಇಸವಿಯ ರಿಪೋರ್ಟನ್ನು ನೋಡಿದರೆ, ಕಳೆದವರ್ಷ ವಿದ್ಯಾಭ್ಯಾಸವು ಅನೇಕಮುಖವಾಗಿ ವಿಶೇಷ ವೃದ್ಧಿಯನ್ನು ಹೊಂದಿದೆಯೆಂದು ಗೊತ್ತಾಗುತ್ತದೆ. ಕಳೆದ ವರ್ಷ ಪಾಠಶಾಲೆಗಳ ಸಂಖ್ಯೆಯು 4,478 ರಿಂದ 4,568 ರ ವರೆಗೆ ಹೆಚ್ಚಿತು. ವಿದ್ಯಾರ್ಥಿಗಳ ಸಂಖ್ಯೆಯು 1,49,214 ರಿಂದ 1,56,440 ರ ವರೆಗೆ ಹೆಚ್ಚಿತು. ಇದರ ಪೈಕಿ 1,29,009 ಹುಡುಗರಾಗಿಯೂ, 27,431 ಹುಡುಗಿಯರಾಗಿಯೂ ಇದ್ದರು. ಪ್ರೈಮರಿ ವಿದ್ಯಾಭಿವೃದ್ಧಿಗೋಸ್ಕರ ಗೌರ್ನಮೆಂಟಿನವರು 1 ಲಕ್ಷ ರೂಪಾಯಿಯನ್ನು ಸ್ಯಾಂಕ್ಷನ್ ಮಾಡಿದರು. ಇದರಿಂದ ಪಾಠಶಾಲೆಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿದುವು.

ಪ್ರೈವೇಟ್ ಪಾಠಶಾಲೆಗಳಿಗೆ ಸಹಾಯವು ಇಲ್ಲದೆಹೋದುದರಿಂದ ಅವುಗಳ ಸಂಖ್ಯೆಯು ಕಡಮೆಯಾಯಿತು. ಗ್ರಾಮಾಂತರಗಳಲ್ಲಿ ಪ್ರೈವೇಟ್ ಸ್ಕೂಲುಗಳಿರುತ್ತವೆ. ಜನಗಳಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿದೆಯೆಂಬುದಕ್ಕೆ ಇಂಥ ಸ್ಕೂಲುಗಳ ಸ್ಥಿತಿಯೇ ಮುಖ್ಯಕಾರಣ ಇಂಥ ಪಾಠಶಾಲೆಗಳಿಗೂ ಸಹಾಯವು ಕೊಡಲ್ಪಡಬೇಕೆಂದು ಸರ್ಕಾರದವರು ಉದ್ದೇಶಮಾಡಿರುತ್ತಾರೆ. ಪ್ರೈವೇಟ್ ಪಾಠಶಾಲೆಗಳಿಗೆ ಸ್ಪೆಷಲ್ ಗ್ರ್ಯಾಂಟುಗಳನ್ನು ಯಾವ ರೀತಿಯಲ್ಲಿ ಕೊಡಬೇಕೆಂದು ಸರ್ಕಾರದ

ವರು ಇನ್ಸ್ಪೆಕ್ಟರ್ ಜನರಲ್‌ರವರನ್ನು ಕೇಳಿರುತ್ತಾರೆ. ಇನ್ಸ್ಪೆಕ್ಟರ್ ಜನರಲ್ ರವರು ಈ ವಿಷಯವನ್ನು ಪರ್ಯಾಲೋಚಿಸಿ ಪ್ರೈವೇಟ್ ಸ್ಕೂಲುಗಳನ್ನು ಹೇಗೆ ವೃದ್ಧಿಗೆ ತರಬಹುದೋ ಅದನ್ನು ಸೂಚಿಸುವುದರಲ್ಲಿದ್ದಾರೆ. ಇವರ ಸಲಹೆಯಿಂದ ಈ ಸ್ಕೂಲುಗಳು ವೃದ್ಧಿಗೆ ಬರುವುದಕ್ಕೆ ಅವಕಾಶವಾಗಬಹುದು. ರಿಪೋರ್ಟಿನಲ್ಲಿ ಕಂಡ ಲೆಕ್ಕಗಳನ್ನು ನೋಡಿದರೆ $6\frac{1}{2}$ ಚದರ ಮೈಲಿಗಳಿಗೂ 1,249 ಜನಗಳಿಗೂ ಒಂದು ಸ್ಕೂಲಿನಂತೆ ಇರುವುದು. ವಿದ್ಯಾರ್ಥಿಗಳಲ್ಲಿ ಸೇಕಡ 28.0 ಜನಗಳೂ, ವಿದ್ಯಾರ್ಥಿನಿಯರಲ್ಲಿ ಸೇಕಡ 6.4 ಜನಗಳೂ, ಓದುಬರಹಗಳನ್ನು ಅಭ್ಯಾಸಮಾಡುತ್ತಲಿರುವುದಾಗಿ ತಿಳಿಯಬರುತ್ತದೆ. ಓದುಬರಹ ಬಲ್ಲವರ ಸಂಖ್ಯೆಯು ಹಿಂದುಗಳಲ್ಲಿ 2.4 ಆಗಿರುವುದು. ಮಹಮ್ಮದೀಯರಲ್ಲಿ ವಿದ್ಯಾವಂತರ ಸಂಖ್ಯೆಯು 7, ನೇಟೀವ್ ಕ್ರಿಸ್ತರಲ್ಲಿ 7.9, ಯೂರೋಪಿಯನ್ನರಲ್ಲಿ 11.5 ಇತರರಲ್ಲಿ 2.5. ಈ ಸಂಸ್ಥಾನದಲ್ಲಿ ಮೂರು ಕಾಲೇಜುಗಳಿರುವುವು. ಬೆಂಗಳೂರು ಸೆಂಟ್ರಲ್ ಕಾಲೇಜು, ಮೈಸೂರು ಮಹಾರಾಜರ ಕಾಲೇಜು, ಮೈಸೂರು ಮಹಾರಾಣಿಯವರ ಕಾಲೇಜು. ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು 391 ರಿಂದ 491 ರವರೆಗೆ ಹೆಚ್ಚಿದೆ. ಮಹಾರಾಣಿಯವರ ಕಾಲೇಜಿನಲ್ಲಿ ಆಜೇಯ ವರ್ಷ 3 ಜನ ವಿದ್ಯಾರ್ಥಿನಿಯರಿದ್ದರು. ಕಳೆದ ವರ್ಷ 4 ಜನ ವಿದ್ಯಾರ್ಥಿನಿಯರಿದ್ದರು. ಯೂನಿವರ್ಸಿಟಿ ಪರೀಕ್ಷೆಯಲ್ಲಿ ಈ ಕಾಲೇಜುಗಳ ಫಲಿತಾಂಶಗಳೆಲ್ಲ ಸಮರ್ಪಕವಾಗಿದ್ದುವು. ಸೆಂಟ್ರಲ್ ಕಾಲೇಜಿನಲ್ಲಿ ರಸಾಯನಶಾಸ್ತ್ರವು ಬಿ.ಎ., ಗೆ ಒಂದು ಭಾಗವಾಗಿರುವಂತೆ ಮದರಾಸು ಯೂನಿವರ್ಸಿಟೀಗೆ ಸೇರಿಸಲ್ಪಟ್ಟಿತು. ಯೂನಿವರ್ಸಿಟಿ ರೆಗ್ಯುಲೇಷನ್ನಿಗನುಸಾರವಾಗಿ ಈ ಎರಡು ಫಸ್ಟ್‌ಗ್ರೇಡ್ ಕಾಲೇಜುಗಳ ಏರ್ಪಾಡುಗಳು ಪೂರಯಿಸಲ್ಪಟ್ಟುವು. ಕೆಲವು ಭಾಗಗಳಲ್ಲಿ ಎರಡು ಕಾಲೇಜುಗಳಲ್ಲಿಯೂ ಬಿ. ಎ., ಪರೀಕ್ಷೆಗೆ ಆನರ್ಸು ಕೋರ್ಸು ಗವರ್ನಮೆಂಟಿನಿಂದ ಸ್ಯಾಂಕ್ಷನ್ ಮಾಡಲ್ಪಟ್ಟಿತು. ಸಕಂಡರಿ ವಿದ್ಯಾಭ್ಯಾಸದ ಏರ್ಪಾಡುಗಳು ಕ್ರಮವಾಗಿ ನಡೆಯುತ್ತಲಿವೆ. ಸಕಂಡರಿ ಪಾಠಶಾಲೆಗಳ ಸಂಖ್ಯೆಯು 230 ರಿಂದ 240 ರ ವರೆಗೂ ಹೆಚ್ಚಿತು. ಇವುಗಳ ಪೈಕಿ 16 ಹೈಸ್ಕೂಲುಗಳು, 224 ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳು. ಸಕಂಡರಿ ಸ್ಕೂಲುಗಳ ವಿದ್ಯಾರ್ಥಿಗಳ

ಸಂಖ್ಯೆಯು 16,108 ರಿಂದ 17,363 ರ ವರೆಗೆ ಹೆಚ್ಚಿರುತ್ತದೆ. ಕಳೆದ ವರ್ಷ ಸ್ಕೂಲು ಲೀವಿಂಗ್ ಸರ್ಟಿಫಿಕೇಟುಗಳ ಪರೀಕ್ಷೆಯು ಮಾಡಲ್ಪಟ್ಟಿತು. ಅದರ ಫಲಿತಾಂಶಗಳು ಸಮರ್ಪಕವಾಗಿದ್ದುವು. ಪರೀಕ್ಷೆಗೆ ಬಂದಿದ್ದ 648 ಜನಗಳ ಪೈಕಿ 362 ಜನಗಳಿಗೆ ಸಮರ್ಪಕವಾದ ಸರ್ಟಿಫಿಕೇಟು ದೊರೆಯಿತು. ಶಿವಮೊಗ್ಗ ಹೈಸ್ಕೂಲು, ಬೆಂಗಳೂರು ವೆಸ್ಲಿಯನ್ ಹೈಸ್ಕೂಲು ವಿನಾ, ಉಳಿದ ಸ್ಕೂಲುಗಳೆಲ್ಲ ಪರೀಕ್ಷೆಯಲ್ಲಿ ಚೆನ್ನಾಗಿ ತೇರ್ಗಡೆಯಾದುವು. ಪ್ರೈಮರಿ ಸ್ಕೂಲುಗಳ ವಿದ್ಯಾರ್ಥಿಗಳ ಸಂಖ್ಯೆಯು 1,955 ರಿಂದ 2,046 ರ ವರೆಗೆ ಹೆಚ್ಚಿತು. ಪ್ರೈವೇಟ್ ಸ್ಕೂಲುಗಳ ಸಂಖ್ಯೆಯು 1911 ರಿಂದ 1843 ರ ವರೆಗೂ ಕಡಮೆಯಾಯಿತು. ಪ್ರೈಮರಿ ವಿದ್ಯಾಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯು 1,00,674 ರಿಂದ 1,08,080 ರ ವರೆಗೆ ಹೆಚ್ಚಿತು. ಮಕ್ಕಳ ಪೈಕಿ 2419 ಜನಗಳು ಸರಾಸರಿ ವಿದ್ಯಾಭ್ಯಾಸ ಮಾಡುತ್ತಲಿದ್ದಾರೆ. 1911-12 ನೇ ಇಸವಿಯಲ್ಲಿ ಪ್ರೈಮರಿ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕೆ ಕೊಡಲ್ಪಟ್ಟ 1 ಲಕ್ಷ ರೂಪಾಯಿಗಳಲ್ಲಿ 141 ಸ್ಕೂಲುಗಳು ಹೊಸದಾಗಿ ಏರ್ಪಾಡು ಮಾಡಲ್ಪಟ್ಟುವು. ಇದಕ್ಕೆ ವರ್ಷಕ್ಕೆ 23 ಸಾವಿರ ರೂಪಾಯಿ ಖರ್ಚು, ಇದುವರೆಗೂ ಇದ್ದ ತಾಲ್ಲೂಕು ಮತ್ತು ಗ್ರಾಮಪಾಠಶಾಲೆಗಳ ಪಾಠಕರ ಸಂಬಳವನ್ನು ಜಾಸ್ತಿ ಮಾಡುವುದಕ್ಕೆ 10 ಸಾವಿರ ರೂಪಾಯಿಯೂ ಕೊಡಲ್ಪಟ್ಟಿತು. ಇದರಲ್ಲಿ ಒಂದು ಭಾಗವು ನಾರ್ಮಲ್ ಸ್ಕೂಲುಗಳ ಅಭಿವೃದ್ಧಿಗೂ ಮೈಸೂರಿನಲ್ಲಿ ಒಂದು ಪಂಚಮರ ಬೋರ್ಡಿಂಗ್ ಸ್ಕೂಲ್ ಮಾಡುವುದಕ್ಕೂ, ನಂಜನಗೂಡು ಮತ್ತು ದಾವಣಗೆರೆಯಲ್ಲಿ ಎರಡು ಅಪ್ಪರ್‌ಸೆಕೆಂಡರಿ ಸ್ಕೂಲುಗಳನ್ನು ಏರ್ಪಡಿಸುವುದಕ್ಕೂ ವಿನಿಯೋಗಿಸಲ್ಪಟ್ಟಿತು. ಈ ಖರ್ಚು ಜಾತಾ ಉಳಿದ ಮೊಬಲಗು ವಾಪಸ್ಸಾಯಿತು. ಈ ವರ್ಷದ ಖರ್ಚಿಗೆ ಗವರ್ನಮೆಂಟಿನವರು 1 ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಕಳೆದ ವರ್ಷ ಗ್ರಾಮಪಾಠಶಾಲೆಗಳ ಕಟ್ಟಡಗಳಿಗೋಸ್ಕರ 1½ ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿತ್ತು. ಅದರಲ್ಲಿ 77 ಸ್ಕೂಲು ಕಟ್ಟಡಗಳನ್ನು ಕಟ್ಟಬೇಕೆಂದು ಹುಕುಂ ಆಗಿತ್ತು. ಈ ವರ್ಷವೂ ಈ ಕಟ್ಟಡಗಳಿಗೋಸ್ಕರ 1½ ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಧರ್ಮಿಷ್ಠರಾದವರು ಸ್ಕೂಲು ಕಟ್ಟಡಗಳಿಗೆ ಮಾಡತಕ್ಕ ಸಹಾಯಕ್ಕೆ ಯಾವ ನ್ಯೂನತೆಯೂ ಬರದಂತೆ ಹೊಸ ಕಟ್ಟಡಗಳನ್ನು ಕಟ್ಟಿಸಬೇಕೆಂದು ಗವರ್ನ್ಮೆಂಟಿನವರು ತೀರ್ಮಾನಮಾಡಿರುವರು. ಪ್ರತಿಯೊಂದು ಗ್ರಾಮದ ಸ್ಥಿತಿಯನ್ನೂ ಸಂದರ್ಭಗಳನ್ನೂ ನೋಡಿ ದುಬಾರೀಖರ್ಚಿಗೆ ಅವಕಾಶಮಾಡಿಕೊಳ್ಳದೆ ಸ್ಟ್ಯಾಂಡರ್ಡ್ ಪ್ಲಾನಿಗೆ ಅನುಸಾರವಾಗಿ ಕಟ್ಟಡಗಳನ್ನು ಪೂರಯಿಸಬೇಕೆಂದು ಸರ್ಕಾರದವರು ಸಲಹೆಯನ್ನು ಕೊಟ್ಟಿರುತ್ತಾರೆ. ಪಾಠಕರ ಸಂಬಳಗಳು 1908–1909 ರಲ್ಲಿ 10 ರೂಪಾಯಿನ ವರೆಗೆ ಹೆಚ್ಚಿಸಲ್ಪಟ್ಟಿತು. ಈ ಸಂಬಳವು ಈ ಕಾಲಸ್ಥಿತಿಗೆ ಅನುರೂಪವಾಗಿರುವಂತೆ ಹೆಚ್ಚಿಸಲ್ಪಡಬೇಕೆಂಬ ಉದ್ದೇಶವು ಸರ್ಕಾರದವರಿಗೆ ಉಂಟಾಗಿರುತ್ತದೆ. ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ಉತ್ತೇಜನವು ಕೊಡಲ್ಪಡುತ್ತಲಿದೆ. ಬಾಲಿಕಾ ಪಾಠಶಾಲೆಗಳ ಸಂಖ್ಯೆಯು 305 ರಿಂದ 360 ರ ವರೆಗೂ ಹೆಚ್ಚಿರುವುದು. ವಿದ್ಯಾರ್ಥಿನಿಯರ ಸಂಖ್ಯೆಯು 24,890 ರಿಂದ 27,431 ರ ವರೆಗೆ ಹೆಚ್ಚಿರುವುದು. ಮಹಾರಾಣಿಯವರ ಕಾಲೇಜಿನಿಂದ ಇಂಟ್ರಿಮಿಡಿಯಟ್ ಪರೀಕ್ಷೆಗೆ ಇಬ್ಬರು ವಿದ್ಯಾರ್ಥಿನಿಯರು ಹೋಗಿದ್ದರು. ಇಬ್ಬರೂ ಪ್ಯಾಸಾದರು. ಅವರಲ್ಲಿ ಒಬ್ಬಳು ಒಂದನೇ ತರಗತಿಯಲ್ಲಿ ಪ್ಯಾಸಾದಳು. ಹೆಂಗಸರ ಹೈಸ್ಕೂಲುಗಳ ಪೈಕಿ ಎರಡರಿಂದ ಆರು ಜನ ವಿದ್ಯಾರ್ಥಿನಿಯರು ಸ್ಕೂಲು ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. 10 ಜನ ವಿದ್ಯಾರ್ಥಿನಿಯರು ಇಂಗ್ಲೀಷು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿಯೂ, 50 ಜನ ವಿದ್ಯಾರ್ಥಿನಿಯರು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿರುವರು. ಮಹಮ್ಮದೀಯರ ಸ್ಕೂಲುಗಳು 319 ರಿಂದ 348 ರ ವರೆಗೂ ಹೆಚ್ಚಿರುವುವು. ವಿದ್ಯಾರ್ಥಿಗಳ ಸಂಖ್ಯೆಯು 19,357 ರಿಂದ 20,537 ರ ವರೆಗೆ ಹೆಚ್ಚಿತು. ಇವರ ಪೈಕಿ 15,054 ಹುಡುಗರೂ 5,483 ಹುಡುಗಿಯರೂ ಇದ್ದರು. ಸ್ಕೂಲಿಗೆ ಹೋಗತಕ್ಕ ಮಕ್ಕಳ ಪೈಕಿ ಮಹಮ್ಮದೀಯರಲ್ಲಿ ಸರಾಸರಿ ಸೇಕಡ 65.3 ಹುಡುಗರೂ 24.4 ಹುಡುಗಿಯರೂ ಸ್ಕೂಲುಗಳಿಗೆ ಹೋಗುತ್ತಾರೆ. ಪ್ರೌಢವಿದ್ಯಾಭ್ಯಾಸವು ಮಹಮ್ಮದೀಯ ಸ್ತ್ರೀಯರಲ್ಲಿ ಬಹಳ ಕಡಮೆಯಾಗಿದೆ. ಹೊಲೆಯರು, ಮಾದಿಗರು, ಒಡ್ಡರು, ಇವರೇ ಮೊದಲಾದ ಕನಿಷ್ಠವರ್ಣದವರಲ್ಲಿ ವಿದ್ಯಾಭ್ಯಾಸಕ್ಕೆ ಏರ್ಪಾಡುಗಳು ಮಾಡಲ್ಪಟ್ಟಿವೆ.

ಈ ಜನಗಳ ಸ್ಕೂಲುಗಳು 102 ರಿಂದ 120 ರ ವರೆಗೂ ಹೆಚ್ಚಿರುವುವು. ವಿದ್ಯಾರ್ಥಿಗಳ ಸಂಖ್ಯೆಯು 2581 ರಿಂದ 3006 ರ ವರೆಗೂ ಹೆಚ್ಚಿರುವುದು. ಇವರ ಪೈಕಿ 367 ಜನಗಳು ವಿದ್ಯಾರ್ಥಿನಿಯರು. ಸೀರಾ ಸ್ಕೂಲಿನಲ್ಲಿ ಒಬ್ಬ ಪಂಚಮ ವಿದ್ಯಾರ್ಥಿನಿಯು ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆ ಕೊಟ್ಟಳು. ಪಾಠಕರನ್ನು ತಯಾರ್ಮಾಡುವುದಕ್ಕೆ 3 ನಾರ್ಮಲ್ ಸ್ಕೂಲುಗಳಿರುವುವು. ಉಪಾಧ್ಯಾಯನಿಯರನ್ನು ತಯಾರ್ಮಾಡುವುದಕ್ಕೆ 2 ನಾರ್ಮಲ್ ಸ್ಕೂಲುಗಳಿರುವುವು. ಅಪ್ಪರ್‌ಸೆಕೆಂಡರಿ ಗ್ರೇಡಿಗೆ ಸಂಬಂಧಪಟ್ಟ ಟೀಚರ್ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ 17 ಜನ ಗಂಡಸರೂ ಇಬ್ಬರು ಹೆಂಗಸರೂ ತೇರ್ಗಡೆಯಾದರು.

ಲೋವರ್‌ಸೆಕೆಂಡರಿ ಗ್ರೇಡಿನಲ್ಲಿ 54 ಜನ ಗಂಡಸರೂ 22 ಜನ ಹೆಂಗಸರೂ ತೇರ್ಗಡೆಯಾದರು. ಆಂಗ್ಲೋ ವರ್ನಾಕ್ಯುಲರ್ ಮತ್ತು ವರ್ನಾಕ್ಯುಲರ್ ಮಿಡಲ್ ಸ್ಕೂಲುಗಳಲ್ಲಿಯೂ ಪ್ರೈಮರಿ ಸ್ಕೂಲುಗಳಲ್ಲಿಯೂ 3880 ಜನ ವ್ಯಾಸಂಗ ಮಾಡುತ್ತಿದ್ದರು. ಇವರ ಪೈಕಿ 530 ಜನ ಟ್ರೇನಿಂಗನ್ನು ಹೊಂದಿದರು. ನಾರ್ಮಲ್‌ಸ್ಕೂಲುಗಳಲ್ಲಿ ವ್ಯಾಸಂಗ ಮಾಡತಕ್ಕವರಿಗೆ ವೇತನಗಳನ್ನು ಹೆಚ್ಚಿಸುವುದಕ್ಕೂ, ಟ್ರೇನಿಂಗ್ ಪರೀಕ್ಷೆಯನ್ನು ಕೊಡದೆ ಇರತಕ್ಕವರಿಗೆ ಟ್ರೇನಿಂಗ್ ದೊರೆಯುವಂತೆ ಮಾಡುವುದಕ್ಕೂ ಇನ್‌ಸ್ಪೆಕ್ಟರ್ ಜನರಲ್‌ರವರು ಮಾಡಿರತಕ್ಕ ಸಲಹೆಯನ್ನು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ. ಟ್ರೇನಿಂಗಿಗೆ ಸೌಲಭ್ಯಗಳನ್ನುಂಟುಮಾಡುವುದಕ್ಕೋಸ್ಕರ ಹೆಚ್ಚಾಗಿ ಟ್ರೇನಿಂಗ್ ಸ್ಕೂಲುಗಳನ್ನಿಡುವುದಕ್ಕೂ ಸರ್ಕಾರದವರು ಸಿದ್ಧರಾಗಿರುತ್ತಾರೆ.

ಈ ಸಂಸ್ಥಾನದಲ್ಲಿ ಕೈಗಾರಿಕೆ ಮತ್ತು ವ್ಯಾಪಾರ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಗಮನವು ಕೊಡಲ್ಪಟ್ಟಿದೆ. ಮೈಸೂರು ಚಾಮ: ರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಕೈಗಾರಿಕೆ ವಿದ್ಯಾಭ್ಯಾಸಕ್ಕೂ, ಇಂಜನಿಯರಿಂಗು ವಿದ್ಯಾಭ್ಯಾಸಕ್ಕೂ ಏರ್ಪಾಡಾಗಿರುವುದು. ಬೆಂಗಳೂರಿನಲ್ಲಿ ಮೆಕ್ಯಾನಿಕಲ್ ಇಂಜನಿಯರಿಂಗ್ ಸ್ಕೂಲೂ ಮತ್ತು ವ್ಯಾಪಾರದ ಸ್ಕೂಲೂ ಇಡಲ್ಪಟ್ಟಿರುವುವು. ಈ ಸಂಸ್ಥಾನದಲ್ಲಿ 18 ಕೈಗಾರಿಕೆ ಪಾಠಶಾಲೆಗಳೂ, ೨ ನೆಯ್ಗೆ ಪಾಠಶಾಲೆಗಳೂ, ಒಂದು ಇಂಜನಿಯ

ರಿಂಗ್ ಸ್ಕೂಲೂ, ಎರಡು ವ್ಯಾಪಾರದ ಸ್ಕೂಲುಗಳೂ ಇರುವವು. ಈ ಪಾಠಶಾಲೆಗಳಲ್ಲಿ 1323 ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವರು. ದೊಡ್ಡಬಳ್ಳಾಪುರದ ನೆಯ್ಗೆ ಸ್ಕೂಲಿನ ಕೆಲಸ ವಿನಾ ಬಾಕಿ ಎಲ್ಲಾ ಸ್ಕೂಲುಗಳ ಕೆಲಸವೂ ಸಮರ್ಪಕವಾಗಿರುವುದು. ಈ ಸ್ಕೂಲುಗಳ ಪಾಠಕ್ರಮಗಳನ್ನು ನಿರ್ಣಯಮಾಡತಕ್ಕ ವಿಷಯಗಳಲ್ಲಿಯೂ, ಸರಿಯಾದ ಪಾಠಕರನ್ನೂ ಸೂಪರಿಂಟೆಂಡೆಂಟರನ್ನೂ ನಿಯಮಿಸುವ ವಿಷಯದಲ್ಲಿಯೂ, ಸರಿಯಾದ ಏರ್ಪಾಡುಗಳಾಗಬೇಕಾಗುತ್ತದೆ. 1906-7 ನೇ ಇಸವಿಯಲ್ಲಿ ಮ್ಯಾನ್ಯುಯಲ್ ಇನ್‌ಸ್ಟ್ರಕ್ಷನ್ ಏರ್ಪಾಡು ಈ ಸಂಸ್ಥಾನಕ್ಕೆ ತರಲ್ಪಟ್ಟಿತು. ಮರಗೆಲಸ, ಕಾಗದದ ಕೆಲಸ, ಇವುಗಳಲ್ಲಿ ಅನೇಕ ಹುಡುಗರು ಶಿಕ್ಷೆಯನ್ನು ಹೊಂದಿದರು. ಈ ಏರ್ಪಾಡು ಸಮರ್ಪಕವಾಗಿರುವುದು. ಎಲ್ಲಾ ಜಾತಿಗಳಿಗೂ ಸಮರ್ಪಕವಾಗಿರುವಂತೆ ಮತ ವಿದ್ಯಾಭ್ಯಾಸವನ್ನೂ ನೀತಿ ವಿದ್ಯಾಭ್ಯಾಸವನ್ನೂ ಮಾಡಿಸುವುದು ಕಷ್ಟವೆಂಬುದಾಗಿಯೂ, ಸರಿಯಾದ ಪಾಠಕರನ್ನೂ ಸರಿಯಾದ ಪುಸ್ತಕಗಳನ್ನೂ ಒದಗಿಸಿಕೊಳ್ಳುವುದೂ ಕೂಡ ಕಷ್ಟವೆಂಬುದಾಗಿಯೂ, ಇನ್‌ಸ್ಪೆಕ್ಟರ್ ಜನರಲ್‌ರವರು ಹೇಳುತ್ತಾರೆ. ಅದಕ್ಕೆ ತಕ್ಕ ಪ್ರಯತ್ನಗಳು ಮಾಡಲ್ಪಡಬೇಕು. ಮ|| ಎಂ. ಶ್ಯಾಮರಾಯರು 1911-12 ರಲ್ಲಿ ಇನ್‌ಸ್ಪೆಕ್ಟರ್ ಜನರಲ್‌ರಾಗಿ ನಿಯಮಿಸಲ್ಪಟ್ಟು ಸದರಿ ಕೆಲಸದಲ್ಲಿ ಅವರು ಖಾಯಂ ಮಾಡಲ್ಪಟ್ಟಿರುತ್ತಾರೆ. ಪ್ರೈಮರಿ ವಿದ್ಯಾಭ್ಯಾಸವನ್ನು ಅಭಿವೃದ್ಧಿ ಮಾಡತಕ್ಕ ಕೆಲಸದಲ್ಲಿ ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಒಬ್ಬ ಡೆಪ್ಟಿ ಇನ್‌ಸ್ಪೆಕ್ಟರ್ ಜನರಲ್‌ರವರು ನಿಯಮಿಸಲ್ಪಟ್ಟಿರುತ್ತಾರೆ. ಇನ್‌ಸ್ಪೆಕ್ಷನ್‌ಸ್ಟಾಫಿನಲ್ಲಿ ಇಬ್ಬರು ಸರ್ಕಲ್ ಇನ್‌ಸ್ಪೆಕ್ಟರುಗಳೂ 9 ಜನ ಡೆಪ್ಟಿ ಇನ್‌ಸ್ಪೆಕ್ಟರುಗಳೂ 14 ಜನ ಅಸಿಸ್ಟೆಂಟ್ ಡೆಪ್ಟಿ ಇನ್‌ಸ್ಪೆಕ್ಟರುಗಳೂ ಇರುತ್ತಾರೆ. ಡೆ|| ಇನ್|| ಪೈಕಿ ಒಬ್ಬರು ಹಿಂದೂಸ್ತಾನಿ ಸ್ಕೂಲುಗಳ ಮೇಲ್ವಿಚಾರಣೆಯುಳ್ಳವರು. ಅ|| ಡೆ|| ಇನ್|| ರಲ್ಲಿ ಒಬ್ಬರು ಹಿಂದೂಸ್ತಾನಿ ಸ್ಕೂಲುಗಳ ವಿಚಾರಣೆಗೂ ಇನ್ನೊಬ್ಬರು ಸಂಸ್ಕೃತ ಪಾಠಶಾಲೆಗಳ ವಿಚಾರಣೆಗೂ ನಿಯಮಿಸಲ್ಪಟ್ಟಿರುತ್ತಾರೆ. ಈ ಇನ್‌ಸ್ಪೆಕ್ಟರುಗಳೆಲ್ಲರೂ ತಮ್ಮ ಇನ್‌ಸ್ಪೆಕ್ಷನ್ ಕೆಲಸಗಳನ್ನು ಚೆನ್ನಾಗಿ ಮಾಡಿರುತ್ತಾರೆ. ವಿದ್ಯಾಭಿವೃದ್ಧಿಗೆ ಬೇಕಾದ ಕೆಲಸಗಳನ್ನು ಮಾಡುವುದರಲ್ಲಿ ಸರ್ಕಾ

ರದವರಿಗೆ ಧರ್ಮಿಷ್ಠರಾದ ಅನೇಕ ಜನಗಳು ಸಹಾಯ ಮಾಡುವುದಕ್ಕೆ ಉಪಕ್ರಮಿಸಿರುವರು. ಮೈಸೂರು, ಕೋಲಾರ, ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಕೆಲವು ಜನ ದೊಡ್ಡ ಮನುಷ್ಯರು ಸ್ವಂತ ಖರ್ಚಿನಿಂದ ಸ್ಕೂಲುಗಳನ್ನು ಕಟ್ಟಿಸಿರುವರು. ಕಳೆದ ವರ್ಷ ಕಟ್ಟಲ್ಪಟ್ಟ 141 ಕಟ್ಟಡಗಳ ಪೈಕಿ 85 ಕಟ್ಟಡಗಳು ಗ್ರಾಮಸ್ಥರು ಧರ್ಮಾರ್ಥವಾಗಿ ಕಟ್ಟಿಸಿದುವುಗಳು. ಇದಲ್ಲದೆ 77 ಸ್ಕೂಲು ಕಟ್ಟಡಗಳ ಪೈಕಿ 19 ಕ್ಕೆ ಗ್ರಾಮಸ್ಥರು ನಿವೇಶನಗಳನ್ನು ಉಚಿತವಾಗಿ ಕೊಟ್ಟಿರುತ್ತಾರೆ. ಇನ್‌ಸ್ಪೆಕ್ಟರ್ ಜನರಲ್‌ರವರೂ ಇನ್‌ಸ್ಪೆಕ್ಟಿಂಗ್‌ಸ್ಟಾಫಿನವರೂ ಕೆಲವು ಜನ ಡೆಪ್ಯುಟಿ ಕಮಿಷನರುಗಳೂ ಕೆಲವು ಜನ ಅಮಲ್ದಾರರುಗಳೂ ಅನೇಕ ಗ್ರಾಮಸ್ಥರೂ ವಿದ್ಯಾಭ್ಯಾಸಕ್ಕೆ ತುಂಬಾ ಪ್ರೋತ್ಸಾಹ ಮಾಡಿರುತ್ತಾರೆ. ಗವರ್ನಮೆಂಟಿನವರು ಅವರುಗಳಿಗೆಲ್ಲ ತಮ್ಮ ವಂದನೆಗಳನ್ನು ಕೊಟ್ಟಿರುತ್ತಾರೆ. ಯಜಮಾನನು ಸರಿಯಾಗಿದ್ದರೆ ಗೃಹಕೃತ್ಯಗಳು ನಿರಾಕ್ಷೇಪಣೀಯವಾಗಿರುವುವು. ಇಲಾಖಾ ಮೊಖ್ತೇಸರರು ಸರಿಯಾಗಿದ್ದರೆ, ಇಲಾಖೆಯು ಸಮರ್ಪಕವಾಗಿರುವುದು. ವಿದ್ಯಾಭ್ಯಾಸಕ್ಕೆ ಉಂಟಾಗಿರುವ ಅಸಾಧಾರಣವಾದ ಪ್ರೋತ್ಸಾಹಗಳನ್ನು ನೋಡಿದರೆ ನಮ್ಮ ಸರ್ಕಾರದವರೂ ನಮ್ಮ ಇನ್‌ಸ್ಪೆಕ್ಟರ್ ಜನರಲ್‌ರವರೂ ಎಷ್ಟು ವಿದ್ಯಾಭಿಮಾನಿಗಳೋ ಅದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಶ್ರೀಮನ್ ಮಹಾರಾಜರವರು ಈ ಪ್ರೋತ್ಸಾಹಗಳಿಗೆಲ್ಲ ಮುಖ್ಯ ಕಾರಣಭೂತರು. ಇವರ ಉದ್ದೇಶವು ಸಫಲವಾಗಲೆಂದು ನಾವು ಕೋರುತ್ತೇವೆ.

ಬಾಲಶಿಕ್ಷಣ.

ಕಿಂಡರ್‌ಗಾರ್ಟನ್ ಕ್ರಮದಲ್ಲಿ ಆಟವು ಒಂದು ಮುಖ್ಯಾಂಗವಾಗಿರುವುದು. ಅವರಲ್ಲೂ ಯಾವ ಮಕ್ಕಳಿಗೆ ಕಾಯಶಕ್ತಿಯ ಮತ್ತು ಬುದ್ಧಿಶಕ್ತಿಯ ಬೆಳೆವಳಿಕೆಗೆ ಸರಿಯಾದ ಸನ್ನಿವೇಶಗಳಿರುವುದಿಲ್ಲವೋ ಅಂತಹವರಿಗಂತು ಅತ್ಯಾವಶ್ಯಕ. ಆಟವು ಸರ್ವಸಾಮಾನ್ಯವಾಗಿ ಎಲ್ಲ ಮಕ್ಕಳಿಗೂ ಆವಶ್ಯಕವೆಂಬುದನ್ನು ಅವರ

ಸ್ವಭಾವವನ್ನು ಪರಿಶೀಲಿಸುವುದರಿಂದಲೇ ತಿಳಿಯಬಹುದು. ಹೇಗೆಂದರೆ,—ಎಂತಹ ಮಕ್ಕಳೇ ಆಗಲಿ, ತಕ್ಕ ಸನ್ನಿವೇಶಗಳಿಲ್ಲದೆಯೇ ಇರಲಿ, ಅವರು ಏನಾದರೊಂದು ಆಟವನ್ನು ಆಡುತ್ತಲೇ ಇರುವರು. ಆಟವಾಡುವುದರಿಂದ ದೇಹಕ್ಕೂ ಮತ್ತು ಬುದ್ಧಿಗೂ ಸಹ ಸಾಧನವು ದೊರೆತು ಅವು ಬಲಪಡುವುವು. ಇಷ್ಟು ಆವಶ್ಯಕವೂ ಮತ್ತು ಮುಖ್ಯವೂ ಆದ ಆಟವಾಡಲು ತಕ್ಕ ಸನ್ನಿವೇಶಗಳಿಲ್ಲದ ಮಕ್ಕಳನ್ನಂತು ಪ್ರಯತ್ನ ಪೂರ್ವಕವಾಗಿಯಾದರೂ ಆಡಿಸಲೇಬೇಕು.

ಆಟದಿಂದ ಉಪಾಧ್ಯಾಯರ ಬೋಧನೆಯ ಕೆಲಸಕ್ಕೂ ತುಂಬ ಸಹಾಯ ವುಂಟು. ಆಟಗಳಲ್ಲಿ ಹಲವು ಬಗೆಗಳುಂಟು. ಅವುಗಳಲ್ಲಿ ಮಕ್ಕಳ ಇಂದ್ರಿಯಪಾಟವ ವನ್ನು ಹೆಚ್ಚಿಸುವುದೇ ಮುಖ್ಯೋದ್ದೇಶವಾಗಿ ಉಳ್ಳವುಗಳು ತುಂಬ ಬೆಲೆಯಾದ ವುಗಳು. ಆದರೆ ಆಟಗಳೆಲ್ಲ ಇಂತಹವುಗಳೇ ಆಗಿರಬೇಕೆಂಬುದೇನೂ ಇಲ್ಲ. ಕೆಲವಾ ದರೂ ಇಂತಹವುಗಳಾಗಿರಬೇಕು. ಈ ಯಾಟಗಳೇ ಮುಖ್ಯವೆಂದು ಸದಾ ಇಂತ ಹವುಗಳನ್ನೇ ಆಡಿಸಿದರೆ ಮಕ್ಕಳಿಗೆ ಜುಗುಪ್ಸೆಯೂ ತಾತ್ಸಾರ್ಯವೂ ಉಂಟಾಗುವುವು. ಆದರೆ ಯಾವ ಅಂಶಗಳು ಬುದ್ಧಿಗೆ ಗೋಚರವಾಗಬೇಕಾದರೂ—ಅಂದರೆ ಬುದ್ಧಿಗೆ ತಲಪಬೇಕಾದರೂ—ಇಂದ್ರಿಯಗಳು, ಅವುಗಳಲ್ಲೂ ಮುಖ್ಯವಾಗಿ ಸ್ಪರ್ಶ, ದೃಷ್ಟಿ, ಮತ್ತು ಶ್ರವಣ, ಇವುಗಳು ಮುಖ್ಯಮಾರ್ಗಗಳಾಗಿರುತ್ತವೆ. ಹಾಲುಹಸುಳೆಯು ಕೂಡ ಈ ಇಂದ್ರಿಯಗಳ ಮೂಲಕವೇ ಪ್ರಪಂಚಪರಿಜ್ಞಾನವನ್ನು ಕಲಿಯಲಾರಂಭಿ ಸುವುದು.

ಆದುದರಿಂದ ಬಾಲವಿದ್ಯಾಭ್ಯಾಸ ಮಾಡಿಸತಕ್ಕವರು ತಾವು ಬೋಧಿಸತಕ್ಕ ವಿಷಯಗಳಲ್ಲಿ ಈ ಮುಖ್ಯೇಂದ್ರಿಯ ವ್ಯಾಪಾರಗಳನ್ನು ಚೆನ್ನಾಗಿ ನಡೆಯಿಸಿ ಇವನ್ನು ವೃದ್ಧಿಪಡಿಸುವಂತಹ ಅಂಶಗಳನ್ನು ಅಂದರೆ ಮಾಂಸಪೇಶಿಗಳಿಗೆ ಸಹಕಾರಿಯಾದ ಅಂಗಸಾಧನೆ, ಲಯವನ್ನು ತೋರಿಸತಕ್ಕ ಹಾಡುಗಳು, ಬಣ್ಣ ಮತ್ತು ಆಕಾರ ಇವುಗಳನ್ನು ತಿಳಿಸತಕ್ಕ ಅಂಶಗಳು, ಇಂತಹವುಗಳನ್ನೂ ಸೇರಿಸಿಕೊಳ್ಳಬೇಕೆಂದಾ ಯಿತು. ಮಕ್ಕಳಿಗೆ ಉಲ್ಲಾಸಕರವಾದ ಆಟಗಳಲ್ಲೇ ಈ ಯಂಶಗಳು ಬರುವಂತೆ ಮಾಡಿ ಆಡಿಸುವುದು ಒಳ್ಳೆಯ ಉಪಾಯ.

ಮೇಲೆ ಹೇಳಿದವುಗಳನ್ನು ಬೋಧಿಸಲು ಅನೇಕ ಮಾರ್ಗಗಳಿರುವುವು. ಭಾರ, ಹಗುರ, ಗಟ್ಟಿ, ಮೆದು, ಸಣ್ಣದು, ದೊಡ್ಡದು ಇಂತಹವುಗಳನ್ನೆಲ್ಲ ಕಿಂಡರ್‌ಗಾರ್ಟನ್ ಕ್ರಮದಲ್ಲಿ ನಡೆಯಿಸುವ ಹಲವು ಆಟಗಳಿಂದಲೂ ಸಾಧನಗಳಿಂದಲೂ ಕಲಿಸಬಹುದು: ಮತ್ತು, ಮಕ್ಕಳ ಮನಸ್ಸಿಗೆ ವಿನೋದವನ್ನು ಉಂಟುಮಾಡಬಹುದು. ಕೈಗೆ ಎರಡು ವಸ್ತುಗಳನ್ನು ಕೊಟ್ಟು ತೂಗಹೇಳಿ-ಯಾವುದು ಭಾರ ಯಾವುದು ಹಗುರ-ಎಂದು ಕೇಳಿದಾಗ, ಮಕ್ಕಳ ಬುದ್ಧಿಯು ಅದನ್ನು ನಿಶ್ಚಯಿಸುವ ವಿಷಯದಲ್ಲಿ ಪಡೆಯುವ ಸಂಸ್ಕಾರವು ಅಮೂಲ್ಯವಾದುದು. ದಪ್ಪವಾದ ಒಂದು ಮರದ ತುಂಡನ್ನು ಒಂದು ಕೈಯಲ್ಲೂ ಒಂದು ಕಬ್ಬಿಣದ ತುಂಡನ್ನು ಮತ್ತೊಂದು ಕೈಯಲ್ಲೂ ಹಿಡಿದು ತೂಗಿ ಕಬ್ಬಿಣದ್ದೇ ಭಾರವೆಂದು ತಿಳಿದು ಹೇಳುವ ಮಗುವು, ಭಾರವಾದ ಪದಾರ್ಥಗಳು ಗಾತ್ರವಾಗಿದ್ದೇ ಇರಬೇಕೆಂಬುದೇನೂ ಇಲ್ಲವೆಂದು ಮನಸ್ಸಿನಲ್ಲಿ ಊಹಿಸುವುದು. ಹೀಗೆಯೇ ಮಗುವು ತನ್ನ ಆಟದ ಸಾಮಾನುಗಳ ಪೈಕಿ-ಗಟ್ಟಿಯಾದವುಗಳನ್ನೂ ಮೆದುವಾದವುಗಳನ್ನೂ ಬೇರೆಬೇರೆಯಾಗಿ ವಿಂಗಡಿಸಬಹುದು. ಕೆಲವುವೇಳೆ ಉಪಾಧ್ಯಾಯರು ಯಾವುದಾದರೊಂದು ಆಟದ ವಸ್ತುವನ್ನು ತೋರಿಸಿ ಅದಕ್ಕಿಂತ ದೊಡ್ಡವಾದವುಗಳನ್ನೆಲ್ಲ ಒಂದು ಗುಂಪಾಗಿಯೂ ಸಣ್ಣವಾದವುಗಳನ್ನು ಮತ್ತೊಂದು ಗುಂಪಾಗಿಯೂ ವಿಂಗಡಿಸುವಂತೆ ಮಾಡಬಹುದು. ಹೀಗೆಯೇ ಕಣ್ಣ ನೋಟದಿಂದಲೇ ದೂರವನ್ನು ಊಹಿಸಿ ಹೇಳುವುದನ್ನು ಅಭ್ಯಾಸಮಾಡಿಸಬಹುದು.

ಈ ಸಂದರ್ಭಗಳಲ್ಲಿ ಅಡಿಗಡ್ಡಿ (Footrule) ಇಂಚ್‌ಪಟ್ಟಿ (Tape) ಇಂತಹವುಗಳನ್ನು ಉಪಯೋಗಿಸಬಹುದು. ಹೀಗೆಯೇ ಪದಾರ್ಥಗಳ ಎತ್ತರ, ಗಾತ್ರ ಮೊದಲಾದವನ್ನೂ ಆಟಗಳ ರೂಪದಲ್ಲಿ ಕಲಿಸಬಹುದು. ಈ ಮಾರ್ಗದಲ್ಲಿ ತಯಾರಾದ ಐದು ವರ್ಷದ ಮಗುವು ಇಂತಹ ಶಿಕ್ಷೆಯನ್ನು ಪಡೆಯದ ಎಂಟು ವರ್ಷದ ಹುಡುಗರಿಗಿಂತ ಬುದ್ಧಿಶಕ್ತಿಯಲ್ಲಿ ಪಟುವಾಗಿರುವುದು. ಸ್ಪರ್ಶೇಂದ್ರಿಯ ಪಾಟವವನ್ನು ವೃದ್ಧಿಗೊಳಿಸುವುದಕ್ಕೆ ಉಪಾಧ್ಯಾಯರು ಹಲವುಬಗೆಯ ಉಪಾಯಗಳನ್ನು ಅನುಸರಿಸಬಹುದು. ಮಕ್ಕಳಿಗೆ ಕಣ್ಣುಕಟ್ಟಿ ಅಥವಾ ಕಣ್ಣು ಮುಚ್ಚಿಕೊಳ್ಳುವಂತೆ ಹೇಳಿ ಹಲವಬಗೆಯ ಆಕೃತಿಗಳುಳ್ಳ ವಸ್ತುಗಳನ್ನು ಒಂದೊಂದನ್ನಾಗಿ ಕೊಟ್ಟು ಅವನ್ನು

ಹೇಳಿಸಬಹುದು. ಹೀಗೆ ಹೇಳಿಸುವುದು ಮಾತ್ರವೇ ಅಲ್ಲದೆ ಆ ಆಕಾರಗಳನ್ನು ಅವರಿಂದ ಚಿತ್ರರೂಪದಲ್ಲಿ ಬರೆಸಲೂ ಬೇಕು. ಮರದ ತುಂಡುಗಳಿಂದ ಕಟ್ಟಿದ ಅಕ್ಷರಗಳನ್ನು ತಡವಿ ನೋಡಿ ಅವನ್ನು ಇಂತಹವೆಂದು ಗುರುತು ಹಿಡಿಯುವಂತೆ ಮಾಡಿಸಬಹುದು. ಅಥವಾ ಹಂಸಪಟ್ಟಿಯಿಂದ ಅಕ್ಷರಗಳ ಆಕೃತಿಗಳನ್ನು ಕತ್ತರಿಸಿ ರಟ್ಟಿನಮೇಲೆ ಅಂಟಿಸಿದ್ದು ಬಾಲಕರು ಕಣ್ಣುಮುಚ್ಚಿಕೊಂಡೇ ಅವನ್ನು ತಡವಿನೋಡಿ ಇದು ಇಂತಹ ಅಕ್ಷರ ಎಂದು ಹೇಳುವಂತೆ ಮಾಡಬಹುದು. ಹೀಗೆ ಮಾಡುವುದರಿಂದ ಅಕ್ಷರಗಳ ಆಕಾರ, ಅವುಗಳ ಧ್ವನಿ ಇವುಗಳಿಗಿರುವ ಪರಸ್ಪರ ಸಂಬಂಧವು ನಿಷ್ಕರ್ಷೆಯಾಗಿ ಗೊತ್ತಾಗುವುದಲ್ಲದೆ ಸ್ಪರ್ಶಶಕ್ತಿಯೂ ಬಲಪಡುವುದು.

ಆಕೃತಿಗಳ ವಿಷಯವನ್ನು ಬೋಧಿಸಿ ನಿಶ್ಚಯಜ್ಞಾನವನ್ನುಂಟುಮಾಡುವುದರಲ್ಲೂ ಆಟವನ್ನೇ ಸಾಧನವಾಗಿ ಉಪಯೋಗಿಸಿಕೊಳ್ಳಬಹುದು. ಆಟದ ವಸ್ತುಗಳ ಆಕಾರ, ಗಾತ್ರ ಇವುಗಳ ಕಡೆಗೆ ಮಕ್ಕಳ ಗಮನವನ್ನು ಎಳೆಯಬೇಕು. ಅವುಗಳಲ್ಲಿ ಕೆಲವನ್ನು ಮಣ್ಣಿನಿಂದ ಅಥವಾ ಪ್ಲಾಸ್ಟಿಸೈನ್‌ನಿಂದ ಮಾದರಿಯಾಗಿ ಮಾಡಿಸಬೇಕು. ಮತ್ತು, ಒಂದು ವಸ್ತುವನ್ನು ತೋರಿಸಿ ತಿಳಿಸುವಾಗ ಅದರಂತೆ ಇರುವ ಇತರ ವಸ್ತುಗಳು ಯಾವುವು ಎಂಬುದನ್ನು ಪ್ರಶ್ನಿಸಿ ಮಕ್ಕಳಿಂದಲೇ ಹೊರಡಿಸಬೇಕು, ಆ ಆಕೃತಿಗಳನ್ನು ಸ್ವತಃ ಚಿತ್ರದ್ವ ಮತ್ತು ಮಾದರಿಯ ಮೂಲಕ ಕಲ್ಪಿಸುವಂತೆ ಮಾಡಬೇಕು. ಆಕೃತಿಗಳ ಪಾಠವನ್ನು ಬೋಧಿಸುವುದರಲ್ಲಿ ಕಡ್ಡಿಗಳ ಕೆಲಸ (Stick laying) ಮತ್ತು ಬಿಲ್ಲೆಗಳ ಕೆಲಸ (Tablet laying) ಇವು ಬಹು ಮಟ್ಟಿಗೂ ಸಹಾಯ ಮಾಡುವುವು. ಮಕ್ಕಳಿಗೆ ಈ ವಸ್ತುಗಳನ್ನು ಕೊಟ್ಟು ಇವುಗಳನ್ನು ನಾನಾ ವಿಧವಾಗಿ ಜೋಡಿಸಿ ಪರಿಪರಿಯಾದ ಆಕೃತಿಗಳನ್ನು ಮಾಡಿಸಿ ಅವರನ್ನು ವಿನೋದ ಪಡಿಸಬಹುದು. ಮತ್ತೆ ಸ್ವಲ್ಪ ಕಾಲವಾದನಂತರ ಹೀಗೆ ಕಡ್ಡಿಗಳಿಂದ ಅಥವಾ ಬಿಲ್ಲೆಗಳಿಂದ ಜೋಡಿಸಿದ ಆಕೃತಿಗಳ ಸುತ್ತಲೂ ಗೆರೆಗಳನ್ನು ಎಳೆಯಿಸಿ ಅದೊಂದುವಿಧವಾದ ಚಿತ್ರವಾಗುವುದೆಂಬುದನ್ನು ತೋರಿಸಿದರೆ ಮಕ್ಕಳು ಸಂತೋಷಪಡುವರು. ಇಷ್ಟೇ ಅಲ್ಲದೆ ಹಾಗೆ ಆದ ಚಿತ್ರಗಳೊಳಗೆ ಅವರಿಂದಲೇ ಬಣ್ಣವನ್ನು ತುಂಬಿಸಿದರೆ ಆಕೃತಿಗಳು ಮತ್ತು ಸುಂದರವಾಗುವುವಷ್ಟು! ಆಗ ಅವನ್ನು ನೋಡು

ವುದರಿಂದ ಮಕ್ಕಳಿಗೆ ಆಗುವ ಆನಂದವು ಅಪಾರವಾದುದು. ಉಪಾಧ್ಯಾಯರು ಮೊದಲುಮೊದಲು ಕೆಲವು ಆಕೃತಿಗಳನ್ನು ಜೋಡಿಸುವ ಕ್ರಮವನ್ನು ತೋರಿಸಿಬಿಟ್ಟರೆ ಸಾಕು. ಮುಂದಕ್ಕೆ ಮಕ್ಕಳು ತಾವೇ ಸ್ವತಃ ಹೊಸಹೊಸ ಆಕೃತಿಗಳನ್ನು ಕಟ್ಟುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಈ ಕಡ್ಡಿಗಳಿಂದಲೂ, ಬಿಲ್ಲೆಗಳಿಂದಲೂ ಆಕೃತಿಗಳನ್ನು ಕಟ್ಟುವ ರೀತಿಯನ್ನು ತಿಳಿಯಿಸಿಕೊಡಲು ಇಂಗ್ಲಿಷಿನಲ್ಲಿ ಹಲವು ಪುಸ್ತಕಗಳು ಇರುವುವಾದರೂ ಕನ್ನಡದಲ್ಲಿ ಸುತರಾಂ ಅಭಾವ. ಆದರೆ ಈಚೆಗೆ ಮೈಸೂರು ನಾರ್ಮಲ್‌ಸ್ಕೂಲ್ ಅ|| ಮಾ|| ಮ|| ರಾ|| ವೆಂಕಟಸುಬ್ಬಯ್ಯ ಬಿ. ಎ. ಯವರು ಬರೆದಿರುವ "ಕಿಂಡರ್‌ಗಾರ್ಟೆನ್ ಕ್ರಮದಲ್ಲಿ ಮಕ್ಕಳ ವಿದ್ಯಾಭ್ಯಾಸ" ಎಂಬ ಪುಸ್ತಕವು ಈ ಕೆಲಸಗಳ ವಿಷಯವನ್ನೂ ಇವನ್ನು ನಡೆಸುವ ರೀತಿಯನ್ನೂ ಚೆನ್ನಾಗಿ ವಿವರಿಸಿ ತಿಳಿಯಿಸುವುದು. ಈ ಬಿಲ್ಲೆಗಳು ಕಿಂಡರ್‌ಗಾರ್ಟೆನ್ VII. ಕಣಕ್ಕೆ ಸೇರಿದವುಗಳು. ಇವುಗಳಲ್ಲಿ ಕೆಲವು ಚೌಕ ಕೆಲವು ತ್ರಿಭುಜ ಈ ರೀತಿ ಎರಡು ವಿಧಗಳಾಗಿರುವವು. ತ್ರಿಭುಜಗಳಲ್ಲಿ ಪುನಃ ಸಮತ್ರಿಭುಜ, ಸಮದ್ವಿಬಾಹು ತ್ರಿಭುಜ, ವಿಷಮತ್ರಿಭುಜ ಎಂದು ಬೇರೆಬೇರೆ ವಿಧವಾಗಿರುವುವು. ಒಟ್ಟು ನೋಡಿದರೆ ಚೌಕವನ್ನು ಕರ್ಣರೇಖೆಯಮೇಲೆ ಕೊಯ್ದು ಕೆಲವು ತ್ರಿಭುಜಗಳನ್ನೂ ಆಯಗಳನ್ನು ಕರ್ಣರೇಖೆಯಮೇಲೆ ಕೊಯ್ದು ಕೆಲವು ತ್ರಿಭುಜಗಳನ್ನೂ ಮಾಡಿರುವರಲ್ಲದೆ ಸ್ವತಂತ್ರವಾದ ಇತರ ತ್ರಿಭುಜಗಳನ್ನು ಆಕರಣದ ಪೆಟ್ಟಿಗೆಯಲ್ಲಿಟ್ಟಿರುವರು. ಕೆಲವು ಪೆಟ್ಟಿಗೆಗಳಲ್ಲಿ ವೃತ್ತಾಕಾರವಾದ ಬಿಲ್ಲೆಗಳೂ ಅವುಗಳ ಭಾಗಗಳೂ ಇರುವುದುಂಟು. ಮಕ್ಕಳು ಪ್ರಾಪ್ತವಯಸ್ಕರಾಗುತ್ತ ಬಂದಂತೆಲ್ಲ ಈ ಬಿಲ್ಲೆಗಳಿಂದ ಆಕೃತಿಗಳನ್ನು ಕಟ್ಟಿ ವಿನೋದಪಡುವುದರ ಜತೆಗೆ ರೇಖಾಗಣಿತಕ್ಕೆ ಸಂಬಂಧಪಟ್ಟ ಅಂಶಗಳನ್ನು ಕಲಿಯುವುದಕ್ಕೂ ಸೌಕರ್ಯವುಂಟಾಗುವುದು. ಮಕ್ಕಳಿಂದ ಆಕೃತಿಗಳನ್ನು ಕಟ್ಟಿಸುವುದಕ್ಕೆ ತಕ್ಕ ಉಪಕರಣಗಳ ವಿಷಯದಲ್ಲಿ ಈಚೆಗೆ ಬಹಳ ಮಟ್ಟಿಗೂ ಶ್ಲಾಘ್ಯವಾದವುಗಳನ್ನು ಹೊಸಹೊಸದಾಗಿ ಏರ್ಪಡಿಸುತ್ತ ಇರುವರು. ಆದರೂ ಫ್ರೋಬೆಲ್ಲನ ಕರಣಗಳಲ್ಲಿ ಮೊದಲಿನ ೭ ಕರಣಗಳನ್ನು ಮಾತ್ರ ಯಾರೂ ತಪ್ಪಿಸಲಿಕ್ಕಾಗುವುದಿಲ್ಲ. ಏಕೆಂದರೆ,— ಅವುಗಳಲ್ಲಿ ಅಂತಹ ಮುಖ್ಯತತ್ವಗಳು ಅಡಕವಾಗಿರುವುವು. ಆದುದರಿಂದ ಅವುಗಳಲ್ಲಿ

ಮಕ್ಕಳು ತಿಳಿಯಬೇಕಾದ ಅಂಶಗಳು ಬಹಳವಾಗಿರುವುವು. II. ಕರಣದಲ್ಲಿ ಗೋಳ, ಸಿಲಿಂಡರ ಮತ್ತು ಘನ ಇವುಗಳೆಲ್ಲವೂ ಇರುವುದರಿಂದ ಇದು ಇತರ ಎಲ್ಲಾ ಕರಣ ಗಳಿಗಿಂತಲೂ ಮುಖ್ಯ.

ಎಲ್ಲಾ ಮಕ್ಕಳಿಗೂ ಮಾಂಸಖಂಡಗಳಿಗೆ ಬಲವನ್ನು ಕೊಡುವಂತಹ ಅಂಗ ಸಾಧನೆಯು ಆವಶ್ಯಕ. ಇದಕ್ಕೆ ಸ್ವೇಚ್ಛೆಯಾದ ಆಟವು ಉತ್ತಮವಾದ ಮಾರ್ಗ. ನಿಷ್ಕೃಷ್ಟವಾದ ವಿಧಿಗಳನ್ನುಳ್ಳ ಕೆಲವು ಆಟಗಳಲ್ಲಿ ಮಕ್ಕಳ ಬುದ್ಧಿಶಕ್ತಿಗಳಿಗೂ ಕೆಲಸವು ದೊರೆಯುವುದಾದರೂ ಮಕ್ಕಳ ಸ್ವೇಚ್ಛಾವಿಹಾರಕ್ಕೆ ಅವಕಾಶ ಕೊಡದೆ ಇರುವುದರಿಂದ ಅಂತಹ ಆಟಗಳನ್ನು ಮಕ್ಕಳು ನಿರ್ಬಂಧವೆಂದು ಭಾವಿಸಿಯಾರಾಗಿ ಅವರ ಮನಸ್ಸಿಗೆ ವಿನೋದವಾಗಲಿ, ಉಲ್ಲಾಸವಾಗಲಿ ಉಂಟಾಗಲಾರದು. ನೆಗೆತ, ಚೆಂಡೆಸೆಯುವುದು, ಉಯ್ಯಾಲೆ, ಜೋತಾಡುವುದು ಉದ್ದವನ್ನು ನೆಗೆಯುವುದು, ಎತ್ತರವನ್ನು ನೆಗೆಯುವುದು, ಇಂತಹ ಆಟಗಳು ಮಕ್ಕಳಿಗೆ ಉಲ್ಲಾಸಕರವಾಗಿರುವು ವಲ್ಲದೆ ಅವರ ಮಾಂಸಖಂಡಗಳಿಗೆ ತುಂಬ ಬಲಕಾರಿಗಳಾಗಿಯೂ ಇರುತ್ತವೆ.

ಇವುಗಳ ಪೈಕಿ ಮುಖ್ಯವಾಗಿ ಉಯ್ಯಾಲೆ, ಏತದಆಟ ಮೊದಲಾದ—ಅಂದರೆ ದೇಹದ ತೂಕವನ್ನು ತೂಗಿಕೊಂಡು ಚಲನೆಯನ್ನು ಮಾಡುವಂತಹ—ಆಟಗಳಲ್ಲಿ ಮಕ್ಕಳಿಗೆ ಕುತೂಹಲವು ಅತಿಯಾಗಿರುವುದು. ಲಯಕ್ಕೆ ಸರಿಯಾಗಿ ಮಕ್ಕಳು ಕುಣಿಯುವುದರಿಂದ ಆಗತಕ್ಕ ಪ್ರಯೋಜನವು ತುಂಬ ಮುಖ್ಯವಾದುದು. ಇದ ರಿಂದ ಮಾಂಸಖಂಡಗಳಿಗೆ ಬಲಬರುವುದಲ್ಲದೆ ಕಾಲಕ್ಕೆ ತಕ್ಕಂತೆ ಕೆಲಸ ಮಾಡತಕ್ಕ ಸ್ವಭಾವವೂ ಶ್ರುತಿಪಾಟವವೂ ಹೆಚ್ಚುವುವು. ಲಯಕ್ಕೆ ಸರಿಯಾಗಿ ಹೆಜ್ಜೆ ಹಾಕಬೇ ಕಾದಂತಹ ಡ್ರಿಲ್‌ನ ಪ್ರಥಮ ಪಾಠಗಳು ಮುಂದೆ ಸಂಗೀತಶಾಸ್ತ್ರಾಭ್ಯಾಸಕ್ಕೂ ಸಹಾಯಕಗಳಾಗುವುವು. ಸಂಗೀತಯುಕ್ತವಾದ ಕಿಂಡರ್‌ಗಾರ್ಟನ್ ಆಟಗಳನ್ನು ಆಡಿಸುವುದರಿಂದ ಮೇಲೆ ಹೇಳಿದ ಸಕಲ ಪ್ರಯೋಜನಗಳೂ ಉಂಟಾಗುವುವು. ಮಕ್ಕಳ ಬುದ್ಧಿಗೆ ಉಂಟಾಗಿದ್ದ ಬೇಸರವು ಗಾನದಿಂದ ಅಳಿದು ಹೋಗುವುದಲ್ಲದೆ ಮನಸ್ಸಿಗೆ ಉಲ್ಲಾಸವೂ ಮುಂದಿನ ಕೆಲಸಕ್ಕೆ ತಕ್ಕ ಗಮನವೂ ಉಂಟಾಗುವುವು. ಮತ್ತು ವಿನಯವಿಧೇಯತೆಗಳೂ ಮನೋಮಾರ್ದವವೂ ಉಂಟಾಗುವುವು.

ಮಕ್ಕಳು ಆಡತಕ್ಕ ಆಟಗಳಲ್ಲಿ ಬರತಕ್ಕ ಪಾತ್ರಗಳ ಲೆಕ್ಕಾಚಾರ ಮಾಡುವಾಗಲೇ ಅವರಿಗೆ ಸಂಖ್ಯಾಸ್ವರೂಪಜ್ಞಾನವು ತಕ್ಕ ಮಟ್ಟಿಗೆ ಉಂಟಾಗಿರುವುದರಿಂದ ಈ ರೀತಿಯಾಗಿ ಪಡೆದ ತಿಳಿವಳಿಕೆಯು ಮುಂದೆ ಅಂಕಗಣಿತ ಬೋಧನೆಯ ಕಾಲದಲ್ಲಿ ಚೆನ್ನಾಗಿ ಫಲಿಸುವುದು. ಚೆಂಡು, ಗೋಲಿ, ಕವಡೆ, ಅಪ್ಪಾಲೆತಪ್ಪಾಲೆ ಇಂತಹ ಆಟಗಳಲ್ಲಿ ಲೆಕ್ಕವು ಬಂದಹೊರತು ವಿಧಿಯೇ ಇಲ್ಲವಾಗಿ ಉಪಾಧ್ಯಾಯರು ಗಣಿತವನ್ನು ಬೋಧಿಸುವುದಕ್ಕೆ ಮೊದಲೇ ಮಕ್ಕಳು ಸ್ವಶಕ್ತಿಯಿಂದ ಸಾಮಾನ್ಯವಾಗಿ ಸ್ವಲ್ಪ ಮಟ್ಟಿಗಾದರೂ ಅದನ್ನು ಕಲಿತಿರುವರು. ಹೀಗೆ ಸ್ವತಃ ಕಲಿತ ಅಂಶವು, ಬೋಧಿಸಲ್ಪಟ್ಟುದಕ್ಕಿಂತಲೂ ಹೆಚ್ಚು ಪ್ರಯೋಜನಕಾರಿ. ಆದರೆ ಮಕ್ಕಳು ಈ ಮಾರ್ಗದಲ್ಲಿ ಹೇಗಾದರೂ ಕಲಿತುಕೊಳ್ಳಲಿ ಎಂದು ಉಪಾಧ್ಯಾಯರು ತಟಸ್ಥರಾಗಿರಬಾರದು. ಮಕ್ಕಳು ಲೆಕ್ಕಾಚಾರ ಮಾಡಿಕೊಳ್ಳುವುದರಲ್ಲಿ ಏನಾದರೂ ತಪ್ಪು ಮಾಡಿದರೆ ಅದನ್ನು ತಿದ್ದುತ್ತ ಇರಬೇಕು. ಆದರೆ ಅವರ ಉಲ್ಲಾಸಕ್ಕೆ ಭಂಗಬರುವಂತೆ ನಡೆಯಬಾರದು.

ಮಣಿಗಳನ್ನು ಪೋಣಿಸುವ ಆಟವೂ ಗಣಿತಬೋಧನೆಗೆ ಸಹಾಯವಾದ ಒಂದು ಮುಖ್ಯಪಾಠ. ಇದು ಸಣ್ಣ ಮಕ್ಕಳ ತರಗತಿಗಳಿಗಂತು ಅತ್ಯಾವಶ್ಯಕ. ಮೊದಲುಮೊದಲು ಒಂದೊಂದು ಬಣ್ಣದ ಮಣಿಯನ್ನು ಒಂದೊಂದನ್ನಾಗಿಯೂ ಬಳಿಕ ಎರಡೆರಡನ್ನಾಗಿಯೂ ಹೀಗೆಯೇ ಒಂದು ಕ್ರಮವನ್ನು ಅನುಸರಿಸಿ ನಡೆಯಿಸುವುದರಿಂದ ಸಂಖ್ಯೆಗಳ ವಿಷಯದಲ್ಲಿ ಮಕ್ಕಳಿಗೆ ನಿಷ್ಕೃಷ್ಟವಾದ ತಿಳಿವಳಿಕೆಯುಂಟಾಗುವುದು. ಎಲ್ಲಾ ಬಣ್ಣಗಳ ಮಣಿಗಳನ್ನೂ ಬೆರೆಸಿ ಮಕ್ಕಳ ಕೈಗೆ ಕೊಟ್ಟು ಒಂದೊಂದು ಬಣ್ಣದವುಗಳನ್ನೇ ಬೇರೆಬೇರೆಯಾಗಿ ವಿಂಗಡಿಸುವಂತೆ ಮಾಡುವುದು ಮಕ್ಕಳಿಗೆ ಉಲ್ಲಾಸಕರವಾಗಿಯೂ ಬಣ್ಣದ ಜ್ಞಾನವನ್ನು ಹೆಚ್ಚಿಸತಕ್ಕದ್ದಾಗಿಯೂ ಇರುವುದು. ಹೀಗೆ ಬೆರೆತ ಮಣಿಗಳನ್ನು ಯಾರು ಬೇಗಬೇಗ ಆರಿಸಿ ಆಯಾ ಬಣ್ಣದವುಗಳನ್ನು ಪ್ರತ್ಯೇಕಿಸುವರೋ, ಅವರು ಆಟವನ್ನು ಗೆದ್ದವರಂತೆ ಭಾವಿಸಲ್ಪಡಬೇಕು.

ಲೆಕ್ಕದ ಆಟ-ದಪ್ಪವಾದ ಕಟ್ಟುಗಳ ಮೇಲೆ 1, 2, 3 ಇತ್ಯಾದಿ ಸಂಖ್ಯೆಗಳನ್ನು ಬೇರೆಬೇರೆ ಅಚ್ಚುಹಾಕಿಸಿರುವುದು. ಮತ್ತು ಹೀಗೆ ಅಚ್ಚುಹಾಕಿಸಿರತಕ್ಕವು ಹೆಚ್ಚುಹೆಚ್ಚಾಗಿರಬೇಕು. ಅಂದರೆ 1 ಎಂಬುದನ್ನು ಅಚ್ಚು ಹಾಕಿರುವ ಕಾರ್ಡುಗಳು 20

2 ಎಂಬ ಸಂಖ್ಯೆಯನ್ನು ಅಚ್ಚು ಹಾಕಿರತಕ್ಕವು 20, ಹೀಗೆ ಪ್ರತಿ ಸಂಖ್ಯೆಯ ಕಾರ್ಡುಗಳೂ ಸುಮಾರು 20 ಪ್ರತಿಗಳಿರಬೇಕು. ಮಕ್ಕಳೆಲ್ಲ ತರಗತಿಯಲ್ಲಿ ಗುಂಪಾಗಿರುವಾಗ ಈ ಎಲ್ಲಾ ಕಾರ್ಡುಗಳೂ ಉಳ್ಳ ಒಂದು ಪೆಟ್ಟಿಗೆಯನ್ನು ಮಧ್ಯದಲ್ಲಿಟ್ಟಿರುವುದು. ಉಪಾಧ್ಯಾಯರು ಅಥವಾ ಯಾರಾದರೊಬ್ಬ ವಿದ್ಯಾರ್ಥಿಯು ಒಂದು ಕಟ್ಟನ್ನು ತೆಗೆದುಕೊಂಡು ಇಷ್ಟೇ ಬೆಲೆಬಾಳುವಂತೆ ಎರಡು ಕಟ್ಟುಗಳನ್ನು ಸೇರಿಸಿ ಕೊಡಿರೆಂದು ಇನ್ನೊಬ್ಬರನ್ನು ಕೇಳುವುದು. ಉದಾ–12 ಎಂದು ಬರೆದಿರುವ ಕಟ್ಟನ್ನು ತೋರಿಸಿ ಒಟ್ಟು ಇಷ್ಟೇ ಬೆಲೆಬಾಳುವಂತಹ ಎರಡು ಕಟ್ಟುಗಳನ್ನು ತೋರಿಸಿರೆಂದು ಕೇಳುವನಾಗಿ ಭಾವಿಸೋಣ. ಇದಕ್ಕೆ ಹಲವು ಉತ್ತರಗಳುಂಟು. ಹೇಗೆಂದರೆ (11+1) (10+2) (9+3) (8+4) (7+5) (6+6) ಹೀಗೆ ಒಬ್ಬೊಬ್ಬರು ಎರಡೆರಡು ಕಾರ್ಡುಗಳನ್ನು ಹಿಡಿದು ತೋರಿಸಬೇಕು. ತಪ್ಪಿಲ್ಲದ ಯಾರು ಹೀಗೆ ತೋರಿಸುವರೋ ಅವರು ಗೆದ್ದವರೆಂದೂ ಯಾರು ಹೀಗೆ ಮಾಡಲಾರರೋ ಅವರು ಸೋತವರೆಂದೂ ಭಾವಿಸಲ್ಪಡುವರು. ವಯಸ್ಸಿನಲ್ಲೂ ಯೋಗ್ಯತೆಯಲ್ಲೂ ಕಡಿಮೆಯಾದ ಮಕ್ಕಳಿಗೆ 10 ರೊಳಗಿನ ಸಂಖ್ಯೆಗಳಲ್ಲಿ ಮಾತ್ರ ಈ ರೀತಿ ನಡೆಸಬೇಕು. ಇನ್ನು ಮೇಲ್ಪಟ್ಟವರಿಗಾದರೆ ದೊಡ್ಡ ಸಂಖ್ಯೆಗಳ ವಿಚಾರವಾಗಿ ಪ್ರಶ್ನೆಮಾಡಿ ಆಟವಾಡಿಸಬಹುದು. ಈ ವಿಧವಾದ ಆಟದಲ್ಲಿ ಸ್ಪರ್ಧೆಯೂ ಹೆಚ್ಚುವುದಲ್ಲವೆ ಬುದ್ಧಿ ಸಂಸ್ಕಾರಕ್ಕೆ ಹೆಚ್ಚು ಅವಕಾಶವುಂಟು. ಗಣಿತಪಾಠಕ್ಕಂತು ಇದರಿಂದ ಆಗುವ ಸಹಾಯವು ಅಮೂಲ್ಯವಾದುದು. ಇದರಿಂದ ಆಟವಾಡಿಸುವುದರಲ್ಲಿ ಮೇಲೆ ಹೇಳಿದ ಮಾರ್ಗವೊಂದೇ ಅಲ್ಲ; ಅನೇಕ ವಿಧಗಳಾಗಿರುವುವು. ಒಂದು ಕಾರ್ಡನ್ನು ತೋರಿಸಿ ಇದರ ನಾಲ್ಕರಷ್ಟು ಬೆಲೆಯುಳ್ಳ ಮತ್ತೊಂದು ಕಾರ್ಡನ್ನು ಕೊಡು, ಇದರ ಅರ್ಧದಷ್ಟು ಬೆಲೆಯುಳ್ಳ ಒಂದು ಕಾರ್ಡನ್ನು ತೋರಿಸು, ಯಾವ ಸಂಖ್ಯೆಗೆ 3 ಸೇರಿಸಿದರೆ ಈ ಕಾರ್ಡಿನಲ್ಲಿ ಕಂಡಷ್ಟು ಬೆಲೆಯಾಗುವುದು, ಎಂಬುದನ್ನು ಕಾರ್ಡುಗಳಲ್ಲೇ ತೋರಿಸು ಇತ್ಯಾದಿಯಾಗಿ.

ಮುಚ್ಚಳವಿಲ್ಲದ ಒಂದು ಜಾಯಿಕಾಯಪೆಟ್ಟಿಗೆ(ಸಣ್ಣದು)ಯನ್ನು ಬೋರಲು ಹಾಕುವುದು. ಹೀಗೆ ಬೋರಲು ಹಾಕಿದಾಗ ಒಂದು ಪಕ್ಕದಲ್ಲಿ ಒಂದು

ದೊಡ್ಡದು, ಒಂದು ಸಣ್ಣದು, ಒಂದು ಪುಟ್ಟದು, ಈರೀತಿಯಾಗಿ 3 ಬಾಗಿಲುಗಳನ್ನು ಕೊರೆದಿರುವುದು. ಬಳಿಕ ತಕ್ಕಷ್ಟು ದೂರದಲ್ಲಿ ಮಕ್ಕಳು ನಿಂತುಕೊಂಡು ಅಥವಾ ಕುಳಿತುಕೊಂಡು ಅದರೊಳಕ್ಕೆ ಗೋಲಿಗಳನ್ನು ಓಡಿಸುವುದು. ಆಗ ಒಟ್ಟು ಆ ಪೆಟ್ಟಿಗೆಯು ಲಾಯವಾಗಿಯೂ ಗೋಲಿಗಳೇ ಕುದುರೆಗಳಾಗಿಯೂ ಭಾವಿಸಲ್ಪಟ್ಟು ಲೆಕ್ಕಕ್ಕೆ ಸಹಾಯಕವಾಗಬಹುದು. ಅಥವಾ ಆ ಬಿಲಗಳೇ ಮೊಲಗಳ ಗೂಡೆಂದೂ ಗೋಲಿಗಳೇ ಮೊಲಗಳೆಂದೂ ಭಾವಿಸಿಕೊಳ್ಳಬಹುದು.

ಅಂಗಡಿಯ ಆಟವು ಮಕ್ಕಳಿಗೆ ತುಂಬ ಕುತೂಹಲಜನಕವಾಗಿರುವುದು. ಈ ಆಟಗಳಲ್ಲಿ ನಿಜವಾದ ಅಳತೆಯ ಸೇರು ಪಾವು ಮುಂತಾದುವನ್ನೂ ಅಳತೆಯ ಬಟ್ಟು ಮುಂತಾದುವನ್ನೂ ಉಪಯೋಗಿಸಿಕೊಳ್ಳಬಹುದು. ಮತ್ತು ನಿಜವಾದ ನಾಣ್ಯಗಳನ್ನೂ ಉಪಯೋಗಿಸಬಹುದು. ಬೇಕಾದ ಚಿಲ್ಲರೆಯ ಸಾಮಾನುಗಳನ್ನೆಲ್ಲ ಶೇಖರಿಸಿ ಒಂದು ಅಂಗಡಿಯನ್ನು ಮಾಡಬಹುದು. ಅಲ್ಲಿ ಸಾಮಾನುಗಳನ್ನು ಮಾರತಕ್ಕ ವರ್ತಕರಾಗಿ ಕೆಲವರೂ, ಲೆಕ್ಕ ಬರೆಯುವ ಅಥವಾ ಹೇಳುವವರು ಕೆಲವರೂ, ಸಾಮಾನುಗಳನ್ನು ಕೊಳ್ಳುವುದಕ್ಕಾಗಿ ಗಿರಾಕಿಗಳಾಗಿ ಬರತಕ್ಕವರು ಕೆಲವರೂ ಆಗಬಹುದು. “ಆಣೆಗೆ 3 ಅಡಿಯಂತೆ ಇರುವ ಈ ಲಾಡಿಯಲ್ಲಿ 6 ಅಡಿಯನ್ನು ಕೊಡು, ಈಗ ನಿನಗೆ ನಾನು ಎಷ್ಟು ದುಡ್ಡು ಕೊಡಬೇಕು? ಈ ಎರಡು ಮಣಿಗೆ $1\frac{1}{2}$ ಆಣೆಯಾದರೆ 4 ಮಣಿಗಳಿಗೆಷ್ಟು?” ಇಂತಹ ಪ್ರಶ್ನೆಗಳಿಂದ ವ್ಯಾಪಾರವು ನಡೆಯಬೇಕು. ಈ ಆಟಗಳಲ್ಲಿ ಕೃತಕ ನಾಣ್ಯಗಳನ್ನು ಉಪಯೋಗಿಸುವುದಕ್ಕಿಂತ ನಿಜವಾದ ನಾಣ್ಯಗಳನ್ನು ಉಪಯೋಗಿಸತಕ್ಕದ್ದು ಹೆಚ್ಚು ಪ್ರಯೋಜನಕಾರಿ. ಆವಶ್ಯಕವಾದಾಗ ಮಕ್ಕಳಿಗೆ ಕೊಟ್ಟಿದ್ದು ಬಳಿಕ ಉಪಾಧ್ಯಾಯರು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬಿಡಬೇಕು.

ಯಾವುದನ್ನೂ ನಿರ್ಬಂಧಪಡಿಸಿ ಮಕ್ಕಳು ಕ್ಲೇಶದಿಂದ ಕಲಿತುಕೊಳ್ಳುವಂತೆ ಮಾಡುವುದಕ್ಕಿಂತಲೂ ಅವರ ಮನಸ್ಸಿಗೆ ಪ್ರೋತ್ಸಾಹವನ್ನುಂಟುಮಾಡಿ ತನ್ಮೂಲಕ ಅವರಿಗೆ ಜ್ಞಾನಾರ್ಜನೆಯಲ್ಲಿ ಕುತೂಹಲವನ್ನು ಹುಟ್ಟಿಸುವಂತೆ ಮಾಡುವುದು

ಯುಕ್ತವಾದ ಮಾರ್ಗ. ಆದ್ದರಿಂದಲೇ ಈ ಕಿಂಡರ್‌ಗಾರ್ಟನ್ ಬಾಲಶಿಕ್ಷಣದಲ್ಲಿ ಆಟವು ಅಷ್ಟುಮಟ್ಟಿನ ಪ್ರಾಶಸ್ತ್ಯವನ್ನು ಪಡೆದಿದೆ.

J. K. S.

ಸ್ಕೂಲ್ ಡಿಸಿಪ್ಲಿನ್.

(120 ನೇ ಪುಟದ ಶೇಷ)

5. ಅನುತಾಪ—ಎಂದರೆ ಇತರರು ದುಃಖಪಡುತ್ತಿದ್ದರೆ ಅವರೊಡನೆ ತಾನೂ ದುಃಖಪಡುವುದು; ಸುಖಪಡುತ್ತಿದ್ದರೆ ಅವರೊಡನೆ ತಾನೂ ಸಂತೋಷಿಸುವುದು. ಈ ಗುಣವು ಅವರಲ್ಲಿರುವುದರಿಂದ ಅವರಲ್ಲಿ ದಯೆಯನ್ನು ಸುಲಭವಾಗಿ ಉಂಟುಮಾಡಬಹುದು. ಮತ್ತು ಈ ಅನುತಾಪವೇ ಬಲಪಡುತ್ತ ಮುಂದಕ್ಕೆ ಮಕ್ಕಳಲ್ಲಿ ದೇಶಾಭಿಮಾನ ಮುಂತಾದ ಸುಗುಣಗಳನ್ನು ನಲೆಗೊಳಿಸುವುದು.

6. ಪ್ರಯೋಜನಾಪೇಕ್ಷೆ—ಈ ಆಶೆಯು ಮಕ್ಕಳಲ್ಲಿ ಸಹಜವಾಗಿರುವುದು. ಇದನ್ನು ಉಪಯೋಗಿಸಿಗೊಂಡರೆ ಮಕ್ಕಳಿಂದ ಕೆಲಸಮಾಡಿಸುವುದು ಸುಲಭ. ಆಯಾ ವಯಸ್ಸಿಗೆ ತಕ್ಕಂತೆ ಪ್ರಯೋಜನಗಳನ್ನು ತೋರಿಸುತ್ತ ಕೆಲಸ ಮಾಡಿಸಬೇಕು. ಕೆಲವು ಲಘುವಾದ ಪ್ರಯೋಜನಗಳ ಉದಾಹರಣೆ—ದೊಡ್ಡವರ ಸಂತೋಷಕ್ಕಾಗಿ ಕೆಲಸಮಾಡುವುದು. ಚಿಕ್ಕತನದಲ್ಲಿ ಲಘುವಾದ ಪ್ರಯೋಜನವನ್ನು ಅಂದರೆ ಬಹುಮಾನಾದಿಗಳನ್ನು ತೋರಿಸಿ ಕೆಲಸ ಮಾಡಿಸಬಹುದು. ಬರುತ ಬರುತ ಲಘುವಾದ ಉದ್ದೇಶಗಳನ್ನು ಬಿಡಿಸಿ ಗುರುವಾದ ಉದ್ದೇಶಗಳಿಗಾಗಿ ಕೆಲಸಮಾಡಿಸುತ್ತ ಬರಬೇಕು ಕೊನೆಗೆ ಪ್ರಯೋಜನಾಭಿಲಾಷೆಯೇ ಯಿಲ್ಲದೆ ಕರ್ತವ್ಯಕ್ಕೆ ಭಂಗಬಂದರೂ ಮಾಡಲೇಬೇಕೆಂಬ ನಿಯಮದಿಂದ ಕೆಲಸ ಮಾಡುವಂತೆ ಆದರೆ ನೀತ್ಯನುಶಾಸನವು ಅಲ್ಲಿಗೆ ಮುಗಿದುದು.

7. ಸೌಂದರ್ಯಾಭಿನಿವೇಶ—ಇದು ಮೊದಲಿಂದಲೂ ಇರುವ ಗುಣ. ರಮಣೀಯವಾದ ವರ್ಣ ಸನ್ನಿವೇಶವನ್ನೂ, ಆಕಾರ, ಶಬ್ದಗಳ ಸನ್ನಿವೇಶಗಳನ್ನೂ

ಕಂಡರೆ ಮಕ್ಕಳಿಗೆ ಅದರಲ್ಲಿ ಆಸಕ್ತಿಹುಟ್ಟುವುದು. ಈ ಆಸಕ್ತಿಯಿಂದ ಮಕ್ಕಳಿಗೆ ಗಮನವನ್ನು ಕಲಿಸಬಹುದು. ಸೌಂದರ್ಯಾಭಿನಿವೇಶವಿರುವುದರಿಂದ ಅಸುಂದರ ವಾದ ಸಂಗತಿಗಳಲ್ಲಿ ಉದ್ವೇಜನವುಂಟಾಗುವುದು. ಇದರಿಂದ ಮಕ್ಕಳಲ್ಲಿ ಕ್ರಮ ವನ್ನೂ ಶುಚಿತ್ವವನ್ನೂ, ಅಂದವನ್ನುಂಟುಮಾಡಬಹುದು.

8. ಸ್ವಸಾಮರ್ಥ್ಯ ಪ್ರಕಾಶನೆ— ಇದು ಮನುಷ್ಯನಿಗೆ ಸಹಜವಾದ ಗುಣ. ಇದರಿಂದ ಮಕ್ಕಳು ತಾವಾಗಿ ಕೆಲಸಮಾಡುವುದಕ್ಕೆ ಎತ್ನಿಸುವರು. ಈ ಕೆಲಸ ವನ್ನು ದಾರಿಗೆ ತಂದರೆ ಅವರಲ್ಲಿ ಕ್ರಮೇಣ ಉದ್ಯೋಗವು ಹುಟ್ಟುವುದು. ಹಾಗೆ ಮಾಡುವುದರಲ್ಲಿ ಉಪಾಧ್ಯಾಯರೂ ಜಾಗರೂಕರಾಗಿರಬೇಕು. ಏಕೆಂದರೆ ಸ್ವಸಾ ಮರ್ಥ್ಯ ಪ್ರಕಾಶನೆಯು ಹೆಚ್ಚುತ್ತ ಬಂದರೆ ಅಹಂಕಾರ ಹುಟ್ಟುವುದು. ಇದು ಕೆಟ್ಟದು. ಇಂತಹ ಅಹಂಕಾರವು ಕಂಡುಬಂದರೆ ಥಟ್ಟನೆ ಅವರ ಅಸಾಮರ್ಥ್ಯವನ್ನು ತೋರ್ಪಡಿಸಿ ಅಹಂಕಾರವನ್ನು ಮುರಿಯಬೇಕು. ಇದಲ್ಲದೆ ತಮ್ಮ ಸಾಮರ್ಥ್ಯವನ್ನು ಪ್ರಕಾಶಿಸಬೇಕೆಂಬ ಪ್ರಯತ್ನದಲ್ಲಿ ಮಕ್ಕಳು ತಮ್ಮಲ್ಲಿ ಇಲ್ಲದೇ ಇರುವ ಶಕ್ತಿ ಯನ್ನು ಇದ್ದಂತೆ ತೋರ್ಪಡಿಸುವುದಕ್ಕೆ ಪ್ರಯತ್ನಪಡುವರು. ಇದೇ ಡಂಭ. ಇದನ್ನು ತಪ್ಪಿಸಬೇಕು.

9. ಭಯ— ಯಾವುದಾದರೊಂದು ವಿಧವಾದ ಕೆಡಕುಂಟಾಗುವುದೆಂದು ಹೆದರುವುದೇ ಭಯ. ಈ ಭಯವಿರುವುದರಿಂದ ಯುಕ್ತವಾದ ದಾರಿಯಲ್ಲಿ ಮಕ್ಕಳು ನಡೆಯುವಂತೆಯೂ, ಅಯುಕ್ತವಾದ ದಾರಿಯಲ್ಲಿ ನಡೆಯದಂತೆಯೂ ಮಾಡಬ ಹುದು. ಅಯುಕ್ತವಾದ ದಾರಿಯಲ್ಲಿ ನಡೆದರೆ ದಂಡನೆಯು ಖಂಡಿತವೆಂದು ನಂಬಿ ಕೆಯನ್ನು ಹುಟ್ಟಿಸಬೇಕು. ಆದರೆ ಭಯದಿಂದ ಕೆಲಸಮಾಡಿಸಬಹುದೆಂದು ಮಕ್ಕಳು ಗಾಬರಿಪಡುವಷ್ಟು ಹೆದರಿಸಬಾರದು. ಏಕೆಂದರೆ ಹೆದರಿಕೆಯಿರುವಾಗ ಬುದ್ಧಿಶಕ್ತಿ ಯು ಕುಗ್ಗುವುದು. ಬುದ್ಧಿಶಕ್ತಿಯು ಕುಗ್ಗಿದಾಗ ಕೆಲಸವು ಸರಿಯಾಗಿ ನಡೆಯ ಲಾರದು. ಇದಲ್ಲದೆ ಅತಿಯಾದ ಹೆದರಿಕೆಯಿಂದ ಮಕ್ಕಳ ಆರೋಗ್ಯಕ್ಕೂ ಅಪಾ ಯಬರುವುದುಂಟು; ಆದ್ದರಿಂದ ಹೆಚ್ಚುಭಯವನ್ನು ಹುಟ್ಟಿಸಕೂಡದು. ಸಾಧ್ಯವಾ ದರೆ ಭಯವನ್ನೇ ಹುಟ್ಟಿಸದಿರುವುದು ಉತ್ತಮ. ಪ್ರೀತಿಯಿಂದ ಕೆಲಸಮಾಡಿಸುವುದು

ಶ್ರೇಷ್ಠ ಹರ್ಷವಾಗಿದ್ದಾಗ ಬುದ್ಧಿಶಕ್ತಿಯು ಚನ್ನಾಗಿ ಹೊರಪಡುವುದು. ಇದರಿಂದ ಕೆಲಸವು ಸರಿಯಾಗಿ ನಡೆಯುವುದು. ಮಗುವಿಗೂ ಶ್ರಮ ಕಡಮೆಯಾಗಿ ಕಾಣು ವುದು. ಆದ್ದರಿಂದ ಮಕ್ಕಳಲ್ಲಿ ಅನುರಾಗವಿಟ್ಟು ಅವರಿಂದ ಮಾಡಿಸತಕ್ಕ ಕೆಲಸ ಗಳನ್ನು ಮಾಡಿಸುವುದು ಉತ್ತಮಪಕ್ಷ. ಇದು ಸಾಧ್ಯವಲ್ಲದಿದ್ದರೆ ಭಯದಿಂದ ನಡೆಸುವುದನ್ನು ಕಲಿಸಬಹುದು. ಆದರೆ ಇದು ತಿದ್ದುವಿಕೆಗೆ ಮಧ್ಯಮಮಾರ್ಗ.

ಮಕ್ಕಳಲ್ಲಿ ತಿದ್ದುವಿಕೆಯನ್ನುಂಟುಮಾಡುವುದಕ್ಕೆ ಇರುವ ಉಪಾಯಗಳು.

1. **ಬಾಹ್ಯವಾದ ಸಾಧನೆಗಳು** – (1) ಒಳ್ಳೆಯ ಸಂವಿಧಾನ. ಸಂವಿಧಾ ನವು ಸರಿಯಾಗಿದ್ದರೆ ತಿದ್ದುವಿಕೆಯ ಕೆಲಸಕ್ಕೆ ಎಷ್ಟೋ ಸಹಾಯ. ಉದಾಹರಣೆ ಗಾಗಿ ವೇಳಾಪತ್ರಿಕೆಯನ್ನು ಹೇಳೋಣ. ಈ ವೇಳಾಪತ್ರಿಕೆಯು ಕ್ರಮವಾಗಿ ಮಾಡ ಲ್ಪಟ್ಟಿದ್ದರೆ ಉದ್ಯೋಗವನ್ನು ಮಕ್ಕಳಿಗೆ ಕಲಿಸುವುದು ಸುಲಭವಾಗುವುದು.

(೨) ಡ್ರಿಲ್ಲಿನ ಕಾಷನ್ನುಗನುಸಾರವಾಗಿ ಅನೇಕರು ಏಕಪ್ರೀತಿಯಾಗಿ ಥಟ್ಟನೆ ಸ್ಕೂಲಿನ ಕೆಲಸಗಳನ್ನು ಮಾಡುವುದು. ಇದರಿಂದ ಕಾಲಕೂಡಿ ಬರುವುದಲ್ಲದೆ ಮಕ್ಕಳಲ್ಲಿ ಗಮನವೂ, ವಿಧೇಯತೆಯೂ ಹೆಚ್ಚುವುದು. ಉದಾಹರಣೆಗಾಗಿ ಲೆಕ್ಕ ವನ್ನು ಮಾಡಿಸುವಾಗ ಒಂದು ಸಂಜ್ಞೆಯನ್ನು ಹೇಳಿದೊಡನೆಯೇ ಹುಡುಗರು ಥಟ್ಟನೆ ಸ್ಲೇಟು ತೆಗೆದುಕೊಳ್ಳುವುದು, ಇನ್ನೊಂದು ಕಾಷನ್ ಹೇಳಿದಕೂಡಲೆ ಸ್ಲೇಟುಗಳನ್ನೆಲ್ಲಾ ಕೆಳಗೆ ಇಡುವುದು, ಹೀಗೆ ಮಾಡುತ ಬಂದರೆ ಕ್ರಮಕ್ಕೂ, ಅಂದಕ್ಕೂ ಎಷ್ಟೋ ಅನುಕೂಲ.

(3) ಸ್ಕೂಲಿನಲ್ಲಿ ನಡೆಯುವ ವಿಷಯದಲ್ಲಿ ಮತ್ತು ಹುಡುಗರ ನಡೆನುಡಿಗಳ ವಿಷಯದಲ್ಲಿ ಕ್ಲುಪ್ತವಾದ ಕೆಲವು ನಿಯಮಗಳಿರುವುದು.

(*a*) ಈ ನಿಯಮಗಳ ಸಂಖ್ಯೆಯು ಹೆಚ್ಚಾಗಿರಬಾರದು. ಅವು ಹೆಚ್ಚಿ ದಷ್ಟೂ ಮಕ್ಕಳು ಅವುಗಳನ್ನತಿಕ್ರಮಿಸುವ ಸಂಭವವು ಹೆಚ್ಚು.

(*b*) ನಿಯಮಗಳು ಯಾವಿಗೂ ಸಂದೇಹವನ್ನು ಹುಟ್ಟಿಸದಂತೆ ಇರಬೇಕು. ಮತ್ತು ಅವುಗಳನ್ನು ಖಂಡಿತವಾಗಿ ಆಚರಣೆಗೆ ತರಬೇಕು.

(*c*) ಈ ನಿಯಮಗಳಾವುವೂ ಮಕ್ಕಳ ಸ್ವಭಾವಕ್ಕೆ ವಿರುದ್ಧವಾಗಿರಬಾರದು.

2. ಉಪಾಧ್ಯಾಯರ ಅಧಿಕಾರ--ಇದು ತಿದ್ದುವಿಕೆಯ ಕೆಲಸಕ್ಕೆ ಬಹು ಮುಖ್ಯ. ಈ ಅಧಿಕಾರವು ಉಪಾಧ್ಯಾಯರಿಗೆಲ್ಲಾ ಕೊಡಲ್ಪಟ್ಟಿದೆ. ಅದನ್ನು ಅವರು ವಿವೇಕದಿಂದ ಉಪಯೋಗಿಸಿಕೊಳ್ಳುತ, ಮಕ್ಕಳನ್ನು ಪೂರ್ಣವಾಗಿ ತಮ್ಮಧೀನದಲ್ಲಿಟ್ಟುಕೊಳ್ಳಬೇಕು. ಚಿಕ್ಕಂದಿನಲ್ಲಿ ಈ ಅಧಿಕಾರವನ್ನು ಕಠಿಣವಾಗಿ ಚಲಾಯಿಸಬೇಕು. ಬರುತ ಬರುತ ಅಂದರೆ ಹುಡುಗನಿಗೆ ಆತ್ಮನಿಯಮನವು ಹೆಚ್ಚುತ ಹೆಚ್ಚುತ ಈ ಅಧಿಕಾರವನ್ನು ಕಡಿಮೆಯಾಗಿ ಉಪಯೋಗಿಸಬೇಕು. ಈ ಅಧಿಕಾರವನ್ನು ಯುಕ್ತವಾಗಿ ನಡೆಯಿಸಬೇಕಾದರೆ ಮೇಲೆ ಬರೆಸಿದ ಲಕ್ಷಣಗಳೆಲ್ಲಾ ಉಪಾಧ್ಯಾಯರಲ್ಲಿರಬೇಕು.

3. ಮಕ್ಕಳ ಒಟ್ಟು ಅಭಿಪ್ರಾಯ—ಸ್ಕೂಲಿನಲ್ಲಿರುವ ಮಕ್ಕಳ ಅಭಿಪ್ರಾಯವು ಉಪಾಧ್ಯಾಯರಿಗೆ ಅನುಕೂಲವಾಗಿರಬೇಕು ಹೀಗಿದ್ದರೆ ಉಪಾಧ್ಯಾಯರಿಗೆ ವಿರುದ್ಧವಾಗಿ ನಡೆಯಲು ಮಕ್ಕಳು ಹೆದರುವರು. ಒಂದುವೇಳೆ ಒಬ್ಬರು ಹಾಗೆ ನಡೆದರೆ ಉಳಿದವರೆಲ್ಲಾ ಸೇರಿ ಅವನನ್ನು ತಾವೇ ದಾರಿಗೆ ತಂದುಕೊಳ್ಳುವರು. ಇದಕ್ಕೆ ಬದಲಾಗಿ ಸ್ಕೂಲಿನ ಒಟ್ಟು ಅಭಿಪ್ರಾಯವು ಉಪಾಧ್ಯಾಯರಿಗೆ ಪ್ರತಿಕೂಲವಾಗಿದ್ದರೆ ತಿದ್ದುವಿಕೆಯ ಕೆಲಸವು ಬಹಳ ಕಷ್ಟವಾಗುವುದು ಇಂತಹ ಸಂದರ್ಭದಲ್ಲಿ ಉಪಾಧ್ಯಾಯರಿಗೆ ವಿರುದ್ಧವಾಗಿ ನಡೆಯುವವರನ್ನು ಇವರು ಪ್ರೋತ್ಸಾಹಿಸುವುದರಿಂದ ತಿದ್ದುವಿಕೆಯ ಕೆಲಸವು ಕೆಡುವುದು.

ಒಳ್ಳೇ ತಿದ್ದುವಿಕೆಯ ಸ್ವರೂಪ

(1) ಏಕರೀತಿಯಾದ ತಿದ್ದುವಿಕೆಯ ಕ್ರಮವು ಒಳ್ಳೆಯದು. ಸ್ವೇಚ್ಛೆಯಾಗಿ ನಡೆಯುವುದು ಒಳ್ಳೇ ತಿದ್ದುವಿಕೆಯಲ್ಲಿ ಉಪಾಧ್ಯಾಯರಿಗೆ ಸಹಾಯಮಾಡುವುದಿಲ್ಲ.

(2) **ತಿದ್ದುವಿಕೆಯು ಮಕ್ಕಳ ಸ್ವಭಾವಕ್ಕೆ ತಕ್ಕಂತಿರಬೇಕು**—ತಿದ್ದುವಿಕೆಯ ಕ್ರಮವು ಸಹಜವಾಗಿರಬೇಕಾದರೆ ತಿದ್ದುವಿಕೆಗಾಗಿ ಉಪಾಧ್ಯಾಯರು ಅನುಸರಿಸಬೇಕಾದ ದಾರಿಯೆಲ್ಲಾ ಮಕ್ಕಳ ಸ್ವಭಾವಕ್ಕನುಕೂಲವಾಗಿರಬೇಕು.

(3) ತಿದ್ದುವಿಕೆಯ ಕ್ರಮದಲ್ಲಿಅತಿಯಾದ ಪ್ರಯತ್ನವು ಕಾಣುತಿರಬಾರದು. ಒಳ್ಳೆಯ ಮಾರ್ಗದಲ್ಲಿ ಸಂಪಾದಿಸಿದ ತಿದ್ದುವಿಕೆಯು ವಿಶೇಷ ಪ್ರಯತ್ನವನ್ನಪೇಕ್ಷಿಸುವುದಿಲ್ಲ. ಸಣ್ಣ ಊರಿಗೆ 100 ಜನ ಪೋಲೀಸಿನವರನ್ನಿಟ್ಟು ಪ್ರಜಾಸಂರ

ಕ್ಷಣೆಯನ್ನು ಮಾಡುವಂತೆ, ಅತಿಪ್ರಯತ್ನದಿಂದ ಸಂಪಾದಿಸಿದ ತಿದ್ದುವಿಕೆಯು ಶ್ಲಾಘ್ಯವಲ್ಲ.

(4) ಮಕ್ಕಳನ್ನು ಪ್ರೀತಿಸುವುದರಿಂದ ತಿದ್ದುವಿಕೆಯನ್ನು ಸಂಪಾದಿಸುವುದು ಉತ್ತಮ.

(5) ತಿದ್ದುವಿಕೆಯ ಕ್ರಮದಲ್ಲಿ ಪಕ್ಷಪಾತವಿರಲೇಕೂಡದು. ಯಾವುದಾದರೊಂದು ಪಾಠಶಾಲೆಯಲ್ಲಿ ತಿದ್ದುವಿಕೆಯು ಸರಿಯಾಗಿದೆಯೋ ಇಲ್ಲವೇ ಎಂಬುವುದನ್ನು ಮೇಲೆ ನೋಡಿದ ಮಾತ್ರಕ್ಕೆ ಹೇಳಿಬಿಡಬಹುದು. ಈ ಬಾಹ್ಯಚಿಹ್ನೆಗಳಾವುವೆಂದರೆ—

(1) ಪಾಠಶಾಲೆಯಲ್ಲಿ ಯಾವಾಗಲೂ ಗದ್ದಲವಿಲ್ಲದಿರುವುದು.

(2) ಒಂದು ಪಾಠವನ್ನು ಮುಗಿಸಿ ಮತ್ತೊಂದು ಪಾಠ ನಡೆಸುವುದಕ್ಕೆ ಮುಂಚೆಯೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡುವುದರಲ್ಲಿಯೂ ಗಂಭೀರವಾಗಿಯೂ ಕಾಲಕಳೆಯದಪರಾಗಿಯೂ ಇರಬೇಕು.

(3) ಉಪಾಧ್ಯಾಯರ ಅಪ್ಪಣೆಯನ್ನು ಮಕ್ಕಳು ಥಟ್ಟನೆ ಸಂತೋಷದಿಂದ ನಡೆಸುತ್ತಿರಬೇಕು.

(4) ಪಾಠವಿಷಯದಲ್ಲಿ ಮಕ್ಕಳು ಶ್ರದ್ಧೆಯನ್ನೂ, ಚಟುವಟಿಕೆಯನ್ನೂ ಇಟ್ಟಿರಬೇಕು.

(5) ಮಕ್ಕಳು ಪ್ರಾಮಾಣಿಕರಾಗಿರುವುದು.

(6) ದಂಡನೆಯು ಅತಿಕಡಿಮೆಯಾಗಿರುವುದು.

ತಿದ್ದುವಿಕೆಯನ್ನು ಪಾಠಶಾಲೆಯಲ್ಲಿ ಕಾಪಾಡಿಕೊಳ್ಳಬೇಕಾದರೆ ಕೆಲವು ಸಾಮಾನ್ಯ ನಿಯಮಗಳನ್ನು ಹೇಳಬಹುದು. ಯಾವುವೆಂದರೆ—

(1) ಉಪಾಧ್ಯಾಯರು ತಮ್ಮ ಅಧಿಕಾರವನ್ನು ಖಂಡಿತವಾಗಿ ನಡೆಯಿಸಬೇಕು. ಮಕ್ಕಳು ವಿಚಾರಮಾಡದೆಯೇ ಅವರ ಅಪ್ಪಣೆಯನ್ನು ಅನುಸರಿಸಬೇಕು.

(2) ತರಗತಿಯಲ್ಲಿರುವಾಗಲು ಉಪಾಧ್ಯಾಯರು ಬಹಳ ಎಚ್ಚರಿಕೆಯಿಂದಿರಬೇಕು ಅಂದರೆ ಎಲ್ಲಿ ಏನು ನಡೆಯುತ್ತಿದೆ ಎಂಬುವುದನ್ನು ಥಟ್ಟನೆ ತಿಳಿಯುತ್ತಿರಬೇಕು. ಇದಕ್ಕಾಗಿ ಅವರ ಕಣ್ಣು ಕಿವಿ ಸಹ ಚುರುಕಾಗಿರಬೇಕು.

ಮೆಲ್ಲಗೆ ಗಂಭೀರವಾಗಿ ಮಾತನಾಡಬೇಕು. ಎಷ್ಟು ಬೇಕೋ ಅಷ್ಟಕ್ಕೆ ಹೆಚ್ಚಾದ ಮಾತನ್ನು ವ್ಯಯಮಾಡಬಾರದು.

ಸರ್ವದಾ ಮಕ್ಕಳಿಗೆ ಕೆಲಸ ಕೊಟ್ಟಿರಬೇಕೇ ಹೊರತು ಅವರಿಗೆ ಸೋಮಾರಿತನಕ್ಕವಕಾಶಕೊಡಬಾರದು.

ಚನ್ನಾಗಿ ಬೋಧಿಸಬೇಕು. ಅಂದರೆ ಪ್ರಶ್ನೆಗಳನ್ನು ಕೇಳುತ್ತಾ ನಿದರ್ಶನಗಳನ್ನು ಕೊಡುತ್ತಾ ಪಾಠದಲ್ಲಿ ಆದರವನ್ನು ಹುಟ್ಟಿಸಿ ಹೊಸ ವಿಷಯುಗಳನ್ನೂ ತಿಳಿಸಬೇಕು.

ಮಕ್ಕಳ ಪ್ರೀತಿಯನ್ನೂ ಅವರ ಗೌರವವನ್ನೂ ಸಂಪಾದಿಸಬೇಕು. ತಿದ್ದುವಿಕೆಯನ್ನುಂಟುಮಾಡುವುದರಲ್ಲಿ ಅನುಕೂಲವಾಗಿ ಕೆಲವು ಗುಣಗಳು ಮಕ್ಕಳಿಲ್ಲಧೆಯೆಂದು ಹಿಂದೆ ಬರೆಸಿಧೆಯಷ್ಟೆ. ಇವುಗಳಲ್ಲೆಲ್ಲಾ ಆಶೆಯೂ ಭಯವೂ ಮುಖ್ಯವಾದುವುಗಳು. ಚಿಕ್ಕತನದಲ್ಲಿ ಕೆಲಸ ಮಾಡಿಸಬೇಕಾದರೆ ಮೊದಲಿಂದಲೂ ಈ ಸಹಾಯಗಳನ್ನು ಉಪಯೋಗಿಸಿಕೊಳ್ಳಬೇಕಾಗುವುದು. ಆದ್ದರಿಂದ ಅವುಗಳ ಸ್ವರೂಪವನ್ನು ಸ್ವಲ್ಪ ವಿಶದವಾಗಿ ವಿಚಾರ ಮಾಡಬೇಕು. ಆಶೆಯನ್ನು ತೋರಿಸಿ ಕೆಲಸ ಮಾಡಿಸುವುದಕ್ಕೆ ಬಹುಮಾನ ಕೊಟ್ಟು ಕೆಲಸ ಮಾಡಿಸುವುದೆಂದು ಹೆಸರು. ಭಯದಿಂದ ಕೆಲಸ ಮಾಡಿಸುವುದಕ್ಕೆ ದಂಡನೆಯಿಂದ ಕೆಲಸ ಮಾಡಿಸುವುದೆಂದು ಹೆಸರು.

ಬಹುಮಾನ:— ಬಹುಮಾನವೆಂದರೆ ಯಾವುದಾದರೊಂದು ರೂಪದಲ್ಲಿ ಸಂತೋಷವನ್ನುಂಟುಮಾಡುವುದು. ಈ ಬಹುಮಾನದ ಬೆಲೆಯು ಬಹುಮಾನ ಕೊಡುವವರ ಯೋಗ್ಯತೆಯಂತೆ ಹೆಚ್ಚು ಕಡಿಮೆಯಾಗುವುದು.

(೧) ಸ್ಥೂಲವಾದ ಪದಾರ್ಥವೊಂದು ತಮಗೆ ಸಿಕ್ಕುವುದೆಂಬ ಆಶೆಯಿಂದ ಮಕ್ಕಳು ಕೆಲಸ ಮಾಡುವುದುಂಟು.

(೨) ಇತರರಗಿಂತಲೂ ಹೆಚ್ಚಾದ ಶ್ಲಾಘನೆಯು ತಮ್ಮದಾಗಲೆಂದು ಕೆಲಸ ಮಾಡುವರು.

(೩) ತಾಯಿತಂದೆಗಳಿಗೆ ಅಥವಾ ಉಪಾಧ್ಯಾಯರಿಗೆ ತೃಪ್ತಿಯಾಗಲೆಂದು ಕೆಲಸ ಮಾಡುವುದುಂಟು.

(4) ಕೆಲಸ ಮಾಡಿ ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಉದ್ದೇಶದಿಂದಲೂ ಕೆಲಸ ಮಾಡುವುದುಂಟು

ಇವುಗಳಲ್ಲೆಲ್ಲಾ ಸಾಕ್ಷಾತ್ ಸ್ವಪ್ರಯೋಜನಕ್ಕಾಗಿಯೇ ಕೆಲಸ ಮಾಡುವುದೂ ಕನಿಷ್ಠವಾದುದು. ಪರರ ಪ್ರಯೋಜನಕ್ಕೆ ಮಾಡುವುದೂ ಮಧ್ಯಮಪಕ್ಷ, ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕೆಲಸ ಮಾಡುವುದು ಸರ್ವೋತ್ತಮವಾದುದು

ಬಹುಮಾನಗಳು ನಾನಾ ವಿಧ ಅವುಗಳಲ್ಲಿ ಮುಖ್ಯವಾದುವೂ ಇನಾಮು ಕೊಡುವುದು. ಇದು ಮಕ್ಕಳಿಂದ ಕೆಲಸ ಮಾಡಿಸುವುದಕ್ಕೆ ಸಾಧಾರಣವಾದುಪಾಯ. ಇನಾಮನ್ನು ಕೊಡಕೂಡದೆಂದು ಕೆಲವರು ಅಭಿಪ್ರಾಯಪಡುವರು. ಅವರು ಹೇಳುವ ಕಾರಣಗಳಾವುವೆಂದರೆ:—

(1) ಇನಾಮನ್ನು ಕೊಡುವುದು ಲಘುವಾದ ಉದ್ದೇಶವನ್ನು ತೋರಿಸಿದಂತಾಗುವುದು, ಲಂಚ ಕೊಡುವುದಕ್ಕೆ ಸಮಾನ

(2) ಯಾವ ತರಗತಿಯಲ್ಲಾಗಲಿ ಇನಾಮು ದೊರೆಯುವ ಸಂಭವವಿರುವಂಥವರ ಸಂಖ್ಯೆಯು ಅತಿ ಕಡಿಮೆಯಾಗಿರುವುದು. ಈ ಕಾರಣದಿಂದ ಇನಾಮನ್ನು ಪಡೆಯುವುದಕ್ಕಾಗಿ ಕೆಲವು ಜನ ಪ್ರಯತ್ನಿಸುವರೇ ಹೊರತು ಉಳಿದವರು ನಿರಾಶೆಯಿಂದ ಸುಮ್ಮನಿರುವರು ಆದ್ದರಿಂದ ಇನಾಮು ಕೊಡುವುದರಿಂದ ತರಗತಿಯ ಏಕದೇಶಕ್ಕೆ ಉದ್ಯೋಗವನ್ನು ಕಲಿಸಬಹುದಾಯಿತೇ ಹೊರತು ಎಲ್ಲರಿಗೂ ಉದ್ಯೋಗವನ್ನು ಕಲಿಸಲಾಗುವುದಿಲ್ಲ.

(3) ಎಂತಹವರಿಗೆ ಇನಾಮಿನ ಆಶೆಯಿಲ್ಲದಿದ್ದರೂ ಕೆಲಸ ಮಾಡುತ್ತಾರೆಯೋ ಅವರಿಗೇ ಪ್ರಾಯಶಃ ಇನಾಮು ದೊರೆಯುವುದು. ಇದರಿಂದ ಇನಾಮು ಕೊಟ್ಟರೂ ಪರಿಣಾಮದಲ್ಲಿ ಕೊಡದಂತೆಯೇ.

(4) ಇನಾಮು ಕೊಡುವುದಾದರೆ ಅದಕ್ಕಾಗಿ ಪ್ರಯತ್ನಿಸುವವರಲ್ಲಿ ಪರಸ್ಪರ ಅಸೂಯಾದಿ ದುರ್ಗುಣಗಳು ಹುಟ್ಟಲು ಅವಕಾಶವಾಗಬಹುದು.

ಇದುವರೆಗೆ ಹೇಳಿದ ದೋಷಗಳೂ ಇನಾಮು ಕೊಡುವುದರಲ್ಲಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಈ ದೋಷಗಳ ಕಾರಣದಿಂದ ಇನಾಮುಗಳನ್ನು ಸ್ಕೂಲಿನಲ್ಲಿ ಕೊಡಲೇಬಾರದೆಂದು ಹೇಳಕೂಡದು ಏಕೆಂದರೆ:—

(1) ಇನಾಮು ಕೊಡುವುದು ಲಘುವಾದ ಉದ್ದೇಶವಾದರೂ ಚಿಕ್ಕತನಕ್ಕೆ ಸರಿಯಾದುದು, ಮೊದಲೇ ಗುರುವಾದ ಉದ್ದೇಶಗಳಿಗಾಗಿ ಕೆಲಸ ಮಾಡಿಸುವುದು ಸಾಧ್ಯವಲ್ಲದ್ದರಿಂದ ಇನಾಮುಗಳನ್ನು ಕೊಡುತ್ತಿದ್ದು ಬರುತಬರುತ ಅವುಗಳನ್ನು ಬಿಡಬಹುದು.

(2) ಉಪಾಧ್ಯಾಯರೂ ಎಚ್ಚರಿಕೆಯಿಂದಿದ್ದರೆ ಇನಾಮು ಕೊಡುವುದರಿಂದ ಮಕ್ಕಳಲ್ಲಿ ಸ್ಪರ್ಧೆಯನ್ನು ಹುಟ್ಟಿಸಿ ಅವರು ಉದ್ಯೋಗಿಗಳಾಗುವಂತೆಯೂ ಅವರಲ್ಲಿ ಅಸೂಯಾದಿ ದುರ್ಗುಣಗಳೂ ತಲೆದೋರದಂತೆಯೂ ಮಾಡಬಹುದು.

(3) ಲೋಕದಲ್ಲಿ ಉದ್ಯೋಗಿಗಳಿಗೆ ಹೆಚ್ಚು ಪ್ರಯೋಜನ ದೊರೆಯುವುದು ಅನುಭವಸಿದ್ಧವಾಗಿಧೆ. ನಮ್ಮ ಪಾಠಶಾಲೆಯೂ ಈ ಪ್ರಪಂಚದಂತೆಯೇ ಹೊರತು ಭಿನ್ನವಾದ್ದಲ್ಲ. ಆದ್ದರಿಂದ ಹೆಚ್ಚು ಉದ್ಯೋಗಕ್ಕೆ ಹೆಚ್ಚು ಪ್ರಯೋಜನ ದೊರೆಯುವುದು ಅಸಹಜವೆಂದು ಹೇಳುವುದು ಹೇಗೆ?

(4) ಇನಾಮು ಕೊಡುವುದರಿಂದ ಮಡ್ಡಿಗಳಿಗೆ ಕೆಲಸ ಕಲಿಯಿಸುವುದಾಗದಿದ್ದರೂ ಸಾಮರ್ಥ್ಯವಿದ್ದು ಕೆಲಸ ಮಾಡದವರಿಗೆ ಇದು ಉತ್ತೇಜಕವಾಗಿ ಉದ್ಯೋಗವನ್ನು ಕಲಿಸಿಕೊಡುವುದು.

ಸಾಮರ್ಥ್ಯವಿದ್ದು ಕೆಲಸ ಮಾಡುವವರಿಗೆ ಇನಾಮು ಕೊಡುವುದರಿಂದ ಆಲಸ್ಯವನ್ನವಲಂಬಿಸದೆ ಏಕರೀತಿಯಾಗಿ ಉದ್ಯೋಗಿಗಳಾಗಿರಬೇಕೆಂಬ ಅಭಿಲಾಷೆಯನ್ನು ಹುಟ್ಟಿಸುವುದು

ಈ ಕಾರಣಗಳಿಂದ ಇನಾಮುಗಳನ್ನು ಕೊಟ್ಟು ಪಾಠಶಾಲೆಯಲ್ಲಿ ಕೆಲಸ ಮಾಡಿಸಬಹುದು. ಅವುಗಳ ವಿನಿಯೋಗದಲ್ಲಿ ಕೆಲವು ವಿಷಯಗಳನ್ನು ಜ್ಞಾಪಕದಲ್ಲಿಡಬೇಕಾಗುವುದು ಯಾವುವೆಂದರೆ:—

(1) ತರಗತಿಯಲ್ಲಿರುವವರಿಗೆಲ್ಲರಿಗೂ ಬಹುಮಾನವನ್ನು ತೋರಿಸಬೇಕೇ ಹೊರತು ಏಕದೇಶಕ್ಕೆ ಮಾತ್ರ ಉದ್ದಿಷ್ಟವಾದ ಬಹುಮಾನಗಳನ್ನಿಡಕೂಡದು.

(4) ಕೆಲಸ ಮಾಡಿ ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಉದ್ದೇಶದಿಂದಲೂ ಕೆಲಸ ಮಾಡುವುದುಂಟು

ಇವುಗಳಲ್ಲೆಲ್ಲಾ ಸಾಕ್ಷಾತ್ ಸ್ವಪ್ರಯೋಜನಕ್ಕಾಗಿಯೇ ಕೆಲಸ ಮಾಡುವುದೂ ಕನಿಷ್ಠವಾದುದು. ಪರರ ಪ್ರಯೋಜನಕ್ಕೆ ಮಾಡುವುದೂ ಮಧ್ಯಮಪಕ್ಷ. ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕೆಲಸ ಮಾಡುವುದು ಸರ್ವೋತ್ತಮವಾದುದು.

ಬಹುಮಾನಗಳು ನಾನಾ ವಿಧ ಅವುಗಳಲ್ಲಿ ಮುಖ್ಯವಾದುವು ಇನಾಮು ಕೊಡುವುದು. ಇದು ಮಕ್ಕಳಿಂದ ಕೆಲಸ ಮಾಡಿಸುವುದಕ್ಕೆ ಸಾಧಾರಣವಾದುಪಾಯ. ಇನಾಮನ್ನು ಕೊಡಕೂಡದೆಂದು ಕೆಲವರು ಅಭಿಪ್ರಾಯಪಡುವರು. ಅವರು ಹೇಳುವ ಕಾರಣಗಳಾವುವೆಂದರೆ:—

(1) ಇನಾಮನ್ನು ಕೊಡುವುದು ಲಘುವಾದ ಉದ್ದೇಶವನ್ನು ತೋರಿಸಿದಂತಾಗುವುದು, ಲಂಚ ಕೊಡುವುದಕ್ಕೆ ಸಮಾನ

(2) ಯಾವ ತರಗತಿಯಲ್ಲಾಗಲಿ ಇನಾಮು ದೊರೆಯುವ ಸಂಭವವಿರುವಂಥವರ ಸಂಖ್ಯೆಯು ಅತಿ ಕಡಿಮೆಯಾಗಿರುವುದು. ಈ ಕಾರಣದಿಂದ ಇನಾಮನ್ನು ಪಡೆಯುವುದಕ್ಕಾಗಿ ಕೆಲವು ಜನ ಪ್ರಯತ್ನಿಸುವರೇ ಹೊರತು ಉಳಿದವರು ನಿರಾಶೆಯಿಂದ ಸುಮ್ಮನಿರುವರು ಆದ್ದರಿಂದ ಇನಾಮು ಕೊಡುವುದರಿಂದ ತರಗತಿಯ ಏಕದೇಶಕ್ಕೆ ಉದ್ಯೋಗವನ್ನು ಕಲಿಸಬಹುದಾಯಿತೇ ಹೊರತು ಎಲ್ಲರಿಗೂ ಉದ್ಯೋಗವನ್ನು ಕಲಿಸಲಾಗುವುದಿಲ್ಲ.

(3) ಎಂತಹವರಿಗೆ ಇನಾಮಿನ ಆಶೆಯಿಲ್ಲದಿದ್ದರೂ ಕೆಲಸ ಮಾಡುತ್ತಾರೆಯೋ ಅವರಿಗೇ ಪ್ರಯಶಃ ಇನಾಮು ದೊರೆಯುವುದು. ಇದರಿಂದ ಇನಾಮು ಕೊಟ್ಟರೂ ಪರಿಣಾಮದಲ್ಲಿ ಕೊಡದಂತೆಯೇ.

(4) ಇನಾಮು ಕೊಡುವುದಾದರೆ ಅದಕ್ಕಾಗಿ ಪ್ರಯತ್ನಿಸುವವರಲ್ಲಿ ಪರಸ್ಪರ ಅಸೂಯಾದಿ ದುರ್ಗುಣಗಳು ಹುಟ್ಟಲು ಅವಕಾಶವಾಗಬಹುದು.

ಇದುವರಿಗೆ ಹೇಳಿದ ದೋಷಗಳೂ ಇನಾಮು ಕೊಡುವುದರಲ್ಲಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಈ ದೋಷಗಳ ಕಾರಣದಿಂದ ಇನಾಮುಗಳನ್ನು ಸ್ಕೂಲಿನಲ್ಲಿ ಕೊಡಲೇಬಾರದೆಂದು ಹೇಳಕೂಡದು ಏಕೆಂದರೆ:—

(1) ಇನಾಮು ಕೊಡುವುದು ಲಘುವಾದ ಉದ್ದೇಶವಾದರೂ ಚಿಕ್ಕತನಕ್ಕೆ ಸರಿಯಾದುದು, ಮೊದಲೇ ಗುರುವಾದ ಉದ್ದೇಶಗಳಿಗಾಗಿ ಕೆಲಸ ಮಾಡಿಸುವುದು ಸಾಧ್ಯವಲ್ಲದ್ದರಿಂದ ಇನಾಮುಗಳನ್ನು ಕೊಡುತ್ತಿದ್ದು ಬರುತಬರುತ ಅವುಗಳನ್ನು ಬಿಡಬಹುದು.

(2) ಉಪಾಧ್ಯಾಯರೂ ಎಚ್ಚರಿಕೆಯಿಂದಿದ್ದರೆ ಇನಾಮು ಕೊಡುವುದರಿಂದ ಮಕ್ಕಳಲ್ಲಿ ಸ್ಪರ್ಧೆಯನ್ನು ಹುಟ್ಟಿಸಿ ಅವರು ಉದ್ಯೋಗಿಗಳಾಗುವಂತೆಯೂ ಅವರಲ್ಲಿ ಅಸೂಯಾದಿ ದುರ್ಗುಣಗಳೂ ತಲೆದೋರದಂತೆಯೂ ಮಾಡಬಹುದು.

(3) ಲೋಕದಲ್ಲಿ ಉದ್ಯೋಗಿಗಳಿಗೆ ಹೆಚ್ಚು ಪ್ರಯೋಜನ ದೊರೆಯುವುದು ಅನುಭವಸಿದ್ಧವಾಗಿದೆ. ನಮ್ಮ ಪಾಠಶಾಲೆಯೂ ಈ ಪ್ರಪಂಚದಂತೆಯೇ ಹೊರತು ಭಿನ್ನವಾದ್ದಲ್ಲ. ಆದ್ದರಿಂದ ಹೆಚ್ಚು ಉದ್ಯೋಗಕ್ಕೆ ಹೆಚ್ಚು ಪ್ರಯೋಜನ ದೊರೆಯುವುದು ಅಸಹಜವೆಂದು ಹೇಳುವುದು ಹೇಗೆ?

(4) ಇನಾಮು ಕೊಡುವುದರಿಂದ ಮಡ್ಡಿಗಳಿಗೆ ಕೆಲಸ ಕಲಿಯಿಸುವುದಾಗದಿದ್ದರೂ ಸಾಮರ್ಥ್ಯವಿದ್ದು ಕೆಲಸ ಮಾಡದವರಿಗೆ ಇದು ಉತ್ತೇಜಕವಾಗಿ ಉದ್ಯೋಗವನ್ನು ಕಲಿಸಿಕೊಡುವುದು.

ಸಾಮರ್ಥ್ಯವಿದ್ದು ಕೆಲಸ ಮಾಡುವವರಿಗೆ ಇನಾಮು ಕೊಡುವುದರಿಂದ ಆಲಸ್ಯವನ್ನವಲಂಬಿಸದೆ ಏಕರೀತಿಯಾಗಿ ಉದ್ಯೋಗಿಗಳಾಗಿರಬೇಕೆಂಬ ಅಭಿಲಾಷೆಯನ್ನು ಹುಟ್ಟಿಸುವುದು

ಈ ಕಾರಣಗಳಿಂದ ಇನಾಮುಗಳನ್ನು ಕೊಟ್ಟು ಪಾಠಶಾಲೆಯಲ್ಲಿ ಕೆಲಸ ಮಾಡಿಸಬಹುದು. ಅವುಗಳ ವಿನಿಯೋಗದಲ್ಲಿ ಕೆಲವು ವಿಷಯಗಳನ್ನು ಜ್ಞಾಪಕದಲ್ಲಿಡಬೇಕಾಗುವುದು ಯಾವುವೆಂದರೆ:—

(1) ಕರಗತಿಯಲ್ಲಿರುವವರಿಗೆಲ್ಲರಿಗೂ ಬಹುಮಾನವನ್ನು ತೋರಿಸಬೇಕೇ ಹೊರತು ಏಕದೇಶಕ್ಕೆ ಮಾತ್ರ ಉದ್ದಿಷ್ಟವಾದ ಬಹುಮಾನಗಳನ್ನಿಡಕೂಡದು.

(2) ಇನಾಮು ಕೊಡುವುದರಲ್ಲಿ ವ್ಯವಸ್ಥೆಯಿರಬೇಕು. ಮನಸ್ಸಿಗೆ ಬಂದಾಗ ಕೊಡುವುದು ಬಾಂದಾಗ ಬಿಡುವುದು ಇದು ಸರಿಯಲ್ಲ. ಕೊಡುವ ಇನಾಮುಗಳನ್ನು ಸಾಕಾದಷ್ಟು ಮುಂಚಿತವಾಗಿ ಪ್ರಕಟಿಸಿ ಅದರೊಡನೆ ಅದಕ್ಕಾವಶ್ಯಕವಾದ ನಿಯಮಗಳನ್ನು ಮಾಡಿ ಕಾಲವದಗಿದಾಗ ಅದಕ್ಕನುಸಾರವಾಗಿ ನಡೆಯಬೇಕು.

(3) ತುಚ್ಛವಾದ ಇನಾಮು ಕೊಡುವುದರಿಂದ ಫಲ ಸಾಧನೆಯಾಗುವುದಿಲ್ಲ. ಉದಾಹರಣೆ ಒಂದುಗಜ ಕಾಗದ.

(4) ಇನಾಮುಗಳ ವಿನಿಯೋಗದಲ್ಲಿ ಲೇಶಮಾತ್ರವೂ ಪಕ್ಷಪಾತವಿರಕೂಡದು. ಇದಕ್ಕಾಗಿಯೇ ಪ್ರಾರಂಭದಲ್ಲೇ ನಿಯಮಗಳನ್ನು ಮಾಡಬೇಕು. ವಿನಿಯೋಗ ಸಂಭವಕಾಲದಲ್ಲಿ ನಿಯಮಗಳನ್ನು ಮಾಡಿದರೆ ಪಕ್ಷಪಾತ ಶಂಕೆ ಹುಟ್ಟುವುದು.

(5) ಇನಾಮು ಕೊಡುವುದರಲ್ಲಿ ಉದ್ಯೋಗಕ್ಕೆ ಸಿಕ್ಕುವಂತೆ ಮಾಡಬೇಕೇ ಹೊರತು ಹುಡುಗರಿಗೆ ಪ್ರಯತ್ನವಿಲ್ಲದೆ ತಾನಾಗಿಯೇ ಇರುವ ಬುದ್ಧಿವಂತಿಕೆಗೆ ಸಲ್ಲುವಂತಿರಬಾರದು.

೨. ಯೋಗ್ಯತಾಪತ್ರಿಕೆ— ಇದರಲ್ಲಿ ಮುಖ್ಯವಾಗಿ ವಿದ್ಯಾರ್ಥಿಯ ಯೋಗ್ಯತೆಯನ್ನೂ ನಡತೆಯನ್ನೂ ತಿಳಿಸುವುದುಂಟು. ಯೋಗ್ಯರಾದ ಹುಡುಗರಲ್ಲಿ ಕೆಲವರಿಗೆ ಮಾತ್ರವಲ್ಲದೆ ಎಲ್ಲರಿಗೂ ಇದನ್ನು ಕೊಡಬಹುದಾದ್ದರಿಂದ ಹುಡುಗರಲ್ಲಿ ಕೆಲವರು ಮಾತ್ರವಲ್ಲದೆ ಇತರರೂ ಇದಕ್ಕೆ ಪ್ರಯತ್ನಪಡುವರು. ಆದ್ದರಿಂದ ಇದು ಉತ್ತಮವಾದ ಬಹುಮಾನವೆಂದು ಹೇಳಬಹುದು. ಆದರೆ ಸಣ್ಣಮಕ್ಕಳಿಗೆ ಪ್ರಯೋಜನಕರವಲ್ಲ. ಯೋಗ್ಯತಾಪತ್ರಿಕೆಗಳಿಂದ ಮಕ್ಕಳಲ್ಲಿ ಉದ್ಯೋಗವೂ ನಡತೆಯೂ ಉಂಟಾಗುವುವು. ಇದಲ್ಲದೆ ಆಗಾಗ್ಗೆ ಈ ಪತ್ರಿಕೆಗಳನ್ನು ಕೊಟ್ಟು ಮಕ್ಕಳ ತಾಯಿ ತಂದೆಗಳಿಗೆ ಸ್ಕೂಲಿನ ಕೆಲಸವನ್ನು ತಿಳಿಯಪಡಿಸುವುದರಿಂದ ಉಪಾಧ್ಯಾಯರಿಗೆ ಒಂದು ಸಹಾಯ ಹೆಚ್ಚುವುದು.

(ಸಶೇಷ;)

❋ ವಿದ್ಯಾದಾಯಿನಿ ❋

(A Monthly Journal.)

ಭಾಗ ೨] ಜುಲೈ—೧೯೧೪ [ಸಂಚಿಕೆ ೭

ಮುತ್ತುಗಳ ವಿಚಾರ.

ಸಿಂಹಳದ್ವೀಪಕ್ಕೆ ಉತ್ತರದಲ್ಲಿ ಅಂದರೆ ಇಂಡಿಯಾಕ್ಕೂ ಸಿಂಹಳದ್ವೀಪಕ್ಕೂ ನಡುವೆ ಸಮುದ್ರದಲ್ಲಿ ವಿಸ್ತಾರವಾದ ಕೆಲವು ಪ್ರದೇಶಗಳಿರುವುವು ಅವುಗಳಲ್ಲಿ ಮುಖ್ಯವಾದುವುಗಳು ಸಿಂಹಳದ್ವೀಪಕ್ಕೆ ಸುಮಾರು ಇಪ್ಪತ್ತು ಮೈಲಿಗಳ ದೂರದಲ್ಲಿವೆ ಆ ಸ್ಥಳಗಳು ಸರ್ವದಾ ನಿರ್ಜನವಾಗಿದ್ದರೂ ಪ್ರತಿವರ್ಷದ ಫೆಬ್ರುವರಿ ಮಾರ್ಚಿ ತಿಂಗಳುಗಳಲ್ಲಿ ಮಾತ್ರ ಎಲ್ಲಿ ನೋಡಿದರೂ ನಡುಗಡಲಿನಲ್ಲಿ ಹಲವು ದೊಡ್ಡ ಪಟ್ಟಣಗಳೇ ತೇಲಾಡುತ್ತಿರುವುವೋ ಎಂಬಂತೆ ತೋರುವುದು. ಆಗ ಅಲ್ಲಿಗೆ ಪ್ರಪಂಚದ ನಾನಾಭಾಗಗಳಿಂದ ನಾನಾವಿಧವಾದ ಭಾಷೆಗಳನ್ನಾಡುವ ಹಲವು ಮತಗಳ ಜನರು ಸೇರುವರು. ಅವರು ರೂಪದಲ್ಲೂ ವರ್ಣದಲ್ಲೂ ಯೋಗ್ಯತೆಯಲ್ಲೂ ನಡತೆಯಲ್ಲೂ ಪರಸ್ಪರ ಎಷ್ಟೋ ಭೇದಗಳನ್ನು ಪಡೆದಿರುವರು. ದಿನವೊಂದಕ್ಕೆ ಆರಾಣೆಗಳನ್ನು ಸಂಪಾದಿಸುವಂತಹ ಕೂಲಿಯವನು ಮೊದಲ್ಗೊಂಡು ಘಂಟೆಯೊಂದಕ್ಕೆ ಹತ್ತಾರು ರೂಪಾಯಿಗಳನ್ನು ಸಂಪಾದಿಸಬಲ್ಲ ಕೋಟೀಶ್ವರರು ಕೂಡ ಬಂದಿರುವರು. ಬಡಗಿ, ಕಮ್ಮಾರ, ಅಕ್ಕಸಾಲೆ, ಸೆಟ್ಟಿ, ಪೋಲೀಸಿನವರು, ಗುಮಾಸ್ತೆಯರು, ಮೊದಲಾದ ಹಲವು ಕಸಬಿನವರು ಸೇರಿರುವರು. ಅಂತು ಅವರು ಯಾರೇ ಆಗಲಿ ಪ್ರಪಂಚದ ನಾನಾಭಾಗಗಳಿಂದ ಅವರನ್ನೆಲ್ಲ ತನ್ನ ಬಳಿಗೆ ಬರಮಾಡಿಕೊಂಡದ್ದಾವುದು ? ಆ

ಅಮೂಲ್ಯವಾದ ಮುತ್ತಿನ ಮೀನುಗಳ ಶರೀರಾಂಶದ ಆಕರ್ಷಣಾಶಕ್ತಿಯಲ್ಲವೆ? ಎಷ್ಟು ಹೇಳಿದರೇನು ? ಯಾರಾದರೊಬ್ಬ ಹೊಸಬರು ಅಲ್ಲಿಗೆ ಹೋಗಿ ನೋಡಿದರೆ ಈ ಭೂಲೋಕದಲ್ಲಿರುವ ಸಮಸ್ತ ಜನಾಂಗದವರ ಮಾದರಿಗಳೂ ಸಾಮಾನ್ಯವಾಗಿ ಗೊತ್ತಾಗುವುವು.

ಆಗ ಪ್ರತಿದಿನವೂ ಸಂಜೆ ಆರುಘಂಟೆಗೆ ಗುಂಡುಹಾರುವುದು. ಆಕ್ಷಣವೇ ಮೇಲೆಕಂಡ ಸ್ಥಳಗಳಿಗೆ ದೋಣಿಗಳು ಹೊರಡುವುವು. ಒಂದೊಂದು ದೋಣಿಯಲ್ಲಿ ಸುಮಾರು ಇಪ್ಪತ್ತು ಜನರಿರುವರು. ಅವರಲ್ಲಿ ಹತ್ತುಮಂದಿ ದೋಣಿಯನ್ನು ನಡೆಸುವುದಕ್ಕೂ ಉಳಿದವರು ಸಮುದ್ರದಲ್ಲಿ ಮುಳುಗುವುದಕ್ಕೂ ನಿಯಮಿಸಲ್ಪಟ್ಟಿರತಕ್ಕವರು. ಆದರೆ ಒಂದೊಂದುಸಲಕ್ಕೆ ಐದೈದು ಜನರಂತೆ ಕೆಲಸ ಮಾಡುತ್ತಿರುವಾಗ ಉಳಿದ ಹತ್ತು ಜನರು ಸ್ವಲ್ಪಮಟ್ಟಿಗೆ ಸುಧಾರಿಸಿಕೊಳ್ಳುತ್ತಿರುವರು. ಬೆಳಗಿನ ಜಾವದವೇಳೆಗೆ ಆಯಾಸ್ಥಳಗಳನ್ನು ಸೇರಿದನಂತರ ಮುಳುಗುವ ಕೆಲಸವು ಪ್ರಾರಂಭವಾಗುವುದು. ಪ್ರತಿದೋಣಿಯು ಕೆಳಗಡೆಯೂ ಐದೈದು ಹಗ್ಗಗಳನ್ನು ಇಳಿಯಬಿಟ್ಟಿರುವರು. ಪ್ರತಿಹಗ್ಗಕ್ಕೂ ಒಂದೊಂದು ಕಲ್ಲನ್ನು ಕಟ್ಟಿರುವರು. ಮುಳುಗುವ ಮನುಷ್ಯನು ತಾನು ಆರಿಸುವ ಮುತ್ತಿನ ಚಿಪ್ಪುಗಳನ್ನೆಲ್ಲ ತುಂಬಿಕೊಳ್ಳುವುದಕ್ಕಾಗಿ ಎಡಗೈಯಲ್ಲಿ ಒಂದು ಕುಕ್ಕೆಯನ್ನು ತೆಗೆದುಕೊಳ್ಳುವನು. ಅಥವಾ ಬಲೆಯಂತಿರುವ ಒಂದು ಕಲ್ಲಿಯನ್ನು ಕೊರಳಿಗೆ ತಗಲಿಹಾಕಿಕೊಳ್ಳುವನು. ಮತ್ತು ಬಲಗೈಯಿಂದ ಹಗ್ಗವನ್ನು ಹಿಡಿದು ಆ ಕಲ್ಲಿನಮೇಲೆ ನಿಂತುಕೊಂಡು ಸಮುದ್ರದೊಳಕ್ಕೆ ಇಳಿಯಬೀಳುವನು. ಅವನು ಕಲ್ಲಿನ ಮತ್ತು ಮೈಯ ಭಾರದಿಂದ ಬೇಗ ಕೆಳಕ್ಕೆ ತಲಪಿ ತಕ್ಷಣವೇ ತನ್ನ ಕೈಗೆ ಸಿಕ್ಕುವಷ್ಟು ಮುತ್ತಿನಚಿಪ್ಪುಗಳನ್ನು ಆರಿಸಿಕೊಂಡು ಕೂಡಲೆ ಹಗ್ಗವನ್ನು ಅಲ್ಲಾಡಿಸುವನು. ಆಗ ದೋಣಿಯಲ್ಲಿರುವವರು ಬೇಗ ಇವನನ್ನು ಮೇಲಕ್ಕೆ ಸೇದಿಕೊಳ್ಳುವರು. ಇಷ್ಟು ಕೆಲಸವೆಲ್ಲ ಸುಮಾರು ಎರಡು ಮೂರು ನಿಮಿಷಗಳಲ್ಲೇ ನಡೆದುಹೋಗುವುದು.

ಪ್ರತಿಯೊಬ್ಬ ಕೂಲಿಯೂ ಒಂದುಸಲಕ್ಕೆ ಸುಮಾರು ನೂರು ಮುತ್ತಿನಚಿಪ್ಪುಗಳನ್ನು ತರುತ್ತಾನೆ. ಮತ್ತು ದಿನವೊಂದಕ್ಕೆ ಪ್ರಾಯಶಃ ಐವತ್ತರಿಂದ ನೂರುಸಲದ

ವರೆಗೂ ಮುಳುಗಬಲ್ಲವನಾಗಿರುತ್ತಾನೆ. ಆದರೂ ಆಳವಾದ ಸಮುದ್ರದ ಅಡಿಯಲ್ಲಿ ಅಷ್ಟು ನಿಮಿಷಗಳವರೆಗೆ ಉಸಿರುಕಟ್ಟಿಕೊಂಡಿರುವುದುಕೂಡ ಅತಿಭಯಂಕರವಾದ ಸಾಹಸ. ಹಾಗೆ ಮುಳುಗಿ ಮೇಲಕ್ಕೆ ಬರುವ ಕೂಲಿಗಳನೇಕರ ಮೂಗು ಬಾಯಿಗಳಿಂದ ನೀರು ಮಾತ್ರವಲ್ಲದೆ ಅನೇಕಸಲ ರಕ್ತವೂ ಉಕ್ಕಿ ಸುರಿಯುತ್ತಲಿರುವುದು. ಇಷ್ಟಾದರೂ ಅವರು ಅದನ್ನು ಲಕ್ಷ್ಯಮಾಡುವುದೇ ಇಲ್ಲ. ಆದರೆ ಸಾಗರದ ಅಂತರ್ಜಲದಲ್ಲಿ ಅಡಗಿ ತಮ್ಮ ಭಾಗಕ್ಕೆ ಮೃತ್ಯುಸ್ವರೂಪವಾಗಿರುವ ಮೊಸಳೆ ಮೊದಲಾದ ಕ್ರೂರವಾದ ಜಲಜಂತುಗಳಿಗೆ ಮಾತ್ರ ಪ್ರತಿಕ್ಷಣವೂ ಹೆದರುತ್ತಲಿರುವರು. ಈ ಮುಳುಗುವ ಕೆಲಸವು ಮಧ್ಯಾಹ್ನ ಹನ್ನೆರಡುಘಂಟೆಯು ಗುಂಡುಹಾರುವತನಕ ಅವಿಚ್ಛಿನ್ನವಾಗಿ ನಡೆಯುವುದು. ಬಳಿಕ ಎಲ್ಲರೂ ತಮತಮಗೆ ದೊರೆತ ಮುತ್ತಿನ ನಿಕ್ಷೇಪಗಳೊಡನೆ ದೋಣಿಗಳಲ್ಲಿ ಹಿಂದಿರುಗುವರು.

ಮುತ್ತಿನಚಿಪ್ಪೆಂಬುದು ಒಂದು ಪ್ರಾಣಿಯ ದೇಹವು. ಈ ಎರಡು ಚಿಪ್ಪುಗಳು ಸೇರಿ ಒಂದು ದೇಹವಾಗಿರುತ್ತದೆ. ಈ ಪ್ರಾಣಿಯು ಮೀನಿನಂತೆ ಈಜಾಡತಕ್ಕದ್ದಲ್ಲ. ಇದರ ಎರಡು ಚಿಪ್ಪುಗಳ ನಡುವೆ ಒಳಗಡೆ ಮುತ್ತು ಇರುವುದು. ಸಮುದ್ರದಿಂದ ಈ ಪ್ರಾಣಿಗಳನ್ನು ಹೊರಕ್ಕೆ ತೆಗೆದಾಗ ಅವು ಬದುಕಿದ್ದು ಎರಡು ಚಿಪ್ಪುಗಳೂ ಅಂಟಿಕೊಂಡಿರುವುವು. ಆಗಲೇ ಬಲಾತ್ಕಾರದಿಂದ ಆ ಚಿಪ್ಪುಗಳನ್ನು ಒಡೆದರೆ ಒಳಗಿನ ಮುತ್ತಿಗೆ ಅಪಾಯವಾಗಿ ಅದು ಕೆಟ್ಟುಹೋಗುವುದು. ಆದುದರಿಂದ ನೆಲದಲ್ಲಿ ಆಳವಾದ ಗುಂಡಿಗಳನ್ನು ತೋಡಿ ಚಾಪೆಗಳನ್ನು ಹಾಸಿ ಅಲ್ಲಿ ಆ ಪ್ರಾಣಿಗಳನ್ನು ಹರಡಿ ಪುನಃ ಚಾಪೆಗಳನ್ನು ಹೊದಿಸಿ ಮಣ್ಣನ್ನು ಮುಚ್ಚುವರು. ಹಾಗೆಯೇ ಕೆಲವುಕಾಲ ಬಿಟ್ಟಿದ್ದರೆ ಒಳಗಿನ ಪ್ರಾಣಿಗಳು ಸತ್ತುಹೋಗುವುವು. ಆಗ ಎರಡು ಚಿಪ್ಪುಗಳೂ ಸುಲಭವಾಗಿ ಅಗಲಿಹೋಗುವುವು. ತರುವಾಯ ಒಳಗಿನ ಮುತ್ತುಗಳನ್ನು ತೆಗೆದುಕೊಳ್ಳುವರು.

ಮುತ್ತಿನ ಬೆಲೆಯು ಅದರ ಬಣ್ಣ, ಪ್ರಕಾಶ, ಪದರಗಳು, ಗಾತ್ರ, ಇವುಗಳ ಮೇಲೆ ನಿರ್ಧರಿಸಲ್ಪಡುತ್ತದೆ. ಸ್ವಾತೀ ಮಳೆಯಲ್ಲಿ ಮುತ್ತಿನಚಿಪ್ಪುಗಳಲ್ಲಿ ಬಿದ್ದ ಮಳೆಯಹನಿಗಳೇ ಮುತ್ತಾಗುವುದೆಂದು ನಮ್ಮವರು ಹೇಳುವರು. ಆದರೆ ಇದನ್ನು

ನಂಬುವುದು ಕಷ್ಟ. ಹೇಗೆಂದರೆ—ಮುತ್ತಿನ ಪ್ರಾಣಿಯು ಬದುಕಿದ್ದಾಗ ಅದರ ಎರಡು ಚಿಪ್ಪುಗಳೂ ಸೇರಿ ಉಂಡೆಯ ಆಕಾರವಾಗಿರುವುದರಿಂದ ಅದರಮೇಲೆ ಬಿದ್ದ ನೀರಿನಲ್ಲಿ ಒಂದು ಹನಿಯೂಕೂಡ ನಿಲ್ಲದೆ ಜಾರಿಹೋಗುವುದು. ಹೀಗಿರುವಲ್ಲಿ ಹನಿಯು ಚಿಪ್ಪಿನೊಳಕ್ಕೆ ಹೋಗಿ ನಿಲ್ಲುವಬಗೆ ಹೇಗೆ ?

ಹಿಂದೆ ಹೇಳಿದ ರೀತಿಯಲ್ಲಿ ಪಡೆದ ಮುತ್ತನ್ನು ತೆರಣಿಗೆ ಕೊಟ್ಟು ಇನ್ನೂ ಹೆಚ್ಚು ನುಣುಪೂ ಹೊಳಪೂ ಬರುವಂತೆ ಮಾಡುವರಲ್ಲದೆ ರಂಧ್ರವನ್ನು ಕೊರೆಯುವರು. ಪ್ರಪಂಚದಲ್ಲಿರುವ ಎಲ್ಲಾ ಜನಾಂಗದವರೂ ಮುತ್ತನ್ನು ಆಭರಣಕ್ಕಾಗಿ ಉಪಯೋಗಿಸುವರು ಅದರ ಭಸ್ಮವು ಒಳ್ಳೆಯ ಔಷಧವಾಗಿ ಪ್ರಯೋಗಿಸಲ್ಪಡುವುದು. "ಮಾತು ಒಡೆದರೂ ಮುತ್ತು ಒಡೆದರೂ ಪುನಃ ಸರಿಯಾಗದು" ಎಂಬ ಲೋಕೋಕ್ತಿಯು ಎಲ್ಲರಿಗೂ ತಿಳಿದ ಅಂಶವೇ ಆಗಿದೆ. ಮುತ್ತಿಗೆ ಬಿಸಿನೀರು ಬೀಳುತ್ತ ಬಂದರೆ ಅದು ಕಾಲಕ್ರಮದಲ್ಲಿ ಕರಗುತ್ತ ಬರುವುದು. ಆನೆಯ ತಲೆ, ಬಿದಿರು, ಮೋಡ, ಹಂದಿಯ ದೇಹ ಮೊದಲಾದವುಗಳಲ್ಲೂ ಮುತ್ತು ದೊರೆಯುವುದೆಂದು ನಮ್ಮ ಕವಿಗಳು ಹೇಳಿರುವರು.

ಪ್ರಪಂಚದಲ್ಲಿ ಅತ್ಯಲ್ಪಪ್ರಾಣಿಯಾಗಿ ಸರ್ವರಿಗೂ ಗೋಚರವಾಗದೆ ಎಲ್ಲಿಯೋ ಸಮುದ್ರದ ಕೆಳಗೆ ಬಿದ್ದಿರುವ ಜಲಚರ ಕ್ರಿಮಿಗಳಲ್ಲಿ ಉದ್ಭವಿಸಿ ಅತ್ಯಂತ ಪ್ರಕಾಶವನ್ನು ಪಡೆದು ನವರತ್ನಗಳಲ್ಲೊಂದಾದ ಆಣಿಮುತ್ತೆನಿಸಿಕೊಳ್ಳುತ್ತ ಕೊಂಡಾಡಿಸಿಕೊಂಡು ರಾಜಾಧಿರಾಜರುಗಳ ತಲೆಯಮೇಲೆ ಕೂಡ ಕುಳಿತುಕೊಳ್ಳುವ ಮಹಾ ಪುಣ್ಯವು ಮತ್ತಾವುದಕ್ಕುಂಟು ? ಜಡವಸ್ತುವಾದರೂ ಅತಿರಮಣೀಯವಾಗಿರುವ ಆ ಮುತ್ತುಗಳನ್ನು ನಾವು ಇಲ್ಲಿ ಕೊಂಡಾಡಬೇಕೋ ಅಂತಹ ವಸ್ತುವನ್ನು ಕಂಡು ಹಿಡಿದು ತಮ್ಮ ಉಪಯೋಗಕ್ಕೆ ಸಿದ್ಧಪಡಿಸಿಕೊಂಡಿರುವ ಮನುಷ್ಯರ ಯುಕ್ತಿಶಕ್ತಿಗಳನ್ನು ಶ್ಲಾಘಿಸಬೇಕೋ ಅಥವಾ ಆ ವಸ್ತುವಿಗೆ ಅಂತಹ ಸೌಂದರ್ಯವನ್ನೂ ಮನುಷ್ಯರಿಗೆ ಅದನ್ನು ಉಪಯೋಗಿಸಿಕೊಳ್ಳುವ ಚಾತುರ್ಯವನ್ನೂ ದಯೆಪಾಲಿಸಿ ತಾನು ಮಾತ್ರ ಎಲ್ಲರಿಗೂ ಅಗೋಚರನಾಗಿ ಆದರೂ ಸರ್ವಸಾಕ್ಷಿಯಾಗಿ ಈ ಪ್ರಪಂಚವ್ಯವಹಾರವೆಂಬ ನಾಟಕದಲ್ಲಿ ಸೂತ್ರಧಾರನಂತಿರುವ ಕರುಣಾಳುವಾದ ಜಗ

ದೀಶ್ವರನ ಮಹಿಮೆಯನ್ನು ಕೊಂಡಾಡಿ ಮನಃಪೂರ್ವಕವಾದ ಕೃತಜ್ಞತೆಯಿಂದ ಆತನನ್ನು ವಂದಿಸಬೇಕೊ ? ಕಡೆಯಲ್ಲಿ ಹೇಳಿದ ಈ ಯಂಶವೇ ಯುಕ್ತ. ಹಾಗೆ ದೇವರನ್ನು ವಂದಿಸಿ ಕೃತಾರ್ಥರಾಗಬೇಕಾದುದು ನಮ್ಮ ಕರ್ತವ್ಯ.

J. K.

ಸಣ್ಣಮಕ್ಕಳಿಗೆ ಪದ್ಯಸಾರವನ್ನು ಬೋಧಿಸುವ ಕ್ರಮ.

ಮಕ್ಕಳು ಮಲಗುವ ಹೊತ್ತು *

1. ಹೊತ್ತು ಮುಳುಗುತ್ತಲಿದೆ |
ಕತ್ತಲಾಗುತ್ತಲಿದೆ |
ಯೆತ್ತಲುಂ ಕಾಗೆಗಳು ಗೂಡ ಬಳಿಗೆ ||
ಮತ್ತೆ ಕಾಯೆಂದು ಕೂ |
ಗುತ್ತಲಾಗಸದೆ ಹಾ |
ರುತ್ತಲಿವೆ ಮಲಗುವಾಹೊತ್ತಾಯಿತು ||

2. ಹಗಲು ಕಳೆದುದು ತಾವ !
ರೆಗಳು ಮುಚ್ಚುತ್ತಲಿವೆ |
ಬಗೆಬಗೆಯ ಹೂಗಳುಂ ಮೊಗವಮುಚ್ಚಿ ||
ಬಗಿದ ನಿದ್ರೆಯೊಳಿಹುವು |
ಮಗುವೆಯದರಿಂದ ಹಾ |
ಸಿಗೆಯಲ್ಲಿ ಮಲಗುವಾಹೊತ್ತಾಯಿತು ||

3. ಬಲುನಿದ್ದೆಯಿಂದೆರಕೆ !
ಗಳ ಮುಚ್ಚಿದುವು ಚಿಟ್ಟೆ |
ಗಳು ತುಂಬಿ ಬಂದುದುಲಿಯದು ಹಕ್ಕಿಯು ||

* An adaptation from Tom Hood's "Bed-Time" by S. G. Govindarajiengar.

ಕೆಲಸವನು ಮುಗಿಸಿ ಮರಿ |
ಗಳಿಗೆ ಕುಡಕನು ಕೊಟ್ಟು |
ದೆಲೆ ಮಗುವೆ ಮಲಗುವಾ ಹೊತ್ತಾಯಿತು ||

4. ಇದೊ ಮಂದೆಯಿಂದಬಂ |
ದುದು ಕರುಗಳೊಡನೆ ಹಸು |
ವಿದೊ ಹಾಸಿದಾ ಹುಲ್ಲಮೇಲೆ ಕುಳಿತು ||
ಮುದದೆ ಮೆಲುಕಿಕ್ಕಿ ಮಲ |
ಗಿದುದು ಕರುಗಳ ಕೂಡಿ |
ಯದರಿಂದ ಮಲಗುವಾಹೊತ್ತಾಯಿತು ||

5. ಒಳ್ಳಿತಾಗಲಿ ನಿನಗೆ |
ಯೊಳ್ಳಿತಾಗಲಿ ನಿನಗೆ |
ಯೊಳ್ಳಿತಾಗಲಿ ನಿನಗೆಯುದಯತನಕ ||
ಒಳ್ಳೆಕನಸುಗಳು ಕ |
ಣ್ಣಲ್ಲಿ ಸುಳಿಯಲಿ ಮಗುವೆ |
ಯುಲ್ಲಸದಿ ಮಲಗುವಾಹೊತ್ತಾಯಿತು ||

ಈ ಪದ್ಯಗಳಲ್ಲಿ ಕವಿಯು ಸಣ್ಣ ಮಕ್ಕಳುಗಳಿಗೆ ಮಲಗಿಕೊಳ್ಳುವ ವೇಳೆಯನ್ನು ಸೂಚಿಸುತ್ತಾನೆ. ಆ ಪದ್ಯಗಳ ಸಾರಾಂಶ :—

1 ನೆಯ ಪದ್ಯ—ಸೂರ್ಯನು ಮುಳುಗುತ್ತಲಿದ್ದಾನೆ ; ಕತ್ತಲೆಯಾಗುತ್ತಲಿದೆ; ಕಾಗೆಗಳು ಕಾಕಾ ಎಂದು ಕೂಗುತ್ತಾ ಹಾರಿಕೊಂಡು ತಮ್ಮ ತಮ್ಮ ಗೂಡುಗಳಕಡೆಗೆ ಹೋಗುತ್ತಿವೆ; ಮಕ್ಕಳಿರಾ, ನಿಮಗೂ ಈಗ ಮಲಗಲು ಹೊತ್ತಾಯಿತು.

2 ನೆಯ ಪದ್ಯ—ಹಗಲು ಹೋಯಿತು ; ಕಮಲಪುಷ್ಪಗಳ ದಳಗಳು ಮುಚ್ಚಿಕೊಂಡುವು ; ನಾನಾಬಗೆಯ ಹೂವುಗಳು ಮೊಗವನ್ನು ಮುಚ್ಚಿಕೊಂಡು ನಿದ್ರೆಮಾಡುತ್ತಾ ಇವೆ; ಮಗುವೆ, ನಿನಗೂ ಹಾಸಿಗೆಯಲ್ಲಿ ಮಲಗುವಹೊತ್ತಾಯಿತು.

3 ನೆಯ ಪದ್ಯ—ಹಕ್ಕಿಗಳು ಹಾರಾಡುವುದನ್ನು ಬಿಟ್ಟು ರೆಕ್ಕೆ ಮುದುರಿಕೊಂಡು ಮರಗಳಮೇಲೆ ನಿದ್ದೆಮಾಡುತ್ತಿವೆ; ದುಂಬಿಗಳು ಹೂವುಗಳಿಂದ ಹಿಂದಿರುಗಿ

ಬಂದುವು. ಹಕ್ಕಿಗಳು ತಮ್ಮ ಆಹಾರಕ್ಕೆ ಬೇಕಾದ ಹುಳುಹುಪ್ಪಟೆಗಳನ್ನು ತಿಂದು ಹೊಟ್ಟೆ ತುಂಬಿಸಿಕೊಂಡು ತಮ್ಮ ಗೂಡುಗಳಿಗೆ ಹಿಂದಿರುಗಿ ಬಂದು, ಮರಿಗಳಿಗೆ ಗುಟಕನ್ನು ಕೊಟ್ಟು, ಆಮೇಲೆ ಚಿಲಿಪಿಲಿಗುಟ್ಟದೆ ಸಿದ್ದೆಮಾಡುತ್ತಿವೆ ; ಮಗೂ, ನಿನಗೂ ಮಲಗುವುದಕ್ಕೆ ಹೊತ್ತಾಯಿತು, ಏಳು.

4 ನೆಯ ಪದ್ಯ—ಹುಲ್ಲನ್ನು ಮೇಯುವುದಕ್ಕಾಗಿ ಊರಹತ್ತಿರವಿರುವ ಹುಲ್ಲುಗಾವಲಿಗೆ ಹೋಗಿದ್ದ ಹಸುಗಳೂ ಮನೆಗೆ ಬಂದು ತಮ್ಮ ಕರುಗಳ ಸಂಗಡ ಹಾಸಿದ ಹುಲ್ಲಿನಮೇಲೆ ವಿನೋದವಾಗಿ ಮೆಲುಕುಹಾಕುತ್ತಾ ಮಲಗಿಕೊಂಡು ನಿದ್ದೆಹೋಗುತ್ತಿವೆ; ಮಗೂ, ಅವುಗಳಹಾಗೆ ಮಲಗಲು ಏಳು, ಹೊತ್ತಾಯಿತು.

5 ನೆಯ ಪದ್ಯ—ಮಗೂ, ನಿನಗೆ ಒಳ್ಳೆಯದಾಗಲಿ; ನಿನಗೆ ಮತ್ತೂ ಒಳ್ಳೆಯದಾಗಲಿ; ಬೆಳಗಾಗುವತನಕ ನಿನಗೆ ಒಳ್ಳೆಯ ಕನಸುಗಳುಂಟಾಗಲಿ; ಹೊತ್ತಾಯಿತು, ಮಲಗುವುದಕ್ಕೆ ಏಳು. ಮಲಗಿ ಉಲ್ಲಾಸ ಹೊಂದು.

ಈರೀತಿ ಸಾರಾರ್ಥವನ್ನು ಮಕ್ಕಳು ತಿಳಿದುಕೊಂಡಮೇಲೆ ಉಪಾಧ್ಯಾಯರುಗಳು ಮಾಡಬೇಕಾದ ಕೆಲಸವೇನೆಂದರೆ-(1) ಬೆಳಕು ಹೋಗಿ ಕತ್ತಲುಬರುವುದಕ್ಕೆ ಕಾರಣವನ್ನೂ, ರಾತ್ರಿಯೇ ಎಲ್ಲಕ್ಕೂ ವಿಶ್ರಾಂತಿಕಾಲವೆಂಬುದನ್ನೂ ಪ್ರಶ್ನೋತ್ತರರೂಪದಲ್ಲಿ ಮಕ್ಕಳಿಗೆ ತಿಳಿಸಬೇಕು

ಆಮೇಲೆ ವೃಕ್ಷಲತಾದಿಗಳಲ್ಲಿಯೂ ಪಕ್ಷಿಮೃಗಾದಿಗಳಲ್ಲಿಯೂ ವಿಶ್ರಾಂತಿ ಕಾಲದಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಚೆನ್ನಾಗಿ ಬೋಧಿಸಬೇಕು. ಆ ವ್ಯತ್ಯಾಸಗಳನ್ನು 1, 2, 3, 4 ನೆಯ ಪದ್ಯಗಳಲ್ಲಿ ಕ್ರಮವಾಗಿ ಕವಿಯು ವಿವರಿಸಿರುವುದನ್ನು ಬಾಲಕರ ದೃಷ್ಟಿಗೆ ತರಬೇಕು. ಸಾಧ್ಯವಾದರೆ ಅವರ ಅನುಭವವನ್ನು ಕೇಳುವುದರ ಮೂಲಕ ಮೇಲಿನ ವಿಷಯವನ್ನು ಅವರ ಬಾಯಿಂದಲೇ ಹೊರಡಿಸುವುದು ಮೇಲು. ಉದಾಹರಣೆಗಾಗಿ-ಪಕ್ಷಿಗಳಲ್ಲಿ ಕಾಗೆಗಳನ್ನೂ, ಮೃಗಾದಿಗಳಲ್ಲಿ ಹಸುವನ್ನೂ ಕವಿಯು ಕೊಟ್ಟಿರುವನು; ಇನ್ನು ಕೆಲವು ಉದಾಹರಣೆಗಳನ್ನು ಕೊಡುವುದರಿಂದ ಬಹಳ ಪ್ರಯೋಜನವುಂಟು; ಮಕ್ಕಳಲ್ಲಿ ಪ್ರಪಂಚವನ್ನು ಪರಿಶೀಲನೆಮಾಡುವ ಶಕ್ತಿಯು ಅಭಿವೃದ್ಧಿಯಾಗುವುದು. ಇಷ್ಟಕ್ಕೆ ಪಾಠವಾಯಿತೆಂದು ತಿಳಿಯಬೇಡಿ.

ಪಕ್ಷಿ ಮೃಗಾದಿಗಳಿಗೂ, ಲತಾವೃಕ್ಷಾದಿಗಳಿಗೂ ಇರುವ ಸಂಬಂಧವನ್ನು ತಿಳಿಸ ಬೇಕು; ಇದನ್ನು ಪಕ್ಷಿಗಳ ಮತ್ತು ಪಶುಗಳ ಕೆಲಸಗಳಿಂದ ನಿದರ್ಶಿಸಬೇಕು. ಅವು ಗಳಂತೆಯೇ ಮಕ್ಕಳೂ ಇರುವರು; ಅವರೂ ಅವುಗಳಂತೆ ರಾತ್ರಿಯಾದಮೇಲೆ ವಿಶ್ರಾಂತಿಯನ್ನು ಹೊಂದಬೇಕು, ಎಂಬ ವಿಷಯವನ್ನು ಚೆನ್ನಾಗಿ ಮುಂದಟ್ಟು ಮಾಡಿಸಬೇಕು. ಈ ಪದ್ಯಗಳನ್ನು ಕಲಿಸುವಾಗ ಮುಖ್ಯವಾಗಿ ಸಂಧ್ಯಾಕಾಲವಾದ ಮೇಲೆ ಪ್ರಪಂಚದಲ್ಲಿ ಉಂಟಾಗುವ ವ್ಯತ್ಯಾಸಗಳು, ಅವುಗಳಿಗಿರುವ ಪರಸ್ಪರ ಸಂಬಂ ಧಗಳು-ಇವೆಲ್ಲಾ ಮಕ್ಕಳಿಗೆ ಗೋಚರವಾಗುವಂತೆ ಮಾಡುವುದೇ ಉಪಾಧ್ಯಾ ಯರ ಮುಖ್ಯೋದ್ದೇಶವಾಗಿರಬೇಕು.

ಉಪಾಧ್ಯಾಯರು ಬಾಲಕರಲ್ಲಿ ಈ ಪಾಠದಲ್ಲಿ ಬಹಳ ಶ್ರದ್ಧೆ ಹುಟ್ಟಿಸಿ ಕಲಿ ಸಬೇಕೆಂದು ಆಶೆಯುಳ್ಳವರಾಗಿದ್ದರೆ ಈ ಒಂದು ಪಾಠವನ್ನು 5 ಪಾಠವಾಗಿ ಮಾಡಿ ಕೊಳ್ಳಬೇಕು. ಒಂದೊಂದು ಪದ್ಯವನ್ನು ಒಂದೊಂದು ಪಾಠವನ್ನಾಗಿ ಮಾಡಿಕೊಳ್ಳ ಬೇಕು. ಇದೂ ಅಲ್ಲದೆ ಒಂದೊಂದು ಪದ್ಯವನ್ನು ಒಂದೊಂದು ರೀತಿಯಲ್ಲಿ ಬೋಧಿಸಬೇಕು. ಇಲ್ಲಿ ಆ ಕ್ರಮವು ವಿವರಿಸಲ್ಪಡುವುದು ಇಲ್ಲಿ ಹೇಳುವ ಕ್ರಮ ವನ್ನೆ ಅನುಸರಿಸಬೇಕಾಗಿಲ್ಲ; ಅನೇಕಕ್ರಮಗಳಲ್ಲಿ ಇದೂಒಂದಾಗಿರಬಹುದು. ಒಂದು ಪದ್ಯವನ್ನು ಒಂದು ಕ್ರಮದಲ್ಲಿ ಓದಿದಮೇಲೆ, ಮುಂದಿನಪದ್ಯವನ್ನು ಬೇರೆಕ್ರಮದಲ್ಲಿ ಹೇಳಿಕೊಡುತ್ತಾರೆಂದು ತಿಳಿದರೆ ಮಕ್ಕಳಿಗೆ ಸಂತೋಷವೂ ಕುತೂಹಲವೂ ಹೆಚ್ಚುವುದು.

ಮಲಗುವಕಾಲದಮೇಲೆ ಸಂಭಾಷಣ ಮಾಡತೊಡಗಿ, ಸೂರ್ಯನು ಮುಳು ಗುವುದರಿಂದ ಬೆಳಕು ಹೋಗುತ್ತದೆ, ಕತ್ತಲೆ ಹಬ್ಬಿಕೊಳ್ಳುತ್ತದೆ, ಎಂಬ ವಿಚಾರವು ಬರಲಿ, ಆಮೇಲೆ ಪಕ್ಷಿಗಳು ತಮ್ಮ ಗೂಡುಗಳಿಗೆ ಹೋಗುತ್ತವೆ ಎಂಬುದನ್ನು ಹೇಳಿಸಿ, ಬಳಿಕ ಒಬ್ಬ ಹುಡುಗನಿಂದ ಕಾಗೆಯ ವರ್ಣನೆಯನ್ನು ಮಾಡಿಸಿ. ದೊಡ್ಡ ಮರಗಳಲ್ಲಿ ಎತ್ತರವಾದ ಕೊಂಬೆಗಳಲ್ಲಿ ಕಾಗೆಗಳು ಗೂಡು ಕಟ್ಟುತ್ತವೆ, ಅವು ಹಾಡುವುದಿಲ್ಲ, ಅವು ಕಾಕಾ ಎಂದು ಮಾತ್ರ ಕೂಗುತ್ತವೆ, ಎಂಬೀ ಸಂಗತಿಯನ್ನು ತಿಳಿಸಿದಮೇಲೆ, ಒಬ್ಬ ಹುಡುಗನನ್ನು ಕಾಗೆಯಹಾಗೆ ನಟಿಸುವಂತೆಮಾಡಿ ಇಬ್ಬರು

ಹುಡುಗರಿಂದ ಮೊದಲೆರಡು ಪಙ್ತಿಗಳನ್ನು ಹೇಳಿಸಿದಮೇಲೆ ಕಾಗೆಯಾದ ಆಹುಡುಗ "ನಿಂದ ಕಾ ಕಾ" ಎಂದು ಕೂಗಿಸಿ, ಮಲಗುವಹೊತ್ತಾಯಿತೆಂದು ಹೇಳಿಸಿ, ಹೀಗೆ ಮಾಡಿದರೆ, ಸಾಯಂಕಾಲವಾಗಲು ಸೂರ್ಯನು ಮುಳುಗುವನು, ಕತ್ತಲೆಯು ಬರುವುದು, ಕಾಗೆಗಳು ಹಾರಾಡುತ್ತಾ ತಮ್ಮ ಗೂಡುಗಳಿಗೆ ಹೋಗುವುವು ಎಂಬ ವಿಷಯವು ಗೊತ್ತಾಗುವುದು. ಇದಾದಮೇಲೆ ಉಪಾಧ್ಯಾಯರು ಸೂರ್ಯನ ಚಿತ್ರವನ್ನು ಬರೆದು ಒಂದು ಕಾಗದದ ರಟ್ಟನ್ನು ಒಬ್ಬ ಹುಡುಗನ ಕೈಗೆ ಕೊಡ ಬೇಕು. ಆ ಹುಡುಗನಿಗೆ ಆ ರಟ್ಟನ್ನು ಮೆತ್ತಗೆ ಕೆಳಗೆ ಇಳಿಸುವಂತೆ ಹೇಳಿಕೊಡ ಬೇಕು, ಅವನು ಹಾಗೆ ಮಾಡುವಾಗ ಮತ್ತೊಬ್ಬ ಹುಡುಗನಿಂದ "ಹೊತ್ತು ಮುಳುಗುತ್ತಲಿದೆ, ಕತ್ತಲಾಗುತ್ತಲಿದೆ" ಎಂದು ಹೇಳಿಸಬೇಕು. ಅದಾದನೇಲೆ, ಆ ಕಾಗೆಯಾದ ಹುಡುಗನು 'ಕಾ ಕಾ' ಎಂದು ಕೂಗುತ್ತಾ ಓಡುತ್ತಾ ಬಂದು "ಮಲಗುವ ಹೊತ್ತಾಯಿತು" ಎಂದು ಹೇಳಬೇಕು. ಇದೇ ಕ್ರಮದಿಂದ ಬೇರೆಬೇರೆ ಹುಡುಗರಿಂದಲೂ ಮಾಡಿಸಬೇಕು.

೨ ನೆಯ ಪದ್ಯದ ಪಾಠ.

ಇದನ್ನು ನಾಟಕವಾಡುವ ಕ್ರಮದಲ್ಲಿ ಕಲಿಸಬೇಕು. ಮಕ್ಕಳಲ್ಲಿ ೪-೫ ಜನ ರನ್ನು ಆರಿಸಿ, ಅವರಲ್ಲಿ ಒಬ್ಬೊಬ್ಬನನ್ನು ಒಂದೊಂದು ಹೂವಾಗಿ ಮಾಡಬೇಕು. ಆ ಹುಡುಗರನ್ನು ನೆಲದಮೇಲೆ ಆಯಾ ಹೂವಿನ ಭಾವದಲ್ಲಿ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳ ಹೇಳಿ, ಅವರು ಹಾಗೆ ಕುಳಿತುಕೊಂಡಮೇಲೆ, ಮತ್ತೊಬ್ಬ ಹುಡು ಗನು ಎದ್ದು ಒಬ್ಬೊಬ್ಬರಿಗಾಗಿ ಇತರ ಹುಡುಗರಿಗೆ ಪದ್ಯವನ್ನು ಹೇಳುತ್ತ ಅವರನ್ನು ಬೆರಳಿನಿಂದ ತೋರಿಸಿ, ಆಮೇಲೆ ಅವರನ್ನು ಕುರಿತು—"ನಮಗೂ ಮಲಗುವ ಹೊತ್ತಾ ಯಿತು" ಎಂದು ಹೇಳುವಂತೆ ಮಾಡಿ ಆಮೇಲೆ ಎಲ್ಲ ಹುಡುಗರಿಂದಲೂ "ಮಲ ಗುವಹೊತ್ತಾಯಿತು." ಎಂದು ಹೇಳಿಸಿ ಅವರು ಕಣ್ಣುಮುಚ್ಚಿಕೊಂಡು ಮಲ ಗುವ ಹಾಗೆ ಮಾಡಿಸಬೇಕು. ಉಪಾಧ್ಯಾಯರಿಗೆ ಚಿತ್ರ ಬರೆಯುವುದಕ್ಕೆ ಬಂದಿದ್ದರೆ ಆಯಾ ಹೂಗಳ ಚಿತ್ರಗಳನ್ನು ಬರೆದ ಕಾಗದದ ರಟ್ಟುಗಳನ್ನು ಆಯಾ ಹುಡುಗರ ಕುಲಾಯಿಗೆ ಸೇರಿಸುವುದು ಮತ್ತಷ್ಟು ವಿನೋದವಾಗುವುದು.

3 ನೆಯ ಪದ್ಯದ ಪಾಠಕ್ರಮ.

ಮಕ್ಕಳಿಗೆ ನಕ್ಷೆ ಬರೆಯುವ ಪಾಠವಾಗಿ ಮಾಡಿಕೊಂಡರೆ ಇದು ಬಹು ಹೃದಯಂಗಮವಾಗುತ್ತದೆ.

ಚಿಟ್ಟೆಹುಳುವು ಒಂದು ಎಲೆಯಮೇಲೆ ಮಲಗಿರುವಂತೆ ಒಂದು ಚಿತ್ರ; ದುಂಬಿಗಳು ತಮ್ಮ ಗೂಡುಗಳಿಗೆ ಹಾರಿಹೋಗುವಂತೆ ಒಂದು ಚಿತ್ರ; ರೆಕ್ಕೆಯೊಳಗೆ ತಲೆಯನ್ನು ಹುದುಗಿಸಿ ಇಟ್ಟುಕೊಂಡು ಒಂದು ಸಣ್ಣ ಕೊಂಬೆಯಮೇಲೆ ಮಲಗಿರುವ ಒಂದು ಪಕ್ಷಿಯ ಚಿತ್ರ; ಒಂದು ಹಕ್ಕಿಯು ಮರಿಗೆ ಗುಟಕು ಕೊಡುವಂತೆ ಒಂದು ಚಿತ್ರ; ಈ ನಾಲ್ಕು ಚಿತ್ರಗಳನ್ನು ಬರೆದು ಇಟ್ಟುಕೊಂಡು, ಒಂದು ಚಿತ್ರವನ್ನು ತೋರಿಸಿ, ಆ ಚಿತ್ರವನ್ನು ವರ್ಣಿಸಿರುವ ಪದ್ಯಭಾಗವನ್ನು ಒಬ್ಬನಿಂದ ಹೇಳಿಸುವುದು, ಮತ್ತೊಂದನ್ನು ತೋರಿಸಿ, ಅದನ್ನು ವರ್ಣಿಸಿದ ಭಾಗವನ್ನು ಮತ್ತೊಬ್ಬ ಹುಡುಗನಿಂದ ಹೇಳಿಸುವುದು, ಈ ಪ್ರಕಾರ ಮಾಡಿಸಬೇಕು. ಹೀಗೆ ಮಾಡುತ್ತಾ ಬಂದರೆ ಪದ್ಯಾರ್ಥವು ಸ್ಪಷ್ಟವಾಗುವುದು.

4 ನೆಯ ಪದ್ಯದ ಪಾಠಕ್ರಮ.

ಪದ್ಯವನ್ನು ಅನುಕರಣರೀತಿಯಲ್ಲಿ ಬೋಧಿಸುವುದರಲ್ಲಿ ಹುಡುಗರಿಗೆ ಬಹಳ ಸಂತೋಷವಾಗುತ್ತದೆ. ಕೆಲವು ಹುಡುಗರು ನಿದಾನವಾಗಿ ಮೆಲ್ಲಗೆ ಅಲ್ಲಾಡುತ್ತ ಹಸುಗಳಂತೆ ಒಟ್ಟಿಗೆ ಬರುವುದು, ಅವುಗಳ ಪಕ್ಕಗಳಲ್ಲಿ ಕೆಲವು ಹುಡುಗರು ಕರುಗಳಂತೆ ಕುಣಿಯುತ್ತ ಬರುವುದು, ಆಮೇಲೆ ಅವರೆಲ್ಲರೂ ಒಂದುಕಡೆ ಚಾಪೆಯ ಮೇಲೆ ಕುಳಿತುಕೊಂಡು ಹಸುವಿನಂತೆ ಮಲಕುಹಾಕುವುದು ಮುಂತಾದುವನ್ನು ಅನುಕರಿಸಿದರೆ ಆ ಹುಡುಗರ ಸಂತೋಷಕ್ಕೆ ಪಾರವುಂಟೆ! ಆ ಹುಡುಗರನ್ನು ನೋಡುತ್ತಿದ್ದ ಹುಡುಗರಿಗೆ ಎಷ್ಟು ವಿನೋದವುಂಟಾಗುತ್ತದೊ! ಆ ಹುಡುಗರು ಕಣ್ಣುಮುಚ್ಚಿಕೊಂಡು ಮಲಕು ಹಾಕುತ್ತಿರುವಾಗ ಬಾಕಿ ಹುಡುಗರು "ಮಲಗುವ ಹೊತ್ತಾಯಿತು" ಎಂದು ಎಷ್ಟು ಆನಂದದಿಂದ ಹೇಳುವರೊ!

5 ನೆಯ ಪದ್ಯದ ಪಾಠಕ್ರಮ.

ಇದೆಲ್ಲಾ ಆದಮೇಲೆ ಹುಡುಗರು ತಾವು ತಾವೇ ಒಬ್ಬೊಬ್ಬರನ್ನು ಕುರಿತು "ಒಳ್ಳಿತಾಗಲಿನಿನಗೆ" "ಒಳ್ಳಿತಾಗಲಿನಿನಗೆ" "ಒಳ್ಳಿತಾಗಲಿನಿನಗೆ" ಎಂದು

ಹೇಳುವರು. ಅದಕ್ಕೆ ಯಾವ ಪಾಠವೂ ಆವಶ್ಯಕವಿಲ್ಲ. ಅವರಲ್ಲಿ ಬುದ್ಧಿವಂತನಾದವನು ಆಮೇಲೆ " ಉದಯತನಕ ಒಳ್ಳೆಯ ಕನಸುಗಳು ಕಣ್ಣಲ್ಲಿ ಸುಳಿಯಲಿ " ಎಂಬುದನ್ನು ಅವರಲ್ಲಿ ಪ್ರತಿಯೊಬ್ಬರನ್ನೂ ಕುರಿತು ಹೇಳಲಿ. ಅದಾದಮೇಲೆ ಎಲ್ಲಾ ಹುಡುಗರು ಒಟ್ಟಿಗೆ ಆ ಪದ್ಯವನ್ನು ಹೇಳಿ, ಉಲ್ಲಾಸದಿಂದ " ಮಲಗುವ ಹೊತ್ತಾಯಿತು " ಎಂದು ಹೇಳಿ, ಅಪ್ಪಣೆಯನ್ನು ತೆಗೆದುಕೊಂಡು ಮಠವನ್ನು ಬಿಡುವಂತೆ ಮಾಡಬೇಕು.

M. A. R.

ಹಳ್ಳಿಗಳು ಮತ್ತು ಪಟ್ಟಣಗಳು.

ಇಂಡಿಯ ಮತ್ತು ಬರ್ಮಾದೇಶಗಳು ಇಂಗ್ಲೆಂಡ್ ಬೆಲ್ಜಿಯಂ, ಅಥವಾ ಯುನೈಟೆಡ್‌ಸ್ಟೇಟ್ಸ್ (ಸಂಯುಕ್ತಸಂಸ್ಥಾನ) ಗಳಂತೆ ಅಲ್ಲ. ಆದೇಶಗಳಲ್ಲಿ ಸಾವಿರಾರುಮಂದಿ ಬೇಕಾದ ಸಾಮಾನುಗಳನ್ನು ತಯಾರ್‌ಮಾಡಿ ಕೈಗಾರಿಕೆಯಿಂದ ಜೀವಿಸುವರು. ಆದುದರಿಂದ ಹತ್ತಿಯ ಬಟ್ಟೆಗಳನ್ನೂ, ಉಣ್ಣೆಯ ಬಟ್ಟೆಗಳನ್ನೂ ಕಬ್ಬಿಣದ ಸಾಮಾನುಗಳನ್ನೂ, ಯಂತ್ರಗಳನ್ನೂ ತಯಾರುಮಾಡುವ ದೊಡ್ಡದೊಡ್ಡ ಪಟ್ಟಣಗಳು ಇಂಗ್ಲೆಂಡಿನಲ್ಲಿ ಅನೇಕವಾಗಿವೆ ; ಆದರೆ ಇಂಡಿಯಾ ಮತ್ತು ಬರ್ಮಾ ದೇಶಗಳಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳುಳ್ಳ (ಬೊಂಬಾಯಿ, ಕಲ್ಕತ್ತಾ, ಕಾನ್‌ಪೂರ್, ರಂಗೂನ್) ಪಟ್ಟಣಗಳ ಸಂಖ್ಯೆಯು ಬಹು ಕಡಿಮೆ. ಇದಕ್ಕೆ ಕಾರಣವೇನೆಂದರೆ ಇಂಡಿಯಾದಲ್ಲೇ ಆಗಲಿ, ಬರ್ಮಾದಲ್ಲಿಯೇ ಆಗಲಿ, ಕಲ್ಲಿದ್ದಲು ಅಥವಾ ಕಬ್ಬಿಣದ ಗಣಿಗಳನ್ನು ಇನ್ನೂ ಶೋಧಿಸಲು ಆರಂಭಿಸಿಲ್ಲ. ಈ ದೇಶಗಳಲ್ಲಿ ಒಂದೇ ಒಂದು ಕಸಬು ಮುಖ್ಯವಾದುದಾಗಿರುವುದು. ಅದೇ ಬೇಸಾಯಿತಕಸುಬು ಎನ್ನುವುದು (ಆರಂಬ ಅಥವಾ ವ್ಯವಸಾಯ.) ಇಂಡಿಯಾ ಸಾಮ್ರಾಜ್ಯದ ಜನರಲ್ಲಿ ಮೂರರಲ್ಲಿ ಎರಡುಭಾಗ ಭೂವ್ಯವಸಾಯ, ಪಶುಪಾಲನೆ ಅಥವಾ ಕಾಡುಗಳಲ್ಲಿ ಕೆಲಸಮಾಡೋಣ ಇವುಗಳಿಂದ ಜೀವಿಸುವರು. ಯಾವ ಜನರು ಕೃಷಿಯಿಂದ

ಜೀವಿಸುವರೋ ಅವರು ಪಟ್ಟಣದಲ್ಲಿ ವಾಸಮಾಡರು, ಅವರವರ ಜಮೀನ್‌ಗಳಿಗೆ ಸಮೀಪವಾಗಿರುವಂತಹ ಹಳ್ಳಿಗಳಲ್ಲಿ ವಾಸಮಾಡುವರು. ಆದುದರಿಂದ ಇಂಡಿಯಾ ಸಾಮ್ರಾಜ್ಯದ ವಿಸ್ತಾರಕ್ಕೆ ತಕ್ಕಂತೆ ಪಟ್ಟಣಗಳ ಸಂಖ್ಯೆಯು ಹೆಚ್ಚಾಗಿಲ್ಲವು. ಹಳ್ಳಿಗಳು ಮಾತ್ರ ಬಹುವಾಗಿರುವುವು. ಹತ್ತಕ್ಕೆ ಒಂಬತ್ತುಮಂದಿ ಗ್ರಾಮಗಳಲ್ಲೂ ಒಬ್ಬರು ಪಟ್ಟಣದಲ್ಲೂ ವಾಸಮಾಡುವರು. ಇಂಡಿಯಾದ ಮತ್ತು ಬರ್ಮಾದೇಶದ ಭೂಪಟವನ್ನು ನೋಡಿದರೆ ಪಟ್ಟಣಗಳ ಸಂಖ್ಯೆಯು ಬಹು ಕಡಿಮೆಎಂಬುದು ಚೆನ್ನಾಗಿ ಕಾಣಬರುವುದು. ಆದಕಾರಣ, ಯೂರೋಪ್ ಖಂಡದ ಪಶ್ಚಿಮ ಪ್ರಾಂತಗಳಲ್ಲಿಯ ದೇಶಗಳಿಗೂ ಇಂಡಿಯಾ ಬರ್ಮಾದೇಶಗಳಿಗೂ ಇರುವ ಮುಖ್ಯ ವ್ಯತ್ಯಾಸವೇನಂದರೆ-ಯೂರೋಪ್ ಖಂಡದ ಪಶ್ಚಿಮಪ್ರಾಂತ್ಯಗಳಲ್ಲಿ ಪಟ್ಟಣಗಳ ಸಂಖ್ಯೆಯು ವಿಶೇಷವಾಗಿಯೂ, ಇಂಡಿಯಾ ಮತ್ತು ಬರ್ಮಾದೇಶದಲ್ಲಿ ಬಹುಕಡಿಮೆಯಾಗಿಯೂ ಇರೋಣವೇ.

ಪಟ್ಟಣಗಳೇಆಗಲಿ ಹಳ್ಳಿಗಳೇಆಗಲಿ ಹಠಾತ್ತಾಗಿಯಾಗಲಿ ಪುಣ್ಯವಿಶೇಷದಿಂದಲಾಗಲಿ ನಿರ್ಮಿಸಲ್ಪಡುವವಲ್ಲ: ಹಳ್ಳಿಗಳು ಎಲ್ಲಿರಬೇಕು, ಪಟ್ಟಣಗಳು ಎಲ್ಲಿರಬೇಕು, ಎಂಬುದು ಮನುಷ್ಯನು ನಿಶ್ಚೈಸತಕ್ಕುದಾಗಿದೆ. ಹಳ್ಳಿಗಳು ಜಮೀನ್‌ಗಳಿಗೆ ಸಮೀಪವಾಗಿ ಇರಲೇ ಬೇಕು. ಅದರಲ್ಲೂ ಎಲ್ಲಿ ಫಲವತ್ತಾದ ಭೂಮಿ ಹೆಚ್ಚಾಗಿರುವುದೋ ಅಲ್ಲಿ ಜನಬಾಹುಳ್ಯವೂ, ಗ್ರಾಮಸ್ತೋಮವೂ ಇರುವುವು.

ಪಟ್ಟಣಗಳು ಮತ್ತು ಷಹರ್‌ಗಳು (ದೊಡ್ಡದೊಡ್ಡಪಟ್ಟಣಗಳು) ಕಟ್ಟಲ್ಪಡುವ ಸ್ಥಳಗಳು:—ಹಿಂದಣಕಾಲದಲ್ಲಿ ಇಂಡಿಯಾದಲ್ಲಿ ಶಾಂತತೆ ಕಡಿಮೆಯಾಗಿದ್ದಾಗ ಕೋಟೆಗಳ ಸುತ್ತಲೂ (ಎಂದರೆ ಕೋಟೆಗಳ ಆಶ್ರಯದಲ್ಲಿ) ಪೇಟೆ (ಪಟ್ಟಣ) ಗಳು ಏಳಿಗೆಗೆ ಬರುತಿದ್ದುವು. ರಾಜರುಗಳು ತಾವೂ ತಮ್ಮ ಪರಿವಾರದವರೂ ಶತ್ರುಗಳ ಏಟಿಗೆ ಸಿಕ್ಕದಂತೆ ಸಾಮಾನ್ಯವಾಗಿ ಒಂದು ಬೆಟ್ಟದಮೇಲಾಗಲಿ ಗುಡ್ಡದಮೇಲಾಗಲಿ ಸುರಕ್ಷಿತವಾಗಿರಲು ಅನುಕೂಲವಾದ ಸ್ಥಳಗಳನ್ನು ಹುಡುಕಿ ಅಲ್ಲಿ ಕೋಟೆಗಳನ್ನು ಕಟ್ಟುತಿದ್ದರು. ಕೋಟೆಯ ಒಳಭಾಗದಲ್ಲಿ ತಾವು ಇರಲು ಒಂದು ಅರಮನೆಯನ್ನೂ ತಮ್ಮ ಪರಿವಾರದವರು ಇರಲು ಕೆಲವು ಮನೆಗಳನ್ನೂ ಕಟ್ಟುತಿದ್ದರು. ಈ

ಕೋಟೆಯ ಆಶ್ರಯದಲ್ಲಿ ಸುಖವಾಗಿರಲು ಜನರುಬಂದು ಕೋಟೆಯ ಸುತ್ತಲೂ ಊರನ್ನು ಕಟ್ಟುತ್ತಿದ್ದರು. ಈಜನರಲ್ಲಿ ಬಹುಮಂದಿ ರಾಜನಿಗೂ ಮತ್ತು ರಾಜನ ಆಸ್ಥಾನದವರಿಗೂ ಬೇಕಾದುದನ್ನು ಮಾಡಬಲ್ಲ ಕಾರೇಗಾರರು, ನೌರುಬಟ್ಟೆಗಳನ್ನೂ, ರೇಶ್ಮೆವಸ್ತ್ರಗಳನ್ನೂ ನೆಯ್ಯುವ ನೇಗೆಯವರು, ಜವಾಹಿರಿಕೆಲಸಮಾಡತಕ್ಕವರು, ದಂತದ ಕೆಲಸವನ್ನು ಕಲಿತವರು, ಶಸ್ತ್ರಗಳನ್ನೂ ಉಡುಗೆತೊಡುಗೆಗಳನ್ನೂ ತಯಾರ್ ಮಾಡತಕ್ಕವರು ಇವರೇ ಮುಂತಾದವರು ವಾಸಮಾಡುತಿದ್ದ ಸಣ್ಣ ಊರಿನ ಸುತ್ತಲೂ ರಕ್ಷಣಾರ್ಥವಾಗಿ ಒಂದೊಂದುವೇಳೆ ಪೌಳೀಗೋಡೆಯನ್ನೂ ಹಾಕುತಿದ್ದರು. ಇಂಡಿಯಾದಲ್ಲಿ ಈ ತೆರನಾದ ಹಳೇ ಪಟ್ಟಣಗಳು ಅನೇಕವಾಗಿವೆ.

ಧೂರ್ತರಾದ ಅಫ್ ಘನ್ ರಿಂದ ದೂರವಾಗಿರಲು ರಾಜಪುಟಾಣಕ್ಕೆ ಹಿಮ್ಮೆಟ್ಟಿಬಂದ ರಾಜಪುತ್ರರು, ಮೇಲೆ ಸೂಚಿಸಿದ ರೀತಿಯಲ್ಲಿ ಚಿತ್ತೂರು, ಜೋತ್‌ಪೂರ್ ಬಿಕನೇರ್, ಮತ್ತು ಜಸಲ್ಮೀರ್ ಮುಂತಾದ ಅನೇಕ ಪಟ್ಟಣಗಳನ್ನು ಕಟ್ಟಿದರು. ಮುಸಲ್ಮಾನರು ಇಂಡಿಯಾಕ್ಕೆ ಬಂದಮೇಲೆ ಡೆಲ್ಲಿ, ಆಗ್ರಾ, ಲಕ್ನೌ, ಅಲಹಬಾದ್ ಹೈದರಾಬಾದ್ ಮತ್ತು ಬಿಜಾಪೂರ್ ಪಟ್ಟಣಗಳನ್ನು ಕಟ್ಟಿದರು. ಇದೇರೀತಿಯಲ್ಲಿ ಮರಾಟೆಯವರು ತಮ್ಮ ಹಳೇ ರಾಜಧಾನಿಗಳಾದ ಪೂನಾ ಮತ್ತು ನಾಗಪುರಗಳನ್ನು ಕಟ್ಟಿದರು.

ಪುಣ್ಯಕ್ಷೇತ್ರಗಳು ವೈದಿಕರನ್ನು, ಯಾತ್ರಾರ್ಥಿಗಳನ್ನು ಹಾಗೆಯೇ ವರ್ತಕರನ್ನೂ ಸೆಳೆದವು. ಕ್ರಮೇಣ ಕ್ಷೇತ್ರಗಳ ಸುತ್ತುಮುತ್ತೂ ಪಟ್ಟಣಗಳು ಏರ್ಪಟ್ಟವು. ಕಾಶಿ, ಪ್ರಯಾಗ ಅಮೃಟಾಸರ್, ಗಯಾ, ಪೂರಿ, ಮಥುರಾ, ಮತ್ತು ತಿರುಚನಾಪಲ್ಲಿ--ಇವೇ ನಿದರ್ಶನಗಳಾಗಿರುವುವು. ಇಂಡಿಯಾದೇಶದಲ್ಲಿರುವಷ್ಟು ಪುಣ್ಯಕ್ಷೇತ್ರಗಳು ಪ್ರಪಂಚದ ಇನ್ನಾವ ದೇಶಗಳಲ್ಲೂ ಇಲ್ಲ.

ಇಂಡಿಯಾ ಮತ್ತು ಬರ್ಮಾ ದೇಶಗಳ ಆಕೃತಿಯನ್ನೂ ವಾಯುಗುಣವನ್ನೂ ಪರೀಕ್ಷಿಸಿ ಯಾವ ಯಾವ ಭಾಗಗಳಲ್ಲಿ ಎಂಥೆಂಥಾ ಕಟ್ಟಡಗಳನ್ನು ಕಟ್ಟುವರು ಎಂಬುದನ್ನೂ ಹೇಳುವುದು ಸಾಧ್ಯ. ಯಾವ ನೆಲದಲ್ಲಿ ಮಣ್ಣೇ ಹೆಚ್ಚಾಗಿ ತುಂಬಿದೆಯೋ ಆ ನೆಲದಮೇಲೆ ಮಣ್ಣಿನಮನೆಯನ್ನಾಗಲಿ, ಇಟ್ಟಿಗೆಯ ಮನೆಯನ್ನಾಗಲಿ

ಬಹುವಾಗಿ ಕಟ್ಟುವರು. ಉತ್ತರಹಿಂದೂಸ್ಥಾನದಲ್ಲಿರುವ ಆಗ್ರಾ, ಡೆಲ್ಲಿ, ಜೈಪುರ ವೇಮುಂತಾದ ಪಟ್ಟಣಗಳಲ್ಲಿ ಬಹು ಸೊಗಸಾದ ಕಟ್ಟಡಗಳು ಇರುವುವು. ವಿಂಧ್ಯ ಪರ್ವತಗಳ ಸುತ್ತುಮುತ್ತೂ ಹೇರಳವಾಗಿ ಬೆಣಚುಕಲ್ಲೂ, ರಾಜಪುಟಾಣ ದಲ್ಲಿ ಶ್ವೇತಶಿಲೆಯೂ ಬೇಕಾದಷ್ಟು ದೊರೆಯುವುದೇ ಆ ಪಟ್ಟಣಗಳಲ್ಲಿ ಸೊಗಸಾದ ಕಲ್ಲುಕಟ್ಟಡಗಳು ಇರಲು ಕಾರಣ. ಇಂಡಿಯಾದೇಶದ ದಕ್ಷಿಣಭಾಗದಲ್ಲಿ ಗಟ್ಟಿ ಯಾದ ಬೆಣಚುಕಲ್ಲು ಗುಡ್ಡಗಳು ವಿಶೇಷವಾಗಿರುವುವು. ಆದುದರಿಂದ ದಕ್ಷಿಣದೇಶ ದಲ್ಲಿ ದಿವ್ಯವಾದ ದೇವಾಲಯಗಳೂ, ಬಲವಾದ ಕೋಟೆಗಳೂ ಇರುವುವು. ತೇಗವು ಬಹುವಾಗಿ ಬೆಳೆಯುವ ಬರ್ಮಾದೇಶದಲ್ಲಿ ಮನೆಗಳೂ, ಮಠಗಳೂ ಮರದಿಂದಲೇ ಮಾಡಿದವು. ಕಾಷ್ಮೀರ್ ಸಂಸ್ಥಾನದ ರಾಜಧಾನಿಯಾದ ಶ್ರೀನಗರವು ಹಿಮಾ ಲಯ ಪರ್ವತಗಳಲ್ಲಿ ಬೆಳೆಯುವ ಸುವಾಸನೆಯಾದ “ಸೀಡರ್” ಮರದಿಂದಲೇ ಕಟ್ಟಲ್ಪಟ್ಟಿರುವುದು. ದಕ್ಷಿಣದೇಶದಲ್ಲಿ ದಕ್ಷಿಣಕ್ಕೆ ಹೋಗುತಹೋಗುತ ಒಡಜನರು ತಮ್ಮ ಗುಡಸಲಿಗೆ ಬೊಂಬನ್ನೂ, ತೆಂಗನ್ನೂ ಹೆಚ್ಚಾಗಿ ಉಪಯೋಗಿಸುವರು. ಚಳಿ ಗಾಲದಲ್ಲಿ ಚಳಿಯೂ ಮಳೆಗಾಲದಲ್ಲಿ ಮಳೆಯೂ ಎಲ್ಲಿ ಹೆಚ್ಚೋ ಅಲ್ಲಿ ಮನೆಗ ಳನ್ನೂ ಹಳ್ಳಿಗಳನ್ನೂ ಚೆನ್ನಾಗಿ ಕಟ್ಟುವರು. ಮಳೆಯೂ ಚಳಿಯೂ ಕಡಿಮೆಯಾ ಗಿರುವ ಸ್ಥಳಗಳಲ್ಲಿ, ಜನರಿಗೆ ಆಶ್ರಯವು ಅಷ್ಟು ಬೇಕಾಗಿಲ್ಲವಾದುದರಿಂದ ಸಾಧಾ ರಣವಾದ ಮನೆಗಳನ್ನೂ ಗ್ರಾಮಗಳನ್ನೂ ಕಟ್ಟಿಕೊಳ್ಳುವರು ಎಂದು ಸಾಮಾನ್ಯ ವಾಗಿ ಹೇಳಬಹುದು. ಇಂಡಿಯಾದಂತಹ ಬಿಸಿಲರಾಜ್ಯಗಳಲ್ಲಿ ಬಿಸಿಲಿಗೆ ಮರೆಯಾಗಿ ತಂಪಾಗಿರಲು, ಚಳಿರಾಜ್ಯಗಳಲ್ಲಿ ಬೆಚ್ಚಗಿರಲು ತಕ್ಕ ಮನೆಗಳನ್ನು ಕಟ್ಟುವರೆಂದು ಧಾರಾಳವಾಗಿ ಹೇಳಬಹುದು.

ಪಾಠನಿದರ್ಶನ.

ಚರಿತ್ರೆ. ಅಶೋಕ,

ಉಪಕರಣಗಳು,—ಇಂಡಿಯಾನಕ್ಷೆ, ಶಾಸನವಕಂಬಗಳ ಮತ್ತು ಬೌದ್ಧರಕಾಲದ ಕಟ್ಟಡಗಳ ಚಿತ್ರಗಳು, ಪಾಳೀ ಭಾಷೆಯ ಅಕ್ಷರಗಳು, ಏಷ್ಯಾ ಮತ್ತು ವರ್ಲ್ಡ್ ಈ ನಕ್ಷೆಗಳು. ಉದ್ದೇಶ-ಕಲ್ಪನಾಶಕ್ತಿಯನ್ನು ಬೆಳೆಯಿಸಿ ಲೋಕವ್ಯವಹಾರಜ್ಞಾನವನ್ನು ಹೆಚ್ಚಿಸುವುದು.

ವಿಷಯ.	ಬೋಧನಕ್ರಮ.
ಪ್ರಕೃತಕ್ಕೆ ಉಪಯುಕ್ತವಾಗುವ ಅಂಶಗಳು.	
(1) ಕ್ರಿಸ್ತಪೂರ್ವಕ್ಕೂ ಕ್ರಿಸ್ತಶಕಕ್ಕೂ ಇರುವ ಭೇದಗಳು.	ಉಚಿತವಾದ ಪ್ರಶ್ನೆಗಳಿಂದ ಹೊರಡಿಸುವುದು.
(2) ಪ್ರಪಂಚದ ಮತಗಳಿಗೆಲ್ಲಾ ಏಷ್ಯಾಖಂಡವೇ ತವರುಮನೆ.	ಯಾವಾವ ಮತವು ಎಲ್ಲೆಲ್ಲಿ ಹುಟ್ಟಿತೆಂಬುದನ್ನು ಹೇಳಿಸುವುದು. ಆ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸುವಂತೆ ಮಾಡುವುದು. ಕ. ಹ. ಆವೃತ್ತಿ.
(3) ಕೆಲವು ಕೆಲವು ಕಾಲಗಳಲ್ಲಿ ಕೆಲವುಕೆಲವು ಮತಗಳು ಮುಖ್ಯವಾಗಿ ಸರ್ಕಾರದ ಆಶ್ರಯದಿಂದ ಪ್ರಬಲಿಸುತ್ತವೆ.	ಮಹಮ್ಮದೀಯ ಮತ ಮತ್ತು ಕ್ರೈಸ್ತಮತಇವುಗಳ ನಿದರ್ಶನ ಕೊಡುವದು. ಬೌದ್ಧಮತಕ್ಕೆ ಪ್ರಚಾರಕನಾರೆಂಬುದನ್ನು ಪ್ರಸ್ತಾಪಿಸಿ ಅಶೋಕನ ಚರಿತ್ರೆಗೆ ಸಂಬಂಧಿಸುವುದು.
ಹೊಸಪಾಠ.	
ಅಶೋಕ—	

ವಿಷಯ.	ಬೋಧನಕ್ರಮ.
I ಇವನಕಾಲ :—ಕ್ರಿ. ಪೂ. 260–223	ಈಗ್ಗೆ ಎಷ್ಟುವರ್ಷವಾಯಿತೆಂಬುದನ್ನು ತಿಳಿಸುವುದು. ಕ. ಹ. ಆವೃತ್ತಿ.
II ಇವನು ರಾಜ್ಯಭಾರಕ್ಕೆ ಬಂದಬಗೆ. ತಂದೆಯಾದ ಬಿಂಬಸಾರನು ಮಗಧಕ್ಕೆ ದೊರೆಯಾಗಿದ್ದನು. ಅವನು ಸಾಯು ವಾಗ ಅಶೋಕನು ಉಜ್ಜಯಿನಿಯಲ್ಲಿ ಸರ್ವಾಧಿಕಾರಿಯಾಗಿದ್ದನು. ಇವನ ಅಣ್ಣನು ಪಂಜಾಬಿನಲ್ಲಿ ತಕ್ಷಶಿಲೆ ಎಂಬ ಕಡೆ ಅಧಿಕಾರಿಯಾಗಿದ್ದನು. ತಂದೆ ಸತ್ತಬಳಿಕ ಸುಮಾರು 4 ವರ್ಷ ಯುದ್ಧಮಾಡಿ ಅಣ್ಣನನ್ನು ಗೆದ್ದು ತಾನೇ ದೊರೆಯಾದನು, ಎಂದು ತಿಳಿದುಬರುವುದು.	ಇಂತಹ ಸಂದರ್ಭಗಳಲ್ಲಿ ಮ್ಯಾಪನ್ನು ತೋರಿಸುವುದು. ಔರಂಗಸೇಬನನ್ನು ಹೋಲಿಸುವುದು. ಕ. ಹ. ಆವೃತ್ತಿ.
III ಬಳಿಕ ನಡೆದ ಯುದ್ಧಗಳು. ಕಳಿಂಗನಿಗೂ ಅಶೋಕನಿಗೂ ಕೆಲವು ವರ್ಷಗಳವರೆಗೆ ದೊಡ್ಡಯುದ್ಧ ವಾಯಿತು.	ನಕ್ಷೆಯಲ್ಲಿ ಕಳಿಂಗರಾಜ್ಯವನ್ನು ತೋರಿಸಿ ಅದಕ್ಕೆ ಈಗಿನ ಹೆಸರನ್ನು ಹೇಳಿಸುವುದು. ಕ. ಹ. ಆವೃತ್ತಿ.
IV ಅದರ ಫಲಿತಾಂಶ— ಅಶೋಕನು ಗೆದ್ದನು. ಆದರೂ ಅವನ ಮನಸ್ಸು ಬಹಳ ವ್ಯಥೆಪಟ್ಟಿತು. ರಾಜ್ಯವನ್ನು ರಕ್ತವನ್ನು ಚೆಲ್ಲಿ ಸಂಪಾದಿಸುವುದಕ್ಕಿಂತ ಕರುಣವನ್ನು ತೋರಿಸಿ ಸಂಪಾದಿಸಬಹುದೆಂದು ಕೊಂಡನು. ತನ್ನ ಮನಶ್ಶಾಂತಿಗೆ ಯಾವುದೂತೋರದೆ ಬೌದ್ಧಮತವನ್ನು	"ತಲೆತಗಲಿದಮೇಲೆ ಬುದ್ಧಿಬರುವುದು" ಎಂದು ತಿಳಿಸುವುದು. ಬೌದ್ಧಮತದ ಸಾರಾಂಶವನ್ನು ಹೇಳಿಸುವುದು ಕ. ಹ. ಆವೃತ್ತಿ.

ವಿಷಯ.	ಬೋಧನಕ್ರಮ.
ಬಲವಾಗಿ ಹಿಡಿದನು. ಬಳಿಕ "ಪ್ರಿಯದಾಸಿ" ಎಂದು ಬೇರೆ ಹೆಸರಿಟ್ಟು ಕೊಂಡನು.	ಉದಾ :–ಬಿಟ್ಟಿದೇವ-ವಿಷ್ಣುವರ್ಧನ.
V ರಾಜ್ಯವನ್ನು ವಿಸ್ತರಿಸಿದ ಬಗೆ - ಸ್ವತಂತ್ರರಾಜರಿಗೆ ಆಪ್ತಸ್ನೇಹಿತನಾಗಿಯೂ, ಅಧೀನರಾಜರುಗಳಿಗೆ ಹಿತಚಿಂತಕನಾದ ತಂದೆಯಾಗಿಯೂ ಇದ್ದದ್ದರಿಂದ ಎಲ್ಲಾ ಕಡೆಯೂ ಇವನ ಪ್ರಾಬಲ್ಯವೇ ಹೆಚ್ಚಾಗಿ ಕಡೆಗೆ ಒಟ್ಟು ಹಿಂದೂ ಸ್ಥಾನವೆಲ್ಲಾ ಇವನ ಅಧೀನವಾಗಿತ್ತು. ಮತ್ತು ಅಫ್ಘಾನಿಸ್ಥಾನದ ಪೂರ್ವಭಾಗವೂ ಅಧೀನವಾಗಿತ್ತು.	ಈಗಿನ ಇಂಗ್ಲಿಷ್ ಸಾಮ್ರಾಜ್ಯವನ್ನು ಹೋಲಿಸುವುದು. ಕ. ಹ. ಆವೃತ್ತಿ.
VI ಇವನಕಾಲದಲ್ಲಿ ಮಾಡಿದ್ದ ಏರ್ಪಾಡುಗಳು.	
a ಮತಕ್ಕಾಗಿ—	
1 ಆಗಾಗ್ಗೆ ಸಭೆಗಳನ್ನು ಮಾಡಿಸಿ ಮತವಿಷಯಗಳನ್ನು ಚರ್ಚಿಸುವುದು.	III ನೆಯ ಮಹಾಸಭೆಯಾದ್ದನ್ನು ತಿಳಿಸುವುದು.
2 ಅಲ್ಲಲ್ಲಿ ಶಿಲಾಶಾಸನಗಳಲ್ಲಿ ಮತಸೂತ್ರಗಳನ್ನು ಬರೆಸುವುದು.	ಚಿತ್ರಗಳನ್ನು ಲಿಪಿಯನ್ನು ತೋರಿಸುವುದು.
3 ಮತದವರು ಸರಿಯಾಗಿ ನಡೆಯುವರೇ ಎಂಬುದನ್ನು ನೋಡಿಕೊಳ್ಳುವುದಕ್ಕೆ ಅಧಿಕಾರಿಗಳನ್ನು ನೇಮಿಸುವುದು.	ಮರಮುದ್ರೆಯನ್ನು ಹೋಲಿಸುವುದು.
4 ಮತಬೋಧಕರನ್ನು ನಾನಾದಿಕ್ಕುಗಳಿಗೂ ಕಳುಹಿಸುವುದು. ಮಗ–(ತಮ್ಮ)ಮಾಹಿಂದ,ಮಗಳು ಸಂಗ– ತ್ರಾ–ಸಿಲೋನಿಗೆ ಹೋಗಿದ್ದರು.ಉದಾ:–	ಇಂಡಿಯಾಮಾತ್ರವಲ್ಲದೆ ಸಿಂಹಳ, ಬರ್ಮ, ಈಜಿಪ್ಟಿಗೂ ಕಳುಹಿಸಿದ್ದನೆಂದು ತಿಳಿಸುವುದು.

ವಿಷಯ.	ಬೋಧನಕ್ರಮ.
5 ಅಲ್ಲಲ್ಲಿ ಬೌದ್ಧಭಿಕ್ಷುಗಳಗೆ ಆಶ್ರಮಗಳನ್ನು ಕಟ್ಟಿಸುವುದು.	ಇವುಗಳ ಚಿತ್ರಗಳನ್ನು ತೋರಿಸುವುದು.
6 ನಿರ್ಬಂಧಪಡಿಸುತ್ತಿರಲಿಲ್ಲ.	ಮಹಮ್ಮದೀಯಮತವನ್ನು ಹೋಲಿಸುವುದು
	ಕ. ಹ. ಆವೃತ್ತಿ.
b ನೀತಿಬೋಧೆ—(ಮತದತತ್ವದಿಂದ ಲಭಿಸಿದ್ದುವು.)	
1 ಕೋಪ, ಹಿಂಸೆ, ಅಹಂಕಾರ ಮುಂತಾದುವು ಕೂಡದು.	ಇವು ಸರ್ವಮತದವರೂ ಒಪ್ಪತಕ್ಕವೆಂದೂ ಮುಖ್ಯ
2 ಪ್ರಾಣಿಹಿಂಸೆ ಮಾಡಬಾರದು.	ವಾಗಿಬೌದ್ಧಮತದ ತತ್ವಗಳೆಂದೂ ತಿಳಿಸುವದು.
3 ಮಿತವ್ಯಯವಿರಬೇಕು.	ವಿವರಿಸುವದು
4 ಆತ್ಮಾವಲಂಬನೆ ಶುದ್ಧಹೃದಯ ಕೃತಜ್ಞತೆಗಳಿರಬೇಕು.	ಕ. ಹ. ಆವೃತ್ತಿ.
5 ಗುರುಹಿರಿಯರಿಗೆ ವಿಧೇಯರಾಗಿರಬೇಕು.	
c ಲೋಕೋಪಕಾರಕವಾದ ಕೆಲಸಗಳು.	
1 ರಸ್ತೆಗಳಲ್ಲಿ ಸಾಲುಮರಗಳನ್ನು ನೆಡಿಸುವುದು	
2 ಹಣ್ಣುಗಿಡಗಳನ್ನು ಔಷಧಿಗಾಗುವ ಮೂಲಿಕೆಗಳನ್ನೂ ಬೆಳೆಯಿಸುವುದು.	

ವಿಷಯ.	ಬೋಧನಕ್ರಮ.
3 ದಾರಿಯಲ್ಲಿ ಅಲ್ಲಲ್ಲಿ ಬಾವಿಗಳನ್ನು ತೋಡಿಸುವುದು, ಕಾಲುವೆಗಳನ್ನು ತೋಡಿಸುವುದು. 4 ಜನಗಳಿಗೂ ಪಶುಗಳಿಗೂ ಔಷಧಿಗಳನ್ನು ಕೊಡಿಸುವುದು. 5 ಜನಗಳು ಕಲಹವಿಲ್ಲದೆ ಶಾಂತರಾಗಿರುವಂತೆ ಏರ್ಪಾಡು ಮಾಡುವುದು. 6 ಮಾರ್ಗಗಳಲ್ಲಿ ಸತ್ರಗಳನ್ನು ಕಟ್ಟಿಸುವುದು.	ಇವು ಈಗ ನಮಗೆ ಲಭಿಸಿರುವುದರಿಂದ ತಾತ್ಪರವಾಗಿ ತೋರಿದರೂ ಇವು ಇಲ್ಲದಿದ್ದಾಗ ಇಂತಹ ಅನುಕೂಲಗಳನ್ನು ಮಾಡಿದ್ದುದು ಜನಗಳಿಗೆಷ್ಟು ಸಹಾಯವಾಯ್ತೆಂದು ತಿಳಿಸುವುದು. ಪ್ರಕೃತಸ್ಥಿತಿಯನ್ನು ಹೋಲಿಸುವುದು. ಕ. ಹ. ಆವೃತ್ತಿ,
VII ಅಶೋಕನ ಕಾಲದ ಚರಿತ್ರೆಯನ್ನು ತಿಳಿಯಲು ನಮಗಿರುವ ಅನುಕೂಲಗಳು:— 1 ಶಾಸನಗಳು (ಮೈಸೂರು, ಮದ್ರಾಸ್, ಟಿಬೆಟ್, ಸಿಲೋನ್, ಪೆಷಾವರ್, ಈ ಬಳಿಗಳಲ್ಲಿ) 2 ಪರದೇಶೀಯರ ಲೇಖನಗಳು.	ಇವು ಸಿಕ್ಕಿರುವ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸುವುದು. ಹುಯಾನ್‌ತ್ಸಾಂಗನನ್ನು ಜ್ಞಾಪಿಸುವುದು. ಇವನು ಕ್ರಿ.ಶ. 630ರಲ್ಲಿ ಬಂದಿದ್ದವನು. ಕ. ಹ.ಆವೃತ್ತಿ.
VIII ಅಶೋಕನ ಚರಿತ್ರೆಯಿಂದ ನಾವು ತಿಳಿಯಬೇಕಾದ ಅಂಶಗಳು. ಅಶೋಕನು ಲೋಕೋಪಕಾರಿ, ಬೌದ್ಧಮತವು ಆಗ ಪ್ರಬಲವಾಯ್ತು, ಹಿಂದೂಮತವು ಖಿಲವಾಗುತ್ತಾಬಂತು.	ಇದನ್ನು ಬಾಲಕರಿಂದ ಹೊರಪಡಿಸುವುದು. ಕ ಹ. ಆವೃತ್ತಿ. ಒಟ್ಟು ಪಾಠದ ಪುನರಾವರ್ತನೆ. J. K.

ಸ್ಕೂಲ್ ಡಿಸಿಪ್ಲಿನ್.

(144 ನೇ ಪುಟದ ಶೇಷ)

3. ನಂಬರು ಕೊಡುವುದು:— 1 ಈ ಬಹುಮಾನವು ಸದ್ಯದಲ್ಲಿ ಸಲ್ಲುವುದರಿಂದ ಮಕ್ಕಳಲ್ಲಿ ಅವಧಾನವು ಹೆಚ್ಚುವಂತಾಗುವುದು.

2 ಚಿಕ್ಕಹುಡುಗರಲ್ಲಿ ಮಂಕುತನವು ತಪ್ಪಿ ಚಟುವಟಿಕೆಯು ಬರುವುದು.

3 ಆಯಾದಿನದ ಕೆಲಸವನ್ನು ಬಾಲಕನು ಆಯಾದಿನವೇ ಎಷ್ಟರಮಟ್ಟಿಗೆ ಮಾಡಿದಾನೆಯೋ ತಿಳಿಯಲು ಅನುಕೂಲ.

4 ಸೋಮಾರಿಯಾಗಿರುವ ಹುಡುಗ, ಧೈರ್ಯಸಾಲದೆ ಹಿಂದೆಗೆಯುವ ಹುಡುಗ ಇಂತಹವರಿಗೆಲ್ಲಾ ನಂಬರು ಕೊಡುವುದರಿಂದ ಬಹಳ ಉತ್ತೇಜನವುಂಟು

5 ನಂಬರ್ ಕೊಡುವಾಗ ಸಾಮಾನ್ಯವಾಗಿ ಮಕ್ಕಳು ಸ್ಥಳವನ್ನು ಬದಲಾಯಿಸಬೇಕಾದುದರಲ್ಲಿ ಅವರ ಚಲನೆಗೆ ಅವಕಾಶವಿರುವುದರಿಂದ ಅವರಲ್ಲಿ ಬೇಸರವು ಕಡಿಮೆಯಾಗುವುದು. ಸ್ವಲ್ಪಮಟ್ಟಿಗೆ ಆರೋಗ್ಯಕ್ಕೂ ಕಾರಣವಾಗುವುದು. ಇಷ್ಟು ಪ್ರಯೋಜನವಿದ್ದರೂ ನಂಬರ್ ಕೊಡುವುದು ದೂಷ್ಯವೆಂದು ಹೇಳುವುದುಂಟು.

(a) ನಂಬರ್ ಕೊಡುವುದರಿಂದ ಕಾಲಹರಣೆಯಾಗುವುದು.

(b) ಬೋಧನೆಯು ಸರಾಗವಾಗಿ ನಡೆಯುವಾಗ ಇದರಿಂದ ಅಡಚಣೆಯಾಗುವುದು.

(c) ನಂಬರ್ ಕೊಡುವುದಾದರೆ ಉಪಾಧ್ಯಾಯರು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಹೇಳಬೇಕಾದಷ್ಟುಮಟ್ಟಿಗೆ ಪ್ರಾಯಶಃ ಮಕ್ಕಳಿಗೆ ಚುರುಕುತನಮಾತ್ರ ಇದ್ದರೆ ಸಾಕು; ವಿಶೇಷ ಪರ್ಯಾಲೋಚನೆಯು ಬೇಕಾಗಿರುವುದಿಲ್ಲ, ಅಂದರೆ ಚುರುಕುತನವನ್ನೂ ಜ್ಞಾಪಕಶಕ್ತಿಯನ್ನೂ ವೃದ್ಧಿಪಡಿಸಲು ನಂಬರ್ ಕೊಡುವುದು ಸಹಾಯ ಮಾಡುವುದೇ ಹೊರತು ಮಕ್ಕಳಲ್ಲಿ ವಿಮರ್ಶೆಯನ್ನು ವಿಶೇಷ ಹುಟ್ಟಿಸಲಾರದು.

(d) ನಂಬರ್ ಕೊಡುವುದರಿಂದ ಮಕ್ಕಳಲ್ಲಿ ಅಸೂಯಾದಿದುರ್ಗುಣಗಳು ಹುಟ್ಟಿಯಾವು.

ಒಟ್ಟಿನಲ್ಲಿ ಮಕ್ಕಳ ತರಗತಿಯಲ್ಲಿ ಅಂದರೆ ಪ್ರೈಮರೀ ತರಗತಿಗಳಲ್ಲಿ ನಂಬರ್ ಕೊಡುವುದನ್ನು ಇಡಬಹುದೆಂದು ತೋರುತ್ತದೆ. ನಂಬರ್ ಕೊಡುವುದರಲ್ಲೂ ಅನೇಕವಿಧಗಳುಂಟು. ಮೇಲೆ ಹೇಳಿದಂತೆ ಪ್ಲೇಸ್ ಕೊಡುವುದೊಂದು, ಇದಕ್ಕೆ ಬದಲಾಗಿ ಹುಡುಗರು ಇದ್ದಕಡೆಯೇ ಇರುವಂತೆ ಮಾಡಿ ಅಲ್ಲಲ್ಲೇ ಪ್ರಶ್ನಿಸಿ ಉತ್ತರಕ್ಕೆ ತಕ್ಕಂತೆ ನಂಬರ್ ಗುರುತು ಮಾಡಿಕೊಳ್ಳುವುದು ಇನ್ನೊಂದು ವಿಧ. ಹೀಗೆಯೇ ಇತರ ವಿಧಗಳೂ ಇರಬಹುದು.

4. ಮಾನಿಟರ್ ಮುಂತಾದ ಪದವಿಗಳು:—ಇವು ನಡತೆಯಲ್ಲಿ ಸರಿಯಾಗಿರುವವರಿಗೆ ಕೊಡಬಹುದಾದ ಬಹುಮಾನಗಳು. ಇದರಿಂದ ಅಂತಹ ಪದವಿಯನ್ನು ಹೊಂದಿದ ವಿದ್ಯಾರ್ಥಿಗಳಿಗೆ ಗೌರವವುಂಟು. ಈ ಪದವಿಗಳನ್ನು ಒಬ್ಬರಿಂದೊಬ್ಬರಿಗೆ ಕಾಲಕ್ರಮವಾಗಿ ಬದಲಾಯಿಸುತ್ತಾ ಬರಬಹುದು.

5. ಶ್ಲಾಘನೆ:—ಇದು ಮನುಷ್ಯನಿಗೆ ಉತ್ತೇಜಕವಾದುದು. ಇದನ್ನು ಯುಕ್ತವಾಗಿ ಉಪಯೋಗಿಸಿಕೊಂಡರೆ ಮಕ್ಕಳಿಂದ ಎಷ್ಟೋ ಕೆಲಸವನ್ನು ಮಾಡಿಸಬಹುದು. ಶ್ಲಾಘನೆಯ ಮೂಲಕ ಒಳ್ಳೆಯ ಕೆಲಸಗಳನ್ನು ಮಾಡಿಸಬಹುದಲ್ಲದೆ ಕೆಟ್ಟ ಕೆಲಸಗಳನ್ನು ಬಿಡಿಸಬಹುದು ಆದರೆ ಶ್ಲಾಘನೆಯನ್ನು ಅತಿಯಾಗಿ ನಿರೀಕ್ಷಿಸುವಂತೆ ಮಾಡಿಕೊಳ್ಳಬಾರದು. ಮಾಡಿಕೊಂಡರೆ ಮಕ್ಕಳಲ್ಲಿ ಜಂಭವೂ ಕಪಟವೂ ವೃದ್ಧಿಯಾಗುವುದು.

ಹುಡುಗರು ಉಪಾಧ್ಯಾಯರನ್ನು ಪ್ರೀತಿಗೌರವಗಳಿಂದ ಕಾಣುತ್ತಿದ್ದರೆ ಅಂಥವರ ಶ್ಲಾಘನೆಗೆ ಅವರು ಕೆಲಸಮಾಡುವರು. ಆದ್ದರಿಂದ ಉಪಾಧ್ಯಾಯರು ತಮ್ಮ ಗೌರವವನ್ನು ಕಾಪಾಡಿಕೊಂಡು ಶ್ಲಾಘನೆಯನ್ನು ಎಚ್ಚರಿಕೆಯಿಂದ ವಿನಿಯೋಗಿಸಿಕೊಳ್ಳಬೇಕು. ನಡತೆಯಲ್ಲಿ ಕೀಳಾಗಿ ಬುದ್ಧಿಯಲ್ಲಿ ಮಾತ್ರ ಪಟುವಾಗಿರುವವರನ್ನು ಶ್ಲಾಘಿಸಕೂಡದು. ಧೈರ್ಯಸಾಲದೆ ಹಿಂದೆಗೆಯುವ ಮಕ್ಕಳಿಗೆ ಶ್ಲಾಘನೆಯು ಬೇಕು. ಸಿಕ್ಕಿದುದಕ್ಕೆಲ್ಲಾ ಶ್ಲಾಘಿಸುವುದು ಮತ್ತು ಯಾವಾಗ್ಗೂ ಶ್ಲಾಘಿಸದೆಯೇ ಇರುವುದು ಇವೆಲ್ಲಾ ತಪ್ಪು. ಎಲ್ಲರಮುಂದೆ ಶ್ಲಾಘಿಸುವುದೂ ಉಂಟು, ಅಥವಾ ಏಕಾಂತವಾಗಿ ಶ್ಲಾಘಿಸುವುದೂ ಉಂಟು. ಒಳ್ಳೆಯ ಉಪಾಧ್ಯಾಯರು ಕೆಲವು ಸಂದರ್ಭಗಳಲ್ಲಿ ಮುಖಭಾವದಿಂದಲೇ ಶ್ಲಾಘನೆಯನ್ನು ತೋರ್ಪಡಿಸುವರು.

ಹೆಚ್ಚಾದ ಶ್ಲಾಘನೆಗೆ ಪಾತ್ರರಾದ ಹುಡುಗರ ಹೆಸರನ್ನು ಬರೆದು ಪ್ರಕಟಿಸು ವುದೂ ಉಂಟು.

ದಂಡನೆ:—

ದಂಡನೆಯೆಂದರೆ ಯಾವುದಾದರೂ ವಿಧದಲ್ಲಿ ನೋವನ್ನು ಉಂಟುಮಾಡತಕ್ಕದ್ದು. ಈ ನೋವನ್ನು ತಪ್ಪಿಸಿಕೊಳ್ಳಬೇಕೆಂಬ ಉದ್ದೇಶಕ್ಕಾಗಿ ಮಕ್ಕಳು ಕೆಲಸ ಮಾಡುವರು. ಯಾವ ಸ್ಕೂಲಿನಲ್ಲೂ ದಂಡನೆಯನ್ನು ಪೂರ್ಣವಾಗಿ ಬಿಡಬೇಕೆಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಬಾಕಿಯ ಕೆಲಸವು ಸರಿಯಾಗಿ ನಡೆಯುತ್ತಿದ್ದರೆ ದಂಡನೆಯು ಕಡಿಮೆಯಾಗುವುದು. ಇದು ಕಡಿಮೆಯಾದಷ್ಟೂ ಸ್ಕೂಲು ಶ್ಲಾಘ್ಯವಾದುದೆಂದು ಹೇಳಬಹುದು.

(i) ದಂಡನೆಯನ್ನು ವಿಶೇಷವಾಗಿ ವಿಧಿಸದಿರಬೇಕಾದರೆ ಸಂವಿಧಾನವು ಸರಿಯಾಗಿರಬೇಕು.

(ii) ಪಾಠವನ್ನು ಚೆನ್ನಾಗಿ ಬೋಧಿಸಬೇಕು; ಉಪಾಧ್ಯಾಯರು ಸರ್ವದಾ ಎಚ್ಚರಿಕೆಯಿಂದಿರಬೇಕು.

(iii) ಮಕ್ಕಳಲ್ಲಿ ನಿರ್ವ್ಯಾಜವಾದ ಅನುರಾಗವಿರಬೇಕು. ದಂಡನೆಯನ್ನು ಕಡಿಮೆಮಾಡುವುದಕ್ಕಾಗಿ ಇನ್ನು ಕೆಲವು ಸಾಧನಗಳನ್ನು ಹೇಳಬಹುದು.

1 ಒಳ್ಳೆಯತನಕ್ಕೆ ಪ್ರೋತ್ಸಾಹ ಕೊಡಬೇಕು.

2 ತಪ್ಪುಮಾಡಿದವನನ್ನು ತಿದ್ದುವುದಕ್ಕೆ ಬದಲು ತಪ್ಪಿಗೇ ಅವಕಾಶ ಕೊಡದೆ ಇರಬೇಕು.

3 ತಪ್ಪನ್ನು ಕಂಡರೆ ಮೊಳೆಯಲ್ಲೇ ಚಿಗಟಬೇಕು.

4 ಇಂತಿಂತಹ ಕೆಲಸವನ್ನೇ ಮಾಡಬೇಕೆಂದು ನಿಯಮಿಸಿ ಅದರಂತೆ ಮಕ್ಕಳಿಂದ ಕೆಲಸ ಮಾಡಿಸಬೇಕು.

5 ದಂಡಿಸಿದಪಕ್ಷದಲ್ಲಿ ಖಂಡಿತವಾಗಿಯೂ ದಂಡಿಸಿಬಿಡಬೇಕು.

6 ಹುಡುಗರ ಒಟ್ಟು ಅಭಿಪ್ರಾಯವು ಉಪಾಧ್ಯಾಯರಿಗೆ ಅನುಕೂಲವಾಗಿರಲು ಪ್ರಯತ್ನಪಡಬೇಕು.

7 ದಂಡಿಸುವಾಗೆಲ್ಲಾ ಮುಂಚಿತವಾಗಿ ದಂಡಿಸಬಹುದೇ ಎಂದು ವಿಚಾರ ಮಾಡಬೇಕು ಅನಂತರ ಯುಕ್ತವಾಗಿದ್ದಲ್ಲಿ ನಡೆಸಬೇಕು.

ದಂಡನೆಯ ಉದ್ದೇಶಗಳು:—

1 ತಪ್ಪುಮಾಡಿದವನು ತಿದ್ದಿಕೊಂಡು ಪುನಃ ತಪ್ಪುಮಾಡದಿರಲೆಂದು: ಈ ಉದ್ದೇಶವು ನೆರವೇರಬೇಕಾದರೆ ತಪ್ಪುಮಾಡಿದವನಿಗೆ ತನಗಾದ ದಂಡನೆಯು ನ್ಯಾಯವಾದುದೆಂದು ನಂಬಿಕೆ ಹುಟ್ಟಿರಬೇಕು ಮತ್ತು ಆ ದಂಡನೆಯು ಅವನಿಗೆ ಅವಮಾನಕರವಾಗಿರಬೇಕು. ತನ್ನ ಕೆಲಸವು ಕೆಟ್ಟದ್ದೆಂಬ ಅಭಿಪ್ರಾಯವು ಬಹುಕಾಲ ಮನಸ್ಸಿನಲ್ಲಿ ನಿಲ್ಲುವಷ್ಟು ಹೆಚ್ಚಾದ ದಂಡನೆಯನ್ನು ವಿಧಿಸಬೇಕು.

2 ತಪ್ಪುಮಾಡಿ ದಂಡನೆಯನ್ನನುಭವಿಸಿದ ಹುಡುಗನನ್ನು ನೋಡಿ ಇತರರು ತಪ್ಪುಮಾಡದಂತಾಗಲೆಂಬುದು. ಈ ಉದ್ದೇಶವು ನೆರವೇರಬೇಕಾದರೆ ಎಲ್ಲರೂ ತಪ್ಪೆಂದು ಭಾವಿಸುವ ಕೆಲಸಕ್ಕೆ ದಂಡನೆಯನ್ನು ವಿಧಿಸಬೇಕು. ಆ ದಂಡನೆಯನ್ನು ನೋಡುವುದರಿಂದ ಭಯಹುಟ್ಟಿ ನೋಡುವವರು ಅಂತಹ ತಪ್ಪನ್ನು ಮಾಡದಿರುವಷ್ಟು ಕಠಿಣವಾದ ದಂಡನೆಯನ್ನು ವಿಧಿಸಬೇಕು. ಆದರೆ ಅತಿಯಾಗಿ ದಂಡಿಸಬೇಕೆಂದು ಅಭಿಪ್ರಾಯವಲ್ಲ; ಅತಿಯಾಗಿ ದಂಡಿಸಿದರೆ ನೋಡುವವರಿಗೆ ತಪ್ಪುಮಾಡಿದವನ ಮೇಲೆ ಕರುಣಹುಟ್ಟಿ ದಂಡನೆಯ ಉದ್ದೇಶಕ್ಕೆ ವಿಘಾತಬರುವುದು.

3 ದಂಡನೆಗೆ ಮತ್ತೊಂದು ಉದ್ದೇಶವನ್ನು ಸಹ ಹೇಳುವುದುಂಟು. ಅದೇನೆಂದರೆ ದುಷ್ಕೃತ್ಯಕ್ಕೂ ಅನರ್ಥಕ್ಕೂ ಲೋಕದಲ್ಲಿ ಸಹಜವಾದ ಸಂಬಂಧವಿದೆಯಷ್ಟೆ, ಇದಕ್ಕನುಸಾರವಾಗಿ ದುಷ್ಕೃತ್ಯವನ್ನು ನಡೆಯಿಸಿದವನು ಲೋಕದಲ್ಲಿ ಅದಕ್ಕನುಸಾರವಾಗಿ ಅನಿಷ್ಟವನ್ನು ಯಾವಾಗಲಾದರೂ ಅನುಭವಿಸಲೇಬೇಕಾಗುವುದು. ಸ್ಕೂಲಿನಲ್ಲಾದರೋ ಹುಡುಗರು ಮಾಡುವ ತಪ್ಪುಗಳಿಗೆಲ್ಲಾ ಲೋಕದಲ್ಲಿರುವಂತೆ ಅವಶ್ಯಕವಾಗಿ ವಿಫಲವು ಕಾಣುವುದಿಲ್ಲ. ಆದ್ದರಿಂದ ಮಾಡುವ ತಪ್ಪಿಗೆ ಒಂದೊಂದು ದಂಡನೆಯನ್ನು ಏರ್ಪಡಿಸುವುದು ಆವಶ್ಯಕ. ತಪ್ಪಿಗೆಲ್ಲಾ ದಂಡನೆಯು ಸಿದ್ಧವಾಗಿದ್ದರೆ ಹುಡುಗರಿಗೆ ಕಾಲಕ್ರಮವಾಗಿ ದುಷ್ಕೃತ್ಯವೆಲ್ಲಾ ವಿಫಲದಾಯಕವಾಗುವುದೆಂದು ಮುಂದಟ್ಟಾಗುವುದು. ಇದರಿಂದ ಲೋಕವ್ಯವಹಾರಕ್ಕೆ ಹೆಚ್ಚಾಗಿ ಸಿದ್ಧರಾಗುವರು.

ಮೇಲೆ ಹೇಳಿದ ಮೂರು ಉದ್ದೇಶಗಳಲ್ಲಿ ಮೊದಲಿನ ಎರಡು ಉದ್ದೇಶಗಳು ಮುಖ್ಯವಾದವುಗಳು. ಲೋಕದಲ್ಲಿ ನಡೆಯುವ ದಂಡನೆಗಳಲ್ಲೂ ಈ ಎರಡು ಉದ್ದೇ

ಶಗಳೇ ಇರುವುವು. ಆದರೆ ಸರ್ಕಾರದವರಿಗೆ ಎರಡನೆಯ ಉದ್ದೇಶವು ಪ್ರಮುಖವಾದುದು. ತಪ್ಪಿತಸ್ಥನನ್ನು ದಂಡಿಸುವುದು ಅವನನ್ನು ದಂಡಿಸುವುದಕ್ಕಿಂತಲೂ ಇತರರನ್ನು ಹೆದರಿಸುವುದು ರಾಜ್ಯಭಾರದಲ್ಲಿ ಹೆಚ್ಚು ಆವಶ್ಯಕ. ಸ್ಕೂಲಿನಲ್ಲಾದರೋ ಮೊದಲನೆಯ ಉದ್ದೇಶವೇ ಪ್ರಮುಖವಾದುದು. ಇತರರನ್ನು ಹೆದರಿಸುವುದಕ್ಕಿಂತಲೂ ತಪ್ಪಿತಸ್ಥನನ್ನು ತಿದ್ದಿ ದಾರಿಗೆ ತರುವುದು ಮುಖ್ಯ.

ದಂಡನೆಗಳಲ್ಲಿ ಅವಮಾನಪಡಿಸತಕ್ಕ ದಂಡನೆಗಳೆಂತಲೂ ಅವಮಾನದ ಜತೆಗೆ ಯಾತನೆಯನ್ನುಂಟುಮಾಡುವ ದಂಡನೆಯೆಂತಲೂ ಎರಡು ವಿಧ. ಪಾಠಶಾಲೆಯಲ್ಲಿ ಬಳಕೆಯಾಗಿರುವ ಕೆಲವು ದಂಡನೆಗಳ ವಿಷಯವನ್ನು ತಿಳಿಯಬೇಕು.

1. ನಂಬರ್ ಕಳೆಯುವುದು:— (1) ಗಮನವಿಲ್ಲದೇ ಇರುವುದು (2) ಆಲೋಚಿಸದೆ ಮನಸ್ಸಿಗೆ ಬಂದಂತೆ ಉತ್ತರ ಹೇಳುವುದು (3) ಮನೆಯ ಪಾಠಗಳನ್ನು ಮಾಡದಿರುವುದು ಇಂಥವುಗಳಿಗೆಲ್ಲಾ ವಿಧಿಸಬಹುದು.

2. ತರಗತಿಯಿಂದ ಸ್ವಲ್ಪಹೊತ್ತು ಹೊರಗೆ ಕಳುಹಿಸುವುದು— ನಡತೆಯಲ್ಲಿ ಕಂಡುಬರುವ ಸಣ್ಣ ಸಣ್ಣ ತಪ್ಪುಗಳಿಗೂ ಈ ದಂಡನೆಯನ್ನು ವಿಧಿಸಬಹುದು. ಸುಳ್ಳು, ಪುಂಡುತನ, ಕಾಪೀಮಾಡುವುದು ಮುಂತಾದ್ದು-ಹೀಗೆ ತರಗತಿಯಿಂದ ಹೊರಗೆ ಕಳುಹಿಸಿಕೊಡಬೇಕಾದರೆ ತರಗತಿಯಲ್ಲಿ ನಡೆಯುವ ಕೆಲಸದಲ್ಲಿ ಹುಡುಗಂಗೆ ಅಭಿರುಚಿಯಿರಬೇಕು. ಇದಕ್ಕೆ ಬದಲಾಗಿ ತಾನೇ ಹೊರಗೆ ಹೋಗಬೇಕೆಂದಿರುವವನನ್ನು ಕಳುಹಿಸಿ ಪ್ರಯೋಜನವಿಲ್ಲ. ಒಂದುವೇಳೆ ಕಳುಹಿಸಿದರೆ ಅವನನ್ನು ಮನೆಗೆ ಬಿಡದೆ ತರಗತಿಯ ಹೊರಗಡೆ ಇದ್ದು ಯಾವುದಾದರೊಂದೇ ನಿಯಮಿತವಾದ ಕೆಲಸವನ್ನು ಮಾಡುತಿರುವಂತೆ ನಿಶ್ಚಯಿಸಬೇಕು. ಕನಿಷ್ಠ ಪಕ್ಷದಲ್ಲಿ ಇತರರೊಡನೆ ಮಾತಾಡದೆ ಏಕಾಂಗಿಯಾಗಿ ಮೌನದಿಂದಾದರೂ ಇರುವಂತೆ ನೋಡಿಕೊಳ್ಳಬೇಕು. ಸ್ಕೂಲಿನ ಕೆಲಸವಾದಮೇಲೆ ಸ್ವಲ್ಪಹೊತ್ತು ಸ್ಕೂಲಿನಲ್ಲೇ ಇದ್ದು ಹೋಗುವಂತೆ ಮಾಡುವುದು ಒಂದು ದಂಡನೆ ಹೀಗೆ ಮಾಡಿದರೂ ಆ ಹೆಚ್ಚುಕಾಲದಲ್ಲಿ ಮಾಡುವುದಕ್ಕೆ ತಕ್ಕ ಕೆಲಸವನ್ನು ಕೊಟ್ಟು ಅದನ್ನು ಮಾಡುವಂತೆ ಮೇಲ್ವಿಚಾರಣೆಯಿಟ್ಟುಕೊಳ್ಳಬೇಕು.

(ಸಶೇಷ)

❁ ವಿದ್ಯಾದಾಯಿನಿ ❁

(A Monthly Journal.)

ಭಾಗ ೨೨] ಆಗಸ್ಟ್—೧೯೧೪ [ಸಂಚಿಕೆ ೮

ವಿದ್ಯಾವಂತರ ಕರ್ತವ್ಯ.

ಜನರು ಎಷ್ಟೇ ವಿದ್ಯಾವಂತರಾದರೂ ಸರ್ವಜ್ಞರಲ್ಲ, ಅಥವಾ ಹಾಗೆ ಸರ್ವಜ್ಞರಾಗುವ ಸಂಭವವೂ ಇಲ್ಲ. ಮತ್ತು ಲೋಕದಲ್ಲಿ ಒಬ್ಬರನ್ನೊಬ್ಬರು ಮೀರಿಸಿದವರು ಇದ್ದೇ ಇರುವರು. ಅಂತು ಹೇಗೆಯೇ ಆಗಲಿ ಜನಗಳು ತಾವು ಎಷ್ಟೇ ವಿದ್ಯಾವಂತರಾಗಿರಲಿ ತಮಗೆ ತಿಳಿದಿರುವುದೇ ಸಾಕೆಂದು ತೃಪ್ತಿಪಡದೆ ಅಥವಾ ತಾವೇ ವಿದ್ವಾಂಸರೆಂದು ಕೇವಲ ಮೆರೆಯದೆ ಇರಬೇಕಲ್ಲದೆ ತಾವು ತಮ್ಮ ಜೀವಿತ ಕಾಲದಲ್ಲಿ ಸರ್ವದಾ ಹೊಸ ಹೊಸ ವಿಷಯಗಳನ್ನು ಅಥವಾ ಅಂಶಗಳನ್ನು ವ್ಯಾಸಂಗ ಮಾಡುತ್ತಲೇ ಇರಬೇಕು. ಹೀಗೆ ಮುಂದೆ ವ್ಯಾಸಂಗ ಮಾಡದೆ ಬಿಟ್ಟಲ್ಲಿ ಹೆಚ್ಚು ಅಂಶಗಳನ್ನು ತಿಳಿದುಕೊಳ್ಳಲು ಅವಕಾಶವಿಲ್ಲದಿರುವುದು ಮಾತ್ರವಲ್ಲದೆ ಅದುವರೆಗೆ ತಿಳಿದುಕೊಂಡಿರುವ ಅಂಶಗಳು ಅಂದರೆ ಜ್ಞಾನವು ಮಲಿನವಾಗುವುದೂ ಉಂಟು. ಮತ್ತು ಬುದ್ಧಿಯೂ ಉತ್ತೇಜನವಿಲ್ಲದೆ ಮಂಕಾಗುವುದೂ ಸಹಜ. ಅನೇಕ ವಿಧವಾದ ಗ್ರಂಥಗಳನ್ನು ಚೆನ್ನಾಗಿ ವ್ಯಾಸಂಗ ಮಾಡಿ ಪರೀಕ್ಷೆಗಳಲ್ಲಿ ಜಯವನ್ನು ಪಡೆದಿರತಕ್ಕವರಿಗೆ ವ್ಯಾಸಂಗಮಾಡುವ ಅಭ್ಯಾಸವು ತುಂಬ ಬಳಕೆಯಾಗಿರುವುದರಿಂದ ಅದೇನೂ ಕಷ್ಟವಾಗಿ ತೋರುವುದಿಲ್ಲ. ಹೀಗೆ ವ್ಯಾಸಂಗ ಮಾಡುವುದರಿಂದ ನಮಗಿಂತ ದೊಡ್ಡವರಾದ ಎಷ್ಟೋ ಜನ ಮಹನೀಯರುಗಳ ಸುಜ್ಞಾನರಾಶಿಯು ನಮ್ಮ ವಶವಾಗಿ

ನಮ್ಮ ಸ್ವಂತ ತಿಳಿವಳಿಕೆಯೊಡನೆ ಕಲೆತು ನಮ್ಮ ಬುದ್ಧಿಯ ಸ್ವತ್ತು ಹೆಚ್ಚುತ್ತ ಬರುವುದು. ಪ್ರಪಂಚದಲ್ಲಿ ಹೀಗೆ ಜನಗಳು ತಮ್ಮ ಹಿಂದಿನವರ ಜ್ಞಾನಭಂಡಾರವನ್ನು ತಮ್ಮದಾಗಿ ಮಾಡಿಕೊಳ್ಳುತ ಬರುವುದರಿಂದಲೇ ಈ ಜ್ಞಾನಪ್ರವಾಹವು ಆದಿಯಿಂದಲೂ ಅನುಸ್ಯೂತವಾಗಿ ಹರಿದುಬರುತ್ತಲಿರುವುದು. ಇದರಿಂದಲೇ ನಾಗರಿಕತೆಯು ಇಷ್ಟುಮಟ್ಟಿಗೆ ಮುಂದುವರಿದು ಬಂದಿರುವುದು. ಹಾಗಿಲ್ಲದೆ ಹುಟ್ಟಿದ ಮನುಷ್ಯರೆಲ್ಲ ಹಿಂದಿನವರ ತಿಳಿವಳಿಕೆಯ ಲೇಶವನ್ನೂ ಪಡೆಯದೆ ಸ್ವಬುದ್ಧಿಯಂತೆ ನಡೆಯುತ್ತ ಬಂದಿದ್ದಲ್ಲಿ ಪ್ರಪಂಚವ್ಯಾಪಾರವೇ ನಡೆಯುತ್ತಿರಲಿಲ್ಲವಾಗಿ ಅದು ಅಸಂಭವವೇ. ಆದುದರಿಂದ ವಿದ್ವಾಂಸರುಕೂಡ ಸದಾ ವಿದ್ಯಾರ್ಥಿಗಳಾಗಿಯೇ ಇರಬೇಕಾದುದು ಆವಶ್ಯಕ.

ಮನುಷ್ಯನ ಬುದ್ಧಿಯು ವಿಕಸಿತವಾಗಿ ಅವನ ನಡತೆಯು ಉತ್ತಮವಾಗಬೇಕಾದರೆ ಅವನು ಇತರರ ಸಂಪರ್ಕವನ್ನೇ ತೊರೆದು, ಕಾಡಿಗೆ ಹೋಗಿ, ಸ್ವತಃ ಶ್ರಮಪಟ್ಟು ಏನೇನು ಮಾಡಿದರೂ ಪ್ರಯೋಜನವಾಗಲಾರದು. ಅವನು ಇತರರ ಜ್ಞಾನವನ್ನೂ ಅನುಭವವನ್ನೂ ತಿಳಿದುಕೊಳ್ಳಲೇಬೇಕು. ನಾವು ಇತರರ ಜ್ಞಾನವನ್ನು ಘನತೆಯನ್ನು ಚೆನ್ನಾಗಿ ಅರಿತು ಅವನ್ನು ಗೌರವಿಸುತ್ತ ಬಂದರೆ ನಮ್ಮ ಜ್ಞಾನಕ್ಕೂ ಘನತೆಗೂ ಇತರರಿಂದ ಪ್ರಾಶಸ್ತ್ಯವು ದೊರೆಯುವುದು. ಇತರಾಪೇಕ್ಷೆಯೇ ಇಲ್ಲದೆ ಸ್ವತಃ ತಿಳಿದ ಜ್ಞಾನವು ಸರಿಯೇ ಅಥವಾ ತಪ್ಪೇ ಎಂದು ತಾಳೆನೋಡುವುದಕ್ಕಾದರೂ ಹಿಂದಿನವರ ತಿಳಿವಳಿಕೆಯೂ ಅನುಭವವೂ ಅತ್ಯಾವಶ್ಯಕವಲ್ಲವೆ? ಹಾಗೆ ಹೋಲಿಸಿ ಸರಿಯೆನಿಸಿಕೊಳ್ಳಲಾರದ ತಿಳಿವಳಿಕೆಯು ಅಜ್ಞಾನ ಅಥವಾ ಭ್ರಾಂತಿಯೆನಿಸಿಕೊಳ್ಳುವುದು. ಆದರೆ ಜನಗಳ ತಿಳಿವಳಿಕೆಯೂ ಅನುಭವವೂ ಅಭಿಪ್ರಾಯಗಳೂ ಭಿನ್ನಭಿನ್ನವಾಗಿರುವುದರಿಂದ ಯಾವುದು ಸತ್ಯ ಅವುಗಳಲ್ಲಿ ನಮಗೆ ಯಾವುದು ಅನುಸರಣೀಯ ಎಂದು ಕೆಲವು ವೇಳೆ ದೊಡ್ಡ ಸಂಶಯವು ಬಂದು ತುಂಬ ತೊಡಕಾಗುವುದುಂಟು. ಅದನ್ನು ಅವರವರ ಮನೋದಾರ್ಢ್ಯಕ್ಕೂ ಶಿಕ್ಷಾಬಲಕ್ಕೂ ಅನುಗುಣವಾಗಿ ಅವರವರು ಪರಿಹರಿಸಿಕೊಳ್ಳತಕ್ಕದ್ದು.

ವಿಷಯಗಳನ್ನು ಪರಿಶೀಲಿಸುತ್ತ ಬಂದಂತೆಲ್ಲ ನಡುನಡುವೆ ಅನೇಕವಿಧವಾದ

ಸಂಶಯಗಳು ಬಂದು ಒದಗುವುವಾದರೂ ಈ ಸಂದರ್ಭದಲ್ಲಿ ಬುದ್ಧಿಗೆ ಹೆಚ್ಚು ಕೆಲಸವು ದೊರೆಯುವುದರಿಂದ ಅದು ಉತ್ತೇಜಿತವಾಗುವುದು. ಮತ್ತು ಸುಜ್ಞಾನವನ್ನು ಗಳಿಸುವುದು. ಉರಿಯುತ್ತಿರುವ ಒಂದು ಪಂಜನ್ನು ಚೆನ್ನಾಗಿ ಅಲ್ಲಾಡಿಸಿ ಕೆದಕಿದಷ್ಟೂ ಅದರ ಪ್ರಕಾಶವು ಮತ್ತೂ ಹೆಚ್ಚುವುದು. ಹಾಗೆಯೇ ಬುದ್ಧಿಯು ತನ್ನ ದಾರಿಯಲ್ಲಿ ಅನೇಕ ವಿಧವಾದ ತೊಡಕುಗಳನ್ನು ಪಡೆದಷ್ಟೂ ಅದು ಪಟುವಾಗುವುದು ಆದರೆ ತೊಡಕುಗಳು ಸಂಶಯಗಳು ಬಂದಾವಲ್ಲಾ ಎಂದಾಗಲಿ ಅಥವಾ ಅವು ಬಂದಾಗ ಅವನ್ನು ತಡೆದುಕೊಳ್ಳಲಾರದೆಯೆ ಆಗಲಿ ಹಿಮ್ಮೆಟ್ಟಿದರೆ ಆದರಿಂದ ಬುದ್ಧಿಯಲ್ಲಿ ಹೇಡಿತನವು ನೆಲೆಗೊಳ್ಳುವುದು ಮಾತ್ರವೇ ವಿನಾ ಯಾವ ಫಲವೂ ದೊರೆಯದು. ಮನುಷ್ಯರು ಯಾವ ಕಸಬಿನಲ್ಲೇ ಪ್ರವರ್ತಿಸಲಿ ತಕ್ಕ ತಿಳಿವಳಿಕೆಯೂ ಬುದ್ಧಿವಂತಿಕೆಯೂ ಆವಶ್ಯಕ. ಇವು ಹೆಚ್ಚಬೇಕಾದರೆ ಆಯಾ ಬಾಬಿನ ಗ್ರಂಥಗಳನ್ನು ವ್ಯಾಸಂಗಮಾಡುವುದು ಅತ್ಯಾವಶ್ಯಕ. ಈರೀತಿಯಾಗಿ ಆಚರಿಸಿ ತಕ್ಕ ಸ್ಪರ್ಧೆಯನ್ನೂ ಪಡೆದಿರತಕ್ಕವನು ತನ್ನ ಕಸಬಿನಲ್ಲೇ ಇರತಕ್ಕ ಅನೇಕರನ್ನು ಹಿಂದಕ್ಕೆ ತಳ್ಳಿ ತಾನು ಮಾತ್ರ ಪ್ರಮುಖನಾಗಿ ನಿಲ್ಲಬಲ್ಲನು. ಮತ್ತು ಇಷ್ಟುಮುಂದಕ್ಕೆ ಬಂದ ಮನುಷ್ಯನು ಕೇವಲ ಸ್ವಾರ್ಥಪರನಾಗದೆ ತನ್ನ ಕೈಯಲ್ಲಾದಮಟ್ಟಿಗೂ ಲೋಕೋಪಕಾರವನ್ನು ಮಾಡಲೆಳಸುವನು. ಸ್ವಾರ್ಥಪರತೆಯು ನೀಚತಮವೆಂಬುದನೂ ಔದಾರ್ಯವು ಇಹಪರಗಳೆರಡಕ್ಕೂ ಸಾಧಕವೆಂಬುದನ್ನೂ ಆತನು ಚೆನ್ನಾಗಿ ಬಲ್ಲನು. ಆತನು ತನ್ನ ಬುದ್ಧಿಬಲದಿಂದ ಹೆಚ್ಚು ತಿಳಿವಳಿಕೆಯನ್ನೂ ವಿಚಾರಶಕ್ತಿಯನ್ನೂ ಪಡೆದಿರುವನಲ್ಲದೆ ಸನ್ಮಾರ್ಗಪ್ರವರ್ತಕನಾಗಿರುತ್ತ ಪರಿಶುದ್ಧತೆಯಿಂದ ತನ್ನ ಜೀವಿತಕಾಲವನ್ನು ಕಳೆಯುವನು.

ತಿಳಿವಳಿಕೆಯು ಸ್ವವಿಷಯದಲ್ಲಿ ಮಾತ್ರ ಪ್ರಯೋಜನಕಾರಿಯೆಂಬದಾಗಿ ತಿಳಿಯಕೂಡದೆಂದು ಹಿಂದೆಯೇ ಸೂಚಿಸಿದೆಯಷ್ಟೆ. ನಮ್ಮ ತಿಳಿವಳಿಕೆಯಿಂದ ಇತರರಿಗೆ ನಾವು ನಡೆಯಿಸಬೇಕಾದ ಕರ್ತವ್ಯವು ಬಹಳವುಂಟು. ಇದನ್ನು (ತಿಳಿವಳಿಕೆಯನ್ನು) ಪಯೋಗಿಸಿಕೊಂಡು ನಮ್ಮ ಶಕ್ತ್ಯನುಸಾರವಾಗಿ ಇತರರಿಗೆ ಸಹಾಯ ಮಾಡತಕ್ಕದ್ದು ತುಂಬ ಮುಖ್ಯವಾದುದು.

ನಮ್ಮ ಹಿರಿಯರು ನಮ್ಮನ್ನು ಸಾಕಿ ಸಲಹಿ ನಡೆನುಡಿಗಳನ್ನು ಕಲಿಸಿ ದ್ರವ್ಯ ವ್ಯಯಮಾಡಿ ವಿದ್ಯಾಭ್ಯಾಸ ಮಾಡಿಸಿದ್ದಕ್ಕೂ ನಮ್ಮ ಉಪಾಧ್ಯಾಯರುಗಳು ತಮ್ಮ ಬುದ್ಧಿಬಲವನ್ನೆಲ್ಲ ಉಪಯೋಗಿಸಿ ನಮ್ಮ ಯೋಗ್ಯತೆಯನ್ನು ಹೆಚ್ಚಿಸಿದ್ದಕ್ಕೂ ಪರಮ ಫಲವೇನು ? ನಾವು ದೊಡ್ಡ ಮನುಷ್ಯರಾಗಿ ಯಾವುದೋ ಒಂದು ಪದವಿಯನ್ನು ಪಡೆದು ನಮ್ಮಮಟ್ಟಿಗೆ ನಾವು ಬಾಳುವುದೇನೆ ? ಅಲ್ಲ, ನಮ್ಮ ಕರ್ತವ್ಯವು ತುಂಬ ಜವಾಬ್ದಾರಿಯುಳ್ಳುದು. ವಿದ್ಯಾಹೀನರಾಗಿ ನರಕುರಿಗಳೆನಿಸಿಕೊಂಡಿರುವ ಲಕ್ಷಾಂತರ ಜನರು ವಿದ್ಯಾವಂತರ ಬಲದಿಂದಲೇ ಪ್ರಪಂಚದಲ್ಲಿ ಬಾಳುತ್ತಿರುವುದು. ಉದಾ— ಪ್ರಯಾಣಿಕನಾದ ಒಬ್ಬ ಗೌಡನು ರೈಲ್ ಟಿಕೆಟ್ ತೆಗೆದುಕೊಂಡಾಗ, ನೋಟುಗಳ ಆಡಳಿತ ಮಾಡುವಾಗ, ಕಡೆಗೆ ಯೋಗಕ್ಷೇಮ ಸಮಾಚಾರಗಳ ಕಾಗದಗಳ ವಿಷಯ ವನ್ನು ತಿಳಿಯುವಾಗ ಅಂದರೆ ಇಂತಹ ಅಲ್ಪವಿಷಯಗಳಲ್ಲಿ ಕೂಡ ಓದುಬರಹ ಬಲ್ಲವರ ಸಹಾಯವನ್ನಪೇಕ್ಷಿಸಿದಹೊರತು ತೀರದು. ಹೀಗೆ ಸಾಮಾನ್ಯವಾಗಿ ಓದುಬರಹಗಳನ್ನು ಕಲಿತ ಅಲ್ಪಜ್ಞರಿಂದ ಕೂಡ ಮೂಢಪ್ರಜೆಗಳಿಗೆ ಇಷ್ಟು ಪ್ರಯೋ ಜನವಿರುವಲ್ಲಿ ಪರಿಣತಪಾಂಡಿತ್ಯವುಳ್ಳ ಮಹನೀಯರಾದ ಪ್ರಜಾಸಾಮಾನ್ಯಕ್ಕೆ ಹೆಚ್ಚು ಫಲವಾಗಬೇಕೆಂಬುದು ನಿರ್ವಿವಾದಾಂಶವೇ.

ಭಗವದ್ವಿಲಾಸರೂಪವಾದ ಪ್ರಪಂಚಸೃಷ್ಟಿಯಲ್ಲಿ ಯಾವುದನ್ನು ಪರಿಶೀಲಿಸಿ ನೋಡಿದರೂ ಎಲ್ಲವೂ ಪರೋಪಕಾರಕ್ಕೇ ಆಗಿರುವುದು. ಸೂರ್ಯಕಿರಣವು ಪ್ರಕಾಶ ವನ್ನು ಪಡೆದಿರುವುದು ತನ್ನ ಸ್ವಂತ ಉಪಯೋಗಕ್ಕೇನೂ ಅಲ್ಲ, ಪುಷ್ಪಗಳು ತಮ್ಮ ಸುವಾಸನೆಯನ್ನು ಸ್ವಪ್ರಯೋಜನಕ್ಕಾಗಿಯೇ ಪಡೆದಿಲ್ಲ. ಹಲವು ಬಗೆಯ ಹಣ್ಣು ಗಳು ಆ ಮರಗಳಿಗೆ ರುಚಿ ತೋರಿಸುವುದಕ್ಕಾಗಿ ಉಂಟಾಗುವುದಿಲ್ಲ. ಮೋಡವು ಸ್ವಪ್ರಯೋಜನಕ್ಕಾಗಿ ಮಳೆಯನ್ನು ಸುರಿಸಿಕೊಳ್ಳುವುದಿಲ್ಲ. ಹೀಗೆ ಯಾವುದನ್ನು ನೋಡಿದರೂ ಪರೋಪಕಾರವೇ ಪರಮೇಶ್ವರನ ಪರಮೋದ್ದೇಶವೆಂಬುದು ವ್ಯಕ್ತವಾ ಗುವುದು. ಪಂಡಿತರಲ್ಲನೇಕರು ತುಂಬ ವಿರಕ್ತರಾಗಿ ಲೋಕವ್ಯವಹಾರದಿಂದ ಬಿಡುಗಡೆಯನ್ನು ಹೊಂದಿ ಅರಣ್ಯದಲ್ಲಿ ಏಕಾಂಗಿಯಾಗಿ ಕುಳಿತು ಚಿತ್ತೈಕಾಗ್ರ್ಯ ದಿಂದ ತಪಸ್ಸು ಮಾಡುತ್ತ ಒಂದರೆ ತಾವು ಸದ್ಗತಿಯನ್ನು ಪಡೆದು ಮುಕ್ತರಾಗ

ಬಹುದೆಂದು ನಂಬಿ ಆ ರೀತಿ ಆಚರಿಸುವರು. ಆದರೆ ಈ ಸಂದರ್ಭದಲ್ಲಿ ಸದ್ಗತಿಯನ್ನು ಪಡೆಯಬೇಕೆಂಬುದೇನೋ ಒಳ್ಳೆಯ ಉದ್ದೇಶವಾದರೂ ಇತರರ ವಿಚಾರವಾಗಿ ಲೇಶವೂ ಸಹಾಯಕರಾಗದೆ ತಾವು ಮಾತ್ರ ಮೇಲಕ್ಕೇರಬೇಕೆಂಬ ಆಶಯವೂ ಸ್ವಾರ್ಥಪರತೆಯ ಒಂದು ರೂಪವೇ ಆಗಿರುತ್ತದೆ.

ಎಷ್ಟೋ ವಿಷಯಗಳಲ್ಲಿ ನಮಗಿಂತ ಕೀಳಾದ ಪ್ರಕೃತಿವಸ್ತುಗಳೆಲ್ಲ ಪರೋಪಕಾರದೀಕ್ಷೆಯನ್ನು ವಹಿಸಿರುತ್ತಿರುವಲ್ಲಿ ದೈವಸೃಷ್ಟಿಯಲ್ಲಿ ಪರಮೋತ್ತಮಪದವಿಯನ್ನು ಪಡೆದು ಭಗವಂತನ ಮಹಿಮೆಯ ಸ್ವರೂಪವನ್ನು ತಿಳಿಯಲೆಳಸಬಲ್ಲಂತಹ ಅನನ್ಯಸಾಧಾರಣವಾದ ಬುದ್ಧಿಬಲವನ್ನೂ ವಿವೇಕವನ್ನೂ ಹೊಂದಿರುವ ಮನುಷ್ಯರು ಆ ಕಾರ್ಯಕ್ಕೆ ಹಿಂದೆಗೆಯತಕ್ಕದ್ದು ಉಚಿತವೆ? ಇತರರಿಗೆ ಉಪಕಾರ ಮಾಡುವುದರಿಂದ ಆ ಉಪಕಾರವನ್ನು ಪಡೆದವರಿಗೆ ಮಾತ್ರ ಪ್ರಯೋಜನವಾಗುವುದೆಂದು ತಿಳಿಯಕೂಡದು ಉಪಕಾರ ಮಾಡಿದವರಿಗೂ ಮನಸ್ಸಿಗೆ ಒಂದು ವಿಧವಾದ ತೃಪ್ತಿಯುಂಟಾಗುವುದು. ಮತ್ತು ಅವರು ದೇವರಕಟ್ಟಲೆಯ ಮೇಲ್ಪಂಕ್ತಿಯನ್ನು ಅನುಸರಿಸಿದಂತೆಯೂ ಆಗುವುದು.

ಯಾರು ಯಾವ ಕಸಬಿನಲ್ಲಿಯೇ ಪ್ರವರ್ತಿಸಿದ್ದಾಗ್ಯೂ ಇತರರಿಗೆ ಉಪಕಾರ ಮಾಡಬಹುದಾದ ಸಂದರ್ಭಗಳು ಎಷ್ಟೋ ಇರುವುವು ಎಂಬುದರಲ್ಲೇನೂ ಸಂಶಯವಿಲ್ಲ. ಪ್ರತಿಯೊಬ್ಬರೂ ತಮ್ಮ ಉದರಭರಣಕ್ಕಾಗಿಯೇ ಕೆಲಸ ಮಾಡುವರು ಎಂಬುದೇನೋ ದಿಟ; ಆದರೆ ಇತರರಿಗೆ ತಮ್ಮಿಂದ ಏನಾದರೂ ಸಹಾಯವಾಗಬೇಕೆಂಬುದನ್ನು ಮೊದಲನೆಯ ಉದ್ದೇಶವಾಗಿಟ್ಟುಕೊಂಡು ಇದನ್ನು ಎರಡನೆಯದನ್ನಾಗಿ ಭಾವಿಸಿಕೊಳ್ಳತಕ್ಕದ್ದು ಯೋಗ್ಯರಾದವರ ಕರ್ತವ್ಯ. ಹೀಗೆ ಭಾವಿಸಿ ನಡೆಯುವುದರಿಂದ ಪ್ರಕೃತದಲ್ಲಿ ನಮಗೆ ಹೆಚ್ಚು ಪ್ರಯೋಜನವಾಗದೆ ಇದ್ದೀತು, ಪ್ರಯೋಜನವಾಗದೆಯೇ ಇರಬಹುದು, ಅಥವಾ ನಷ್ಟವೇ ಆದರೂ ಆಗಬಹುದು. ಇಷ್ಟಾದರೂ ನಾವು ನಿರಾಶೆಯಾಗಬೇಕಾದುದಿಲ್ಲ. ಯಾಕೆಂದರೆ ಸದ್ಯದಲ್ಲಿ ನಮಗೆ ಯಾವ ಒಳ್ಳೆಯದೂ ಆಗದಿದ್ದರೂ ದೇವರಕಟ್ಟಳೆಗೆ ಅನುಸಾರವಾಗಿ ನಡೆದು ಇರುವುದರಿಂದ ನಮ್ಮ ನಡತೆಯು ಕೆಡದೆ ಉತ್ತಮರೀತಿಯಲ್ಲಿರುವುದು ಮಾತ್ರವಲ್ಲದೆ ಪ್ರಪಂಚದಲ್ಲಿ

ಪ್ರಕೃತಿಯ (of nature) ಕಾರ್ಯವೂ ಅದರ ಪರಿಣಾಮವೂ, ಸತ್ಯವೂ ಭಗವನ್ನಿಯಮಕ್ಕೆ ಅನುಗುಣವಾಗಿರುವುದೇ ದಿಟವಾದರೆ ನಮ್ಮ ಕಾರ್ಯಕ್ಕೂ ಏನಾದರೊಂದು ವಿಧವಾದ ಉಚಿತಫಲವು ದೊರೆಯಲೇಬೇಕೆಂಬುದು ನಿಸ್ಸಂಶಯವಾಗಿ ಒಪ್ಪತಕ್ಕದ್ದಾಗಿರುವುದು.

ಇತರರಿಗೆ ಉಪಕಾರಮಾಡಬಹುದಾದ ಸಂದರ್ಭಗಳು ಅನೇಕವಿರಬಹುದು. ಆದರೂ ಜ್ಞಾನಪ್ರದಾನಮಾಡತಕ್ಕದ್ದು ಎಲ್ಲಕ್ಕಿಂತ ಉತ್ತಮವಾದ ಸಹಾಯ. ವೈದ್ಯನಾದವನು ಆರೋಗ್ಯಶಾಸ್ತ್ರ ವಿಚಾರವನ್ನು, ಲಾಯರಾದವನು ಕಕ್ಷಿಗಾರರಿಗೆ ಬುದ್ಧಿವಾದವನ್ನು, ಜಮೀನಿನ ಖಾವಂದನಾದವನು ವ್ಯವಸಾಯಶಾಸ್ತ್ರ ವಿಚಾರವನ್ನೂ, ಉಪಾಧ್ಯಾಯನಾದವನು ಲೋಕವ್ಯವಹಾರಕ್ಕೆ ಮತ್ತು ನೈತಿಕ ಮಾನಸಿಕ ವಿಷಯಗಳಿಗೆ ಸಂಬಂಧಪಟ್ಟ ಅಂಶಗಳನ್ನೂ ಹೀಗೆ ಅವರವರು ತಮತಮಗೆ ತಿಳಿದಿರುವ ಭಾಗಗಳನ್ನು ಜನಗಳಿಗೆ ತಿಳಿಯಹೇಳಬೇಕಾದುದು ಆವಶ್ಯಕ. ಇದಲ್ಲದೆ ತಮತಮಗೆ ನಿಯಮಿತವಾಗಿರುವ ಇತರ ಕೆಲಸಗಳನ್ನು ಬೇಸರಪಡದೆ ಶ್ರದ್ಧೆಯಿಂದ ಮಾಡತಕ್ಕದ್ದು ಮೊದಲನೆಯಕರ್ತವ್ಯವೆಂಬುದನ್ನಂತು ಹೇಳಬೇಕಾದುದೇ ಇಲ್ಲ. ಇವೆರಡರಿಂದ ಜನಗಳಿಗೆ ಆಗತಕ್ಕ ಸಹಾಯವು ಅನಿರ್ವಚನೀಯವಾದುದು.

ಈ ಹಿಂದೆ ಹೇಳಿದ್ದರಲ್ಲಿ ಯಾವುದು ಆಚರಣೆಗೆ ಬರಬೇಕಾದರೂ ನಾವು ಮಾಡತಕ್ಕ ಕಸಬು ಅಂದರೆ ಕೆಲಸವು ಉತ್ತಮವಾದುದು ಎಂಬ ಭಾವನೆಯೊಂದು ಮನಸ್ಸಿನಲ್ಲಿ ರೂಢಮೂಲವಾಗಿ ನಿಲ್ಲಬೇಕು. ಅನೇಕರು ಸದಾ ತಮ್ಮ ಕೆಲಸವನ್ನು ದೂಷಿಸಿಕೊಳ್ಳುತ್ತಲೂ ದೌರ್ಭಾಗ್ಯವಶಾತ್ ತಾವು ಅದಕ್ಕೆ ಪ್ರವರ್ತಿಸಿದರೆಂತಲೂ ಅಂದುಕೊಳ್ಳುತ್ತಲೂ, ಇತರ ಕಸಬುಗಳೇ ಸರ್ವೋತ್ತಮವಾದುವೆಂದು ಹೊಗಳುತ್ತಲೂಇರುವರು. ಈವಿಧವಾದ ಆತ್ಮಾವಮಾನವು ಆತ್ಮಹತ್ಯೆಗೆ ಸಮಾನವಾದುದು. ತಾನು ಮಾಡುವ ಕೆಲಸದಲ್ಲಿ ತನಗೇ ಗೌರವಬುದ್ಧಿಯಿಲ್ಲದಿದ್ದರೆ ಅದರಿಂದ ಇತರರಿಗೆ ಹೇಗೆ ಪ್ರಯೋಜನವಾದೀತು. ಅಥವಾ ಹೇಗೆತಾನೆ ತಾನು ಸಹಾಯಮಾಡಲಿಚ್ಛಿಯಿಸಿಯಾನು ? ಆದರೆ ಯಾರು ಯಾವ ಕೆಲಸ ಮಾಡುವುದರಲ್ಲೂ ಆತ್ಮಸಾಕ್ಷಿಯೆಂಬುದೊಂದು ಇದ್ದೇ ಇರುವುದು. ಇದನ್ನು ಇಂಗ್ಲೀಷಿನಲ್ಲಿ ಕಾನ್ಷಿಯನ್ಸೆಸ್

(consciousness) ಎಂದು ಹೇಳುವರು. ಇದು ಸರ್ವಶಕ್ತನಾದ ಪರಮೇಶ್ವರನ ಒಂದು ಅಂಶವಾಗಿ ಪ್ರತಿಯೊಬ್ಬರಲ್ಲೂ ಇರುವುದು. ನಾವು ಮಾಡುವ ಕೆಲಸವು ಒಳ್ಳೆಯದು ಅಥವಾ ಕೆಟ್ಟದು ಎಂಬುದನ್ನು ನಮ್ಮ ಮನಸ್ಸಿಗೆ ಸಾರಿ ಹೇಳುತ್ತಲಿರುವುದು. ಯಾವಾಗಲೂ ಅದು ಒಪ್ಪದಿರುವುದನ್ನು ಮಾಡದೆಯೂ ಅದು ಒಪ್ಪತಕ್ಕ ಕೆಲಸಗಳನ್ನು ಮಾಡುತ್ತಲೂ ಬರತಕ್ಕದ್ದು ಎಲ್ಲರಿಗೂ ಶ್ರೇಯಸ್ಕರ. ಅದು ಬೆಂಕಿಯ ಒಂದು ಸಣ್ಣ ಕಿಡಿಯಂತೆ ತೇಜೋರೂಪದಲ್ಲಿರುವುದು. ಅದನ್ನು ಹೊತ್ತಿಸಿ ಅಭಿವೃದ್ಧಿಮಾಡುವುದು ಅಥವಾ ತಾತ್ಸಾರಮಾಡಿ ಆರಿಸಿಬಿಡುವುದೂ ಇವೆರಡೂ ನಮ್ಮ ಅಧೀನದಲ್ಲೇ ಇವೆ. ಯಾರು ವಿವೇಕಶಾಲಿಗಳೋ ಅವರಲ್ಲಿ ಇದು ಅಭಿವೃದ್ಧವಾಗಿರುವುದು. ಯಾರು ಕೆಟ್ಟ ನಡತೆಯುಳ್ಳವರೋ ಅಂತಹವರಲ್ಲಿ ಅದು ಅಲ್ಪವಾಗಿರುವುದು. ಮತ್ತು ಅವರು ಅದನ್ನು ಕಡೆಗಾಣುತ್ತ ತಲೆಯೆತ್ತಗೊಳಿಸದೆ ಮುರಿದುಹಾಕುವುದಕ್ಕೇ ಯತ್ನಿಸುತ್ತಿರುವರು.

ವಿವೇಕವಿಲ್ಲದ ಮನುಷ್ಯರ ಪಾಂಡಿತ್ಯವು ದುರ್ಮಾರ್ಗದಲ್ಲಿ ವಿನಿಯೋಗಿಸಲ್ಪಟ್ಟರೆ ಮಹಾ ಅನರ್ಥಕಾರಿಯಾಗಿ ಪರಿಣಮಿಸುವುದು. ತಿಳಿಗೇಡಿಗಳು ತಪ್ಪು ಮಾಡುವುದು ಅವರ ಅಜ್ಞಾನದಿಂದ, ಅವರಲ್ಲಿ ಕಾನ್ಷಿಯಸ್‌ನೆಸ್ ಎಂಬುದು ತುಂಬ ಪಟುವಾಗಿಲ್ಲದಿರುವುದರಿಂದ ಅವರ ತಪ್ಪಿಗೆ ಕೆಲವುವೇಳೆ ಅಲ್ಪಶಿಕ್ಷೆಯೂ ಅಥವಾ ಕ್ಷಮೆಯೂ ಉಂಟು. ವಿದ್ಯಾವಂತರು ಮಾಡುವ ತಪ್ಪಿತಕ್ಕಾದರೋ ಕ್ಷಮೆಯ ಪ್ರಸಕ್ತಿಯೇ ಇಲ್ಲ. ಮತ್ತು ಶಿಕ್ಷೆಯು ಕ್ರೂರವಾಗಿ ನಡೆಯತಕ್ಕದ್ದು. ಆದುದರಿಂದ ಸಕಲ ವಿಷಯಗಳಲ್ಲೂ ವಿದ್ಯಾವಂತರಾದವರಿಗೆ ಜವಾಬ್ದಾರಿಯು ಬಹಳವಾಗಿರುವುದೆಂಬುದು ವ್ಯಕ್ತವಾಗುವುದು.

ಸಾಮಾನ್ಯರಾದ ಜನಗಳು ಕೂಡ ಪೂರ್ವಕಾಲದ ಚರಿತ್ರೆಗಳಲ್ಲಿ ಎಷ್ಟೋ ಅಂಶಗಳನ್ನು ಓದಿರುವರಷ್ಟೆ. ಎಷ್ಟೋ ಜನಗಳು ಸ್ವಾತಂತ್ರ್ಯ, ದೇಶಾಭಿಮಾನ, ಪ್ರಾಮಾಣಿಕತೆ ಇವುಗಳಿಗೋಸ್ಕರ ಹೋರಾಡಿ ಹಲವುಬಗೆಯ ಕಷ್ಟಪರಂಪರೆಗಳನ್ನು ಅನುಭವಿಸಿರುವರಲ್ಲದೆ ಅವರಲ್ಲಿ ಅನೇಕರು ಆತ್ಮಾರ್ಪಣವನ್ನೇ ಮಾಡಿರುವರು. ಇನ್ನು ಕೆಲವರು ನ್ಯಾಯಕ್ಕೋಸ್ಕರ ಬದ್ಧಕಂಕಣರಾಗಿ ನಿಂತು ಕೆಲಸ

ಮಾಡುತ್ತಿರುವಾಗ ಅದರ ಬೆಲೆಯನ್ನರಿಯದ ಮರುಳರು ತಮಗೆ ಪರಿಪರಿಯ ಹಿಂಸೆಗಳನ್ನು ಮಾಡಿದರೂ ಅನುಭವಿಸಿ ತಮ್ಮ ಜೀವನವನ್ನೇ ಧಾರೆಯೆರೆದು ಗತಿಸಿದರಾದರೂ ಜಗದ್ವಿಖ್ಯಾತರಾಗಿ ಯಶಶ್ಶರೀರದಿಂದ ಈಗಲೂ ಮೆರೆಯುತ್ತಲಿರುವರು. ಅವರ ಸಾಹಸಕೃತ್ಯಗಳು ಈಗಲೂ ಜನಗಳ ಸ್ಮೃತಿಪಥದಲ್ಲಿ ಇದ್ದೇ ಇರುವುವು. ನಿಜವಾಗಿಯೂ ಇಂತಹವರೇ ಪೂಜ್ಯರು. ಹಾಗಿಲ್ಲದೆ ಅಧಿಕಾರ, ಐಶ್ವರ್ಯ ಇವುಗಳಲ್ಲಿ ಎಷ್ಟೇ ಉನ್ನತಪದವಿಯನ್ನು ಪಡೆದವರೇ ಆದರೂ ಜನರು ಸ್ವಾರ್ಥಪರರಾಗಿರುವಪಕ್ಷದಲ್ಲಿ ಅಂತಹವರು ಎಷ್ಟುಕಾಲ ಒದುಕಿ ಬಾಳಿದರೂ ಅವರ ಜೀವನವು ವ್ಯರ್ಥವೇ. ಮತ್ತೂ ಅವರು ಗತಿಸಿದನಂತರ ಯಾರ ಸ್ಮೃತಿಪಥಕ್ಕೂ ಅವರ ಹೆಸರು ಬಾರದು. ಉತ್ತಮ ಕೀರ್ತಿಯನ್ನು ಸಂಪಾದಿಸಿ ಸದ್ಗತಿಯನ್ನು ಪಡೆದು ಹೋದ ಪ್ರಾಚೀನ ಮಹಾಶಯರ ಸಚ್ಚರಿತ್ರಗಳೆಂಬ ನಕ್ಷತ್ರಗಳ ದಿವ್ಯಪ್ರಕಾಶರಾಶಿಯ ಸಹಾಯದಿಂದ ಈಗ ನಾವು ನಮ್ಮ ಅಜ್ಞಾನಾಂಧಕಾರವನ್ನು ತೊಲಗಿಸಬೇಕಾಗಿದೆ.

ಹೇಗೆ ಹೇಗೆ ನೋಡಿದರೂ ಮನುಷ್ಯನ ಶ್ರೇಯಸ್ಸಿಗೆ ಪರೋಪಕಾರಬುದ್ಧಿಯೇ ಕಾರಣವೆಂಬುದೂ ವಿದ್ಯಾವಂತರಾದವರಿಗೆ ಈ ವಿಷಯದಲ್ಲಿ ಹೆಚ್ಚು ಜವಾಬ್ದಾರಿ ಇರುವುದೆಂಬುದೂ ಸ್ಪಷ್ಟವಾಗುವುವು. ಅಂತಹವರು ಸದ್ಯಃಫಲದಮೇಲೆ ಮಾತ್ರವೇ ದೃಷ್ಟಿಯಿಡದೆ ಪಾರಮಾರ್ಥಿಕತೆಯಿಂದ ಲೋಕೋಪಕಾರ ಮಾಡಬೇಕೆಂಬುದೂ ತಿಳಿಯಬರುವುದು. ದೈವಸೃಷ್ಟಿ ವೈಚಿತ್ರ್ಯದ ಮತ್ತು ಪ್ರಸಿದ್ಧರಾದ ಪುರಾಣ ಪುರುಷರ ಮೇಲ್ಪಂಕ್ತಿಯು ನಿಸ್ಸಂದೇಹವಾಗಿಯೂ ಅವರ ಸತ್ಕಾರ್ಯಕ್ಕೆ ತಕ್ಕ ಸತ್ಫಲವು ದೊರೆಯುವುದೆಂಬ ನಂಬಿಕೆಗೆ ಅಭಯವನ್ನು ಕೊಡುತ್ತಿರುವುವು. ನಾವು ಎಂತಹ ಸಣ್ಣ ಸ್ಥಿತಿಯಲ್ಲೇ ಇದ್ದರೂ ನಮ್ಮಿಂದ ಸಾಧ್ಯವಾಗುವಮಟ್ಟಿಗಾದರೂ ಈ ಮೇಲೆ ಕಂಡಂತೆ ನಡೆಯಿಸಿದರೆ ನಮ್ಮ ಕರ್ತವ್ಯವನ್ನು ನಿರ್ವಂಚನೆಯಿಂದ ನೆರವೇರಿಸಿದಂತಾಗುವುದು. ಹಾಗಿಲ್ಲದಿದ್ದರೆ ಮುನಿದೇವರ ಮುಂದೆ ನಿಂತು ಮರು ಮಾತಾಡುವುದಕ್ಕೆ ನಮಗೆ ನಾಲಗೆಯೇ ಹೊರಡದಂತೆ ಆದೀತಲ್ಲದೆ ನಾವು ಪಾಪಕ್ಕೂ ಗುರಿಯಾಗುವೆವು.

ಒಟ್ಟುಗೂಡಿಸಿಹೇಳುವುದಾದರೆ ಈ ಮೇಲೆ ಹೇಳಿದುದೆಲ್ಲ ಇಷ್ಟರಲ್ಲಿ ಅಡಕವಾಗಬಹುದು. (1) ಗ್ರಂಥಾವಲೋಕನದಿಂದ ತಿಳಿವಳಿಕೆಯನ್ನುಮತ್ತು ಬುದ್ಧಿಕುಶಲತೆಯನ್ನು ಹೆಚ್ಚಿಸಿಕೊಳ್ಳುವುದು ಇದರಿಂದ ಘನತೆಗೌರವಗಳುಉಂಟಾಗುವುವು. (2) ಅಂತಹ ತಿಳಿವಳಿಕೆ ಬುದ್ಧಿಕೌಶಲ ಇವುಗಳನ್ನು ಸತ್ಕಾರ್ಯಗಳಲ್ಲಿ ವಿನಿಯೋಗಿಸುವುದರ ಮೂಲಕ ತನ್ನ ಕರ್ತವ್ಯವನ್ನು ನೆರವೇರಿಸುವುದು. ಇದರಿಂದ ಇಹದಲ್ಲಿ ಶ್ರೇಯಸ್ಸೂ, ಪರದಲ್ಲಿ ಸದ್ಗತಿಯೂ ಉಂಟಾಗುವುವು.

ಕತ್ತಲೆಯಲ್ಲಿ ತೊಂದರೆಪಡುತ್ತಿರುವವರಿಗೆ ಲಾಂದ್ರದ ಬೆಳಕನ್ನು ತೋರಿಸಿ ಉಪಕರಿಸುವ ಪುಣ್ಯಾತ್ಮರಂತೆಯೇ ಭಗವಂತನು ಅಜ್ಞಾನಸಮುದ್ರದಲ್ಲಿ ಮುಳುಗಿ ಗತಿಗಾಣದಿರುವ ಮನುಷ್ಯಮಂಡಲಿಯನ್ನು ಉದ್ಧಾರಮಾಡುವುದಕ್ಕೋಸ್ಕರವೇ ಅನೇಕರು ವಿದ್ಯಾವಂತರಾಗುವಂತೆ ಅನುಗ್ರಹಿಸುವುದು. ಅವರು ಅಂತಹ ಉತ್ತಮವಾದ ವಿದ್ಯೆಯನ್ನು ಸನ್ಮಾರ್ಗದಲ್ಲಿ ವಿನಿಯೋಗಿಸದಿದ್ದರೆ ವಿದ್ಯೆಯನ್ನು ಕಲಿಯದೆಯೇ ಇದ್ದರೆ ಎಷ್ಟು ಫಲವಾಗುತ್ತಿದ್ದಿತೋ ಕಲಿತರೂ ಅಷ್ಟೇ ಎನ್ನಬೇಕಾಗುವುದು, ಅಥವಾ ಹೆಚ್ಚು ಅನರ್ಥಕಾರಿಯೇ ಎಂದರೂ ಬಾಧಕವಾಗಲಾರದು. ಆದುದರಿಂದ ಪಾಂಡಿತ್ಯವು ಸಚ್ಚರಿತ್ರದಿಂದೊಡಗೂಡಿದರೆ ಸೌಂದರ್ಯವು ಸೌಶೀಲ್ಯದೊಡನೆ ಬೆರತಂತೆ ಶೋಭಿಸುವುದು.

' ಮೊಗಲ್ ಸಾಮ್ರಾಜ್ಯ '

(1658 ರ ವರೆಗೆ)

ಇಂಡಿಯಾ ಚಕ್ರಾಧಿಪತ್ಯವನ್ನು ಅತ್ಯಂತ ಸಾಮರ್ಥ್ಯದಿಂದ ಆಳಿದ ಅಕ್ಬರ್ ಚಕ್ರವರ್ತಿಯು 1605 ರಲ್ಲಿ ದಿವಂಗತನಾದನು. ಮೊಗಲ್ ಸಾರ್ವಭೌಮರಲ್ಲಿ ಮೂರನೆಯವನಾದರೂ ನಿಜವಾಗಿಯೂ ಮೊಗಲಚಕ್ರಾಧಿಪತ್ಯವನ್ನು ಸ್ಥಾಪಿಸಿದವನು ಅಕ್ಬರ್‌ಷಹಾ ; ಮತ್ತು ಈತನ ಅದ್ಭುತವಾದ ರಾಜ್ಯಭಾರಕ್ರಮದಿಂದಲ್ಲದೆ ಇಂತಹ ದೊಡ್ಡ ರಾಜ್ಯವನ್ನು ಸ್ಥಾಪಿಸುವುದು ಇತರರಿಗೆ ಅಸಾಧ್ಯವಾಗಿದ್ದಿತು. ಈತನ

ರಾಜ್ಯವು ಹಿಂದೂಸ್ಥಾನವಲ್ಲದೆ, ಪಶ್ಚಿಮಕ್ಕೆ ಕಾಬೂಲ್, ಪೂರ್ವಕ್ಕೆ ಬಂಗಾಳ, ಹಿಮಾಲಯ ಪ್ರಾಂತ್ಯದಲ್ಲಿ ಕಾಶ್ಮೀರ್ ಮತ್ತು ದಕ್ಷಿಣದಲ್ಲಿ ಖಾಂಡೇಷ್ ವರವಿಗೂ ವ್ಯಾಪಿಸಿತ್ತು. ನಲವತ್ತು ವರ್ಷಗಳಕಾಲ ಹೋರಾಡಿ ಇಂತಹ ಅಗಾಧವಾದ ರಾಜ್ಯವನ್ನು ಸ್ಥಾಪಿಸಿದ್ದಲ್ಲದೆ, ಅಕ್ಬರ್ ಸಾರ್ವಭೌಮನು ಹಿಂದೂ ಮುಸಲ್ಮಾನರಿಗಿದ್ದ ದ್ವೇಷಾಸೂಯೆಗಳನ್ನು ತಪ್ಪಿಸಿ, ಷಿಯಾ ಮತ್ತು ಸುನ್ನಿಗಳನ್ನೂ, ರಾಜಪುತ್ರರು ಮತ್ತು ಆಫ್ಘನರನ್ನೂ, ಮತ್ತು ಹಿಂದೂ ಮುಸಲ್ಮಾನರನ್ನೂ ಒಟ್ಟುಗೂಡಿಸಿದನು. ರಾಜನೀತಿಯಲ್ಲಿ ಪ್ರಬಲರಾದ ಯೂರೋಪಿಯನ್ ದೊರೆಗಳಿಗೆ ಸಮಾನನಾದ ಅಕ್ಬರನು ಉಪಾಯಾಂತರದಿಂದ ಮತವೈರವನ್ನು ತಪ್ಪಿಸಿ ತನ್ನ ಚಕ್ರಾಧಿಪತ್ಯದ ಪ್ರಜೆಗಳನ್ನೆಲ್ಲಾ ತನ್ನ ಮಕ್ಕಳಂತೆ ಕಾಪಾಡಿಕೊಂಡುಬರುತ್ತಾ, ದೇಶೀಯರೆಲ್ಲರೂ ಮೊಗಲ್ ಸಾಮ್ರಾಜ್ಯದ ಹಿತವನ್ನೇ ಕೋರುವಂತೆ ಮಾಡಿದನು. ಜನರಲ್ಲಿ ಸ್ಥಿರವಾಗಿ ಹುಟ್ಟಿದ ಈ ವಿಶ್ವಾಸವು ಅಕ್ಬರನು ತೀರಿಹೋದರೂ ಅವನ ಮಕ್ಕಳು ಮೊಮ್ಮಕ್ಕಳಕಾಲದವರಿಗೂ ಜರುಗಿ ಬಂದು, ಕಡೆಗೆ ದೂರಾಲೋಚನೆಯಿಲ್ಲದ, ಅನ್ಯಮತದ್ವೇಷಿಯಾದ ಔರಂಗ್‌ಜೇಬನಲ್ಲಿ ಕೊನೆಮುಟ್ಟಿತು.

ಇಂಡಿಯಾದೇಶದ ಚರಿತ್ರೆಯನ್ನು ಅಕ್ಬರನು ವ್ಯರ್ಥವಾಗಿ ಓದಿರಲಿಲ್ಲ. ಪರರಾಜರು ತಮ್ಮ ಆಧಿಪತ್ಯವನ್ನು ಇಲ್ಲಿ ಸ್ಥಾಪಿಸಬೇಕಾದರೆ ಅವರು ಹಿಂದೂಗಳ ಮೈತ್ರಿಯನ್ನು ಪಡೆಯತಕ್ಕದು ಅತ್ಯವಶ್ಯಕವೆಂಬುದನ್ನು ಇವನು ತಿಳಿದಿದ್ದನು. ಸೈನ್ಯದಲ್ಲಿಯೂ, ರಾಜ್ಯಭಾರಕ್ರಮದಲ್ಲಿಯೂ ಹಿಂದೂಗಳಿಲ್ಲದಿದ್ದರೆ ಮುಸಲ್ಮಾನರು ಪಾಲಿಗೆ ಹೆಚ್ಚಾಗಿ ಹಿಂದೂಜನರಿಂದ ತುಂಬಿರುವ ಈ ರಾಜ್ಯವನ್ನು ಆಳುವುದಕ್ಕೆ ಆಗುವುದಿಲ್ಲ. ಇದನ್ನು ತಿಳಿದ ಅಕ್ಬರನು ಹಿಂದೂಗಳಿಗೆ ಅವರ ಯೋಗ್ಯತೆಗೆ ತಕ್ಕ ಪುರಸ್ಕಾರವನ್ನು ಮಾಡುತ್ತಾ ಅವರ ನಿಶ್ಚಲವಾದ ರಾಜಭಕ್ತಿಯನ್ನು ಸಂಪಾದಿಸಿದನು. ಹಿಂದೂ ಮುಸಲ್ಮಾನರನ್ನು ಒಟ್ಟುಗೂಡಿಸಲು ಇವನು ಒಂದು ಮತವನ್ನು ಸ್ಥಾಪಿಸಿದನು. ಅದರ ಪ್ರಕಾರ ಹಿಂದುವೇ ಆಗಲಿ ಅಥವಾ ಮುಹಮ್ಮದೀಯನೇ ಆಗಲಿ ಒಂದೇ ದೇವರನ್ನು ಪೂಜಿಸಿ ಒಂದೇವಿಧವಾದ ಆಚಾರವ್ಯವಹಾರದಲ್ಲಿರಬೇಕೆಂದು ಬೋಧಿಸುವ ತನ್ನ ಮತವನ್ನು ಸ್ಥಾಪಿಸಲು ಪ್ರಯತ್ನಪಟ್ಟನು.

ಆದರೆ ಜನರು ಅದನ್ನು ಕೈಗೊಳ್ಳುವವರಾಗಿರಲಿಲ್ಲ. ಅದಾಗ್ಯೂ ಅಕ್ಬರನ ಕಾರು ಣ್ಯವೂ, ದಯಾಳುತ್ವವೂ ಜನರ ಮನಸ್ಸಿನಲ್ಲಿ ನೆಟ್ಟವು. ಸಹನೆಯು ಅವನಲ್ಲಿ ಮೂರ್ತಿ ಮತ್ತಾಗಿದ್ದಿತು. ಸಕಲವಿಧವಾದ ಜಾತಿಗಳೂ ಅವನಿಗೆ ಸಹ್ಯವಾಗಿಯೇ ಇದ್ದವು. ಪೋರ್ಚುಗೀಸ್ ಜೆಸ್ಯೂಟರನ್ನು ಆದರದಿಂದ ತನ್ನ ಆಸ್ಥಾನಕ್ಕೆ ಬರಮಾಡಿದು ದಲ್ಲದೆ ಅವರು ಬರೆದ ಅಥವಾ ಕೆತ್ತಿದ ಚಿತ್ರಪ್ರತಿಮೆಗಳನ್ನು ನೋಡಿ ಸಂತೋಷ ಪಡುತ್ತಿದ್ದನು. ವೇದಾಂತವಿಚಾರವಾದ ಚರ್ಚೆಗಳು ನಡೆಯುತ್ತಿದ್ದ ಕಡೆಗಳಲ್ಲೆಲ್ಲಾ ಅಕ್ಬರನು ಅಧ್ಯಕ್ಷನಾಗಿ ಸಭೆಗಳನ್ನು ನಡೆಸುತ್ತಿದ್ದನು. ಸೂರ್ಯಾರಾಧನೆ ಮಾಡಲು ಜನವನ್ನು ಪ್ರೋತ್ಸಾಹಿಸಿದುದಲ್ಲದೆ, ತಾನೇ ಪ್ರತಿನಿತ್ಯವೂ ಸೂರ್ಯನೆದುರಿಗೆ ಮೊಣ ಕಾಲನ್ನೂರಿ ಪ್ರಪಂಚದ ಕತ್ತಲನ್ನು ನೀಗಿಸಿ ದಿಗಂತದಲ್ಲಿ ವಿರಾಜಮಾನನಾಗಿ ರಾಜಿ ಸುವ ಆ ದೇವರನ್ನು ಆರಾಧಿಸುತ್ತಿದ್ದನು.

ಅಕ್ಬರನು ಪ್ರಜೆಗಳಲ್ಲಿ ತನಗಿರುವ ವಿಶ್ವಾಸವನ್ನು ತೋರಿಸಿ ಅವರನ್ನು ಒಂದುಗೂಡುವುದಕ್ಕಾಗಿ ನಾನಾಜಾತಿಯ ಕನ್ಯೆಯರನ್ನು ಮದುವೆಯಾದನು. ಇವುಗಳನ್ನೆಲ್ಲಾ ಕೇವಲ ರಾಜತಂತ್ರಕ್ಕಾಗಿ ಮಾಡಲಿಲ್ಲ; ಅವನ ಮನಸ್ಸು ಪರಿಶುದ್ಧ ವಾಗಿಯೂ, ನಿಷ್ಕಪಟವಾಗಿಯೂ ಇದ್ದುದರಿಂದ ಮಾಡಿದನು. ಅದುವರಿವಿಗೂ ಮಹಮದೀಯರಲ್ಲದವರೆಲ್ಲರಮೇಲೂ "ಜೆಸಿಯಾ" ಎಂಬ ತಲೆಗಂದಾಯವು ವಿಧಿ ಸಲ್ಪಡುತ್ತಿತ್ತು. ದಯಾಳುವಾದ ಅಕ್ಬರನು ಅದನ್ನು ತೆಗೆದುಹಾಕಿದನು. ಆನುವ ರೆಗೂ ಜಾತಿವೈರದಿಂದ ಮಹಮದೀಯರೇ ರಾಜ್ಯದಲ್ಲಿ ದೊಡ್ಡ ಅಧಿಕಾರವನ್ನು ಹೊಂದುತ್ತಿದ್ದರು; ಆದರೆ ಅಕ್ಬರನು ಹಿಂದುಗಳು ಪಾರ್ಸಿಗಳು ಅಫ್‌ಘನರು ಮತ್ತು ಸುನ್ನಿಗಳಿಗೆಲ್ಲ ಸೈನ್ಯದಲ್ಲಿಯೂ, ರಾಜ್ಯಾಧಿಕಾರದಲ್ಲಿಯೂ ಭಾರಿ ಉದ್ಯೋಗಗಳನ್ನು ಕೊಟ್ಟನು. ಎಲ್ಲಾವಿಧವಾದ ಜಾತಿಯ ಮುಖ್ಯಸ್ಥರನ್ನೆಲ್ಲಾ ವಿಧೇಯರನ್ನಾಗಿ ಮಾಡಲು ಅಕ್ಬರನು ಅವರಿಗೆ "ಮುಕ್‌ಸಬ್‌ದಾರ್" ಎಂಬ ಹೆಸರಿಟ್ಟು ಭಾರಿ ಸಂಬಳ ಅಥವಾ ಜಹಗೀರುಗಳನ್ನು ಅವರಿಗೆ ಕೊಟ್ಟು ಅವಶ್ಯವಿದ್ದಾಗ ಸೈನ್ಯವನ್ನು ತಂದು ಅವರು ತಮ್ಮ ಚಕ್ರವರ್ತಿಗೆ ಸಹಾಯಮಾಡಬೇಕೆಂದು ಕಟ್ಟುಮಾಡಿದನು. ರಾಜಧಾನಿಗೆ ದೂರವಾಗಿದ್ದ, ಚಕ್ರವರ್ತಿಯ ಅಧಿಕಾರವು ಬಲವಾಗಿ ಸ್ಥಾಪಿಸಿದ್ದ

ಕಚೇರಿಗಳಲ್ಲೆಲ್ಲಾ ಇಂತಹ ಮುನ್‌ಸಬ್‌ದಾರರುಗಳು ಬಹಳ ವಿಧೇಯತೆಯಿಂದ ಕೆಲಸ ಮಾಡಿ ರಾಜನಿಗೆ ಸಲ್ಲಬೇಕಾದ ಕಂದಾಯ ಕಾಣಿಕೆಗಳನ್ನು ವಸೂಲ್‌ಮಾಡಿ ಕೊಂಡು ರಾಜ್ಯದ ಆಡಳಿತವನ್ನು ನಿರಾತಂಕವಾಗಿ ನಡೆಸಿಕೊಂಡು ಬರುತ್ತಿದ್ದರು. ಹೀಗೆ ಒಂದು ಶತಮಾನದವರೆವಿಗೂ ಹಿಂದೂ ಮತ್ತು ಪಾರ್ಸಿ ಘನವಂತರು ತಮ್ಮ ಸಾರ್ವಭೌಮನಿಗಾಗಿ ರಾಜ್ಯಭಾರದಲ್ಲಿಯೂ ಮತ್ತು ಯುದ್ಧದ ಉದ್ಯೋಗದಲ್ಲಿಯೂ ಸಹಕಾರಿಗಳಾಗಿದ್ದರು. ಆದರೆ ಮತವೈರವು ಔರಂಗಜೇಬನಿಂದ ಹೆಚ್ಚಾಗಲು ಅದ ರೊಂದಿಗೆ ಈ ಮುನಸಬ್‌ದಾರರ ರಾಜಭಕ್ತಿಯೂ ತಪ್ಪಿಹೋಯಿತು.

ಅಕ್ಬರನ ತರುವಾಯ ಸಲೀಮನು ಜಹಾಂಘೀರ್ ಎಂಬಹೆಸರಿನಿಂದ ತನ್ನ 37ನೆಯ ವರುಷದಲ್ಲಿ ಪಟ್ಟಕ್ಕೆಬಂದನು. ತಂದೆಯ ಗುಣಗಳಿಗೆ ಇವನವು ಕೇವಲ ಪ್ರತಿಯಾಗಿದ್ದರೂ, ಇವನು ಅಂತಹ ತಂದೆಮೇಲೆ ತಿರುಗಿ ಬಿದ್ದರೂ ರಾಜ್ಯಭಾರದ ವಿಷಯದಲ್ಲಿ ಬುದ್ಧಿಶಾಲಿಯಾಗಿದ್ದನು. ಸಲೀಮನು ಮುಂಗೋಪಿ, ಅಲ್ಲದೆ ಶುದ್ಧ ಕುಡುಕ. ಮುರಾದ್ ಮತ್ತು ದಾನಿಯಲ್ ಎಂಬ ಇವನ ಇಬ್ಬರು ತಮ್ಮಂದಿರಂತೆ ಇವನು ತನ್ನ ಹದಿನೆಂಟನೆಯ ವರುಷದಿಂದಲೇ ಕುಡಿತಕ್ಕೆ ಪ್ರಾರಂಭಿಸಿದನು ದಿನಕ್ಕೆ 20 ಬಟ್ಟಲು ದ್ರಾಕ್ಷಾರಸವನ್ನು ಕುಡಿಯುತ್ತಿದ್ದು ಅನಂತರ ಎರಡಾವೃತ್ತಿ ಶೋಧಿಸಿ ತಯಾರಿಸಿದ ಬ್ರಾಂದಿಯನ್ನು ಸೇವಿಸಲುಪಕ್ರಮಿಸಿದನು. ಬ್ರಿಟಿಷರ ರಾಯಭಾರಿಯಾದ ಸರ್-ಥಾಮಸ್-ರೊ ಎಂಬಾತನು ಜಹಾಂಘೀರನ ಆಸ್ಥಾನಕ್ಕೆ ಬಂದಕೂಡಲೆ ಆ ಬಲವಾದ ವಾಸನೆಯನ್ನು ಸೈರಿಸಲಾರದೆ ಘಟ್ಟಿಯಾಗಿ ಸೀನು ವುದಕ್ಕೆ ಆರಂಭಿಸಿದ್ದು ಆಸ್ಥಾನಿಕರಿಗೆಲ್ಲಾ ಅತ್ಯಂತ ವಿನೋದಾಸ್ಪದವಾಗಿತ್ತು. ವಯೋವೃದ್ಧನಾದಂತೆಲ್ಲಾ ಜಹಂಘೀರನು ಮದ್ಯಪಾನವನ್ನು ಕಡಿಮೆಮಾಡಿದನು. ಆದರೂ ರಾತ್ರಿಯವೇಳೆಯಲ್ಲಿ ಪ್ರಜ್ಞೆತಪ್ಪುವಷ್ಟು ಕುಡಿಯುತ್ತಿದ್ದನು. ಮತ್ತು ಆ ಕಾರಣದಿಂದ ಸೇವಕರೇ ಇವನಿಗೆ ಆಹಾರವನ್ನು ತಿನ್ನಿಸಬೇಕಾಗಿತ್ತು. ಆದಾಗ್ಯೂ ಜಹಂಘೀರನು ಅವಿವೇಕಿಯಾಗಿರಲಿಲ್ಲ. ಹಗಲುಹೊತ್ತು ವಿಶೇಷವಾಗಿ ಸೇವಿಸದೆ ಪ್ರಜ್ಞೆಯಿಂದ ರಾಜ್ಯಭಾರವನ್ನು ಮಾಡುತ್ತಾ ರಾತ್ರಿಯಲ್ಲಿ ಮನಮೆಚ್ಚು ವಂತೆ ಮದ್ಯಪಾನವನ್ನು ಮಾಡುತ್ತಿದ್ದನು. ಜಹಂಘೀರನು ಹೆಂಡಕುಡುಕನಾದರೂ

ತನ್ನ ಪುರಜನರು ವಿಶೇಷವಾಗಿ ಕುಡಿದು ರಾತ್ರಿವೇಳೆಯಲ್ಲಿ ಬೀದಿಯಲ್ಲಿ ಗಲಭೆಯನ್ನು ಮಾಡುತ್ತಿದ್ದುದನ್ನು ಸಹಿಸುತ್ತಿರಲಿಲ್ಲ. ಇದನ್ನು ಉದ್ದೇಶಿಸಿ ಕುಡಿದುಬಂದ ಆಸ್ಥಾನಿಕರನ್ನು ವಿಶೇಷವಾಗಿ ಶಿಕ್ಷಿಸುತ್ತಿದ್ದನು. ಮತ್ತು ಹೊಗೆಯಸೊಪ್ಪಿನ ಸೇವನೆಯಿಂದ ಶರೀರಕ್ಕೆ ಉಂಟಾಗುವ ಕೇಡನ್ನು ಕುರಿತು ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದನು. ಆದರೆ ತನಗೆ ಹಿತಕಾರಿಯಾಗಿದ್ದ ಅಫೀಮಿನಮೇಲೆ ಏನನ್ನೂ ಬರೆಯಲಿಲ್ಲ. (ಸಶೇಷ)

ವಿದ್ಯಾಭ್ಯಾಸವೂ ಚಿತ್ರಗಳ ಉಪಯೋಗವೂ.

1. ಮಗುವಿನ ಮನಸ್ಸಿನಲ್ಲಿರುವ ಚಟುವಟಿಕೆಯ ಉಪಯೋಗವು ಅದರ ಗ್ರಹಣಶಕ್ತಿಯಾಗಿರುತ್ತದೆ. ಹೇಗೆಂದರೆ:—

ಅದರ ದೃಷ್ಟಿಯು ತನ್ನೆದುರಿಗಿರುವ ವಸ್ತುವಿನಮೇಲೆ ಬೀಳುತ್ತದೆ. ಆಗ ಮಗುವು ತನ್ನೆದುರಿಗಿರುವ ವಸ್ತುವನ್ನು ಕೈಯಲ್ಲಿ ಹಿಡಿದುಕೊಳ್ಳಲು ಅಪೇಕ್ಷಿಪಡುತ್ತದೆ.

ಮಕ್ಕಳಿಗೆ ಇತರ ಪದಾರ್ಥಗಳ ಇರುವಿಕೆಯು ಮೊದಲು ದೃಷ್ಟಿಯಿಂದಮಾತ್ರವೇ ತಿಳಿಯುತ್ತದೆ. ಆದರೆ ಆ ಜ್ಞಾನವು ಕ್ರಮೇಣ ಸ್ಪರ್ಶೇಂದ್ರಿಯದಿಂದ ವೃದ್ಧಿಯಾಗುತ್ತದೆ.

2. ಮಗುವಿಗೆ ಮನೆಯಲ್ಲಿ ನಡೆಯತಕ್ಕ ವಿದ್ಯಾಭ್ಯಾಸವೇ ಹೆಚ್ಚಾಗಿದೆ. ಮಗುವು ತನ್ನ ಸುತ್ತಮುತ್ತಲಿರುವ ವಸ್ತುಗಳನ್ನು ನೋಡುವುದರಿಂದಲೂ, ಮುಟ್ಟುವುದರಿಂದಲೂ ತನ್ನ ಇಂದ್ರಿಯಗಳನ್ನು ಬಲಪಡಿಸಿಕೊಳ್ಳುತ್ತದೆ. (ಆದುದರಿಂದ ತಂದೆ ತಾಯಿಗಳು ಮಕ್ಕಳ ಉತ್ತರೋತ್ತರಾಭಿವೃದ್ಧಿಗೆ ಸಹಾಯಕವಾಗುವ ಮತ್ತು ಅವರ ಇಂದ್ರಿಯಗಳನ್ನು ಬಲಪಡಿಸಲಿಕ್ಕೆ ಸಹಕಾರಿಯಾಗುವ ವಸ್ತುಗಳನ್ನು ಅವರ ಕೈಗೆ ಸಿಕ್ಕುವಂತೆ ಮಾಡಬೇಕಾದುದು ಆವಶ್ಯಕವು)

ಆಗಾಗ್ಗೆ ಮನೆಯಲ್ಲಿ ಆಡತಕ್ಕ ಮಾತುಗಳೂ ಮಕ್ಕಳ ನಡತೆಯಲ್ಲಿ ಕಾರ್ಯ

ಕಾರಿಯಾಗುವುವು. ಮಕ್ಕಳು ತಮ್ಮೆದುರಿಗೆ ಆಡಿದ ಮಾತುಗಳನ್ನು ಕೂಡಲೆ ಗ್ರಹಿಸಿ ಅದರಂತೆ ತಾವೂ ನಡೆಯತೊಡಗುತ್ತಾರೆ. (ಆದುದರಿಂದ ಮನೆಯಲ್ಲಿ ಅವರೆದುರಿಗೆ ಯಾವವಿಧವಾದ ಕೆಟ್ಟಮಾತುಗಳನ್ನೇ ಆಗಲಿ, ಸುಳ್ಳುಮಾತುಗಳನ್ನೇ ಆಗಲಿ, ಬಯ್ಗಳನ್ನೇ ಆಗಲಿ ಆಡಬಾರದು)

ಮಕ್ಕಳ ಮನಸ್ಸಿನಲ್ಲಿ ಹುಟ್ಟುವ ಒಳ್ಳೆಯ ಗುಣಗಳನ್ನು ವೃದ್ಧಿಪಡಿಸಿ ಕೆಟ್ಟ ಗುಣಗಳನ್ನು ಬಿಡುವಂತೆ ಮಾಡುವುದು ಪ್ರತಿಯೊಬ್ಬ ತಂದೆತಾಯಿಯ ಕರ್ತವ್ಯವಾಗಿರುತ್ತದೆ. ಈ ಉದ್ದೇಶದಿಂದಲೇ ಮಕ್ಕಳನ್ನು ಪಾಠಶಾಲೆಗಳಿಗೆ ಕಳುಹಿಸಬೇಕಾಗಿದೆ.

3. ಇಂದ್ರಿಯಗಳನ್ನು ವೃದ್ಧಿಪಡಿಸುವುದು. (1) ಬಣ್ಣಗಳನ್ನು ತೋರಿಸುವುದರಿಂದಲೂ, (2) ನಾನಾತರಹೆಯ ಆಕೃತಿಗಳನ್ನು ತೋರಿಸುವುದರಿಂದಲೂ, (3) ಗುಂಪುಗುಂಪಾಗಿರುವ ವಸ್ತುಗಳನ್ನು ತೋರಿಸುವುದರಿಂದಲೂ, ಚಕ್ಷುರಿಂದ್ರಿಯಶಕ್ತಿಯನ್ನು ಬೆಳೆಸಬಹುದು, (4) ಹೀಗೆಯೇ ಇತರ ಇಂದ್ರಿಯಗಳನ್ನು ಪದೇ ಪದೇ ಉಪಯೋಗಿಸುವಂತೆ ಮಾಡುವುದರಿಂದಲೂ, ಅವುಗಳು ಬೆಳವಣಿಗೆಗೆ ತಕ್ಕ ಸಲಕರಣೆಗಳನ್ನು ಒದಗಿಸಿಕೊಡುವುದರಿಂದಲೂ, ಅವುಗಳ ಶಕ್ತಿಯನ್ನೂ ಬಲಪಡಿಸಬಹುದು.

4. ನಮ್ಮ ಬುದ್ಧಿಶಕ್ತಿಯನ್ನು ಬೆಳೆಸುವುದಕ್ಕೆ ಎಲ್ಲಾ ಇಂದ್ರಿಯಗಳೂ ಒಂದೇಸಮನಾಗಿ ಸಹಾಯಮಾಡಲಾರವು.

ರಸನೇಂದ್ರಿಯ ಮತ್ತು ಘ್ರಾಣೇಂದ್ರಿಯ:—ಈ ಎರಡು ಇಂದ್ರಿಯಗಳು ಮಾಡುವ ಕೆಲಸವನ್ನು ತೋರ್ಪಡಿಸಲಾಗುವುದಿಲ್ಲ. ಏತಕ್ಕೆಂದರೆ ಸ್ಪರ್ಶ ಮೊದಲಾದ ಇಂದ್ರಿಯಗಳು ಮಾಡಿದ ಕೆಲಸವು ನಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುತ್ತವೆ, ಇವು ಹಾಗಲ್ಲ.

5. ಸ್ಪರ್ಶೇಂದ್ರಿಯ:—ಪದಾರ್ಥಗಳನ್ನು ಕೈಯಲ್ಲಿ ಮುಟ್ಟುವುದರಿಂದ ಇದು ಬಲಪಡುತ್ತದೆ. ಆದುದರಿಂದ ಭಾರ, ಹಗುರ, ಗಟ್ಟಿ, ಮೆದು, ಒರಟು, ನಯ

ಅಥವಾ ಶಾಖ ಅಥವಾ ತಣುವು ಹೀಗಿರುವ ವಸ್ತುಗಳನ್ನು ಮುಟ್ಟಿ ಪರೀಕ್ಷಿಸುವುದರಿಂದ ಈ ಶಕ್ತಿಯು ಬಲಪಡುತ್ತದೆ.

6. ಶ್ರವಣೇಂದ್ರಿಯ:—ಇದು ಗಟ್ಟಿಯಾದ, ಮೆಲ್ಲಗೆ ಉಚ್ಚರಿಸುವ, ಮೃದುವಾದ, ಪ್ರೀತಿಪೂರ್ವಕವಾದ, ಭಯಭಕ್ತಿಯುಳ್ಳ ಮಾತಿನ ಶಬ್ದಗಳನ್ನು ಕೇಳುವುದರಿಂದ ವೃದ್ಧಿಯಾಗುತ್ತದೆ.

7. ಚಕ್ಷುರಿಂದ್ರಿಯವು:—ನೋಡುವಿಕೆಯಿಂದ ಇದು ಪಟುವಾಗುತ್ತದೆ. ಇದಕ್ಕಾಗಿ ಬೆಳಕು, ಬಣ್ಣ, ಆಕಾರ, ಅಳತೆ, ಸಂಖ್ಯೆ, ಚಲನೆ, ದೂರ, ಮೊದಲಾದುವುಗಳನ್ನು ತೋರಿಸಬೇಕಾಗುತ್ತದೆ.

8. ಮೇಲೆ ಹೇಳಿದಂತೆ ಮಗುವಿಗೆ ಬುದ್ಧಿಕುಶಲತೆಯನ್ನು ಹೆಚ್ಚಿಸಲು ಎಲ್ಲಾ ಇಂದ್ರಿಯಗಳನ್ನೂ ಉಪಯೋಗಿಸಬೇಕಾಗುತ್ತದೆ. ಆದರೆ ಇವುಗಳಲ್ಲೆಲ್ಲಾ ಉತ್ತಮವಾದುದು ಚಕ್ಷುರಿಂದ್ರಿಯವು.

ದೃಷ್ಟಿಯು ಮನಸ್ಸಿನ ಕೆಲಸಕ್ಕೆ ಬೇಕಾದುದನ್ನು ವಿಶೇಷವಾಗಿ ಒದಗಿಸಿಕೊಡುತ್ತದೆ. ಆಶ್ಚರ್ಯವು ಪ್ರತಿಯೊಬ್ಬನಲ್ಲಿಯೂ ನೆಲೆಗೊಂಡಿದೆ. ಆದರೆ ಮಗುವಿಗೆ ಉಂಟಾಗುವ ಆಶ್ಚರ್ಯವು ಬಹಳ ಜಾಗ್ರತೆಯಾಗಿ ವೃದ್ಧಿಯಾಗುತ್ತದೆ. ಅಲ್ಲದೆ ಒಂದು ಪದಾರ್ಥವನ್ನು ನೋಡಿದಮಾತ್ರದಿಂದಲೇ ಮಕ್ಕಳು ಅದರ ವಿಷಯವನ್ನೆಲ್ಲಾ ಕಲಿಯಬೇಕೆಂದು ಆತುರಪಡುತ್ತವೆ. ಆದ್ದರಿಂದ ದೃಷ್ಟಿಯು ಇತರ ಇಂದ್ರಿಯಗಳ ಕೆಲಸವನ್ನು ಹೆಚ್ಚಿಸುವುದಕ್ಕೆ ಅತ್ಯಂತ ಸಹಕಾರಿಯಾಗಿದೆ.

9. ಪ್ರತಿಯೊಬ್ಬ ಉಪಾಧ್ಯಾಯನ ಕೆಲಸವೂ ಇಂದ್ರಿಯಗಳ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿಯೇ ಇರುತ್ತದೆ. ಇವರು ತಮ್ಮ ಕೆಲಸಗಳನ್ನೆಲ್ಲಾ ವಿಶೇಷವಾಗಿ ಸ್ಕೂಲಿನಲ್ಲಿಯೇ ಮಾಡಬೇಕಾಗಿರುವುದು. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ಒಂದು ಸಹಜವಾದ ವಸ್ತುವನ್ನೇ ಆಗಲಿ, ವಸ್ತುವಿಭಾಗವನ್ನೇ ಆಗಲಿ, ಸ್ಕೂಲಿಗೆ ತಂದು ತೋರಿಸುವುದು ಬಹಳ ಕಷ್ಟವಾದ ಅಂಶವಾಗಿದೆ. ಬಾಯಿಪಾಠವೂ ಅನೇಕವೇಳೆ ಸೋಲಾಗುತ್ತದೆ. ಅಲ್ಲದೆ ಅದು ಚಿಕ್ಕಮಕ್ಕಳ ಮನಸ್ಸಿನ ಬೆಳವಣಿಗೆಗೆ ಬಹಳ ಸ್ವಲ್ಪ ಸಹಾಯಮಾಡುತ್ತದೆ. ಮಾತುಗಳಾದರೋ ವಸ್ತುಗಳ ಚಿಹ್ನೆಗಳಾಗಿವೆ. ಮತ್ತು ಉಪಾಧ್ಯಾಯನು ತಾನು ವಿವರಿಸುವ ವಸ್ತುವಿನ ವಿಷ

ಯನ್ನು ತಿಳಿಸಬೇಕೆಂದು ವ್ಯರ್ಥವಾಗಿ ತೊಂದರೆಪಡಬೇಕಾಗುತ್ತದೆ. ಆದಾಗ್ಯೂ ಇದರಿಂದ ಮಕ್ಕಳಿಗೆ ಅಷ್ಟು ಪ್ರಯೋಜನವಾಗಲಾರದು. ಸುಮ್ಮನೆ ವಿವರಿಸಿ ಹೇಳುವು ದರಿಂದ ಒಂದು ವಸ್ತುವಿನ ಉದ್ದ, ಅಗಲ, ದಪ್ಪ, ಮೊದಲಾದ ಅಳತೆಗಳನ್ನು ತಿಳಿಯ ಬಹುದೇವಿನಾ ಅಸ್ತಮಯ ಸಮಯದ ನೋಟ, (The Scenery of sunset) ಕಾಡುಗಳ ನೋಟ, (Forest scenery) ಬೆಟ್ಟಗಳ ಮತ್ತು ಪರ್ವತಗಳ ನೋಟ (Hill and mountain scenery) ಮೊದಲಾದ ಸ್ವಾಭಾವಿಕವಾದ ನೋಟ ಗಳನ್ನು ಬಾಯಿಂದ ವಿವರಿಸುವುದು ಅಸಾಧ್ಯ.

10. ಮಕ್ಕಳಿಗೆ ಚಿತ್ರಪಟಗಳನ್ನು ತೋರಿಸುವುದು ಅತ್ಯಾವಶ್ಯಕವಾಗಿರು ತ್ತದೆ. ಪದಾರ್ಥಗಳ ವಿಷಯದಲ್ಲಿ ಪರಿಮಿತಜ್ಞಾನವುಳ್ಳ (Limited know- ledge) ಮಕ್ಕಳಿಗೆ ಉಪಾಧ್ಯಾಯನು ಚಿತ್ರಸಹಾಯವಿಲ್ಲದೆ ಎಷ್ಟೇ ಚೆನ್ನಾಗಿ ಬೋಧಿಸಿದಾಗ್ಯೂ ಇವನ ಬೋಧನೆಯು ಫಲಕಾರಿಯಾಗುವುದಿಲ್ಲ. ಭೂಪಟಗ ಳನ್ನು ಪ್ರತಿ ಸ್ಕೂಲಿನಲ್ಲಿಯೂ ಉಪಯೋಗಿಸುವಂತೆಯೇ ಚಿತ್ರಗಳನ್ನೂ ಉಪಯೋ ಗಿಸಬೇಕು. ಯಾವನೂ ಭೂಪಟದ ಸಹಾಯವಿಲ್ಲದೆ ಭೂಗೋಳವನ್ನು ಸರಿಯಾಗಿ ಬೋಧಿಸಲಾರನು. ಅಂಥ ಭೂಪಟದಿಂದಲೂ ಅವನು ಸ್ಥಳಗಳ ದೂರ ಮತ್ತು ಇರುವ ಸ್ಥಳ (distance and locality) ಮುಂತಾದ್ದನ್ನು ತಿಳಿಸಬಹುದೇ ವಿನಾ ಭೂಗೋಳದ ಎಲ್ಲಾ ಅಂಶವನ್ನೂ ತಿಳಿಸಲಾಗುವುದಿಲ್ಲ. ಭೂಗೋಳವನ್ನು ಸ್ಪಷ್ಟವಾಗಿ ತಿಳಿಸಬೇಕಾದರೆ ಚಿತ್ರಗಳ ಸಹಾಯವು ಅವಶ್ಯವಾಗಿ ಬೇಕಾಗಿದೆ. ಶ್ರವಣಬೆಳಗೊಳದಲ್ಲಿ ಗೋಮಟೇಶ್ವರ ಸ್ವಾಮಿ ಇದೆ, ಹಳೇಬೀಡಿನಲ್ಲಿ ಕಲ್ಲಿನಲ್ಲಿ ಬಹಳ ಚಿತ್ರಕೆಲಸ ಮಾಡಿದ ದೇವಸ್ಥಾನವಿದೆ, ಸಕಲೇಶಪುರದ ಹತ್ತಿರ ನದಿಗೆ ಕಬ್ಬಿಣದ ಸೇತುವೆ ಕಟ್ಟಿದ್ದಾರೆ, ಎಂದು ಹೇಳುವುದರಿಂದ ಮಾತ್ರ ಅವರ ಮನಸ್ಸಿಗೆ ವಿಷ ಯವು ಚೆನ್ನಾಗಿ ತಿಳಿದು ದೃಢಪಡಲಾರದು. ಇದಕ್ಕೆ ಬದಲಾಗಿ ಆಯಾ ಚಿತ್ರ ಗಳನ್ನು ಅವರಿಗೆ ತೋರಿಸಿದಲ್ಲಿ ಅವರ ಮನಸ್ಸು ಅದರಲ್ಲಿ ನೆಲೆಯಾಗಿ ನಿಲ್ಲುತ್ತವೆ.

ಚರಿತ್ರೆಯ ಪಾಠವನ್ನು ಹೇಳುವಾಗಲೂ ಹೀಗೆಯೇ. ಹಿಂದಣಕಾಲದ ಜನರ ಉಡುಪು, ಅವರುಗಳ ಸ್ಥಿತಿ, ಅವರು ಉಪಯೋಗಿಸುತ್ತಿದ್ದ ಆಯುಧಗಳು,

ಹಳೆಯನಾಣ್ಯಗಳು, ಮೊದಲಾದುವನ್ನು ಸುಮ್ಮನೆ ವಿವರಿಸುವುದಕ್ಕಿಂತ ಚಿತ್ರಗಳ ಮೂಲಕ ತಿಳಿಸುವುದೂ ನಾಣ್ಯಗಳನ್ನೇ ತೋರಿಸುವುದೂ ಬಹಳ ಫಲಕಾರಿಯಾದುದು.

ವಸ್ತುಪಾಠಗಳನ್ನಂತು ಚಿತ್ರಗಳಸಹಾಯವಿಲ್ಲದೆ ಎಂದಿಗೂ ಬೋಧಿಸಲೇಬಾರದು. ಹಾಗೆಮಾಡಿದರೆ ಆ ವಿಷಯವು ಮಕ್ಕಳ ಮನಸ್ಸನ್ನು ಎಂದಿಗೂ ಧೃಡಪಡಿಸುವುದಿಲ್ಲ. (ಹೀಗಿರುವಲ್ಲಿ ಚಿತ್ರಗಳಿದ್ದಾಗ್ಯೂ ಅವನ್ನು ಉಪಯೋಗಿಸದೆ ಪಾಠಹೇಳುವವರು, ಯಾವರೀತಿ ಮಕ್ಕಳ ಮನಸ್ಸಿನ ಬೆಳವಳಿಕೆಗೆ ಸಹಕಾರಿಗಳಾಗಿರುತ್ತಾರೋ ತಿಳಿಯದು).

೮. ಚಿತ್ರಗಳನ್ನು ಉಪಯೋಗಿಸುವುದರಿಂದ ಎಷ್ಟೋಪ್ರಯೋಜನವಿದೆ. ಬಾಯಿಮಾತಿನಿಂದ ಬೋಧಿಸುವುದಕ್ಕಿಂತ ಚಿತ್ರಗಳಸಹಾಯದಿಂದ ಹೇಳುವುದರಿಂದ ವಿಷಯವು ಮಕ್ಕಳಮನಸ್ಸಿಗೆ ಚೆನ್ನಾಗಿ ದೃಢಪಡುತ್ತದೆ. ಸಾಧಾರಣವಾಗಿ ಮಕ್ಕಳು ನೋಡಲು ಅಸಾಧ್ಯವಾದ ಅನೇಕ ವಸ್ತುಗಳನ್ನು ಚಿತ್ರಗಳಿಂದ ನೋಡಿ ತಿಳಿದುಕೊಳ್ಳಬಹುದು. ಪಾಠಶಾಲೆಗೆ ತಂದು ತೋರಿಸಲಾರದ ಯಂತ್ರಗಳೇ ಮೊದಲಾದ ವಸ್ತುಗಳನ್ನು ತೋರಿಸುವುದಕ್ಕೆ ಚಿತ್ರಗಳನ್ನು ಉಪಯೋಗಿಸಲೇಬೇಕು

ಹೀಗಿರುವುದರಿಂದ ಪ್ರತಿಯೊಬ್ಬ ಉಪಾಧ್ಯಾಯನೂ ಚಿತ್ರಗಳನ್ನು ಉಪಯೋಗಿಸಲೇಬೇಕಾಗಿರುತ್ತದೆ.

೯ ಚಿತ್ರಗಳನ್ನು ಉಪಯೋಗಿಸುವ ವಿಧಾನ.—ಚಿತ್ರಗಳನ್ನು ಪಾಠಕಾಲದಲ್ಲಿ ತೋರಿಸಬೇಕಾಗಿ ಒಂದಾಗಲೇ ಉಪಯೋಗಿಸಬೇಕು. ಏಕೆಂದರೆ ಉಪಾಧ್ಯಾಯರ ಬೋಧನೆಯಿಂದ ಮಕ್ಕಳು ಆ ವಿಷಯವನ್ನು ಯೋಚಿಸುತ್ತಿರುವಾಗ ಚಿತ್ರವನ್ನು ತೋರಿಸಿದಲ್ಲಿ ಅವರು ಅದನ್ನು ನೋಡುವುದರಿಂದ ತಮ್ಮ ಯೋಚನೆಯನ್ನು ಧೃಡಪಡಿಸಿಕೊಳ್ಳುತ್ತಾರೆ. ಸದಾಕಾಲದಲ್ಲಿಯೂ ಚಿತ್ರಗಳನ್ನು ಎಂದಿಗೂ ತೋರಿಸಬಾರದು. ಹೀಗೆ ಮಾಡುವುದರಿಂದ ಮಕ್ಕಳ ಆಲೋಚನಾಶಕ್ತಿಯು ಬಹಳಮಟ್ಟಿಗೆ ಕಡಿಮೆಯಾಗುವುದು. ಉಪಾಧ್ಯಾಯನು ಮಕ್ಕಳನ್ನು ಆಯಾ ವಿಷಯಗಳಲ್ಲಿ ಯೋಚಿಸುವಂತೆಮಾಡಿ ಅನಂತರ ಚಿತ್ರಗಳನ್ನು ತೋರಿಸಿದರೆ ಅವರು

ತಮ್ಮ ಯೋಚನೆಯಲ್ಲಿರುವ ವಿಷಯವನ್ನು ಎದುರಿಗಿರುವ ಚಿತ್ರದೊಡನೆ ಹೋಲಿಸಿ ತಿಳಿದುಕೊಳ್ಳಲು ಅವಕಾಶವಾಗುತ್ತದೆ. ಆದುದರಿಂದ ಪ್ರತಿಯೊಬ್ಬ ಉಪಾಧ್ಯಾಯನೂ ಚಿತ್ರಗಳ ಸಹಾಯದಿಂದಲೇ ಎಲ್ಲಾ ಪಾಠಗಳನ್ನೂ ವಿವರಿಸುತ್ತಬಂದಲ್ಲಿ ಮಕ್ಕಳ ಬುದ್ಧಿಶಕ್ತಿಯು ಹೆಚ್ಚುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇದಕ್ಕಾಗಿಯೇ ಈಗಿನಕಾಲದಲ್ಲಿ ಅಚ್ಚಾಗಿರುವ ಪುಸ್ತಕಗಳಲ್ಲಿ ಪ್ರತಿಯೊಂದು ಪುಟದಲ್ಲಿಯೂ ಚಿತ್ರಗಳನ್ನು ಹಾಕಿರುತ್ತಾರೆ. ಆಯಾಯ ವಿಷಯಗಳನ್ನು ಚಿತ್ರದ ಸಹಾಯದಿಂದ ಅವರಿಗೆ ತಿಳಿಸಿದಲ್ಲಿ ಅವರು ಆ ವಿಷಯಗಳನ್ನು ತಿಳಿದುಕೊಳ್ಳುವಷ್ಟು ಚೆನ್ನಾಗಿ ಚಿತ್ರವಿಲ್ಲದೆ ಹೇಳುವುದರಿಂದ ಎಂದಿಗೂ ತಿಳಿದುಕೊಳ್ಳಲಾರರು. ಚಿತ್ರಗಳು ಮಕ್ಕಳ ಮನಸ್ಸನ್ನು ಆಕರ್ಷಿಸುವುವಲ್ಲದೆ ಅವರನ್ನು ಸಂತೋಷವುಳ್ಳವರನ್ನಾಗಿಯೂ ಮಾಡುವವು ಎಂಬ ವಿಷಯವನ್ನು ಸರ್ವರೂ ತಿಳಿದುಕೊಳ್ಳಬೇಕಾಗಿದೆ.

H. V. N.

ಸ್ಕೂಲ್ ಡಿಸಿಪ್ಲಿನ್.

(೧೬೭ ನೇ ಪುಟದ ಶೇಷ)

3. ಹೀಯಾಳಿಸುವುದು. ಈ ದಂಡನೆಯಲ್ಲಿ ಬಹಳ ಭೇದಗಳುಂಟು. ಮುಖಭಾವದಿಂದಲೇ ಅತೃಪ್ತಿಯನ್ನು ತೋರಿಸುವುದು ಮೊದಲುಗೊಂಡು ವಿಶೇಷ ಕೋಪದಿಂದ ಮಕ್ಕಳನ್ನು ಅನ್ನುವವರೆಗೂ ಉಂಟು. ಉಪಾಧ್ಯಾಯರ ಯೋಗ್ಯತಾನುಸಾರವಾಗಿ ಈ ಹೀಯಾಳಿಸುವಿಕೆಯ ಬೆಲೆಯು ಹೆಚ್ಚುಕಡಿಮೆ ಯಾಗುವುದು. ಒಂದೊಂದುವೇಳೆ ಏಕಾಂತವಾಗಿ ಹೀಯಾಳಿಸುವುದು ಉತ್ತಮ. ಯಾವಾಗಲೂ ತಪ್ಪು ಹಿಡಿಯುತ್ತ ಹೀಯಾಳಿಸುತ್ತಲೇ ಇರಬಾರದು. ಆಗಾಗ್ಯೆ ಸ್ವಲ್ಪಮಟ್ಟಿಗೆ ಈ ದಂಡನೆಯನ್ನು ಉಪಯೋಗಿಸಿಕೊಳ್ಳುವುದಾದರೆ ಅದು ಬಹುಪ್ರಯೋಜನಕರ. ಹುಡುಗರನ್ನು ಲೇವಡಿಮಾಡುವುದು ಯೋಗ್ಯವಲ್ಲ. ಔಚಿತ್ಯವರಿತು ಯಾವಾಗಲಾದರೂ ಒಂದುಸಲ ಪರಿಹಾಸಮಾಡುವುದು ತಪ್ಪಾಗಲಾರದು.

4. ಅವಮಾನಕರವಾಗಿ ಮಕ್ಕಳನ್ನು ನಿಲ್ಲಿಸುವುದು ಅಥವ ಕೂಡಿಸುವುದು–ಬೆಂಚಿನಮೇಲೆ ನಿಲ್ಲಿಸುವುದು, ನೆಲದಮೇಲೆ ಕೂರಿಸುವುದು, ಮೂಲೆಗೆದುರಾಗಿ ನಿಲ್ಲಿಸುವುದು, ಇವೆಲ್ಲ ಈ ದಂಡನೆಗೆ ದೃಷ್ಟಾಂತರಗಳು. ಒಟ್ಟು ಸ್ಕೂಲಿನ ತಿದ್ದುವಿಕೆಯು ಚೆನ್ನಾಗಿದ್ದರೆ ಇಂತಹ ದಂಡನೆಯನ್ನು ಅವಮಾನವೆಂದು ವಿದ್ಯಾರ್ಥಿಗಳು ಭಾವಿಸುವರು. ಇಲ್ಲದಿದ್ದರೆ ಫಲವಿಲ್ಲ.

5. ಆವೃತ್ತಿ ದಂಡನೆ. ಇದನ್ನು ಕೆಲವರು ಒಪ್ಪುವುದಿಲ್ಲ. ಏಕೆಂದರೆ ಪಾಠವನ್ನು ಹತ್ತೆಂಟುಸಲ ಬರೆಯುವಂತೆ ಈ ದಂಡನೆಯಲ್ಲಿ ಮಾಡುವುದರಿಂದ ಇದರಿಂದ ಮಕ್ಕಳಿಗೆ ಪಾಠವನ್ನು ಕಂಡರೆ ಬೇಸರಹುಟ್ಟುತ್ತೆಂದೂ ಈ ಬೇಸರದಿಂದ ಕ್ರಮೇಣ ವಿದ್ಯೆಯಲ್ಲಿಯೇ ಬೇಸರಹುಟ್ಟಬಹುದೆಂದು ಸಹಿತ ಹೇಳುವರು. ಆದುದರಿಂದ ಆವೃತ್ತಿದಂಡನೆಯನ್ನು ಕೊಡಲೇಕೂಡದೆಂದು ಹೇಳುವರು. ಮತ್ತು ಕೆಲವರಾದರೋ ಆವೃತ್ತಿದಂಡನೆಗೆ ಸ್ಕೂಲಿನಪಾಠವನ್ನು ಕೊಡದೆ ಸಾಧಾರಣವಾದ ಅಂಗಡೀಲೆಖ್ಖ ಮುಂತಾದುವನ್ನು ಕೊಟ್ಟರೆ ಈ ದೋಷವು ಹೋಗುತ್ತೆಂದು ಹೇಳುವರು. ಆವೃತ್ತಿ ದಂಡನೆಯನ್ನು ಕೊಡುವುದಾದರೆ ಮುಂದಿನ ಕೆಲವು ಅಂಶಗಳಿಗೆ ಉಪಾಧ್ಯಾಯರು ಗಮನಕೊಡಬೇಕು.

(೧) ಸ್ಕೂಲಿನ ಕಾಲವಲ್ಲದೆ ಇತರಕಾಲದಲ್ಲಿ ಅಲ್ಲಿ ಕೊಟ್ಟಕೆಲಸವನ್ನು ಹುಡುಗರು ಮಾಡಬೇಕು.

(೨) ಮಕ್ಕಳಯೋಗ್ಯತೆಗೆ ಮೀರಿದಷ್ಟು ಕೆಲಸಕೊಡಬಾರದು.

(೩) ಬುದ್ಧಿ ಶಕ್ತಿಯನ್ನು ಹೆಚ್ಚಾಗಿ ಅಪೇಕ್ಷಿಸುವ ಕೆಲಸವನ್ನು ಕೊಡಕೂಡದು. ಇಲ್ಲದಿದ್ದರೆ ತಿಳಿಯಲಿಲ್ಲವೆಂದು ಹೇಳುವ ಸಮಾಧಾನಕ್ಕೆ ಒಪ್ಪಬೇಕಾಗುವುದು.

(೪) ಉಪಾಧ್ಯಾಯರು ಮಕ್ಕಳು ಮಾಡಿದ ಕೆಲಸವನ್ನು ಪರೀಕ್ಷಿಸಬೇಕು. ಮತ್ತು ಆವೃತ್ತಿ ದಂಡನೆಗಾಗಿ ಕೊಡುವಕೆಲಸವು ಇಂತಹ ಪರೀಕ್ಷೆಯನ್ನು ಜಾಗ್ರತೆಯಾಗಿಮಾಡಲು ಪದೇಪದೇ ಮಾಡಬೇಕಾದನ್ನೇ ಮಾಡಬೇಕಾದ್ದರಿಂದ ಮಕ್ಕಳಿಗೆ ಬೇಸರವಾಗಿ ಮುಂದೆ ಇಂಥಾ ದಂಡನೆಗೆ ಅವಕಾಶಕೊಡದಿರಬೇಕೆಂದುಅಭಿಪ್ರಾಯ

ಹುಟ್ಟುವಂತಿರಬೇಕು. ನಾಲ್ಕು ಪೇಜನ್ನು ಒಂದು ಸಲ ಬರೆಯೆಂದು ಹೇಳುವುದಕ್ಕೆ ಬದಲಾಗಿ ಅರ್ಧಪೇಜನ್ನು ೪ ಸಲ ಬರೆಯುವಂತೆ ಹೇಳುವುದು ಒಳ್ಳೆಯದು. ಪಾಠವನ್ನು ಸಿದ್ಧಪಡಿಸದಿರುವುದು, ಲೇಟಾಗಿಬರುವುದು ಸ್ಕೂಲಿಗೆ ಕಳ್ಳತಪ್ಪಿಸಿಕೊಳ್ಳುವುದು ಇದಕ್ಕೆಲ್ಲ ಈ ದಂಡನೆಯನ್ನು ವಿಧಿಸಬಹುದು.

6. ದೇಹದಂಡನೆ—ಸಾಮಾನ್ಯವಾಗಿ ದೇಹದಂಡನೆಯು ಕೂಡದೆಂದು ಈಗ ಜನರು ಅಭಿಪ್ರಾಯಪಡುವರು. ದೇಹದಂಡನೆಯಿಂದ ಪ್ರಯೋಜನವೇನೋ ಉಂಟು; ಆದರೆ ಅದರಿಂದಾಗುವ ಕೆಡಕು ಪ್ರಯೋಜನಕ್ಕಿಂತ ಹೆಚ್ಚೆಂದು ಹೇಳುವರು. ದೇಹದಂಡನೆಯಿಂದುಂಟಾಗುವ ದೋಷಗಳು:—

(1) ಉಪಾಧ್ಯಾಯರಿಗೂ ಬಾಲಕರಿಗೂ ಪರಸ್ಪರ ವೈಷಮ್ಯ ಹುಟ್ಟುವುದು.

(2) ದೇಹದಂಡನೆಯಿಂದ ಉಂಟಾಗುವ ದೋಷ ವಿಶೇಷವಾಗುವುದರಿಂದ ಅದನ್ನು ತಪ್ಪಿಸಿಕೊಳ್ಳಲು ಮಕ್ಕಳು ಸುಳ್ಳುಹೇಳುವುದು ಮುಂತಾದ ಕೆಟ್ಟದಾರಿಯನ್ನು ಅವಲಂಬಿಸುವರು.

(3) ಒಂದೊಂದು ವೇಳೆ ದೇಹದಂಡನೆಯನ್ನು ಹೊಂದಿದ ಬಾಲಕರ ಮನಸ್ಸು ಕೆಟ್ಟುಹೋಗಿ ದಂಡನೆಯು ಸಾರ್ಥಕವಾಗುವುದು.

(4) ಉಲ್ಲಾಸವಿದ್ದಾಗ ಕೆಲಸಮಾಡುವಷ್ಟು ಚೆನ್ನಾಗಿ ಖೇದದಲ್ಲಿ ಬುದ್ಧಿಯು ಕೆಲಸಮಾಡಲಾರದು. ಈ ಕಾರಣದಿಂದ ದೇಹದಂಡನೆಯಿಂದ ಆಗುವ ವಿಶೇಷ ವ್ಯಥೆಯು ಬುದ್ಧಿವಿಕಾಶಕ್ಕೆ ಅಡಚಣೆಯಾಗುವುದು. ದೇಹದಂಡನೆಯನ್ನು ಮಾಡಬಹುದೆಂಬ ಅಪ್ಪಣೆಯಿದ್ದರೆ ಅನುಭವಸಾಲದ ಉಪಾಧ್ಯಾಯರು ಮಕ್ಕಳನ್ನು ಅತಿಯಾಗಿ ದಂಡಿಸಿ ಕೆಡಕುಮಾಡುವಂತಾಗುವುದು.

(5) ಮಕ್ಕಳ ವಿಷಯದಲ್ಲಿ ಉಪಾಧ್ಯಾಯರಿಗೆ ಅನುತಾಪವಿರಬೇಕಷ್ಟೆ. ದೇಹದಂಡನೆಯನ್ನು ವಿಧಿಸುವುದರಿಂದ ಈ ಅನುತಾಪವು ಕಡಿಮೆಯಾಗುತ್ತ ಬರುವುದು.

ಹೀಗೆ ದೋಷಯುಕ್ತವಾದರೂ ಜಾಗರೂಕತೆಯಿಂದ ಉಪಯೋಗಿಸಿದರೆ ಈ ದೇಹದಂಡನೆಯು ತಿದ್ದುವಿಕೆಯಲ್ಲಿ ಸಹಾಯಮಾಡುವುದು. ಮುಖ್ಯವಾಗಿ ಇತರದಂಡನೆಗಳಿಗೆ ಒಳಗಾಗದಿರುವ ಹುಡುಗನನ್ನು ಈ ದಂಡನೆಯು ದಾರಿಗೆ ತರು

ವುದು-ನಡತೆಯಲ್ಲಿ ಕಂಡುಬರುವ ತಪ್ಪುಗಳಿಗೆ ಎಂದರೆ ಸುಳ್ಳು, ಕಳ್ಳತನ, ಪುಂಡು ತನ, ಮೂರ್ಖತನ, ಮನಃಪೂರ್ವಕವಾದ ಅವಿಧೇಯತೆ ಇಂತಹವುಗಳಿಗೆಲ್ಲಾ ದೇಹ ದಂಡನೆಯನ್ನು ವಿಧಿಸಬಹುದು. ವಿಧಿಸುವುದರಲ್ಲಿ ಹುಡುಗನ ದೇಹಸ್ಥಿತಿಯನ್ನು ಮನಸ್ಸಿನಸ್ಥಿತಿಯನ್ನು ಯೋಚಿಸಬೇಕು ಆರೋಗ್ಯವಿಲ್ಲದ ಹುಡುಗನನ್ನು ಅತಿ ಯಾಗಿ ಹೊಡೆಯುವುದರಿಂದಅನರ್ಥವುಂಟಾಗುವುದು. ಕೆಲವರು ಒಂದೆರಡು ಏಟಿಗೆ ವಿಶೇಷವಾಗಿ ಹೆದರುವರು ಮತ್ತೆ ಕೆಲವರು ಹೆಚ್ಚಾಗಿ ದಂಡನೆಯನ್ನು ಸಹಿಸಬಲ್ಲರು. ಈ ಭೇದವನ್ನು ಸಹತಮ್ಮ ಅನುಭವದಿಂದತಿಳಿದು ಅದಕ್ಕನುಗುಣವಾಗಿ ದಂಡಿಸಬೇಕೇ ಹೊರತು ದೇಹದಂಡನೆಯಲ್ಲಿ ಎಲ್ಲರನ್ನೂ ಒಂದೇ ಎಂದು ಭಾವಿಸಬಾರದು.

ದೇಹದಂಡನೆಯಲ್ಲಿ ಉಪಾಧ್ಯಾಯರು ಜಾಗರೂಕರಾಗಿರಬೇಕೆಂದು ಹೇಳಿದೆ. ಈ ಜಾಗರೂಕತೆಯನ್ನು ಇಟ್ಟುಕೊಳ್ಳುವುದರಲ್ಲಿ ಅನುಸರಿಸಬೇಕಾದ ನಿಯಮಗಳು ಯಾವವೆಂದರೆ :— .

(*a*) ಬುದ್ಧಿಯಲ್ಲಿ ಕಂಡುಬರುವ ತಪ್ಪುಗಳಿಗೆ ದಂಡನೆಯನ್ನು ವಿಧಿಸಬಾರದು.

(*b*) ಹೇಳಿಕೊಟ್ಟ ವಿಷಯವನ್ನು ಬೇಗತಿಳಿದುಕೊಳ್ಳದಿರುವುದು ಬೇಗನೆ ಮರೆಯುವುದು. ಇವೆಲ್ಲಾ ಬುದ್ಧಿಯ ನ್ಯೂನತೆಗಳು.

ಹುಡುಗನು ಮಾಡಿದತಪ್ಪನ್ನು ನೋಡಿದಾಗ ಆಗ್ರಹವುಂಟಾಗಬಹುದು. ಆ ಕೋಪಕಾಲದಲ್ಲಿ ದಂಡನೆಯನ್ನು ವಿಧಿಸದೆ ಅದು ಶಾಂತವಾದನಂತರ ದಂಡಿಸಬೇಕು. ಇದರಿಂದ ಅತಿಯಾದ ದಂಡನೆಯು ತಪ್ಪುವುದು ಪಾಠಶಾಲೆಯಲ್ಲಿ ಸಿಕ್ಕಿದವರೆಲ್ಲಾ ಮಕ್ಕಳನ್ನು ಹೊಡೆಯುವಂತೆ ಮಾಡಬಾರದು. ಅಂದರೆ ಮಾನಿಟರ್ ಕೈಲಿಹೊಡೆಸು ವುದು, ಜವಾನನಕೈಲಿ ಹೊಡೆಸುವುದು,ಸರಿಯಲ್ಲ. ಕೊನೆಗೆ ಸಹಾಯೋಪಾಧ್ಯಾ ಯರು ಸಹಿತ ದೇಹದಂಡನೆಯನ್ನು ವಿಧಿಸಕೂಡದು. ಮುಖ್ಯೋಪಾಧ್ಯಾಯರೇ ಇದನ್ನು ಇಟ್ಟುಕೊಂಡರೆ ದೇಹದಂಡನೆಯಿಂದಾಗುವ ಅನರ್ಥಗಳು ಬಹುಮಟ್ಟಿಗೆ ತಪ್ಪುವುವು.

(ಸಶೇಷ)

ಗ್ರಂಥವಿಮರ್ಶೆ.

ಕವಿಕಾರ್ಯ ಪ್ರಶಂಸೆ

ನಮ್ಮ ಮಾತೃಭಾಷೆಯಾಗಿರುವ ಕನ್ನಡಭಾಷೆಯನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಧಾರ್ವಾಡದಲ್ಲಿ ಏರ್ಪಟ್ಟಿರುವ ಕರ್ಣಾಟಕ ವಿದ್ಯಾವರ್ಧಕಸಂಘದವರು ಪ್ರತಿವರ್ಷವೂ ತಮ್ಮ ಸಂಘದ ವಾರ್ಷಿಕೋತ್ಸವಕಾಲದಲ್ಲಿ ಅನೇಕ ವಿಧವಾದ ಪರೀಕ್ಷೆಗಳನ್ನು ಏರ್ಪಡಿಸುತ್ತಲೂ ಅವುಗಳಲ್ಲಿ ಉತ್ತೀರ್ಣರಾದವರಿಗೆ ಬಹುಮಾನಗಳನ್ನು ವಿನಿಯೋಗಿಸುತ್ತಲೂ ಭಾಷೆಯ ಉತ್ತರೋತ್ತರಾಭಿವೃದ್ಧಿಗೋಸ್ಕರ ಹೊಸ ಹೊಸ ಮಾರ್ಗಗಳನ್ನು ಯೋಚಿಸುತ್ತಲೂ ಕೇವಲ ಶ್ರದ್ಧಾಳುಗಳಾಗಿ ಕೆಲಸ ಮಾಡುತ್ತಲಿರುವರು. ಮತ್ತು ಕನ್ನಡಭಾಷೆಗೆ ತವರುಮನೆಯಾಗಿರುವ ನಮ್ಮ ಮೈಸೂರು ದೇಶದಿಂದ ಪ್ರತಿವರ್ಷವೂ ಈ ಮಹೋತ್ಸವಕಾಲದಲ್ಲಿ ಕರ್ಣಾಟಕಭಾಷೆಯಲ್ಲಿ ಪರಿಣತಪಾಂಡಿತ್ಯವುಳ್ಳ ಪಂಡಿತರೊಬ್ಬರಿಬ್ಬರನ್ನು ಕರೆಯಿಸಿಕೊಂಡು ಅವರನ್ನು ಕೆಲವು ಭಾಗಗಳಿಗೆ ಪರೀಕ್ಷಕರನ್ನಾಗಿಯೂ ಕೆಲವುಭಾಗಗಳಿಗೆ ಉಪನ್ಯಾಸಕರನ್ನಾಗಿಯೂ ನೇಮಿಸಿಕೊಳ್ಳುವರು. ಇದು ಅನೇಕವರ್ಷಗಳಿಂದ ಬಂದ ವಾಡಿಕೆಯಾಗಿದೆ.

೧೯೧೩ನೇ ಜೂನ್ ೧ನೇ ತಾರೀಖಿನಲ್ಲಿ ನಡೆದ ಈ ವಾರ್ಷಿಕಕೋತ್ಸವಕ್ಕೋಸ್ಕರ ಕರೆಯಿಸಲ್ಪಟ್ಟಿದ್ದ ನಮ್ಮ ವಿದ್ಯಾಭ್ಯಾಸದ ಇಲಾಖೆಯ ಟ್ರಾನ್ಸ್ಲೇಟರಾಗಿರುವ ಮ|| ರಾ|| ಮಾ|| ಅ|| ರಾಮಾನುಜಅಯ್ಯಂಗಾರ್ಯರವರು ಅಲ್ಲಿ ನಡೆಯಿಸಿದ ಉಪನ್ಯಾಸವನ್ನು ಅದೇ ವಿದ್ಯಾವರ್ಧಕ ಸಂಘದವರು ಪ್ರಕಟಿಸುತ್ತಿರುವ ವಾಗ್ಭೂಷಣವೆಂಬ ಮಾಸಪತ್ರಿಕೆಯಲ್ಲಿ ಕವಿಕಾರ್ಯಪ್ರಶಂಸೆಯೆಂಬ ಹೆಸರಿನಿಂದ ಮುದ್ರಿಸಿ ಅದನ್ನೊಂದು ಪುಸ್ತಕವನ್ನಾಗಿಮಾಡಿ ಪ್ರಕಟಿಸಿರುವರು. ಈ ಪುಸ್ತಕವು ಕವಿಕಾರ್ಯಪ್ರಶಂಸೆಯೆಂಬ ತನ್ನಹೆಸರಿಗೆ ತಕ್ಕಂತೆ ಲೋಕದಲ್ಲಿಯ ಕವಿಗಳ ಮಹಿಮಾತಿಶಯವನ್ನು ಅವರಿಂದ ಲೋಕಕ್ಕೆ ಲಭಿಸುತ್ತಿರುವ ಅನ್ಯಾದೃಶವಾದ ಪರಮೋಪಕಾರ

ವನ್ನು ಚೆನ್ನಾಗಿ ವಿವರಿಸಿ ತಿಳಿಸುವುದಲ್ಲದೆ ಲೋಕದಲ್ಲಿ ಕವಿಗಳ ಪರಮೋನ್ನತಪದ ವಿಗೆ ಕಾರಣಗಳನ್ನು ಬಲುಚೆನ್ನಾಗಿ ನಿರೂಪಿಸುವುದು.

ಈ ಉಪನ್ಯಾಸಕರು ಕನ್ನಡ ಸಂಸ್ಕೃತಭಾಷೆಗಳೆರಡರಲ್ಲೂ ಪಂಡಿತರಾಗಿಯೂ ಇಂಗ್ಲೀಷನ್ನು ಚೆನ್ನಾಗಿ ಬಲ್ಲವರಾಗಿಯೂ ಬಹುಕಾಲದಿಂದಲೂ ಕರ್ನಾಟಕ ಕಾವ್ಯಕಲಾನಿಧಿಯೆಂಬ ಪ್ರಾಚೀನಗ್ರಂಥಮಾಲೆಯ ಸಂಪಾದಕರಾಗಿ ಕೆಲಸಮಾಡುತ್ತಿರತಕ್ಕವರಾಗಿಯೂ ಇರುವುದರಿಂದ ಇವರ ಉಪನ್ಯಾಸವು ಪರಿಪರಿಯಾದ, ಸನ್ನಿವೇಶ, ದೃಷ್ಟಾಂತವಾಗ್ವೈಖರಿ ಇತ್ಯಾದಿಗಳಿಂದ ಪರಿಪುಷ್ಟವಾಗಿ ತುಂಬ ಗಂಭೀರವಾಗಿಯೂ ಇರುವುದು.

ಈ ಉಪನ್ಯಾಸದಲ್ಲಿ ಮೊದಲು ಇಂದ್ರಿಯಗಳವಿಷಯವನ್ನು ಪೀಠಿಕೆಯಾಗಿ ತೆಗೆದುಕೊಂಡು ಇಂದ್ರಿಯಗಳಿಗೂ ಜ್ಞಾನಕ್ಕೂ ಇರುವಸಂಬಂಧದ ವಿಷಯದಲ್ಲಿ ನಮ್ಮವರಿಗೂ ಪಾಶ್ಚಾತ್ಯರಿಗೂ ಇರತಕ್ಕ ಅಭಿಪ್ರಾಯಭೇದಗಳನ್ನು ಚರ್ಚಿಸಿರುವರು. ಲೋಕಕ್ಕೆ ಯಾರು ಸಂತೋಷವನ್ನುಂಟುಮಾಡುವರೋ ಅವರೇ ಹಿತೈಷಿಗಳೆಂದು ಹೇಳಿ ಯಾವಯಾವ ಇಂದ್ರಿಯದಮೂಲಕ ಯಾರುಯಾರು ಸಂತೋಷವನ್ನುಂಟುಮಾಡುವರೆಂದು ಹೇಳಿತೊಡಗಿ ರುಚಿಯನ್ನುತಿಳಿಸುವ ಜಿಹ್ವೇಂದ್ರಿಯ, ವಾಸನೆಯನ್ನು ತಿಳಿಸುವ ಘ್ರಾಣೇಂದ್ರಿಯ, ಇವುಗಳು ಪ್ರತ್ಯಕ್ಷವಸ್ತುಗಳಮೂಲಕ ಪ್ರಕೃತಕಾಲಕ್ಕೆ ಮಾತ್ರ ಸಂತೋಷವನ್ನುಂಟುಮಾಡತಕ್ಕವೇ ವಿನಾ ಇತರಗೆ ಸ್ಮೃತಿರೂಪದಲ್ಲಿ ಆನಂದವನ್ನುಕೊಡಲಾರವೆಂದೂ ಆದುದರಿಂದಲೇ ಆ ವಿಷಯವಾದ ಗ್ರಂಥಗಳು ಹೆಚ್ಚಾಗಿ ಹುಟ್ಟಿಲ್ಲವೆಂದೂ ಎಲ್ಲೋ ಕೆಲವುಇದ್ದರೆ ಅವು ಪದಾರ್ಥಗಳನ್ನು ತಯಾರಿಸುವ ವಿಧಾನವನ್ನು ಮಾತ್ರ ತಿಳಿಸಬಲ್ಲವೇ ವಿನಾ ಓದುವುದರಿಂದಲೇ ಆನಂದವನ್ನು ಕೊಡಲಾರವೆಂದು ಹೇಳಿರುವರು. ಮತ್ತು ಇದರಿಂದ ಯಾವುದನ್ನೇ ಆಗಲಿ ಪ್ರತ್ಯಕ್ಷವಾಗಿ ಅನುಭವಿಸುವುದು ಹೆಚ್ಚು ಸಂತೋಷಜನಕವೆಂಬುದನ್ನು ಸ್ಥಾಪಿಸಿರುವರು. ಈ ವಿಧವಾದ ಅನುಭವಕ್ಕೆ ಚಿತ್ರವೂ ಸಂಗೀತವೂ ತುಂಬ ಸಹಾಯಗಳೆಂದೂ ಈ ಕಲೆಗಳಲ್ಲಿದ್ದ ಅಲ್ಪಸ್ವಲ್ಪಕೊರತೆಗಳನ್ನು ಪರಿಹರಿಸುವುದಕ್ಕೆ ಅಂದರೆ ಚಿತ್ರ ಕಲೆಯನ್ನು ಉದ್ಧರಿಸುವುದಕ್ಕೆ ಫೋಟೋಗ್ರಾಫ್ ಎಂಬ ಛಾಯಗ್ರಾಹಿಯಂತ್ರವೂ

ಸಂಗೀತಶಾಸ್ತ್ರದ ಏಳಿಗೆಗೆ ಗ್ರಾಮೋಫೋನ್ ಎಂಬ ಶಬ್ದಗ್ರಾಹಿಯೇ ಮೊದಲಾದ ಸಾಧನೆಗಳೂ ಹೆಚ್ಚಿರುವುದರಿಂದ ಈ ಎರಡು ಕಲೆಗಳಿಂದಲೂ ಲೋಕಕ್ಕೆ ತುಂಬ ಸಹಾಯವೆಂಬುದನ್ನು ಉಪಪಾದಿಸಿ ಕಡೆಗೆ ಇಷ್ಟಾದರೂ ಇವು ವಸ್ತುಗಳವರ್ಣನೆ ಬಹಿರಿಂದ್ರಿಯಗಳಿಗೆ ಅಗೋಚರವಾದ ಭಾವನೆ ಮೊದಲಾದವುಗಳು ಕೆಲವು ರಸಗಳು ಇಂತಹವನ್ನು ಇವು ತಿಳಿಸಲಾರವೆಂದು ಇವುಗಳನ್ನೆಲ್ಲ ಪದಗಳಮೂಲಕ ಅನುಭವ ಮಾಡಿಸಿ ಸಂತೋಷಪಡಿಸಬಲ್ಲವು ಗ್ರಂಥಗಳೇ ಹೊರತು ಈ ಕಾರ್ಯವು ಮತ್ತೆ ಯಾವುದರಿಂದಲೂ ಸಾಧ್ಯವಿಲ್ಲವೆಂದೂ ಸಾಧಿಸುವರು. ಮತ್ತು ಹಿಂದೆ ಹೇಳಿದವುಗಳು ಒಂದೊಂದು ಇಂದ್ರಿಯಕ್ಕೆಮಾತ್ರ ಸುಖವನ್ನು ಕೊಡಬಲ್ಲವೆಂದೂ ಪದಗಳಮೂಲಕ ಶೋಭಿಸುವ ಗ್ರಂಥಗಳಾದರೋ ಎಲ್ಲಾ ಇಂದ್ರಿಯಗಳಿಗೂ ಅನುಭವವಾಗತಕ್ಕ ಸುಖವನ್ನೆಲ್ಲ ವರ್ಣಿಸಿ ಸಂತೋಷಗೊಳಿಸಬಲ್ಲದೆಂದೂ ಹೇಳುವರು. ಇವರು ಎಂತ ಹದುಃಖವನ್ನು ವರ್ಣಿಸಿದರೂ ವಾಚಕರಿಗೆ ಆನಂದವನ್ನು ಕೊಡುವರು. ಇವರು ಈಶ್ವರಸೃಷ್ಟಿಯಲ್ಲಿರತಕ್ಕವುಗಳನ್ನು ವರ್ಣಿಸುವುದು ಮಾತ್ರವಲ್ಲದೆ ಕಲ್ಪನೆಯಿಂದ ಹೊಸಹೊಸ ಅಂಶಗಳನ್ನು ತಮ್ಮ ಕಾವ್ಯ ಪ್ರಪಂಚದಲ್ಲಿ ಸೃಷ್ಟಿಸಿ ತಾವು ಅಭಿನವ ಬ್ರಹ್ಮರಾಗಿರುವರು, ನವನವದಲ್ಲೆ ಹರ್ಷಜನಕವಾದ ಮಾರ್ಗದಲ್ಲಿ ಒಯ್ದು ವಾಚಕರಿಗೆ ಸನ್ಮಾರ್ಗಪ್ರವರ್ತನೆಯನ್ನುಂಟುಮಾಡುವರು. ಇವರು ತಮ್ಮ ಪಾರ್ಥಿವಶರೀರವನ್ನು ಬಿಟ್ಟರೂ ಸರ್ವದಾ ಗ್ರಂಥರೂಪದಲ್ಲಿ ಜೀವಿಸುತ್ತ ಪರೋಪಕಾರ ಮಾಡುತ್ತಿರುವರು ಎಂದು ಸರಿಯಾದ ಕಾರಣಗಳಿಂದ ಉಪನ್ಯಸಿಸಿ ತಮ್ಮ ಮುಖ್ಯಲಕ್ಷ್ಯವನ್ನು ಸಾಧಿಸಿಕೊಂಡಿರುವರು. ಅನೇಕಸಂದರ್ಭಗಳಲ್ಲಿ ಸಂಸ್ಕೃತದ ಮತ್ತು ಕರ್ಣಾಟಕದ ಮಹಾಕವಿಗಳ ಕೆಲವು ಶ್ಲೋಕಗಳನ್ನು ಉದಾಹರಿಸಿರುವರು.

ಈ ಪುಸ್ತಕವು ಡೆಮ್ಮಿ ೪೪ ಪುಟಗಳುಳ್ಳದಾಗಿ ಸುಂದರವಾದ ಕಾಗದದ ಮೇಲೆ ಅಂದವಾಗಿ ಮುದ್ರಿಸಲ್ಪಟ್ಟು ಇರುವುದು. ಇದರ ಕ್ರಯ ೩ ಆಣೆ.

(ಕನ್ನಡ ಭಾಷಾಭಿಮಾನಿಗಳೆಲ್ಲರೂ ಇದರಿಂದ ಪ್ರಯೋಜನ ಪಡೆಯಬಹುದಾಗಿದೆ.)

ವಿದ್ಯಾದಾಯಿನಿ

(A Monthly Journal.)

ಭಾಗ ೨೨] ಸೆಪ್ಟೆಂಬರ್—೧೯೧೪ [ಸಂಚಿಕೆ ೯

ವಿದ್ಯಾಭ್ಯಾಸ.

ಕಳೆದ ವರ್ಷದ ವಿದ್ಯಾಭ್ಯಾಸದ ರಿಪೋರ್ಟಿನಿಂದ ಪಬ್ಲಿಕ್ ಪಾಠಶಾಲೆಗಳು 2,567 ರಿಂದ 2,725 ರವರೆಗೆ ಹೆಚ್ಚಿತೆಂಬದಾಗಿಯೂ ವಿದ್ಯಾರ್ಥಿಗಳ ಸಂಖ್ಯೆಯು 1,23,491 ರಿಂದ 1,31,539 ರವರೆಗೆ ಹೆಚ್ಚಿತೆಂಬದಾಗಿಯೂ ಗೊತ್ತಾಗುತ್ತದೆ. ಪ್ರೈಮರಿ ವಿದ್ಯಾಭ್ಯಾಸದ ಅಭಿವೃದ್ಧಿಗೆ ಗವರ್ನ್ಮೆಂಟಿನವರು ಸ್ಪೆಷಲ್ ಗ್ರಾಂಟು 1 ಲಕ್ಷ ರೂಪಾಯಿ ಕೊಟ್ಟರು. ಬಾಲಿಕೆಯರ ಮತ್ತು ಬಾಲಕರ ಪಾಠಶಾಲೆಗಳು ಹೆಚ್ಚಿಸಲ್ಪಟ್ಟವು. ಈ ಪಾಠಶಾಲೆಗಳು ಹೆಚ್ಚುವುದಕ್ಕೆ ಇದೇ ಮುಖ್ಯ ಕಾರಣ. ಪ್ರೈವೇಟ್ ಸ್ಕೂಲುಗಳ ಸಂಖ್ಯೆಯು ಆಚೆವರ್ಷ 1,911 ಆಗಿತ್ತು ಕಳೆದವರ್ಷ 1,843 ಆಯ್ತು. ವಿದ್ಯಾರ್ಥಿಗಳ ಸಂಖ್ಯೆಯು ಆಚೇವರ್ಷ 25,723 ಆಗಿತ್ತು. ಕಳೆದ ವರ್ಷ 24,901 ಆಯ್ತು. ಪ್ರೈವೇಟ್ ಸ್ಕೂಲುಗಳ ಸಂಖ್ಯೆಯು ಕಡಮೆಯಾಗುವುದಕ್ಕೆ ಅವುಗಳಿಗಿರತಕ್ಕ ಪ್ರೋತ್ಸಾಹವು ಕಡಮೆಯಾಗಿರುವುದೇ ಮುಖ್ಯಕಾರಣ. ಪಬ್ಲಿಕ್ ಮತ್ತು ಪ್ರೈವೇಟು ಸ್ಕೂಲುಗಳನ್ನು ಸೇರಿಸಿದರೆ ಒಟ್ಟು ಸ್ಕೂಲುಗಳ ಸಂಖೆಯು 4,568 ಆಗಿತ್ತೆಂಬದಾಗಿಯೂ, ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಸಂಖ್ಯೆಯು 1,56,440 ಆಗಿತ್ತೆಂಬದಾಗಿಯೂ ಗೊತ್ತಾಗುತ್ತದೆ. ಇದರ ಪೈಕಿ 1,29,009 ವಿದ್ಯಾರ್ಥಿಗಳು 27,431 ವಿದ್ಯಾರ್ಥಿನಿಯರು. ಕಳೆದವರ್ಷ ಪ್ಲೇಗುರೋಗದ ಅವಾಂತರವು ವಿಶೇಷವಾಗಿರಲಿಲ್ಲ. ಆಚೆವರ್ಷ ಪ್ಲೇಗುರೋಗದ ಹಾವಳಿಯಿಂದ 401 ಸ್ಕೂಲು

ಗಳು ಮುಚ್ಚಲ್ಪಟ್ಟಿದ್ದುವು. ಹೋದವರ್ಷ 110 ಸ್ಕೂಲುಗಳು ಮಾತ್ರ ಮುಚ್ಚಲ್ಪಟ್ಟಿದ್ದುವು. ಪಾಠಶಾಲೆಗಳಿಗೆ ಹೋಗುವ ವಯಸ್ಸುಳ್ಳ ವಿದ್ಯಾರ್ಥಿಗಳಲ್ಲಿ ಆಚೇವರ್ಷ ಶೇಕಡ 30.1 ಜನಗಳು ಪಾಠಶಾಲೆಗೆ ಹೋಗುತ್ತಿದ್ದರು. ಕಳೆದವರ್ಷ ಇವರ ಸಂಖ್ಯೆಯು 31.1 ವರೆಗೂ ಹೆಚ್ಚಿತು. ಪಾಠಶಾಲೆಗೆ ಹೋಗತಕ್ಕ ವಯಸ್ಸುಳ್ಳ ಬಾಲೆಯರಲ್ಲಿ ಆಚೇವರ್ಷ 6.2 ಜನಗಳು ಹೋಗುತ್ತಿದ್ದರು. ಕಳೆದವರ್ಷ ಈ ಬಾಲೆಯರ ಸಂಖ್ಯೆಯು 6.8 ಆಯ್ತು. ಸ್ತ್ರೀಪುರುಷರಿಬ್ಬರೂ ಇಹಪರಸಾಧನಗಳಾಗಬೇಕಾದರೆ ಅವರವರ ಪದವಿಗೆ ಉಚಿತವಾದ ಕೆಲಸಗಳನ್ನು ಮಾಡಬೇಕಾಗಿರುತ್ತವೆ. ಆ ಕೆಲಸಗಳನ್ನು ಚೆನ್ನಾಗಿ ಮಾಡಬೇಕಾಗಿದ್ದರೆ ಅವುಗಳ ಪೂರ್ವಾಪರಗಳನ್ನು ಚೆನ್ನಾಗಿ ತಿಳಿಯಬೇಕು. ಅಶಿಕ್ಷಿತರಾದವರು ಯಾವ ಕೆಲಸವನ್ನೂ ಸರಿಯಾಗಿ ಮಾಡುವುದು ಅಸಾಧ್ಯ. ಸುಶಿಕ್ಷಿತರಾಗಬೇಕಾದರೆ ಓದು ಬರಹಗಳನ್ನು ಕಲಿತುಕೊಂಡು ಕೂಡಿದಮಟ್ಟಿಗೂ ಲೋಕವ್ಯವಹಾರಜ್ಞಾನವನ್ನು ಪಡೆದು ಕ್ಲೇಶವಿಲ್ಲದೆ ಅನ್ನವಸ್ತ್ರಗಳಿಗೆ ಬೇಕಾದುದನ್ನು ಸಂಪಾದಿಸಿಕೊಳ್ಳುವುದಕ್ಕೆ ತಕ್ಕ ಅರ್ಹತೆಯನ್ನು ಪಡೆಯಬೇಕು. ಈ ಭಾಗದಲ್ಲಿ ಲೋಪಬಂದರೆ ಸ್ತ್ರೀಪುರುಷರು ತಮ್ಮ ತಮ್ಮ ಕೆಲಸಗಳಿಗೆ ಸಂಪೂರ್ಣವಾದ ಅರ್ಹತೆಯುಳ್ಳವರಾಗುವದಿಲ್ಲ. ಅಂಥಾ ಅರ್ಹತೆಯಿಲ್ಲದವರಿಗೆ ಅನ್ನವಸ್ತ್ರಗಳಿಗೆ ಅವಕಾಶವಿಲ್ಲದೆ ಪರಾಧೀನತೆವುಂಟಾಗಿ ಬಹಳ ಕ್ಲೇಶಗಳು ಬರುವುವು. ಜೀವನವೇ ನರಕಪ್ರಾಯವಾಗುವುದು. ಎಲ್ಲಾ ಸ್ತ್ರೀಪುರುಷರು ಜ್ಞಾನಕ್ಕೆ ಸಾಧಕವಾದ ವಿದ್ಯಾಭ್ಯಾಸವನ್ನು ಮಾಡಿ ಅದರ ಜೊತೆಗೆ ಯಾವದಾದರೊಂದು ಕಸಬಿನಲ್ಲಿ ಪ್ರವೇಶವನ್ನು ಹೊಂದಬೇಕು. ಈ ವಿಷಯದಲ್ಲಿ ಉದಾಸೀನಮಾಡಿದರೆ ಅಂಥಾವರಿಗೆ ಈ ಭೂಮಿಯು ನರಕವಾಗಿ ಪರಿಣಮಿಸುವುದು. ಹೀಗಾಗದೆ ಇರಲೆಂಬದಾಗಿಯೂ ಎಲ್ಲಾ ಸ್ತ್ರೀಪುರುಷರು ಸುಶಿಕ್ಷಿತರಾಗಿ ಆತ್ಮಾವಲಂಬನದಿಂದ ಬದುಕುವಂತೆ ಆಗಲೆಂಬದಾಗಿಯೂ ನಮ್ಮ ಶ್ರೀಮನ್ ಮಹಾರಾಜರವರು ವಿದ್ಯಾಭ್ಯಾಸವನ್ನು ಕೈಗಾರಿಕೆಗಳ ಅಭ್ಯಾಸವನ್ನು ಎಲ್ಲರಿಗೂ ಮಾಡಿಸಬೇಕೆಂಬ ಉದ್ದೇಶವನ್ನು ಮಾಡಿದಾರೆ. ಈಗ ಸದ್ಯಕ್ಕೆ ಮೈಸೂರು ಬೆಂಗಳೂರು ಮುಂತಾದ 16 ಪಟ್ಟಣಗಳಲ್ಲಿ ಬಲಾತ್ಕಾರವಾದ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು ಸಂಕಲ್ಪ ಮಾಡಿದಾರೆ.

ಶೀಘ್ರದಲ್ಲಿಯೇ ಈ ಏರ್ಪಾಡು ಜಾರಿಗೆ ಬರುವುದು. ಈ 16 ಪಟ್ಟಣಗಳಲ್ಲಲ್ಲದೆ ಇತರ ಪುರನಿವಾಸಿಗಳು ತಂತಮ್ಮ ಪಟ್ಟಣಗಳಲ್ಲಿ ವಿದ್ಯಾಭ್ಯಾಸವನ್ನು ಬಲಾತ್ಕಾರವಾಗಿ ಮಾಡಿಸಬೇಕೆಂದು ಪ್ರಾರ್ಥಿಸಿದರೆ ಅವರ ಪ್ರಾರ್ಥನೆಯನ್ನು ನೆರವೇರಿಸುವ ಯೋಚನೆಯನ್ನೂ ಮಾಡುವರು. ಈ ಭಾಗದಲ್ಲಿ ಮಕ್ಕಳ ಯೋಗಕ್ಷೇಮಚಿಂತನೆಯನ್ನು ಸರ್ಕಾರದವರು ಮಾಡುವುದಕ್ಕಿಂತಲೂ ಹೆಚ್ಚಾಗಿ ತಂದೆತಾಯಿಗಳು ಮಾಡಬೇಕು. ಪ್ರೈಮರಿವಿದ್ಯಾಭ್ಯಾಸದ ಜೊತೆಗೆ ಜೀವನಕ್ಕೆ ಸಾಧಕವಾದ ವೃತ್ತಿಗಳಲ್ಲಿ ಯಾವದಾದರೊಂದನ್ನು ಕಲಿಯುವುದಕ್ಕೂ ತಕ್ಕ ಏರ್ಪಾಡಾಗುವುದು ಆವಶ್ಯಕವಷ್ಟೆ. ಈ ವಿಷಯವನ್ನು ಸರ್ಕಾರದವರು ಮರೆತಿರುವುದಿಲ್ಲ. ಮೈಸೂರಿನಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಒಂದು ಏರ್ಪಾಡಾಗಿರುವದು.

ಇದರಲ್ಲಿ ಇಂಜನೀಯರಿಂಗ್ ವಿದ್ಯಾಭ್ಯಾಸಕ್ಕೂ ಇತರ ಕೈಗಾರಿಕೆ ಕೆಲಸಗಳಿಗೂ ಏರ್ಪಾಡಿರುವುದು. ಯಾವಯಾವ ಸಾಮಾನುಗಳಿಗೆ ಒಳ್ಳೆ ಗಿರಾಕಿಗಳಿರುವುವೋ ಅಂಥಾ ಸಾಮಾನುಗಳ ತಯಾರಿಯನ್ನು ಬೋಧಿಸುವುದಕ್ಕೆ ಸಮರ್ಥರಾದ ಪಾಠಕರನ್ನು ಕರೆಸಿ ಸದರಿ ವಿದ್ಯೆಗಳನ್ನು ಕಲಿಸಬೇಕೆಂಬ ಸಂಕಲ್ಪವನ್ನು ನಮ್ಮ ಸರ್ಕಾರದವರು ಮಾಡಿರುವರು. ಈಗ ಸದ್ಯಕ್ಕೆ ಮರಗೆಲಸ, ಬೆತ್ತದಕೆಲಸ, ಕುಲಿಮೆಯಕೆಲಸ, ಡ್ರಾಯಿಂಗು, ಟೈಪಿಂಗು, ಮೊದಲಾದುವುಗಳಲ್ಲಿ ಶಿಕ್ಷೆಗೆ ಏರ್ಪಾಡು ಮಾಡಲ್ಪಟ್ಟಿದೆ. ಯಂತ್ರಗಳ ಸಹಾಯದಿಂದ ಬಡಗಿ ಮತ್ತು ಕಬ್ಬಿಣದ ಕೆಲಸಗಳೂ ಕೂಡ ಮಾಡಲ್ಪಡುತ್ತಲಿವೆ. ಈ ಕೆಲಸಗಳಲ್ಲಿ ತಯಾರಾದವರಿಗೆ ಪರೀಕ್ಷೆಗಳನ್ನು ಮಾಡಿ ಯೋಗ್ಯತಾಪತ್ರಗಳನ್ನು ಕೊಡುವ ಏರ್ಪಾಡೂ ಕೂಡ ಮಾಡಲ್ಪಟ್ಟಿದೆ. ಸಬ್‌ಓವರ್ಸಿ ಮತ್ತು ಶೇಕದಾರಿ ಕ್ಲಾಸುಗಳೂ ಕೂಡ ಇಲ್ಲಿ ಏರ್ಪಡಿಸಲ್ಪಟ್ಟಿವೆ. ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜನೀಯರಿಂಗ್ ಸ್ಕೂಲು ಏರ್ಪಡಿಸಲ್ಪಟ್ಟಿರುವುದು. ಇಲ್ಲಿನ ವರ್ಕ್‌ಷಾಪುಗಳಲ್ಲಿ ಶಿಕ್ಷೆಯನ್ನು ಹೊಂದತಕ್ಕವರು ಯಂತ್ರಗಳನ್ನು ಉಪಯೋಗಿಸುವುದರಲ್ಲಿ ಶಕ್ತರಾಗುತ್ತಾರೆ. ರೈಲುಗಳಲ್ಲಿಯೂ ಇತರ ಕಾರ್ಖಾನೆಗಳಲ್ಲಿಯೂ ಉದ್ಯೋಗವನ್ನು ಹೊಂದುವುದಕ್ಕೆ ತಕ್ಕ ಯೋಗ್ಯತೆಯನ್ನು ಪಡೆಯುತ್ತಾರೆ. ಇದಲ್ಲದೆ ಚನ್ನಪಟ್ಟಣದಲ್ಲಿ ತಂಬೂರಿ ಮತ್ತು ವೀಣೆ ತಂತಿಗಳನ್ನು ಆಟದ

ಸಾಮಾನುಗಳನ್ನೂ ಮಾಡುವ ಸ್ಕೂಲೊಂದಿರುವುದು. ಹೊಳೇನರಸೀಪುರದಲ್ಲಿ ಬಡಗಿ ಮತ್ತು ನೇಯಿಗೆ ಸ್ಕೂಲುಗಳಿರುವುವು. ಚಿಕ್ಕನಾಯಕನಹಳ್ಳಿಯಲ್ಲಿ ನೇಯಿಗೆಯ ಸ್ಕೂಲು ಒಂದಿರುವುದು. ಮೊಳಕಾಲ್ಮೂರಿನಲ್ಲಿಯೂ ದೊಡ್ಡಬಳ್ಳಾಪುರದಲ್ಲಿಯೂ ನೇಯಿಗೆಯ ಸ್ಕೂಲುಗಳಿರುವುವು. ತುಂಕೂರಿನಲ್ಲಿ ವೆಸ್ಲಿಯನ್ ಮಿಷನರಿಗಳೂ ಕೋಲಾರದಲ್ಲಿ ಇತರ ಮಿಷನರಿಗಳೂ ಡ್ರಾಯಿಂಗನ್ನೂ ಕಬ್ಬಿಣದ ಕೆಲಸವನ್ನೂ ಚಿತ್ರದ ಕೆಲಸವನ್ನೂ ಹಗ್ಗಮಾಡುವ ಕೆಲಸವನ್ನೂ ಯಂತ್ರಗಳ ಸಹಾಯದಿಂದ ಮರಕುಯ್ಯುವ ಕೆಲಸವನ್ನೂ ಕೊರೆಯುವ ಕೆಲಸವನ್ನೂ ಕಲಿಸುತ್ತಾರೆ. ಕೋಲಾರದಲ್ಲಿ ಕಟ್ಟಡದ ಕೆಲಸ ಕಲ್ಲುಕೆಲಸ ಕಬ್ಬಿಣದಕೆಲಸ ಬಡಗಿಕೆಲಸ ಪಡಾವುಗಳಕೆಲಸ ಕಬ್ಬಿಣವನ್ನು ಎರಕಹೊಯ್ಯುವ ಕೆಲಸ ಇವೇ ಮೊದಲಾದ ಕೆಲಸಗಳನ್ನು ಕಲಿಸುತ್ತಾರೆ. ಮೇಲುಕೋಟೆಯಲ್ಲಿ ಬಡಗಿಕೆಲಸ ನೇಯಿಗೆಕೆಲಸ ಪ್ರಿಂಟಿಂಗುಕೆಲಸ ಬುಕ್ಕು ಬೈಂಡುಮಾಡುವದು ಡ್ರಾಯಿಂಗು ಚಿತ್ರದಕೆಲಸ ಹೊಲಿಗೆ ಕಸೂತಿಕೆಲಸ ಇವೇ ಮೊದಲಾದುವುಗಳು ಕಲಿಸಲ್ಪಡುವುವು. ಹಾಸನದ ಕೋಆಪರೇಟಿವ್ ಸೊಸೈಟಿಯಲ್ಲಿ ಒಂದು ಕೈಗಾರಿಕೆ ಸ್ಕೂಲನ್ನಿಟ್ಟು ಬಡಗಿ ಕೆಲಸವೇ ಮೊದಲಾದ ಕೆಲವು ಕೆಲಸಗಳನ್ನು ಕಲಿಸುತ್ತಿರುವರು. ಹಾಸನದಲ್ಲಿ ವೆಸ್ಲಿಯನ್ ಮಿಷನರಿಗಳು ಒಂದು ಕೈಗಾರಿಕೆ ಸ್ಕೂಲನ್ನಿಟ್ಟಿರುವರು. ತಿಪಟೂರಿನಲ್ಲಿ ಪಂಚಮರ ಕೈಗಾರಿಕೆ ಸ್ಕೂಲೊಂದಿರುವದು. ಶ್ರೀನಿವಾಸಪುರದಲ್ಲಿ ಹಿಂದೂಗಳೂ ಮತ್ತು ಮಹಮ್ಮದೀಯರೂ ಒಂದು ಬಡಗಿ ಸ್ಕೂಲನ್ನಿಟ್ಟುಕೊಂಡಿರುವರು. ಬಾಗೆಪಲ್ಲಿಯಲ್ಲಿ ಮರ ಹಿತ್ತಾಳೆ ತಾಮ್ರ ತವರ ಕಬ್ಬಿಣ ಮೊದಲಾದುವುಗಳ ಕೆಲಸಗಳು ನಡೆಯುವವು. ಗೌರಿಬಿದನೂರಿನಲ್ಲಿ ಬಡಗಿಕೆಲಸ ವಿಗ್ರಹಗಳನ್ನೂ ಕಲ್ಲುಪಾತ್ರೆಗಳನ್ನೂ ಮಾಡತಕ್ಕ ಕೆಲಸ ಇವು ನಡೆಯುವವು. ಬೆಂಗಳೂರಿನಲ್ಲಿ ‘ಮಹದೇವನ ಕೈಗಾರಿಕೆ ಪಾಠಶಾಲೆ’ ಎಂದು ಒಂದು ಪಾಠಶಾಲೆಯಿರುವುದು. ಇದರಲ್ಲಿ ಮರಗೆಲಸ ಚಿತ್ರದಕೆಲಸ ಡ್ರಾಯಿಂಗು ಇವು ಕಲಿಸಲ್ಪಡುವುವು. ಚಿತ್ರದುರ್ಗದಲ್ಲಿ ಚಿತ್ರದ ಕೆಲಸ ನೇಯಿಗೆಕೆಲಸ ಚಾಪೆ ಹೆಣೆಯುವಕೆಲಸ ಇವುಗಳನ್ನು ಕಲಿಸುವುದಕ್ಕೆ ಒಂದು ಕೈಗಾರಿಕೆಪಾಠಶಾಲೆಯು ಇರುವುದು. ಮೈಸೂರು ಕೃಷ್ಣಮೂರ್ತಿಪುರದಲ್ಲಿ

ಪಂಚಮರ ಇಂಡಸ್ಟ್ರಿಯಲ್ ಸ್ಕೂಲು ಒಂದಿರುವುದು. ಮ|| ಬಿ. ಎಸ್. ಕೃಷ್ಣ ಯ್ಯಂಗಾರ್ರವರು, ನೇಯಿಗೆ ಕೆಲಸಗಳಲ್ಲಿ ಕೆಲವುಜನ ಪಂಚಮ ವಿದ್ಯಾರ್ಥಿಗಳಿಗೆ ಶಿಕ್ಷೆ ಯನ್ನು ಕಲ್ಪಿಸಿರುವರು. ರೇಷ್ಮೆ ಕೆಲಸಗಳಿಗೋಸ್ಕರ 6 ಜನ ಪಾಠಕರನ್ನು ತಯಾರು ಮಾಡಿರುವರು. ವಿದ್ಯಾರ್ಥಿಗಳಿಗೆ ಚನ್ನಪಟ್ಟಣ ಕ್ಲೋಸ್‌ಪೇಟೆ ಚಿಕ್ಕಮುಡುವಾಡಿ ಕೋಲಾರ ಶಿಡ್ಲಘಟ್ಟ ಮಳವಳ್ಳಿ ಕುಣಿಗಲ್ ಮೈಸೂರು ಮೊದಲಾದ ಸ್ಥಳಗಳಲ್ಲಿ ರೇಷ್ಮೆ ವಿಚಾರವನ್ನು ತಿಳಿಸುತ್ತಲಿರುವರು. ಬೆಂಗಳೂರು ತಾತಾ ಸಿಲ್ಕ್ ಫಾರಮಿನಲ್ಲಿ ಹಿಪ್ಪಲನೇರಳೆಸಾಗುವಳಿ ರೇಷ್ಮೆಹುಳಗಳನ್ನು ಸಾಕುವದು ರೇಷ್ಮೆಯನ್ನು ನೂಲು ವುದು ರೇಷ್ಮೆಬಟ್ಟೆಮಾಡುವುದು ಇವೇ ಮೊದಲಾದುವುಗಳಲ್ಲಿ ಶಿಕ್ಷೆಗೆ ಏರ್ಪಾಡು ಮಾಡಿದೆ. ಹೆಬ್ಬಾಳು ಫಾರಮಿನಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿಯೂ ವ್ಯವಸಾಯ ಶಾಸ್ತ್ರದಲ್ಲಿ ಶಿಕ್ಷೆಯನ್ನು ಕಲ್ಪಿಸುವುದಕ್ಕೆ ಏರ್ಪಾಡಾಗಿದೆ. ವ್ಯಾಪಾರದ ಸ್ಕೂಲುಗಳು ಮೈಸೂರಿನಲ್ಲೊಂದು ಬೆಂಗಳೂರಿನಲ್ಲೊಂದು ಏರ್ಪಡಿಸಲ್ಪಟ್ಟಿದೆ. ಕುರುಡರ ಮತ್ತು ಮೂಗರ ವಿದ್ಯಾಭ್ಯಾಸಕ್ಕೋಸ್ಕರ ಮೈಸೂರಿನಲ್ಲಿ ಒಂದು ಸ್ಕೂಲು ಏರ್ಪಾಡಾಗಿದೆ. ಇಲ್ಲಿ ವ್ಯಾಸಂಗಮಾಡತಕ್ಕ ಕುರುಡರು ಮತ್ತು ಮೂಗರು ಬಟ್ಟೆಗಳನ್ನು ನೇಯುವುದರಲ್ಲಿಯೂ ಬುದ್ಧಿಶಾಲಿಗಳಾಗಿದ್ದಾರೆ. ಕುರುಡರು ಸಂಗೀತ ದಲ್ಲಿಯೂ ಮೂಗರು ಮೃದಂಗವೇ ಮೊದಲಾದವುಗಳಲ್ಲಿಯೂ ಸಮರ್ಥರಾಗಿದ್ದಾರೆ. ಚಿತ್ರದುರ್ಗದಲ್ಲಿ ಕಿಂಡ್ರಗಾರ್ಟನ್ ಸ್ಕೂಲುಗಳನ್ನು ಏರ್ಪಡಿಸಿದೆ. ಕಿಂಡರ್‌ಗಾರ್ಟನ್ ಸ್ಕೂಲೆಂದರೆ ಚಿಕ್ಕಮಕ್ಕಳಿಗೆ ಆಟದ ಮೂಲಕ ವಿದ್ಯಾಭ್ಯಾಸಮಾಡಿಸುವುದೆಂದರ್ಥ. ಇದಲ್ಲದೆ ದೇಶಾಂತರಕ್ಕೆ ಹೋಗಿ ಕೈಗಾರಿಕೆ ಮೊದಲಾದ್ದನ್ನು ಕಲಿತುಕೊಂಡು ಬರುವುದಕ್ಕೆ ದಾಮೋದರದಾಸರ ಮೊದಲಾದ ವೇತನಗಳನ್ನೂ ಸರ್ಕಾರದ ವೇತನ ಗಳನ್ನೂ ಕಲ್ಪಿಸಿದ್ದಾರೆ. ಅನೇಕರು ದೇಶಾಂತರಗಳಿಗೆ ಹೋಗಿ ಲಾಭಕರವಾದ ಕಸಬುಗಳಲ್ಲಿ ಪ್ರವೀಣರಾಗಿ ಬಂದು ತಾವು ಕಲಿತ ವಿದ್ಯೆಗಳನ್ನು ಪ್ರಚಾರಮಾಡು ವಂತೆ ಮಾಡುತ್ತಲಿದ್ದಾರೆ.—ನಮ್ಮದೇಶದ ಜನಗಳೆಲ್ಲರೂ ವಿದ್ಯಾವಂತರಾಗಿಯೂ ಜ್ಞಾನಶಾಲಿಗಳಾಗಿಯೂ ಕಸಬುದಾರರಾಗಿಯೂ ಸ್ವಶಕ್ತಿಯಿಂದ ಬದುಕತಕ್ಕವರಾ ಗಿಯೂ ಆಗಬೇಕೆಂದು ನಮ್ಮ ಶ್ರೀಮನ್ ಮಹಾರಾಜರವರು ಮತ್ತು ಅವರ ಗವ

ರ್ನಮೆಂಟಿನವರು ಈ ಶ್ಲಾಘ್ಯವಾದ ಏರ್ಪಾಡುಗಳನ್ನು ಮಾಡಿರುವುದಲ್ಲದೆ ಈ ಭಾಗದಲ್ಲಿ ಇನ್ನೂ ವಿಶೇಷ ಕೆಲಸಗಳನ್ನು ಮಾಡುವುದರಲ್ಲಿದಾರೆ. ಇಂಥ ಕೆಲಸಗಳನ್ನು ಮಾಡುವುದಕ್ಕೆ ಸರಕಾರಕ್ಕೆ ಕುತೂಹಲವೆಷ್ಟಿದ್ದಾಗ್ಯೂ ಸರಕಾರದ ಆಯತಿಯು ಸಾಕಾಗುವುದಿಲ್ಲ. ಪುಣ್ಯವಂತರಾದವರು ಈ ಭಾಗದಲ್ಲಿ ಸಹಾಯಮಾಡುವುದು ಆವಶ್ಯಕ. ಎಲ್ಲಾ ದೇಶಗಳಲ್ಲಿಯೂ ಆತ್ಮಾವಲಂಬನೆಗೆ ಸಾಧಕಗಳಾದ ವಿದ್ಯೆಯನ್ನು ಕಲಿಸುವುದಕ್ಕೆ ಮಾಡಲ್ಪಡತಕ್ಕ ದಾನಧರ್ಮಗಳು ಅತ್ಯಂತ ಶ್ರೇಯಸ್ಕರವಾದುವೆಂದು ತಿಳಿದುಕೊಂಡು ಬಹುಜನ ಧರ್ಮಿಷ್ಠರು ಸ್ಕೂಲುಗಳನ್ನು ಕಟ್ಟಿಸುವುದಕ್ಕೂ ಕಾಲೇಜುಗಳನ್ನು ಕಟ್ಟಿಸುವುದಕ್ಕೂ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಗಳನ್ನು ಹಾಕುವುದಕ್ಕೂ ಪುಸ್ತಕಗಳನ್ನು ತೆಗೆದುಕೊಡುವುದಕ್ಕೂ ಅಪ್ಲಿಕೇಷನ್ ಫೀಗಳನ್ನು ಕೊಡುವುದಕ್ಕೂ ಸಹಾಯವನ್ನುಮಾಡುವ ಪದ್ಧತಿಯನ್ನಿಟ್ಟುಕೊಂಡಿದಾರೆ. ಈ ರೀತಿಯಲ್ಲಿ ಸಹಾಯಮಾಡುವುದು ತುಂಬಾಶ್ರೇಯಸ್ಕರವಾದುದು. ಎಲ್ಲಾ ಪಟ್ಟಣಗಳಲ್ಲಿಯೂ ವಿದ್ಯಾರ್ಥಿಗಳಿಗೆ ಸಹಾಯಮಾಡುವ ಒಂದುಫಂಡನ್ನು ಏರ್ಪಡಿಸಿ ಎಲ್ಲರೂ ತಮ್ಮ ಆಯತಿಯಲ್ಲಿ ರೂಪಾಯಿಗೆ ಒಂದುಕಾಸಿಗೆ ಕಡಮೆ ಇಲ್ಲದೆ ಸಹಾಯದ್ರವ್ಯವನ್ನು ಕೊಡುತ್ತಾಬಂದರೆ ಅದರಿಂದ ವಿದ್ಯಾರ್ಥಿಗಳು ವಿದ್ಯಾವಿನಯಸಂಪತ್ತುಗಳನ್ನು ಹೊಂದಿ ಸ್ವಶಕ್ತಿಯಿಂದ ಜೀವಿಸುವುದಕ್ಕೂ ದೇಶದ ಸಂಪದಭ್ಯುದಯ ದೇಶದ ಸಂಪತ್ತು ಒಳ್ಳೇಸ್ಥಿತಿಗೆ ಬರುವಂತೆ ಮಾಡುವುದಕ್ಕೂ ಸಮರ್ಥರಾಗುತ್ತಾರೆ. ಎಲ್ಲಾ ಪಟ್ಟಣಗಳಲ್ಲಿಯೂ ಧರ್ಮಿಷ್ಠರಾದವರು ಇಂಥಾ ವಿದ್ಯಾಭ್ಯಾಸದ ಫಂಡನ್ನು ಏರ್ಪಡಿಸಿ ಬಡವಿದ್ಯಾರ್ಥಿಗಳನ್ನು ರಕ್ಷಿಸುವ ಏರ್ಪಾಡುಮಾಡುವರೆಂದು ನಾವು ನಂಬಿದೇವೆ.

M. V.

ಮೈಸೂರು ಗೌರ್ನಮೆಂಟ್ ಎ ವಿ. ಸ್ಕೂಲ್ ಕಿಂಡರ್‌ಗಾರ್ಟೆನ್ ಸೆಕ್ಷನ್‌ನಲ್ಲಿ

1914ನೇ ಫೆಬ್ರುವರಿಯಿಂದ ನಡೆದ ಮಾವಿನಗಿಡದ ವಿಮರ್ಶೆ.

I. ಉದ್ದೇಶ:—ಈ ಕಾಲದಲ್ಲಿ ಅನೇಕ ಜಾತಿಯ ಮರಗಳ ಎಲೆಗಳು ಹಣ್ಣಾಗಿ ಉದುರಿಹೋಗುತಿರುವುವು. ಕೆಲವು ಮರಗಳಲ್ಲಿ ಎಲೆಗಳು ಉದುರಿ ಚಿಗರುವುದಕ್ಕೆ ಪ್ರಾರಂಭಿಸಿರುವುವು. ಮತ್ತೆಕೆಲವು (ಹುಣಸೆಮುಂತಾದುವು) ತಮ್ಮ ಫಲವನ್ನು ಕೊಟ್ಟು ಬರಿದಾಗಿ ನಿಂತಿರುವುವು. ಪ್ರಕೃತಿಯು ಅಷ್ಟು ಸೌಂದರ್ಯವಾಗಿ ಕಾಣುವುದಿಲ್ಲ. ಹೀಗಿದ್ದರೂ ಮಾವಿನಗಿಡಗಳು ಮಾತ್ರ ಚಿಗುರಿ ಹೂಬಿಟ್ಟಿರುವುವು. ಗಿಡಗಳು ಎಲೆಹೂಗಳಿಂದ ಭರಿತವಾಗಿ ನೋಡುವುದಕ್ಕೆ ಬಹಳ ಮನೋಹರವಾಗಿರುವುವು. ಜನರು ಮಾವಿನಹೀಚು ಮೊದಲುಗೊಂಡು ಹಣ್ಣಿನವರೆಗೂ ನಾನಾ ಅವಸ್ಥೆಗಳಲ್ಲಿ ಅವುಗಳನ್ನು ಉಪಯೋಗಿಸುತ್ತಿರುವುದರಿಂದ ಮಕ್ಕಳಿಗೆ ತಮ್ಮ ಮನೆಗಳಲ್ಲೂ ಅವುಗಳ ಪರಿಚಯವು ಆಗಾಗ ಉಂಟಾಗುತ್ತಿರುವುದು. ಈ ಕಾರಣಗಳಿಂದ ಈ ಕಾಲದಲ್ಲಿ ಮಾವಿನಗಿಡದ ವಿಮರ್ಶೆಯನ್ನು ನಡೆಸುವುದು ಅನುಕೂಲವಾಗಿರುವುದು.

II. ಉಪಾಧ್ಯಾಯರ ಸಿದ್ಧತೆ:—ಉಪಾಧ್ಯಾಯರು ಈ ಗಿಡಗಳನ್ನು ವಿಮರ್ಶಿಸುವುದರಿಂದಲೂ ಗ್ರಂಥಗಳನ್ನು ನೋಡುವುದರಿಂದಲೂ ವಿಷಯಗಳನ್ನು ಮೊದಲು ಚೆನ್ನಾಗಿ ಅನುಭವಮಾಡಿಕೊಂಡಿರಬೇಕು.

III. ಕೆಲಸದ ಕ್ರಮ:—ಈ ಮರಗಳು ಬಹುಕಾಲ ಜೀವಿಸುತ್ತವೆಯಾದುದರಿಂದ ಇವು ಚಿಗುರುವುದಕ್ಕೆ ಪ್ರಾರಂಭಿಸಿದ ಮೊದಲು ಹಣ್ಣು ಪಕ್ವವಾಗುವವರೆಗೆ ವಿಮರ್ಶೆಯನ್ನು ನಡೆಯಿಸಿದರೆ ಸಾಕಾಗಿರುತ್ತೆ.

IV. ವರ್ಣನೆ:—i. ಮರ:-ಬೀಜದಮರವು ಬಹಳ ಎತ್ತರವಾಗಿ ಬೆಳೆಯುವುದು. ಕಸಿಯಗಿಡವು ಅಷ್ಟು ಎತ್ತರವಾಗಿ ಬೆಳೆಯುವುದಿಲ್ಲ. ಬುಡದಿಂದ

ನಾನಾಕಡೆಗೂ ಕೊಂಬೆಗಳು ಹೊರಟಿರುವುವು. (ಎರಡುಜಾತಿಯ ಮರಗಳನ್ನೂ ಮಕ್ಕಳಿಗೆ ತೋರಿಸಿ ಭೇದಗಳನ್ನು ತಿಳಿಸಬೇಕು.)

ii. ಬುಡ ಮತ್ತು ಕಾಂಡ:—ಬುಡದಮೇಲೆ ತೊಗಟೆಯು ಬಲು ಒರಟಾಗಿರುವುದು. ಇದನ್ನು ಕಚ್ಚುಮಾಡಿದರೆ ಅಂಟುಳ್ಳರಸವು ಈಚೆಗೆ ಬರುವುದು. ಕಾಂಡವು ನಾರಾಗಿಲ್ಲ. ಸುಲಭವಾಗಿ ಮುರಿದು ಹೋಗುವುದು. (ಕಾಂಡದಮೇಲ್ಗಡೆ ತೊಗಟೆಯೂ ಒಳಗಡೆ ದಾರು(ಮರ)ವೂ ಮಧ್ಯದಲ್ಲಿ ಮಜ್ಜೆಯೂ ಇರುವುದು.) ಇವುಗಳನ್ನು ಮಕ್ಕಳಿಗೆ ತೋರಿಸಿ ಅನುಭವವನ್ನುಂಟುಮಾಡಬೇಕು.

iii. ಮೊಗ್ಗೆ:—ಸಾಮಾನ್ಯವಾಗಿ ಹೂವಾಗತಕ್ಕ ಮೊಗ್ಗೆಗಳೂ ಕಾಂಡವಾಗತಕ್ಕ ಮೊಗ್ಗೆಗಳು ಏಕಕಾಲದಲ್ಲಿ ಬೆಳೆಯುವುದಕ್ಕೆ ಪ್ರಾರಂಭಸುವುವು. ಕಾಂಡವಾಗತಕ್ಕ ಮೊಗ್ಗೆಯೇ ಮೊದಲು ಹೊರಡುವುದೂ ಉಂಟು. ಸಣ್ಣಕೊಂಬೆಗಳ ತುದಿಗಳಲ್ಲಿ ಹೊಸದಾಗಿ ಮೊಗ್ಗೆಗಳು ಬಿಟ್ಟು ಚಿಗುರುವುದಕ್ಕೆ ಪ್ರಾರಂಭಿಸುವುವು.

iv. ಎಲೆ:—ಎಲೆಗಳು ಉದ್ದವಾಗಿ ಚೂಪಾಗಿರುವುವು. ಚಿಗುರೆಲೆಗಳು ಕೆಂಪಗೆ ಬಹಳ ಮೃದುವಾಗಿರುವುವು. ಹಿಂಭಾಗದಲ್ಲಿ ನರಗಳು ಮಾತ್ರ ಹಸುರು ಬಣ್ಣಕ್ಕೆ ಕಾಣಿಸುವುವು. ಚಿಗುರೆಲೆಗಳು ಬಲಿಯುತ ಬಂದಹಾಗೆಲ್ಲ ಎಲೆಗಳು ಹಸುರು ಬಣ್ಣಕ್ಕೆ ತಿರುಗುವುವು. ಚೆನ್ನಾಗಿ ಬಲಿತೆಲೆಗಳು ಕಪ್ಪುಹಸುರುಬಣ್ಣವನ್ನು ಹೊಂದಿ ಒರಟಾಗಿ ಮಿಂಚುತ್ತಿರುವುವು. ಇವುಗಳು ಕೊಂಬೆಗಳಲ್ಲಿ ಗೊಂಚಲುಗೊಂಚಲಾಗಿರುವುವು. ಮತ್ತು ಕಾಂಡದಸುತ್ತಲೂ ಒಂದರಮೇಲೊಂದು ಹುಟ್ಟಿರುವುವು. (ಹೀಗಿರುವುದರಿಂದ ಎಲೆಗಳು ಒಂದನ್ನೊಂದು ಮರೆಮಾಡುವುದಿಲ್ಲ. ಎಲ್ಲಾ ಎಲೆಗಳಮೇಲೂ ಚನ್ನಾಗಿ ಬೆಳಕು ಬೀಳುವುದು ಎಂಬುದನ್ನು ತಿಳಿಸಬೇಕು.)

v. ಹೂ;—ಹೂಗಳು ಗೊಂಚಲುಗೊಂಚಲಾಗಿ ಬೆಳೆಯುವುವು. ಒಂದೊಂದು ಗೊಂಚಲಿನಲ್ಲೂ ನೂರಾರು ಹೂಗಳಿರುತ್ತವೆ. ಹೂಗಳು ಮೊಗ್ಗಾಗಿರುವಾಗ ಹಸುರುಬಣ್ಣಕ್ಕಿದ್ದು ಆಮೇಲೆಹಳದಿಯಬಣ್ಣಕ್ಕೆ ತಿರುಗುವುವು. ಐದುಪಾತ್ರೆಗಳೂ, ಐದುದಳಗಳೂ ಒಟ್ಟಾಗಿ ಸೇರಿರುವ ಐದು ಕೇಸರಗಳೂ, ಒಂದು ಫಲಕವೂ ಇರುವುವು. ಹೂವು ಬಲಿಯುತ ಬಂದಹಾಗೆಲ್ಲ ಫಲಕವು ದೊಡ್ಡದಾಗುತ್ತ ಬರುವುದು.

ಹೀಗೆ ಆದಹಾಗೆಲ್ಲ ಪಾತ್ರ, ದಳ, ಕೇಸರಗಳು ಒಣಗಿ ಸುರುಟಿಕೊಂಡು ಕೆಲವು ದಿವಸಗಳ ಮೇಲೆ ಉದುರಿಹೋಗುವುವು. ಹೂ ಒಂದು ವಿಧವಾದ ವಾಸನೆಯುಳ್ಳ ದಾಗಿರುವುದು. ಗೊಂಚಲಿನಲ್ಲಿ ಮುಂದೆಮುಂದೆ ಮೊಗ್ಗುಗಳು ಬಿಡುತ್ತಾ ಇರುವುವು. ಹಿಂದೆ ಹೂಗಳು ಅರಳುತ್ತಾ ಇರುವುವು.

vi. ಕಾಯಿ:—ಹೂವಿನ ಭಾಗಗಳೆಲ್ಲಾ ಉದುರಿದಮೇಲೆ ಕಾಯಿ ದಪ್ಪ ವಾಗುವುದಕ್ಕೆ ಪ್ರಾರಂಭಿಸುವುದು. ತೊಟ್ಟು ಗಟ್ಟಿಯಾಗಿಯೂ ಉದ್ದವಾಗಿಯೂ ಬೆಳೆಯುವುದು. ಕಾಯಿಗಳು ಗೊಂಚಲುಗೊಂಚಲಾಗಿರುವುವು. ಹೀಚಿನಲ್ಲಿ ಒಳಗಿನ ಓಟೆ ಗಟ್ಟಿಯಾಗಿರುವುದಿಲ್ಲ. ಹೀಚನ್ನು ತಿಂದರೆ ಒಗರಾಗಿರುವುದು. ಕಾಯಿಯ ಬಣ್ಣ ಹಸುರು. ಬಲಿತಕಾಯನ್ನು ತಿಂದರೆ ಹುಳಿಯಾಗಿರುವುದು. ಓಟೆಯು (ಬೀಜವು) ಬಲು ಗಟ್ಟಿಯಾಗಿರುವುದು. ಕಾಯಿ ಬಲಿತು ಹಣ್ಣಾದಮೇಲೆ ಹಳದಿ ಅಥವಾ ಕೆಂಪು ಮಿಶ್ರವಾದ ಹಳದಿಬಣ್ಣಕ್ಕೆ ತಿರುಗುವುದು. ಮೇಲಿರುವ ಸಿಪ್ಪೆಯನ್ನು ತೆಗೆದರೆ ಒಳಗೆ ಸಿಹಿಯಾದ ರಸದಿಂದ ತುಂಬಿದ ಮೃದುವಾದ ಹಳದಿಯ ಬಣ್ಣದ ತಿರುಳು ಇರುತ್ತದೆ. ಬೀಜದ ಹಣ್ಣಿನೊಳಗೆ ಕಸಿಯಹಣ್ಣಿನಲ್ಲಿರುವಷ್ಟು ಮಧುರವಿಲ್ಲದ ರಸದಿಂದ ಕೂಡಿದ ಗಟ್ಟಿಯಾದ ನಾರುಗಳು ಇರುವುವು. ಒಳಗಡೆ ಗಟ್ಟಿಯಾದ ಒಂದುಕಲ್ಲು ಬೀಜವಿರುವುದು.

V. ಉಪಯೋಗ. i. ಈ ಕಾಯನ್ನು ಹೆಚ್ಚಿ ತಿನ್ನುತ್ತಾರೆ. ಹುಳಿ ಕಾಯಿಗೆ ಉಪ್ಪು ಮೆಣಸಿನಪುಡಿ ಹಾಕಿ ತಿನ್ನುತ್ತಾರೆ. ಸಣ್ಣ ಕಾಯಿಗಳನ್ನು ಹೆಚ್ಚದೆಯೂ, ದಪ್ಪಕಾಯಿಗಳನ್ನು ಹೆಚ್ಚಿಯೂ ಉಪ್ಪಿನಕಾಯಿ ಹಾಕುವರು. ಕಾಯಿಗಳನ್ನು ಹೆಚ್ಚಿ ಒಣಗಿಸಿ ಹುಣಸೆಯಹಣ್ಣಿಗೆ ಬದಲು ಉಪಯೋಗಿಸುತ್ತಾರೆ.

ii. ಹಣ್ಣುಗಳನ್ನು ತಿನ್ನುತ್ತಾರೆ.

iii. ಎಲೆಗಳನ್ನು ಮದುವೆ, ಮುಂಜಿ, ಮುಂತಾದ ಕಾಲಗಳಲ್ಲಿ ಬಾಗಿಲಿಗೆ ತೋರಣವನ್ನು ಕಟ್ಟುತ್ತಾರೆ. ಹಲ್ಲು ಉಜ್ಜುವುದಕ್ಕೆ ಉಪಯೋಗಿಸುತ್ತಾರೆ. ಮಾವಿನೆಲೆಗಳಿಂದ ಒಂದುಬಗೆಯ ಬಣ್ಣವನ್ನು ತೆಗೆಯುವುದೂ ಉಂಟು.

iv. ತೊಗಟೆಯನ್ನು ಚರ್ಮ ಹದಮಾಡುವುದಕ್ಕೆ ಉಪಯೋಗಿಸುತ್ತಾರೆ. ನಿಷ್ಪವಾದ ಗೋಂದು ಸಿಕ್ಕುತ್ತದೆ.

v. ಬೀಜ, ಹೂವು ಇವುಗಳನ್ನು ಭೇದಿ, ಆಮಶಂಕೆ ಮುಂತಾದ ರೋಗಗಳಿಗೆ ಔಷಧಮಾಡುವುದಕ್ಕೆ ಉಪಯೋಗಿಸುತ್ತಾರೆ.

vi. ಮರವನ್ನು ಕೊಯ್ದು ಹಲಿಗೆಗಳನ್ನುಮಾಡಿ ಅವುಗಳಿಂದ ಪೆಟ್ಟಿಗೆ ಕದ ಮುಂತಾದುವುಗಳನ್ನು ಮಾಡುವರು. ಸೌದೆಗೂ ಆಗುತದೆ.

ಕಂ|| ನೆಳಲಿತ್ತು ನಾಡೆ ಪಥಿಕರ |
ಬಳಲ್ಕೆಯಂ ಪರಿಹರಿಪ್ಪ ತರುಗಳಿಸಿತ್ತೋ ||
ಬಳವು ಫಲಚ್ಛಾಯೆಗಳಿ |
ತ್ತುಲಸದೆ ನಲವಡಿಸೆ ಧನ್ಯನಲ್ತೆ ರಸಾಲಂ ||

ಈ ವಿಮರ್ಶೆಗೆ ಸಂಬಂಧಪಟ್ಟಂತೆ ಕೈಕೆಲಸಗಳು ಆಟಗಳು ಮುಂತಾದುವು :—

ನಂಬರ್	ಕೈ ಕೆಲಸಗಳು	ನಡೆಯಬೇಕಾದ ಭಾಗ
1	ಚಿತ್ರ	1. ಮಾವಿನ ಚಿಗುರೆಲೆ. 2. ಬಲಿತೆಲೆ. 3. ಹೂವಿನ ಗೊಂಚಲು. 4. ಅನೇಕ ಜಾತಿಯ ಮಾವಿನಕಾಯಿ. 5. ಕಾಯಿಗಳ ಗೊಂಚಲು. 6. ಶೀಳಿದಕಾಯಿ. 7. ಅಡ್ಡಲಾಗಿ ಕೊಯ್ದ ಕಾಯಿ. 8. ಉಪ್ಪಿನಕಾಯಿ ಹಾಕುವ ಮಡಕೆ. 9. ಚಾಕು. 10. ಮಾವಿನಹಣ್ಣುಗಳನ್ನು ತುಂಬುವ ಬುಟ್ಟಿ.
2	ಬ್ರಷ್‌ವರ್ಕ್	1. ಮಾವಿನಚಿಗುರೆಲೆ. 2. ಬಲಿತೆಲೆ. 3. ಅನೇಕಜಾತಿಯ ಮಾವಿನಕಾಯಿ. 4. ಹಣ್ಣು. 5. ಚೆನ್ನಾಗಿ ಬಲಿತ ಕಪ್ಪು ಹಸುರುಬಣ್ಣದ ಎಲೆ.
3	ಮಣ್ಣಿನಕೆಲಸ	1. ಮಾವಿನೆಲೆ. 2. ಹೀಚು. 3. ಅನೇಕಜಾತಿಯ ಮಾವಿನಕಾಯಿಗಳು. 4. ಮಡಕೆ.
4	ಕಾಗದಮಡಿಕೆ	1. ತೋಟಗಳಲ್ಲಿರುವ ಗುಡಿಸಲು ಮತ್ತು ಮನೆ. 2. ಹಣ್ಣುಗಳನ್ನು ನೀರಿನಮೇಲೆ ಸಾಗಿಸುವುದಕ್ಕೆ ಬೇಕಾದ ದೋಣಿ. 3. ಹಡಗು ಮುಂತಾದುವು.
5	ಬಳೇ, ಕಡ್ಡಿ, ಮತ್ತು ನೂಲಿಡುವುದು	1. ಮಾವಿನಕಾಯಿ. 2. ಎಲೆ. 3. ಉಪ್ಪಿನಕಾಯಿ ಹಾಕುವ ಮಡಕೆ. 4 ಗಿಡಕ್ಕೆ ನೀರುಹಾಕುವ ವಾಟರ್‌ಪ್ಯಾನ್. 5. ಕೊಡ.

ಸಂಖ್ಯೆ	ಕೈ ಕೆಲಸಗಳು	ನಡಿಯುಬೇಕಾದ ಭಾಗ
6	ಮಣಿ ಪೋಣಿಸುವುದು	1. ತೋರಣಗಳಂತೆ ನಾನಾಬಣ್ಣದ ಮಣಿಗಳನ್ನು ಪೋಣಿಸುವುದು. 2. ಕಡ್ಡಿಗಳಿಗೆ ಮಣಿಗಳನ್ನು ಪೋಣಿಸಿ ತೋಟದ ಬೇಲಿಗಳಿಗೆ ಬದಲಾಗಿ ನೆಡುವುದು.
7	ಕರಣ	
8	ಆಟ	1. ವೃಕ್ಷಗಳ ಆಟ.
9	ಮರಳಾಟ	1. ಮಾವಿನತೋಟವನ್ನು ರಚಿಸುವುದು.
10	ಪದ್ಯ	ಮಳೆಬಿಸಿಲುಗಾಳಿಗಳ ಬಾಧೆಗಳ ತಾತಾಳ್ದು | ಕಳವಳಿಸಿ ತಾಪದಿಂ ಬಂದದಾರಿಗರನ್ನು | ಸುಳಿದಮಾತ್ರದಿ ಛಾಯೆಯಿಂದ ವಿಶ್ರಮಗೊಳಿಸಿ ಕಲ್ಗಳಿಂಬಡಿಸಿಕೊಂಡು || ಹುಳಿದೋರೆಕಾಯ್ಗಳಿಂ ಕೊಟ್ಟವರ ಹಸಿವನ್ನು | ಕಳೆದುಸಜ್ಜನರಂತೆ ಪರಹಿತವಗೈವ ಪೊಸ | ತಳಿರಿಡಿದ ಮಾವುಗಳು ಫಲಪುಷ್ಪಭಾರದಿಂ ಮೆರೆವುದೀ ಗಿರಿವರನೊಳು ||
11	ಕಥೆ	1. ಮಾವಿನಮರವೂ ಹಸುವೂ ಕುದುರೆಯೂ. 2. ಕಶಿಮಾವಿನಮರಗಳು (ಮ||ರಾ|| ಜೆ. ಕೃಷ್ಣಶಾಸ್ತ್ರಿಯವರಿಂದ ರಚಿಸಲ್ಪಟ್ಟ ‘ಕಿಂಡರ್‌ಗಾರ್ಟೆನ್ ಕಥೆಗಳು’ ಎಂಬ ಪುಸ್ತಕದಲ್ಲಿ 84 85ನೆಯ ಕಥೆಗಳು).

(೧೮೭ ನೆಯ ಪುಟದ ಶೇಷ)

ಜಹಾಂಗೀರನು ಬುದ್ಧಿಶಾಲಿಯೂ, ಧೈರ್ಯಶಾಲಿಯೂ ಆಗಿದ್ದನು. ಅವನ ಹಿರಿಯಮಗನು ಇದಿರುಬಿದ್ದಾಗಲೂ, ದಖ್ಖನ್ ಮತ್ತು ರಾಜಪುತ್ರಸ್ಥಾನದಲ್ಲಿ ದಂಗೆ ಎದ್ದಾಗಲೂ ಅವನು ಅಸಾಧಾರಣವಾದ ಸಾಮರ್ಥ್ಯವನ್ನು ಪ್ರದರ್ಶಿಸಿದನು. ಸ್ವಬುದ್ಧಿಚಾತುರ್ಯದಿಂದ ಜಹಾಂಘೀರನು ಮೊಗಲ್‌ಸಾಮ್ರಾಜ್ಯವನ್ನು ದರ್ಪದಿಂದ ಆಳಿದನೆಂದು ಹೇಳಲಾಗದಿದ್ದರೂ, ತನ್ನ ತಂದೆಯ ರಾಜತಂತ್ರವನ್ನೇ ಅನುಸರಿಸಿದುದರಿಂದ ಹಿಂದುಗಳು ತಮ್ಮ ರಾಜಭಕ್ತಿಯನ್ನು ಸಮರ್ಪಿಸುತ್ತಿದ್ದರು. ಉದಾರವಾದ ಮನಸ್ಸಿನಿಂದ ಅವನು ಹಿಂದೂಗಳನ್ನು ಸನ್ಮಾನಿಸದಿದ್ದರೂ ಅಲಕ್ಷ್ಯದಿಂದಲಾದರೂ ಹಾಗೆ ಮಾಡಿದನು. ತಂದೆಯಂತೆಯೇ ಇವನೂ ಕ್ರಿಶ್ಚಿಯನರ ಚಿತ್ರಕೆಲಸಗಳನ್ನು ನೋಡುವುದರಲ್ಲಿ ಉತ್ಸಾಹಪಡುತಿದ್ದನು. ಜಹಾಂಘೀರನಿಗೆ ಪ್ರಬಲರಾದ ಮಂತ್ರಿಸೇನಾಧಿಪತಿಗಳು ದೊರಕಿದುದು ಅವನ ಪುಣ್ಯೋದಯವೆಂದೇ ಎಂದು ಹೇಳಬೇಕು. ಅವನ ಆಳ್ವಿಕೆಯ ಅಂತ್ಯಾರ್ಧದಲ್ಲಿ ಜಹಾಂಘೀರನು ಜಗತ್‌ಸುಂದರಿಯಾದ ನೂರ್ಜಹಾನಳ ಅಧೀನನಾದನು. ರಾಣಿಯಾದ ನೂರ್ಜಹಾನಳೇ ತನ್ನ ಸಹೋದರನಾದ ಆಸಫ್‌ಖಾನನೊಂದಿಗೆ ರಾಜ್ಯವಾಳುತ್ತಿದ್ದಳು. ಇವಳ ಆಧಿಪತ್ಯಕ್ಕೆ ಪ್ರತಿಫಲರೂಪವಾಗಿ ಪೂರ್ವದ ಮೊಗಲಾಯ್ ಸೈನಿಕರ ಶೌರ್ಯವು ವಿಲೀನವಾಯಿತು; ಚಕ್ರವರ್ತಿಯ ಶೂರಮಗನಾದ ಖುರಮನು ತಂದೆಗೆ ಇದಿರಾಗಿ ದಂಗೆಯೆದ್ದನು; ಅನೇಕಕಡೆಗಳಲ್ಲಿ ಸಣ್ಣಸಣ್ಣ ರಾಜ್ಯಗಳನ್ನು ಸ್ವಾತಂತ್ರವನ್ನು ಪಡೆದವು; ರಾಜ್ಯದಲ್ಲೆಲ್ಲ ಕಳ್ಳತನ, ದರೋಡೆ ಮೊದಲಾದುವು ಹೆಚ್ಚಾದುವು; ಮತ್ತು ರಾಜಾಸ್ಥಾನಿಕರ ದುರಾಶೆಯು ಮಿತಿಯಿಲ್ಲದಂತಾಯಿತು; ಏಕೆಂದರೆ ಚಕ್ರವರ್ತಿನಿಯ ಬಳಿಗೇ ಆಗಲಿ ಅಥವಾ ಮಂತ್ರಿಗಳ ಹತ್ತಿರಕ್ಕೇ ಆಗಲಿ ಬರಿಕೈಯಲ್ಲಿ ಯಾರೂ ಹೋಗಲಾಗುತ್ತಿರಲಿಲ್ಲ.

1627 ನೇ ನವಂಬರ್ ತಿಂಗಳಲ್ಲಿ ಜಹಾಂಘೀರನು ಬೇಸಿಗೆಗಾಗಿ ಹೋಗಿದ್ದ ಕಾಶ್ಮೀರದ ಸುಂದರವಾದ ಕಣಿವೆಗಳ ಪ್ರಾಂತ್ಯದಿಂದ ಹಿಂತಿರುಗಿ ಬರುವಾಗ ಅಕಸ್ಮಾತ್ತಾಗಿ ಸ್ವರ್ಗಸ್ಥನಾದನು. ಸಾಯುವಾಗ ಅವನಿಗೆ 58 ವರ್ಷ ವಯಸ್ಸಾಗಿ

ದ್ದಿತು. ತತ್‌ಕ್ಷಣದಲ್ಲಿಯೇ ಅವನ ಮುಮ್ಮಗನಾದ ಬುಲಾಕೀ(Bûlâkî) ಎಂಬುವನು ದಾವರ್‌ಭಕ್ಷನೆಂಬ ಹೆಸರಿನಿಂದ ಸಿಂಹಾಸನವನ್ನೇರಿದನು. ಆದರೆ ಕೆಲವುದಿನಗಳೊಳಗಾಗಿ ಜಹಾಂಘೀರನ ಮಗನಾದ ಖುರಮನು ಹಿಂದಿರುಗಿ ಬಂದು ಆಗ್ರಾದಲ್ಲಿ 1628 ನೇ ಜನವರಿಯಲ್ಲಿ ಷಹಜಹಾನ್ (ಪ್ರಪಂಚದ ಧೊರೆ) ಎಂಬ ಹೆಸರಿನಿಂದ ಚಕ್ರಾಧೀಶ್ವರನಾದನು.

ಜಹಾಂಘೀರನು ಒಬ್ಬ ರಾಜಪುತ್ರ ರಾಜಕುಮಾರಿಯ ಮಗನು. ಷಹಜಹಾನನೂ ಅವನಂತೆಯೇ ರಾಜಪುತ್ರಕುಲದ ಮಾರ್ವಾರದರಾಜನ ಮಗಳ ಗರ್ಭದಲ್ಲಿ ಹುಟ್ಟಿದವನು. ಇವನ ಶರೀರದಲ್ಲಿ ವಿಶೇಷವಾಗಿ ಹಿಂದೂ ರಕ್ತವಿದ್ದರೂ ಇವನು ಸುನ್ನಿಮತಸ್ಥನಾಗಿ ಮಹಮ್ಮದೀಯರನ್ನೇ ಹೆಚ್ಚು ಪಕ್ಷಪಾತದಿಂದ ಕಾಣುತ್ತಿದ್ದನು. ಇದಕ್ಕೆ ಅವನ ಪ್ರೇಮಪತ್ನಿಯಾಗಿದ್ದ ಮುಮ್‌ತಾಜಮಹಲಳೇಕಾರಣ. ಹದಿನಾಲ್ಕು ಮಕ್ಕಳನ್ನು ಹೆತ್ತು ಗಂಡನಿಗೆ ಅತ್ಯಂತ ಹಿತಕಾರಿಣಿಯಾಗಿದ್ದು ಪತಿಯ ಕಣ್ಣೆದುರಿಗೆ ಸತ್ತುಹೋದ ಈಕೆಯ ಜ್ಞಾಪಕಾರ್ಥವಾಗಿ ಆಗ್ರಾದಲ್ಲಿ ಕಟ್ಟಿಸಿರುವ ತಾಜಮಹಲ್ ಮಸೀದಿಯು ಈಗಲೂ ನೋಟಕನಿಗೆ ಆಶ್ಚರ್ಯವನ್ನುಂಟುಮಾಡುತ್ತಿರುವುದು. ತಂದೆ ತಾತಂದಿರಂತೆ ಇವನೂ ಕ್ರಿಶ್ಚಿಯನ್ ಮತ ಬೋಧಕರನ್ನು ತನ್ನ ರಾಜ್ಯದಲ್ಲಿ ಆದರಿಸಿದನು. ಇವನೂ ಅವರಂತೆ ಹಿಂದೂಗಳಿಗೆ ದೊಡ್ಡ ಉದ್ಯೋಗವನ್ನು ಕೊಡುತ್ತಿದ್ದನು. ಷಹಜಹಾನನ ಆಳ್ವಿಕೆಯಲ್ಲಿನ ಯುದ್ಧಗಳು ಅಷ್ಟೇನೂ ಪ್ರಸಿದ್ಧವಾದವುಗಳಲ್ಲ. ಬಿಜಾಪುರ ಗೋಲಕೊಂಡದವರು ತೊಂದರೆಕೊಟ್ಟರೂ ಅವರು ಸಂಧಿಗೆ ಒಪ್ಪಿ ಮೊಗಲ್ ಚಕ್ರಾಧೀಶ್ವರನಿಗೆ ಪೊಗದಿಯನ್ನು ತಪ್ಪದೆ ಕೊಡುತ್ತಿದ್ದರು. ಪರ್ಷಿಯಾ ದವರಿಂದ ಕಾಂದಹಾರನ್ನು ವಾಪಸ್ ಪಡೆಯಲು ಅನೇಕ ಪ್ರಯತ್ನಗಳು ಜರಗಿದರೂ ಅವೆಲ್ಲವೂ ನಿಷ್ಪ್ರಯೋಜನವಾದವು. ಈ ಯುದ್ಧಗಳಲ್ಲೆಲ್ಲಾ ಔರಂಗಜೇಬನು ತನ್ನ ಅಸಾಧಾರಣ ಸಾಮರ್ಥ್ಯವನ್ನು ತೋರಿಸಿ ಕೀರ್ತಿಯನ್ನು ಸಂಪಾದಿಸಿದನು.

ಷಹಜಹಾನನ ಆಳ್ವಿಕೆಯು ಮುಖ್ಯವಾಗಿ ಆಗಿದ್ದ ಸಮಾಧಾನ ಸ್ಥಿತಿಗೂ, ರಾಜ್ಯದ ಏಳಿಗೆಗೂ ಪ್ರಸಿದ್ಧಿಯನ್ನು ಪಡೆದಿರುವುದು. ಅವನ ಮಂತ್ರಿಗಳು ಅತ್ಯಂತ

ಗಟ್ಟಿಗರಾಗಿದ್ದರು. ಹಿಂದುವಾಗಿದ್ದು ಜಾತ್ಯಾಂತರವನ್ನು ಪಡೆದು ಮುಸಲ್ಮಾನರಾದ ಸಾದ್‌ಅಲ್ಲಾ ಅಲ್ಲಾಮಿ ಎಂಬುವನ ಮಂತ್ರಿತ್ವವೂ, ಅಲಿಮರ್ದಾನ್ ಮತ್ತು ಆಸಫ್ ಖಾನರ ರಾಜತಂತ್ರ ಮತ್ತು ಸಾಮರ್ಥ್ಯಗಳೂ ಹೆಸರುವಾಸಿಯಾಗಿದೆ.

ರಾಜ್ಯದ ಶಾಂತಸ್ಥಿತಿಯು ಕುಶಲವಿದ್ಯೆಗಳನ್ನೂ ಪ್ರದರ್ಶಿಸಲು ಷಹಜಹಾನನಿಗೆ ಅವಕಾಶವನ್ನು ಕೊಟ್ಟಿತು. ಆಗ್ರಾದಲ್ಲಿರುವ ಕಟ್ಟಡಗಳೂ, ಡೆಹಲಿಯಲ್ಲಿರುವ ಅವನ ಅರಮನೆಯೂ ಅದಕ್ಕೆ ಸಾಕ್ಷಿರೂಪವಾಗಿವೆ.

ವಯಸ್ಸು ಕಳೆದಂತೆಲ್ಲಾ ಷಹಜಹಾನನ ಔದಾರ್ಯವೂ, ಪ್ರಜಾಪ್ರೀತಿಯೂ ಅಧಿಕವಾಗುತ್ತ ಬರಲು, ಅವನು ದೊಡ್ಡವರಾದ ತನ್ನಮಕ್ಕಳು ಹೇಳಿದಂತೆ ಕೇಳುತ್ತ ಬಂದನು. ಚಿಕ್ಕಂದಿನಲ್ಲಿ ಶೂರನಾದ ಸೈನಿಕನಾಗಿಯೂ, ಯುಕ್ತಾಯುಕ್ತವನ್ನರಿತ ರಾಜನಾಗಿಯೂ ಇದ್ದ ಷಹಜಹಾನನು ಸ್ತ್ರೀಲೋಲನಾಗಿ ಜನಾನದಿಂದ ಹೊರಗೆ ಹೊರಡುತ್ತಲೇ ಇರಲಿಲ್ಲ.

ರಾಜ್ಯಭಾರವು ಷಹಜಹಾನನ ಸುಖಕ್ಕೆ ಕುಂದಕವನ್ನು ತರುವುದಾಗಲು, ಅದನ್ನೂ ನಾಲ್ಕುಭಾಗವಾಗಿ ವಿಂಗಡಿಸಿ ತನ್ನ ನಾಲ್ಕುಮಕ್ಕಳ ವಶಕ್ಕೆ ಒಪ್ಪಿಸಿದನು. ಅವರಲ್ಲಿ ಒಬ್ಬರಿಗೊಬ್ಬರಿಗೆ ಇದ್ದ ದ್ವೇಷವನ್ನು ತಪ್ಪಿಸಲೆಂದು ಇದನ್ನು ಮಾಡಿದರೂ ಇದರಿಂದ ರಾಜ್ಯದ ಏಕಮತ್ಯವು ನಾಶವಾಗುವುದಾಯಿತು ರಾಜದಂಡವು ನಾಲು ತುಂಡಾಗಿ ಆ ನಾಲ್ಕೂ, ನಾಲ್ಕು ಸರ್ಪಗಳಂತೆ ಪರಿಣಮಿಸಿ ಮೊಗಲ್ ಸಿಂಹಾಸನದ ಸುತ್ತಲೂ ಸುತ್ತಾಡುತ್ತಿದ್ದು, ಕೊನೆಗೆ ಔರಂಗಜೇಬನೆಂಬ ಘಟಸರ್ಪವು ಮಿಕ್ಕ ಮೂರನ್ನೂ ನುಂಗಿದುದಲ್ಲದೆ ಮಯೂರಾಸನವನ್ನೂ ಏಕಾಪೋಶನ ಮಾಡಿಬಿಟ್ಟಿತು.

ಮೊಗಲ್ ಸಾಮ್ರಾಟರಲ್ಲಿ, "ತಂದೆಯು ಸಾಯುವಾಗ ಮಗನು ತನ್ನಮೇಲೆ ದಂಗೆ ಎದ್ದಿರುವುದನ್ನು ನೋಡಬೇಕು.'' ಎಂಬ ಐತಿಹ್ಯವಿದ್ದಿತು. ಅಕ್ಬರನು ಸಾಯುವಾಗ ಕೃತಘ್ನನಾದ ಜಹಾಂಗಿರನ ಮಹಾಪರಾಧವನ್ನು ಕ್ಷಮಿಸಿದ್ದನು. ತನ್ನ ತಂದೆಯು ಸತ್ತಾಗ ಷಹಜಹಾನನು ಇನ್ನೂ ದಂಗೆಯೆದ್ದೇ ಇದ್ದನು. ಈಗ ತನ್ನ ಮಕ್ಕಳು ತನ್ನನ್ನು ಇಳಿಸಿ ದಂಗೆ ಎದ್ದಿರುವುದನ್ನು ನೋಡತಕ್ಕದ್ದು ಷಹಜಹಾನನ ಸರದಿಯಾಗಿದ್ದಿತು. 1657 ರಲ್ಲಿ ಷಹಜಹಾನನು ಅತ್ಯಂತ ಘೋರವಾದ ರೋಗ

ಪೀಡಿತನಾಗಿರುವನೆಂದೂ, ಅನಂತರ ಅವನು ಗತಿಸಿಯೇ ಹೋದನೆಂದೂ ವದಂತಿ ಹುಟ್ಟಿತು. ಅವನ ನಾಲ್ಕು ಮಕ್ಕಳಲ್ಲಿ ಪ್ರತಿಯೊಬ್ಬನೂ ತಾನು ಚಕ್ರಾಧೀಶ್ವರನಾಗಬೇಕೆಂದುದ್ದೇಶಿಸಿ ಒಬ್ಬರ ಮೇಲೊಬ್ಬರು ಕಾದಾಡಲುಪಕ್ರಮಿಸಿದರು.

ಇದರ ಫಲಿತಾಂಶವೇನೇ ಆಗಲಿ, ಮುಂದೆ ಬರುವ ಚಕ್ರವರ್ತಿಗೆ ಹಿಂದಿನವರಿಗಿದ್ದಂತೆ ಇಲ್ಲದೆ ವಿಜಾತೀಯವಾದ ಸಂದರ್ಭಗಳು ಒದಗಿದ್ದವು. ಅಕ್ಬರನ ರಾಜ್ಯಸ್ಥಾಪನೆಯು ನಾನಾಯಂತ್ರಗಳಿಂದ ಕಟ್ಟಲ್ಪಟ್ಟಿದ್ದರೂ, ಅದರಲ್ಲಿ ಕೆಲವು ಭದ್ರವಿಲ್ಲದ ಸ್ಥಳಗಳಿದ್ದವು. ಆ ಕುಂದಕಗಳು ಬಲಪಟ್ಟು ಆದರಿಂದ ಆ ಕಟ್ಟಡವು ಸಡಿಲವಾಗಬಹುದಾಗುವ ಸಂಭವವಿದ್ದಿತು. ಸ್ವೈರಿಣೆಯು ಅಶ್ರದ್ಧೆಯನ್ನೂ, ಜಯವು ಆಡಂಬರವನ್ನೂ ಕಲ್ಪಿಸಿದ್ದವು. ಬಾಲ್ಕನ (Balkh) ಶೂರರಾದ ಯೋಧರು ಯಮುನೆಯ ಫಲವತ್ತಾದ ತೀರಪ್ರದೇಶಗಳಲ್ಲಿ ಶಾಂತರಾದ ಕೃಷಿಕರಾದರು ; ಅವರ ಶೌರ್ಯವು ಒಯ್ಯಾರ ಮತ್ತು ಭೋಗದಲ್ಲಿ ಕೊನೆಮುಟ್ಟಿತು. ಅಕ್ಬರನ ಇಬ್ಬರು ಮಕ್ಕಳು ಕುಡಿತದಿಂದ ಪ್ರಾಣವನ್ನೇ ನೀಗಿದರು ; ಮತ್ತು ಕುಡಿತದ ಹುಚ್ಚಾದರೋ ಅಧಿಕಾರಿಗಳಲ್ಲಿಯೂ, ಹಣವಂತರಲ್ಲಿಯೂ ವೃದ್ಧಿಗೊಳ್ಳಲು, ಮಹಮ್ಮದೀಯರ ವೇದಾಧಿಕಾರಿಯಾದ ಖಾಜೀ ಕೂಡ ಪ್ರತಿನಿತ್ಯದಲ್ಲಿಯೂ ಒಬ್ಬರಿಗೂ ಕಾಣದಂತೆ ಸುರಾಪಾನಮಾಡುವುದಕ್ಕೆ ಉಪಕ್ರಮಿಸಿದನು. ಹಿಂದಿನ ಶೂರರಾದ ಯೋಧರೂ ಮತ್ತು ಅವರಂತೆಯೇ ಧೀರರಾಗಿದ್ದ ವೀರ ರಮಣಿಯರ ವಂಶದಲ್ಲಿ ದುರ್ಗುಣವೇ ಮೂರ್ತಿವತ್ತಾಗಿದ್ದ ಮತ್ತು ಸೂಕ್ಷ್ಮಶರೀರಿಗಳಾದ ಘನಸ್ಥರು ಹುಟ್ಟಿದರು. ಔರಂಗಜೇಬನ ಪೂರ್ವಪಿತಾಮಹರು ಉತ್ತರದಿಕ್ಕಿನಿಂದ ತಮ್ಮ ಕಬ್ಬಿಣದಂತಹ ಶರೀರದಿಂದ ಇಂಡಿಯಾಕ್ಕೆ ಬಂದರು ; ಆದರೆ ಔರಂಗಜೇಬನ ಆಸ್ಥಾನಿಕರು ಸುಂದರವಾದ ಉಡುಪು ಧರಿಸಿದರೂ ಕಳೆಗುಂದಿದ ಮುಖವುಳ್ಳವರಾಗಿದ್ದರು. ಮೊಗಲ್‌ಸಾಮ್ರಾಜ್ಯ ಸ್ಥಾಪಕನಾದ ಬಾಬರನು ತನ್ನ ಮೂವತ್ತುವರ್ಷದ ಯುದ್ಧೋದ್ಯೋಗದಲ್ಲಿ ದಾರಿಯಲ್ಲಿ ಸಿಕ್ಕಿದ ಪ್ರತಿಯೊಂದು ನದಿಯನ್ನೂ ಈಜಿ ಬಂದಿದ್ದನು. ಔರಂಗಜೇಬನ ಶ್ರೀಮಂತರಾದ ಆಸ್ಥಾನಿಕರು ಘನವಾದ ಉಡುಪುಗಳನ್ನು ಧರಿಸಿ ಪಲ್ಲಕ್ಕಿಗಳಲ್ಲಿ ಕುಳಿತುಕೊಂಡು ಯುದ್ಧರಂಗಕ್ಕೆ ಹೋಗುತ್ತಿದ್ದರು. ಮೊಗಲರ ಜನ್ಮಸ್ಥಾನವಾದ ಬೆಟ್ಟ

ಸ್ಕೂಲ್ ಡಿಸಿಪ್ಲಿನ್.

(೧೮೯ ನೇ ಪುಟದ ಶೇಷ)

(*c*) ಬೆತ್ತ ಮುಂತಾದುವನ್ನು ಉಪಾಧ್ಯಾಯರು ಸಮೀಪದಲ್ಲಿ ಇಟ್ಟುಕೊಂಡಿರಕೂಡದು. ಅವಶ್ಯಕವಾದಾಗ ತರಿಸಿ ಉಪಯೋಗಿಸಿ ಪುನಃ ಅದನ್ನು ಕಳುಹಿಸುವಪದ್ಧತಿಯನ್ನು ಇಟ್ಟುಕೊಳ್ಳಬೇಕು.

(*d*) ಸಿಕ್ಕಿದುದನ್ನು ತೆಗೆದು ಹೊಡೆಯುವುದು, ಸಿಕ್ಕಿದಂತೆ ಹೊಡೆಯುವುದು ಇದನ್ನು ಬಿಡಬೇಕು. ಅಂಗೈಮೇಲೆ 6 ಏಟಿಗೆ ಮೀರದಂತೆ ಬೆತ್ತದಿಂದ ಹೊಡೆಯುವುದನ್ನು ನಿಯಮವಾಗಿ ಇಟ್ಟುಕೊಳ್ಳಬೇಕು,

(*e*) ದೇಹದಂಡನೆಯ ರಿಜಿಷ್ಟರನ್ನು ಇಡಬೇಕು. ಇದರಲ್ಲಿ ಹುಡುಗರನ್ನು ಹೊಡೆದಾಗಲೆಲ್ಲಾ ಹುಡುಗನ ಹೆಸರು, ಮಾಡಿದ ತಪ್ಪು, ಏಟಿನ ಸಂಖ್ಯೆ ಇಷ್ಟನ್ನೂ ಬರೆದಿಡಬೇಕು.

ಈ ದಂಡನೆಯನ್ನು ಏಕಾಂತವಾಗಿ ಉಪಯೋಗಿಸುವುದು ಉಂಟು. ಇತರರೆದುರಿಗೆ ಉಪಯೋಗಿಸುವುದೂ ಉಟು. ಸಾಮಾನ್ಯವಾಗಿ ಹುಡುಗನಿಗೆ ಯಾವ ತಪ್ಪಿನ ಸ್ವರೂಪ ತಿಳಿಯದಿರುವುದೇ ಅಂತಹ ತಪ್ಪುಗಳನ್ನು ಅಪರೂಪವಾಗಿ ಒಬ್ಬೊಬ್ಬರು ನಡೆಸಿದರೆ ಏಕಾಂತವಾಗಿ ಶಿಕ್ಷಿಸುವರು.

ಇತರ ತಪ್ಪುಗಳಿಗೆ ಎಂದರೆ ಎಲ್ಲರೂ ಮಾಡಬಹುದಾದ ತಪ್ಪುಗಳಿಗೆ ಬಹಿರಂಗವಾಗಿ ಶಿಕ್ಷಿಸುವುದು ಇದರಿಂದ ಇತರರು ತಿದ್ದಿಕೊಳ್ಳುವಂತಾಗುವುದು.

(*f*) ಡಿಸ್ಮಿಸ್ ಮಾಡುವುದು-ಇದು ಕೊನೆಯ ದಂಡನೆ ಇದನ್ನು ವಿಧಿಸಿದರೆ ಈ ಹುಡುಗನನ್ನು ತಿದ್ದಲು ನಾವು ಸಮರ್ಥರಲ್ಲವೆಂದು ಉಪಾಧ್ಯಾಯರು ಒಪ್ಪಿಕೊಂಡಂತಾಗುವುದು. ಆದುದರಿಂದ ಯತ್ನವಿಲ್ಲದೆ ಬಂದರೆ ಅಂದರೆ ಒಬ್ಬನಿಂದಲೇ ಕೆಡುತ್ತಿದ್ದರೆ ಅಂತಹವರನ್ನು ಡಿಸ್ಮಿಸ್ ಮಾಡಬೇಕು. ಬಾಕಿಯ ಸಂದರ್ಭದಲ್ಲಿ ಇತರ ವಿಧವಾದ ದಂಡನೆಯನ್ನು ಉಪಯೋಗಿಸಿಕೊಂಡು ಹುಡುಗರನ್ನು ತಿದ್ದಬೇಕು. ದಂಡನೆಯ ವಿಷಯದಲ್ಲಿ ಕೆಲವು ಸಾಮಾನ್ಯ ನಿಯಮಗಳಾವುವೆಂದರೆ—

(1) ಹೆಚ್ಚಾದ ತಪ್ಪಿಗೆ ದಂಡಿಸಬೇಕೇ ಹೊರ್ತು ಸಣ್ಣಪುಟ್ಟ ತಪ್ಪಿಗೆಲ್ಲಾ ದಂಡಿಸಬಾರದು.

(2) ತಪ್ಪಿನ ಸ್ವರೂಪವನ್ನು ತಿಳಿದು ಅದಕ್ಕನುಸಾರವಾಗಿಯೂ ಆಯಾ ಹುಡುಗನ ಸ್ವಭಾವಕ್ಕೆ ಅನುಸಾರವಾಗಿಯೂ ದಂಡಿಸಬೇಕು.

(3) ದಂಡನೆಯಲ್ಲಿ ಆಗ್ರಹವಿರಕೂಡದು.

(4) ತಪ್ಪಿಗೆ ದಂಡನೆ ಆಗುವುದೆಂಬ ಖಂಡಿತವಿರಬೇಕು.

(5) ಬಾಲಕನ ವಯಸ್ಸು ಹೆಚ್ಚುತ ಹೆಚ್ಚು ದಂಡನೆಯನ್ನು ಕಡಿಮೆಮಾಡಬೇಕು. ಏಕೆಂದರೆ ದಂಡನೆಯು ಲಘುವಾದ ಉಪಾಯವಾದುದರಿಂದ ಚಿಕ್ಕತನಕ್ಕೆ ತಕ್ಕದ್ದೇ ಹೊರತು ವಯಸ್ಸಾದವರಿಗೆ ತಕ್ಕುದಲ್ಲ.

ಕೆಲವರು ಮಾಡಿದ ತಪ್ಪಿಗೂ ದಂಡನೆಗೂ ಸಹಜವಾದ ಸಂಬಂಧವಿರಬೇಕೆಂದೂ ಇಂತಹ ಸಂಬಂಧವಿಲ್ಲದಿರುವ ಕೃತ್ರಿಮದಂಡನೆಗಳೆಲ್ಲಾ ಲೋಕವಿರುದ್ಧವೆಂತಲೂ ಹೇಳುವರು. ಲೇಟಾಗಿ ಬಂದವನನ್ನು ಏಟು ಹೊಡೆಯುವುದು ಕೃತ್ರಿಮದಂಡನೆ ಇವಕ್ಕೆ ಬದಲು ಲೇಟಾಗಿ ಬಂದವವನನ್ನು ಲೇಟಾಗಿ ಕಳುಹಿಸುವುದು ಸಹಜವಾದ ದಂಡನೆ.

(1) ಸಹಜವಾದ ದಂಡನೆಯನ್ನು ವಿಧಿಸುವುದರಲ್ಲಿ ಕೆಲವು ಗುಣಗಳಿವೆ. ಮಗುವಿಗೆ ಕಾರ್ಯಕಾರಣಭಾವವು ಚೆನ್ನಾಗಿ ತಿಳಿಯುವುದು. ಏಕೆಂದರೆ ಮಾಡಿದ ತಪ್ಪಿಗೆ ಸಹಜವಾಗಿ ಉಂಟಾಗುವ ಫಲವನ್ನೇ ದಂಡನೆಯಾಗಿ ಮಾಡುವೆವು. ಲೇಟಾಗಿ ಕಳುಹಿಸಿದರೆ ಕಾರಣಕ್ಕೂ ಕಾರ್ಯಕ್ಕೂ ಸಂಬಂಧತೋರುವಹಾಗೆ ಬೆಂಚಿನಮೇಲೆ ನಿಲ್ಲಿಸಿದರೆ ತೋರುವುದಿಲ್ಲ.

(2) ಈ ವಿಧವಾದ ದಂಡನೆಯಿಂದ ಹುಡುಗರು ತಮ್ಮ ನಡತೆಯನ್ನು ತಾವೇ ತಿದ್ದಿಕೊಳ್ಳಲು ಕಾರಣವಾಗುವುದು.

(3) ವಿಧಿಸಿದ ದಂಡನೆಯು ನ್ಯಾಯವಾದುದೆಂಬ ನಂಬಿಕೆಯು ಹುಡುಗನಿಗೆ ಹುಟ್ಟುವುದರಿಂದ ಉಪಾಧ್ಯಾಯರ ವಿಷಯದಲ್ಲಿ ದುರಭಿಪ್ರಾಯ ಬರುವುದಿಲ್ಲ—

ಆದರೆ ಈ ವಿಧವಾದ ದಂಡನೆಗಳನ್ನು ವಿಧಿಸುವುದರಲ್ಲಿ ಕೆಲವು ತೊಂದರೆಗಳು ಬರುವುವು.

(1) ತಪ್ಪುಗಳಿಗೆಲ್ಲಾ ಈ ವಿಧವಾದ ದಂಡನೆಯನ್ನು ವಿಧಿಸಲಾಗುವುದಿಲ್ಲ. ಹೊಲಿಸಿಕೊಟ್ಟ ಅಂಗಿಯನ್ನು ತೊಟ್ಟುಕೊಳ್ಳದೆ ಹರಿದುಕೊಂಡರೆ ಹರಿದ ಅಂಗಿಯನ್ನು ಹಾಕಿಕೊಳ್ಳುವಂತೆ ಸ್ವಲ್ಪದಿವಸ ಮಾಡಬಹುದು. ಆದರೆ ಮಗುವು ಭಾವಿಯನ್ನು ಬಗ್ಗಿನೋಡುತ್ತಿದ್ದರೆ ಸುಮ್ಮನೆ ಬಿಡಲಾಗುವುದಿಲ್ಲ.

(2) ಮಕ್ಕಳಿಗೆ ದುರಾಲೋಚನೆ ಕಡಿಮೆಯಾಗಿರುವುದರಿಂದ ಈ ವಿಧವಾದ ದಂಡನೆಗಳಿಂದ ಫಲ ತೋರಬೇಕಾದರೆ ಸ್ವಲ್ಪಮಟ್ಟಿಗೆ ದುರಾಲೋಚನೆ ತೋರಬೇಕಾದ್ದರಿಂದಲೂ ಅಷ್ಟು ಪ್ರಯೋಜನಕಾರಿಯಾಗಲಾರದು.

(3) ಈ ವಿಧವಾದ ದಂಡನೆಯಿಂದ ಮಕ್ಕಳಲ್ಲಿ ಕಂಡುಬರುವ ತಪ್ಪುಗಳನ್ನು ತಿದ್ದುವುದು ಒಂದುವೇಳೆ ಸಾಧ್ಯವಾದರೂ ಅವರಲ್ಲಿ ಇಲ್ಲದಿರುವ ಸುಗುಣಗಳನ್ನು ನೆಲೆಗೊಳಿಸುವುದು ಅಷ್ಟು ಸಾಧ್ಯವಲ್ಲ.

ಆದರು ಈ ದಾರಿಯಿಂದ ಮಕ್ಕಳಿಗೂ ಉಪಾಧ್ಯಾಯರಿಗೂ ಶಾಂತಿಯು ಹೆಚ್ಚುವುದಕ್ಕೆ ಅವಕಾಶವಿರುವುದರಿಂದ ಮಕ್ಕಳ ನಡತೆಯನ್ನು ತಿದ್ದುವಾಗ ಸಾಧ್ಯವಾದಾಗಲೆಲ್ಲಾ ಸಹಜವಾದ ದಂಡನೆಯನ್ನೇ ಕೊಡಲು ಯತ್ನಿಸಬೇಕು. ಎಲ್ಲೆಲ್ಲಿ ಇದು ಕಷ್ಟವಾಗುವುದೋ ಅಂತಹ ಕಡೆಗಳಲ್ಲಿ ಬೇರೆ ಕ್ರಮಗಳನ್ನು ಅನುಸರಿಸಿ ಮಕ್ಕಳ ನಡತೆಯನ್ನು ತಿದ್ದುತಬರಬೇಕು.

ಒಟ್ಟಿನಲ್ಲಿ ನೀತ್ಯನುಶಾಸನವನ್ನು ಮೂರು ಬಗೆಯೆಂದು ಹೇಳಬಹುದು.

***1.* ಉಪದೇಶ ಮಾಡುವುದು**—ಅಂದರೆ ಇವು ಸುಗುಣಗಳು. ಆದ್ದರಿಂದ ಆಚರಣೆಯಲ್ಲಿ ತರಬೇಕು. ಇವುಗಳ ಸ್ವರೂಪವಿಂತಹುದು. ಇವು ದುರ್ಗುಣಗಳು. ಆದ್ದರಿಂದ ಇವನ್ನು ಬಿಡಬೇಕು. ಇವುಗಳ ಸ್ವರೂಪವಿಂತಹುದು. ಎಂದು ಮುಖತಃ ಬೋಧಿಸುವುದು ಉಪದೇಶವೆನ್ನಿಸಿಕೊಳ್ಳುವುದು. ಈ ಉಪದೇಶಕ್ಕಾಗಿಯೇ ಮಕ್ಕಳಿಗೆ ಆಗಾಗ್ಯೆ ಬುದ್ಧಿವಾದಗಳನ್ನು ಹೇಳುವುದೂ ಪಾಠಪುಸ್ತಕಗಳಲ್ಲಿ ನೀತಿಬೋಧಕವಾದ ಪಾಠಗಳನ್ನು ಸೇರಿಸಿ ಹೇಳಿಕೊಡುವುದು.

೨. ಮಾದರಿ—ಸಾಮಾನ್ಯವಾಗಿ ಗುಣಗಳೆಲ್ಲಾ ಸೂಕ್ಷ್ಮವಾಗಿರುವುವೇ ಹೊರತು ಸ್ಥೂಲವಾಗಿ ಪ್ರತ್ಯಕ್ಷವಾಗುವಂತೆ ಇರುವುದಿಲ್ಲ. ಆದ್ದರಿಂದ ಧೈರ್ಯವಂತನಾಗಿರಬೇಕು. ಸುಳ್ಳುಹೇಳದಿರಬೇಕು. ಇಂತಹ ಉಪದೇಶಗಳನ್ನು ಮಾತ್ರ ಮಾಡಿದರೆ ಮಕ್ಕಳಿಗೆ ಉಪದೇಶದ ಅಭಿಪ್ರಾಯವು ಸರಿಯಾಗಾಗುವುದಿಲ್ಲ. ಇತರ ಪಾಠಗಳಲ್ಲಿ ಸೂಕ್ಷ್ಮಾಂಶಗಳನ್ನು ಸ್ಥೂಲವಾದ ಮೂಲಕ ಹೇಗೆ ತಿಳಿಸುವೆವೋ ಅದೇ ರೀತಿಯಲ್ಲಿ ನೀತ್ಯನುಶಾಸನದಲ್ಲಿಯೂ ಸುಗುಣದುರ್ಗುಣಗಳಿಗೆ ಸ್ಥೂಲದೃಷ್ಟಾಂತರಗಳನ್ನು ಕೊಡಬೇಕು. ಇದರಿಂದ ಆಯಾ ಗುಣಗಳ ಸ್ವರೂಪವು ಮಂದಟ್ಟಾಗುವುದರಿಂದ ಹೇಗೆ ನಡೆದುಕೊಳ್ಳಬೇಕೆಂಬುದು ಮಗುವಿಗೆ ಸ್ಪಷ್ಟವಾಗುವುದು ಹೀಗೆ ಮಾಡುವುದಕ್ಕೆ ನೀತ್ಯನುಶಾಸನದಲ್ಲಿ ನಿದರ್ಶನ ಅಥವ ಮಾದರಿಯನ್ನು ತೋರಿಸುವುದೆಂದು ಹೆಸರು. ಮಾದರಿಗಳಿಲ್ಲದ ಉಪದೇಶವು ಪ್ರಾಯಶಃ ವ್ಯರ್ಥವೇ ಆಗುವುದು. ಆದ್ದರಿಂದ ಬುದ್ಧಿವಾದ ಹೇಳುವಾಗಲೆಲ್ಲಾ ಸ್ಥೂಲವಾದ ಮಾದರಿಯನ್ನು ಆಯಾಗುಣಕ್ಕೆ ತೋರಿಸಬೇಕು. ಈ ಮಾದರಿಯಲ್ಲಿ ಮಗುವಿಗೆ ಪರಿಚಿತವಾದರೆ ಉತ್ತಮ. ಉದಾ;—ಮೇಲಿನ ತರಗತಿ ಹುಡುಗ, ಅಣ್ಣ, ನೆರೆಯವನು ಇಂತಹವರು.

ಹೀಗೆ ಪರಿಚಿತವಾದ ಮೇಲುಪಙ್ಕ್ತಿಗಳಲ್ಲೆಲ್ಲಾ ಉಪಾಧ್ಯಾಯರ ಮತ್ತು ತಾಯಿತಂದೆಗಳ ಮೇಲುಪಙ್ಕ್ತಿಯು ಶ್ರೇಷ್ಠವಾದುದು. ಇವುಗಳ ಜೊತೆಗೆ ಪುರಾಣಪ್ರಸಿದ್ಧವಾದ ಮಹನೀಯರನ್ನು ಮೇಲುಪಙ್ಕ್ತಿಯಾಗಿ ಮಕ್ಕಳಿಗೆ ತೋರಿಸಬಹುದು. ಮುಖ್ಯವಾಗಿ ಸ್ಥೂಲವಾದ ಮಾದರಿ ಇದ್ದಹೊರತು ಮಕ್ಕಳಿಗೆ ಕೆಟ್ಟತನವನ್ನು ಬಿಡುವುದಕ್ಕೇ ಆಗಲಿ ಒಳ್ಳೆಯತನವನ್ನು ಕಲಿಸುವುದಕ್ಕೇ ಆಗಲಿ ದಾರಿ ತೋರುವುದಿಲ್ಲ.

೩. ಕೆಲಸಮಾಡಿಸುವುದು—ನೀತ್ಯನುಶಾಸನದಲ್ಲಿ ಮೇಲೆ ಹೇಳಿದ ಎರಡು ಉಪಾಯಗಳಿಂದಲೂ ಕಾಲುಪಾಲು ಕೆಲಸ ಸಹಿತ ಆಗುವುದಿಲ್ಲವೆಂದು ಹೇಳಬಹುದು. ನೀತ್ಯನುಶಾಸನದಲ್ಲಿ ಮುಖ್ಯವಾದುದು ಕೆಲಸಮಾಡಿಸುವುದು ಅಂದರೆ ಒಳ್ಳೆಯಗುಣಗಳಿಗನುಸಾರವಾಗಿ ಕೆಲಸಮಾಡಿಸಿ ಕಾಲಕ್ರಮವಾಗಿ ಅವರಲ್ಲಿ ಆ

ಗುಣವನ್ನು ನೆಲೆಗೊಳಿಸುವುದು. ಇದರ ಜತೆಗೆ ಕೆಟ್ಟ ಗುಣಗಳಿದ್ದರೆ ಅವುಗಳು ಹೊರ ಪಡುವುದಕ್ಕೆ ಅವಕಾಶ ಕೊಡದೆ ಕಾಲಕ್ರಮವಾಗಿ ಅವುಗಳನ್ನು ಶಿಥಿಲಪಡಿಸು ವುದು. ಇದನ್ನೇ ಸುಶೀಲೋತ್ಪಾದನೆಯೆಂದೂ ದುಃಶೀಲೋತ್ಪಾಟನೆಯೆಂದೂ ಹೇಳು ವರು. ಮುಖ್ಯವಾಗಿ ಕೆಲಶಮಾಡಿದರೆ ಕೆಲಸಮಾಡುವ ಶಕ್ತಿಯು ಬಲಪಡುವುದು ಕೆಲಸಮಾಡದೆ ಬಿಟ್ಟರೆ ಕೆಲಸಮಾಡುವ ಶಕ್ತಿಯು ಕುಗ್ಗುವುದು. ಆದ್ದರಿಂದಲೇ ಮಕ್ಕಳಲ್ಲಿ ಯಾವ ಗುಣಗಳನ್ನು ಉಂಟುಮಾಡಬೇಕೋ ಅವುಗಳಿಗೆ ತಕ್ಕಂತೆ ನಿತ್ಯವೂ ತಪ್ಪದೆ ಬಹುಕಾಲ ಕೆಲಸಮಾಡಿಸಬೇಕು. ಯಾವ ಗುಣಗಳನ್ನು ತಪ್ಪಿಸಬೇಕೋ ಆಗುಣಗಳಿಗೆ ತಕ್ಕಂತೆ ಕೆಲಸಮಾಡಿಸದೆ ಇರುವಂತೆ ನೋಡಿಕೊಳ್ಳಬೇಕು. ಇದರಿಂದ ಕಾಲಕ್ರಮೇಣ ಆಗುಣಗಳು ಕಡಿಮೆಯಾಗುವುವು. ಆದ್ದರಿಂದಲೇ ನೀತ್ಯನುಶಾಸನ ದಲ್ಲಿ ಉಪದೇಶವಿಲ್ಲದಿದ್ದರೂ ನಿದರ್ಶನಗಳು ಕಡಿಮೆಯಾದರೂ ಸದ್ವೃತ್ತಿಯನ್ನು ಮಾತ್ರ ಇಟ್ಟುಕೊಳ್ಳಲೇಬೇಕು. ಇದಕ್ಕೆ ಮುಖ್ಯವಾಗಿ ಸತ್ಸಹಾಯವು ಸಹಾಯ ಕವಾಗುವುದು ಉದ್ದೇಶವಿದ್ದರೆ ಮತ್ತಷ್ಟು ಒಳ್ಳೆಯದು.

ಸಂಪೂರ್ಣಂ.

ಪ್ರಕೃತಿಶಾಸ್ತ್ರ.

ಭೂಮಿಯಮೇಲೆ ಸಸ್ಯವರ್ಗದ ಮತ್ತು ಪ್ರಾಣಿವರ್ಗದ ಪ್ರಸರಣ.

ಮನುಷ್ಯನು ಕಾಡುಮೃಗಗಳ ಸ್ಥಿತಿಯಿಂದ ಪ್ರಾರಂಭಿಸಿ ಕ್ರಮಕ್ರಮವಾಗಿ ಈಗಿನ ನಾಗರಿಕತೆಯ ಸ್ಥಿತಿಗೆ ಏರುತ್ತ ಬಂದಿರುದಕ್ಕೆಲ್ಲ ಈ ಭೂಗೋಳವೇ ಮುಖ್ಯ ಸಹಾಯಕವಾಗಿದೆ. ಭೂಮ್ಯುತ್ಪನ್ನಗಳನ್ನೂ ಪಾರ್ಥಿವಶಕ್ತಿಗಳನ್ನೂ ಉಪಯೋಗಿಸಿಕೊಂಡೇ ಮನುಷ್ಯನು ಇಷ್ಟು ಉತ್ತಮಪದವಿಯನ್ನು ಪಡೆದಿರುವುದು.

ವಾಯುವು ಎಷ್ಟೋ ಕೋಟಿ ವರ್ಷಗಳಿಂದಲೂ ನೆಲದಮೇಲೂ ನೀರಿನ ಮೇಲೂ ಬೀಸುತ್ತ ಮಳೆಯನ್ನೂ ಅಲೆಗಳನ್ನೂ ಪ್ರವಾಹಗಳನ್ನೂ ಉಂಟು ಮಾಡುತ್ತಲೇ ಇರುವುದಾದರೂ ಮನುಷ್ಯನು ಕಾಡುಮೃಗದ ಅವಸ್ಥೆಯಲ್ಲಿದ್ದಾಗ ವಾಯುವಿನ ಸ್ವರೂಪವನ್ನೇ ಅರಿಯದೆ ಇದ್ದನು. ಅವನು ಬಾವುಟದ ದೋಣಿಗಳನ್ನೂ ಗಾಳಿಯ ಯಂತ್ರವನ್ನು ಕಂಡುಹಿಡಿದಾಗ ಅವನಿಗೆ ವಾಯುವಿನ ಉಪಯೋಗವು ತಿಳಿಯಲಾರಂಭವಾಯಿತು. ಹೀಗೆಯೇ ಬೆಟ್ಟಗಳ ಕಣಿವೆಗಳಲ್ಲೂ ಬಂಡೆಗಳಮೇಲೂ ಎಷ್ಟೋ ಕಾಲದಿಂದ ಪ್ರವಾಹಗಳು ಹರಿಯುತ್ತಲಿದ್ದರೂ ಆದಿಯಲ್ಲಿ ಇವನೇನೋ ಮೂಢನಾಗಿಯೇ ಇದ್ದನು. ಆದರೆ ಇವನು ಆಹಾರೋಪಯೋಗಿವಸ್ತುಗಳಿಗಾಗಿ ನದಿಗಳ ಪ್ರವಾಹಗಳ ಬಳಿಯಲ್ಲಿ ಸಸ್ಯಗಳನ್ನು ಬೆಳೆಯುತ್ತ ಅವುಗಳ ಸಹಾಯವನ್ನು ಉಪಯೋಗಿಸಿಕೊಂಡಾಗ ನದಿಗಳ ಪ್ರಯೋಜನವೂ ತಿಳಿಯತೊಡಗಿತು. ಕಾಲಕ್ರಮೇಣ ಜಲಪಾತಗಳ ಶಕ್ತಿಗಳನ್ನೂ ಉಪಯೋಗಿಸಿಕೊಂಡು ಅನೇಕ ಯಂತ್ರಗಳನ್ನೂ ಕಲ್ಪಿಸಿಕೊಂಡನು.

ಭೂಮಿಯಲ್ಲಿರುವ ಆಕರ್ಷಣಶಕ್ತಿಯ ಮಹಿಮೆಯನ್ನು ಇಷ್ಟಿಷ್ಟೆಂದು ಹೇಳಲಸಾಧ್ಯ. ಆದರೂ ಎಷ್ಟೋಕಾಲದವರೆಗೆ ಯಾರಿಗೂ ಈಯಂಶವು ಗೊತ್ತೇ ಇರಲಿಲ್ಲ. ಹೀಗೆಯೇ ಸಕಲವಿಧವಾದ ಕೈಗಾರಿಕೆಗಳಿಗೂ ಮೂಲಾಧಾರವಾದ ಕಲ್ಲಿದ್ದಲು ಕಬ್ಬಿಣ ಇವು ಭೂಮಿ ಅಂತರ್ಗರ್ಭದಲ್ಲೇ ಅಡಗಿದ್ದರೂ ಅವನ್ನು ಉಪಯೋಗಿಸಿಕೊಳ್ಳುವ ಚಾತುರ್ಯವು ಯಾರಿಗೂ ಇರಲಿಲ್ಲ. ಈಗಲಾದರೋ ಯಾರು ಈ ಎರಡರ

ಪೂರ್ಣ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಲಿರುವರೋ ಅವರೇ ಒಟ್ಟು ಈ ಭೂಲೋಕವನ್ನೆಲ್ಲ ವಶಪಡಿಸಿಕೊಳ್ಳಬಲ್ಲ ಚೈತನ್ಯವುಳ್ಳವರು ಎಂಬುದು ನಿರ್ಧರವಾಗಿದೆ

ಈ ಭೂಲೋಕದಲ್ಲಿ ಎಷ್ಟೋ ಕಾಲದಿಂದ ಸಸ್ಯಗಳೂ ಪ್ರಾಣಿಗಳೂ ವಾಸವಾಗಿದ್ದವೆಂಬುದಕ್ಕೆ ಹಲವು ದೃಷ್ಟಾಂತಗಳಿವೆ. ಅನೇಕ ಬಂಡೆಗಳ ಪದರಗಳಲ್ಲಿ ಕೂಡ ಸಸ್ಯಗಳ ಮತ್ತು ಪ್ರಾಣಿಗಳ ದೇಹಭಾಗಗಳು ದೊರೆಯುತ್ತವೆ.

ಸಚೇತನವರ್ಗದ ವಸ್ತುಗಳು ಸರ್ವತ್ರಸಮವಾಗಿರುರುವಂತೆ ಪ್ರಸರಿಸಲು ಸ್ವಾಭಾವಿಕವಾದ ಕೆಲವು ಅಡಚಣೆಗಳುಂಟು. ನೆಲದಮೇಲಿನ ಸಸ್ಯಪ್ರಾಣಿಗಳು ಒಂದು ಸ್ಥಳದಿಂದ ಮತ್ತೊಂದು ದೂರಪ್ರಾಂತ್ಯದ ನೆಲಕ್ಕೆ ಹೋಗಲು ಸಮುದ್ರವು ಅಡ್ಡಿಯಾಗಿದೆ. ಅಂತಹ ಸಸ್ಯಪ್ರಾಣಿಗಳು ವಾಯುವಿನ ಅಥವಾ ನೀರಿನ ಮೂಲಕವಾಗಿಯೇ ಹಾಗೆ ಹೊರಡಬೇಕಾಗಿದೆ. ಹಾಗೆ ಜಲಚರಗಳು ಒಂದೆಡೆಯಿಂದ ಮತ್ತೊಂದೆಡೆಗೆ ಹೋಗುವುದಕ್ಕೆ ನೆಲವು ಅಡ್ಡಿಯಾಗಿದೆ. ಉಷ್ಣವಲಯದಲ್ಲಿರತಕ್ಕವುಗಳು ಶೀತವಲಯಗಳಲ್ಲಿ ಬದುಕಲಾರವು. ಹೀಗೆಯೇ ಹುಲ್ಲು ಮೇಯುವ ಪ್ರಾಣಿಗಳು ಮರುಭೂಮಿಯಲ್ಲಿ ಅಥವಾ ಕಗ್ಗಾಡಿನ ಪ್ರದೇಶಗಳಲ್ಲಿ ಬಾಳಲಾರವು.

ದಪ್ಪವಾದ ಬೀಜಗಳುಳ್ಳ ತೆಂಗು ಮೊದಲಾದ ಸಸ್ಯಗಳು ತಮ್ಮ ತಮ್ಮ ತಾಯಿಮರಗಳಿಂದಲೇ ನಿದಾನವಾಗಿ ಹರಡುವುವು. ಬಲು ಸಣ್ಣಗೆ ಅಥವಾ ಹಗುರವಾಗಿ ಇರುವ ಬೀಜಗಳುಳ್ಳ ಸಸ್ಯಗಳು ಗಾಳಿಯಿಂದ ಅಥವಾ ಪಕ್ಷಿಗಳ ಮೂಲಕ ಬಲುಬೇಗ ಹರಡುವುವು. ಈರೀತಿಯಾಗಿ ಕೆಲವು ಸಸ್ಯಗಳು ಲೋಕವೆಲ್ಲ ಹರಡಿಕೊಂಡಿವೆ. ಹವಳದ ಹುಳು ಮುಂತಾದ ಕೆಲವು ಪ್ರಾಣಿಗಳು ಸಮುದ್ರದ ತಳದಲ್ಲಿ ನೀರಿನೊಳಗೆ ಇದ್ದು ಅಲೆಗಳಿಂದ ಮತ್ತು ಪ್ರವಾಹಗಳಿಂದ ಹೊಡೆದುಕೊಂಡು ಬರುವ ಆಹಾರವನ್ನು ಪಡೆದು ಜೀವಿಸುತ್ತೇವೆ. ನೆಲದಲ್ಲಿ ಬೇರೂರಿ ಬೆಳೆಯುವ ಗಿಡಗಳು ಆಹಾರಕ್ಕೋಸ್ಕರ ತಾವು ಎಲ್ಲೂ ಹೊರಗೆ ಹೋಗಲಾರದಿದ್ದರೂ ಎಲ್ಲೆಲ್ಲೂ ತಮ್ಮ ವಂಶಾಭಿವೃದ್ಧಿಗೋಸ್ಕರ ತಮ್ಮ ಬೀಜಗಳನ್ನು ಕಳುಹಿಸುವುವೆಂದಾಯಿತು. ಸೂಕ್ಷ್ಮವಾದ ಪ್ರಾಣಿಗಳೂ ಹೀಗೆಯೇ ಸರ್ವತ್ರ ಹರಡುವುವು. ಸಶೇಷ.

J. K.

ಗ್ರಂಥವಿಮರ್ಶೆ.

ತತ್ವಸಂಗ್ರಹರಾಮಾಯಣ—ಇದೊಂದು ಪುರಾತನ ಸಂಸ್ಕೃತಗ್ರಂಥವು. ಆಸ್ಥಾನ ಪಂಡಿತರೂ ಮೈಸೂರು ಸದ್ವಿದ್ಯಾಶಾಲಾಧ್ಯಕ್ಷರೂ ಆದ ವೇ|| ಬ್ರಂ|| ಗುಂಡಶಾಸ್ತ್ರಿಗಳು, ಈ ಸರ್ವೋತ್ತಮ ಗ್ರಂಥವನ್ನು ಸುಲಲಿತವಾದ ಟೀಕಾವಿವರಣೆಗಳೊಡನೆ ಮುದ್ರಿಸಲುಪಕ್ರಮಿಸಿ, ಬಾಲಕಾಂಡ ಅಯೋಧ್ಯಾಕಾಂಡಗಳುಳ್ಳ ಪ್ರಥಮ ಸಂಪುಟವನ್ನು ನಮಗೆ ಕಳುಹಿಸಿರುವರು. ಇದನ್ನು ನಾವು ಅತ್ಯಾದರದೊಡನೆ ಸ್ವೀಕರಿಸಿ, ಆಮೂಲಾಗ್ರವಾಗಿ ಪರಿಶೀಲಿಸಿದೆವು. ಇದರಲ್ಲಿರುವ ಶ್ರೀರಾಮಚಂದ್ರನ ಕಥೆಯಲ್ಲಿನ ಅನೇಕ ರಹಸ್ಯಗಳೂ, ವೇದಾಂತತತ್ವಗಳೂ, ಅತ್ಯುತ್ತಮವಾದ ಸ್ತೋತ್ರಗಳೂ, ನಮ್ಮ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿದುವು. ಈ ಸಂಚಿಕೆಯೊಡನೆ ಕಳುಹಿಸಿರುವ ಪ್ರಕಟನ ಪತ್ರಿಕೆಯನ್ನು ನೋಡಿದರೆ, ಅದರ ವಿಷಯವೆಲ್ಲ ಗೊತ್ತಾಗುವುದು. ಇಂತಹ ಪುರಾತನವೂ ಸರ್ವೋತ್ತಮವೂ ಸರ್ವರಿಗೂ ಅತ್ಯಾವಶ್ಯಕವೂ ಆದ ಈ ಗ್ರಂಥವನ್ನು ಪರಿಷ್ಕರಿಸಿ ಟೀಕೆಯನ್ನೂ ರಚಿಸಿ ಕನ್ನಡ ದೇಶೀಯರಿಗೆಲ್ಲ ಇದು ಸುಲಭವಾಗುವಂತೆ ಮಾಡಿದ ವೇ|| ಶಾಸ್ತ್ರಿಗಳವರ ಪ್ರಯತ್ನವು ಕೇವಲ ಸ್ತುತ್ಯವಾಗಿರುವುದು. ಶ್ರೀರಾಮನಲ್ಲಿ ಭಕ್ತಿಯುಳ್ಳವರೂ, ಕನ್ನಡಭಾಷೆಯಲ್ಲಿ ಅಭಿಮಾನವುಳ್ಳವರೂ, ಈ ಗ್ರಂಥವನ್ನು ಸ್ವೀಕರಿಸುದರದ್ವಾರಾ, ಗ್ರಂಥಕರ್ತರಿಗೆ ಪ್ರೋತ್ಸಾಹಕೊಟ್ಟು ಇನ್ನೂ ಇಂತಹ ಉತ್ತಮ ಗ್ರಂಥಗಳು ಕನ್ನಡ ಭಾಷೆಯಲ್ಲಿ ಅವತರಿಸುವಂತೆ ಮಾಡುವರೆಂದು ನಂಬಿರುವೆವು.

❁ ವಿದ್ಯಾದಾಯಿನಿ ❁

(A Monthly Journal.)

ಭಾಗ ೨೨] ಅಕ್ಟೋಬರ್—೧೯೧೪. ಸಂಚಿಕೆ ೧೦

ವಿದ್ಯಾಭ್ಯಾಸವೂ ಪ್ರಭುತ್ವವೂ.

ರಾಜ್ಯಭಾರಮಾಡತಕ್ಕವರು ವಿದ್ಯಾರ್ಥಿಗಳ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಈದಿನ ವಿದ್ಯಾರ್ಥಿಗಳಾಗಿರತಕ್ಕವರು ಕಾಲಕ್ರಮದಲ್ಲಿ ಉದ್ಯೋಗಿಗಳಾಗುತ್ತಾರೆ. ಪ್ರತಿಒಬ್ಬ ಮನುಷ್ಯನೂ ಅವನವನ ಉದ್ಯೋಗದಲ್ಲಿ ದಕ್ಷನಾಗುವಂತೆಯೂ ತನ್ನ ಬುದ್ಧಿಗೂ ಕೈಗಳಿಗೂ ಧರ್ಮವಾದ ವ್ಯಾಪಾರಗಳನ್ನು ಕಲ್ಪಿಸಿ ರಾಜ್ಯವು ರಾಮರಾಜ್ಯವಾಗುವಂತೆ ಮಾಡುವುದಕ್ಕೂ ಈಗಿನ ವಿದ್ಯಾರ್ಥಿಗಳು ಸಮರ್ಥರಾಗುವಂತೆ ಮಾಡುವುದು ಸರಕಾರಕ್ಕೆ ಮುಖ್ಯಕರ್ತವ್ಯ. ಈ ಕರ್ತವ್ಯವನ್ನು ಮಾಡುವುದರಲ್ಲಿ ಸರಕಾರದವರು ಅಲಸರಾದರೆ ದುಷ್ಟರ ಸಂಖ್ಯೆಯು ಹೆಚ್ಚುವುದು. ದುಷ್ಟನಿಗ್ರಹಕ್ಕೋಸ್ಕರ ಪೋಲಿಸ್‌ನವರೂ ಸೈನಿಕರೂ ಕೋರ್ಟುಗಳೂ ಕಚೇರಿಗಳೂ ಜೈಲುಗಳೂ ಬೇಕಾಗುತ್ತವೆ. ಇವುಗಳಲ್ಲಿ ನಿಯಮಿಸಲ್ಪಡತಕ್ಕವರೆಲ್ಲರೂ ಧರ್ಮಮಾರ್ಗೈಕಪರಾಯಣರಾಗಿರುವುದು ಅಪೂರ್ವ. ಅವರಲ್ಲಿ ದುಷ್ಟರನ್ನು ನಿಗ್ರಹಿಸುವುದಕ್ಕೋಸ್ಕರ ಬೇರೇ ಏರ್ಪಾಡುಗಳಾಗಬೇಕಾಗುತ್ತದೆ. ರಾಜ್ಯಭಾರಮಾಡತಕ್ಕವರು ದೂರದೃಷ್ಟಿಯುಳ್ಳವರಾಗಿಯೂ ಪೂರ್ವಾಪರಜ್ಞರಾಗಿಯೂ ಜನಗಳು ಸನ್ಮಾರ್ಗಪ್ರವರ್ತಕರಾಗುವುದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡುವುದರಲ್ಲಿ ಜಾಗರೂಕರಾಗಿಯೂ ಇರತಕ್ಕದ್ದು ಅವಶ್ಯಕ.

ಎಲ್ಲಾ ಹುಡುಗರೂ ಆತ್ಮಾವಲಂಬಿಗಳಾಗುವುದಕ್ಕೆ ಸಾಧಕವಾದ ವಿದ್ಯಾಭ್ಯಾಸವನ್ನು ಹೊಂದಬೇಕು. ಆತ್ಮಾವಲಂಬನೆಗೆ ದೇಹಶಕ್ತಿಯೂ ಬುದ್ಧಿಶಕ್ತಿಯೂ ಎರಡೂ ಆವಶ್ಯಕ. ಸ್ತ್ರೀಪುರುಷರೆಲ್ಲರೂ ಮೇಧಾವಿಗಳಾಗಬೇಕೆಂದು ಸರಕಾರದವರು ಅಪೇಕ್ಷಿಸುವುದು ಸಹಜವೇಸರಿ. ಆದರೆ ಎಲ್ಲರೂ ಆರೋಗ್ಯದೃಢಕಾಯರಾಗಿರಬೇಕೆಂದು ಅಪೇಕ್ಷಿಸುವುದುಕೂಡ ಅತ್ಯಾವಶ್ಯಕ. ದೇಹಬಲವಿಲ್ಲದವರಿಗೆ ಬುದ್ಧಿಬಲವೂ ಎಂದಿಗೂ ಉಂಟಾಗಲಾರದು. ನಾನಾವಿಧವಾದ ರೋಗಗಳಿಂದ ನರಳತಕ್ಕವರಿಗೆ ತೀಕ್ಷ್ಣವಾದಬುದ್ಧಿಯು ಎಂದಿಗೆ ತಾನೇ ದೊರೆಯುವುದು. ಪೂರ್ವಾಪರಜ್ಞತೆಯು ರೋಗಪೀಡಿತರಾದವರಿಗೆ ಎಂದಿಗಾದರೂ ಉಂಟಾಗುವುದೇ ಎಂದಿಗೂ ಉಂಟಾಗುವುದಿಲ್ಲವೆಂದು ಖಂಡಿತವಾಗಿಹೇಳಬಹುದು. ಬಾಲ್ಯದಲ್ಲಿ ದೇಹವು ಅನೇಕ ಅಂಟುರೋಗಗಳಿಗೆ ಗುರಿಯಾಗುವುದು. ಮಕ್ಕಳಿಗೆ ಆಹಾರವಿಹಾರಗಳಲ್ಲಿ ಹೇಗೆ ಕ್ಲಿಪ್ತವಾಗಿರಬೇಕೋ ಅದು ಗೊತ್ತಾಗುವುದಿಲ್ಲ. ಆರೋಗ್ಯವಿಧಿಗಳಿಗೆ ವಿರೋಧವಾದ ಕರ್ಮಗಳು ಅಜ್ಞಾನದಿಂದ ಪ್ರತಿನಿತ್ಯದಲ್ಲಿಯೂ ದೊಡ್ಡವರಿಂದಲೂ ಮಾಡಲ್ಪಡುವುವು. ಹುಡುಗರು ಆರೋಗ್ಯವಿಧಿಗಳನ್ನತಿಕ್ರಮಿಸಿ ನಡೆಯುವುದು ಆಶ್ಚರ್ಯವಲ್ಲ. ಆರೋಗ್ಯವಿಧಿಗಳ ಅತಿಕ್ರಮಣಕ್ಕೆ ಸ್ವಭಾವಸಿದ್ಧವಾದ ಶಿಕ್ಷೆಯು ತಪ್ಪುವುದಿಲ್ಲ. ಶುಭಾಶುಭಕರ್ಮಗಳಿಗೆ ಶುಭಾಶುಭ ಫಲಗಳಾಗುವುದು ಸ್ವಭಾವಸಿದ್ಧವಾದದ್ದು. ಬೆಂಕಿಯನ್ನು ಮುಟ್ಟಿದರೆ ಅದು ಸುಟ್ಟೀಸುಡುವುದು. ವಿಷವನ್ನು ಸೇವಿಸಿದರೆ ಪ್ರಾಣವು ಹೋಗುವುದು. ಆರೋಗ್ಯವಿಧಿಗಳನ್ನು ಅತಿಕ್ರಮಿಸಿ ನಡೆದರೆ ರೋಗಾದಿಗಳು ಬರುವುದಲ್ಲದೆ ಅಕಾಲಮರಣಕ್ಕೂ ಅವಕಾಶವಾಗುವುದು. ಯಾವಪುರುಷಾರ್ಥಪ್ರಾಪ್ತಿಯಾಗಬೇಕಾದರೂ ಅದರ ಸಾಧನೆಗೆ ಅನುಕೂಲವಾದ ಪ್ರಯತ್ನಗಳು ಮಾಡಲ್ಪಡಬೇಕು. ಯಾವ ಅನರ್ಥನಿವಾರಣೆಯಾಗಬೇಕಾದರೂ ಅದಕ್ಕೆ ಸಾಧಕವಾದ ಕೆಲಸಗಳು ಮಾಡಲ್ಪಡಬೇಕು.

ಸಾಮಾನ್ಯವಾಗಿ ಜನಗಳಿಗೆ ಧರ್ಮಾರ್ಥಕಾಮಮೋಕ್ಷಗಳೇ ಮುಖ್ಯ ಉದ್ದೇಶಗಳು. ಇವುಗಳಲ್ಲಿ ಧರ್ಮವೂ ಮೋಕ್ಷವೂ ಬಹಳ ದೊಡ್ಡ ಇಷ್ಟಾರ್ಥ

ಗಳು. ಧರ್ಮವು ಮೋಕ್ಷಕ್ಕೆ ಸಾಧಕವಾದದ್ದು. ಆದುದರಿಂದ ಸಮಸ್ತ ಇಷ್ಟಾರ್ಥಗಳಲ್ಲಿಯೂ ಧರ್ಮವೇ ಅತ್ಯಂತ ಉಪಾದೇಯವಾದುದು. ಧರ್ಮವು, ಅರ್ಥವೂ, ಕಾಮವೂ, ಸಮೀಚೀನವಾಗಿಯೂ, ಅಸಮೀಚೀನವಾಗಿಯೂ ಇರುವುದುಂಟು. ದುರ್ಮಾರ್ಗದಲ್ಲಿ ವಿನಿಯೋಗಿಸಲ್ಪಟ್ಟ ಅರ್ಥವೂ, ಕಾಮವೂ ಅಧರ್ಮವಾಗಿ ಪರಿಣಮಿಸುವುದರಿಂದ ಮೋಕ್ಷಕ್ಕೆ ಕುಠಾರಪ್ರಾಯವಾಗುವುದು. ಆದುದರಿಂದ ಇಹಪರಸಾಧನೆಗಳಿಗೆ ಧರ್ಮದಷ್ಟು ಯಾವ ಪುರುಷಾರ್ಥವೂ ಸಾಧಕವಾಗುವುದಿಲ್ಲ. ಜನಗಳು ಅಧರ್ಮಿಷ್ಠರಾದರೆ ಅಲ್ಪಸ್ವಲ್ಪ ಅನರ್ಥಗಳಿಗೆ ಅವಕಾಶವಾಗುವುದು. ಜನಾಂಗವೇ ಅಧರ್ಮಕ್ಕೆ ಬಿದ್ದರೆ ಅದರಿಂದ ಉಂಟಾಗತಕ್ಕ ಅನರ್ಥಕ್ಕೆ ಮೊದಲು ಕೊನೆ ಇರುವುದಿಲ್ಲ. ಮಹಾಜನಗಳು ಧರ್ಮಿಷ್ಠರಾಗಿಯೂ ಪಾಪಭೀತರಾಗಿಯೂ ರಾಜಭಕ್ತಿವಿಶ್ವಾಸವುಳ್ಳವರಾಗಿಯೂ ಇರಬೇಕಾದರೆ ಅವರು ಬಾಲ್ಯದಿಂದ ಸುಶಿಕ್ಷಿತರಾಗಬೇಕು. ಸಕಲ ಇಷ್ಟಾರ್ಥಪ್ರಾಪ್ತಿಗೂ ಆರೋಗ್ಯವು ಮುಖ್ಯಕಾರಣ. ಆರೋಗ್ಯವುಂಟಾಗಬೇಕಾದರೆ ಬಾಲ್ಯದಿಂದ ಜನಗಳಿಗೆ ಪುಷ್ಟಿಯಾದ ಆಹಾರವೂ ಶಾಖವನ್ನು ರಕ್ಷಿಸುವ ಬಟ್ಟೆಯೂ ಆವಶ್ಯಕ. ಇದಲ್ಲದೆ ಬೆಳಕೂ ಗಾಳಿಯುಸಂಚಾರವಿರತಕ್ಕ ಮನೆ, ಸೌಜನ್ಯ ಮೊದಲಾದುವುಗಳು ಕೂಡ ಅತ್ಯಾವಶ್ಯಕ. ಈ ಸಂಪತ್ತುಗಳನ್ನು ಹೊಂದಿ ಆರೋಗ್ಯವಿಧಿಗಳಿಗನುಸಾರವಾಗಿ ನಡೆಯುತ್ತಾಬಂದರೆ ಜನಗಳು ಬಲಿಷ್ಠರಾಗಿಯೂ ದೀರ್ಘಾಯುವುಳ್ಳವರಾಗಿಯೂ ಆಗುವರು. ಹೀಗಾಗುವುದೇ ಇಲ್ಲವೇ ಎಂದು ನೋಡಿಕೊಳ್ಳುವುದಕ್ಕೋಸ್ಕರ ಡಾಕ್ಟರುಗಳು ಪಾಠಶಾಲೆಗಳನ್ನು ಇನ್ಸ್ಪೆಕ್ಟ್ ಮಾಡಿ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಅರೋಗದೃಷ್ಕಾಯವು ಇರುವುದೇ ಇಲ್ಲವೇ ಎಂಬುದನ್ನು ಪರೀಕ್ಷಿಸಿ ಅವರಿಗೆ ಆರೋಗ್ಯಭಾಗ್ಯವುಂಟಾಗುವ ಏರ್ಪಾಡುಗಳನ್ನು ಮಾಡುವುದು. ಇದಲ್ಲದೆ ಶಾನೇ ಬಡವರಮಕ್ಕಳ ದೇಹಸ್ಥಿತಿಯು ಚನ್ನಾಗಿದೆಯೋ ಇಲ್ಲವೇ ಎಂಬುದನ್ನು ಪರಿಣಾಮಿಸುವುದು.

ಮಕ್ಕಳ ಅನಾರೋಗ್ಯಕ್ಕೆ ಪುಷ್ಟಿಯನ್ನುಂಡುಮಾಡತಕ್ಕ ಆಹಾರವು ಇಲ್ಲದೆ ಇರುವುದು ಹೇಗೆ ಕಾರಣವೋ ಹಾಗೆಯೇ ಹೆಚ್ಚು ತಿಂಡಿಯನ್ನು ತಿನ್ನುವುದು ಕೂಡ ಮುಖ್ಯ ಕಾರಣ. ಉಪಪನ್ನರ ಮಕ್ಕಳು ಮಿತಿಯಿಲ್ಲದೆ ತಿಂದು ರೋಗಗಳನ್ನು

ತಂದುಕೊಳ್ಳುವುದು. ಅಮೃತವೂ ಕೂಡ ಹೆಚ್ಚಾಗಿ ಸೇವಿಸಲ್ಪಟ್ಟರೆ ವಿಷವಾಗಿ ಪರಿಣಮಿಸುವುದು. ಆರೋಗ್ಯಕ್ಕೆ ಸಕಲ ಆಹಾರವಿಹಾರಗಳಲ್ಲಿಯೂ ಮಿತಿಯುಳ್ಳವರಾಗಿರಬೇಕು. ಅತಿ ಸರ್ವತ್ರವರ್ಜಯೇತ್ ಎಂಬ ಕಟ್ಟಳೆಯನ್ನು ಅನುಷ್ಠಾನದಲ್ಲಿಟ್ಟುಕೊಂಡಿರಬೇಕು. ಬುದ್ಧಿಯು ಚುರುಕಾಗಿರಬೇಕಾದರೆ ದೇಹಕ್ಕೆ ಆರೋಗ್ಯವು ಇರಬೇಕು. ರೋಗದಿಂದ ಪೀಡಿತರಾದವರಿಗೆ ದೇಹದಲ್ಲಿ ಶಕ್ತಿ ಇರುವುದಿಲ್ಲ. ದೇಹಶಕ್ತಿಗೆ ಅಭಾವ ಬಂದಕೂಡಲೇ ಬುದ್ಧಿಶಕ್ತಿಗೂ ಅಭಾವವುಂಟಾಗುವುದು. ಈ ಕಾರಣದಿಂದ ಸಕಲರಿಗೂ ದೇಹಶಕ್ತಿ ಬುದ್ಧಿಶಕ್ತಿಗಳು ಸಮಗ್ರವಾಗಿರುವಂತೆ ನೋಡಿಕೊಳ್ಳುವುದು ಸರಕಾರದವರಿಗೆ ಮುಖ್ಯಕರ್ತವ್ಯ. ಇದು ಸರಕಾರದವರಿಗೆ ಲಾಭಕರವಾದದ್ದೂ ಹೌದು ಕೆಲಸಮಾಡಿ ಜೀವಿಸತಕ್ಕವರು ದೇಶದ ಸಂಪತ್ತುಗಳಿಗೆಲ್ಲ ಕಾರಣಭೂತರು. ಅವರಿಗೆ ಆರೋಗ್ಯವು ತಪ್ಪಿದರೆ ಸಂಪದಭಿವೃದ್ಧಿಯೂ ಆಗುವುದಿಲ್ಲ. ಸಂಪದಭಿವೃದಿಯಾಗದೆ ಇದ್ದರೆ ಸರಕಾರಕ್ಕೆ ಬರತಕ್ಕ ಕಂದಾಯ ಮೊದಲಾದುವುಗಳು ಸರಿಯಾಗಿ ಬರುವುದಿಲ್ಲ. ಸರಕಾರದ ಹುಟ್ಟುವಳಿಯು ಕಡಮೆಯಾಗುವುದು. ಆದುದರಿಂದ ಜನಗಳ ಆರೋಗ್ಯಕ್ಕೆ ತಗಲತಕ್ಕ ಕರ್ಚುಗಳನ್ನು ಮಾಡುವುದರಲ್ಲಿ ಸರಕಾರದವರು ಉದಾರಿಗಳಾಗಿರಬೇಕು. ಸ್ಯಾನಿಟೆರಿ ಏರ್ಪಾಡುಗಳನ್ನು ಮಾಡಿದ ಮಾತ್ರದಿಂದಲೇ ತಾವು ಕೃತಕೃತ್ಯರೆಂದು ಸರಕಾರದವರು ಭಾವಿಸಬಹುದು. ಸದರಿ ಏರ್ಪಾಡುಗಳು ಕ್ರಮವಾಗಿ ನಡೆಯುತ್ತವೆಯೋ ? ಊರುಗಳ ಮತ್ತು ಗ್ರಾಮಗಳ ಪಾಕೀಜು ಮಾತ್ರವೇ ಅಲ್ಲದೆ ಮನೆಗಳ ಪಾಕೀಜೂ ಕ್ರಮವಾಗಿದೆಯೋ ಇಲ್ಲವೇ ? ಬಡವರ ಮನೆಯಲ್ಲಿ ರೋಗಾದಿಗಳೇನಾದರೂ ಇರುತ್ತವೆಯೋ ? ಅಂಥಾ ರೋಗಿಷ್ಟರ ಔಷಧ ಪಥ್ಯಗಳಿಗೆ ಏರ್ಪಾಡುಗಳಿರುವುದೇ ಇಲ್ಲವೇ ? ಭಾರೀ ಸಂಬಳಗಳನ್ನು ತೆಗೆಯತಕ್ಕ ಡಾಕ್ಟರುಗಳೇ ಮೊದಲಾದವರು ಪ್ರಜೆಗಳ ಯೋಗಕ್ಷೇಮಚಿಂತೆಯಲ್ಲಿ ಬದ್ಧಾದರರಾಗಿಯೂ ಶ್ರದ್ಧೆಯುಳ್ಳವರಾಗಿಯೂ ಇರುತ್ತಾರೆಯೋ ಇಲ್ಲವೇ ? ಹಾಗಿಲ್ಲದಿದ್ದರೆ ಅವರು ಬದ್ಧಾದರವಾಗಿರುವಂತೆ ಮಾಡುವುದಕ್ಕೆ ಅತ್ಯಾವಶ್ಯಕವಾದ ಏರ್ಪಾಡುಗಳು ನಡೆಯುತ್ತಲಿವೆಯೋ ಇಲ್ಲವೇ ಎಲಾ ಮಕ್ಕಳೂ 11 ವಯಸ್ಸಿನವರೆಗೂ ಪಾಠಶಾಲೆಗೆ ಹೋಗುತ್ತಾರೆ

ಯೇ ಇಲ್ಲವೇ ? ಅನಾಥರಾದವರನ್ನು ಸಂರಕ್ಷಿಸಿ ಸನಾಥರನ್ನು ಮಾಡಿ ಅವರು ಬಾಹುಬಲದಿಂದಲೂ ಬುದ್ಧಿಬಲದಿಂದಲೂ ಸನ್ಮಾರ್ಗಪ್ರವರ್ತಕರಾಗಿ ರಾಜಭಕ್ತಿಯುಳ್ಳವರಾಗಿ ಸಜ್ಜನವಿಧೇಯರಾಗಿ ಇರುವರೆ ಇಲ್ಲವೇ ? ದುರ್ಮಾರ್ಗಪ್ರವರ್ತನದಿಂದ ಜೀವನಮಾಡದಂತೆಯೂ ಸನ್ಮಾರ್ಗಪ್ರವರ್ತನದಿಂದ ಜೀವಿಸುವುದಕ್ಕೆ ಅವಕಾಶವಿರುವಂತೆಯೂ ಏರ್ಪಾಡುಗಳು ಮಾಡಲ್ಪಟಿವೆಯೋ ಇಲ್ಲವೇ ? ಜನಗಳು ಆತ್ಮಾವಲಂಬಿಗಳಾಗಿಯೂ ಧರ್ಮಿಷ್ಠರಾಗಿಯೂ ಆಗತಕ್ಕ ಏರ್ಪಾಡುಗಳು ಕ್ರಮವಾಗಿ ನಡೆಯುತ್ತಲಿವೆಯೋ ಇಲ್ಲವೇ ? ಈ ವಿಷಯಗಳೆಲ್ಲ ಸರಕಾರದವರಿಂದ ಪ್ರತಿನಿತ್ಯವೂ ಪರೀಕ್ಷಿಸಲ್ಪಡಬೇಕು. ಈದಿನ ಮಕ್ಕಳಾಗಿರತಕ್ಕವರು ಶೀಘ್ರದಲ್ಲಿಯೇ ದೊಡ್ಡವರಾಗಿರುತ್ತಾರೆ, ಅವರ ಬುದ್ಧಿಗೂ ಕೈಗಳಿಗೂ ಒಳ್ಳೇ ವ್ಯಾಪಾರಗಳನ್ನು ಕಲ್ಪಿಸದೇ ಇದ್ದರೆ ದುರ್ವ್ಯಾಪಾರಗಳು ಕಲಿಯಲವಕಾಶವುಂಟಾಗಬಹುದು.

ಕಿತ್ತೂರು ಸಂಸ್ಥಾನದ ಇತಿಹಾಸವು.

(೧೮೭ ನೇ ಪುಟದ ಶೇಷ)

ಬಂಡಾರವು ಕೊಳ್ಳೆಗೊಳಗಾಗಬಾರದೆಂದು ಮೆ॥ ಥ್ಯಾಕರೆ ದೊರೆಯು ಕ್ರಿ. ಶ. 1824 ನೇ ಅಕ್ಟೋಬರ್ ಮಾಸದ ೨೧ ನೆಯ ದಿನ ಕಿತ್ತೂರು ವ್ಯವಸ್ಥೆಗಾಗಿ ಹೋದನು. ಅಲ್ಲಿನ ಸೇವಕರು ಕೈಲಾಸವಾಸಿಯಾದ ದೇಸಾಯಿಯ ಮಲತಾಯಿಯಾದ ಚನ್ನಮ್ಮನ ಅಪ್ಪಣೆ ಹೊರತು ಬೇರೆ ಯಾರೊಬ್ಬರ ಅಪ್ಪಣೆಯನ್ನು ಪಾಲಿಸಲೊಲ್ಲದವರಾಗಿದ್ದರು. ಅವಳು ಆ ದಿನ ದೊರೆಗೆ ದರ್ಶನವನ್ನು ಕೊಡದೆ ಮಾರನೆಯದಿನ ಬರಹೇಳಿದಳು. ಮಾರನೆಯ ದಿವಸವೂ ಅವಕಾಶವಾಗಲಿಲ್ಲ. ಓಲೆಕಾರರೂ, ಮಿಕ್ಕ ಜನರೂ ಅಲ್ಲಲ್ಲಿಂದ ಬಂದು ಕಿತ್ತೂರಲ್ಲಿ ಸಮ್ಮಿಲಿತರಾಗಲು, ಥ್ಯಾಕರೆ ದೊರೆಯು ಏಮರಿಕೆಯಿಂದಿರಬೇಕಾಯಿತು. ಇವನ ಬಳಿಯಲ್ಲಿ ಕ್ಯಾಪಟನ್

ಬ್ಲಾಕನೂ ಅವನ ದಂಡೂ ಇದ್ದುವು. ಅವನು ಎರಡು ಫಿರಂಗಿಗಳನ್ನು ಕೋಟೆಯ ಬಾಗಿಲಿದುರಿಗಿಡಲಪ್ಪಣೆ ಮಾಡಿದನು. ಮಾರನೆಯದಿನ ಕೋಟೆಯೊಳಗಣ ಜನರು ಕೋಟೆಯ ಬಾಗಿಲನ್ನು ಮುಚ್ಚಿ ಯುದ್ಧಕ್ಕೆ ಸನ್ನದ್ಧರಾದರು. ಆವರು ಥ್ಯಾಕರಿ ದೊರೆಯನ್ನು ಒಳಗೆ ಬರಗೊಡಲಿಲ್ಲ. ಆದುದರಿಂದ ಅವನು ಇನ್ನೆರಡು ಫಿರಂಗಿಗಳನ್ನು ತರಿಸಿ, ಕೋಟೆಯಬಾಗಿಲ ಬಳಿಯಲ್ಲಿರಿಸಿ, ಇನ್ನು ಇಪ್ಪತ್ತೈದು ನಿಮಿಷಗಳಲ್ಲಿ ತೆರೆಯದಿದ್ದರೆ ಆ ಬಾಗಿಲನ್ನು ಒಡೆಯುವವೆನೆಂದು ಹೇಳಿ ಕಳುಹಿಸಿದನು. ಆ ಅವಧಿಯು ಮೀರಿದೊಡನೆ ಕ್ಯಾಪಟನ್ ಬ್ಲಾಕ್ ಮೊದಲಾದ ಇಂಗ್ಲಿಷ್ ಅಧಿಕಾರಿಗಳು ಫಿರಂಗಿಗಳಿಂದ ದ್ವಾರವನ್ನು ಭೇದಿಸುವಷ್ಟರಲ್ಲಿಯೇ ಒಳಗಣ ಭಟರು ಮೇಲೆ ಬಿದ್ದು ಫಿರಂಗಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಬ್ಲಾಕ್ ಮೊದಲಾದ ಅಧಿಕಾರಿಗಳನ್ನೂ ದಂಡನ್ನೂ ಕ್ರೂರತೆಯಿಂದ ವಧಿಸಿದರು. ಇಷ್ಟರಲ್ಲಿ ಥ್ಯಾಕರಿ ದೊರೆಯೂ ಅಲ್ಲಿಗೆ ಹೋದನು. ಕುದುರೆಯನ್ನೇರಿ ದಂಗೆಗಾರರನ್ನು ಸಂತವಿಸಲು ಬರಲು, ಅವನೂ ಹತನಾದನು. ಅನಂತರದಲ್ಲಿ ಮಿಕ್ಕುಳಿದ ಬ್ರಿಟಿಷ್ ಸರಕಾರದ ಜನರನ್ನೂ ಮುತ್ತಿ ವಧಿಸಿದರು. ಆಗ ಸ್ಟಿವನ್ಸನ್, ಎಲಿಯಟ್, ಮೊದಲಾದ ಏತದ್ದೇಶೀಯ ಅಧಿಕಾರಿಗಳು ಒಂದು ಮನೆಯಲ್ಲಿ ಔತುಕೊಂಡಿದ್ದರು. ದಂಗೆಗಾರರು ಅಲ್ಲಿಗೂ ನುಗ್ಗಿ ಅವರನ್ನು ಸೆರೆಹಿಡಿದರು. ಈಮೇರೆಗೆ ಕಿತ್ತೂರಲ್ಲಿ ದಂಗೆಯೆದ್ದ ವಾರ್ತೆಯು ದಕ್ಷಿಣದ ಕಮಿಷನರರಾದ ಚಾಂಪಲಿನ್ ದೊರೆಗಳವರಿಗೆ ತಿಳಿದೊಡನೆಯೇ ಅವರು ಅಲ್ಲಲ್ಲಿನ ಸೈನ್ಯವನ್ನು ಕೂಡಿಸಿಕೊಂಡು ಒಡನೆಯೇ ಕಿತ್ತೂರಿಗೆ ಹೋಗಿ, ನವಂಬರ ತಿಂಗಳ 30 ನೆಯ ದಿವಸ ಕೋಟೆಯನ್ನು ಮುತ್ತಿದರು. ದಂಗೆಗಾರರು ಎರಡು ಮೂರು ದಿನ ಧೈರ್ಯದಿಂದ ಕಾದಿದರು. ಮೂರನೆಯ ದಿವಸ ಅವರು ಸೆರೆಹಿಡಿದವರನ್ನು ಬಿಡಲೊಪ್ಪಿದರು. ನಾಲ್ಕನೆಯದಿನ ಕೋಟೆಯು ಛಿನ್ನವಿಚ್ಛಿನ್ನವಾಗಲು ದಂಗೆಗಾರರೆಲ್ಲರೂ ಕೈಗೆ ಸಿಕ್ಕರು. ಇಂಗ್ಲಿಷರಕಡೆ ಮೂವರು ಹತರಾದರು. ಇಪ್ಪತ್ತೈದು ಜನರು ಗಾಯಪಡೆದರು. ಸೋಲಾಪುರದ ಕಲೆಕ್ಟರರಾದ ಮನರೋ ದೊರೆಯು ಮಡಿದನು, ಈತೆರನಾಗಿ ಬ್ರಿಟಿಷರು ಕಿತ್ತೂರನ್ನು ತೆಗೆದುಕೊಂಡು, ಪ್ರಕಟನೆಯನ್ನು ಪ್ರಸಿದ್ಧಪಡಿಸಿ, ಕಿತ್ತೂರು ಸಂಸ್ಥಾನವನ್ನು

ತಮ್ಮ ರಾಜ್ಯಕ್ಕೆ ಸೇರಿಸಿಕೊಂಡು, ಅದರಲ್ಲಿ ಕಿತ್ತೂರು, ಸಂಪಗಾವ, ಬೀಡಿ ಎಂಬ ಮೂರು ತಾಲ್ಲೂಕುಗಳನ್ನು ಮಾಡಿದರು.

ಕಿತ್ತೂರು ಸಂಸ್ಥಾನದಲ್ಲಿ ಒಟ್ಟಿಗೆ ಮುನ್ನೂರೈವತ್ತುನಾಲ್ಕು ಗ್ರಾಮಗಳಿದ್ದವು. ಅವುಗಳ ಉತ್ಪತ್ತಿಯು 333647 ರೂಪಾಯಿಗಳು. ಇವುಗಳಲ್ಲದೆ ಮೃತನಾದ ದೇಸಾಯಿಯ ಸೇವಕರಿಗೆ ಸುಮಾರು ಇಪ್ಪತ್ತುಸಾವಿರ ರೂಪಾಯಿಗಳ ಉತ್ಪತ್ತಿಯುಳ್ಳ ಭೂಮಿಯು ಸೇರಿತ್ತು. ಹೊಸದಾದ ಪ್ರಕಟನೆಯಂತೆ ಈ ಭೂಮಿಗಳನ್ನು ಇನ್ನು ಮುಂದೆ ಅವರಿಗೆ ನಡೆಯಿಸಬೇಕಾಗಿರಲಿಲ್ಲ. ಆದರೂ ಆ ಸಂಧಿಯಲ್ಲಿ ಒಮ್ಮೆಯೇ ಇಂತಿಷ್ಟು ಜನರನ್ನು ನಿರಾಶ್ರಿತರನ್ನಾಗಿ ಮಾಡುವುದು ಸರಿಯಲ್ಲವೆಂದು ತಿಳಿದು, ಅವುಗಳನ್ನು ಅವರಿಗೆ ನಡೆಯಿಸಿದರು. ದೇಸಾಯಿಯ ಕುಟುಂಬದೊಳಗಣ ಸ್ತ್ರೀಯರಿಗೂ ವರ್ಷಾಶನವನ್ನು ನಿರ್ಣಯಿಸಿದರು.

ಆದರೆ ಕಿತ್ತೂರು ಜನರು ಮುಂದೆಯೂ ಶಾಂತರಾಗಿರಲಿಲ್ಲ. ಸಾಂಗೋಲಿ ಗ್ರಾಮದ ರಾಯಪ್ಪನೆಂಬ ಓಲೆಕಾರನು ಕ್ರಿ. ಶ. 1830 ರಲ್ಲಿ ಅವೇಲಿ ಎಂಬಲ್ಲಿ ದಂಗೆಯೆದ್ದನು. ಇವನು ಕ್ರಿ. ಶ. 1827 ರ ದಂಗೆಯಲ್ಲಿ ಸೇರಿದ್ದನು. ಈ ದಂಗೆಯು ಅಡಗಿದ ಬಳಿಕ ಇವನಿಗೆ ಅಭಯವು ದೊರೆತಿತ್ತು. ಇವನು ಸಾಂಗೋಲಿಯಲ್ಲಿ ಒಂದರಗೋಜಿಗೂ ಹೋಗದೆ ಸ್ವಸ್ಥನಾಗಿರಲು ಇವನಿಗಿದ್ದ ಭೂಮಿಯನ್ನು ಸರಕಾರವು ತೆಗೆದುಕೊಂಡಿತು. ಇವನು ಕೆಲವು ಜನರನ್ನು ಕಟ್ಟಿಕೊಂಡು ಮೃತನಾದ ದೇಸಾಯಿಯು ದತ್ತು ತೆಗೆದುಕೊಂಡನೆಂದು ಹೇಳುತ್ತಲಿದ್ದ ಹುಡುಗನನ್ನು ದೇಸಾಯಿಯಿಂದ ಓಡಿಸಿಕೊಂಡು ಹೋಗಿ, ಸಂಸ್ಥಾನವನ್ನು ಮರಳಿ ದೊರೆಕಿಸಿಕೊಡುವೆನೆಂದು ಹೇಳಿ ಸರಕಾರದಮೇಲೆ ತಿರುಗಿಬೀಳತೊಡಗಿದನು. ಒಡನೆ ಇವನನ್ನು ಕಿತ್ತೂರು ಪ್ರಾಂತ್ಯದ ಜನರೆಲ್ಲರೂ ಕೂಡಿದರು. ಅವರು ಮೊತ್ತಮೊದಲು ಬೀಡಿಯಲ್ಲಿನ ಸರಕಾರ ಬಂಡಾರವನ್ನು ಕೊಳ್ಳೆ ಹೊಡೆದು, ಇದರಲ್ಲಿ ಯಶವು ದೊರೆಕೊಡನೆಯೇ ಅಲ್ಲಲ್ಲಿ ಕೊಲೆ, ಸುಲಿಗೆಗಳನ್ನು ಭರದಿಂದ ನಡೆಯಿಸಿದರು. ಸೇನೆಯಿಲ್ಲದೆ ದಂಗೆ ಅಡಗಿಸಲ್ಪಡಬಹುದೆಂದು ಮೊದಲು ತಿಳಿದುಕೊಂಡಿದ್ದರು. ಕಿತ್ತೂರು ಓಲೆಕಾರರು ಕೆಲಸಮಾಡಲೊಪ್ಪದಿದ್ದುದರಿಂದಲೂ, ದಂಗೆಗಾರರು ಜನರನ್ನು ಪೀಡಿಸತೊಡಗಿ

(215 ನೇ ಪುಟದ ಶೇಷ)

ಅನೇಕ ಪ್ರಾಣಿಗಳಿಗೆ ಹೊರಗಿನ ಪ್ರಯಾಣಕ್ಕೆ ಸಾಧನಗಳುಂಟು. ಉದಾ:- ಮೀನು ಮೊದಲಾದ ಕೆಲವಕ್ಕೆ ಈಜಲು ಅನುಕೂಲವಾಗಿ ಫಿನ್ (Fins) ಎಂಬ ಅಂಗಗಳುಂಟು. ಕೆಲವಕ್ಕೆ ನಡೆಯಲು ಅನುಕೂಲಿಸುವ ಕಾಲುಗಳು, ಕೆಲವಕ್ಕೆ ಹಾರುವುದಕ್ಕೆ ಅನುಕೂಲಿಸುವ ರೆಕ್ಕೆಗಳು ಇವೆ. ಅವು ಆಹಾರವನ್ನು ಹುಡುಕಿಕೊಂಡು ಅಲೆಯುತ್ತ ಬಂದುದರಿಂದಲೇ ಭೂಮಿಯ ಸಮಸ್ತ ಭಾಗಗಳಲ್ಲೂ ಹೀಗೆ ಪ್ರಾಣಿಪ್ರಸರಣಕ್ಕೆ ಅವಕಾಶವಾಯ್ತು. ವೇಗವಾಗಿ ಹಾರತಕ್ಕ ಹಕ್ಕಿಗಳು ಸರ್ವತ್ರ ಹರಡಿವೆ. ನಡೆಯುವ ಹಕ್ಕಿಗಳೂ, ಚತುಷ್ಪಾದಿಗಳೂ ಅಷ್ಟು ಹರಡಿಲ್ಲ. ಆಫ್ರಿಕದ ಉಷ್ಟ್ರಪಕ್ಷಿಯೂ ಆಸ್ಟ್ರೇಲಿಯದ ಏಮು ಎಂಬ ಹಕ್ಕಿಯೂ, ದಕ್ಷಿಣ ಅಮೆರಿಕದ ರೀ ಎಂಬ ಪ್ರಾಣಿಯೂ ಆಯಾ ದೇಶಗಳಿಂದ ಹೊರಗೆ ಹೊರಟೇ ಇಲ್ಲ. ಎಷ್ಟು ದೂರ ಹೋಗುವಾಗಲೂ ರೆಕ್ಕೆಯನ್ನು ಅಲುಗಿಸದೆಯೇ ವೇಗವಾಗಿ ಸಂಚರಿಸಬಲ್ಲ ಆಲ್ಬಟ್ರಾಸ್ ಎಂಬ ಪಕ್ಷಿಗಳು ದಕ್ಷಿಣಸಾಗರದಲೆಲ್ಲಾ ಇವೆ. ದಕ್ಷಿಣ ಅಮೆರಿಕದ ಹಕ್ಕಿಗಳ ಪೈಕಿ ಸುಮಾರು 50 ಬಗೆಯವುಗಳು ಪಶ್ಚಿಮ ಯೂರೋಪಿನಲ್ಲಿವೆ. ಆದರೆ ಯಾವ ಮನುಷ್ಯೇತರ ಪ್ರಾಣಿಯೂ ಯೂರೋಪ್‌ನಿಂದ ಹೋಗಿ ಉತ್ತರ ಅಮೆರಿಕದಲ್ಲಿ ನೆಲೆಗೊಂಡಿಲ್ಲ. ಯಾಕೆಂದರೆ ಗಾಳಿಯು ಪಶ್ಚಿಮ ದಿಕ್ಕಿನಲ್ಲಿರುವ ಅಮೆರಿಕಖಂಡದ ಕಡೆಯಿಂದ ಮಾತ್ರ ಯೂರೋಪಿಗೆ ಬೀಸುವುದೇ ವಿನಾ ಯೂರೋಪಿನ ಕಡೆಯಿಂದ ಅಲ್ಲಿಗೆ ಬೀಸುವುದಿಲ್ಲ. ಭೂಮಿಯ ಮೇಲಿನ ವಾಯು ಸಂಚಾರವು ಭೂಮಿಯ ಚಲನೆಯಿಂದ ಉಂಟಾಗುತ್ತದೆಯಾದ್ದರಿಂದ ಪ್ರಪಂಚದಲ್ಲಿ ಪ್ರಾಣಿಪ್ರಸರಣಕ್ಕೆ ಭೂಮಿಯ ಚಲನೆಯು ಒಂದು ಮುಖ್ಯ ಸಹಾಯಕವಾಯಿತು.

ಸಸ್ಯಪ್ರಾಣಿಗಳ ಜೀವನಸ್ಥಿತಿಗೆ ತಕ್ಕ ಭೂಗೋಳದ ಅನುಕೂಲತೆಗಳು.—

ಯಾವಯಾವ ಸ್ಥಳಗಳಲ್ಲಿ ಯಾವಯಾವ ಸಸ್ಯಪ್ರಾಣಿಗಳು ನೆಮ್ಮದಿಯಾಗಿ ರಬಹುದೋ ಅಂತಹ ಸ್ಥಳಗಳಲ್ಲಿ ಆಯಾ ಸಸ್ಯಪ್ರಾಣಿಗಳು ಹೇರಳವಾಗಿರುವಂತೆ

ದೇವರು ಏರ್ಪಾಡು ಮಾಡಿದ್ದಾನೆ. ಆಹಾರವು ಹೆಚ್ಚಾಗಿದ್ದ ಕಡೆ ಅದನ್ನು ತಿನ್ನತಕ್ಕವುಗಳ ಸಂಖ್ಯೆಯೂ ಹೆಚ್ಚು. ಸಾಗರಗಳ ಆಳವಿಲ್ಲದ ಪ್ರದೇಶಗಳಲ್ಲೂ ನೆಲದಮೇಲೆ ಉಷ್ಣವಲಯ ಮತ್ತು ಸಮಶೀತೋಷ್ಣವಲಯ ಇವುಗಳಲ್ಲೂ ಇವಕ್ಕೆ ಅನೇಕ ಉದಾಹರಣೆಗಳುಂಟು. ಆಹಾರವಸ್ತುಗಳು ಕಡಮೆಯಾದ ಕಡೆ ಅಂದರೆ ಕೇವಲ ಒಣಗಿದ ಮತ್ತು ತುಂಬ ಚಳಿಯಾದ ಸ್ಥಳಗಳಲ್ಲಿ ಸಸ್ಯಪ್ರಾಣಿಗಳ ಸಂಖ್ಯೆ ಬಲು ಕಡಮೆ. ಗ್ರೀನ್‌ಲ್ಯಾಂಡಿನ ಮಧ್ಯಭಾಗದ ಶೀತಪ್ರದೇಶವು ಇದಕ್ಕೆ ನಿದರ್ಶನವಾಗಿದೆ.

ಸಸ್ಯಪ್ರಾಣಿಗಳು ಒಂದು ಸ್ಥಳದಲ್ಲಿ ಹೆಚ್ಚುವುದಕ್ಕೆ ಅಥವಾ ಕಡಮೆಯಾಗುವುದಕ್ಕೆ ಮನುಷ್ಯರೂ ಒಂದು ಕಾರಣ. ಹೇಗೆಂದರೆ ಹೊಸದಾಗಿ ಕಂಡು ತಿಳಿದ ದೇಶಗಳ ಅರಣ್ಯಗಳನ್ನ ಕಡಿದು ಅಲ್ಲಿ ಆಹಾರಕ್ಕುಪಯುಕ್ತವಾದ ಕಾಳುಗಳ ಪೈರುಗಳನ್ನು ಬೆಳೆಯುವುದು, ಕಾಡುಮೃಗಗಳನ್ನು ನಾಶಪಡಿಸಿ ಅಂತಹ ಸ್ಥಳದಲ್ಲಿ ಬಳಕೆಯಾದ ಪ್ರಾಣಿಗಳನ್ನು ಸಾಕುವುದು; ಹೀಗೆ. ಆದರೆ ಇಂತಹ ಕಾರಣಗಳಿಲ್ಲದಿದ್ದಲ್ಲಿ ಆ ಯಾ ಸ್ಥಳಗಳ ಸಸ್ಯಪ್ರಾಣಿಗಳ ಸಂಖ್ಯೆಯು ಎಷ್ಟು ಶತಮಾನಗಳಾದರೂ ಒಂದೇವಿಧವಾಗಿರುತ್ತಿದ್ದಿತು.

ಪ್ರತಿಸಸ್ಯವೂ ಪ್ರತಿಪ್ರಾಣಿಯೂ ಸಂಖ್ಯೆಯಲ್ಲಿ ಹೆಚ್ಚುತ್ತಿವೆ ಹೇಗೆಂದರೆ–ಸಸ್ಯಗಳ ಬೀಜಗಳೂ ಪ್ರಾಣಿಗಳ ಸಂತಾನಗಳೂ ಉತ್ತರೋತ್ತರವಾಗಿ ತಮ್ಮತಮ್ಮ ವಂಶಗಳನ್ನು ಹೆಚ್ಚಿಸುತ್ತಲೇ ಬರುತ್ತವೆ. ಒಂದು ಕಾಳಿನಿಂದ ಹುಟ್ಟಿದ ಗಿಡವು ಹಲವು ತೆನೆಗಳನ್ನು ಬಿಡುವುದು. ಪ್ರತಿ ತೆನೆಯಲ್ಲಿಯೂ ಅನೇಕವಾಗಿ ಕಾಳುಗಳಿರುವುದು ಮುಂದಕ್ಕೂ ಹೀಗೆಯೇ. ಒಂದೊಂದು ಮೀನಿನ ಮೊಟ್ಟೆಯಿಂದಲೂ ಕಾಲಕ್ರಮವಾಗಿ ಸಾವಿರಾರು ಮೀನುಗಳು ಉತ್ಪತ್ತಿಯಾಗುವುವು. ಇಂತಹ ಕಾರಣಗಳಿಂದಲೇ ಲೋಕದಲ್ಲಿ ಸಸ್ಯಪ್ರಾಣಿಗಳು ಅಸಂಖ್ಯಾತವಾಗಿ ಹೆಚ್ಚುವ ಸಂಭವವಿರುವುದು.

ಸಸ್ಯಪ್ರಾಣಿಗಳ ಬೀಜಗಳೂ ಸಂತಾನಗಳೂ ಹೇರಳವಾಗಿದ್ದರೂ ಕೆಲವು ಸ್ಥಳಗಳಲ್ಲಿ ಅವುಗಳ ಸಂಖ್ಯೆಯು ಹೆಚ್ಚದಿರುವುದಕ್ಕೆ ಕೂಡ ಕೆಲವು ಕಾರಣಗಳುಂಟು.

ಎಷ್ಟೋ ಬೀಜಗಳು ತಮಗೆ ಅನುಕೂಲವಾದ ಭೂಮಿಯಲ್ಲಿ ಬೀಳದಿರುವುದರಿಂದ ಅಥವಾ ಕೆಲವು ಪ್ರಾಣಿಗಳಿಂದ ತಿನ್ನಲ್ಪಡುವುದರಿಂದ ನಾಶವಾಗುವುವು. ಪ್ರಾಣಿಗಳ ವಿಷಯದಲ್ಲೂ ಹೀಗೆಯೇ. ಆದರೆ ಯಾವ ಸಸ್ಯಪ್ರಾಣಿಗಳೂ ತಮ್ಮ ಸಹೋದರ ಸಮುದಾಯವನ್ನು ಅಂದರೆ ಸ್ವಜಾತಿವರ್ಗಕ್ಕೆ ಸೇರಿದ್ದನ್ನೇ ನಾಶಪಡಿಸುತ್ತ ಸ್ವಪ್ರಯೋಜನವನ್ನು ಪಡೆಯುವುವೋ ಅಂತಹವುಗಳು ಎಂದಿಗೂ ಶುದ್ಧಾಂಗವಾಗಿ ನಾಶವಾಗದಿರುವುದು ಮಾತ್ರವಲ್ಲದೆ ಅಭಿವೃದ್ಧಿಗೂ ಬರುತ್ತವೆ; ಅಂದರೆ ಅವು ಎಷ್ಟೋ ಗಂಡಗಳನ್ನು ಕಳೆದು ಉಳಿದುಕೊಂಡು ಊರ್ಜಿತವಾಗುವುವು.

ಹಾಗೆ ಅವು ಗಂಡಗಳನ್ನು ಗೆದ್ದು ಅಭಿವೃದ್ಧಿಗೆ ಬರುವುದಕ್ಕೆ ಭೂಗೋಳದ ಸನ್ನಿವೇಶಗಳೂ ಸಹಾಯಮಾಡುವುವು. ಮೀನುಗಳು ನೀರಿನಲ್ಲಿ ಸುಲಭವಾಗಿ ಈಜಲು ಅನುಕೂಲವಾದ ಆಕಾರವನ್ನೂ, ಆಹಾರವನ್ನೂ ಪಡೆಯುವುದಕ್ಕೂ ಇತರ ಪ್ರಾಣಿಗಳಿಂದ ಉಂಟಾಗುವ ಗಂಡಗಳನ್ನು ತಪ್ಪಿಸಿಕೊಳ್ಳಲಿಕ್ಕೂ ಸಹಾಯಕವಾದ ಶರೀರ ರಚನೆಯನ್ನೂ ಪಡೆದಿವೆ. ನಡುಗಡಲಿನಲ್ಲಿರುವ ಅನೇಕ ಸಣ್ಣ ಪ್ರಾಣಿಗಳು ನಿದಾನವಾಗಿ ಚಲಿಸತಕ್ಕವಾಗಿಯೂ, ನೀರಿನಂತೆಯೇ ಪಾರದರ್ಶಕವಾದ ದೇಹವುಳ್ಳವಾಗಿಯೂ ಇರುತ್ತ ನೀರಿನ ಹಾಗೆಯೇ ಕಾಣಿಸಿಕೊಳ್ಳುತ್ತವೆ. ಇದರಿಂದ ಅವು ಇತರ ಪ್ರಾಣಿಗಳಿಗೆ ತುತ್ತಾಗದೆ ಪ್ರಾಣ ಉಳಿಸಿಕೊಳ್ಳಲು ಅನುಕೂಲ.

ಭೂಮಿಯು ಆಕಾಶದಿಂದ ಬೆಳಗುವಂತೆ ಕೆಲವು ಪ್ರಾಣಿಗಳು ಮೇಲ್ಗಡೆ ಕಪ್ಪಾಗಿರುವ ಬೆನ್ನನ್ನೂ, ಕೆಳಗಡೆ ಪ್ರಕಾಶವಾದ ಬಣ್ಣವನ್ನೂ ಪಡೆದು ಇರುವುದರಿಂದ ಸಂದರ್ಭಾನುಸಾರವಾಗಿ ಶತೃಗಳಿಂದ ತಪ್ಪಿಸಿಕೊಳ್ಳುವುದಕ್ಕೂ ತಮ್ಮ ಬೇಟೆಯನ್ನು ಕೊಲ್ಲುವುದಕ್ಕೂ ತಕ್ಕ ಅನುಕೂಲತೆಗಳನ್ನು ಪಡೆದಿವೆ.

ಮರುಭೂಮಿಯಲ್ಲಿ ವಾಸಮಾಡುವ ಪ್ರಾಣಿಗಳು ಅಲ್ಲಿನ ನೆಲದಂತೆಯೇ ಬೂದು ಅಥವಾ ಕಂದುಬಣ್ಣವನ್ನು ಪಡೆದಿರುತ್ತವೆ. ಹಿಮದಿಂದ ಆವೃತವಾದ ಉತ್ತರ ಶೀತವಲಯಪ್ರಾಂತದ ಮೃಗಗಳಲ್ಲಿ ಕೆಲವು ಬಿಳುಪಾಗಿರುತ್ತವೆ. ಹೀಗಿರುವುದರಿಂದ ಅವು ಅಲ್ಲಿರುವ ಸಂಗತಿಯೇ ಯಾರಿಗೂ ಗೊತ್ತಾಗುವುದಿಲ್ಲವಾಗಿ ಅವಕ್ಕೆ ಅಪಾಯ ಕಡಿಮೆ.

ಕೆಲವು ಪ್ರಾಣಿಗಳು ಗುಹೆಗಳ ಆಶ್ರಯವನ್ನ ಪಡೆದಿರುತ್ತವೆ. ಇನ್ನು ಕೆಲವು ಕಲ್ಲಿನ ಪದರಗಳಲ್ಲಿ ಅಥವಾ ನೆಲವನ್ನು ಕೋಡಿ ಅಲ್ಲಿ ವಾಸಿಸುತ್ತವೆ ಕೆಲವು ಪ್ರಾಣಿಗಳು ತಮ್ಮ ಶತೃಗಳಾದ ಇತರ ಪ್ರಾಣಿಗಳಿಗೆ ಎಟಕದಂತೆ ಅತ್ಯುನ್ನತವಾದ ಪರ್ವತ ಶೃಂಗ ಮುಂತಾದ ಸ್ಥಳಗಳಲ್ಲಿ ವಾಸಿಸುತ್ತವೆ. ಉತ್ತರ ಅಮೆರಿಕದಲ್ಲಿ ರಾಕಿಪರ್ವತಗಳ ಮೇಲೆ ವಾಸಿಸುವ ಕುರಿಗಳನ್ನೂ ಯೂರೋಪಿನಲ್ಲಿ ಆಲ್ಪ್ಸ್ ಪರ್ವತಗಳ ಮೇಲಿರುವ ಷಾಮ್ವಾ ಎಂಬ ಮೃಗಗಳನ್ನೂ ಇದಕ್ಕೆ ಉದಾಹರಿಸಬಹುದು.

ಸಸ್ಯಗಳಲ್ಲೂ ಮತ್ತು ಪ್ರಾಣಿಗಳಲ್ಲೂ ತೋರುವ ಅಂತರಾಳಿಕ ಭೇದಗಳು.

ಈಗಿರುವ ಅಸಂಖ್ಯಾತವಾದ ಸಸ್ಯಗಳೂ ಪ್ರಾಣಿಗಳೂ ಪೂರ್ವದಲ್ಲಿದ್ದ ಅಲ್ಪ ಸಂಖ್ಯೆಯ ಸಸ್ಯಗಳಿಂದಲೂ ಪ್ರಾಣಿಗಳಿಂದಲೂ ಉಂಟಾದವುಗಳು. ಆದರೂ ಈಗಿನ ಸಸ್ಯಗಳ ಮತ್ತು ಪ್ರಾಣಿಗಳ ಶರೀರ ರಚನೆಗೂ ಪೂರ್ವದಲ್ಲಿದ್ದವುಗಳದಕ್ಕೂ ಹೋಲಿಸಿದರೆ ಅನೇಕ ವ್ಯತ್ಯಾಸಗಳು ಕಂಡುಬರುವುವು. ಈ ಭೂಗೋಳದಮೇಲೆ ಎಷ್ಟೋ ಕೋಟಿ ವರ್ಷಗಳಿಂದ ವಾಸಮಾಡುತ್ತ ಇರುವ ಸಸ್ಯಪ್ರಾಣಿಗಳವಂಶದಲ್ಲಿ ಕ್ರಮೇಣ ಅವುಗಳ ದೇಹದ ರಚನೆಯು ಬದಲಾಯಿಸುತ್ತ ಬಂದು ಈಗಿನ ಸ್ಥಿತಿಯನ್ನು ಪಡೆದಿದೆ ಆದುದರಿಂದಲೇ ಈಗಿನವುಗಳಿಗೂ ಪೂರ್ವದಲ್ಲಿದ್ದವುಗಳಿಗೂ ಅಷ್ಟು ಭೇದವುಂಟಾಗಿರುವುದು.

ಪ್ರಾಣಿಗಳಲ್ಲಿ ಹಲವು ವಿಧಗಳು ಉಂಟಾಗುವುದಕ್ಕೆ ಇರುವ ಕಾರಣಗಳ ಪೈಕಿ ಭೂಮಿಯ ಪ್ರಾಕೃತಿಕ ಸನ್ನಿವೇಶಗಳೂ ಮುಖ್ಯವಾದ ಒಂದು ಕಾರಣವಾಗಿವೆ. ಉದಾ:—ಸಮುದ್ರದ ಒಂದು ಪ್ರದೇಶದ ತಳವು ದಿನಕ್ರಮವಾಗಿ ಮೇಲಕ್ಕೆ ಏಳುತ್ತ ಬಂದು ತೀರವಾಗಿ ಪರಿಣಮಿಸುತ್ತ ಬಂದರೆ ಅಲ್ಲಿದ್ದ ಜಲಚರಪ್ರಾಣಿಗಳು ತಮ್ಮ ಆಶ್ರಮಕ್ಕೋಸ್ಕರ ಬೇರೇ ಸ್ಥಳವನ್ನು ಹುಡುಕಬೇಕಾಗುವುದು. ಇದೇ ಸಂದರ್ಭದಲ್ಲಿ ಮೊದಲಿನಿಂದ ನೆಲದಮೇಲೆಯೇ ವಾಸಮಾಡುತ್ತಿದ್ದ ಪ್ರಾಣಿಗಳು ಈಗ ಹೊಸದಾಗಿ ನಿರ್ಮಿಸಲ್ಪಟ್ಟ ತೀರಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವುವು. ಎತ್ತರವಾದ ಪರ್ವತಗಳು ಕ್ಷೀಣಗತಿಯನ್ನು ಹೊಂದಿದಂತೆಲ್ಲಾ ಅಲ್ಲಿ ವಾಸಿಸುತ್ತಿದ್ದ

ಮೃಗಗಳು ಮುಂದಿನ ಅನುಕೂಲಕ್ಕೆ ತಕ್ಕಂತೆ ಕ್ರಮಕ್ರಮವಾಗಿ ತಮ್ಮ ಆಕಾರದಲ್ಲಿ ಬದಲಾವಣೆಯನ್ನು ಹೊಂದುವುವು. ಅಥವಾ ಸತ್ತುಹೋಗುವುವು.

ಸಸ್ಯಗಳ ಮತ್ತು ಪ್ರಾಣಿಗಳ ಜೀವನಸ್ಥಿತಿಯು ವಾಯುಗುಣದಂತೆಯೂ ಬದಲಾಯಿಸುವುದು. ಉದಾ :—ಕನಡಾ ದೇಶದ ಪೂರ್ವಭಾಗದಲೂ ಸಂಯುಕ್ತ ಸಂಸ್ಥಾನದ ಈಶ್ಯಾನ್ಯದಲ್ಲೂ ಪೂರ್ವಕಾಲದಲ್ಲಿ ಅಗಾಧವಾದ ಮಂಜಿನ ಪಟಲಗಳು ಆವರಿಸಲು ಆಗ ಅಲ್ಲಿದ್ದ ಪ್ರಾಣಿಗಳು ದೂರೋಪಾಸ್ತವಾದುವು. ಈಗ ಅಂತಹ ಮಂಜು ಕಡಮೆಯಾಗಲು ಪುನಃ ಪೂರ್ವದ ಸಸ್ಯಪ್ರಾಣಿಗಳು ಆ ಸ್ಥಳಗಳಲ್ಲಿ ಬೆಳೆಯ ತೊಡಗಿವೆ.

ನೀರಿನೊಳಗೂ ನೆಲದಮೇಲೆಯೂ ಪ್ರಾಣಿಪ್ರಸರಣ—

ಭೂಗೋಳದ ಮೇಲ್ಮೆಯು ಒಂದೇವಿಧವಾಗಿರದೆ ಸಂಪೂರ್ಣ ವ್ಯತ್ಯಾಸಗಳುಳ್ಳ ಭಿನ್ನಪ್ರದೇಶಗಳಾಗಿರುವುದರಿಂದ ಒಂದೊಂದು ಪ್ರದೇಶವೂ ತನತನಗೆ ತಕ್ಕ ಸಸ್ಯಪ್ರಾಣಿಗಳನ್ನು ಪಡೆದಿದೆ. ಜಲಾವೃತವಾದ ಸಾಗರತಲಕ್ಕೂ, ವಾಯುಮಂಡಲದಿಂದ ಆವರಿಸಲ್ಪಟ್ಟ ನೆಲಕ್ಕೂ ಇರುವಷ್ಟು ತಾರತಮ್ಯವು ಭೂಮಿಯ ಇನ್ನು ಯಾವ ಸ್ಥಳಗಳಿಗೂ ಇರುವುದಿಲ್ಲ. ಆದುದರಿಂದಲೇ ಜಲಚರಪ್ರಾಣಿಗಳಿಗೂ ಭೂನಿವಾಸವಾದ ಪ್ರಣಿಗಳಿಗೂ ಎಷ್ಟೋಕಾಲದಿಂದ ಸಂಪೂರ್ಣ ಭೇದವುಂಟಾಗಿರುವುದು. ಭೂಗೋಳದಮೇಲೆ ಬಹುಕಾಲದಿಂದಲೂ ಜಲಭಾಗಗಳೂ ಸ್ಥಳಭಾಗಗಳೂ ಇದ್ದೇಇದ್ದುವೆಂಬುದನ್ನು ನಿರ್ಧರಿಸಬಹುದು. ಜಲವಾಸಿಗಳಾದ ಸಸ್ಯಪ್ರಾಣಿಗಳಿಗೂ ಭೂನಿವಾಸಿಗಳಾದ ಸಸ್ಯಪ್ರಾಣಿಗಳಿಗೂ ದೊಡ್ಡ ವ್ಯತ್ಯಾಸ ಉಂಟಾಗಲು ಸಾಗರದ ಆಳವೇ ಮುಖ್ಯವಾದ ಕಾರಣ. ಸಾಗರದ ಅತ್ಯಂತ ದೊಡ್ಡ ಸಸ್ಯಕ್ಕೂ ಕೂಡ ಕಾಂಡವು ದಪ್ಪವಾಗಿರಬೇಕಾದ್ದಿಲ್ಲ. ಏಕೆಂದರೆ—ಅದು ಬಿದ್ದುಹೋಗದಂತೆ ನೀರು ಅದನ್ನು ಬಲವಾಗಿ ನಿಲ್ಲಿಸುವುದು. ಅನೇಕ ಜಲಚರಪ್ರಾಣಿಗಳು ತಾವು ವಾಸಮಾಡುವ ನೀರಿಗಿಂತ ಬಲವಾಗಿರುವುದಿಲ್ಲ. ಆದುದರಿಂದ ನಿರಾಯಾಸವಾಗಿ ಈಜಬಲ್ಲವು. ಸಮುದ್ರದ ತಳದಲ್ಲೇ ವಾಸಮಾಡುವ ಎಷ್ಟೋ ಪ್ರಾಣಿಗಳಿಗೆ ಕಾಲುಗಳ ಆವಶ್ಯಕತೆ ಯಿಲ್ಲದ್ದರಿಂದ ಅವಕ್ಕೆ ಕಾಲುಗಳೇ ಇಲ್ಲ. ಅವಕ್ಕೆ

ಬೇಕಾದುದು ಮುಖ್ಯವಾಗಿ ರೆಕ್ಕೆಯಂತಿರುವ ಫಿನ್ಸ್ ಎಂಬ ಅವಯವ. ವಾತಾವರಣದಲ್ಲಿ ಈಜುವ ಹಕ್ಕಿಗಳಾದರೋ ವಾಯುವಿಗಿಂತ ಭಾರ. ಆದ್ದರಿಂದ ಅವು ಕೆಳಗೆ ಬೀಳದಿರುವುದಕ್ಕೆ ಸ್ವಶಕ್ತಿಯನ್ನು ಉಪಯೋಗಿಸಬೇಕಾಗಿದೆ. ಅಷ್ಟು ಚೆನ್ನಾಗಿ ಹಾರಬಲ್ಲವುಗಳುಕೂಡ ಭೂಮಿಯಮೇಲಣ ವೃಕ್ಷಗಳಲ್ಲಿ ಸ್ವಲ್ಪ ಹೊತ್ತಾದರೂ ಕುಳ್ಳಿರಲೇಬೇಕು. ಅವು ಕೆಳಗೆ ಇಳಿಯಲೆಳಸಿದಾದರೆ ಬಿದ್ದುಹೋಗುವ ಹಾಗೆ ಆಗುವುದು. ಆರೀತಿ ಬೀಳದಂತೆ ಸಹಾಯಮಾಡುವುದಕ್ಕೋಸ್ಕರ ಅವಕ್ಕೆ ಕಾಲುಗಳು ಆವಶ್ಯಕ.

(ಸಶೇಷ)

J. K. Sastry.

CHILD'S PRACTICE IN GRAMMAR AND COMPOSITION.

ಎರಡನೆಯ ವರ್ಗದ ವಿದ್ಯಾರ್ಥಿಗಳ ಭಾಷಾಪರಿಚಯಾಭ್ಯಾಸ.

ಹುಡುಗರಾ ! ನಾವು ಒಬ್ಬರೊಡನೆ ಒಬ್ಬರು ಮಾತಾಡುವಾಗ ಮಾತುಗಳನ್ನು ಉಪಯೋಗಿಸುತ್ತೇವಲ್ಲವೆ ? ಹೌದು. ಅವುಗಳಲ್ಲಿ ಹೆಚ್ಚಾಗಿ ಯಾವತೆರದ ಮಾತುಗಳು ಬರುತ್ತವೆ. ನಿಮಗೆ ಗೊತ್ತುಂಟೊ ? ಹೆಸರನ್ನು ಹೇಳುವ ಮಾತುಗಳೇ ಹೆಚ್ಚಾಗಿ ಬರುತ್ತವೆ. ಹೆಸರು ಎಂದರೆ ಏನು ? ಹೇಳಿ. ನಿಮ್ಮ ಈ ತರಗತಿಯಲ್ಲಿರುವವರ ಹೆಸರನ್ನು ಬರೆಯಿರಿ, ನೋಡೋಣ.

೧ ನೆಯ ಅಭ್ಯಾಸ.

ಈ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಮನುಷ್ಯರನ್ನೂ ಮತ್ತು ಸ್ಥಳಗಳನ್ನೂ ಹೇಳುವ ಮಾತುಗಳನ್ನು ಆರಿಸಿ ಹಲಗೆಗಳಮೇಲೆ ಬರಯಿರಿ:—

1 ಕೃಷ್ಣನು ಬೆಂಗಳೂರಿಗೆ ಎತ್ತಿನಮೇಲೆ ಪ್ರಯಾಣಹೊರಟನು.

2 ತಿಮ್ಮನೂ ನಂಜನೂ ಕಣ್ಣೇಗಾಲದಲ್ಲಿ ಒಕ್ಕಲಿದ್ದಾರೆ.

3 ತುಂಗಭದ್ರೆಯು ಹರಿಹರದ ಹತ್ತಿರ ಹರಿಯುತ್ತದೆ.

4 ಬೊಂಬಾಯಿಯು ಮದ್ರಾಸಿಗಿಂತ ಚಿಕ್ಕಪಟ್ಟಣ.

5 ನಮ್ಮ ಚಿಕ್ಕಪ್ಪ ಹನುಮಂತನು ಯಶವಂತಪುರದಿಂದ ದಾವಣಗೆರೆಗೆ ಹೋದನು.

6 ಗಂಗಾಬಾಯಿ ಮಠಕ್ಕೆ ಹೋಗುತ್ತಾಳೆ.

೨ ನೆಯ ಅಭ್ಯಾಸ.

ನೀವು ನೋಡಿರುವ ಯಾವುದಾದರೂ ನಾಲ್ಕು ಊರುಗಳು, ಮೂರು ಬೀದಿಗಳು, ಎರಡು ಬೆಟ್ಟಗಳು, ಇವುಗಳ ಹೆಸರನ್ನು ಬರೆಯಿರಿ. ಅವು ಯಾವುದರ ಹೆಸರು ತಿಳಿಸಿರಿ ?

೩ ನೆಯ ಅಭ್ಯಾಸ.

ಕೆಳಗಿರುವ ವಾಕ್ಯಗಳಲ್ಲಿ ಬಂದಿರುವ ಪಕ್ಷಿಗಳ ಮತ್ತು ಮೃಗಗಳ ಹೆಸರನ್ನು ಬರೆಯಿರಿ :—

ಕುದುರೆಯು ಹಂದಿಗಿಂತ ದೊಡ್ಡದು—ಆಮೆಯ ಮತ್ತು ಮೊಲದ ಕಥೆಯನ್ನು ಕೇಳಿದ್ದೇನೆ—ನಮ್ಮ ಕದುರೆ ಕಪ್ಪು—ಗುಬ್ಬಚ್ಚಿಯು ತಿಪ್ಪೆಯಮೇಲೆ ಹುಳುಗಳನ್ನೂ ಕಾಳುಗಳನ್ನೂ ಆದು ತಿನ್ನುತ್ತದೆ-ಕಾಗೆಯು ಗರುಡನಷ್ಟು ಎತ್ತರಕ್ಕೆ ಹಾರಲಾರದು-ಸಿಂಹದ ಘರ್ಜನೆಗೆ ಮಕ್ಕಳು ಹೆದರುತ್ತಾರೆ.

೪ ನೆಯ ಅಭ್ಯಾಸ.

ನೀವು ಬಲ್ಲ ಹತ್ತು ಮೃಗಗಳ ಮತ್ತು ಏಳು ಹಕ್ಕಿಗಳ ಹೆಸರುಗಳನ್ನು ಬರೆಯಿರಿ. ನೀವು ಶಾಲೆಯಿಂದ ಮನೆಗೆ ಹೋಗುವಾಗ ಹಾದಿಯಲ್ಲಿ ಕಂಡ ನಾಲ್ಕು ವಸ್ತುಗಳನ್ನು ಹೇಳಿ. ನಿಮ್ಮ ಮನೆಯಲ್ಲಿ ಸಾಕುವ ಪ್ರಾಣಿಗಳನ್ನು ಏನೆಂದು ಕರೆಯುತ್ತೀರಿ ?

೫ ನೆಯ ಅಭ್ಯಾಸ.

ಕೆಳಗೆ ಬರೆದಿರುವ ವಾಕ್ಯಗಳಲ್ಲಿ ಬರುವ ಹೆಸರುಗಳನ್ನೆಲ್ಲಾ ಆರಿಸಿರಿ. ಅವು ಎಂಥವು ? ಮನುಷ್ಯನ ಹೆಸರೋ ? ಬೆಟ್ಟ, ನದಿ, ಊರು, ಮರ, ಹಣ್ಣು ಇವುಗಳಲ್ಲಿ

ಯಾತರ ಹೆಸರು ಹೇಳಿ ! ಹಾಗೆ ವಿಂಗಡಿಸಿದಮೇಲೆ ಅವುಗಳನ್ನು ಸಾಲುಸಾಲಾಗಿ ಬರೆಯಿರಿ.

ಗೋವಿಂದನು ಅಪ್ಪನನ್ನು ಕಾಣಲು ಮೈಸೂರಿಗೆ ಹೋದನು. ಒಲೆಯ ಮೇಲೆ ಸಾರು ಕುದಿಯುತ್ತಿದೆ.

ಈ ತೋಟದಲ್ಲಿ ಮಾವಿನಮರಗಳಲ್ಲಿ ಹಣ್ಣುಗಳು ತುಲುಕುತ್ತಿವೆ.

ತೆಂಗು ತಿಪಟೂರಿನಲ್ಲಿ ಹೇರಳವಾಗಿ ಬೆಳೆಯುತ್ತದೆ. ಅಡಕೆಗೆ ಶೃಂಗೇರಿಯು ಬಹಳ ಪ್ರಸಿದ್ಧವಾಗಿದೆ.

ಗೂಬೆಗಳಿಗೆ ಇಲಿಗಳನ್ನು ಕಂಡರೆ ಬಹಳ ಪ್ರೀತಿ.

ವಿಜಯದಶಮಿಯ ದಿವಸ ಮಹಾರಾಜರ ಸವಾರಿಯನ್ನು ನೋಡಲು ಮೈಸೂರಿನ ದೊಡ್ಡಪೇಟೆಯಲ್ಲಿ ಹೆಂಗಸರೂ, ಗಂಡಸರೂ, ಹುಡುಗರೂ, ಹುಡುಗಿಯರೂ ಗುಂಪುಗುಂಪಾಗಿ ಕೂಡಿದ್ದರು.

ಒಬ್ಬ ಸವಾರನು ಕುದುರೆಯನ್ನು ಬಲವಾಗಿ ಓಡಿಸುತ್ತಾಹೋಗಿ ಬೀದಿಯಲ್ಲಿ ಆಡುತ್ತಿದ್ದ ಮಕ್ಕಳಮೇಲೆ ಬಿಟ್ಟನು; ಮಕ್ಕಳು ಹೆದರಿ ಪಕ್ಕದ ಬಚ್ಚಲುಗಳಲ್ಲಿ ಬಿದ್ದು ಕೈಕಾಲುಗಳನ್ನು ಮುರಿದುಕೊಂಡರು.

ಕಾವೇರಿಯು ಶಿವನಸಮುದ್ರದ ಹತ್ತಿರ ಧುಮುಕಿ ಬೆಟ್ಟಗಳ ಕಣಿವೆಯ ಮಾರ್ಗವಾಗಿ ಹರಿದುಹೋಗುತ್ತದೆ.

ಕಾಳನು ಕತ್ತೆಯನ್ನು ಕಲ್ಲಿನಿಂದ ಹೊಡೆದನು.

ಮಾವಿನಹಣ್ಣಿನ ರಸವು ಸಿಹಿಯಾಗಿದೆ.

ನಮ್ಮ ಅಣ್ಣನು ನನಗೆ ಒಂದು ಪಟವನ್ನು ಕೊಟ್ಟನು. ಅದರ ಸುತ್ತಲೂ ಬಿದರಿನ ಕಡ್ಡಿಗಳಿವೆ. ಆ ಕಡ್ಡಿಗಳಿಗೆ ಕೆಂಪುಕಾಗದ ಹಚ್ಚಿದೆ.

ಕೋಳಿಗಳು ಮನೆಯ ಅಂಗಳವನ್ನು ಬಿಟ್ಟು ಹೋಗವು. ಆ ನವಿಲು ಗೋಡೆಯಮೇಲೆ ಹಬ್ಬಿರುವ ಮಲ್ಲಿಗೆಯ ಗಿಡದಮೇಲೆ ಕುಳಿತಿದೆ

೬ ನೆಯ ಅಭ್ಯಾಸ.

2 ನೆಯ ಪುಸ್ತಕದಲ್ಲಿ 7 ನೆಯ ಪಾಠದಲ್ಲಿ ಹೆಸರನ್ನು ಹೇಳುವ ಮಾತುಗಳನ್ನು ಕಂಡುಹಿಡಿಯಿರಿ. ಅವು ಯಾವುದರ ಹೆಸರು ಎಂಬುದನ್ನು ಹೇಳಿ.

ಹುಡುಗರಾ! ನಾವು ಮಾತಾಡುವಾಗ ಹೆಸರುಗಳನ್ನೂ ಹೇಳುವ ಮಾತುಗಳನ್ನು ಹೇಳುತ್ತೇವೆಯಲ್ಲವೆ? ಅಂಥ ಮಾತುಗಳು ಮನುಷ್ಯರ, ಪ್ರಾಣಿಗಳ ಮತ್ತು ವಸ್ತುಗಳ ಹೆಸರನ್ನು ಹೇಳುತ್ತವೆ ಎಂದು ನಿಮಗೆ ಗೊತ್ತಾಯಿತಷ್ಟೆ. ಹೆಸರನ್ನು ಹೇಳುವ ಇಂಥ ಮಾತುಗಳನ್ನು ನಾಮವಾಚಕವೆಂದು ಕರೆಯುವರು. ರಾಮ ಕೃಷ್ಣ, ತಿಮ್ಮ, ರಾಮಿ, ಲಕ್ಷ್ಮಿ ಮುಂತಾದ ಮನುಷ್ಯರ ಹೆಸರುಗಳನ್ನೂ ಹಸು, ಸಿಂಹ, ಕುರಿ, ಕಾಗೆ, ಕೋಗಿಲೆ ಮುಂತಾದ ಪ್ರಾಣಿಗಳ ಹೆಸರನ್ನೂ ತಿಳಿಸುವ ಮಾತುಗಳು ನಾಮವಾಚಕಗಳೆನ್ನಿಸುವುವು. ನಾಮವೆಂದರೆ ಹೆಸರು, ವಾಚಕವೆಂದರೆ ಅದನ್ನು ಹೇಳುವ ಮಾತು ಎಂದರ್ಥ.

ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಬಿದರಿನಿಂದ ಕಾಗದಕ್ಕಾಗಿ ಪಿಷ್ಟವನ್ನು (Bamboo Pulp) ತಯಾರುಮಾಡಲು ಇರುವ ಸೌಕರ್ಯಗಳು.

ಕೆಲವು ವರ್ಷಗಳ ಹಿಂದೆಯೇ ಬಿದುರಿನ ನಾರು ಕಾಗದಮಾಡಲು ಅನುಕೂಲವಾದುದೆಂದು ನಿರ್ಧರಿಸಲ್ಪಟ್ಟಿತು. ಆದರೆ "ವಂಶಪಿಷ್ಟ"ವನ್ನು (Bamboo pulp) ಮಾಡುವುದಕ್ಕೆ ಇದ್ದ ತೊಡಕುಗಳನ್ನು ಈಚೆಗೆ ವಿಶೇಷ ಪ್ರಯತ್ನಗಳಿಂದ ಹೋಗಲಾಡಿಸಿ, ಈ ಪದಾರ್ಥವನ್ನು ಮಾರಾಟಕ್ಕೆ ಅನುಕೂಲವಾಗುವಷ್ಟು ಫಾಯಿದೆಯಿಂದ ಮಾಡಬಹುದಾಗಿ ನಿರ್ಧರಿಸಲ್ಪಟ್ಟಿರುವುದು.

ನಮ್ಮ ಮೈಸೂರು ಸೀಮೆಯ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಕಾಡುಗಳಲ್ಲಿ ಹೆಬ್ಬಿದರು, ಕಿರುಗಳು ಮತ್ತು ಗಾಟೆ ಬಿದರು ಎಂಬ ಮೂರು ಜಾತಿಯ ಬಿದರುಗಳು ದೊರೆಯುವುವು.

ಯಾತರ ಹೆಸರು ಹೇಳಿ! ಹಾಗೆ ವಿಂಗಡಿಸಿದಮೇಲೆ ಅವುಗಳನ್ನು ಸಾಲುಸಾಲಾಗಿ ಬರೆಯಿರಿ.

ಗೋವಿಂದನು ಅಪ್ಪನನ್ನು ಕಾಣಲು ಮೈಸೂರಿಗೆ ಹೋದನು. ಒಲೆಯ ಮೇಲೆ ಸಾರು ಕುದಿಯುತ್ತಿದೆ.

ಈ ತೋಟದಲ್ಲಿ ಮಾವಿನಮರಗಳಲ್ಲಿ ಹಣ್ಣುಗಳು ಕುಲುಕುತ್ತಿವೆ.

ತೆಂಗು ತಿಪಟೂರಿನಲ್ಲಿ ಹೇರಳವಾಗಿ ಬೆಳೆಯುತ್ತದೆ. ಅಡಕೆಗೆ ಶೃಂಗೇರಿಯು ಬಹಳ ಪ್ರಸಿದ್ಧವಾಗಿದೆ.

ಗೂಬೆಗಳಿಗೆ ಇಲಿಗಳನ್ನು ಕಂಡರೆ ಬಹಳ ಪ್ರೀತಿ.

ವಿಜಯುದಶಮಿಯ ದಿವಸ ಮಹಾರಾಜರ ಸವಾರಿಯನ್ನು ನೋಡಲು ಮೈಸೂರಿನ ದೊಡ್ಡಪೇಟೆಯಲ್ಲಿ ಹೆಂಗಸರೂ, ಗಂಡಸರೂ, ಹುಡುಗರೂ, ಹುಡುಗಿಯರೂ ಗುಂಪುಗುಂಪಾಗಿ ಕೂಡಿದ್ದರು.

ಒಬ್ಬ ಸವಾರನು ಕುದುರೆಯನ್ನು ಬಲವಾಗಿ ಓಡಿಸುತ್ತಾಹೋಗಿ ಬೀದಿಯಲ್ಲಿ ಆಡುತ್ತಿದ್ದ ಮಕ್ಕಳಮೇಲೆ ಬಿಟ್ಟನು; ಮಕ್ಕಳು ಹೆದರಿ ಪಕ್ಕದ ಬಚ್ಚಲುಗಳಲ್ಲಿ ಬಿದ್ದು ಕೈಕಾಲುಗಳನ್ನು ಮುರಿದುಕೊಂಡರು.

ಕಾವೇರಿಯು ಶಿವನಸಮುದ್ರದ ಹತ್ತಿರ ಧುಮುಕಿ ಬೆಟ್ಟಗಳ ಕಣಿವೆಯ ಮಾರ್ಗವಾಗಿ ಹರಿದುಹೋಗುತ್ತದೆ.

ಕಾಳನು ಕತ್ತೆಯನ್ನು ಕಲ್ಲಿನಿಂದ ಹೊಡೆದನು.

ಮಾವಿನಹಣ್ಣಿನ ರಸವು ಸಿಹಿಯಾಗಿದೆ.

ನಮ್ಮ ಅಣ್ಣನು ನನಗೆ ಒಂದು ಪಟವನ್ನು ಕೊಟ್ಟನು. ಅದರ ಸುತ್ತಲೂ ಬಿದರಿನ ಕಡ್ಡಿಗಳಿವೆ. ಆ ಕಡ್ಡಿಗಳಿಗೆ ಕೆಂಪುಕಾಗದ ಹಚ್ಚಿದೆ.

ಕೋಳಿಗಳು ಮನೆಯ ಅಂಗಳವನ್ನು ಬಿಟ್ಟು ಹೋಗವು. ಆ ನವಿಲು ಗೋಡೆಯಮೇಲೆ ಹಬ್ಬಿರುವ ಮಲ್ಲಿಗೆಯ ಗಿಡದಮೇಲೆ ಕುಳಿತಿದೆ.

೬ ನೆಯ ಅಭ್ಯಾಸ.

2 ನೆಯ ಪುಸ್ತಕದಲ್ಲಿ 7 ನೆಯ ಪಾಠದಲ್ಲಿ ಹೆಸರನ್ನು ಹೇಳುವ ಮಾತುಗಳನ್ನು ಕಂಡುಹಿಡಿಯಿರಿ. ಅವು ಯಾವುದರ ಹೆಸರು ಎಂಬುದನ್ನು ಹೇಳಿ.

ಹುಡುಗರಾ! ನಾವು ಮಾತಾಡುವಾಗ ಹೆಸರುಗಳನ್ನೂ ಹೇಳುವ ಮಾತುಗಳನ್ನು ಹೇಳುತ್ತೇವೆಯಲ್ಲವೆ? ಅಂಥ ಮಾತುಗಳು ಮನುಷ್ಯರ, ಪ್ರಾಣಿಗಳ ಮತ್ತು ವಸ್ತುಗಳ ಹೆಸರನ್ನು ಹೇಳುತ್ತವೆ ಎಂದು ನಿಮಗೆ ಗೊತ್ತಾಯಿತಷ್ಟೆ. ಹೆಸರನ್ನು ಹೇಳುವ ಇಂಥ ಮಾತುಗಳನ್ನು ನಾಮವಾಚಕವೆಂದು ಕರೆಯುವರು. ರಾಮು ಕೃಷ್ಣ, ತಿಮ್ಮ, ರಾಮಿ, ಲಕ್ಷ್ಮಿ ಮುಂತಾದ ಮನುಷ್ಯರ ಹೆಸರುಗಳನ್ನೂ ಹಸು, ಸಿಂಹ, ಕುರಿ, ಕಾಗೆ, ಕೋಗಿಲೆ ಮುಂತಾದ ಪ್ರಾಣಿಗಳ ಹೆಸರನ್ನೂ ತಿಳಿಸುವ ಮಾತುಗಳು ನಾಮವಾಚಕಗಳೆನ್ನಿಸುವುವು. ನಾಮವೆಂದರೆ ಹೆಸರು, ವಾಚಕವೆಂದರೆ ಅದನ್ನು ಹೇಳುವ ಮಾತು ಎಂದರ್ಥ.

ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಬಿದರಿನಿಂದ ಕಾಗದಕ್ಕಾಗಿ ಪಿಷ್ಟವನ್ನು (Bamboo Pulp) ತಯಾರುಮಾಡಲು ಇರುವ ಸೌಕರ್ಯಗಳು.

ಕೆಲವು ವರ್ಷಗಳ ಹಿಂದೆಯೇ ಬಿದುರಿನ ನಾರು ಕಾಗದಮಾಡಲು ಅನುಕೂಲವಾದುದೆಂದು ನಿರ್ಧರಿಸಲ್ಪಟ್ಟಿತು. ಆದರೆ "ವಂಶಪಿಷ್ಟ"ವನ್ನು (Bamboo pulp) ಮಾಡುವುದಕ್ಕೆ ಇದ್ದ ತೊಡಕುಗಳನ್ನು ಈಚೆಗೆ ವಿಶೇಷ ಪ್ರಯತ್ನಗಳಿಂದ ಹೋಗಲಾಡಿಸಿ, ಈ ಪದಾರ್ಥವನ್ನು ಮಾರಾಟಕ್ಕೆ ಅನುಕೂಲವಾಗುವಷ್ಟು ಫಾಯಿದೆಯಿಂದ ಮಾಡಬಹುದಾಗಿ ನಿರ್ಧರಿಸಲ್ಪಟ್ಟಿರುವುದು.

ನಮ್ಮ ಮೈಸೂರು ಸೀಮೆಯ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಕಾಡುಗಳಲ್ಲಿ ಹೆಬ್ಬಿದರು, ಕಿರುಗಳು ಮತ್ತು ಗಾರ್ಟೆ ಬಿದರು ಎಂಬ ಮೂರು ಜಾತಿಯ ಬಿದರುಗಳು ದೊರೆಯುವುವು.

ಹೆಬ್ಬಿದರಿನಲ್ಲಿ ಶೇಕಡಾ 44 ರಂತೆಯೂ, ಕಿರುಗಳುವಿನಲ್ಲಿ ಶೇಕಡಾ 38 ರಂತೆಯೂ "ವಂಶಪಿಷ್ಟವು" ದೊರೆಯುವುದು. ಗಾರ್ಟೆಬಿದರನ್ನು ಪರೀಕ್ಷಿಸಿ ಅದರಲ್ಲಿ ದೊರೆಯುವ ಪಿಷ್ಟ ಶೇಕಡೆಯನ್ನು ನಿರ್ಧರಿಸದಿದ್ದಾಗ್ಯೂ, ಅದೇಜಾತಿಯ ಬಿದರು ಇತರ ಕಡೆಯಲ್ಲಿ ಪರೀಕ್ಷಿಸಲ್ಪಟ್ಟಿರುವುದಲ್ಲದೆ, ಕಾಗದ ಮಾಡುವುದಕ್ಕೆ ಸಹ ಉಪಯೋಗಿಸಲ್ಪಟ್ಟಿರುವುದು.

ಹೆಬ್ಬಿದರು ಅನೇಕ ಕಡೆಯಲ್ಲಿ ಕಟ್ಟಿಹಾದುಹೋಗಿರುವುದಲ್ಲದೆ, ಇತರ ಸ್ಥಳಗಳಲ್ಲಿ ಸ್ವಲ್ಪದಿವಸಗಳಲ್ಲಿಯೇ ಕಟ್ಟಿಹಾಯುವ ಸಂಭವವಿರುವುದರಿಂದ ಪ್ರಕೃತಕ್ಕೆ ಒದಗಲಾರದು.

ಇನ್ನು ಕೆಲವು ವರ್ಷಗಳವರೆಗೆ "ವಂಶಪಿಷ್ಟ" ವ್ಯವಸಾಯಕ್ಕೆ ಕಿರಿಗಳುವೇ ಆಧಾರ. ಗಾರ್ಟೆಬಿದರು ಸ್ವಲ್ಪಮಟ್ಟಿಗೆ ಮಾತ್ರ ಸಹಾಯಕಾರಿಯಾಗುವುದು.

ನೀರಿನ ವಸತಿಯೂ, ಕಾಡಿನಿಂದ ಬರಬೇಕಾದ ಪದಾರ್ಥಗಳನ್ನು ತಂದು ಕೊಳ್ಳುವ ಮತ್ತು ತಯಾರಾದ ಪಿಷ್ಟವನ್ನು ಹೊರಗೆ ಕಳುಹಿಸುವ ಅನುಕೂಲಗಳೂ ಇರುವುದರಿಂದ ಶಿವಮೊಗ್ಗಾ ಪಟ್ಟಣವು ಈ ಕಾರ್ಖಾನೆಗೆ ಪ್ರಶಸ್ತವಾದ ಸ್ಥಳವಾಗಿರುವುದು.

ಸರಿಯಾದ ಲಾಭ ಸಂಪಾದನೆಗೆ ವಾರಕ್ಕೆ ಕನಿಷ್ಟಪಕ್ಷ 200 ಟನ್ ಅಂದರೆ ವರ್ಷಕ್ಕೆ 10,400 ಟನ್‌ಗಳ ಪಿಷ್ಟೋತ್ಪತ್ತಿಗೆ ತಕ್ಕ ಕಾರ್ಖಾನೆಯನ್ನು ಏರ್ಪಡಿಸಬೇಕಾಗುವುದು.

200 ಒಣಕಿರುಗಳು 1 ಟನ್ ತೂಗುವುದರಿಂದ, 1 ಟನ್ ಪಿಷ್ಟಕ್ಕೆ 2½ ಟನ್ ಅಂದರೆ 500 ಕಿರುಗಳುಗಳು ಬೇಕಾಗುವುವು. ಆದುದರಿಂದ 10,400 ಟನ್‌ಗಳ ಪಿಷ್ಟಕ್ಕೆ ವರ್ಷ ಒಂದಕ್ಕೆ 26,000 ಟನ್ ಅಥವಾ 52,00,000 ಕಿರುಗಳುಗಳು ಬೇಕಾಗುವುವು; ಹಾಲಿ ಇತರ ಉಪಯೋಗಗಳಿಗೆ ಬೇಕಾದಷ್ಟು ಕಳೆದು ಮೇಲ್ಕಂಡ ಕಾಡುಗಳಲ್ಲಿ ಸಾಲಿಯಾನ 57,05,000 ಅಂದರೆ 28,525 ಟನ್ ಒಣಕಿರುಗಳು ಸಂಶಯವಿಲ್ಲದೆ ದೊರೆಯುವುವು. ಒಂದು ಟನ್ ಅಂದರೆ 200 ಕಿರುಗಳುಗಳನ್ನು ಕಡಿದು ಕಾರ್ಖಾನೆಗೆ ಒದಗಿಸಲು ಸರಾಸರಿ 9-4-0 ರೂಪಾಯಿಗಳು ಬೇಕಾಗುವುದು.

ಈ ವ್ಯವಸಾಯಕ್ಕೆ ಆವಶ್ಯಕವಾಗುವ ಯಂತ್ರಗಳಿಗೂ ಮತ್ತು ಕಟ್ಟಡಗಳಿಗೂ ಸಹ 7,50,000 ರೂಪಾಯಿಗಳು ಬೇಕಾಗುವುವು.

ಒಂದು ಟನ್ ಸಾಧಾರಣ ಪಿಷ್ಟವನ್ನು ಮಾಡಲು ಈ ಕೆಳಗೆ ಕಂಡತೆ ಖರ್ಚು ತಗುಲುವುದು :—

	ರೂ. ಆ. ಪೈ.
ಕಿರುಗಳು (ಹಾನಲು ಸಹಿತ)	25—10—0
ಸೌದೆ ,,	22—0—0
ರಸಾಯನ ಸಾಮಗ್ರಿಯುಗಳು	31—0—0
ಮೇಲ್ವಿಚಾರಣೆ ಖರ್ಚು	7—0—0
ಉತಾರ್ ಬೆಲೆ (Depreciation)	6—5—0
ತೆರಿಗೆ ವಗೈರೆ	3—9—0
ಜುಮ್ಲ.	95—8—0

ಈ ಪಿಷ್ಟವನ್ನು ಹಸನುಮಾಡುವುದಕ್ಕೆ (Bleaching) ಟನ್ 1 ಕ್ಕೆ 32—8—0 ಹೆಚ್ಚು ಖರ್ಚು ತಗುಲುವುದು.

ಯುರೋಪ್ ಖಂಡದಿಂದ ಬರುವ ಪಿಷ್ಟದ ಬೆಲೆಗೆ ಹೋಲಿಸಿದರೆ, ಈ ಸಾಧಾರಣ (Unbleached) ವಂಶಪಿಷ್ಟವನ್ನು ಮದರಾಸಿನಲ್ಲಿ ಟನ್ 1 ಕ್ಕೆ 137—0—0 ರೂಪಾಯಿಗಳಂತೆ ಮಾರಬಹುದು. ಶಿವಮೊಗ್ಗೆಯಿಂದ ಮದರಾಸಿಗೆ ರೈಲ್ ಛಾರ್ಜಿಗಾಗಿ 15—8—0ಯನ್ನು ಮತ್ತು ಪೋಟಾಪೋಟಿ ವಗೈರೆ ಖರ್ಚಿಗೆ 6—0—0 ಗಳನ್ನೂ ವಜಾಮಾಡಿದಾಗ್ಯೂ ಟನ್ ಒಂದಕ್ಕೆ 20—0—0 ಗಳು ಲಾಭ ದೊರೆಯುವುದು.

ವರ್ಷ ಒಂದಕ್ಕೆ 10,400 ಟನ್‌ಗಳ ಪಿಷ್ಟವು ತಯಾರಾಗುವುದರಿಂದ, ಟನ್ ಒಂದಕ್ಕೆ 20—0—0 ರೂಪಾಯಿಗಳಂತೆ ಒಟ್ಟು 2,08,000—0—0 ರೂಪಾಯಿಗಳು ಫಾಯಿದೆ ದೊರೆಯುವುದು.

ಕಾರ್ಖಾನೆಯ ಯಂತ್ರ ಮತ್ತು ಕಟ್ಟಡ ಮೊದಲಾದುವುಗಳಿಗೂ ಮತ್ತು ಕಾರ್ಖಾನೆಯ ದಿನವಹಿ ಕೆಲಸದ ಖರ್ಚಿಗೂ ಸಹ ಬೇಕಾದ ಬಂಡವಾಳವು 12,40,000—0—0 ರೂಪಾಯಿಗಳಾಗುವುವು. ಆದುದರಿಂದ ಮೇಲ್ಕಂಡ ಫಾಯಿದೆ ಮೊಬಲಗು ಈ ಬಂಡವಾಳಕ್ಕೆ ಖರ್ಚು ವಗೈರೆ ಜಾತಾ ಶೇಕಡಾ 16 ರಂತೆ ನಫೆಯನ್ನು ಸಾಲಿಯಾನ ಕೊಡುವುದು.

ಹಾಲಿ ನಮ್ಮ ಹಿಂದೂದೇಶದಲ್ಲಿರುವ ಕಾಗದದ ಕಾರ್ಖಾನೆಗಳಿಗೆ ಬಹು ಮಟ್ಟಿಗೆ ವಿದೇಶದಿಂದ ಬರುವ ಪಿಷ್ಟವೇ ಆಧಾರವಾಗಿರುವುದರಿಂದ ನಮ್ಮಲ್ಲಿ ತಯಾರಾಗಬಹುದಾಗ ಪಿಷ್ಟಕ್ಕೆ ನಮ್ಮ ದೇಶದಲ್ಲಿಯೇ ಉಪಯೋಗವಿರುವುದಲ್ಲದೆ, ವಿದೇಶದ ಪಿಷ್ಟವನ್ನು ಆಶ್ರಯಿಸಿಕೊಂಡಿರುವ ಚೀಣಾ ಮತ್ತು ಜಪಾನ್ ದೇಶಗಳಲ್ಲಿಯೂ ನಮ್ಮ ಪಿಷ್ಟವನ್ನು (Pulp) ಫಾಯಿದೆಯಿಂದ ಮಾರಾಟಮಾಡಬಹುದು.

ನಮ್ಮ ದೇಶೀಯರಲ್ಲಿ ಧನಿಕರೂ ಸಾಹಸಿಗಳೂ ಆಗಿರುವವರು ತಮ್ಮ ದ್ರವ್ಯವನ್ನು ನಿರ್ಭಯವಾಗಿ ಲಾಭಕರವಾದ ಈ ವ್ಯವಸಾಯದಲ್ಲಿ (Industry) ಉಪಯೋಗಿಸಲು ಇದು ಉತ್ಕೃಷ್ಟವಾದ ಸಮಯವಾಗಿರುವುದು.

FOREST DEPARTMENT,
MYSORE.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ದೀಪದಕಡ್ಡಿಯನ್ನು ಮಾಡಲು ಇರುವ ಸೌಕರ್ಯಗಳು.

ಈ ಡಿಸ್ಟ್ರಿಕ್ಟಿನ ಕಾಡುಗಳಲ್ಲಿ ಸೌದೆಗಲ್ಲದೆ ಬೇರೆಯಾವುದಕ್ಕೂ ಪ್ರಯೋಜನವಾಗದ ಜಾತಿಯ ಮರಗಳನ್ನು ದೀಪದಕಡ್ಡಿಯ ಉಪಯೋಗಕ್ಕೆ ಪರೀಕ್ಷಿಸಿ ನೋಡುವಲ್ಲಿ ವಿದೇಶದ ದೀಪದಕಡ್ಡಿಗಳಿಗೆ ಸಮಾನವಾದ ಕಡ್ಡಿಗಳನ್ನು ಫಾಯಿದೆಯಿಂದ ನಮ್ಮ ಅನೇಕಜಾತಿಯ ಮರಗಳಿಂದ ಮಾಡಬಹುದಾಗಿ ಕಂಡುಬಂದಿರುವುದು.

ಈ ಕಾರ್ಖಾನೆಗೆ ಬೇಕಾಗುವ ಮರವು ಶಿವಮೊಗ್ಗಾ ಪಟ್ಟಣದ ಸಮೀಪದಲ್ಲಿರುವ ಸುಮಾರು 200 ಚದರಮೈಲಿಗಳ ಕಾಡುಗಳಲ್ಲಿ ದೊರೆಯುವುದಾದುದರಿಂದಲೂ, ನೀರಿನ ಮತ್ತು ರೈಲಿನ ಅನುಕೂಲತೆಗಳಿರುವುದರಿಂದಲೂ ಈ ಪಟ್ಟಣವು ಕಾರ್ಖಾನೆಗೆ ಅನುಕೂಲವಾದ ಸ್ಥಳವಾಗಿರುವುದು.

ದಿನವಹಿ 10 ಘಂಟೆಕಾಲದಂತೆ ವರ್ಷಕ್ಕೆ 300 ದಿವಸಗಳು ಕಾರ್ಖಾನೆಯಲ್ಲಿ ಕೆಲಸ ನಡೆಯುವುದಾದರೆ, ದಿನ ಒಂದಕ್ಕೆ ದೀಪದಕಡ್ಡಿಗಳಿಗಾಗಿ 185 ಸಲೆ ಅಡಿಗಳ ಮರವೂ, ಮೇಲುಪೆಟ್ಟಿಗೆಗಳಿಗೆ (Packing Cases), 35 ಸಲೆಅಡಿಗಳ ಮರವೂ ಅಂದರೆ ವರ್ಷ ಒಂದಕ್ಕೆ ಒಟ್ಟು 64,500 ಸಲೆ ಅಡಿಗಳ ಮರವು ಬೇಕಾಗುವುದು. ಈರೀತಿ ದಿನ 1 ಕ್ಕೆ 185 ಸಲೆ ಅಡಿ ಮರವು ಉಪಯೋಗಿಸಿದುದಾದರೆ 700 ಗ್ರೋಸ್ (Gross) ದೀಪದಕಡ್ಡಿ ಪೆಟ್ಟಿಗೆಗಳು ತಯಾರಾಗುವುವು. ಈ ಕಾರ್ಖಾನೆಗೆ ಸಾಲಿಯಾನ ಬೇಕಾದ 64,5000 ಸಲೆ ಅಡಿಗಳ ಮರವು ಮೇಲ್ಕಂಡ ಕಾಡುಗಳಿಂದ ದೊರೆಯುವುದರಲ್ಲಿ ಸಂದೇಹವಿಲ್ಲ.

ಈ ಕಾರ್ಖಾನೆಯಲ್ಲಿ ಆಗುವ ರೋಜೀನ ಆದಾಯ ವೆಚ್ಚದ ತಪ್ಸೀಲನ್ನು ಈ ಕೆಳಗೆ ವಿವರಿಸಿರುವುದು :—

	ಖರ್ಚು.		ರೂ. ಅ. ಪೈ.
I.	ಸಾಮಗ್ರಿಗಳ	,,	326—10—3
II.	ಕೂಲಿಯವರ	,,	34—4—0
III.	ಕಾರ್ಖಾನೆ ನೌಕರ್ರಾನೇರ ಸಂಬಳ		19—0—0
IV.	ಇತರ ಚಿಲ್ಲರೆ	,,	50—0—0
		ಜುಮ್ಲ.	429—14—3

	ಜಮೆ.	ರೂ. ಆ. ಪೈ.
700 ಗ್ರೋಸ್‌ಗಳಿಗೆ ಗ್ರೋಸ್ ಒಂದಕ್ಕೆ 12 ಆಣೆ ಮೇರೆ		525—0—0
ಖರ್ಚುಜಾತಾ ಆಯಿಕ್ ಲಾಭ		95—1—9
ಆದುದರಿಂದ ವರ್ಷ ಒಂದಕ್ಕೆ ಲಾಭ		28,532—0—0

ಈ ಕಾರ್ಖಾನೆಗೆ ಯಂತ್ರಗಳಿಗೂ, ಕಟ್ಟಡಕ್ಕೂ ಮತ್ತು ರೋಜೀನಾ ಖರ್ಚಿಗೂ ಸಹ ಬೇಕಾದ ಬಂಡವಾಳ 1,70,000—0—0. ಯಂತ್ರಗಳ ಮತ್ತು ಕಟ್ಟಡಗಳ ಉತಾರಿಗಾಗಿ 9,400—0—0 ರೂಪಾಯಿಗಳನ್ನು ಮೇಲ್ಕಂಡ ಲಾಭದಲ್ಲಿ ವಜಾಮಾಡಿದರೆ ಉಳಿಯುವ 19,132—0—0 ರೂಪಾಯಿಗಳು ಮೇಲೆ ನಮೂದಿಸಿದ 1,70,000—0—0 ರೂಪಾಯಿಗಳಿಗೆ ಸಾಲಿಯಾನ ಶೇಕಡಾ 11 ರಂತೆ ಫಾಯಿದೆ ಕೊಡುವುದು.

ಈ ದೀಪದಕಡ್ಡಿಗಳು ಪ್ರತಿಒಬ್ಬರೂ ಪ್ರತಿದಿವಸವೂ ಉಪಯೋಗಿಸುವ ಪದಾರ್ಥವಾಗಿರುವುದರಿಂದಲೂ, ಕಾರ್ಖಾನೆಯನ್ನು ಸ್ವಲ್ಪ ಬಂಡವಾಳದಲ್ಲಿ ಮಾಡಬಹುದಾಗಿಯೂ, ಇನ್ನೂ ಅಭಿವೃದ್ಧಿಪಡಿಸಿಕೊಳ್ಳುವುದಕ್ಕೂ ಅನುಕೂಲವಾದುದರಿಂದ ನಮ್ಮ ಸಂಸ್ಥಾನದ ಧನಿಕರೂ ಹಿತಚಿಂತಕರೂ ಈ ವ್ಯವಸಾಯವನ್ನು ಸ್ಥಾಪಿಸಿ ಲಾಭವನ್ನು ಸಂಪಾದಿಸಬಹುದಾಗಿರುವುದು.

FOREST DEPARTMENT,
MYSORE.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಸೀಸದಕಡ್ಡಿಗಳನ್ನು (Pencils) ಮಾಡಲು ಇರುವ ಸೌಕರ್ಯಗಳು.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಸೀಸದಕಡ್ಡಿ (Lead Pencils) ತಯಾರಿಗೆ ಸೌಲಭ್ಯಗಳು ಎಷ್ಟರಮಟ್ಟಿಗೆ ಇರುವುವೆಂದು ಪರೀಕ್ಷಿಸಿದ್ದರಲ್ಲಿ ಈ ಕೆಳಗೆ ನಮೂದಾಗುವ ಮರಗಳು ಅನುಕೂಲವಾಗುವುವೆಂದು ಕಂಡು ಬಂದಿರುವುವು :—

ಬೆಂಡೆ, ಹಾಲೆ, ಬೂರುಗ, ಕೂಳಿ, ಹೊಳೆಗಾರ, ದಾಲ್ಚಿನ್ನಿ, ಮಡ್ಲೆ, ಕಾಡು ಬೇವು, ಉಪ್ಪಾಲೆ, ಗುಳಮಾವು, ಚುರ್ಕಿ, ಬಾಳೆ ಮತ್ತು ಕರಿಬಲಿಗಿ.

ಇವುಗಳಲ್ಲದೆ ಘಟ್ಟದ ಕಾಡುಗಳಲ್ಲಿರುವ ಅನೇಕ ಮರಗಳು ಈ ಕೆಲಸಕ್ಕೆ ಉಪಯೋಗವಾಗುತ್ತವೆ.

ಸರಿಯಾದ ಲಾಭವನ್ನು ಸಂಪಾದಿಸಲು ಕನಿಷ್ಟಪಕ್ಷ ದಿನಕ್ಕೆ (8 ಘಂಟೆಕಾಲ) 300 ಗ್ರೋಸ್ (Gross) ನಂತೆ ತಯಾರುಮಾಡಲಾಗುವ ಕಾರ್ಖಾನೆಯನ್ನೇ ಏರ್ಪಡಿಸಬೇಕು. ಈ ರೀತಿಯಾಗಿ ಕೆಲಸ ನಡೆದರೆ ವರ್ಷಕ್ಕೆ ಅಂದರೆ 300 ದಿವಸಗಳಿಗೆ 90,000 ಗ್ರೋಸ್ (Gross) ಸೀಸದಕಡ್ಡಿ (Pencil) ಗಳನ್ನು ಮಾಡಬಹುದು. ಇಷ್ಟು ಸೀಸದಕಡ್ಡಿಗಳನ್ನು (Lead Pencils) ಮಾಡುವುದಕ್ಕೆ ಸಾಲಿಯಾನಾ ಬೇಕಾಗುವ 20,000 ಸಲೆಅಡಿ ಮರವು ಶಿವಮೊಗ್ಗಾ, ಬೆಂಕಿಪುರ ಮತ್ತು ತರೀಕೆರೆ ಇವುಗಳಿಗೆ ಸಮೀಪವಾಗಿರುವ ಕಾಡುಗಳಲ್ಲಿ ದೊರೆಯುವುದು.

ಪ್ರಕೃತದಲ್ಲಿರತಕ್ಕ ಅನುಕೂಲ ಸೌಲಭ್ಯಗಳಲ್ಲದೆ, ವಂಶಪಿಷ್ಟ (Bomboo pulp) ದ ಮತ್ತು ದೀಪದಕಡ್ಡಿಗಳ (Match) ಕಾರ್ಖಾನೆಗಳಿಗೆ ಏರ್ಪಡಿಸುವ ಸಲಕರಣಗಳು ಈ ವ್ಯವಸಾಯಕ್ಕೂ ಉಪಯೋಗಪಡುವುದರಿಂದ ಶಿವಮೊಗ್ಗಾ ಪಟ್ಟಣವು ಈ ಕಾರ್ಖಾನೆಗೂ ಅನುಕೂಲವಾಗುವುದು.

ಈ ಕೆಳಗೆ ನಮೂದಿಸಿರುವ ಅಂದಾಜಾ ಪಟ್ಟಿಯು ವಾರ್ನಿಷ್ ಸೀಸದಕಡ್ಡಿಗಳನ್ನು (Pencils) ಮಾಡಲು ಆಗುವ ಆದಾಯ ವೆಚ್ಚವನ್ನು ತೋರಿಸುವುದು :—

	ರೂ. ಆ. ಪೈ.
ಕಟ್ಟಡಗಳು ಮತ್ತು ಯಂತ್ರಗಳು (ಭೂಮಿಖರೀದಿ ಸಹಿತ)	95,042–0–0
ಕಾರ್ಖಾನೆ ಖರ್ಚಿಗೆ ಬೇಕಾವ ಮೊಬಲಗು	54,958–0–0
ಜುಮ್ಲಾ ಬಂಡವಾಳ	1,50,000–0–0

90,000 ಗ್ರೋಸ್ ವಾರ್ನಿಷ್ ಪೆನ್ಸಲ್ (Pencil) ಗಳನ್ನು ತಯಾರಮಾಡಲು ಸಾಲಿಯಾನ ತಗಲುವ ಕರ್ಚು :—

	ರೂ. ಆ. ಪೈ.
ಮರ, ಗ್ರ್ಯಾಫೈಟ್ (Graphite) ವಾರ್ನಿಷ್ ವಗೈರೆ ಸಾಮಾನುಗಳ ಖರೀದಿ	34,414–8–0
ಕಾರ್ಖಾನೆಯ ಕೂಲಿ ವಗೈರೆ ಖರ್ಚು	15,000–0–0
ಇತರ ಖರ್ಚುಗಳು	15,360–0–0
ಮಾರಾಟಕ್ಕಾಗಿ ಕಮಿಷನ್ ಖರ್ಚು	6,000–0–0
ಯಂತ್ರ ಮತ್ತು ಕಟ್ಟಡಗಳ ಉತಾರ (Depreciation) ಬೆಲೆ	6,978–0–0
ಜುಮ್ಲಾ ಖರ್ಚು	77,752–0–8

90,000 ಗ್ರೋಸ್‌ಗಳ ವಾರ್ನಿಷ್ ಸೀಸದಕಡ್ಡಿಗಳನ್ನು ಗ್ರೋಸ್ ಒಂದಕ್ಕೆ ರೂ. 1–2–0 ಕಡ್ಡಿ ಒಂದಕ್ಕೆ $1\frac{1}{2}$ ಕಾಸಿನ ಮೇರೆಗೆ ಮಾರಿದ್ದಾದರೆ ಬರುವ ಮೊಬಲಗು 1,01,250–0–0, ಖರ್ಚುಜಾತಾ ಉಳಿಯುವ ನೆಟ್ ಆದಾಯ 23,497–8–0. ಅಂದರೆ ಬಂಡವಾಳಕ್ಕೆ ಶೇಕಡ $15\frac{1}{2}$ ಯಂತೆ ಫಾಯಿದೆ ದೊರೆಯುವುದು.

ಸ್ವಲ್ಪ ಬಂಡವಾಳ ಬೇಕಾಗಿರುವುದಲ್ಲದೆ ಜಾಸ್ತಿ ಫಾಯಿದೆಕೊಡುವ ವ್ಯವಸಾಯವಾಗಿರುವುದರಿಂದ ಸಾಹಸಿಗಳಾದ ನಮ್ಮ ದೆ   ಕಾರ್ಖಾನೆಯನ್ನು ಸ್ಥಾಪಿಸಲು ತಕ್ಕ ಸಮಯವಾಗಿರುವುದು. ಮತ್ತು ಇನ್ನು ಸ್ವಲ್ಪ ಕಾಲದಲ್ಲಿಯೇ ಘಟ್ಟದ ಕಾಡುಗಳಿಂದ ಇತರಜಾತಿ ಮರಗಳನ್ನು ಸುಲಭ ಖರ್ಚಿನಿಂದ ಸಾಗಿಸಲು ಸೌಲಭ್ಯಗಳನ್ನು ಕಲ್ಪಿಸಿದನಂತರ ಈ ವ್ಯವಸಾಯವನ್ನು ಇನ್ನೂ ಹೆಚ್ಚು ಮಾಡಿಕೊಳ್ಳಲು ಅವಕಾಶವಿರುವುದು.

FOREST DEPARTMENT,
MYSORE.

ವಿದ್ಯಾದಾಯಿನಿ

(A Monthly Journal.)

ಭಾಗ ೨೨] ನವೆಂಬರ್—೧೯೧೪ [ಸಂಚಿಕೆ. ೧೧

ಭರತಖಂಡದ ವಿದ್ಯಾಭ್ಯಾಸ.

ಈಚೀಚೆಗೆ ವಿದ್ಯಾಭ್ಯಾಸದ ವಿಷಯಗಳು ಮತ್ತು ಅವನ್ನು ಬೋಧಿಸುವ ಕ್ರಮ ಇವುಗಳಲ್ಲಿ ಮೊದಲಿಗಿಂತಲೂ ಸಂಪೂರ್ಣಭಿನ್ನವಾದ ಅನೇಕ ಬದಲಾವಣೆಗಳುಂಟಾಗಿಯೂ ಆಗುತ್ತಲೂ ಇರುವುದು ಸರಿಯಷ್ಟೆ. ಪಾಠಪ್ರವಚನಗಳ ವಿಷಯಕವಾದ ನಿಯಮ, ಗುರುಶಿಷ್ಯರಿಗೆ ಪರಸ್ಪರ ಇರಬೇಕಾದ ಭಾವನೆಗಳು, ಮಾತಾಪಿತೃಗಳ ಕರ್ತವ್ಯ, ಇತ್ಯಾದಿ ಕ್ರಮಗಳೆಲ್ಲ ನಮ್ಮ ಆರ್ಯರಲ್ಲಿ ಅನಾದಿಕಾಲದಿಂದಲೂ ಆಚರಣೆಯಲ್ಲಿರುತ್ತಿದ್ದುದೇ ಆದರೂ ಪ್ರವಚನದ ಒಂದು ವಿಷಯಕ್ಕಾಗಿಯೇ ಬೇರೆ ಒಂದು ಶಾಸ್ತ್ರವುಗ್ರಂಥರೂಪದಲ್ಲಿ ಬರೆಯಲ್ಪಟ್ಟಿದ್ದಿತೋ ಅಥವಾ ಇಲ್ಲವೋ. ಹಾಗಿಲ್ಲದೆ ಒಂದುವೇಳೆ ಗ್ರಂಥರೂಪದಲ್ಲಿದ್ದ ಅದು ಏನಾದರೊಂದು ಕಾರಣದಿಂದ ನಾಶವಾಗಿ ಹೋಯಿತೋ ಯಾವುದನ್ನೂ ಹೇಳುವುದು ಕಷ್ಟವಾಗಿದೆ ಹಾಗೆ ಒಂದುವೇಳೆ ಗ್ರಂಥರೂಪವಾದ ಅಂತಹ ಶಿಕ್ಷಣ ಶಾಸ್ತ್ರವು ದೊರೆಯುವುದು ದುರ್ಲಭವಾದರೂ ಪಾಠಪ್ರವಚನ ಮೊದಲಾದುವುಗಳಾದರೂ ಪೂರ್ವದಂತೆಯೇ ನಡೆಯುತ್ತ ಇದ್ದಪಕ್ಷದಲ್ಲಿ ನಾವು ಅದರ ಸ್ವರೂಪವನ್ನು ಚೆನ್ನಾಗಿ ತಿಳಿಯಬಹುದಾಗಿದ್ದಿತು. ಈ ಪ್ರವಚನ ಶಾಸ್ತ್ರವು ಮಾತ್ರವಲ್ಲದೆ ಕೈಗಾರಿಕೆ, ಕುಶಲವಿದ್ಯೆಗಳು ಮೊದಲಾದ ಕಸಬುದಾರಿಗೆ ಸಂಬಂಧಪಟ್ಟ ಯಾವ ಯಾವ ಗ್ರಂಥಗಳು ಇದ್ದವೋ ಆ ಸಂಗತಿಯೂ ವ್ಯಕ್ತವಾಗಿ ತಿಳಿದು ಬರುತ್ತಿಲ್ಲ. ಅಂತು ಒಟ್ಟಿನಲ್ಲಿ ವೃತ್ತಿಶಾಸ್ತ್ರಗಳೂ

ಪ್ರವಚನಶಾಸ್ತ್ರವೂ ಎಷ್ಟಿದ್ದವು ಹೇಗಿದ್ದವು ಎಂಬುದು ನಮಗೆ ತಿಳಿಯದ ಅಂಶವಾಗಿದೆ. ನಮ್ಮ ಪ್ರಾಚೀನಪಾಠ ಪದ್ಧತಿಯು ಆಕಾಲದ ಆವಶ್ಯಕತೆಗೂ ಬೋಧ್ಯಬೋಧಕರ ಸ್ವಭಾವ ಮತ್ತು ಸನ್ನಿವೇಶಗಳಿಗೂ ಜನಗಳ ವೃತ್ತಿ, ವಿದ್ಯಾಭ್ಯಾಸ ಮಾಡತಕ್ಕವರ ಸಂಖ್ಯೆ, ಇವುಗಳಿಗೂ ಅನುಗುಣವಾಗಿದ್ದಿತು. ಅದೇ ಪದ್ಧತಿಯು ಅನುಸ್ಯೂತವಾಗಿ ನಡೆದುಕೊಂಡು ಬರುವುದಕ್ಕೆ ಹಲವುಬಗೆಯ ಪ್ರತಿಬಂಧನಗಳುಂಟಾದುವು. ಇವುಗಳಲ್ಲಿ ರಾಜ್ಯಭಾರಗಳ ಬದಲಾವಣೆಗಳು ಅತ್ಯಂತ ಮುಖ್ಯವಾದುವುಗಳು. ನಾವು ಹೇಳುವ ಹಿಂದಿನಕಾಲಗಳಲ್ಲಿ ಜನಗಳು ಈಗಿನಂತೆ ಜೀವನಕ್ಕಾಗಿಯೇ ಹೆಚ್ಚು ದುಡಿಯಬೇಕಾಗಿರಲಿಲ್ಲ. ರಾಜ್ಯವು ಸುಭಿಕ್ಷವಾಗಿರುತಿದ್ದಿತು. ಒಂದು ವರ್ಷ ಅಲ್ಪಾಯಾಸದಿಂದ ಬೆಳೆದ ಬೆಳೆಯಿಂದ 2–3 ವರ್ಷ ನಿರಾತಂಕವಾಗಿ ಜೀವನ ನಡೆಯುತ್ತಿದ್ದಿತು. ಆವಶ್ಯಕವಾದ ವಸ್ತುಗಳಿಗೋಸ್ಕರ ಮಾತ್ರವೇ ವಿನಾ ಭೋಗ್ಯವಸ್ತುಗಳಿಗಾಗಿ ಜನಗಳು ಈಗಿನಂತೆ ಹೆಚ್ಚು ಪ್ರಯತ್ನ ಮಾಡುತ್ತಿರಲಿಲ್ಲ. ಜನಗಳು ದೂರದ ಪ್ರಯಾಣಕ್ಕೆ ಅನುಕೂಲವಾದ ಯಾನಗಳನ್ನು ಪಡೆದಿರಲಿಲ್ಲವಾದುದರಿಂದ ಹೊರದೇಶಗಳೊಡನೆ ಬಳಕೆಯು ಬಲುಮಟ್ಟಿಗೂ ಕಡಮೆಯಾಗಿದ್ದಿತು. ಇತ್ಯಾದಿ ಕಾರಣಗಳಿಂದ ಪದಾರ್ಥಗಳು, ಭಾಷೆ, ಜನಗಳು ಇಂತಹವುಗಳು ಎಲ್ಲೆಲ್ಲಿದ್ದುವು ಅಲ್ಲಲ್ಲೇ ಇರಬೇಕಾಗಿದ್ದುವು ಹೀಗೆ ಯಾವಾಗ ಹಲವು ಜನಾಂಗದವರು ಪರಸ್ಪರ ಸೇರಲವಕಾಶವಿರಲಿಲ್ಲವೋ ಆಗ, ದೇಹರಕ್ಷಣೆಗೆ ಸುತರಾಂ ಅನಾವಶ್ಯಕವಾದರೂ ಈಗಿನವರು ನಾಗರಿಕತೆಗೆ ಮುಖ್ಯವೆಂದು ತಿಳಿದುಕೊಂಡು ವಿಶೇಷವಾಗಿ ಉಪಯೋಗಿಸುತ್ತಲಿರುವ ಅನೇಕವಿಧವಾದ ವಸ್ತುಗಳು ತಯಾರಾಗುವುದಕ್ಕೂ ಅವು ಸರ್ವತ್ರ ಹರಡುವುದಕ್ಕೂ ಅವಕಾಶವಿರಲಿಲ್ಲ. ಆದುದರಿಂದ ಒಟ್ಟಿನಲ್ಲಿ ನೋಡಿದರೆ ಆಗಿನವರಿಗೆ ಐಹಿಕವಿಚಾರಕ್ಕಾಗಿಯೇ ವಿಶೇಷ ಪ್ರಯತ್ನವು ಅನಾವಶ್ಯಕವು ಎಂದು ಕಂಡುಬಂದಿರಬಹುದು ಎನ್ನಬಹುದು. ಆದರೆ ಹಾಗೆ ಐಹಿಕವಿಚಾರಕ್ಕೆ ಹೆಚ್ಚಾಗಿ ಗಮನಕೊಡದಿದ್ದರೆಂದರೆ, ಅವರು ವಿನೂಅರಿಯದ ಕಾಡುಜನರಂತೆ ಒರಟರಾದ ಅನಾಗರಿಕರಾಗಿದ್ದರೆಂದು ಭಾವಿಸಬಾರದು. ಆಕಾಲದ ದೃಷ್ಟಿಯಿಂದ ನೋಡಿದಲ್ಲಿ ನಮ್ಮ ಪೂರ್ವರು ಆಗಿನ ಇತರ ಸಮಸ್ತ ಜನಾಂಗದವರಿಗಿಂತಲೂ ನಾಗರಿಕತೆಯಲ್ಲಿ ಅಗ್ರೇಸ

ರರಾಗಿಯೇ ಇದ್ದರು. ರಾಜ್ಯಭಾರಕ್ರಮ, ಕೃಷಿ, ವ್ಯಾಪಾರ, ನೇಯುವುದು ಮೊದಲಾದ ಕೈಗಾರಿಕೆ, ಲೋಹಗಳಿಂದ ಯಂತ್ರಾದಿಗಳ ರಚನೆ ಇಂತಹವುಗಳಲ್ಲಿ ಕೇವಲ ದಕ್ಷರಾಗಿಯೇ ಇದ್ದರು.

ಆದರೆ ಈ ಮೇಲೆ ತಿಳಿಸಿದ ಯಾವ ಕೆಲಸಗಳನ್ನೂ ಸ್ವವೃತ್ತಿಯಾಗಿ ಪಡೆಯದಿದ್ದರೂ ಆ ಕಸಬುದಾರರ ಅವಲಂಬನದಿಂದ ತಮಗೆ ಸರ್ವದಾ ನಿಶ್ಚಿಂತೆಯಿಂದ ಜೀವನವು ನಡೆಯುತಿದ್ದುದರಿಂದ ಕೆಲವು ಆರ್ಯರು ಅವರೆಲ್ಲರೂ ಮಾಡುತ್ತಿದ್ದ ಕಸಬುಗಳಿಗಿಂತ ಭಿನ್ನವಾದ ಮತ್ತೊಂದು ಬಗೆಯ ವೃತ್ತಿಯನ್ನು ಅವಲಂಬಿಸಿ ಬ್ರಾಹ್ಮಣರೆಂದೆನಿಸಿಕೊಂಡರು. ಆಮುಷ್ಮಿಕವಿಚಾರ ಎಂದರೆ ದೇವರ ವಿಷಯವಾದ ಆಲೋಚನೆ ಅದರ ಕ್ರಮ ಪೂಜೆ ಜಪತಪೋನುಷ್ಠಾನ ಇತ್ಯಾದಿಗಳಲ್ಲಿ ಅವರು ನಿರತರಾದರು. ಮತ್ತು ಇದರ ಜತೆಗೆ ಇತರರಿಗೆ ಪಾಠಪ್ರವಚನಗಳನ್ನು ನಡೆಯಿಸುವ ಕೆಲಸವೂ ಇವರ ಭಾಗಕ್ಕೇ ಬಿದ್ದಿತು. ಆದರೆ ಓದುಬರಹಗಳ ರೂಪದಲ್ಲಿ ನಡೆಯತಕ್ಕ ವಿದ್ಯಾಭ್ಯಾಸವೆಲ್ಲ ಆಮುಷ್ಮಿಕಪರರಾದ ಈ ಬ್ರಾಹ್ಮಣರು, ರಾಜ್ಯಭಾರ ಮಾಡತಕ್ಕ ಕ್ಷತ್ರಿಯರು, ಇವರಿಬ್ಬರಲ್ಲಿ ಮಾತ್ರವೇ ಪರ್ಯವಸಿತವಾಗಿದ್ದಿತು. ಇತರವಿಧವಾದ ಸಮಸ್ತ ಕಲಾಕೌಶಲ್ಯಗಳನ್ನೂ ನಡೆಯಿಸತಕ್ಕ ಜನಗಳೆಲ್ಲರೂ ವಾಗ್ರೂಪದಲ್ಲೇ ಇವರ ಬುದ್ಧಿವಾದವನ್ನು ಪಡೆಯುತ್ತ ತಮ್ಮ ತಮ್ಮ ಕೆಲಸಗಳನ್ನು ನಡೆಯಿಸಿಕೊಂಡು ಹೋಗುತ್ತಿದ್ದುದರಿಂದ ಅವರಿಗೆ ಓದುಬರಹಗಳ ರೂಪವಾದ ವಿದ್ಯಾಭ್ಯಾಸವು ಅನಾವಶ್ಯಕವೆಂದು ಆಗಿದ್ದಿತು. ಈ ವಿದ್ಯಾಭ್ಯಾಸವು ಹೀಗೆ ಎರಡು ಜಾತಿಯವರಲ್ಲೇ ಪರಿಚ್ಛಿನ್ನವಾಗಿದ್ದುದರಿಂದ ಒಟ್ಟಿನಲ್ಲಿ ಓದತಕ್ಕವರ ಸಂಖ್ಯೆಯು ಕಡಮೆಯಾಗಿದ್ದಿತು. ಅಲ್ಲದೆ ಪ್ರಜಾಸಂಖ್ಯೆಯೂ ಈಗಿನಷ್ಟು ಹೆಚ್ಚಿರಲಿಲ್ಲ. ಮತ್ತು ಪ್ರತಿಯೊಂದು ಶಾಸ್ತ್ರ, ಗ್ರಂಥ, ಮೊದಲಾದುದರಲ್ಲೆಲ್ಲಾ ಮತವಿಚಾರವನ್ನು ಮುಖ್ಯಾಂಗವನ್ನಾಗಿ ಪರಿಗಣಿಸಿದ್ದುದರಿಂದ ಯಾವುದೊಂದು ಬೋಧನೆಯಲ್ಲೂ ಆ ವಿಷಯವು ಬೆರೆತೇ ಇರುತಿದ್ದಿತು.

ಬಹುಕಾಲ ಹೀಗೆ ನಡೆದ ಬಳಿಕ ಆಗಾಗ್ಗೆ ಸಂಭವಿಸಿದ ರಾಜಕೀಯವಾದ ಬದಲಾವಣೆಗಳು ಮೇಲಿನ ಕ್ರಮದ ಶಾಂತಿಗೆ ಭಂಗವನ್ನು ತಂದುವು. ಕಸಬುದಾ

ರರಿಗೆ ಮೇಲಿನವರ ಬುದ್ಧಿವಾದವು ತಪ್ಪುತ ಬಂದುದರಿಂದ ಆ ಕಸಬುಗಳು ಅಲ್ಲಿಂದ ಮುಂದಕ್ಕೆ ವೃದ್ಧಿಗೆ ಬರಲು ಅಡಚಣೆಯುಂಟಾಯಿತು. ಮೊದಲು ಮೊದಲು ಎಲ್ಲೋ ಕಾಡುಗಳ ಏಕದೇಶಗಳಲ್ಲಿ ಸೇರಿಕೊಂಡಿದ್ದ ಜನಗಳು ಸಂಖ್ಯೆಯಲ್ಲಿ ಹೆಚ್ಚುತ ಬಂದುದರಿಂದ ಹೊಸವಸತಿಗಳನ್ನು ಕಲ್ಪಿಸಿಕೊಳ್ಳುವುದಕ್ಕೋಸ್ಕರ ಕಾಲಕ್ರಮೇಣ ಭರತಖಂಡದ ವಿಸ್ತಾರವಾದ ಸಮಸ್ತ ಪ್ರದೇಶಗಳಲ್ಲೂ ಹರಡಿಕೊಂಡರು. ಆದುದರಿಂದ ಸ್ವಜನಗಳಲ್ಲಿ ಕೂಡ ಪರಸ್ಪರ ಬಳಕೆಗೆ ಅವಕಾಶ ತಪ್ಪಿ ಕಸಬುಗಳು ಉತ್ತಮಸ್ಥಿತಿಗೆ ಬಾರದಿರುವುದಕ್ಕೂ ಹಲವು ಭಾಷೆಗಳು ಹುಟ್ಟುವು ವುದಕ್ಕೂ ಕಾರಣವಾಯಿತು. ಹೀಗೆ ಆಗುತ ಬಂದುದರಿಂದ ಜಾತಿಭೇದ, ಭಾಷಾಭೇದ, ವೃತ್ತಿಭೇದ ಮೊದಲಾದುವುಗಳು ಬೆಳೆಯುತ ಬಂದುವು. ಇದರಿಂದ ಕೈಗಾರಿಕೆಯ ಬೆಳೆವಳಿಕೆಯ ಅಭಿವೃದ್ಧಿಯು ನಿಂತುಹೋಯಿತಾದರೂ ಗ್ರಂಥರೂಪದಲ್ಲಿ ರಚಿಸಲ್ಪಟ್ಟ ಆಮುಷ್ಮಿಕ ವಿಚಾರವಾದ ಶಾಸ್ತ್ರಗಳೇನೋ ತುಟ್ಟತುದಿಯನ್ನು ತಲಪುವಮಟ್ಟಿಗೂ ವೃದ್ಧಿಗೆ ಬಂದುವು. ಮೇಲೆ ಹೇಳಿದಂತೆ ಜನಮಂಡಲಿಯು ಚದರಿಹೋದನಂತರ ಆಯಾಕಾಲದೇಶ ಕರ್ಮ ಸನ್ನಿವೇಶಗಳಂತೆ ಜನರ ಬುದ್ಧಿಯೂ ಅದರ ಸ್ವರೂಪವೂ ಬದಲಾಯಿಸುತ್ತ ಬಂದುವು. ಆಮೇಲೆ ಎಂದರೆ ಎಷ್ಟೋ ಶತಮಾನಗಳಾದ ಅನಂತರ ಪ್ರಪಂಚದ ಸಮಸ್ತ ರಾಜ್ಯಗಳವರಸಂಗಡಲೂ ಬಳಸಬಹುದಾದ ಸಕಲವಿಧವಾದ ಸೌಕರ್ಯಗಳೂ ಕಾಲಕ್ರಮೇಣ ಒದಗುತ್ತ ಬಂದುವು. ಪೂರ್ವದಲ್ಲಿದ್ದಂತೆ ಆಯಾ ಕಸಬಿನವರೇ ಅದದನ್ನು ಮಾಡಬೇಕೆಂಬ ನಿರ್ಬಂಧವು ತಪ್ಪಿಹೋಯಿತು. ಯಾರು ಯಾವ ಕಸಬನ್ನು ಬೇಕಾದರೂ ಮಾಡಬಹುದೆಂದು ಜನಗಳ ಮನಸ್ಸಿಗೆ ತೋರುತ್ತ ಬಂದಿತು. ದೇಶಾಂತರಗಳ ಭೋಗ್ಯವಸ್ತುಗಳು ಇಲ್ಲಿಗೆ ಬರುವುದಕ್ಕೂ ಇಲ್ಲಿನ ಪ್ರಾಣಾಧಾರ ವಸ್ತುಗಳು ಹೊರಗೆ ಸಾಗಿಸಲ್ಪಡುವುದಕ್ಕೂ ಮೊದಲಾದಮೇಲೆ ಜನಗಳು ತಮ್ಮ ಜೀವನಕ್ಕೋಸ್ಕರವಾಗಿ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಬೇಕಾಗಿ ಬಂದಿತು. ಉತ್ತಮವಾದ ವ್ಯಾಪಾರ, ನಾನಾಜನಾಂಗಗಳ ಸಮ್ಮೇಳನ, ಭೋಗಾಭಿಲಾಷೆ ಇತ್ಯಾದಿಗಳೆಲ್ಲ ಹೆಚ್ಚುತ ಬಂದುದರಿಂದ ಯಾರು ಯಾವ ಕಸಬನ್ನು ಅವಲಂಬಿಸಿ ಎಷ್ಟು ಪದಾರ್ಥಗಳನ್ನು ತಯಾರು ಮಾಡಿದರೂ

ಇತರರಿಗೂ ತಮಗೂ ತುಂಬ ಪ್ರಯೋಜನಕಾರಿಯೆಂಬ ಭಾವನೆಯು ಪ್ರಜಾಕೋಟಿಯು ಹೆಚ್ಚು ಸಂಖ್ಯೆಯವರಲ್ಲಿ ಅಂಕುರಿಸುತ್ತ ಬಂದುದೂ ಹೀಗೆ ವೃತ್ತ್ಯಂತರಗಳ ಅವಲಂಬನೆಗೂ ನಾಗರಿಕತೆಯ ಹೆಚ್ಚಿಕೆಗೂ ಒಂದು ಸಾಧಕವಾಯಿತು. ಹಲವು ಕಸಬುಗಳು ತುಂಬ ಮೇಲ್ಮೆಯನ್ನು ಪಡೆಯಬೇಕಾಗಿ ಬಂದಿತಾದುದರಿಂದ ಬರೀ ಹಿಂದಿನ ಅನುಭವವು ಮಾತ್ರ ಸಾಲದೆ ಬಂತು. ಆ ವಿಷಯವಾಗಿ ಹೊಸಹೊಸ ಶೋಧನೆಗಳೂ ಸೌಕರ್ಯಗಳೂ ಅವಶ್ಯವಾದುವಾದುವಾಗಿ ಆಯಾ ವೃತ್ತಿಗಳ ಶಾಸ್ತ್ರಗಳನ್ನು ಆಮೂಲಾಗ್ರವಾಗಿ ತಿಳಿಯಬೇಕಾಗಿ ಬಂದಿತು. ಆದುದರಿಂದ ಪೂರ್ವದಲ್ಲಿದ್ದಂತೆ ಒಂದೆರಡು ಜಾತಿಯವರು ಮಾತ್ರ ಓದಿದರೆ ಸಾಕೆಂಬ ಭಾವನೆಯು ತಪ್ಪುತ ಬಂದುದಲ್ಲದೆ ಪ್ರತಿಯೊಬ್ಬರೂ (ತಾವು ಅವಲಂಬಿಸುವ ಪ್ರತಿಯೊಂದು ಕಸಬಿನಲ್ಲಿಯೂ ಮೇಲಾದ ಅನುಭವವನ್ನೂ ಜ್ಞಾನ್ಮೆಯನ್ನೂ ಪಡೆದು ಊರ್ಜಿತಸ್ಥಿತಿಗೆ ಬರುವುದಕ್ಕೂ ಎಲ್ಲರಿಗೂ ಓದುಬರಹದ ಮೂಲಕವಾದ ವಿದ್ಯಾಭ್ಯಾಸವು ಅತ್ಯಾವಶ್ಯಕವಾಗಿ ಕಂಡುಬಂದಿತು. ಹಾಗೆ ಓದುಬರಹಗಳ ಮೂಲಕ ವಿದ್ಯಾಭ್ಯಾಸ ಮಾಡುವುದರಲ್ಲೂ ಅವರವರ ಮಾತೃಭಾಷೆಯನ್ನು ಮೊದಲು ಅಭ್ಯಾಸ ಮಾಡಿ ಅದರಲ್ಲಿ ತಕ್ಕಮಟ್ಟಿಗಾದರೂ ಪರಿಶ್ರಮವನ್ನು ಪಡೆಯಬೇಕಾಗಿ ಬಂದಿತು. ಹೀಗೆ ಪ್ರತಿಯೊಂದುಕಸಬಿನವರೂ ತಮ್ಮ ತಮ್ಮ ಮಾತೃಭಾಷೆಯಲ್ಲಿ ಪರಿಶ್ರಮ ಪಡೆದರೂ ಅವರ ಶ್ರಮಕ್ಕೆ ತಕ್ಕ ಪ್ರತಿಫಲವು ದೊರೆಯಬೇಕಾದರೆ ಅವರ ಮುಖ್ಯಲಕ್ಷ್ಯವಾದ ವೃತ್ತಿಗಳ ವಿಷಯವಾಗಿ ಹೆಚ್ಚು ತಿಳಿವಳಿಕೆಯನ್ನು ಕೊಟ್ಟು ಉಪಕರಿಸುವಂತಹ ,ಗ್ರಂಥಗಳು ಆಯಾ ಭಾಷೆಗಳಲ್ಲೂ ಇರಬೇಕಾಗಿ ಬಂದಿತು. ಆದರೆ ಹಿಂದೆ ಹೇಳಿರುವಂತೆ ನಮ್ಮ ದೇಶದಲ್ಲಿ ಅನೇಕ ಬಗೆಯ ಕೈಗಾರಿಕೆಗಳು ಗ್ರಂಥಗಳ ಸಹಾಯಕ್ಕಿಂತಲೂ ಅನುಭವದ ಆಧಾರವನ್ನೇ ಹೆಚ್ಚಾಗಿ ಪಡೆದಿದ್ದುದರಿಂದಲೂ ಅಂತಹ ಕೈಗಾರಿಕೆಯ ಶಾಸ್ತ್ರಗಳು ನಮ್ಮಲ್ಲಿದ್ದುದಕ್ಕಿಂತಲೂ ಪಾಶ್ಚಾತ್ಯರಲ್ಲೇ ಗ್ರಂಥರೂಪದಲ್ಲೂ ಮತ್ತು ಅನುಭವರೂಪದಲ್ಲೂ ವಿಶೇಷವಾಗಿ ಪ್ರಚಾರಗೊಂಡಿರುವುದರಿಂದಲೂ ಆ ಗ್ರಂಥಗಳ ಹಲವು ಭಾಷೆಗಳಲ್ಲಿ ಪರಿವರ್ತಿಸಲ್ಪಡಬೇಕಾಗಿ ಬಂದವು. ಎಷ್ಟೇ ಪರಿವರ್ತಿತವಾದರೂ ಮೂಲಗ್ರಂಥಗಳ ತಾತ್ಪರ್ಯ ಸಂಗ್ರಹಗಳು ಮಾತ್ರ ದೇಶಭಾಷೆಯ ಪುಸ್ತಕ

ಗಳ ಸಹಾಯದಿಂದ ತಿಳಿಯಬಹುದಾದವೇ ವಿನಾ ಅವುಗಳನ್ನು ಸವಿಸ್ತಾರವಾಗಿ ತಿಳಿಯಬೇಕಾದರೆ ಮೂಲಗ್ರಂಥಗಳು ಯಾವ ಪಾಶ್ಚಾತ್ಯ ಭಾಷೆಯಲ್ಲಿ ಬರೆಯಲ್ಪಟ್ಟಿವೆಯೋ ಆ ಭಾಷೆಯನ್ನೇ ಕಲಿಯಬೇಕಾಯಿತು. ಪ್ರಕೃತದಲ್ಲಿ ಪ್ರಪಂಚದಲ್ಲಿರುವ ಸಮಸ್ತವಿಧವಾದ ಕೈಗಾರಿಕೆ ಕುಶಲ ವಿದ್ಯೆಗಳ ವಿಷಯಕವಾದ ಶಾಸ್ತ್ರಗಳೂ ಇಂಗ್ಲಿಷ್ ಭಾಷೆಯಲ್ಲೇ ಹೆಚ್ಚಾಗಿರುವುದರಿಂದಲೂ ನಾವೂ ಇಂಗ್ಲಿಷ್ ಪ್ರಭುಗಳ ಪ್ರಜೆಗಳಾಗಿರುವುದರಿಂದಲೂ ಈಗಿನ ಸರ್ಕಾರದ ಕಾರುಬಾರುಗಳೆಲ್ಲ ಇಂಗ್ಲಿಷ್ ಭಾಷೆಯ ಮೂಲಕವೇ ನಡೆಯುತ್ತಿರುವುದರಿಂದಲೂ ಜನಗಳೆಲ್ಲ ದೇಶಭಾಷೆ ಮತ್ತು ಮಾತೃಭಾಷೆಗಳಿಗಿಂತಲೂ ಇಂಗ್ಲಿಷ್ ಭಾಷೆಯನ್ನು ಕಲಿಯುವುದರಲ್ಲೇ ಹೆಚ್ಚು ಆದರಪಡುತ್ತಲೂ ಅದನ್ನೇ ಹೆಚ್ಚಾಗಿ ಪುರಸ್ಕರಿಸುತ್ತಲೂ ಬಂದರು. ತಿಳಿವಳಿಕೆಯು ಮತ್ತು ನಾಗರಿಕತೆಯು ಪ್ರಯೋಜನವನ್ನು ಹೆಚ್ಚು ಹೆಚ್ಚಾಗಿ ತಿಳಿಯುತ್ತ ಬಂದಂತೆಲ್ಲ ವಿದ್ಯಾಭ್ಯಾಸದ ವಿಚಾರದಲ್ಲಿ ಗೌರವಬುದ್ಧಿಯು ಇನ್ನೂ ಹೆಚ್ಚುತ್ತ ಬಂದಿತು.

ಅಂತು ಇದುವರೆಗೆ ಹೇಳಿರುವುದನ್ನೆಲ್ಲ ಒಟ್ಟಾಗಿ ಪರಿಶೀಲಿಸಿ ನೋಡುವುದರಲ್ಲಿ ವಿದ್ಯಾಭ್ಯಾಸದ ವಿಷಯದಲ್ಲಿ 3 ದರ್ಜೆಗಳನ್ನು ವಿಂಗಡಿಸಬಹುದೆಂದಾಯಿತು, (1) ಎಲ್ಲಾ ವಿಧವಾದ ಕಸಬುದಾರಿಗಳಿಗೂ ವಿದ್ಯಾಭ್ಯಾಸವು ಆವಶ್ಯವು ಎಂಬುದು. ಇದನ್ನು ದೃಢೀಕರಿಸುವುದಕ್ಕೆ ಅನೇಕ ದೃಷ್ಟಾಂತಗಳನ್ನು ಕೊಡಬಹುದು. ವ್ಯವಸಾಯ, ವ್ಯಾಪಾರ, ಕಟ್ಟಡ, ಯಂತ್ರಗಳು ಇತ್ಯಾದಿಗಳಲ್ಲೆಲ್ಲ ಸಾಮಾನ್ಯ ವಿದ್ಯಾವಂತನಾದ ಕಸಬುದಾರನಿಗೂ ಅಕ್ಷರಜ್ಞನಲ್ಲದವನಿಗೂ ಇರುವ ತಾರತಮ್ಯದಿಂದಲೇ ಕಸಬುದಾರರಿಗೆ ವಿದ್ಯೆಯಿಂದ ಆಗತಕ್ಕ ಪ್ರಯೋಜನವು ಸ್ಪಷ್ಟಪಡುವುದು. (2) ಓದುಬರಹವನ್ನು ಬಲ್ಲವರಲ್ಲೂ ಯಾರು ತಮ್ಮ ಕಸಬಿಗೋಸ್ಕರವಾಗಿಯೇ ಬರೆಯಲ್ಪಟ್ಟ ಗ್ರಂಥಗಳನ್ನು ವ್ಯಾಸಂಗ ಮಾಡಿರುವರೋ ಅಂತಹವರಿಗೂ ಏನೋ ಸಾಮಾನ್ಯವಾಗಿ ಯಾವುದನ್ನಾದರೂ ಓದುವ ಮತ್ತು ಬರೆಯುವಮಟ್ಟಿಗೇ ಕಲಿತಿರುವವರಿಗೂ ಕಾಣಬರುವ ವ್ಯತ್ಯಾಸದಿಂದ ಕಸಬುದಾರಿಯ ಶಿಕ್ಷಣಕ್ಕೆ ಕಸಗೆ ತಮ್ಮ ತಮ್ಮ ದೇಶಭಾಷೆಗಳಲ್ಲಿರುವ ಗ್ರಂಥಗಳನ್ನಾದರೂ ವ್ಯಾಸಂಗಮಾಡಿರುವುದು

ಎಷ್ಟು ಮೇಲೆಂಬುದು ವ್ಯಕ್ತವಾಗುವುದು. (೩) ಈ ಮೇಲಿನ ಇಬ್ಬರಿಗಿಂತಲೂ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಓದಿದವರ ಬುದ್ಧಿಕೌಶಲವು ಎಷ್ಟು ಹೆಚ್ಚಾಗಿರುವುದೆಂಬುದು ಅನೇಕರಿಗೆ ಗೊತ್ತಾಗುತಿದೆ. ಮತ್ತು ಆ ಭಾಷೆಯೊಂದನ್ನು ವಶಮಾಡಿಕೊಂಡರೆ ಯಾವಬಗೆಯ ಕಸಬುದಾರಿಯ ಪ್ರಾವೀಣತೆಗಾದರೂ ಸರಿಯಾದ ಅವಕಾಶವುಂಟಾಗುವುದು. ಈ ಕ್ರಮದಂತೆ ನೋಡುವುದರಲ್ಲಿ ನಮ್ಮ ರಾಜ್ಯದ ಸಮಸ್ತ ಪ್ರಜೆಗಳೂ ಒಂದೇ ಮಟ್ಟದಲ್ಲಿಲ್ಲ. ಕೆಲವರಿಗೆ ಓದುಬರಹವು ಆವಶ್ಯಕವೆಂಬುದನ್ನು ಕೂಡ ತಿಳಿಸಿ ಈಗೀಗ ಅಕ್ಷರಾಭ್ಯಾಸಕ್ಕೆ ಪ್ರವರ್ತನೆ ಮಾಡಿಸಬೇಕಾಗಿದೆ. ದೇಶಭಾಷೆಯನ್ನು ಸುಮಾರಾಗಿ ಬಲ್ಲ ಇನ್ನೂ ಕೆಲವರಿಗೆ ಆ ಭಾಷಾಸ್ವರೂಪವನ್ನು ಚೆನ್ನಾಗಿ ತಿಳಿಸುವುದಲ್ಲದೆ ಆ ಭಾಷೆಗಳಲ್ಲೇ ಕಸಬುದಾರಿಯ ಶಾಸ್ತ್ರವನ್ನೂ ಕಲಿಸಬೇಕಾಗಿದೆ, ಇನ್ನೂ ದೂರದೃಷ್ಟಿಯಿಂದ ಪರಮಫಲದಮೇಲೆ ದೃಷ್ಟಿಯಿಟ್ಟು ಕಾಲ ದೇಶ ದ್ರವ್ಯಕಷ್ಟಗಳನ್ನೂ ಲಕ್ಷೀಕರಿಸದೆ ಜ್ಞಾನಾರ್ಜನೆಗೂ ಕಲಾಕೌಶಲ್ಯಕ್ಕೂ ಹಾರಯಿಸತಕ್ಕವರಿಗೆ ಇಂಗ್ಲೀಷನ್ನೂ ಅದರಲ್ಲೂ ಪ್ರೌಢಶಿಕ್ಷಣವನ್ನೂ ವೃತ್ತಿಶಾಸ್ತ್ರಗಳನ್ನೂ ಕಲಿಸಬೇಕಾಗಿದೆ. ಈ ಉದ್ದೇಶಗಳನ್ನೆಲ್ಲಾ ಸರಿಯಾಗಿ ಈಡೇರಿಸುವುದಕ್ಕಾಗಿಯೇ ಸರ್ಕಾರದವರು ನಾನಾವಿಧವಾದ ಸ್ಕೂಲ್‌ಗಳನ್ನು ಏರ್ಪಡಿಸುವುದು. ಸಾಮಾನ್ಯವಾಗಿ ಓದುಬರಹಗಳನ್ನು ಕಲಿಸುವ ಪ್ರೈಮರಿ ಸ್ಕೂಲುಗಳು ಆಯಾ ಭಾಷೆಗಳಲ್ಲಿ ತಕ್ಕಮಟ್ಟಿಗೆ ಪರಿಶ್ರಮವನ್ನುಂಟುಮಾಡಲು ಸೆಕೆಂಡರಿ ಸ್ಕೂಲ್‌ಗಳು ಭಾಷೆಗಳಲ್ಲಿ ಪಾಂಡಿತ್ಯವನ್ನುಂಟುಮಾಡಲು ಕಾಲೇಜುಗಳು ಇವನ್ನು ಕಲ್ಪಿಸುವರು. ಮತ್ತು ಉಪಾಧ್ಯಾಯತೆಯನ್ನು ಕಲಿಸಲು ನಾರ್ಮಲ್‌ಸ್ಕೂಲ್‌ಗಳು, ಕಟ್ಟಡ ಮೊದಲಾದುವಗಳ ರಚನೆಯನ್ನು ಕಲಿಸಲು ಇಂಜನಿಯರಿಂಗ್ ಸ್ಕೂಲ್ ಲಾಯರಾಗತಕ್ಕವರಿಗೆ ಲಾ ಕಾಲೇಜ್, ವೈದ್ಯರಾಗತಕ್ಕವರಿಗೆ ಮೆಡಿಕಲ್‌ಸ್ಕೂಲ್ ಹೀಗೆಯೇ ಆಯಾ ಕಸಬಿಗೆ ಆಯಾ ಸ್ಕೂಲ್‌ಗಳನ್ನು ಕಲ್ಪಿಸುವರು. ಇಷ್ಟಾದರೂ ಜನಗಳಲ್ಲಿ ಅನೇಕರು ಮೂಢರಾಗಿರುವುದರಿಂದ ಅವುಗಳ ಪ್ರಯೋಜನವನ್ನು ಪಡೆಯಲಾರದೆ ಇದ್ದಾರೆ. ಕೂಲಿಯ ಮಗಗಳು, ನಿರಕ್ಷರಕುಕ್ಷಿಗಳಾದ ಅಳಲೇಕಾಯಿ ಪಂಡಿತರುಗಳು ಇಂತಹ ಅನೇಕ ಸಂಗತಿಗಳು ಸ್ಪಷ್ಟವಾದ ಉದಾಹರಣೆಗಳಾಗಿವೆ, ಇನ್ನು

ಮೇಲಾದರೂ ಪ್ರಜೆಗಳು ಉದಾರವಾದ ಸರ್ಕಾರದಿಂದ ದೊರೆತಿರುವ ಸಕಲ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಕೃತಾರ್ಥರಾಗಿ ದೇಶೋನ್ನತಿಗೆ ಕಾರಣರಾಗುವುದು ಶ್ರೇಯಸ್ಕರ.

ಎರಡನೆಯ ವರ್ಗದ ವಿದ್ಯಾರ್ಥಿಗಳ ಭಾಷಾಪರಿಚಯಾಭ್ಯಾಸ.

(233 ನೆಯ ಪುಟದ ಶೇಷ)

೭ ನೆಯ ಅಭ್ಯಾಸ.

ಕೆಳಗೆ ಬರೆದಿರುವ ಗಾದೆಗಳಲ್ಲಿರುವ ನಾಮವಾಚಕಗಳನ್ನು ಕಂಡುಹಿಡಿದು ಅವು ಮನುಷ್ಯನ ಹೆಸರನ್ನೋ ಅಥವಾ ಪ್ರಾಣಿಯ ಹೆಸರನ್ನೋ ಅಥವಾ ವಸ್ತುವಿನ ಹೆಸರನ್ನೋ ತಿಳಿಸುತ್ತದೆ ಹೇಳಿ ?—

ಅರಸನ ಕುದುರೆ ಲಾಯದಲ್ಲೇ ಮುಪ್ಪಾಯಿತು.
ತುಂತುರುಮಳೆಯಿಂದ ತೂಬಿನಕೆರೆ ತುಂಬೀತೆ ?
ತಿರಿಗಿ ಗೋಕರ್ಣಕ್ಕೆ ಹೋಗಿ ತುರುಕನಿಂದ ದಬ್ಬೆ ತಿಂದ.
ತೆಂಗಿನಮರ ಏಕೆ ಹತ್ತುತ್ತಿ ಎಂದರೆ, ಕರುವಿಗೆ ಹುಲ್ಲು ಕೊಯ್ಯುವುದಕ್ಕೆ ಎಂದ.
ಹಲ್ಲಿದ್ದಮಾತ್ರಕ್ಕೆ ಕಲ್ಲು ನುರಿದೀತೆ ?
ನೆಲ್ಲಿಕಾಯಿ ಹುಲ್ಲಿಗೆ ಆದೀತೆ ?
ನೇಯಗೆಯವನಿಗೇಕೆ ಕೋತಿಮರಿ.
ತಾಕಾಣದ ದೇವರು ಪೂಜಾರಿಗೆ ವರಾ ಕೊಟ್ಟೀತೆ ?
ಬಲ್ಲವನೇ ಬಲ್ಲ ಬೆಲ್ಲದ ಸವಿಯ.
ಮಂಗನಕೈಲಿ ಮಾಣಿಕ ಕೊಟ್ಟಹಾಗೆ.
ಭಗೀರಥ ಯತ್ನಮಾಡಿ ಭಾಗೀರಥಿ ತಂದ.
ಹಂಚಿಗವನಿಗೆ ಹಲ್ಲೂ ಬಾಯಿ.
ನಾಯಿ ಹಸಿದಿತ್ತು, ಹಿಟ್ಟು ಹಳಸಿತ್ತು.

ಲ ನೆಯ ಅಭ್ಯಾಸ.

ಕೆಳಗಣ ವಾಕ್ಯಗಳಲ್ಲಿ ಗೆರೆ ಬರೆದಿರುವ ಸ್ಥಳಗಳಲ್ಲಿ ಸರಿಯಾದ ನಾಮವಾಚಕಗಳನ್ನು ಸೇರಿಸಿ ಬರೆಯಿರಿ :—

1. ಹಸುವು ನಿತ್ಯವೂ—ತಿನ್ನುತ್ತದೆ ಮತ್ತು—ಕರೆಯುತ್ತದೆ.
2. ನಿನ್ನ—ನಮ್ಮ ಮನೆಯಲ್ಲಿ ಇರುವುದಕ್ಕೆ ಇಷ್ಟಪಡುತ್ತಾನೆಯೆ ?
3. ನನ್ನ—ಆಕಾಶದಲ್ಲಿ ಎತ್ತರದಲ್ಲಿ ಹಾರಾಡುತ್ತದೆ.
4. ಅವನು ನಮ್ಮ ಮನೆಯ—ಒಡೆದನು.
5. ನಮ್ಮ ಅಣ್ಣನಿಗೆ—ಎಂದು ಹೆಸರು.
6. ರಾಮನ—ಗುಂಡಗಿದೆ ;—ಚಿಕ್ಕದಾಗಿದೆ.
7. ಅವನು—ಕೊಳೆಯುವುದಿಲ್ಲ.
8. ಹಸುವಿಗೆ ನಾಲ್ಕು—ಒಂದು—ಎರಡು—ಇವೆ.
9. ಭಿಕ್ಷ ಬೇಡುವಳು—ತೆಗೆದುಕೊಳ್ಳುವುದಕ್ಕೆ—ನೀಡಿದನು.
10. ತಂದೆಯು—ಹೊಲಿಸಿಕೊಟ್ಟನು.

೯ ನೆಯ ಅಭ್ಯಾಸ.

ಉಪಾಧ್ಯಾಯರು ಪಾಠಪುಸ್ತಕಗಳಲ್ಲಿ ನಾಮಪದಗಳನ್ನು ಬಿಟ್ಟು ವಾಕ್ಯಗಳನ್ನು ಓದಿ, ಹುಡುಗರಿಂದ ಆ ಬಿಟ್ಟ ಮಾತುಗಳನ್ನು ಸೇರಿಸಿ ಹೇಳುವಂತೆ ಮಾಡಿಸಬೇಕು.

ನಾವು ಮಾತನಾಡುವಾಗ ಹೆಸರುಗಳನ್ನು ಹೇಳುವ ನಾಮವಾಚಕಗಳನ್ನು ಪದೇಪದೇ ಹೇಳುತ್ತಾ ಇರುತ್ತೇವಷ್ಟೆ. ಒಬ್ಬನು ಒಂದು ಹೆಸರನ್ನು ಮಾತ್ರ ಹೇಳಿ ಮಾತು ನಿಲ್ಲಿಸುತ್ತಾನೆಂದು ಇಟ್ಟುಕೊಳ್ಳೋಣ. ಅವನು ಹಸು ಎಂದು ಹೇಳಿ ಸುಮ್ಮನಾದರೆ, ನೀವು ಏನು ಮಾಡುತ್ತೀರಿ ? ಹಸು ಏನು ? ಏನು ಮಾಡಿತು ? ಎಂಬ ಸಂಗತಿಯನ್ನು ಅವನಿಂದ ಕೇಳಲು ಆಶಿಸಪಡುತ್ತೀರಿ ಹೀಗೆಯೇ ನೀವೂ ನಿಮ್ಮ ಮಾತುಗಳಲ್ಲಿ ಒಂದು ನಾಮವಾಚಕವನ್ನು ಹೇಳಿದರೆ, ಆಮೇಲೆ ಅದರ ವಿಷಯವಾಗಿ ಅದು ಏನು ? ಎಲ್ಲಿದೆ ? ಹೇಗೆ ಇದೆ ? ಏನು ಮಾಡಿತು ? ಅಥವಾ ಅದಕ್ಕೆ

ಏನಾಯಿತು ? ಎಂಬುದರಲ್ಲಿ ಏನಾದರೂ ಒಂದು ಸಂಗತಿ ಹೇಳುವ ಮಾತನ್ನು ಸೇರಿಸುತ್ತೀರಿ. ಆದ್ದರಿಂದ ಹೆಸರು ಹೇಳುವ ಮಾತನ್ನು ಹೇಳಿದ ಅಥವಾ ಕೇಳಿದ ಕೂಡಲೆ ಅದರ ವಿಷಯವಾಗಿ ಇನ್ನೂ ಹೆಚ್ಚಾಗಿ ಸಮಾಚಾರ ಹೇಳಬೇಕೆಂಬ, ಕೇಳ ಬೇಕೆಂಬ ಇಷ್ಟ ಹುಟ್ಟುತ್ತದೆ, ಪುಸ್ತಕ ಎಂಬ ಮಾತು ಹೊರಡುತ್ತಲೆ ಅದು ಮಣೆಯ ಮೇಲಿದೆ, ಹರಿದುಹೋಗಿದೆ, ಅದನ್ನು ಕೃಷ್ಣನಿಗೆ ಓದುವುದಕ್ಕೆ ಕೊಟ್ಟೆನು, ಹೀಗೆ ಏನಾದರೂ ಸಮಾಚಾರವನ್ನು ಹೇಳಬೇಕಾಗುತ್ತದೆ.

೧೦ ನೆಯ ಅಭ್ಯಾಸ.

ಈ ರೀತಿಯಲ್ಲಿ ಕೆಳಗಿರುವ ನಾಮಪದಗಳಿಗೆ ಅದನ್ನು ಕುರಿತು ನೀವು ಹೇಳ ಬೇಕೆಂದಿರುವ ಸಂಗತಿಗಳನ್ನು ಸೇರಿಸಿರಿ.

ರಾಮನ ಟೋಪಿ—

ಕೃಷ್ಣನ ಹಲಗೆ—

ಈ ಮುದ್ದುಗಿಣಿ—

ರಂಗನ ಕಾಲು—

ಹನುಮಂತನ ಮೂಗು—

ಮೇಲಿನ ರೀತಿಯಲ್ಲಿ ಉಪಾಧ್ಯಾಯರು ಮಕ್ಕಳಿಗೆ ಪಾಠಪುಸ್ತಕಗಳಿಂದ ಪ್ರಶ್ನೆಗಳನ್ನು ಹಾಕಬೇಕು.

ಹಿಂದಣ ಅಭ್ಯಾಸಗಳಲ್ಲಿ ಹೆಸರುಗಳನ್ನು ಹೇಳುವ ಮಾತುಗಳನ್ನು ತಿಳಿದು ಕೊಂಡಿರಿ. ಆ ಹೆಸರುಗಳನ್ನು ತಿಳಿಸುವ ಪದಗಳಿಗೆ ನಾಮವಾಚಕಗಳೆಂದು ವಾಡಿ ಕೆಯಾಗಿ ಕರೆಯುವರೆಂದೂ ತಿಳಿದುಕೊಂಡಿರಿ. ನಾವು ಆಡುವ ಮಾತುಗಳಲ್ಲಿ ಹೆಸರುಗಳನ್ನು ಹೇಳುವ ಮಾತುಗಳಿಗಿಂತಲೂ ಬಹಳ ಮುಖ್ಯವಾದ ಕೆಲವು ಮಾತು ಗಳಿವೆ. ಹೆಸರುಗಳನ್ನು ಹೇಳುವ ನಾಮವಾಚಕಗಳಿಲ್ಲದೆಯೂ ಮಾತುಗಳನ್ನು ಕೆಲವು ವೇಳೆ ಹೇಳಬಹುದು. ನಾಮವಾಚಕಕ್ಕಿಂತಲೂ ಮುಖ್ಯವಾದ ಮಾತು ಗಳು ಕೆಲವು ಇವೆ ಎಂದು ಹೇಳಿದೆನಲ್ಲಾ, ಅವು ಇಲ್ಲದೆ ಇದ್ದರೆ ಯಾರಿಗೂ ಯಾವುದನ್ನೂ ತಿಳಿಸಲು ಆಗುತಿರಲಿಲ್ಲ.

ನಾಮವಾಚಕಗಳು ವಸ್ತುವನ್ನು ತೋರಿಸುತ್ತದೆ. ರಾಮ ಎಂದರೆ ರಾಮನನ್ನು ಹೇಳುತ್ತದೆ ; ಕುರಿ ಎಂದರೆ ನೀವು ನೋಡಿದ್ದೀರಲ್ಲಾ ಕುರುಬನು ಸಾಕುವ ಪ್ರಾಣಿ, ಅದನ್ನು ಹೇಳುತ್ತದೆ. ಮಾವಿನಮರವೆಂದರೆ ನೀವು ಮಾವಿನಹಣ್ಣನ್ನು ತಿಂದಿಲ್ಲವೆ, ಆ ಹಣ್ಣು ಯಾವ ಮರದಲ್ಲಿ ಬಿಡುತ್ತದೆ. ಅದನ್ನು ಹೇಳುತ್ತದೆ. ಹೀಗೆ ಹೆಸರೆಂದೆನ್ನಿಸಿಕೊಳ್ಳುವ ನಾಮವಾಚಕಗಳೆಲ್ಲಾ ಒಂದೊಂದು ವಸ್ತುವನ್ನು ತೋರಿಸುತ್ತದೆ.

[ಇಲ್ಲಿ ಉಪಾಧ್ಯಾಯರುಗಳು ವಿದ್ಯಾರ್ಥಿಗಳನ್ನು ಕುರಿತು ಕೆಳಗೆ ಕೊಟ್ಟಿರುವ ರೀತಿಯಲ್ಲಿ ಪ್ರಶ್ನೆಗಳನ್ನು ಹಾಕಿ, ಅವರಿಂದಲೇ ವಸ್ತುವಿಗೂ ವಸ್ತುವನ್ನು ಹೇಳುವ ಹೆಸರಿಗೂ ಅಥವಾ ನಾಮವಾಚಕಕ್ಕೂ ವ್ಯತ್ಯಾಸವನ್ನು ತಿಳಿಸಿ ಹೇಳಿಸಬೇಕು.]

ಸಶೇಷ.

ಸರ್ವಜನಕ ವಿದ್ಯಾಭ್ಯಾಸ.

ಜನರಿಗೆಲ್ಲಾ ವಿದ್ಯಾಭ್ಯಾಸ ಮಾಡಿಸಬೇಕಾದುದು ಆವಶ್ಯಕ. ಜ್ಞಾನವು ಅನಂತವಾಗಿದೆ. ಜೀವಮಾನಕಾಲವು ಸ್ವಲ್ಪವಾಗಿದೆ. ಬುದ್ಧಿಶಕ್ತಿಯು ಎಲ್ಲರಿಗೂ ಒಂದೇವಿಧವಾಗಿರುವುದಿಲ್ಲ. ಸಾಮಾನ್ಯವಾಗಿ ಬುದ್ಧಿಯು ದುರ್ಬಲವಾಗಿರುತ್ತದೆ. ಇದನ್ನೆಲ್ಲಾ ಸರಿಪಡಿಸುವುದು ಹೇಗೆ—ಇದೇ ಮುಖ್ಯವಾದ ಚರ್ಚನೀಯಾಂಶ. ಇದಕ್ಕೋಸ್ಕರವೇ ಮೂರುವಿಧವಾದ ಪಾಠಶಾಲೆಗಳು ಏರ್ಪಾಡಾಗಿರುತ್ತವೆ.

ಎಲಿಮೆಂಟರಿ, ಸೆಕಂಡರಿ, ಹೈಯ್ಯರ್ ಅಥವ ಕೊಲಿಜಿಯೇಟ್(Collegiate). ಈ ಮಕ್ಕಳಪಾಠಶಾಲೆಗಳು 12–13 ವರುಷ ವಯಸ್ಸಿನ ಬಾಲಕರ ಪಾಠಶಾಲೆಗಳು. ಇವೇ ಎಲಿಮೆಂಟರಿ ಪಾಠಶಾಲೆಗಳು. 16 ವರುಷ ವಯಸ್ಸಿನ ಹುಡು

ಗರಿಗೆ ತಿಳಿಸತಕ್ಕ ಜ್ಞಾನವು ಹೆಚ್ಚಾಗಿರಬೇಕು. ಇವೇ ಸೆಕೆಂಡರಿ ಅಥವ ಮಧ್ಯಮ ಅಂತಸ್ತಿನ ಪಾಠಶಾಲೆಗಳು. ಇವುಗಳಲ್ಲಿ ಉಂಟುಮಾಡತಕ್ಕ ಜ್ಞಾನವು ಸಹ ಲೋಕಪ್ರಯೋಜನಕಾರಿಯಾಗಿಯೇ ಇರಬೇಕು. ಮಾಥ್ಯೂ ಆರ್ನೋಲ್ಡ್ ಯವರು ಹೇಳಿರುವಂತೆ ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ಮತ್ತು ಪ್ರಪಂಚದ ಜ್ಞಾನವನ್ನುಂಟುಮಾಡುತ್ತಾ ಬರಬೇಕು. ಮಾತೃಭಾಷಾಜ್ಞಾನವಲ್ಲದೆ ಬೇರೆ 1-2 ಭಾಷೆಗಳ ಜ್ಞಾನವನ್ನು ನವೀನ ಭೂವಿವರಣೆಯನ್ನೂ ಲೋಕವ್ಯವಹಾರಕ್ಕನುಕೂಲವಾದ ಶಾಸ್ತ್ರಜ್ಞಾನವನ್ನೂ ಬೋಧಿಸಬೇಕು. ಇಷ್ಟು ಜ್ಞಾನವಿದ್ದಹೊರತು ಅವನು ಅಕ್ಷರಸ್ಥನಾದ ನಾಗರಿಕನೆನಿಸಿಕೊಳ್ಳುವುದಿಲ್ಲ.

ಈ ಪ್ರಕಾರ ಪಾಠಶಾಲೆಗಳಲ್ಲಿ ಮಾಡಿಸತಕ್ಕ ವಿದ್ಯಾಭ್ಯಾಸದ ಪ್ರಯೋಜನದ ಪ್ರಮಾಣವನ್ನು ಯೋಚಿಸೋಣ:—ಯಾವ ವಿದ್ಯಾಭ್ಯಾಸದಿಂದ ಬಡವರನ್ನಾಗಲೀ ಭಾಗ್ಯವಂತರನ್ನಾಗಲೀ ಅವರವರ ಕರ್ತವ್ಯದಲ್ಲಿ ಶಕ್ತಿವಂತರಾಗಿ ಮಾಡುವುದಿಲ್ಲವೋ ಅಂಥ ವಿದ್ಯಾಭ್ಯಾಸವು ತೃಪ್ತಿಕರವಾದುದಲ್ಲ. ಅಂಥ ಪದ್ಧತಿಯನ್ನು ಸರಿಪಡಿಸಬೇಕಾದುದು ಆವಶ್ಯಕ. ಏತಕ್ಕೆಂದರೆ-ಇಂಥ ವಿದ್ಯಾಭ್ಯಾಸದ ಫಲವು ನೈಜವಾದಂಥಾದ್ದಲ್ಲ. ಇದಲ್ಲದೆ ಎಲ್ಲರಿಗೂ ಪ್ರಯೋಜನವನ್ನೂ ಸುಖವನ್ನೂ ಉಂಟುಮಾಡುವುದಿಲ್ಲ. ಈ ಕಾರಣದಿಂದ ಈ ಎರಡನೇದರ್ಜೆಯ ಪಾಠಶಾಲೆಗಳಲ್ಲಿಯೂ ಪ್ರಜಾಸಮುದಾಯಕ್ಕೆ ಅತ್ಯಂತ ಉಪಯುಕ್ತವಾದ ಜ್ಞಾನವನ್ನುಂಟುಮಾಡುವಂತೆ ಬೋಧಿಸಬೇಕು ದೇಶಭಾಷಾಜ್ಞಾನವನ್ನು ಹೆಚ್ಚಿಸುತ್ತಾ ಬರಬೇಕು.

ದೇಶದ ಸಂಪದುತ್ಪತ್ತಿಗೆ ಅನುಕೂಲವಾದ ಶಾಸ್ತ್ರಜ್ಞಾನವನ್ನುಂಟುಮಾಡಬೇಕು. ವಾಣಿಜ್ಯ, ಜನರ ಗುಣಾತಿಶಯಗಳ ಪರಿಶೀಲನೆ, ಅನ್ಯದೇಶೀಯ ವಿಚಾರ ಇವನ್ನು ತಿಳಿಯುವುದಕ್ಕೋಸ್ಕರ ಭೂವಿವರಣೆ ಮತ್ತು ಚರಿತ್ರೆಗಳ ಪರಿಚಯವನ್ನು ಹೆಚ್ಚಿಸುತ್ತಾ ಬರಬೇಕು. ಕೆಲವರು ಚರಿತ್ರೆಯನ್ನು ಏತಕ್ಕೆ ಬೋಧಿಸಬೇಕೆಂದು ಆಕ್ಷೇಪಿಸುವರು. ಚರಿತ್ರೆಯು ಉದಾಹರಣಪೂರ್ವಕ ಬೋಧಿಸತಕ್ಕ ತತ್ವಶಾಸ್ತ್ರವು. ಮಾನುಷಗುಣಾತಿಶಯಗಳನ್ನು ತಿಳಿಯಬೇಕಾದರೆ ನಡವಳಿಕೆಗಳಿಂದಲ್ಲವೆ? ಪ್ರಾಚೀನ, ಪ್ರಸಿದ್ಧ ಜನಗಳ ನಡೆನುಡಿಗಳೂ, ಕಾರ್ಯಗಳೂ, ಪದ್ಧತಿಗಳೂ ರಾಜ್ಯ

ಭಾರಕ್ರಮ ಇವುಗಳೆಲ್ಲಾ ಚರಿತ್ರೆಯಿಂದಲೇ ತಿಳಿಯಬೇಕಾಗಿರತ್ತದೆ. ಜನರಿಗೂ ರಾಜ್ಯಭಾರಕ್ರಮಕ್ಕೂ ಇರುವ ಅನ್ಯೋನ್ಯಸಂಬಂಧವು, ಪ್ರಜೆಗಳ ಕರ್ತವ್ಯಾಂಶಗಳು. ಇವುಗಳೆಲ್ಲಾ ಚರಿತ್ರೆಗೆ ಸಂಬಂಧಪಟ್ಟವುಗಳು.

ಇಂಥ ಸಂಗತಿಗಳನ್ನೆಲ್ಲಾ ತಿಳಿಯಬೇಕಾದರೆ ಪ್ರಾಚೀನ, ನವೀನಚರಿತ್ರೆಗಳನ್ನು ಓದಿರತಕ್ಕ ಪಂಡಿತರುಗಳಿಂದ ತಿಳಿಯಬೇಕಲ್ಲವೆ.

ಹೈಯ್ಯರ್ ಅಥವಾ ಅತ್ಯುತ್ತಮವಾದ ವಿದ್ಯಾನಿಲಯಗಳಿಂದ ಸಾಮಾನ್ಯ ಜನರಿಗೆ ಆಗಬೇಕಾದ ಪ್ರಯೋಜನಾಂಶವನ್ನು ಯೋಚಿಸಬೇಕಾಗಿದೆ. ಮಧ್ಯಮ ಸ್ಥಿತಿಯ ಪಾಠಶಾಲೆಗಳಲ್ಲೂ 1-2 ಕಸಬಿನ ವಿಷಯವನ್ನು ಬೋಧಿಸತಕ್ಕದು ಆವಶ್ಯಕವೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಈ ದೇಶಕ್ಕೆ ಮುಖ್ಯವಾದ ವ್ಯವಸಾಯ, ನೇಯಿಗೆ, ಮರಗೆಲಸ, ಲೋಹದಕೆಲಸ ಇವುಗಳಲ್ಲಿ ಒಂದೆರಡನ್ನು ಎಲ್ಲಾ ಸೆಕಂಡರಿ ಅಥವ ಹೈಸ್ಕೂಲ್‌ಗಳಲ್ಲಿ ಬೋಧಿಸತಕ್ಕುದು ಜನೋಪಕಾರವಾಗಿರುವುದು. ಯಾವ ಪಾಠಶಾಲೆಯಲ್ಲಿ ಜೀವನೋಪಾಯಕ್ಕನುಕೂಲವಾದ ಲೋಕವ್ಯವಹಾರ ಜ್ಞಾನವನ್ನುಂಟುಮಾಡದೆ. ಕೇವಲ ಬುದ್ಧಿಸಂಸ್ಕಾರವನ್ನುಂಟುಮಾಡತಕ್ಕ ಅಂಶಗಳೇ ಹೇಳಲ್ಪಡುತ್ತವೆಯೋ ಅಂಥ ಪಾಠಶಾಲೆಯು ಅಷ್ಟು ಪ್ರಯೋಜನಕಾರಿಯೂ ಶ್ರೇಯಸ್ಸನ್ನುಂಟುಮಾಡತಕ್ಕದೂ ಆಗಲಾರದು.

ಸಾಮಾನ್ಯ ಶಾಸ್ತ್ರಜ್ಞಾನ, ಭೂವಿವರಣೆ, ಚರಿತ್ರೆಗಳ ವಿಷಯ, ವ್ಯವಸಾಯ ಇವೇ ಮುಂತಾದ ಕಸಬುಗಳ ಸಂಗತಿಗಳನ್ನು ದೇಶಭಾಷೆಯಲ್ಲೇ ತಿಳಿಸಬೇಕು. ಇಂಥ ಅಂಶಗಳನ್ನು ಬೋಧಿಸತಕ್ಕ ತರಗತಿಗಳಿಗಾಗಲಿ ಪಾಠಶಾಲೆಗಳಿಗಾಗಲಿ ಇಂಗ್ಲೀಷ್ ಭಾಷೆಯನ್ನು ಬಲ್ಲವರೇ ಬರಬೇಕೆಂಬ ನಿರ್ಬಂಧವನ್ನು ನಿವಾರಿಸಬೇಕು. ಕಸಬುದಾರರಾಗಿ ಇನ್ನೂ ಹೆಚ್ಚಾದ ಶಾಸ್ತ್ರೋಕ್ತಜ್ಞಾನವನ್ನು ತಮ್ಮ ಕಸಬಿನಲ್ಲಿ ಹೊಂದಬೇಕೆಂದು ಕುತೂಹಲಪಡುವ ಜನರಿಗೆ ಹೈಸ್ಕೂಲ್‌ಗಳಲ್ಲಿ ಶಾಸ್ತ್ರಪಾಠಗಳು ನಡೆಯುವಾಗ ಬಂದು ತಿಳಿದುಕೊಳ್ಳಲು ಅವಕಾಶಕೊಡಬೇಕು. ಹೀಗಿಲ್ಲದಿದ್ದರೆ ಅವರಿಗೆ ಪ್ರತ್ಯೇಕವಾದ ಕಾಲದಲ್ಲಿ ಕಸಬು, ವ್ಯವಸಾಯ, ವ್ಯಾಪಾರ, ಇವುಗಳಲ್ಲಿ ಶಾಸ್ತ್ರೋಕ್ತವಾದ ನಿಪುಣತೆಯನ್ನು ಹೊಂದಲು ಅವಕಾಶವನ್ನುಂಟುಮಾಡಿಕೊಡ

ಬೇಕು. ಕಸಬುಗಳನ್ನು ಕಲಿಸುವುದಕ್ಕೋಸ್ಕರ ಇಂಡಸ್ಟ್ರಿಯಲ್ ಸ್ಕೂಲುಗಳನ್ನು ಹೆಚ್ಚಿಸಬೇಕು.

ಮುಖ್ಯವಾಗಿ ಹಗಲು ಹೊತ್ತೆಲ್ಲಾ ತಮ್ಮ ಜೀವನಕ್ಕಾಗಿ ಕೆಲಸಮಾಡತಕ್ಕಂಥವರು ಸಾಯಂಕಾಲ ಅಥವಾ ತಮ್ಮ ವಿರಾಮಕಾಲದಲ್ಲಿ ಇಂಥ ಪಾಠಶಾಲೆಗಳಿಗೆ ಬಂದು ಕಸಬಿನ ವಿಷಯವನ್ನು ಹೆಚ್ಚಾಗಿ ತಿಳಿದುಕೊಳ್ಳುವುದಕ್ಕೆ ಅವಕಾಶವನ್ನುಂಟುಮಾಡಿಕೊಡಬೇಕು. ಇದರಿಂದ ಸಾಮಾನ್ಯಜನರಿಗೂ ಶಾಸ್ತ್ರಜ್ಞಾನವು ತಕ್ಕಮಟ್ಟಿಗೆ ಅಭಿವೃದ್ಧಿಯಾಗುವುದಕ್ಕೆ ಅನುಕೂಲವುಂಟಾಗುವುದು.

ಇದಲ್ಲದೆ ಸಕಲ ವಿದ್ಯಾಶಾಲೆ(ಯೂನಿವರ್ಸಿಟಿ)ಯ ಮೂಲಕ ಜನರಿಗೆ ಉಂಟಾಬೇಕಾದ ಸಾಮಾನ್ಯ ಶಾಸ್ತ್ರಜ್ಞಾನಾಭಿವೃದ್ಧಿಗೆ ಸಲಕರಣೆಯನ್ನುಂಟುಮಾಡಿಕೊಡಬಹುದು. ಈಗ ನಮ್ಮ ಸೀಮೆಯಲ್ಲಿ ಒಂದು ಸಕಲವಿದ್ಯಾನಿಲಯವನ್ನು ಸ್ಥಾಪಿಸಲು ತಕ್ಕ ಪ್ರಯತ್ನವು ನಡೆಯುತ್ತಿದೆಯಷ್ಟೆ. ಇದರ ಉದ್ದೇಶಗಳಲ್ಲಿ ಈ ದೇಶದ ಜನರಿಗೆಲ್ಲಾ ಅವರ ಸ್ವಭಾಷೆಯ ಮೂಲಕ ಸಸ್ಯಶಾಸ್ತ್ರ, ಲೋಹಶಾಸ್ತ್ರ, ಖನಿಜಶಾಸ್ತ್ರ, ಯಂತ್ರಶಾಸ್ತ್ರ, ವಿದ್ಯುಚ್ಛಕ್ತಿ ಸ್ವಭಾವ ಇವೇ ಮೊದಲಾದ ವಸ್ತುನಿಶ್ಚಯಜ್ಞಾನವನ್ನು ಉಪನ್ಯಾಸಗಳಿಂದಲೂ ಅಲ್ಲಲ್ಲಿ ಜನಸಂಘಗಳನ್ನೇರ್ಪಡಿಸಿ, ಪಾಠಪ್ರದರ್ಶನಗಳಿಂದಲೂ ಮತ್ತು ಸಂಕ್ಷೇಪವಾಗಿ ಶಾಸ್ತ್ರಗಳ ವಿಷಯಗಳನ್ನು ಬರೆದು(ಬುಲಟಿಯರ್ಸ್) ತಿಳಿಸುವುದರಿಂದಲೂ ಪ್ರಚುರಪಡಿಸತಕ್ಕುದು ಒಂದು.

ಮೇಲೆ ವಿವರಿಸಿರುವ ಸಾಮಾನ್ಯ ವಿದ್ಯಾಭ್ಯಾಸ ಕ್ರಮದಲ್ಲಿ ಜನರ ಕಾಯಮನಶ್ಶಕ್ತಿಗಳನ್ನು ಬಲಪಡಿಸಿ, ಅವರಲ್ಲಿ ದೇಶದ ಏಳಿಗೆಗೆ ಅವಶ್ಯವಾದ ಸಾಮರ್ಥ್ಯ, ಐಕಮತ್ಯ, ಉತ್ಸಾಹ, ಸಾಹಸ ಇತ್ಯಾದಿ ಗುಣಗಳನ್ನು ಉಂಟುಮಾಡುವ ಬಗೆಯನ್ನು ವಿವರಿಸಿರುತ್ತದೆ. ಇದಲ್ಲದೆ ಜನರಲ್ಲಿ ನೀತಿ, ಪ್ರಜ್ಞೆ ಇವುಗಳನ್ನು ವೃದ್ಧಿಪಡಿಸತಕ್ಕ ಮಾರ್ಗವನ್ನು ಸ್ವಲ್ಪಮಟ್ಟಿಗೆ ಸೂಚಿಸಿದೆ. ಐಹಿಕಕಾರ್ಯಗಳಿಗೆ ಅವಶ್ಯಕವಾದ ಮನೋನುಸ್ಮೃತಿಯ ಸಾಧನೆಯನ್ನು ತಿಳಿಸಿದೆ. ಆದರೆ ಜನರ ಕಾರ್ಯಗಳಿಗೆಲ್ಲ ಅತ್ಯಂತ ಉತ್ಸಾಹವನ್ನುಂಟುಮಾಡತಕ್ಕ ಅವರವರ ಪೂರ್ವಾಚಾರ ಪದ್ಧತಿ ಪ್ರಕಾರ ಬಂದಿರತಕ್ಕ ಮತವಿಷಯವನ್ನು ಸೂಚಿಸಿಲ್ಲ. ಮತನೆಂದರೆ ಅಭಿಪ್ರಾಯ. ' ಲೋಕೋ

ಭಿನ್ನರುಚಿಃ' ಎಂಬ ನುಡಿಯಂತೆ ಮತವು ಬೇರೆಬೇರೆಯಾಗಿರುವುದು. ಆದರೂ ಅನೇಕ ಸಾವಿರ ವರುಷಗಳಿಂದ ಅನೇಕ ಪ್ರಾಜ್ಞರ ಅನುಭವದ ಮೂಲಕ ತತ್ತ್ವವಿಚಾರವು ಹೆಚ್ಚಾಗಿ, ಕೆಲವು ದೊಡ್ಡ ಮತಗಳು ಸ್ಥಾಪನೆಯಾಗಿವೆ. ಸಾಮಾನ್ಯಜನರು ತಮಗೆ ಅನೂಚಾನವಾಗಿ ಬಂದಿರತಕ್ಕ ಮತದಲ್ಲಿಯೇ ಅಭಿನಿವೇಶವುಂಟಾಗಿ ಅವುಗಳಲ್ಲಿ ಯಾವುದು ಉತ್ತಮವೆಂದು ಬೋಧಿಸಲ್ಪಟ್ಟಿದೆಯೋ ಅದನ್ನೇ ಅನುಸರಿಸುತ್ತಿರುವುದು ಎಲ್ಲರ ಅನುಭವದಲ್ಲಿಯೂ ಆಚರಣೀಯವಾಗಿದೆ. ಇದರಿಂದ ಬಾಲ್ಯವಿದ್ಯಾಭ್ಯಾಸ ಕ್ರಮದಲ್ಲಿ ಆಯಾದೇಶದ ಮತ ನೀತಿಬೋಧೆಗೆ ಅವಕಾಶವನ್ನು ಕೊಡುವುದು ಯುಕ್ತವಾಗಿದೆ. ಇದರಂತೆಯೇ ದೈವಭಕ್ತಿ, ಗುರುಭಕ್ತಿಗೆ ಅನೂಚಾನವಾದ ಪದ್ಧತಿಗಳನ್ನು ಅನುಸರಿಸಿರುವುದರಲ್ಲಿ ಮಾದರಿಯಾದ ನಮ್ಮ ಶ್ರೀಮನ್ಮಹಾರಾಜರವರು ಸರ್ಕಾರದ ಎಲ್ಲಾ ಪಾಠಶಾಲೆಗಳಲ್ಲೂ ಮತ, ನೀತಿಗಳನ್ನು ಬೋಧಿಸಬೇಕೆಂದು ವಿಧಾಯಕ ಮಾಡಿರುತ್ತಾರೆ. ಇದರಂತೆ ಪಾಠಗಳೂ ನಡೆಯುತ್ತಾ ಇವೆ.

ಕ್ಲಿಫ್ಟನ್ ಕಾಲೇಜಿನ (ಸರ್ವಕಲಾನಿಲಯ) ಮುಖ್ಯೋಪಾಧ್ಯಾಯರಾಗಿದ್ದ ಕ್ಯಾನನ್ ವಿಲ್ಸನ್‌ರವರು 14–18 ವರುಷ ವಯಸ್ಸಿನವರೆಗೆ ಮನೋವೃತ್ತಿ ಸರಿಯಾಗಿ ಉಂಟಾಗಬೇಕೆಂತಲೂ ಹಾಗೆ ಅವರ ಮನಸ್ಸಿನ ಸ್ವಭಾವವನ್ನು ಸರಿಪಡಿಸದೆ ಇದ್ದಲ್ಲಿ ಅವರಿಗೆ ಸ್ಥಿರವಾದ ಸೈಜಸ್ವಭಾವವು ಮುಂದೆ ಸರಿಯಾಗಿ ವಿಕಸನವನ್ನು ಹೊಂದಿ ಅಭಿವೃದ್ಧಿಗೆ ಬರುವುದಿಲ್ಲವೆಂದೂ ಹೇಳಿರುತ್ತಾರೆ. ಇದು ನಮ್ಮೆಲ್ಲರ ಅನುಭವದಲ್ಲೂ ಇದೆ. ಇದಲ್ಲದೆ ಫ್ರಾನ್ಸ್ ದೇಶದಲ್ಲಿ ಮತಾಭಿಪ್ರಾಯಗಳನ್ನು ತಿಳಿಸದೆ ನೀತಿಯೊಂದನ್ನೇ ಮುಖ್ಯವಾಗಿ ಬೋಧಿಸಕ್ಕ ಪದ್ಧತಿಯಿದೆ. ಇದು ಅಷ್ಟು ಫಲಕಾರಿಯಲ್ಲವೆಂತ ಆ ದೇಶದ ವಿದ್ವಾಂಸರಾದ ಬೆಲ್‌ವಾಲ್‌ವೆಯವರು ಒಂದು ಗ್ರಂಥದಲ್ಲಿ ಬರೆದಿರುತ್ತಾರೆ. ಅವರ ತಾತ್ಪರ್ಯವೇನೆಂದರೆ–ನೀತಿಯೊಂದನ್ನೇ ಬೋಧಿಸತಕ್ಕ ಹೊಸ ಪದ್ಧತಿಯು ವಿದ್ಯಾರ್ಥಿಗಳ ಸನ್ಮಾರ್ಗ ಪ್ರಕೃತಿಗೆ ತಕ್ಕ ಉತ್ತೇಜನವನ್ನುಂಟುಮಾಡಿ ಅಭಿವೃದ್ಧಿ ಪಡಿಸತಕ್ಕಷ್ಟು ಫಲಕಾರಿಯಲ್ಲವೆಂಬುದು.

ಏತಕ್ಕೆಂದರೆ–ಮತವಿಹೀನವಾದ ನೀತಿಯು ಮಕ್ಕಳ ಪ್ರಕೃತಿಯಲ್ಲಿ ಚೈತನ್ಯಾಂಶವನ್ನು ಅನುಸರಿಸುವುದಿಲ್ಲ. ಈ ಚೈತನ್ಯಾಂಶದಲ್ಲಿ ಐಕ್ಯವಾದ ಹೊರತು

ನೀತಿಯು ಸ್ವಾಭಾವಿಕವಾಗಿ ಬಳೆದು ಅಭಿವೃದ್ಧಿಯಾಗುವುದಿಲ್ಲ. ಸಸಿಯು ತಾನಾಗಿ ಬೆಳೆದು ಮುಂದೆ ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಬೀಜವೇ ಮುಖ್ಯ ಪ್ರಾಣಾ ಧಾರವಾಗಿರಬೇಕು. ಇಂಥಾ ಮೂಲತತ್ವವೇ ಮತ. ಮತವನ್ನು ಬೋಧಿಸುವುದಕ್ಕೆ ತಕ್ಕ ಕಾಲವು 13–16 ವರುಷದವರೆಗೆಂದು ಪ್ರೊಫೆಸರ್ ಬಾಂಪೆಸ್ ಸ್ಮಿತ್‌ರವರು ಆ ದೇಶದಲ್ಲಿ ಒಪ್ಪಿಕೊಂಡಿರುತ್ತಾರೆ. ಈ ಕಾಲದಲ್ಲಿ ಬಾಲಕರಿಗೆ ಉಂಟಾಗತಕ್ಕ ಮತಾನುಭವವೂ ಜ್ಞಾನವೂ ಚಿರಕಾಲ ಸ್ಥಿರಪಟ್ಟಿರುತ್ತದೆ. ಈ ವಯಸ್ಸಿನ ಅನೇಕ ಹುಡುಗರಿಗೆ ಮತದಲ್ಲಿ ಆಸಕ್ತಿ, ನಂಬಿಕೆ ಅಷ್ಟು ಇಲ್ಲವೆಂದು ಕಂಡು ಬಂದಾಗ್ಯೂ ಅವರ ನಿಜವಾದ ಆಂತರ್ಯ ವಿಚಾರಮಾಡಿದರೆ ಅವರಿಗೆ ಆಗಾಗ್ಯೆ ಮತಾಭಿನಿವೇಶನವು ಉಂಟಾಗುತ್ತಲೇ ಇರುವುದು. ಇದೇ ಪ್ರೊಫೆಸರ್ ಬಾಂಪೆಸ್ಸರವರ ಅಭಿಪ್ರಾಯ.

ಮೇಲೆ ಸೂಚಿಸಿರುವ ಕ್ಯಾರ್ನ್ ಎಲ್ಸ್‌ರವರು ಬಾಲಕಭಾಲಕಿಯರ ಈ ಸಹಜ ಗುಣವು ಕಾಪಟ್ಯದಿಂದ ಕೂಡಿರುವುದಿಲ್ಲ. ಪ್ರಾಕೃತಿಕವಾದುದೆಂದು ಹೇಳಿರುತ್ತಾರೆ.

ಈಗಿನ ಕಾಲಾನುಸಾರವಾಗಿ ಮತ ವಿಷಯವನ್ನು ಬೋಧಿಸಕೂಡದೆಂಬುದು ಕೆಲವರ ಅಭಿಪ್ರಾಯವಾಗಿದೆ. ಮತ ವಿಷಯವನ್ನು ಬೋಧಿಸುವುದು ಆವಶ್ಯಕವೆಂ ಬುದೂ ಇದೆ. ಆದುದರಿಂದ ಈ ಎರಡು ಅಭಿಪ್ರಾಯಗಳನ್ನು ನಾವು ಯಾವಾಗಲೂ ಜ್ಞಾಪಕದಲ್ಲಿಟ್ಟಿರಬೇಕು. ಎಂದರೆ ಒಂದು ಮತವನ್ನು ಬೋಧಿಸಬೇಕಾದರೆ ಇತರ ಮತಾಭಿಮಾನಿಗಳಿಗೆ ಹಗೆಯನ್ನುಂಟುಮಾಡುವಂತೆ ಹೇಳಕೂಡದು. ಪ್ರತಿ ಮನು ಷ್ಯನೂ ತಾನೇ ವಿಚಾರಪೂರ್ವಕವಾಗಿ ತನ್ನ ಮತತತ್ವವನ್ನು ತಿಳಿದು ಅನುಸರಿಸ ಬೇಕು. ಆದರೆ ಬಾಲ್ಯಾವಸ್ಥೆಯಲ್ಲಿರುವವರ ಮನಸ್ಸು ಅಭಿವೃದ್ಧಿಗೆ ಬರಲು ತಕ್ಕ ಸಾಧನೆಯನ್ನುಂಟು ಮಾಡುವುದು ಆವಶ್ಯಕ. ಇಲ್ಲದಿದ್ದರೆ ಗುರುಪರಂಪರೆಯಾಗಿ ರುವ ದೇಹ ಬೆಳೆದು ಪುಷ್ಟಿಯಾಗಬೇಕಾದರೆ ಆಹಾರವು ಹೇಗೆ ಆವಶ್ಯಕವೋ ಹಾಗೆ ಮನಸ್ಸೂ ಆತ್ಮವೂ ಅಭಿವೃದ್ಧಿಗೆ ಬರಬೇಕಾದರೆ ಸುಬೋಧೆಯು ಅತ್ಯಾವಶ್ಯಕ. ಇದೇ ಉಪಾಧ್ಯಾಯನ ಕರ್ತವ್ಯ. ಮತ್ತು ಸಾಮಾನ್ಯ ವಿದ್ಯಾಭ್ಯಾಸದ ಮುಖ್ಯೋದ್ದೇಶ

ಸಶೇಷ.

ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸ.

30 ನೆಯ ಸೆಪ್ಟಂಬರ್, 1914.

ವಿದ್ಯಾಭ್ಯಾಸದ ಇಲಾಖೆ.

ಸರ್ಕಾರೀ ಸ್ಕೂಲುಗಳ ಸಂಖ್ಯೆಯು 2,725 ರಿಂದ 3,001 ರ ವರೆಗೂ, ಅವುಗಳಲ್ಲಿ ಓದುವವರ ಸಂಖ್ಯೆಯು 1,31,539 ರಿಂದ 1,58,334 ರ ವರೆಗೂ ಹೆಚ್ಚಾಯಿತು. ಇದೇ ರೀತಿಯಲ್ಲಿ ಕೂಲಿಮಠಗಳ ಸಂಖ್ಯೆಯು 1,843 ರಿಂದ 2,133 ರ ವರೆಗೂ, ಅವುಗಳಲ್ಲಿ ಓದುತ್ತಿರುವವರ ಸಂಖ್ಯೆಯು 24,901 ರಿಂದ 29,396 ರ ವರೆಗೂ, ಹೆಚ್ಚಾಯಿತು. ಸ್ಕೂಲುಗಳ ಸಂಖ್ಯೆಯೂ, ಅವುಗಳಲ್ಲಿ ಓದುವವರ ಸಂಖ್ಯೆಯೂ ಹೆಚ್ಚುವುದಕ್ಕೆ, ಬಾಲಕರಿಗೂ ಬಾಲೆಯರಿಗೂ ಅನೇಕ ಪ್ರೈಮರಿ ಸ್ಕೂಲುಗಳನ್ನು ಹೊಸದಾಗಿ ಕಲ್ಪಿಸಿದ್ದೇ ಮುಖ್ಯಕಾರಣವಾಗಿದೆ. ಕೈಗಾರಿಕೆಯ ಸ್ಕೂಲುಗಳೂ ಇತರ ಕಲಾಶಾಲೆಗಳೂ 28 ರಿಂದ 35 ರ ವರೆಗೆ ಹೆಚ್ಚಿರುತ್ತವೆ. ಸರ್ಕಾರೀ ಸ್ಕೂಲುಗಳ ಮತ್ತು ಕೂಲಿಮಠಗಳ ಒಟ್ಟು ಸಂಖ್ಯೆಯು ಹೋದವರ್ಷ 4,568 ಇದ್ದದ್ದು ಈ ವರ್ಷ 5,134 ಕ್ಕೂ, ಅವುಗಳಲ್ಲಿ ಓದುತ್ತಿರುವವರ ಸಂಖ್ಯೆ ಹೋದವರ್ಷ 1,56,440 ಇದ್ದದ್ದು ಈ ವರ್ಷ 1,87,730 ಕ್ಕೂ ಹೆಚ್ಚಿರುತ್ತದೆ. ಈ ರೀತಿಯಾಗಿ ಹೆಚ್ಚಿದ ಎರಡು ವಿಧವಾದ ಸ್ಕೂಲುಗಳ ಒಟ್ಟು ಸಂಖ್ಯೆ 566 ಆಗಿಯೂ, ಅವುಗಳಲ್ಲಿ ಓದುವವರ ಸಂಖ್ಯೆ 31,290 ಆಗಿಯೂ ಇತ್ತು. ಒಟ್ಟು ವ್ಯಾಸಂಗ ಮಾಡುತ್ತಿರುವವರಲ್ಲಿ 1,54,319 ಮಂದಿ ಬಾಲಕರಾಗಿಯೂ, 33,411 ಮಂದಿ ಬಾಲೆಯರಾಗಿಯೂ ಇದ್ದರು. 1912-13 ರಲ್ಲಿ ಒಟ್ಟು 1,29,009 ಮಂದಿ ಬಾಲಕರೂ, 27,431 ಮಂದಿ ಬಾಲೆಯರೂ ವ್ಯಾಸಂಗಮಾಡುತ್ತಿದ್ದರು. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಗಂಡಸರ ಪೈಕಿ, ಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿರುವವರ ಸಂಖ್ಯೆಯು ಶೇಕಡ 29.8 ರಿಂದ 35 ಕ್ಕೂ ಇದೇರೀತಿಯಲ್ಲಿರುವ ಒಟ್ಟು ಹೆಂಗಸರ ಪೈಕಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.4 ರಿಂದ 7.7 ಕ್ಕೂ

ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಸ್ತ್ರೀಪುರುಷರ ಸಂಖ್ಯೆಯು ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು, ಈ ವರ್ಷ ಶೇಕಡ 21.4 ಕ್ಕೆ ಹೆಚ್ಚಿದಂತಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯ ಬಿ. ಎ. ಪ್ಯಾಸ್ ಕೋರ್ಸನ್ನೂ, ಫಿಜಿಕ್ಸ್ ಶಾಖೆಯ ಆನರ್ಸ್ ಕೋರ್ಸನ್ನೂ ಮದರಾಸ್ ಯೂನಿವರ್ಸಿಟಿಗೆ ಸಂಬಂಧಪಡಿಸಲಾಯಿತು. ಆದರೆ ಸುಶಿಕ್ಷಿತರಾದ ಯೂರೋಪ್ ದೇಶದ ಒಬ್ಬ ಅಸಿಸ್ಟೆಂಟ್ ಪ್ರೊಫೆಸರು ಇಲ್ಲದೆ ಇರುವುದರಿಂದ, ಕೆಮಿಸ್ಟ್ರಿ ಶಾಖೆಯ ಆನರ್ಸ್ ಕೋರ್ಸನ್ನು ಪ್ರಾರಂಭಿಸುವದು ಸಾವಕಾಶ ಮಾಡಬೇಕಾಯಿತು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ, ಹಿಸ್ಟರಿ ಮತ್ತು ಎಕನಾಮಿಕ್ಸ್ ಭಾಗಗಳಲ್ಲಿ ಒಂದು ಆನರ್ಸ್ ಕೋರ್ಸನ್ನು ಏರ್ಪಡಿಸಲಾಯಿತು. ಈ ಕೋರ್ಸುಗಳನ್ನು ಏರ್ಪಡಿಸಿದ್ದರಿಂದ ಬೇಕಾದ ಸಲಕರಣೆಗಾಗಿಯೂ ಹೆಚ್ಚು ಶಿಬ್ಬಂದಿಗಾಗಿಯೂ ಸ್ವಲ್ಪ ಖರ್ಚನ್ನು ಮಾಡುವುದು ಅವಶ್ಯಕವಾಯಿತು.

ಪ್ರೌಢವಿದ್ಯಾಭ್ಯಾಸದ ವಿಷಯದಲ್ಲಿಯೂ ಇತರ ಅಭಿವೃದ್ಧಿ ಕಾರ್ಯಗಳು ಜರುಗಿಸಲ್ಪಟ್ಟವು. ಆದರೆ ಈ ಇಲಾಖೆಯ ಯಾವಶಕ್ತಿಯನ್ನೂ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಲಾಯಿತು. ಗ್ರಾಮಪಾಠಶಾಲೆಗಳನ್ನು ಹೆಚ್ಚಿಸುವುದಕ್ಕಾಗಿ ಪ್ರತ್ಯೇಕವಾಗಿ ಒಂದು ಲಕ್ಷ ರೂಪಾಯಿ ಗ್ರಾಂಟನ್ನೂ, ಸ್ಕೂಲ್ ಕಟ್ಟಡಗಳನ್ನು ಕಟ್ಟಿಸತಕ್ಕ ಬಗ್ಗೆ ಅರ್ಧಲಕ್ಷ ರೂಪಾಯಿ ಗ್ರಾಂಟನ್ನೂ ಕೊಡಲಾಯಿತು. ಗ್ರಾಂಟ್‌ಇನ್‌ಯೆಯ್ಡ್ ನಿಬಂಧನೆಗಳ ಮೇರೆ 1,000 ಸ್ಕೂಲುಗಳನ್ನು ಏರ್ಪಡಿಸಲು ಮುಂಜೂರ್ ಮಾಡಲಾಯಿತು. ಯಾವ ಉಪಾಧ್ಯಾಯನಿಗೇ ಆಗಲಿ ಮಾಹೆಯಾನ 10 ರೂಪಾಯಿಗೆ ಕಮ್ಮಿ ಇಲ್ಲದಷ್ಟು ಸಂಬಳ ದೊರೆಯುವಂತೆ ಮಾಡಲು, ಸರ್ಕಾರದಿಂದ ಕೊಡುವ ಗ್ರಾಂಟಿನ ಜೊತೆಗೆ ಗ್ರಾಮಸ್ಥರು ದ್ರವ್ಯರೂಪವಾಗಿಯಾಗಲೀ ಧಾನ್ಯರೂಪವಾಗಿಯಾಗಲಿ ಸಹಾಯ ಮಾಡಬೇಕಾದದ್ದೇ ಇದರ ಮೂಲತತ್ವವು.

ನಿರ್ಬಂಧ ವಿದ್ಯಾಭ್ಯಾಸದ ಒಂದು ಏರ್ಪಾಟನ್ನು ಮಂಜೂರ್ಮಾಡಿರುವುದಲ್ಲದೆ, ಇದನ್ನು ಸದ್ಯದಲ್ಲಿ ಚುನಾಯಿಸಲ್ಪಟ್ಟಿರುವ 15 ಮುಖ್ಯ ಸ್ಥಳಗಳಲ್ಲಿ ಅಜಮಾಯಿಷಿ ಮಾಡಲಾಗುವುದು. ಇದಕ್ಕಾಗಿ ನಿಯಮಗಳನ್ನು ತಯಾರ್ಮಾಡಿಸಿ, ಹಣವನ್ನು ಒದಗಿಸಿ ಇದೆ ಮತ್ತು ಮೊದಲು ಮಾಡಬೇಕಾದ ಸಂವಿಧಾನಗಳೆಲ್ಲಾ ಮುಗಿದಿರುತ್ತವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಸಾಮಾನ್ಯ ವಿದ್ಯಾಭ್ಯಾಸವನ್ನೂ ಹೆಚ್ಚಿಸಿದ್ದರಿಂದ, ಸಂಸ್ಥಾನದಲ್ಲಿ ಇದುವರೆಗೆ ದೊರೆಯುತ್ತಿದ್ದುದಕ್ಕಿಂತಲೂ ಶಿಕ್ಷಿತರಾದ ಹೆಚ್ಚು ಜನ ಉಪಾಧ್ಯಾಯರನ್ನೂ, ಇನ್ನೂ ಉತ್ತಮವಾದ ಶಿಕ್ಷಣಕ್ರಮವನ್ನೂ ಒದಗಿಸತಕ್ಕದ್ದು ಅವಶ್ಯಕವಾಗಿರುತ್ತದೆ. ಇದನ್ನು ಒದಗಿಸಬೇಕೆಂಬ ಉದ್ದೇಶದಿಂದ ಟ್ರೇನಿಂಗ್ ಸ್ಕೂಲ್‌ಗಳನ್ನು ಇನ್ನೂ ಚೆನ್ನಾಗಿ ಸರಿಪಡಿಸುವುದಕ್ಕೂ, ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಒಂದು ಏರ್ಪಾಡು ಅಂಗೀಕೃತವಾಗಿದೆ. ಆ ಏರ್ಪಾಡಿನ ಸಾರಾಂಶವೇನೆಂದರೆ—ಗ್ರಾಜುಯೇಟುಗಳಾದ ಉಪಾಧ್ಯಾಯರಿಗಾಗಿ ಒಂದು ಟ್ರೇನಿಂಗ್ ತರಗತಿಯನ್ನಿಟ್ಟು ಮೈಸೂರು ನಾರ್ಮಲ್ ಸ್ಕೂಲನ್ನು ಒಂದು ಟ್ರೇನಿಂಗ್ ಕಾಲೇಜನ್ನಾಗಿ ಮಾಡುವುದು; ಶಿವಮೊಗ್ಗೆಯಲ್ಲಿಯೂ, ಕೋಲಾರದಲ್ಲಿಯೂ, ಇರುವ ಟ್ರೇನಿಂಗ್ ಸ್ಕೂಲುಗಳನ್ನು ಇನ್ನೂ ಚೆನ್ನಾಗಿ ಸರಿಪಡಿಸುವುದು; ಮತ್ತು ಶೀಘ್ರದಲ್ಲಿಯೇ ತುಮಕೂರಲ್ಲಿ ಒಂದು ಟ್ರೇನಿಂಗ್ ಸ್ಕೂಲನ್ನು ಇಡುವುದು. ಈಗ ಸಾಲಿಯಾನ 254 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುತ್ತಿರುವುದಕ್ಕೆ ಬದಲಾಗಿ, ಮುಂದೆ 440 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುವುದೇ ಈ ಬದಲಾವಣೆಗಳ ಫಲಿತಾಂಶವಾಗುವುದು.

ಹಿಂದಿನ ವರ್ಷದ ಉಪನ್ಯಾಸದಲ್ಲಿ ನಿರೂಪಿಸಿರುವಂತೆ ಶಿಲ್ಪ ವಾಣಿಜ್ಯ ವಿದ್ಯಾಭಿವೃದ್ಧಿಗೆ ಬೇಕಾದ ಅನೇಕ ಏರ್ಪಾಡುಗಳನ್ನು ಜಾರಿಗೆ ತರಲಾಯಿತು. ಬೆಂಗಳೂರಲ್ಲಿ ಒಂದು ಮೆಕ್ಯಾನಿಕಲ್ ಎಂಜನಿಯರಿಂಗ್ ಸ್ಕೂಲನ್ನೂ ಒಂದು ಕಮರ್ಷಿಯಲ್ ಸ್ಕೂಲನ್ನೂ ಸ್ಥಾಪಿಸಲಾಯಿತು. ಮೈಸೂರಲ್ಲಿ ಮೊದಲಿದ್ದ ಎರಡು ಶಿಲ್ಪಶಾಲೆಗಳನ್ನು ಸೇರಿಸಿ ಹೊಸದಾಗಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನು ಏರ್ಪ

ಡಿಸಲಾಯಿತು. ಪ್ರಸಕ್ತ ಸಂವತ್ಸರದಲ್ಲಿ ಮೇಲ್ಕಂಡ ವಿದ್ಯಾಲಯಗಳಲ್ಲೆಲ್ಲಾ ತೃಪ್ತಿಕರವಾದ ಉದ್ಯೋಗವು ಜರುಗಿರುತ್ತದೆ ಎಂದು ತಿಳಿಯಬರುತ್ತದೆ. ಕೈಗಾರಿಕೆ ಕಸಬನ್ನು ಕಲಿಸುವ ಉಪಾಧ್ಯಾಯರುಗಳನ್ನೂ, ರೈಲ್ವೆ ಪರ್ಮನೆಂಟ್ ವೇ ಇನ್ಸ್ಪೆಕ್ಟರುಗಳನ್ನೂ ಎಂಜಿನ್ ಡ್ರೈವರುಗಳನ್ನೂ ಮತ್ತು ಟೆಲಿಗ್ರಾಫಿಕ್ ಸಿಗ್ನಲರುಗಳನ್ನೂ, ತಯಾರುಮಾಡತಕ್ಕ ಬಗ್ಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ಕೂಲಿನಲ್ಲಿ ಹೊಸ ತರಗತಿಗಳನ್ನು ಇಡಲು ಏರ್ಪಾಡು ಮಾಡಲಾಗಿದೆ. ಗೌರ್ನಮೆಂಟ್ ಪ್ರೆಸ್ ಕಟ್ಟಡದ ಒಂದು ಭಾಗದಲ್ಲಿ, ಅಜಮಾಯಿಷಿ ತರೀಕ್ ಒಂದು ವರ್ಷದವರೆಗೆ ಹಿಂದು ಪ್ರಿಂಟಿಂಗ್ ಕ್ಲಾಸನ್ನು ಇಡಲಾಗುತ್ತದೆ. ಅವರಲ್ಲಿ ಮೊಳೆಗಳನ್ನು ಜೋಡಿಸುವುದು, ಪ್ರೂಫುಗಳನ್ನು ಓದಿ ತಿದ್ದುವುದು, ಮುದ್ರಿಸುವುದು, ಈ ಕೆಲಸಗಳನ್ನು ಕಲಿಸಲಾಗುವುದು.

ಸ್ತ್ರೀವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯಾಗುತ್ತಿದೆ. ಕಳೆದ ಸಾಲಿನಲ್ಲಿ ಇದ್ದ ಗರ್ಲ್ಸ್ ಸ್ಕೂಲುಗಳ ಸಂಖ್ಯೆಯು 360 ರಿಂದ ಪ್ರಕೃತ ವರ್ಷದಲ್ಲಿ 397 ರ ವರೆಗೆ ಹೆಚ್ಚಿರುತ್ತದೆ. ಮೈಸೂರಲ್ಲಿರುವ ಮಹಾರಾಣೀ ಕಾಲೇಜನ್ನೂ, ಡಿಸ್ಟ್ರಿಕ್ಟ್ ಕಸಬೆಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವನ್ನೂ ಹೆಚ್ಚಿಸಬೇಕೆಂಬ ಉದ್ದೇಶದಿಂದ, ಪುನಃ ಪರಿಷ್ಕರಿಸಲು ಹುಕುಂ ಕೊಡಲಾಗಿರುತ್ತದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು. ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಲ್ಲಿರುವ ಗೌರ್ನಮೆಂಟ್ ಗರ್ಲ್ಸ್‌ಸ್ಕೂಲಿನಲ್ಲಿಯೂ, ತುಮಕೂರು ಯಂಪ್ರೆಸ್ ಗರ್ಲ್ಸ್‌ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ್ ಸೆಕೆಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಹೈಸ್ಕೂಲ್ ಅಂತಸ್ತಿಗೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿಯೂ, ಚಾಮರಾಜಪೇಟೆ ಗರ್ಲ್ಸ್‌ಸ್ಕೂಲಿನಲ್ಲಿಯೂ ಇಂಗ್ಲೀಷ್ ಲೋವರ್ ಸೆಕೆಂಡರಿ ಕ್ಲಾಸುಗಳನ್ನು ಇಡಲಾಗುವುದು. ಬೆಂಗಳೂರು ಮಲ್ಲೇಶ್ವರದ ಗರ್ಲ್ಸ್ ಸ್ಕೂಲಿನಲ್ಲಿಯೂ ಕೋಲಾರ, ಚಿಕ್ಕಮಗಳೂರು ಚಿತ್ರದುರ್ಗ, ಶಿವಮೊಗ್ಗ, ಹಾಸನ ಇವುಗಳಲ್ಲಿನ

ಗರ್ಲ್ಸ್ ಸ್ಕೂಲುಗಳಲ್ಲಿಯೂ ಇಂಗ್ಲೀಷ್ ಭಾಷೆಯನ್ನು ಕಲಿಸುವುದಕ್ಕೆ ಏರ್ಪಾಡು ಮಾಡಲಾಗುವುದು. ಈ ಹೊಸ ಬದಲಾವಣೆಗಳಿಂದ ಭಾಷೆಗೆ ಸಂಬಂಧಪಟ್ಟ ವಿದ್ಯೆಯೊಂದಿಗೆ ಕೈಗಾರಿಕೆಗೂ ಗೃಹಕೃತ್ಯಕ್ಕೂ ಸಂಬಂಧಪಟ್ಟ ವಿದ್ಯೆಗಳಿಗೂ ಅವಕಾಶವುಂಟಾಗುವುದು. ಹಿಂದುಸ್ಥಾನಿ ಗರ್ಲ್ಸ್ ಸ್ಕೂಲುಗಳಿಗೆ ಒಬ್ಬರು ಇನ್‌ಸ್ಪೆಕ್ಟ್ರೆಸ್ಸನ್ನು ಹಂಗಾಮಿಯಾಗಿ ನೇಮಿಸಿಯಿದೆ

ಜಾರಿಗೆ ತಂದಿರುವ ಮುಖ್ಯ ಮುಖ್ಯ ಇತರ ಏರ್ಪಾಡುಗಳಲ್ಲಿ ಈ ಕೆಳಗೆ ಕಂಡ ಸಂಗತಿಗಳನ್ನು ಉದಹರಿಸಬಹುದಾಗಿದೆ:—ವರ್ನಾಕ್ಯುಲರ್ ವಿದ್ಯಾಭ್ಯಾಸದ ಸೇವಾ ಭಾಗಕ್ಕೆ ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್‌ರವರನ್ನು ನೇಮಿಸಿದ್ದು, ಆಫೀಸರುಗಳ ಮತ್ತು ಹೈಸ್ಕೂಲ್ ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳ ಹೆಡ್ಮಾಸ್ಟರ ಮತ್ತು ಇತರ ಉಪಾಧ್ಯಾಯರ ಸಂಬಳದ ದರ್ಜೆಯನ್ನು ಪುನರ್ವಿಮರ್ಶೆ ಮಾಡಿದ್ದು, ಪ್ರತಿ ದರ್ಜೆಯಲ್ಲಿಯೂ ಎಷ್ಟು ಜನಗಳಿರಬೇಕೆಂಬುದನ್ನು ಕ್ಲುಪ್ತ ಪಡಿಸುವುದು, ಒಂದು ದರ್ಜೆಯು ಮತ್ತೊಂದು ದರ್ಜೆಗೆ ಸೇರಿಕೊಳ್ಳದಂತೆ ಮಾಡುವುದು, ಯೋಗ್ಯತೆಯ ಆಧಾರದಮೇಲೆಯೇ ಚುನಾವಣೆಯನ್ನು ಮಾಡಿಕೊಳ್ಳಲು ಸೌಲಭ್ಯವನ್ನು ಕಲ್ಪಿಸುವುದು, ಪಾಠ ಹೇಳುವ ಉಪಾಧ್ಯಾಯರುಗಳೂ, ಪರೀಕ್ಷೆ ಕೆಲಸವನ್ನು ನೋಡುವ ಇನ್‌ಸ್ಪೆಕ್ಟರುಗಳೂ ಒಬ್ಬರ ಕೆಲಸವನ್ನು ಮತ್ತೊಬ್ಬರು ಕ್ರಮವಾಗಿ ವಹಿಸುವುದಕ್ಕೆ ಅವಕಾಶ ಕೊಡುವುದು, ಮತ್ತು ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಉಪಾಧ್ಯಾಯರುಗಳ ಸಂಬಳವು ಅಪೇಕ್ಷಾರ್ಹವಾಗಿ ಇರುವಂತೆ ಮಾಡುವುದು. ಸರ್ಕಾರಿ ಸಹಾಯವನ್ನು ಪಡೆಯುವ ಸ್ಕೂಲುಗಳ ಉಪಾಧ್ಯಾಯರಿಗೆ ಸಂಸ್ಥಾನದ ಬೀಮಾಕ್ರಮದಿಂದ (ಇನ್‌ಷ್ಯೂರೆನ್ಸ್) ಉಂಟಾಗುವ ಪ್ರಯೋಜನವನ್ನು ಪಡೆಯಲು ಕೆಲವು ಷರತ್ತುಗಳಮೇಲೆ ಅವಕಾಶ ಕೊಡಲಾಗಿದೆ.

ಕಳೆದ ದಸರಾ ಮಹೋತ್ಸವಕಾಲದಲ್ಲಿ ಮೈಸೂರಲ್ಲಿ ವಿದ್ಯಾಭ್ಯಾಸ ಪ್ರದರ್ಶನವನ್ನು ನಡಿಸಲಾಯಿತು. ಆ ಪ್ರದರ್ಶನಕ್ಕೆ ಅನೇಕ ಜನಗಳು ಬಂದಿದ್ದರು. ಡಿಸೆಂಬರ್ ಮಾಹೆಯ ಆಖೈರಿನಲ್ಲಿ ಅಂತಹ ಮತ್ತೊಂದು ಪ್ರದರ್ಶನವನ್ನು ಬೆಂಗ

ಳೂರು ಹೈಸ್ಕೂಲಿನಲ್ಲಿ ಜರುಗಿಸಲಾಯಿತು. ಅದೂ ಜನಗಳ ವಿಶ್ವಾಸಕ್ಕೆ ಪಾತ್ರ ವಾಯಿತು.

ದೊಡ್ಡಬಳ್ಳಾಪುರದಲ್ಲಿ ಏರ್ಪಡಿಸಿದ್ದ "ಪೇರೆಂಟ್ಸ್‌ಡೇ" ಎಂಬ ಸಂತೋಷದ ಕೂಟವು.

ಈ ದೊಡ್ಡಬಳ್ಳಾಪುರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ವಿಶೇಷ ಪ್ರಾಚುರ್ಯ ದಲ್ಲಿರುವುದನ್ನು ನೋಡಿ ಸುತ್ತಮುತ್ತಣ ಗ್ರಾಮದವರೂ ಇಲ್ಲಿಯ ಸ್ಕೂಲುಗಳಲ್ಲಿ ನಡೆಯುತ್ತಿರುವ ನವೀನ ಪಾಠಕ್ರಮಗಳನ್ನು ಪರಾಮರ್ಶಿಸುವುದರ ಮೂಲಕ ತಂತಮ್ಮ ಗ್ರಾಮಗಳಲ್ಲಿ ವಿದ್ಯೆಯನ್ನು ಹೆಚ್ಚುಹೆಚ್ಚಾಗಿ ಹರಡುತ್ತಾ ಬರುವ ವಿಷಯ ದಲ್ಲಿ ಪ್ರಯತ್ನಶೀಲರಾಗಲು ಪ್ರೋತ್ಸಾಹ ಉಂಟಾಗಲೆಂಬ ಮುಖ್ಯೋದ್ದೇಶದಿಂದ ಇಲ್ಲಿ ಕಳೆದ ಆಗಸ್ಟ್ ತಿಂಗಳ 19 ನೆಯ ತಾರೀಖಿನ ದಿನ ಒಂದು ವಿದ್ಯಾಭ್ಯಾಸದ ಪ್ರದರ್ಶನವು ನಡೆಯಿಸಲ್ಪಟ್ಟಿತು. ಇಲ್ಲಿನ ಎ. ವಿ. ಸ್ಕೂಲ್ ಹೆಡ್‌ಮಾಸ್ಟರವರಾದ ಮ|| ರಾ|| ಡಿ. ಕೊಂಗಾಡಿಯಪ್ಪನವರು ಈ ಕಾರ್ಯವನ್ನು ನೆರವೇರಿಸಲು ಮುಂದಾ ಳುಗಳಾಗಿ ನಿಂತಿದ್ದರೂ ಈ ಸ್ಥಳದ ಎಲ್ಲಾ ಪಾಠಶಾಲೆಗಳ ಸಹಾಯೋಪಾಧ್ಯಾಯ ರುಗಳೂ ಮತ್ತು ಪುರಪ್ರಮುಖರುಗಳೂ ಮಾಡಿದ ಬಗೆಬಗೆಯ ಸಹಾಯವು ಇವ ರಿಗೆ ಉತ್ತೇಜಕದಾಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ.

ಇಲ್ಲಿನ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಏರ್ಪಡಿಸಿದ್ದ ವಿದ್ಯಾಭ್ಯಾಸದ ಪ್ರದರ್ಶ ನದಲ್ಲಿ—ಈ ಊರಿನ ಎಲ್ಲಾ ಪಾಠಶಾಲೆಗಳ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿ ಯರ ಬರೆವಣಿಗೆ, ಚಿತ್ರದ ಕೆಲಸ, ರಟ್ಟಿನ ಕೆಲಸ, ಮರಗೆಲಸ, ಬೆತ್ತದಹೆಣಿಗೆ ಮತ್ತು ನೇಯಿಗೆ ಮೊದಲಾದ ಕೈಗಾರಿಕೆಯ ಕೆಲಸಗಳು ಮಾತ್ರವೇ ಅಲ್ಲದೆ ಗ್ರಾಮಾಂತರ ದಲ್ಲಿರುವ ಸ್ಕೂಲುಗಳ ಬಗೆಬಗೆಯ ಕೆಲಸಗಳೂ, ಬೆಂಗಳೂರು ತಾತಾಸಿಲ್ಕ್ ಫಾರ ಮಿನ ರೇಷ್ಮೆಯಗೂಡು ಮತ್ತು ಬಟ್ಟೆ ಮುಂತಾದುವೂ, ಮೆಕ್ಯಾನಿಕಲ್ ಇಂಜನಿ ಯರಿಂಗ್ ಸ್ಕೂಲಿನ ಕಬ್ಬಿಣ ಮತ್ತು ಮರಗೆಲಸಗಳ ಮಾದರಿಗಳೂ, ಮೈಸೂರು ಟ್ರೈಯಿನಿಂಗ್ ಕಾಲೇಜಿನ ಕಿಂಡರ್‌ಗಾರ್ಟನ್ ಸೆಕ್ಷನ್ನಿನಲ್ಲಿ ನಡೆಯಿಸಿದ ಪಾಠಗಳ

ನೂತನಕ್ರಮದ ಬಗೆಬಗೆಯ ಕೆಲಸಗಳೂ, ಪ್ರದರ್ಶಿಸಲ್ಪಟ್ಟಿದ್ದುವು. ಇದರ ಜತೆಗೆ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್‌ಜನರಲ್ ಸಾಹೇಬರವರ ಆಫೀಸಿನಿಂದ ವಿಲಾಯಿತಿಯ ಸ್ಕೂಲುಗಳಿಗೆ ಸಂಬಂಧಪಟ್ಟ ವಿದ್ಯಾಭ್ಯಾಸದ ಸಾಮಗ್ರಿಗಳೂ ಕಳು ಹಲ್ಪಟ್ಟಿದ್ದುವು ; ಮತ್ತು ಪ್ರದರ್ಶನಮಂದಿರದಲ್ಲಿ ಬೆಂಗಳೂರು ಹೈಸ್ಕೂಲಿನ ಪ್ರಕೃತಿ ಶಾಸ್ತ್ರ, ರಸಾಯನಶಾಸ್ತ್ರ ಬೋಧಕರಾದ ಮ|| ಅನಂತಪದ್ಮನಾಭಯ್ಯನವರೂ ಮತ್ತು ನಾರಾಯಣಮೂರ್ತಿಯವರೂ ಸೈನ್ಸಿನಲ್ಲಿ ಕೆಲವು ಮುಖ್ಯಾಂಶಗಳನ್ನು ನಿದರ್ಶನಪೂರ್ವಕವಾಗಿ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದುದು ಪ್ರೇಕ್ಷಕರಿಗೆ ಕೌತು ಕಾತಿಶಯವನ್ನುಂಟುಮಾಡುತಿದ್ದಿತು.

ಪ್ರಾತಃಕಾಲ 10 ಘಂಟೆಯಿಂದ ಸಾಯಂಕಾಲ 5 ಘಂಟೆಯವರೆಗೂ ಪುರ ನಿವಾಸಿಗಳೂ ಮತ್ತು ಇತರರೂ ಪ್ರದರ್ಶನ ವಸ್ತುಗಳನ್ನು ನೋಡಿ ಈ ನೂತನಕ್ರ ಮದ ವಿದ್ಯಾಭ್ಯಾಸವು ಬಾಲಕರಿಗೆ ಅತ್ಯಂತ ಬುದ್ಧಿಕೌಶಲ್ಯವನ್ನೂ, ಆತ್ಮಾವಲಂ ಬನಶಕ್ತಿಯನ್ನೂ ಉಂಟುಮಾಡತಕ್ಕದ್ದಾಗಿದೆಯೆಂಬ ಮನಗಂಡು ಅತ್ಯಾನಂದಭರಿ ತರಾದರು. ಈ ಪ್ರದರ್ಶನ ಮಹೋತ್ಸವವು ಬಹು ವಿಜೃಂಭಣೆಯಿಂದ ನಡೆಯಿಸಲ್ಪ ಟ್ಟಿರುವುದೆಂಬುದಕ್ಕೆ, ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾಹೇ ಬರವರೂ, ಡೆ|| ಇನ್|| ಜನರಲ್‌ರವರೂ, ಬೆಂಗಳೂರು ಸರ್ಕಲ್ ಇನ್‌ಸ್ಪೆಕ್ಟರವರೂ, ಡೆಪ್ಯುಟಿ ಇನ್‌ಸ್ಪೆಕ್ಟರವರೂ, ಬೆಂಗಳೂರು ಹೈಸ್ಕೂಲ್ ಹೆಡ್ಮಾಸ್ಟರವರೂ ಮತ್ತು ಡೆಪ್ಯುಟಿಕಮಿಷನರ್ ಸಾಹೇಬರವರೂ ಮೊದಲಾದ ಬಹುಜನ ದೊಡ್ಡಮನುಷ್ಯರು ಗಳು ದಯಮಾಡಿಸಿ ಇದನ್ನು ಸಾಂಗವಾಗಿ ನೆರವೇರಿಸುವುದೇ ಪ್ರಬಲವಾದ ದೃಷ್ಟಾಂತವಾಗಿದೆ.

ಸಾಯಂಕಾಲ 5 ಘಂಟೆಯಮೇಲೆ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವ ರಾದ ರಾವ್‌ಬಹದ್ದೂರ್ ಮ|| ಎಂ. ಶಾಮರಾವ್ ಎಂ. ಎ. ಯವರು ಅಗ್ರಾಸನ ವನ್ನು ವಹಿಸಿ ನಡೆಯಿಸಿದ ಸಭೆಯಲ್ಲಿ ಡೆಪ್ಯುಟಿ ಇನ್‌ಸ್ಪೆರ್ ಜನರಲ್‌ರವರಾದ ಮ|| ಸಿ. ಕೃಷ್ಣರಾಯರವರು—ಪ್ರಾಚೀನ ನವೀನ ಬೋಧನಾಕ್ರಮಗಳಿಗೆ ಇರುವ ತಾರತ ಮ್ಯವನ್ನು ವ್ಯಕ್ತಗೊಳಿಸಿ, ಬಹುಸ್ವಾರಸ್ಯವಾಗಿ ಉಪನ್ಯಾಸಮಾಡಿ, ಸಭಿಕರನ್ನು

ಆನಂದಪಡಿಸಿದುದೂ ಅಲ್ಲದೆ, ಪ್ರಜೆಗಳು ಹೀಗೆ ಸರಕಾರದವರಿಗೆ ಸಹಾಯಮಾ ಡುತ್ತಾಬಂದರೆ ಅವರಿಗೆ ಬಹುಪ್ರಯೋಜನವುಂಟಾಗುವುದೆಂದೂ" ಅಪ್ಪಣೆ ಕೊಡಿಸಿದರು. ಬಳಿಕ ಸಭಾಧ್ಯಕ್ಷರಾದ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ವಿದ್ಯಾಭ್ಯಾಸದಿಂದ ಬುದ್ಧಿಕೌಶಲ್ಯ ಹಸ್ತಕೌಶಲ್ಯಾದಿಗಳನ್ನು ಪಡೆವುದು ಮಾತ್ರವೇ ಅಲ್ಲದೆ ಜನಾಂಗದ ಏಳಿಗೆಗೆ ಬಹುಮುಖ್ಯವಾದ ಒಳ್ಳೆಯ ನಡತೆಯುನ್ನೂ ಪಡೆಯಬಹುದೆಂಬುದನ್ನು ನಿದರ್ಶಿಸಿ—ದುಷ್ಕೃತ್ಯವನ್ನು ನಿರ್ಮೂಲ ಮಾಡುವುದು ವಿದ್ಯೆಯೇ—ಎಂಬ ಶ್ರೀಮನ್ಮಹಾರಾಜರವರ ಹಿತೋಕ್ತಿಯು ದೃಷ್ಟಾಂತದಿಂದ ಸ್ಪಷ್ಟಪಡಿಸಿದರು.

ಬಳಿಕ ಸಭಾಧ್ಯಕ್ಷರವರಿಗೆ ವಂದನಸೂಲಿಕೆಗಳೂ, ಸರ್ವರಿಗೂ ಗಂಧಪುಷ್ಪಾದಿಗಳೂ ಸಮರ್ಪಿಸಲ್ಪಟ್ಟವು. ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾಪುರಸ್ಸರವಾಗಿ ಮಂಗಳಗೀತವಾದ್ಯಗಳೊಡನೆ ಸಭೆಯು ಮುಕ್ತಾಯವಾಯಿತು.

ಗ್ರಂಥ ವಿಮರ್ಶೆ.

ವಿದ್ಯಾರ್ಥಿ ಕರಭೂಷಣ.

ಮ|| ರಾ|| ಶ್ರೀ|| ಎಂ. ವೆಂಕಟಕೃಷ್ಣಯ್ಯನವರಿಂದ ರಚಿತವಾಗಿರುವ 'ವಿದ್ಯಾರ್ಥಿಕರಭೂಷಣ'ವೆಂಬ ಗ್ರಂಥವು ಕನ್ನಡಿಗರ ಭುಜಕೀರ್ತಿಯಾಗಿ ಪರಿಣಮಿಸಿರುವುದು. ಇದು ಜಾನ್‌ಟಾಡ್ ಎಂಬ ಇಂಗ್ಲೀಯ ಗ್ರಂಥಕರ್ತನಿಂದ ಇಂಗ್ಲಿಷ್ ನಲ್ಲಿ ಬರೆಯಲ್ಪಟ್ಟ 'ಸ್ಟೂಡೆಂಟ್ಸ್ ಮ್ಯಾನ್ಯುಯಲ್' ಎಂಬುದರ ಆಧಾರದ ಮೇಲೆ ಕನ್ನಡಿಗರಿಗೆ ಉಪಯುಕ್ತವಾಗುವಂತೆ ಬಹು ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿರುವುದು. ಈ ಪುಸ್ತಕದಲ್ಲಿ ಬಾಲಕರಿಗೂ, ತಾಯಿತಂದೆಗಳಿಗೂ, ಉಪಾಧ್ಯಾಯರಿಗೂ ಆವಶ್ಯಕ ತಿಳಿಯಬೇಕಾದ ಎಷ್ಟೋ ವಿಷಯಗಳು ಅಡಕವಾಗಿರುವುವು. ಕನ್ನಡಿಗರ ಏಳಿಗೆಯಲ್ಲಿ ಬದ್ಧಾದರರಾಗಿಯೂ ವಿದ್ಯಾಪ್ರಚಾರದಲ್ಲಿ ಮುಂದಾಳಾಗಿಯೂ ಇರುವ ಮ|| ರಾ|| ಶ್ರೀ|| ವೆಂಕಟಕೃಷ್ಣಯ್ಯನವರು ಈ ಪುಸ್ತಕವನ್ನು ರಚಿಸಿ ದೊಡ್ಡ ಉಪಕಾರವನ್ನು ಮಾಡಿರುವರು. ಇದಕ್ಕಾಗಿ ನಾವು ಅವರಿಗೆ ತುಂಬಾ ಕೃತಜ್ಞರಾಗಿರುವೆವು.

ಈ ಪುಸ್ತಕವು ಜಿ. ಟಿ. ಎ. ಪ್ರೆಸ್ಸಿನಲ್ಲಿ ಮುದ್ರಿತವಾಗಿ ಮಾರಾಟಕ್ಕೆ ಸಿದ್ಧವಾಗಿರುವುದು. ಕ್ರಯ ೮ ಆಣೆ.

ವಿದ್ಯಾದಾಯಿನಿ

(A Monthly Journal.)

ಭಾಗ ೨.] ಡಿಶಂಬರ್—೧೯೧೪ [ಸಂಚಿಕೆ. ೧೨

ದಸರಾಮಹೋತ್ಸವ ಕಾಲದಲ್ಲಿ ಪ್ರಜಾಪ್ರತಿನಿಧಿಗಳೆದುರಿಗೆ ವಿದ್ಯಾಸಂಪದಭ್ಯುದಯ ಸಂಘದಪರವಾಗಿ, ಸರ್ಕಲ್ ಇನ್ಸ್‌ಪೆಕ್ಟರ್ ಮ॥ ರಾ॥ ಶ್ರೀನಿವಾಸರಾವ್ ಬಿ ಎ. ಯವರು ಮಾಡಿದ ಉಪನ್ಯಾಸ.

ಲೋಕದಲ್ಲಿ ಸೌಖ್ಯವನ್ನು ಹೊಂದಬೇಕೆಂತಲೂ, ಅಭಿವೃದ್ಧಿಸ್ಥಿತಿಗೆ ಬರಬೇಕೆಂತಲೂ ಅಪೇಕ್ಷಿಸುವುದು, ಸರ್ವರಿಗೂ ಸಹಜವಾಗಿದೆ. ಇದಕ್ಕೆ ಸರ್ವಕಾಲದಲ್ಲಿಯೂ ಎಲ್ಲಾ ಜನಾಂಗಕ್ಕೂ ವಿದ್ಯಾಭ್ಯಾಸವೇ ಮುಖ್ಯಸಾಧನವಾಗಿದೆಯೆಂದು ಪಂಡಿತರೆಲ್ಲರೂ ಒಪ್ಪಿರುತ್ತಾರೆ. ವಿದ್ಯೆಯೆಂದರೆ ತಿಳವಳಿಕೆ. ಇದೇ ಬುದ್ಧಿಶಕ್ತಿಯನ್ನು ಹೆಚ್ಚಿಸುವುದು. ಶಕ್ತಿಯುಕ್ತಿಗಳಿಲ್ಲದೆ ಹೋದರೆ ಯಾವದೂ ಫಲಕಾರಿಯಾಗಲಾರದು. ಆದುದರಿಂದಲೇ ವಿದ್ಯಾಭ್ಯಾಸವು ದೇಶದ ಏಳಿಗೆಗೂ, ಸರ್ವ ಸುಖಕ್ಕೂ ಮುಖ್ಯಕಾರಣವಾದುದು ಎಂದು ಹೇಳಿರುತ್ತಾರೆ. "ವಿದ್ಯಾ ದದಾತಿ ವಿನಯಂ ವಿನಯಾತ್ ಯಾತಿಪಾತ್ರತಾಮ್ | ಪಾತ್ರತ್ವಾತ್ ಧನಮಾಪ್ನೋತಿ ಧನಾದ್ಧರ್ಮಂ ತತಸ್ಸುಖಂ ||" ಈ ವಿದ್ಯಾಭ್ಯಾಸವನ್ನು ಪ್ರತಿಯೊಬ್ಬನಿಗೂ ಮಾಡಿಸುವುದು ಅತ್ಯಂತ ಆವಶ್ಯಕವಾಗಿದೆ. ವಿದ್ಯೆಯು ಮನುಷ್ಯನ ದೇಹಬುದ್ಧಿ ಗುಣಾತಿಶಯುಗಳನ್ನು ಅಭಿವೃದ್ಧಿಪಡಿಸಿ, ನಿಯುಕ್ತವಾದ ಕೆಲಸಗಳನ್ನು ಕ್ರಮವಾಗಿ ಸಫಲವಾಗುವಂತೆ ಮಾಡಿಕೊಳ್ಳುವ ಶಕ್ತಿಯನ್ನುಂಟುಮಾಡುವುದು. ವಿದ್ಯಾವಿಷಯದಲ್ಲಿ ವಿಶೇಷ ಪರಿಶೀಲ

ಮುಖ್ಯಕಾರ್ಯವಾಗಿದೆ. ಆದುದರಿಂದಲೇ ಪ್ರಾಥಮಿಕವಿದ್ಯಾಭ್ಯಾಸವು ಸರ್ವಜನೋಪಯುಕ್ತವಾಗಿ, ಮೂಲಾಧಾರವಾಗಿರುವುದು. ಈ ಬಾಲ್ಯಶಿಕ್ಷಣವೇ ಮನುಷ್ಯನನ್ನು ರಕ್ಷಿಸುವುದು. "ಮಕ್ಕಳಿಗೆ ತಂದೆ ಬಾಲ್ಯದೊಳ್ ಅಕ್ಕರವಿದ್ಯೆಗಳನರುಪದಿರ್ದೊಡೆ ಕೊಂದಂ || ಲಕ್ಕಧನವಿರಲು ಕೆಡುಗುಂ | ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನಾ" || ತಂದೆಯು ಬಾಲ್ಯದಲ್ಲಿ ವಿದ್ಯಾಭ್ಯಾಸಮಾಡಿಸದೆ ಇದ್ದಲ್ಲಿ ಮಕ್ಕಳನ್ನು ಕೊಂದಂತೆಯೇ ಆಗುತ್ತದೆ. ಲಕ್ಷಾಂತರ ರೂಪಾಯಿಗಳಿದ್ದರೂ ಅವುಗಳೆಲ್ಲಾ ನಾಶವಾಗುವುವು. ಚಿಕ್ಕತನದಲ್ಲಿ ಅಭ್ಯಾಸಮಾಡಿದ ಅಕ್ಷರಗಳೇ-ಎಂದರೆ ವಿದ್ಯೆಯೇ-ಕಾಪಾಡುವುದು. ಎಂದು ಕವಿಯು ಹೇಳಿರುತ್ತಾನೆ.

ಉತ್ತರೋತ್ತರ ವಿಶೇಷಜ್ಞಾನ ಸಂಪಾದನೇಚ್ಛೆಯಿಂದ ಮಾಡತಕ್ಕ ವಿದ್ಯಾಕಾಲಕ್ಷೇಪವೇ ಪ್ರೌಢವಿದ್ಯಾಭ್ಯಾಸವೆನ್ನಿಸುವುದು. ಸಾಮಾನ್ಯವಾಗಿ 7 ರಿಂದ 12 ವರ್ಷ ವಯಸ್ಸಿನೊಳಗಿನ ಮಕ್ಕಳ ಬುದ್ಧಿಶಕ್ತಿಯನ್ನು ಬೆಳೆಸುವುದಕ್ಕಾಗಿ ನಡೆಸತಕ್ಕುದೇ ಬಾಲ್ಯವಿದ್ಯಾಭ್ಯಾಸಕ್ರಮವು. ಈ ಕ್ರಮದಲ್ಲಿ ಓದುವುದು, ಬರೆಯುವುದು, ಲೆಕ್ಕಾಚಾರ, ಇವುಗಳೇ ಅತ್ಯಾವಶ್ಯಕವಾದುವು. ದೇಹಪುಷ್ಟಿಗೆ ಆವಶ್ಯಕವಾದ ಆಹಾರಸಾಮಗ್ರಿಗಳಲ್ಲಿ ಅನ್ನವು ಹೇಗೆ ಮುಖ್ಯವಾದುದೋ ಹಾಗೆಯೇ ಓದುಬರಹವೂ ಗಣಿತಜ್ಞಾನವೂ ವಿದ್ಯಾಭಿವೃದ್ಧಿಯಲ್ಲಿ ಬಹಳ ಮುಖ್ಯವಾದುವುಗಳು.

ಈ ಮೂರನ್ನು ಕಲಿಯುವವರಿಗೆ ಅಭಿರುಚಿಯನ್ನುಂಟುಮಾಡುವುದಾಗಿಯೂ, ಇವು ಸುಲಭವಾಗಿ ಅವಗಾಹನೆಯಾಗುವುದಕ್ಕೆ ಸಹಕಾರಿಯಾಗಿಯೂ, ಮುಂದೆ ಜೀವನೋಪಯುಕ್ತವಾದ ಆವುದಾದರೊಂದು ಕಸಬನ್ನು ಕಲಿಯಲು ಚಾತುರ್ಯವನ್ನುಹುಟ್ಟಿಸತಕ್ಕುದಾಗಿಯೂ, ಮತ್ತು ಇಂದ್ರಿಯಗಳ ಪಾಟವಕ್ಕೆ ಸಾಧನಗಳಾಗಿಯೂ ಇರುವ ಚಿತ್ರಗಳನ್ನು ಬರೆಯುವುದೂ, ಮಣ್ಣಿನಲ್ಲಿ ಆಕೃತಿಗಳನ್ನು ಮಾಡುವುದೂ, ಹೆಣಿಗೆ ಹೊಲಿಗೆ ಇವೇ ಮುಂತಾದ ಕೈಕೆಲಸಗಳೂ, ವಿಚಾರ ಊಹೆ ಅಭಿನಿವೇಶ ಪ್ರೀತಿ ಭಕ್ತಿ ಮೊದಲಾದ ಮನೋವೃತ್ತಿಗಳನ್ನು ಅಭಿವೃದ್ಧಿಗೊಳಿಸುವ ಪ್ರಕೃತಿವಿಮರ್ಶೆಯೂ ವಸ್ತುಪರೀಕ್ಷಣವೂ ಇವೆಲ್ಲಾ ವಿದ್ಯಾರ್ಥಿಗಳಿಗೆ ಮುಂದೆ ಬಹು ಫಲಕಾರಿಯಾಗಿರುವುವು. ವಿದ್ಯಾಭ್ಯಾಸಕ್ಕೆ ಬಾಲ್ಯವೇ ಮುಖ್ಯಕಾಲವಾಗಿದೆ

ಮನೋವೃತ್ತಿಯನ್ನು ಸರಿಪಡಿಸುವುದಕ್ಕೆ ಕೌಮಾರ್ಯದಲ್ಲಿ ನೀತಿ ಮತಗಳ ಮನೋಭಾವಗಳು, ಅವರ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲಬೇಕಾಗಿರುವುವು. ಇಂಥ ಮನೋವೃತ್ತಿಗಳನ್ನೂ ಅನೂಚಾನವಾಗಿ ಬಂದ ಪದ್ಧತಿಗಳನ್ನೂ ಬಾಲಕರಲ್ಲಿ ದೃಢಪಡಿಸುವುದಕ್ಕೆ ಇದೇ ತಕ್ಕ ಕಾಲವಾಗಿರುವುದು. ೧೩-೧೭ ವಯಸ್ಸಿನಲ್ಲಿ ಉಂಟಾಗತಕ್ಕ ನೀತಿಬೋಧೆಯೂ, ಮತಜ್ಞಾನವೂ, ಚಿರಕಾಲ ಮನಸ್ಸಿನಲ್ಲಿ ನೆಟ್ಟಿರುತ್ತವೆಂದು, ಪ್ರೊಫೆಸರ್ ಬಾಂಪೆಸ್ ಸ್ಮಿತ್ ರವರು ಸಹ ಅಭಿಪ್ರಾಯಪಡುತ್ತಾರೆ.

7 ರಿಂದ 11 ವರ್ಷಗಳವರೆಗೆ ಮೈಸೂರು ಸರ್ಕಾರದವರು ನಿರ್ಬಂಧದಿಂದ ನಡೆಸಬೇಕೆಂಬುವುದೇ ಬಾಲ್ಯವಿದ್ಯಾಭ್ಯಾಸದ ಕ್ರಮವಾಗಿದೆ. ಇಂಗ್ಲಂಡಿನಲ್ಲಿ 13 ರಿಂದ 14 ವರುಷದ ಬಾಲಕ ಬಾಲಕಿಯರಿಗೂ ವಿದ್ಯಾಭ್ಯಾಸವು ನಿರ್ಬಂಧವಾಗಿರುತ್ತದೆ. ಜರ್ಮನಿ ದೇಶದಲ್ಲಿ 17 ರ ವರೆಗೆ ಬಲಾತ್ಕರಿಸಲ್ಪಟ್ಟಿರುತ್ತವೆ. ಜೀವನೋಪಾಯಕ್ಕನುಕೂಲವಾದ ವ್ಯವಸಾಯ, ಕೈಗೆಲಸ, ವಾಣಿಜ್ಯ ಮುಂತಾದ ಕಸಬುಗಳನ್ನು ಮಾಡುವವರಿಗೆ ಹೆಚ್ಚಿನ ವಿಷಯಗಳನ್ನು ಕಲಿಸುವುದಕ್ಕೆ 13 ರಿಂದ 16 ವರ್ಷಗಳವರೆಗೂ ಸಕಾಲವಾಗಿರುತ್ತದೆ.

ಆದರೆ, ಈ ಕಾಲದಲ್ಲಿ (12 ರಿಂದ 16 ವರ್ಷ ವಯಸ್ಸುಳ್ಳವರು) ಮಾಡುವ ವಿದ್ಯಾಭ್ಯಾಸಕ್ಕೆ ನಮ್ಮ ಸರ್ಕಾರದವರ ನಿರ್ಬಂಧವೇನೂ ಈಗ ಇಲ್ಲ. ಇಂಥವರು ಜೀವನೋಪಾಯಕ್ಕಾಗಿ ಬೇರೆ ಬೇರೆ ಕಸಬುಗಳನ್ನು ಮಾಡುತ್ತಿದ್ದಾಗ್ಗೂ, ಆಯಾ ಕೃಷಿ ಶಿಲ್ಪ ವಾಣಿಜ್ಯಾದಿಗಳಲ್ಲಿರುವ ಅಧಿಕಾಂಶಗಳನ್ನು ತಿಳಿಯುವುದಕ್ಕೋಸ್ಕರ ತಮ್ಮ ತಮ್ಮ ಉದ್ಯೋಗಗಳನ್ನು ಮಾಡದೆ ಇರುವ ಹೊತ್ತಿನಲ್ಲಿ, ರಾತ್ರಿಪಾಠಶಾಲೆಗಳಿಗೂ ಮೈಸೂರು ಬೆಂಗಳೂರುಗಳಲ್ಲಿರುವ ವಾಣಿಜ್ಯ ಪಾಠಶಾಲೆಗಳಿಗೂ ಮತ್ತು ಈಗ ಹೆಬ್ಬಾಳದ ಪರೀಕ್ಷಾಕ್ಷೇತ್ರದಲ್ಲಿ ಏರ್ಪಾಡಾಗಿರುವಂತೆ ಭೂವ್ಯವಸಾಯದ ರಸವಿದ್ಯೆಯನ್ನರಿತು ವ್ಯವಸಾಯದ ವಿಶೇಷ ವಿಷಯಗಳನ್ನು ಬೋಧಿಸುವ ಉಪನ್ಯಾಸಕರ ಬೋಧನೆಗಳಿಗೆ ಸೇರಿ ಹೆಚ್ಚಾದ ಸಂಗತಿಗಳನ್ನು ತಿಳಿದುಕೊಳ್ಳಬೇಕು. ಇದಕ್ಕೆ ಬಡವರಾದ ರೈತಾಬಿ ಹುಡುಗರಿಗೆ ಮಹಾಶಯರು ಅನೇಕವಿಧದಲ್ಲಿ ಸಹಾಯಮಾಡಬಹುದು.

ಶಾಸ್ತ್ರೀಯವಾದ ವಿಷಯಗಳನ್ನು ತಿಳಿಸಬೇಕೆಂಬ ಅಭಿಪ್ರಾಯದಿಂದಲೇ ಅನೇಕ ಪಂಡಿತರುಗಳನ್ನು ನೇಮಿಸಿರುತ್ತಾರೆ. ಮೇಲ್ಕಂಡಂಥ ವಿದ್ಯಾರ್ಥಿಗಳು ಈ ಪಂಡಿತರುಗಳ ಉಪದೇಶಗಳಿಗೆ ಗಮನ ಕೊಡುತ್ತ ಬಂದಲ್ಲಿ ಅತಿಶಯವಾದ ಜ್ಞಾನವನ್ನು ಹೊಂದಿ, ಪೂರ್ವಕ್ರಮಕ್ಕಿಂತಲೂ ಶ್ಲಾಘ್ಯವಾಗಿ ಭೂವ್ಯವಸಾಯಾದಿ ಕಸಬುಗಳನ್ನು ಮಾಡಬಹುದು. ಈ ರೀತಿಯಲ್ಲಿ ಹೆಚ್ಚಾಗಿ ವಿಚಾರಪರರಾಗುತ್ತ ಬಂದರೆ ಅನೇಕರು ಅಭಿವೃದ್ಧಿಸ್ಥಿತಿಗೆ ಬರಬಹುದು. ದೇಶವೂ ಉತ್ಕೃಷ್ಟಸ್ಥಿತಿಗೆ ಬರುತ್ತದೆ. ಬಡವರಾಗಿಯೂ, ಬುದ್ಧಿವಂತರಾಗಿಯೂ, ಚಟುವಟಿಕೆಯುಳ್ಳವರಾಗಿಯೂ ಇರುವ ಯುವಜನರಿಗೆ ಇತರರು ಸಹಾಯಮಾಡಿ ಅವರ ಅಭಿವೃದ್ಧಿಯು ತಮಗೂ ಸೇರಿದುದೆಂದು ಭಾವಿಸಬೇಕು. ಈ ಕ್ರಮದಲ್ಲಿ ವಿಶೇಷವಾಗಿ ತಿಳಿವಳಿಕೆಯನ್ನುಂಟುಮಾಡಿಕೊಳ್ಳುವುದಕ್ಕೆ ಪ್ರವರ್ತಿಸದೆಯೂ ಉದ್ಯೋಗೋಪನ್ಯಾಸಗಳಿಗೆ ಹೋಗದೆಯೂ ಇದ್ದರೆ ಕೆಲಸಗಾರರ ಸ್ವಂತ ಅಭಿವೃದ್ಧಿಗೇನೇ ಕುಂದಕವಾಗುವುದು. ದೇಶದ ಏಳಿಗೆಗೂ ಅವಕಾಶವಿಲ್ಲದೆ ಹೋಗಿ, ಸುಖಸಂಪತ್ತುಗಳೂ ಕಾಲಕ್ರಮೇಣ ಕಮ್ಮಿಯಾಗುತ್ತ ಬಂದು ದೇಶವು ಬಹಳ ಹೀನಸ್ಥಿತಿಗೆ ಬರುವುದಕ್ಕೆ ಕಾರಣವಾಗುತ್ತದೆ.

ಈ ರೀತಿಯಲ್ಲಿ ಮಾಡದೆ, ಸರ್ವರೂ ಐಕಮತ್ಯದಿಂದ ಶಾಸ್ತ್ರವಿಷಯಗಳನ್ನು ತಿಳಿಯಲು ಪ್ರವರ್ತಿಸಿ, ಅಭಿವೃದ್ಧಿಗೆ ಬರಬೇಕೆಂದು ಸಹಾಯಮಾಡುವವರ ಮನೋರಥಗಳು ಕೈಗೂಡುವಂತೆ ಯೋಚಿಸಿ ಪ್ರಯತ್ನಪಡಬೇಕು. ಇಂಗ್ಲೆಂಡ್ ದೇಶದಲ್ಲಿ ಅನೇಕ ಕಸಬುಗಾರರು ದಿವಸಕ್ಕೆ ಅರ್ಧಘಂಟೆ ಹೊತ್ತಾದರೂ ಉಪನ್ಯಾಸಗಳ ಮೂಲಕವಾಗಿ ವಿಶೇಷ ಅಂಶಗಳನ್ನು ತಿಳಿಯಿಸುವಂಥ ಸಂಘಗಳಿಗೆ ಹೋಗಿ ಹೊಸ ಹೊಸ ವಿಷಯಗಳನ್ನು ಗ್ರಹಿಸುತ್ತಾರೆ. ಅಮೆರಿಕಾ ಜರ್ಮನಿದೇಶದವರು 17 ವರ್ಷದವರೆಗೂ ಈ ವಿಧಗಳಲ್ಲಿ ವ್ಯಾಸಂಗಮಾಡುತ್ತಾರೆಂದು ತಿಳಿಯಬರುತ್ತದೆ. ಈ ರೀತಿಯಾಗಿ ಇಂಗ್ಲೆಂಡಿನಲ್ಲಿ ಕಸಬುದಾರರೂ ಕೂಡ ಪೂರ್ವಾಣಿ (ಕಂಟಿನಿಯೇಷನ್ ಸ್ಕೂಲ್ಸ್) ಶಾಲೆಗೆ ಹೋಗಿ ತಿಳಿದುಕೊಳ್ಳಬೇಕಾದ ವಿಚಾರಗಳನ್ನು ಪ್ರಯತ್ನಮಾಡಿ ತಿಳಿದುಕೊಂಡು ಅವರಲ್ಲಿ ಶೇಕಡಾ 25 ಜನರಂತೆ ವಿಶೇಷ ಬುದ್ಧಿವಂತರಾಗಿರುತ್ತಾರೆ. ಈ ಕಾರಣದಿಂದಲೇ ಆ ದೇಶಗಳು

ಎಲ್ಲಾ ವಿಧದಲ್ಲೂ ಉತ್ಕೃಷ್ಟವಾಗಿವೆ. 17 ವರ್ಷಗಳವರೆಗೂ ವ್ಯಾಸಂಗ ವನ್ನು ಮಾಡಬೇಕೆಂದು ಕೆಲವು ದೇಶದಲ್ಲಿ ವಿಧಿಸಿರುವುದಲ್ಲದೆ ವಿಶ್ವಕಲಾ ಶಾಲೆಗಳಲ್ಲಿಯೂ ಸಹ ಜನಸಾಮಾನ್ಯಕ್ಕೆ ಬೇಕಾದವಿಶೇಷ ಜ್ಞಾನವನ್ನುಂ ಟುಮಾಡುವದಕ್ಕೋಸ್ಕರ ಉಪನ್ಯಾಸಗಳನ್ನೂ ಪತ್ರಿಕೆಗಳನ್ನೂ ಪ್ರಕಟಿ ಸುತ್ತಾರೆ.

ಪ್ರೌಢವಿದ್ಯಾಶಾಲೆಗಳು ಸಹ ಯಂತ್ರ, ಶಿಲ್ಪ, ವಾಣಿಜ್ಯ, ಇವೇ ಮುಂತಾದ ಶಾಸ್ತ್ರಪಾಠಗಳಿಗೆ ಅವಕಾಶಕೊಡುವುದರಿಂದ ಜನಸಾಮಾನ್ಯಕ್ಕೆ ಪಾರಿಭಾಷಿಕ ಜ್ಞಾನಾಭಿವೃದ್ಧಿಪಡಿಸುವುದರಲ್ಲಿ ಎಲ್ಲರೂ ನಿರತರಾಗಿ ದ್ದಾರೆ. ಮ್ಯೂನಿಕ್‌ಪಟ್ಟಣದಲ್ಲಿ ವಿದ್ಯಾಭ್ಯಾಸದ ಇಲಾಖೆಗೆ ಅಧ್ಯಕ್ಷರಾದ, ಡಾಕ್ಟರ್. ಕರ್ಷ್ನಸ್ಟೀನರ್‌ರವರು, "ಪಾಠಶಾಲೆಗಳು ಮತ್ತು ಪ್ರಜೆಗಳು" ಎಂಬ ಘನತರವಾದ ಪುಸ್ತಕವನ್ನು ಬರೆದು ಅದರಲ್ಲಿ ಉದ್ಯೋಗ ಜ್ಞಾನಾ ಭಿವೃದ್ಧಿಯ ತತ್ವವನ್ನು ಸ್ಪಷ್ಟಪಡಿಸಿರುತ್ತಾರೆ.

ಬುದ್ಧಿಸಂಸ್ಕಾರಕ್ಕೆ ಮುಖ್ಯಕಾಲವಾದ, 13-16 ವರ್ಷ ವಯಸ್ಸಿನ ಬಾಲಕರಿಗೆ ನಮ್ಮ ದೇಶಭಾಷೆಯಾದ ಕನ್ನಡದಲ್ಲಿ ವಿಶೇಷವಾಗಿಯೂ, ಸಂಸ್ಕೃತದಲ್ಲಿ ತಕ್ಕಮಟ್ಟಿಗೂ, ಕಾವ್ಯಾಭ್ಯಾಸವನ್ನು ಮಾಡಿಸಬೇಕು. ಮತ್ತು ಗಣಿತಶಾಸ್ತ್ರಪರಿಚಯ ಚರಿತ್ರೆ ಭೂವಿವರಣೆ ಪಾಠಗಳ ತಿಳವಳಿಕೆ, ಇವುಗಳನ್ನುಂಟುಮಾಡುವುದಲ್ಲದೆ ಸಂಪದಭ್ಯುದಯ ಮಾರ್ಗವನ್ನೂ ಅನ್ಯ ದೇಶವೃತ್ತಾಂತವನ್ನೂ ತಿಳಿಯುವುದಕ್ಕೋಸ್ಕರ ತಕ್ಕಮಟ್ಟಿಗೆ ಇಂಗ್ಲಿಷ್ ಭಾಷೆಯನ್ನೂ ಕಲಿಸಬೇಕು. ಜೀವನೋಪಾಯಕ್ಕಾಗಿ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಇವುಗಳಲ್ಲಿ ಯಾವುದಾದರೂ ಒಂದನ್ನು ಅತ್ಯಾವಶ್ಯ ಕವಾಗಿ ಅಭ್ಯಾಸಮಾಡಿಸಲೇಬೇಕು.

ಅಲ್ಲದೆ ಜನಸಮುದಾಯವು ಮಾಡುವ ಕೆಲಸಗಳಲ್ಲಿ ಕುಶಲತೆ ಯನ್ನೂ ಸಾಮರ್ಥ್ಯವನ್ನೂಹೊಂದಲಿಕ್ಕೆ ಮಾರ್ಗಕೊಡುವ ಭೌತಿಕ ಶಾಸ್ತ್ರ ಪಾಠಗಳನ್ನು ದೇಶಭಾಷೆಯಲ್ಲಿಯೇ ಬೋಧಿಸಬೇಕು. ಮತ್ತು ಪ್ರಜಾಕ್ಷೇ ಮಚಿಂತನೆ, ಪರಸ್ಪರಸಹಾಯಬುದ್ಧಿ, ದೇಶಾಭಿಮಾನ, ಕರ್ತವ್ಯಾಕರ್ತವ್ಯ ಜ್ಞಾನ, ಇವೇ ಮೊದಲಾದ ಸುಗುಣಗಳು ತರುಣರಲ್ಲಿ ನೆಲೆಗೊಳ್ಳುವಂತೆ ಮಾಡುವುದಕ್ಕಾಗಿ ಪೋಷಕರು ವಿದ್ಯಾಶಾಲೆಗಳಲ್ಲಿ ನಡೆಸುವ ಪಾಠಪ್ರವಚನ

ಗಳಿಗೂ, ವಿದ್ಯಾರ್ಥಿಗಳು ದಿನವಹಿ ಮಾಡತಕ್ಕ ಕೆಲಸಗಳಿಗೂ ಅನುಕೂಲ ವಾದಷ್ಟು ಗಮನಕೊಡುತ್ತ, ಅವರಿಗೆ ಉತ್ತೇಜನವನ್ನುಂಟುಮಾಡಬೇಕು. ಪರಂಪರೆಯಾಗಿ ಬಂದಿರುವ ದೇಶೀಯ ಆಟಪಾಟಗಳಲ್ಲಿ ವಿಶೇಷ ಆಸಕ್ತಿ ಯನ್ನೂ ವ್ಯಾಯಾಮವಿನೋದವಿಶ್ರಾಂತಿಗಳನ್ನೂ ವೃದ್ಧಿಪಡಿಸುವುದಕ್ಕೋಸ್ಕರ ಅಲ್ಲಲ್ಲಿ ಚಿತ್ರಪುಸ್ತಕ ಭಂಡಾರಗಳನ್ನೂ, ಅನ್ಯೋನ್ಯ ಅಂಗಸಾಧನೆಯ ಸಂಘಗಳನ್ನೂ, ಸೌಹಾರ್ದವನ್ನುಂಟುಮಾಡುವ ಮಂಡಲಿಗಳನ್ನೂ (Social Clubs) ಸ್ಥಾಪಿಸಬೇಕು. ಸಾಧಾರಣವಾಗಿ ಮಕ್ಕಳು, ಇಂಥ ಸಾರ್ವಜನಿಕವಿದ್ಯಾಭ್ಯಾಸವನ್ನು ಮುಗಿಸಿದರೆ ಸಾಕಾಗಿರುತ್ತದೆ. ಇದಕ್ಕಾಗಿಯೇ ಅಧಿಕ ಪ್ರಜಾನುರಾಗವನ್ನೂ ಅತ್ಯಂತ ಔದಾರ್ಯವನ್ನೂ ಉಳ್ಳ ನಮ್ಮ ಶ್ರೀಮನ್ಮಹಾರಾಜರವರ ಸರಕಾರದವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ ಏರ್ಪಡಿಸಿರುವರಲ್ಲದೆ, ಸದ್ಯಕ್ಕೆ 7 ರಿಂದ 11 ವಯಸ್ಸಿನವರೆಗೆ ಡಿಸ್ಟ್ರಿಕ್ಟುಗಳ ಮುಖ್ಯಸ್ಥಳಗಳಲ್ಲಿಯೂ, ಕೆಲವು ತಾಲ್ಲೋಕು ಜಾಗಗಳಲ್ಲಿಯೂ, ಈ ವಿದ್ಯಾಭ್ಯಾಸವನ್ನು ನಿರ್ಬಂಧದಿಂದ ನಡೆಯಿಸಬೇಕೆಂದು ನಿಯಮಿಸಿರುತ್ತಾರೆ. ಇದು ಅತ್ಯಂತ ಪ್ರಯೋಜನಕಾರಿಯಾಗಿಯೂ ಬಹು ಶ್ಲಾಘ್ಯವಾಗಿಯೂ ದೇಶೋನ್ನತಿಗೆ ಮುಖ್ಯಕಾರಣಭೂತವಾಗಿಯೂ ಇರುತ್ತದೆ.

ಜನರಿಗೆಲ್ಲ ವಿದ್ಯಾಭ್ಯಾಸಮಾಡಿಸಬೇಕಾದುದು ಅತ್ಯಾವಶ್ಯಕವೆಂಬುದು ನಿರ್ಧರಿಸಿದಂತಾಯಿತು. ಆದರೆ ಜ್ಞಾನವು ಅನಂತವಾಗಿದೆ. ಜೀವಮಾನಕಾಲವು ಸ್ವಲ್ಪವಾಗಿದೆ. ಬುದ್ಧಿಶಕ್ತಿಯು ಎಲ್ಲರಿಗೂ ಒಂದೇವಿಧವಾಗಿರುವುದಿಲ್ಲ. ಸಾಮಾನ್ಯವಾಗಿ ಬುದ್ಧಿಯು ದುರ್ಬಲವಾಗಿರುತ್ತದೆ. ಇದನ್ನೆಲ್ಲ ಸರಿಪಡಿಸುವುದು ಹೇಗೆ ಎಂಬುದೇ ಮುಖ್ಯವಾದ ಚರ್ಚನೀಯಾಂಶವು. ಇದಕ್ಕೋಸ್ಕರ ಮೂರುವಿಧವಾದ ಪಾಠಶಾಲೆಗಳು ಏರ್ಪಡಾಗಿರುತ್ತವೆ.

ಎರಡನೆಯ ವರ್ಗದ ವಿದ್ಯಾರ್ಥಿಗಳ ಭಾಷಾಪರಿಚಯಾಭ್ಯಾಸ.

(251 ನೆಯ ಪುಟದ ಶೇಷ)

ಉ—ಕೃಷ್ಣ, ಆನೆ ಎಂದರೇನು ?

ಕೃಷ್ಣ—ಅದೊಂದು ಹೆಸರು.

ಉ—ಆನೆಯನ್ನು ನೋಡಿದ್ದೀಯಾ ?

ಕೃಷ್ಣ—ನೋಡಿದ್ದೇನೆ.

ಉ—ಹೇಗಿದೆಯೋ ?

ಕೃಷ್ಣ—ದೊಡ್ಡದಾಗಿದೆ; ಬಾಲ, ಸೊಂಡಲುಗಳಿವೆ; ನಾಲ್ಕು ಕಾಲುಗಳಿವೆ; ಅಗಲವಾಗಿ ಮೊರದಂತೆ ಎರಡು ಕಿವಿಗಳಿವೆ. ಸೊಂಡಲಿನಿಂದಲೆ ಹುಲ್ಲನ್ನು ತೆಕ್ಕೊಂಡು ಬಾಯಿಗೆ ಹಾಕಿಕೊಳ್ಳುತ್ತದೆ. ಅದು ಒಂದು ದೊಡ್ಡಮೃಗ.

ಉ—ಸರಿ, ಸರಿ. ಆನೆ ಎಂಬುದೊಂದು ಹೆಸರಲ್ಲವೇನೊ ?

ಕೃಷ್ಣ—ಆನೆ ಎಂಬ ಮಾತು ಹೆಸರು ಉಪಾಧ್ಯರೆ, ನೀವು ಕೇಳಿದ್ದು ಆನೆಯು ಹೇಗೆ ಇದೆ ಎಂದಲ್ಲವೆ?

ಉ—ನೀನು ಬುದ್ಧಿವಂತ, ನೋಡು. ಈ ಆನೆ ಎಂಬ ಮಾತು ಆನೆಯ ಹೆಸರು; ಆದ್ದರಿಂದ ಅದಕ್ಕೆ ನಾಮವಾಚಕ. ಆನೆ ಎಂಬ ಹೆಸರನ್ನು ಹೇಳಿದಾಗ ಆನೆಯು ಹೇಳಲ್ಪಡುತ್ತದೆ. ನೀನು ವರ್ಣಿಸಿದೆಯಲ್ಲಾ ಆ ದೊಡ್ಡ ಮೃಗವನ್ನು ತಿಳಿಸುವಮಾತು, ಆನೆ; ಆದ್ದರಿಂದ ಆ ಮಾತು ನಾಮವಾಚಕ. ಆನೆಯು ವಸ್ತುವು, ಅದನ್ನು ತಿಳಿಸುವ ಮಾತು ನಾಮವಾಚಕ. ತಿಳಿಯಿತೇನೊ ?

ನಾವು ಮಾತನಾಡುವಾಗ ಒಂದು ಹೆಸರನ್ನು ಹೇಳಿ ಮಾತನ್ನು ನಿಲ್ಲಿಸಿದರೆ ಕೇಳಿದವರಿಗೆ ಏನು ತಿಳಿಯುದಂತಾಗುವುದು ? ನಿಮ್ಮನ್ನು ಕುರಿತು ಕುರಿ ಎಂದು ಒಂದು ಮಾತನ್ನು ಹೇಳಿ ನಾನು ಸುಮ್ಮನಾದರೆ, ನೀವು ಏನುಮಾಡುತ್ತೀರಿ? ನೀವು

ನನ್ನನ್ನು ಕುರಿತು ಕುರಿ ಏನು ? ಉಪಾಧ್ಯಾಯರೇ, ಸತ್ತಿತೋ, ಓಡಿತೋ, ಹುಲ್ಲು ತಿಂದಿತೋ, ಎಂದು ಒಡನೇ ಕೇಳುತ್ತೀರಿ. ಇಂಥ ಮಾತುಗಳನ್ನು ಹೇಳದಿದ್ದರೆ ನಾನು ಏನು ಹೇಳಬೇಕೆಂದಿದ್ದೆನೋ ಅದು ನಿಮಗೆ ಗೊತ್ತಾಗುವದೊ ? ಇಲ್ಲ. ಆದ್ದರಿಂದ ನಾಮವಾಚಕಗಳಿಗಿಂತ ಇಂಥ ಮಾತುಗಳು ಮಾತಿನಲ್ಲಿ ಬಹಳ ಮುಖ್ಯವಾದುವೆಂದು ಹೇಳಿದೆನು. ಆ ಮಾತುಗಳು ನಾನು ಏನುಮಾಡುತ್ತೇನೆ, ನೀನು ಏನು ಮಾಡುತ್ತೀಯೆ ? ಅವನು ಏನುಮಾಡುತ್ತಾನೆ, ಅವಂಗೆ ಏನಾಯಿತು ? ಇವೇ ಮೊದಲಾದ ವ್ಯಾಪಾರಗಳನ್ನು ತಿಳಿಸುತ್ತವೆ. ಹೇಗೆಂದರೆ :—

ನಾನು ಓದುತ್ತೇನೆ, ಹುಡುಗರು ಹಾಡುತ್ತಾರೆ. ಕತ್ತೆ ಅರಚುತ್ತದೆ, ನೀನು ಬರೆಯುತ್ತೀಯೆ, ಇಲಿಗಳು ಓಡುತ್ತವೆ; ಭಿಕ್ಷುಕನು ಅನ್ನವನ್ನು ಬೇಡಿದನು. ಹಸು ಹುಲ್ಲನ್ನು ತಿನ್ನುತ್ತದೆ. ಇತ್ಯಾದಿ—

೧೦ನೆಯ ಅಭ್ಯಾಸ.

ಕೆಳಗೆ ಗೆರೆಯೆಳೆದಿರುವಕಡೆಗಳಲ್ಲಿ ಆಯಾ ಪ್ರಾಣಿಗಳು ಏನುಮಾಡುವುವೋ ಅವನ್ನು ತಿಳಿಸುವ ಒಂದೊಂದುಮಾತುಗಳನ್ನು ಸೇರಿಸಿ ಬರೆಯಿರಿ.—

ಮಾದರಿಗಾಗಿ—ರಾಮನು—, ನಾಯಿ—, ಕತ್ತೆ—

ಉತ್ತರ—ರಾಮನು ನಡೆಯುತ್ತಾನೆ, ನಾಯಿ ಬಗಳುತ್ತದೆ. ಕತ್ತೆ ಊರು ಳಾಡುತ್ತದೆ.

ಗಾಳಿ—, ಬೆಂಕಿ—, ಗೋವಿಂದನು—, ಅಮ್ಮನು—, ಬಾತುಗಳು—, ಉಪಾಧ್ಯಾಯನು—, ಎಮ್ಮೆಗಳು—, ತಂದೆಯು—, ಸೂರ್ಯನು—, ಹುಡುಗರು—,

೧೧ನೆಯ ಅಭ್ಯಾಸ.

ಉಪಾಧ್ಯಾಯರುಗಳು ಪಾಠಪುಸ್ತಕಗಳಿಂದ ನಾಮವಾಚಕಗಳನ್ನು ಆರಿಸಿ, ಅವುಗಳಿಗೆ ಮೇಲಿನರೀತಿಯಲ್ಲಿ ವ್ಯಾಪಾರವನ್ನು ತಿಳಿಸುವ ಮಾತಗಳನ್ನು ಸೇರಿಸುವಂತೆ ಮಾಡಿಸಬೇಕು.

೧೪ ನೆಯ ಅಭ್ಯಾಸ.

ಈ ಕೆಳಗೆ ಗೆರೆಹಾಕಿರುವ ಕಡೆಗಳಲ್ಲಿ ಮಾತುಗಳನ್ನು ಸೇರಿಸಿ ಏನಾದರೂ ಅಭಿಪ್ರಾಯವನ್ನು ತಿಳಿಸುವಂತೆ ಮಾಡಿ.—

(1) ನಮ್ಮ ಚಿಕ್ಕಪ್ಪನು ನನಗೆ ಒಂದು ——— ಬಹುಮಾನವಾಗಿ ———,

(2) ಆ ನಾಯಿಯು ಗಟ್ಟಿಯಾಗಿ ———,

(3) ——— ——— ಅರಚುತ್ತಿತ್ತು, ಅದನ್ನು ಹುಡುಗರು ———ಳಿಂದ ಹೊಡೆದು ——— ———.

(4) ——— ——— ಸೌದೆಯನ್ನು ——— ಯಿಂದ ಸೀಳುವುದರಿಂದ ——— ——— ——— ಮೊಂಡಾಯಿತು.

(5) ——— ಚೆನ್ನಾಗಿ ಓದಿದರೆ, ನೀನು ———

[ಷರಾ—ಉಪಾಧ್ಯಾಯರುಗಳು ಪಾಠ ಪುಸ್ತಕಗಳಿಂದ ವಾಕ್ಯಗಳನ್ನು ಆರಿಸಿಕೊಂಡು, ಈರೀತಿಯಲ್ಲಿ ಆ ವಾಕ್ಯಗಳಲ್ಲಿ ನಾಮವಾಚಕ ಕ್ರಿಯಾಪದಗಳನ್ನು ವಿದ್ಯಾರ್ಥಿಗಳು ಸೇರಿಸುವಂತೆ ಮಾಡಬೇಕು.]

ಹೀಗೆ ಮನುಷ್ಯ, ಮೃಗ, ಪಕ್ಷಿ, ಮುಂತಾದುವುಗಳ ಹೆಸರುಗಳನ್ನು ಹೇಳುವ ಮಾತುಗಳಿಗೆ ನಾಮವಾಚಕವೆಂದು ಕರೆದೆವಷ್ಟೆ. ಹಾಗೆಯೇ ಮನುಷ್ಯ, ಮೃಗ, ಪಕ್ಷಿ ಮುಂತಾದುವು ಮಾಡುವ ಕೆಲಸಗಳನ್ನು ತಿಳಿಸುವ ಮಾತುಗಳಿಗೆ ಕ್ರಿಯಾಪದವೆಂದು ಹೆಸರು. ಕ್ರಿಯೆ ಎಂದರೆ ಕೆಲಸ, ಅದನ್ನು ತಿಳಿಸುವ ಪದ ಎಂದರೆ ಮಾತು. ನಾವು ಮಾತನಾಡುವಾಗ ಅವುಗಳ ವಿಷಯವಾಗಿ ಏನೇನು ಹೇಳಬೇಕೆಂದಿದ್ದೇವೆಯೋ ಅವುಗಳನ್ನು ತಿಳಿಸುವ ಮಾತುಗಳೂಕೂಡ ಕ್ರಿಯಾಪದಗಳೆನ್ನಿಸಿಕೊಳ್ಳುತ್ತವೆ. ಹಿಂದೆ ೧೦, ೧೨ ನೆಯ ಅಭ್ಯಾಸಗಳಲ್ಲಿ ಸೇರಿಸಿದ ಪದಗಳೆಲ್ಲವೂ ಕ್ರಿಯಾಪದಗಳೆಂದು ತಿಳಿಯಿರಿ.

೧೫ ನೆಯ ಅಭ್ಯಾಸ.

ನಿಮ್ಮ ಎರಡನೆಯ ಪಾಠಪುಸ್ತಕದಲ್ಲಿ 8 ನೆಯ ಪಾಠದಲ್ಲಿರುವ ನಾಮವಾಚಕಗಳನ್ನೂ ಕ್ರಿಯಾಪದಗಳನ್ನೂ ಕಂಡುಹಿಡಿಯಿರಿ. (ಸಶೇಷ.)

ಪರಸ್ಪರಸಹಾಯದಿಂದ ವ್ಯಸಸಾಯ ಕ್ರಮಗಳು ಉಂಟಾಗಿರುವ ವಿಶೇಷ ಬದಲಾವಣೆಗಳು.

ವ್ಯವಸಾಯ ಸಂಘಗಳು ಮೊದಲು ಜರ್ಮನಿಯಲ್ಲಿ 1860 ರಲ್ಲಿ ಸ್ಥಾಪಿಸಲ್ಪಟ್ಟವು. ಇಂತಹ ಸಂಘಗಳ ಬೆಳೆವಣಿಗೆಯು ಈಗಲೂ ಎಲ್ಲಾ ದೇಶಗಳಲ್ಲಿಯೂ ನಡೆಯುತ್ತಲೇ ಇದೆ. ಆದುದರಿಂದ ವ್ಯವಸಾಯಕ್ಕೆ ಇವುಗಳಿಂದ ತುಂಬಾ ಪ್ರಯೋಜನ ವುಂಟೆಂಬುದು ಸ್ಪಷ್ಟವಾಗುವುದು. 18 ನೆಯ ಶತಮಾನದಲ್ಲಿ ಕೈಗಾರಿಕೆಯ ಬದಲಾವಣೆಗಳು ನಡೆದುವು 19 ನೆಯ ಶತಮಾನವು ವ್ಯವಸಾಯದ ಬದಲಾವಣೆಗಳನ್ನು ತಂದಿರುತ್ತದೆ. ಇಂಥಾ ಬದಲಾವಣೆಗಳಿಂದ ವ್ಯವಸಾಯಕ್ರಮಗಳು ಕೈಗಾರಿಕೆಯ ಕ್ರಮಗಳನ್ನು ಅನುಸರಿಸಿವೆ. ಈ ಬದಲಾವಣೆಗೆ ಕಾರಣಭೂತವಾದದ್ದು ಪರಸ್ಪರಸಹಾಯವೇ ! ಈ ವಿಷಯಗಳನ್ನು ಮೂರು ಬಾಬುಗಳನ್ನಾಗಿ ತೆಗೆದುಕೊಂಡು ಚರ್ಚಿಸಿ ವಿವರಿಸುವೆವು.

(1) ಭೂಮಿಯನ್ನು ಹದಗೊಳಿಸುವುದು.

(2) ಬೆಳೆಗೆ ಬೇರೆ ರೂಪವನ್ನು ಕೊಡುವುದು.

(3) ರೈತನಿಗೂ, ಫಸಲನ್ನು ಮಾಡುವ ತನ್ನ ಗಿರಾಕಿಗಳಿಗೂ ಇರುವ ಪರಸ್ಪರ ಸಂಬಂಧಗಳು.

ಪೂರ್ವದ ಅರ್ಥಶಾಸ್ತ್ರಜ್ಞರು ವ್ಯವಸಾಯವು ಉತ್ಪತ್ತಿಯು ಕ್ರಮೇಣ ಕಮ್ಮಿಯಾಗುವ ವಿಧಿಯನ್ನು ಅನುಸರಿಸಿರುತ್ತದೆಂದೂ, ಕೈಗಾರಿಕೆಯು ಕ್ರಮೇಣ ಹೆಚ್ಚು ಲಾಭವನ್ನು ಕೊಡುತ್ತದೆಂದೂ, ವ್ಯವಸಾಯವು ಕೂಲಿಕಾರರಿಂದಲೂ, ಕೈಗಾರಿಕೆಯು ಯಂತ್ರಗಳಿಂದಲೂ ವೃದ್ಧಿಗೆ ಬರತಕ್ಕದೆಂದೂ, ವ್ಯವಸಾಯಕ್ಕೆ ಶಾಸ್ತ್ರಜ್ಞಾನ ಬೇಕಿಲ್ಲವೆಂದೂ, ಕೈಗಾರಿಕೆ ಕಸಬುದಾರರು ಬೇಕೆಂದೂ ಹೇಳುತ್ತಿದ್ದರು. ಆದರೆ ಇವುಗಳೆಲ್ಲವೂ ಈಗ ವ್ಯತ್ಯಾಸವಾಗಿರುವುದು.

ಭೂಮಿಯಲ್ಲಿ ಸ್ವಭಾವಸಿದ್ಧವಾಗಿ ಯತ್ಕಿಂಚಿತು (ಫಲವತ್ತು) ಹುಲಸಿರುತ್ತದೆ. ಅದನ್ನು ಬಹುದೂರ ವೃದ್ಧಿಪಡಿಸುವುದು ಅಸಾಧ್ಯ. ಆದುದರಿಂದ ಈ ಹುಲಸು

(ಫಲವತ್ತು) ಮುಗಿದಹಾಗೆಲ್ಲಾ ಮನುಷ್ಯನ ಪ್ರಯತ್ನವು ವಿಶೇಷ ಕಾರ್ಯಕಾರಿಯಾ ಗುವುದಿಲ್ಲವೆಂದು ತಿಳಿದಿದ್ದರು. ಈಚೆಗೆ ರಸಾಯನ ಶಾಸ್ತ್ರಜ್ಞರು ಮಣ್ಣನ್ನೂ, ಧಾನ್ಯಗಳನ್ನೂ, ಗೊಬ್ಬರಗಳನ್ನೂ ಶೋಧಿಸಿ ಅವುಗಳ ರಚನೆಯನ್ನು ಅಂದರೆ ಯಾವಯಾವ ಧಾತು (ವಸ್ತು) ಗಳಿವೆಯೆಂಬುವುದನ್ನು ಗೊತ್ತುಮಾಡಿರುವರು.

ಈ ಶೋಧನೆಯಿಂದ ಮಣ್ಣಿನಲ್ಲಿರುವ ಸಾರವನ್ನು ಹೆಚ್ಚಿಸುವುದಕ್ಕೆ ಬೇಕಾದ ಕಾರಣಗಳನ್ನು ಒದಗಿಸಿಕೊಡುವುದು ಸುಲಭ ಸಾಧ್ಯವಾಗಿರುವುದು. ಆದುದರಿಂದ ಜಮೀನಿನ ಸಾರವು ತಗ್ಗಿಹೋಗುವುದೆಂಬ ಶಂಕೆಯಿಂದ ಫಸಲುಮಾಡದೆ ಬಿಡುವುದಕ್ಕೆ ಬದಲು ವರ್ಷವರ್ಷವೂ ಪೈರುಹಾಕಿ ಹೆಚ್ಚು ಫಸಲನ್ನು ತೆಗೆದುಕೊಂಡು ಜಮೀನಿನ ಸ್ವಾರಸ್ಯ ಕಮ್ಮಿಯಾಗದಂತೆ ಇಟ್ಟುಕೊಂಡಿರುವುದು, ಈಗ ಸಾಧ್ಯವಾಗಿರುತ್ತದೆ ಜಮೀನು ನಿಸ್ಸಾರವಾಗಿದ್ದರೂ ಅದರಲ್ಲಿ ಸಸ್ಯಾಹಾರವನ್ನು ತುಂಬಿ ಪೈರಿಗೆ ಅನುಕೂಲಮಾಡಿ ಒಳ್ಳೆ ಬೆಳೆಯನ್ನು ತೆಗೆಯಬಹುದು. ಆದುದರಿಂದ ರೈತನು ಜಮೀನಿನ ವ್ಯವಸಾಯಕ್ಕೋಸ್ಕರ ವೆಚ್ಚಮಾಡಿದಹಾಗೆಲ್ಲಾ ಅವನ ಆದಾಯವು ಹೆಚ್ಚುತ್ತದೆ. ಪೂರ್ವದಲ್ಲಿ ರೈತರು ದೇವರಮೇಲೆ ಭಾರಹಾಕಿ ಮನುಷ್ಯ ಪ್ರಯತ್ನದಲ್ಲಿ ಏನು ಇದೆ, ದೇವರು ಕಣ್ಣುಬಿಟ್ಟು ನೋಡಿದರುಂಟು ಇಲ್ಲದಿದ್ದರೆ ನಮ್ಮ ಪ್ರಯತ್ನವು ನಿರರ್ಥಕವಾದುದೆಂದು ಹೇಳಿಕೊಳ್ಳುತ್ತಿದ್ದರು. ಈಗ ಇಂತಿಂಥ ಗೊಬ್ಬರಗಳನ್ನು ಇಷ್ಟಿಷ್ಟೇ ಹಾಕಬೇಕು. ಈ ರೀತಿಯಲ್ಲಿಯೇ ವ್ಯವಸಾಯಮಾಡಬೇಕು. ಹೀಗೆಮಾಡಿದರೆ ಪೈರು ಇಷ್ಟೇ ಬೆಳೆಯುವುದೆಂದು ನಿಷ್ಕರ್ಷೆಯಾಗಿ ಹೇಳಬಹುದು ಒಂದು ಅಡಿ ಆಳ ಮಣ್ಣನ್ನು ತಿರುವಿಹಾಕುವುದಕ್ಕೆ ಬದಲಾಗಿ 5 ಅಡಿಗಳವರೆಗೂ ಅವಶ್ಯಕ ಬಿದ್ದಹಾಗೆ ತಿರುವಿಹಾಕಿ ಇಂಥಾ ಕಾಯಿಮಣ್ಣನ್ನು ರಸಾಯನಶಾಸ್ತ್ರದ ಸಹಾಯದಿಂದ ಉಪಯೋಗವಾದ ಅಂದರೆ ಸಸಿಗಳ ಆಹಾರವು ತುಂಬಿರುವ ಸಾರವತ್ತಾದ (ಯೋಗ್ಯವಾದ) ಮಣ್ಣನ್ನಾಗಿ ಬದಲಾಯಿಸಬಹುದು. (ಲೋಕದಲ್ಲಿ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳು ತಮ್ಮ ಆತ್ಮ ಸಂರಕ್ಷಣೆಗೆ ತಕ್ಕಂತೆ ಬದಲಾವಣೆಯನ್ನು ಪಡೆಯುತ್ತವೆ. ಅಂದರೆ ಸ್ವಲ್ಪ .ಮಳೆ ಬೀಳತಕ್ಕ ಟ್ರಾನ್ಸ್‌ವಾಲ್ ಮುಂತಾದ ಪ್ರಾಂತ್ಯಗಳಲ್ಲಿ ವರ್ಷಕ್ಕೆ ನಾಲ್ಕೇ

೮ಂಗುಲ ಮಳೆ ಬಿದ್ದಾಗ್ಯೂ ಮೇಲುಗಡೆಯ ಮಣ್ಣನ್ನು ಕೆದರುತ್ತಿರುವುದರಿಂದಲೇ ಭೂಮಿಯ ತೇವವನ್ನು ಕಾಪಾಡಿಕೊಂಡು ಅನೇಕವರ್ಷಗಳು ಮಳೆ ಇಲ್ಲದಿದ್ದರೂ ಉತ್ತಮವಾದ ಬೆಳೆಯನ್ನು ಬೆಳೆಯುತ್ತಲಿದ್ದಾರೆ.)

ಪೂರ್ವಕಾಲದಲ್ಲಿ ರೈತರು ತಮ್ಮಲ್ಲಿರುವ ಗೊಬ್ಬರವನ್ನು ನೋಡಿಕೊಂಡು ಅದಕ್ಕೆ ತಕ್ಕಷ್ಟು ಜಮೀನನ್ನು ವ್ಯವಸಾಯಕ್ಕೆ ಉಪಯೋಗಿಸುತ್ತಲಿದ್ದರು ಜಮೀನಿನಿಂದ ತೆಗೆಯಲ್ಪಡುವ ಧಾತುಗಳು ದನಗಳ ಗೊಬ್ಬರದ ಮೂಲಕವಾಗಿ ಮತ್ತೆ ಭೂಮಿಗೆ ಸೇರಿಸಲ್ಪಡುತ್ತಿದ್ದವು. ಈಚೆಗೆ ರಸಾಯನಶಾಸ್ತ್ರಜ್ಞರು $2\frac{1}{2}$ ಎಕರೆ ಜಮೀನಿನಲ್ಲಿ ಪೈರು ಬೆಳೆದರೆ 20-30 ರಾಸುಗಳನ್ನು ಇಟ್ಟು ಅದರಿಂದಾದ ಗೊಬ್ಬರವನ್ನು ಹಾಕಿದಹೊರತು ಭೂಮಿಯು ಮತ್ತೆ ವ್ಯವಸಾಯಕ್ಕೆ ಯೋಗ್ಯವಾಗುವಿಲ್ಲವೆಂದು ಗೊತ್ತುಮಾಡಿರುತ್ತಾರೆ. ದ್ವಿದಳಧಾನ್ಯಗಳಿಂದ ಭೂಮಿಯಲ್ಲಿ ರಕ್ತಕ್ಕೆ ಸಾರಜನಕವು ವಿಶೇಷವಾಗಿ ಉಪಯೋಗಿಸಲ್ಪಡುವುದು. ಹೀಗೆ ಉಪಯೋಗಿಸಿದ ಸಾರಜನಕವನ್ನೂ ಚಿಲಿ ದೇಶದಲ್ಲಿ ಹೆಚ್ಚಾಗಿ ದೊರೆಯುವ ಕಡ್ಡುಪ್ಪನ್ನೂ ಉಪಯೋಗಿಸುವದರಿಂದ ಜಮೀನು ಪುನಃ ವ್ಯವಸಾಯಕ್ಕೆ ಯೋಗ್ಯವಾಗುವುದು. ಬರೇ ಕಡ್ಡುಪ್ಪನ್ನೇ ಉಪಯೋಗಿಸುವುದರಿಂದ ಸಾರಜನಕವು ಹೆಚ್ಚಾಗಿ ರಂಜಕವು ಕಮ್ಮಿಯಾಗಿ ಪೈರುವಾಗುವುದಕ್ಕೆ ಹೆಚ್ಚು ಕಾಲ ಬೇಕಾಗುತ್ತಿತ್ತು. ಚಿಲಿ ದೇಶದ ಕಡ್ಡುಪ್ಪನ್ನೂ, ಮೂಳೆಯ ಪುಡಿಯನ್ನೂ ತಕ್ಕಂತೆ ಬೆರೆಸಿ ಉಪಯೋಗಿಸಿದಲ್ಲಿ ಈ ನ್ಯೂನತೆಯು ತಿದ್ದುಪಾಟಾಗುವುದು.

ಈ ವಿಷಯಗಳನ್ನು ಪರ್ಯಾಲೋಚಿಸಿದರೆ ವ್ಯವಸಾಯಕ್ಕೂ ಕೈಗಾರಿಕೆಗೂ ಇರುವ ಸಂಬಂಧವು ಸ್ಪಷ್ಟವಾಗುವುದು. ಪೂರ್ವದಲ್ಲಿ ರೈತರು ಜಮೀನನ್ನು ಹಾಳು ಬಿಡುವುದರಿಂದ ಪೈರು ಹಾಕುವುದಕ್ಕೆ ಅನುಕೂಲವಾಗುವಂತೆ ಮಾಡುತ್ತಿದ್ದರು. ಈಗ ಜಮೀನಿಗೆ ಬೇಕಾದ ಧಾತುಗಳನ್ನು ಗೊಬ್ಬರದಮೂಲಕವಾಗಿ ಸೇರಿಸುವುದರಿಂದಲೂ, ಪೈರನ್ನು ಬದಲಾಯಿಸುವುದರಿಂದಲೂ ಯಾವಾಗಲೂ ಬೆಳೆ ಮಾಡುತ್ತಿರಬಹುದು.

ಮಸಾಲೆಸೊಪ್ಪು, ಅವರೆ, ತೊಗರಿ, ಮುಂತಾದ ಜಾತಿಗೆ ಸೇರಿದ ಗಿಡಗಳು ಭೂಮಿಯಲ್ಲಿ ಸಾರಜನಕವನ್ನು ಹೆಚ್ಚಿಸುವುದರಿಂದ ಭೂಮಿಯನ್ನು ಬೀಳುಬಿಡುವುದಕ್ಕೆ ಬದಲಾಗಿ ಈ ಪೈರುಗಳನ್ನು ಬೆಳೆಯಬಹುದು. ಆದ್ದರಿಂದ ಭೂಮಿಯನ್ನು ಶೋಧಿಸಿ ಅದರಲ್ಲಿರುವ ಧಾತುಗಳನ್ನು ಗೊತ್ತುಮಾಡಿಕೊಳ್ಳುವುದರಿಂದ ಭೂಮಿಯು ರೈತನಿಗೆ ಅಡಿಯಾಳಾಗಿರುವುದು. ಈಚೀಚಿಗೆ ವ್ಯವಸಾಯಕ್ಕೆ ಸಂಬಂಧಪಟ್ಟ ಯಂತ್ರಗಳು ಮೂರು ವಿಧವಾದ ಬದಲಾವಣೆಗಳನ್ನುಂಟುಮಾಡಿರುತ್ತವೆ.

(1) ಹಳೇಯಂತ್ರಗಳು ಹೋಗಿ ಮರದ ನೇಗಲಿಗೆ ಬದಲಾಗಿ ಕಬ್ಬಿಣದ ನೇಗಿಲು ವಿದ್ಯುಚ್ಛಕ್ತಿಯ ಸಹಾಯದಿಂದಲೂ, ನೀರಿನ ಆವಿಯ ಸಹಾಯದಿಂದಲೂ ನಡೆಸಲ್ಪಡುತ್ತವೆ.

(2) ಕೈಕೆಲಸಕ್ಕೆ ಬದಲಾಗಿ ಯಂತ್ರಗಳು ಉಪಯೋಗದಲ್ಲಿವೆ. ಉದಾ. ಗೊಬ್ಬರವನ್ನು ಚಲ್ಲುವ ಯಂತ್ರ, ಬಿತ್ತುವಯಂತ್ರ, ಕಂತೆ ಕಟ್ಟುವಯಂತ್ರ, ಕುಯ್ಯುವ ಯಂತ್ರ ಇವುಗಳು ಬಹಳ ಜಾಗ್ರತೆಯಾಗಿಯೂ ಸಮರ್ಪಕವಾಗಿಯೂ ಕೆಲಸಮಾಡುತ್ತವೆ. ಯಂತ್ರಗಳು ವಿಸ್ತಾರವಾದ ಜಮೀನುಳ್ಳ ರೈತರುಗಳಿಂದ ಉಪಯೋಗಿಸಲ್ಪಡುತ್ತವೆ. ವ್ಯವಸಾಯಕ್ರಮಕ್ಕೂ, ಕೈಗಾರಿಕೆಯ ಕ್ರಮಕ್ಕೂ ಒಂದು ಮುಖ್ಯ ವ್ಯತ್ಯಾಸ ಉಂಟು. (ಎ) ರೈತನು ಯಂತ್ರಗಳನ್ನು ವರ್ಷಕಾಲವೆಲ್ಲಾ ಉಪಯೋಗಿಸಲು ಸಾಧ್ಯವಿಲ್ಲ.

(3) ಜಮೀನಿರುವ ಸ್ಥಳಕ್ಕೆ ಯಂತ್ರವನ್ನು ತೆಗೆದುಕೊಂಡು ಹೋಗಬೇಕು. ಈ ಕಾರಣಗಳಿಂದ ರೈತನಿಗೆ ಯಂತ್ರದ ಉಪಯೋಗವು ಸ್ವಲ್ಪ ಕಷ್ಟವೇಸರಿ. ಆದರೆ ಗೊಬ್ಬರವನ್ನು ಬೆರಸುವ ಯಂತ್ರವು, ಪೈರನ್ನು ರೇಖೆಮಾಡುವ ಯಂತ್ರವು ಪೈರಿರುವ ಸ್ಥಳಕ್ಕೆ ಹೋಗಬೇಕಾದ ಅವಶ್ಯಕವಿಲ್ಲ. ಇವುಗಳನ್ನು ಯಾವಾಗಲೂ ಉಪಯೋಗಿಸಬಹುದು. ಮತ್ತು ಬಾಡಿಗೆಗೆ ಕೊಡಬಹುದು. ಈ ಯಂತ್ರಗಳಿಗೆ ಹೆಚ್ಚು ಕೆಲಸವೂ ದೊರಕುವುದು. (ಸಾಮಾನುಸಾಗಿಸುವ ಖರ್ಚು, ನೀರಿನಮೇಲೆ 1000 ಮೈಲಿಗೂ, ರೈಲ್‌ಮೇಲೆ 100 ಮೈಲಿಗೂ, ನೆಲದ ಮೇಲೆ 10 ಮೈಲಿಗಳೂ ಒಂದೇ ಸಮನಾಗಿರುವುದು.)

ರೈತರು ಪೂರ್ವದಲ್ಲಿ ಜಮೀನಿನ ಕೆಲಸವಿಲ್ಲದೆ ಇದ್ದಾಗ ಬೇರೆಬೇರೆ ಕೆಲಸಗಳನ್ನು ಮಾಡುತ್ತಿದ್ದರು. ಇತರರೂ ಕೂಡ ಈ ರೈತರಜತೆಯಲ್ಲಿ ಸೇರಿಕೊಂಡು ಕೆಲಸಮಾಡುತ್ತಿದ್ದರು. ಈಗ ದೊಡ್ಡ ಕಾರ್ಖಾನೆಗಳು ಸ್ಥಾಪಿತವಾಗಿ ಕೂಲಿಕಾರರಿಗೆ ಒಂದೊಂದು ಕೆಲಸಮಾಡಲು ಒಂದೊಂದು ಬಗೆ ಚಮತ್ಕಾರಬೇಕಾಗಿರುವುದರಿಂದಲೂ, ದೊಡ್ಡದೊಡ್ಡ ಪಟ್ಟಣಗಳಲ್ಲಿಯೇ ಕೂಲಿಕಾರರು ವಾಸಮಾಡುವುದರಿಂದಲೂ ಇವರಿಂದ ರೈತರಿಗೆ ಏನೂ ಸಹಾಯವಾಗಲಾರದು. ರೈತರು ಕೂಲೀ ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಯಂತ್ರಗಳು ವ್ಯವಸಾಯದಲ್ಲಿ ವಿಶೇಷ ಉಪಯೋಗಕ್ಕೆ ಬಂದಹಾಗೆಲ್ಲಾ ರೈತರಿಗೆ ವಿರಾಮವು ಹೆಚ್ಚಾಗಿ ಸಿಕ್ಕುವುದು. ಇಂಥಾ ವಿರಾಮಕಾಲದಲ್ಲಿ ಏನಾದರೂ ಒಂದು ಜೀವನೋಪಾಯವನ್ನು ಹುಡುಕಿಕೊಳ್ಳುವುದು ರೈತರಿಗೆ ಅತ್ಯಾವಶ್ಯಕವಾದುದು. ಆದುದರಿಂದ ಸ್ವಿಡ್ಜರ್‌ಲೆಂಡಿನಲ್ಲಿ ಗಡಿಯಾರ ತಯಾರಿಸುವುದನ್ನೂ, ಬವೇರಿಯಾದಲ್ಲಿ ಆಟದ ಸಾಮಾನು ತಯಾರಿಸುವುದನ್ನೂ, ರೈತರು ಕಲಿತಿರುವರು. ಈಚೆಗೆ ವಿದ್ಯುಚ್ಛಕ್ತಿಯ ಬಲದಿಂದ ಅನೇಕ ಯಂತ್ರಗಳನ್ನು ನಡೆಸಬಹುದಾಗಿರುವುದರಿಂದ ಕೆಲವುವಿಧವಾದ ಕಾರ್ಖಾನೆಗಳನ್ನು ಗ್ರಾಮಾಂತರಗಳಲ್ಲಿ (ನದಿಯ ನೀರು ಸಿಕ್ಕುವಕಡೆ) ಸ್ಥಾಪಿಸಿರುವರು. ಹೀಗೆ ಮಾಡುವುದರಿಂದ ಕಾರ್ಖಾನೆಯಲ್ಲಿ ಕೆಲಸಮಾಡುವ ಕೂಲಿಯವರು ವಿರಾಮಕಾಲಗಳಲ್ಲಿ ಸ್ವಲ್ಪಸ್ವಲ್ಪ ಜಮೀನುಗಳನ್ನೂ ವ್ಯವಸಾಯಮಾಡಲಾರಂಭಿಸಿರುತ್ತಾರೆ. ಈಚೆಗೆ ಆರಂಬಗಾರರೂ ಒಂದೊಂದುವಿಧವಾದ ವ್ಯವಸಾಯದಲ್ಲಿಯೇ ಹೆಚ್ಚಾದ ಪರಿಶ್ರಮವನ್ನು ಪಡೆದಿರುತ್ತಾರೆ.

ಪೂರ್ವದಲ್ಲಿ ಆರಂಬಗಾರನು ಪ್ರತಿಯೊಂದು ವಸ್ತುವನ್ನೂ ತನ್ನ ಸ್ವಂತ ಉಪಯೋಗಕ್ಕೆ ಬೆಳೆಯುತ್ತಿದ್ದನು. ಈಗಲಾದರೋ ಜಮೀನಿರುವ ಪ್ರದೇಶ–ಹವ–ಧಾರಣೆವಾಸಿ ಇವುಗಳನ್ನು ನೋಡಿಕೊಂಡು ಯಾವುದೋ ಕೆಲವು ಪದಾರ್ಥಗಳನ್ನು ಮಾತ್ರ ಬೆಳೆಯುವನು.

ಉದಾ:—ಇಂಗ್ಲೆಂಡ್–ಡೆನ್ಮಾರ್ಕ್ ದೇಶಗಳಲ್ಲಿ ಧಾನ್ಯದ ಬೆಳೆಯನ್ನು ಕಡಿಮೆಮಾಡಿ ದನಕರುಗಳನ್ನು ವೃದ್ಧಿಪಡಿಸುತ್ತಿರುವರು. ಹೀಗೆ ಮಾಡುವುದರಿಂದ

ಶರೀರಶಾಸ್ತ್ರ ನಿಘಂಟು.

(ಆಂಗ್ಲೇಯಕರ್ನಾಟಕ).

ಮ|| ರಾ|| ಶ್ರೀ|| ಡಾಕ್ಟರ್ ಎಸ್. ವೆಂಕೋಬರಾವ್, ಬಿ.ಎ. ಪ್ರಿನ್ಸಿಪಾಲ್. ಆಯುರ್ವೇದಿಕ್ ಕಾಲಿಜನವರು ದಯವಿಟ್ಟು ಈ ಪಟ್ಟಿಯನ್ನು ಕಳುಹಿಸಿರುವರು. ವಿದ್ಯಾದಾಯಿನಿಯ ಪಾಠಕರು ಇದನ್ನು ನೋಡಿ ಯುಕ್ತಿಯುಕ್ತವಾದ ಬದಲಾವಣೆಗಳನ್ನು ಸೂಚಿಸಿದಲ್ಲಿ ಕನ್ನಡಿಗರು ತುಂಬಾ ಕೃತಜ್ಞರಾಗಿ ಅಂಗೀಕರಿಸುವರು ಕನ್ನಡದಲ್ಲಿ ಸರಿಯಾದ ಮಾತು ಸಿಕ್ಕದೆ ಭಾಷಾಂತರ ಮಾಡತಕ್ಕವರು ಪೇಚಾಡುವುದನ್ನು ನೋಡಿ ಮ|| ವೆಂಕೋಬರಾಯರು ಈ ಮಹದುಪಕಾರವನ್ನು ಮಾಡಿರುವರು. ಇದಕ್ಕಾಗಿ ಕನ್ನಡಿಗರು ಭಾಷಾಂತರ ಮಾಡತಕ್ಕವರೂ ಅವರಿಗೆ ತುಂಬಾ ಕೃತಜ್ಞರಾಗಿರುವೆವು.

ಎಡಿಟರ್

A

Abdomen ಹೊಟ್ಟೆ, ಉದರ.
Abduction ವಿಗಮನ.
Aberation ಭ್ರಂಶ.
Abortion ಗರ್ಭಸ್ರಾವ.
Acetabulum ಕೂಪಿ.
Acinus ಭಸ್ತ್ರಿ.
Acromion ಅಂಶಕೋಟಿ.
Addruction ಅಭಿಗವನ.
Agminated ಗುಚ್ಛಮಯ.
Air Cell ವಾಯುಪ್ರಸೇವ.
Alimentary Canal ಅನ್ನನಾಲ.
Allantois ಮಾಂಸಕ.
Alveolus ಕೋಶ.
Amnion ಉಲ್ಬ.
Amhiarthrosis ಅಲ್ಪಚಲ.
Ampulla ಕಂಸ.
Anastomosis ಸಂಗಮ.
Anatomy ರಚನವಿದ್ಯೆ, ರಾಚನಿಕ.
Angeiology ನಾಲಪ್ರಕರಣ.
Ankle ಗುಲ್ಫ, ಮೊಣಕಾಲು.
Ankle-joint ಮೊಣಕಾಲಸಂಧಿ.
Angle ಕೋಣ.
Anus ಗುದ.
Aorta ಬೃಹತಿ.
Aperture ಛಿದ್ರ.
Aponeurosis ಪ್ರಚ್ಛದ.
Apparatus ಉಪಕರಣ.
Appendage ಅನುಬಂಧ, ಶೇಷಾಂಶ.
Appendix ಪರಿಶಿಷ್ಟ.
Aqueous ಜಲಸ.
Arch ಚಾಪ, ಕಮಾನು, ಕೋಟೆ.
Area ಅಂಗಣ.
Areola (1) ಛಿದ್ರ, (2) ಶ್ಯಾಮಮಂಡಲ.
Arm ಬಾಹು, ತೋಳು.
Artery ಧಮನಿ.
Arthrodia ಸರ್ಪಿ.
Arthrology ಸಂಧಿಪ್ರಕರಣ.
Articulation ಸಂಧಿ.
Arytenoid ಕುಂಭ.
Astragalus ದೇವನ.
Atlas ಶೇಷ

Auricle ಕೆಶ್ಲೀಪಮು.
Axilla ಕಕ್ಷ, ಕೊಂಕಳು.
Axis ಅಕ್ಷ.
Axon ಮೇರು.
Absorption ಹೀರಿಕೊಳ್ಳುವಿಕೆ, ಗ್ರಸನ.
Abscess ವಿದ್ರಧಿ.
Acid ಅಮ್ಲ.
Acetic Acid ಶೌಕ್ತಿಕ.
Accessary ಸಹಕಾರಿ.
Accessory ಸಂಯುಕ್ತ.
Accident ವಿಪತ್ತು, ಬಾಧೆ
Ache ಶೂಲೆ
Adenoid ಗ್ರಂಥಿಲ.
Adipose ಮೇದಸ್ವಿ.
Afferent ಅಭಿಮುಖ.
After-bitth ಜರಾಯು.
Agent ಕರ್ತೃ.
Alcohol ಮದ್ಯಸಾರ.
Amyloid ಮಂಡ.
Amylopsin ಮಂಡರೂಪಿ.
Anæthetics ಸಂಜ್ಞಾಪಹಾರಿ.
Animal ಪ್ರಾಣಿ.
Analysis ವ್ಯಾಕೃತಿ.
Aphasia ವಾಙ್ನಾಶ.
Apnœa ಶ್ವಾಸರೋಧ.
Apoplexy ಸನ್ನ್ಯಾಸ.

Aquemous Humour ಜಲಧಾತು, ತೇಜೋಜಲ.
Arbor Vitæ ನಿಕುಂಜ.
Artereole ಧಮನಿಕ, ಧಮನೀಶಾಖೆ.
Asphyxia ಶ್ವಾಸಾವರೋಧ.
Assimilation ಸಮೀಕರಣ, ಪರಿಪಾಕ.
Attraction sphere ಆಕರ್ಷಣ ಮಂಡಲ.
Arachnoid ಲೂತಾಜಾಲ.
Anvil ಕೂರ್ಮ.
Accomodation ಸಂಧಾನ.
Arc ಚಾಪ.
Anterior ಅಗ್ರ, ಪೂರ್ವ.
Antiseptic ಪೂತಿಘ್ನ.
Armpit ಕಕ್ಷ.
Amœboid ಚಂಚಲ.
Auditory Passage ಕರ್ಣನಾಲ.
Ascending ಆರೋಹಿ.
Arsenic ಮನಃಶಿಲೆ.
Apex ಶಿಖೆ.
Apartment ಕೋಷ್ಠ.
Aneurism ನಾಡಿಸ್ಫೀತಿ.
Alkali ಕ್ಷಾರ.
Alkaline ಕ್ಷಾರಸ್ವಭಾವ.

B

Back ಬೆನ್ನು, ಪೃಷ್ಠ.

Ball-and-socket joint ಉಲೂಖಲ.

Band ಬಂಧ.

Bandage ಪಟ್ಟಿ, ಕವಲಿಕೆ.

Bar ಸಲಾಕೆ, ದಂಡ.

Bartholingland ಷ್ಲಕ್ಷ್ಣಗ್ರಂಥಿ.

Base ಮೂಲ, ತಲ, ಪೀಠ.

Basement Membrane ತಲಾವರಣ.

Basilar Aetery ಸೇತುಧಮನಿ.

Basilic Vein ಬಾಹುಶಿರೆ.

Biceps ದ್ವಿಶೀರ್ಷ.

Bicuspid ದ್ವಿಪಾಲಿ.

Bile ಪಿತ್ತ.

Bladder ಕೋಶ, ಮೂತ್ರಾಶಯ.

Blind Spot ಅಂಧಕ್ಷೇತ್ರ.

Blood ರಕ್ತ.

Body ಶರೀರ, ಕಾಯ, ದೇಹ.

Bone ಅಸ್ಥಿ, ಎಲುಬು, ಮೂಳೆ, ಯುಮಿಕೆ.

Brachial ಬಾಹುಸಂಬಂಧಿ.

Brain ಮಸ್ತಿಷ್ಕ.

Breast (1) ಎದೆ, ಉರಸ್ಸು, ವಕ್ಷಸ್ಸು, (2) ಸ್ತನ, ಕುಚ.

Brim ಕಂಠ, ಪ್ರಾಂತ.

Boil ಕುರವು, ಸ್ಫೋಟ.

Bronchus ಶ್ವಾಸನಾಳ.

Bronchiole ಶ್ವಾಸನಾಲಿಕ.

Bud ಮುಕುಳ.

Bulb ಕಂದ.

Bursa ಸ್ಯೂತ.

Buttock ಕುಂಡಿ, ನಿತಂಬ.

Bacillus ದಂಡರೂಪಿ.

Bacteria ದಂಡಕರೂಪಿ.

Bilirubin ಪಿತ್ತಲೋಹಿತ.

Biliverdin ಪಿತ್ತಹರಿತ.

Binocular ದ್ವಿನೇತ್ರಸಂಬಂಧ.

Bipolar ದ್ವಿಯುಷ್ಟಿ.

Birth ಜನನ.

Buffy ಪಾಂಡುರ.

Bundle ಕೂರ್ಚ.

Bed ಅಸ್ತರಣ.

Basis ಮೂಲ, ತಲ, ಪೀಠ.

Benzoin ಶಿಲಾರಸ.

Bubo ವೃಧ್ನ.

Boat ತರಿ.

Backbone ಅನೂಕ, ರೀಢಕ.

Branch ಶಾಖೆ.

Belly ಉದರ.

Blade ಪತ್ರ, ಫಲಕ.

Bag ಚೀಲ.

Breast-plate ಚೋಲಕ.

Botany ಉದ್ಭಿಜ್ಜವಿದ್ಯೆ.

Border ಅಂಚು

Bosom ಎದೆ, ವಕ್ಷಸ್ಸು.
Breast bone ಉರೋಸ್ಥಿ, ಎದೆ ಎಲುಬು.
Brown ಕಪಿಲ.
Bruise ಕ್ಷತ.
Ball ಕಂದುಕ, ಗೋಲ, ಚೆಂಡು.
Barometer ಆಕಾಶತ್ರೋಲಿನಿ
Basin ದ್ರೋಣಿ, ಬೋಗೋಣಿ.
Bead ಮಣಿ, ಗುಲಿ.
Beak ಚುಂಚು, ಕೊಕ್ಕು.
Biped ದ್ವಿಪದ.
Bivalve ದ್ವಿಪಾಟ.
Burn (1) ಸುಟ್ಟಗಾಯ, ಅಗ್ನಿವ್ರಣ; (2) ಉರಿ.
Biology ಜನ್ಮವಿದ್ಯೆ.

C

Cæcum ಅಂಧ್ರ.
Calcaneum ಪಾರ್ಷ್ಣಿಕ.
Canal ಪ್ರನಾಳ.
Canaliculus ನಾಲಿಕ, ಕುಲ್ಯಕ.
Canine tooth ದಂಷ್ಟ್ರ.
Capillary ನಾಡಿಕ.
Capsule ಪುಟ.
Carotid Artery ನೀಲೆ.
Carpus ಪ್ರಕೋಷ್ಠ.
Cartilage ತರುಣಾ.
Cauda equina ಅಶ್ವಪುಚ್ಛ.
Cavity ಗರ್ತ, ಬಿಲ, ಖಾತ.
Cell ಕಣ.
Cement ಲೇಪ.
Centre ಮಧ್ಯ, ಕೇಂದ್ರ.
Centro some ಮಧ್ಯಗಾತ್ರ.
Cerebellum ಅಲ್ಪಮಸ್ತಿಷ್ಕ.
Cerebrum ಮಹಾಮಸ್ತಿಷ್ಕ.
Cervix ಕಂಠ, ಕುತ್ತಿಗೆ.
Camber ಕೋಷ್ಠ, ಶಾಲೆ.
Capacity ಪರಿಮಾಣ, ವಿಸ್ತಾರ.
Cataract ಮಂಥ.
Cheek ಗಲ್ಲ.
Chest ಎದೆ, ವಕ್ಷಸ್ಸು, ಉರಸ್ಸು.
Chordæ Tendinæ ಸ್ನಾಯುಸೂತ್ರ.
Choroid ಕೃಷ್ಣಪಟಲ.
Chorion ಗರ್ಭವೇಷ್ಟನ.
Chyme ಮಂದರಸ.
Chyle ಶ್ವೇತರಸ, ಧಾತುಪ.
Circle ಮಂಡಲ, ವಲಯ.
Circulation ಚಲನ, ಸರಣ.
Circumduction ಪರಿಭ್ರಮಣ.
Clavicle ಜತ್ರು.
Cleft ಛಿದ್ರ.
Clitoris ಭಗಾಂಕುರ.
Coccyx ಗುದಾಸ್ಥಿ, ಪಿಕತುಂಡ.
Cochlea ಕಂಬು.

ಪ್ರಕೃತಿಶಾಸ್ತ್ರ

Distribution of Plants, Animals and Man.

ಮನುಷ್ಯನು ಕಾಡುಮೃಗಗಳ ಸ್ಥಿತಿಯಿಂದ ಈಗಿನ ನಾಗರಿಕತೆಯ ಸ್ಥಿತಿಯ ವರೆಗೆ ಕ್ರಮಕ್ರಮವಾಗಿ ಏರುತ್ತಬಂದಿರುವುದಕ್ಕೆಲ್ಲ ಭೂಗೋಳವೇ ಮುಖ್ಯ ಸಹಾಯಕವಾಗಿದೆ. ಭೂಮ್ಯುತ್ಪನ್ನಗಳನ್ನೂ ಪಾರ್ಥಿವಶಕ್ತಿಗಳನ್ನೂ ಉಪಯೋಗಿಸಿ ಕೊಂಡೇ ಮನುಷ್ಯನು ಇಷ್ಟು ದೊಡ್ಡವನಾಗಿರುವುದು.

ವಾಯುವು ಎಷ್ಟೋ ಕೋಟಿ ವರ್ಷಗಳಿಂದಲೂ ನೆಲದಮೇಲೂ ನೀರಿನ ಮೇಲೂ ಬೀಸುತ್ತ ಮಳೆಯನ್ನೂ ಅಲೆಗಳನ್ನೂ ಪ್ರವಾಹಗಳನ್ನೂ ಉಂಟುಮಾಡುತ್ತ ಬೀಸುತ್ತಲೇ ಇದ್ದಾಗ್ಯೂ ಮನುಷ್ಯನು ಕಾಡುಮೃಗದ ಅವಸ್ಥೆಯಲ್ಲಿದ್ದಾಗ ಅದರ ಸ್ವರೂಪವನ್ನೇ ಅರಿಯದೆ ಇದ್ದನು. ಅವನು ಬಾವುಟಗಳನ್ನು ಕಟ್ಟುವ ದೋಣಿಗಳನ್ನೂ ಗಾಳಿಯ ಯಂತ್ರಗಳನ್ನೂ ಕಂಡುಹಿಡಿದಾಗ ಅವನಿಗೆ ವಾಯುವಿನ ಉಪಯೋಗವು ತಿಳಿಯಲಾರಂಭವಾಯಿತು. ಹೀಗೆಯೇ ಬೆಟ್ಟಗಳ ಕಣಿವೆಗಳಲ್ಲೂ ಬಯಲಿನಲ್ಲೂ ಬಂಡೆಗಳಮೇಲೂ ಎಷ್ಟೋಕಾಲದಿಂದ ಪ್ರವಾಹಗಳು ಹರಿಯುತ್ತಿದ್ದರೂ ಇವನೇನೋ ಮೂಢನಾಗಿಯೇ ಇದ್ದನು. ಆಮೇಲೆ ಮನುಷ್ಯ ಆಹಾರೋಪಯೋಗಿ ಸಸ್ಯಗಳನ್ನು ನದಿಗಳ ಪ್ರವಾಹಗಳ ಬಳಿಯಲ್ಲಿ ಬೆಳೆಯುತ್ತ ಅವುಗಳ ಸಹಾಯವನ್ನು ಪಡೆಯಲಾರಂಭಿಸಲು ಅವುಗಳ ಉಪಯೋಗವೂ ತಿಳಿಯತೊಡಗಿತು. ಕ್ರಮೇಣ ಜಲಪಾತಗಳ ಶಕ್ತಿಗಳನ್ನುಪಯೋಗಿಸಿಕೊಂಡು ಅನೇಕ ಯಂತ್ರಗಳನ್ನು ಕಲ್ಪಿಸಿ ಕೊಂಡನು.

ಭೂಮಿಯಲ್ಲಿರುವ ಆಕರ್ಷಣಶಕ್ತಿಯ ಮಹಿಮೆಯನ್ನು ಅಷ್ಟಿಷ್ಟೆಂದು ಹೇಳಲಸಾಧ್ಯ. ಆದರೂ ಎಷ್ಟೋಕಾಲದವರೆಗೆ ಯಾರಿಗೂ ಈಯಂಶ ಗೊತ್ತೇ ಇರಲಿಲ್ಲ. ಸಕಲವಿಧವಾದ ಕೈಗಾರಿಕೆಗಳಿಗೂ ಮೂಲಾಧಾರವಾದ ಕಲ್ಲಿದ್ದಲು ಕಬ್ಬಿಣ ಭೂಮಿಯ ಅಂತರ್ಗರ್ಭದಲ್ಲಿ ಅಡಗಿದ್ದರೂ ಅವನ್ನು ಉಪಯೋಗಿಸಿಕೊಳ್ಳುವ ಚಾತುರ್ಯವು ಯಾರಿಗೂ ಇರಲಿಲ್ಲ. ಈಗಲಾದರೋ ಯಾರು ಈ ಯೆರಡುವಸ್ತುಗಳ ಪೂರ್ಣ

ಪ್ರಯೋಜನಗಳನ್ನು ಪಡೆಯುತ್ತಿರುವರೋ ಅವರೇ ಒಟ್ಟು ಭೂಲೋಕವನ್ನೆಲ್ಲ ವಶಪಡಿಸಿಕೊಳ್ಳುವ ಚೈತನ್ಯವುಳ್ಳವರು ಎಂಬುದು ನಿರ್ಧರವಾಗಿದೆ.

ಈ ಭೂಲೋಕದಲ್ಲಿ ಎಷ್ಟೋಕಾಲದಿಂದ ಸಸ್ಯಗಳೂ ಪ್ರಾಣಿಗಳೂ ವಾಸವಾಗಿದ್ದವೆಂಬುದಕ್ಕೆ ಹಲವು ದೃಷ್ಟಾಂತಗಳಿವೆ. ಅನೇಕ ಬಂಡೆಗಳ ಪದರೆಗಳಲ್ಲಿ ಕೂಡ ಸಸ್ಯಗಳ ಮತ್ತು ಪ್ರಾಣಿಗಳ ದೇಹಭಾಗಗಳು ದೊರೆಯುತ್ತಿವೆ.

ಸಚೇತನವಸ್ತುಗಳು ಸರ್ವತ್ರ ಸಮವಾಗಿರುವಂತೆ ಪ್ರಸರಿಸಲು ಸ್ವಾಭಾವಿಕವಾದ ಕೆಲವು ಅಡಚಣೆಗಳುಂಟು. ನೆಲದಮೇಲಿನ ಸಸ್ಯಪ್ರಾಣಿಗಳು ಮತ್ತೊಂದು ದೂರಪ್ರಾಂತದ ನೆಲಕ್ಕೆ ಹೋಗಲು ಸಮುದ್ರಗಳು ಅಡ್ಡಿಯಾಗಿವೆ. ಅಂತಹವು ವಾಯುವಿನ ಅಥವಾ ನೀರಿನ ಮೂಲಕವಾಗಿಯೇ ಹಾಗೆ ಹೊರಡಬೇಕಾಗಿದೆ. ಹಾಗೆಯೇ ಜಲಚರಗಳಿಗೆ ನೆಲದಿಂದ ಅಡಚಣೆ. ಉಷ್ಣವಲಯದವು ಶೀತವಲಯಗಳಲ್ಲಿ ಬದುಕಲಾರವು. ಹೀಗೆಯೇ ಹುಲ್ಲು ಮೇಯುವ ಪ್ರಾಣಿಗಳು ಮರುಭೂಮಿಗಳಲ್ಲಿ ಅಥವಾ ಕಗ್ಗಾಡಿನ ಬೆಟ್ಟಗಳಲ್ಲಿ ಬಾಳಲಾರವು.

ದಪ್ಪವಾದ ಬೀಜಗಳುಳ್ಳ ತೆಂಗು ಮುಂತಾದ ಸಸ್ಯಗಳು ತಮ್ಮ ತಮ್ಮ ತಾಯಿಮರದಿಂದಲೇ ನಿದಾನವಾಗಿ ಹರಡುವವು. ಬಲುಸಣ್ಣಗೂ ಹಗುರವಾಗಿಯೂ ಇರುವ ಬೀಜಗಳುಳ್ಳ ಸಸ್ಯಗಳು ಗಾಳಿಯಿಂದ ಅಥವಾ ಪಕ್ಷಿಗಳ ಮೂಲಕ ಬಲುಬೇಗ ಹರಡುವವು. ಈರೀತಿ ಕೆಲವು ಸಸ್ಯಗಳು ಲೋಕವೆಲ್ಲ ಹರಡಿಕೊಂಡಿವೆ. ಹವಳದ ಹುಳು ಮುಂತಾದ ಕೆಲವು ಪ್ರಾಣಿಗಳು ಸಮುದ್ರದ ತಳದಲ್ಲಿ (ನೀರಿನೊಳಗೆ) ಇದ್ದು ಅಲೆಗಳಿಂದ ಮತ್ತು ಪ್ರವಾಹಗಳಿಂದ ಹೊಡೆದುಕೊಂಡು ಬರುವ ಆಹಾರದಿಂದಲೇ ಜೀವಿಸುತ್ತವೆ. ನೆಲದಲ್ಲಿ ಬೇರೂರಿ ಬೆಳೆಯುವ ಗಿಡಗಳು ಆಹಾರಕ್ಕೋಸ್ಕರ ತಾವು ಹೋಗಲಾರದಿದ್ದರೂ ತಮ್ಮ ವಂಶಾಭಿವೃದ್ಧಿಗಾಗಿ ಎಲ್ಲೆಲ್ಲೂ ತಮ್ಮ ಬೀಜಗಳನ್ನು ಕಳುಹಿಸುತ್ತವೆಂದಾಯಿತು. ಹೀಗೆಯೇ ಸೂಕ್ಷ್ಮಪ್ರಾಣಿಗಳೂ ಹರಡುವುವು.

ಅನೇಕ ಪ್ರಾಣಿಗಳಿಗೆ ಪ್ರಯಾಣಕ್ಕೆ ಸಾಧನಗಳಿವೆ. ಉದಾ—ಕೆಲವಕ್ಕೆ ಈಜಲು fins, ಕೆಲವಕ್ಕೆ ನಡೆಯಲು, ಕಾಲುಗಳು ಇನ್ನು ಕೆಲವಕ್ಕೆ ಹಾರಲು ರೆಕ್ಕೆಗಳು ಇವೆ. ಅವು ಆಹಾರವನ್ನು ಹುಡುಕಿಕೊಂಡು ಅಲೆಯುತ್ತ ಬಂದದ್ದರಿಂದಲೇ ಭೂಮಿಯ ಸಮಸ್ತಭಾಗಗಳಲ್ಲಿ ಹೆಚ್ಚು ಪ್ರಚಾರಕ್ಕೆ ಅವಕಾಶವಾಯಿತು.

ಬಲವಾಗಿ ಹಾರುವ ಹಕ್ಕಿಗಳು ಸರ್ವತ್ರ ಹರಡಿವೆ. ನಡೆಯುವ ಹಕ್ಕಿಗಳೂ ಚತುಷ್ಪಾದಿಗಳೂ ಅಷ್ಟು ಹರಡಿಲ್ಲ. ಆಫ್ರಿಕದ ಉಷ್ಟ್ರಪಕ್ಷಿಯೂ, ಆಸ್ಟ್ರೇಲಿಯದ ಎಮುಹಕ್ಕಿಯೂ ಅಮೆರಿಕದ Rhea ಎಂಬ ಪ್ರಾಣಿಯೂ ಆಯಾ ದೇಶಗಳಿಂದ ಹೊರಗೆ ಹೊರಟೇ ಇಲ್ಲ. ಎಷ್ಟು ದೂರವಾದರೂ ರೆಕ್ಕೆಗಳನ್ನಲುಗಿಸದೆ ವೇಗವಾಗಿ ಸಂಚರಿಸಬಲ್ಲ ಆಲ್ಬಟ್ರಾಸ್ ಎಂಬ ಪಕ್ಷಿಯು ದಕ್ಷಿಣಸಾಗರದಲ್ಲೆಲ್ಲಾ ಇದೆ. ದ|| ಅಮೇರಿಕದ ಹಕ್ಕಿಗಳ ಪೈಕಿ ಸುಮಾರು 50 ಬಗೆಯವು ಪಶ್ಚಿಮಯೂರೋಪಿನಲ್ಲಿವೆ. ಆದರೆ ಯಾವ ಪ್ರಾಣಿಯೂ ಯೂರೋಪಿನಿಂದ ಹೋಗಿ ಉತ್ತರ ಅಮೇರಿಕಾದಲ್ಲಿ ನೆಲೆಗೊಳ್ಳಲಿಲ್ಲ. ಯಾಕೆಂದರೆ–ಗಾಳಿಯು ಪಶ್ಚಿಮದಿಕ್ಕಿನಲ್ಲಿರುವ ಅಮೆರಿಕಾಖಂಡದ ಕಡೆಯಿಂದ ಮಾತ್ರ ಯೂರೋಪಿಗೆ ಬೀಸುತ್ತದೆ. ಭೂಮಿಯಮೇಲಿನ ವಾಯುಸಂಚಾರವು ಭೂಮಿಯ ಚಲನೆಯಿಂದ ಉಂಟಾಗುತ್ತದೆಯಾದ್ದರಿಂದ ಸ್ವರಕ್ಕೂ ಅಂದರೆ ಪ್ರಾಣಿಗಳ ಪ್ರಸರಕ್ಕೂ ಭೂಮಿಯ ಚಲನದ ವಿಚಾರವೇ ಮುಖ್ಯ ಕಾರಣವೆಂದಾಯಿತು.

Geographical factors in struggle for Existenco.

ಜೀವನಸ್ಥಿತಿಗೆ ಭೂಗೋಳದ ಅನುಕೂಲಗಳು :—

ಯಾವಯಾವ ಸ್ಥಳದಲ್ಲಿ ಯಾವಯಾವುವು ಅನುಕೂಲವಾಗಿ (ಆಹಾರಗಳಿಗೆ) ಇರಬಹುದೋ ಅಂತಹ ಸಸ್ಯಗಳನ್ನೂ ಪ್ರಾಣಿಗಳನ್ನೂ ಆಯಾ ಸ್ಥಳಗಳಲ್ಲಿ ದೇವರು ಹೆಚ್ಚಾಗಿಟ್ಟಿದಾನೆ. ಆಹಾರವು ಹೆಚ್ಚಾಗಿದ್ದ ಕಡೆ ಅವನ್ನು ತಿನ್ನುವವುಗಳ ಸಂಖ್ಯೆಯೂ ಹೆಚ್ಚು. ಸಾಗರಗಳ ಆಳವಿಲ್ಲದ ಪ್ರದೇಶಗಳಲ್ಲೂ ನೆಲದಮೇಲೆ ಉಷ್ಣವಲಯ ಮತ್ತು ಸಮಶೀತೋಷ್ಣವಲಯಗಳಲ್ಲೂ ಇದಕ್ಕೆ ಅನೇಕ ಉದಾಹರಣೆಗಳುಂಟು. ವಿಷುವದ್ರೇಖೆಯ ಬಳಿಯಲ್ಲಿ ಸಸ್ಯಗಳು ಬಲು ಸೊಂಪಾಗಿ ಬೆಳೆಯುವುದೂ ಇದಕ್ಕೊಂದು ಉದಾಹರಣೆ. ಆಹಾರವಸ್ತುಗಳು ಕಡಮೆಯಾದ ಕಡೆ ಅಂದರೆ ತುಂಬಾ ಒಣಗಿದ ಮತ್ತು ತುಂಬ ಚಳಿಯಾದ ಸ್ಥಳಗಳಲ್ಲಿ ಸಸ್ಯ ಪ್ರಾಣಿಗಳ ಸಂಖ್ಯೆ ಬಲುಕಡಮೆ. ಉದಾ—ಗ್ರೀನ್‌ಲ್ಯಾಂಡಿನ ಮಧ್ಯಭಾಗದ ಶೈತ್ಯಪ್ರದೇಶ.

ಸಸ್ಯಪ್ರಾಣಿಗಳು ಆಯಾ ಸ್ಥಳಗಳಲ್ಲಿ ಹೆಚ್ಚುವುದಕ್ಕೆ ಅಥವಾ ಕಡಮೆಯಾಗುವುದಕ್ಕೆ ಮನುಷ್ಯರೂ ಒಂದು ಕಾರಣವು. ಹೇಗೆಂದರೆ–ಹೊಸದಾಗಿ ಕಂಡು

ತಿಳಿದ ದೇಶಗಳ ಅರಣ್ಯಗಳನ್ನು ಕಡಿದು ಅಲ್ಲಿ ಆಹಾರಕ್ಕೂ ಉಪಯುಕ್ತವಾದ ಕಾಳು ಗಳ ಪೈರನ್ನು ಬೆಳೆಯುವುದು ಕಾಡುಮೃಗಗಳನ್ನು ನಾಶಪಡಿಸಿ ಬಳಕೆಯಾದ ಪ್ರಾಣಿಗಳನ್ನು ಅಂತಹಸ್ಥಳಗಳಲ್ಲಿ ಸಾಕುವುದು. ಹೀಗೆ ಆದರೆ ಇಂತಹ ಕಾರಣಗಳಿ ಲ್ಲದಿದ್ದಲ್ಲಿ ಆಯಾ ಸ್ಥಳಗಳ ಸಸ್ಯ ಪ್ರಾಣಿಗಳ ಸಂಖ್ಯೆಯು ಎಷ್ಟು ಶತಮಾನಗಳಾ ದರೂ ಒಂದೇವಿಧವಾಗಿರುವುದು.

ಪ್ರತಿ ಸಸ್ಯವೂ ಪ್ರತಿ ಪ್ರಾಣಿಯೂ ಸಂಖ್ಯೆಯಲ್ಲಿ ಹೆಚ್ಚುತ್ತಿವೆ. ಹೇಗೆಂದರೆ:– ಸಸ್ಯಗಳ ಬೀಳಗಳೂ ಪ್ರಾಣಿಗಳ ಸಂತಾನಗಳೂ ಉತ್ತರೋತ್ತರವಾಗಿ ತಮ್ಮ ತಮ್ಮ ವಂಶಗಳನ್ನು ಹೆಚ್ಚಿಸುತ್ತಲೇ ಬರುತ್ತಿವೆ ಒಂದು ಕಾಳಿನಿಂದ ಹುಟ್ಟಿದ ಗಿಡವು ಹಲವು ತೆನೆಗಳನ್ನು ಬಿಡುವುದು. ಹೀಗೆ ಮುಂದಕ್ಕೂ ಒಂದೊಂದು ಕಾಳೂ ಹೀಗೆಯೇ. ಒಂದೊಂದು ಮೀನಿನ ಮೊಟ್ಟೆಯಿಂದ ಸಾವಿರಾರು ಮೀನುಗಳು ಉತ್ಪ ತ್ತಿಯಾಗುವುವು. ಇಂತಹ ಕಾರಣಗಳಿಂದ ಸಸ್ಯಪ್ರಾಣಿಗಳು ಲೋಕದಲ್ಲಿ ಅಸಂ ಖ್ಯಾತವಾಗಿ ಹೆಚ್ಚುವ ಸಂಭವವುಂಟು.

ಕೆಲವು ಸ್ಥಳಗಳಲ್ಲಿ ಸಸ್ಯಪ್ರಾಣಿಗಳ ಬೀಜಗಳೂ ಸಂತಾನಗಳೂ ಹೆಚ್ಚಾಗಿ ದ್ದರೂ ಸಂಖ್ಯೆಯು ಹೆಚ್ಚದಿರುವುದಕ್ಕೆ ಕೆಲವು ಕಾರಣಗಳೂ ಉಂಟು. ಎಷ್ಟೋ ಬೀಜಗಳು ತಮಗೆ ಅನುಕೂಲವಾದ ಭೂಮಿಯಲ್ಲಿ ಬೀಳದಿರುವುದರಿಂದ ಅಥವಾ ಪ್ರಾಣಿಗಳಿಂದ ತಿನ್ನಲ್ಪಡುವುದರಿಂದ ನಾಶವಾಗುವುವು. ಆದುದರಿಂದ ಯಾವ ಸಸ್ಯ ಪ್ರಾಣಿಗಳಾದರೂ ತಮ್ಮಂತಿರುವ (ಸಹೋದರ ಸಮುದಾಯವನ್ನು) ಸ್ವಜಾತೀಯ ರನ್ನು ನಾಶಪಡಿಸುವುದರ ಮೂಲಕ ಅವುಗಳ ಪ್ರಯೋಜನವನ್ನು ತಾವೇ ಪಡೆ ಯುತ್ತಬರುವುವೋ ಅವು ಅಭಿವೃದ್ಧಿಗೆ ಬರುತ್ತವೆ. ಅಂದರೆ ಎಷ್ಟೋ ಗಂಡಗಳಲ್ಲಿ ಕಳೆದರೆ ಅವು ಊರ್ಜಿತವಾಗುವುವು.

ಹಾಗೆ ಸಸ್ಯ ಪ್ರಾಣಿಗಳು ಗಂಡಗಳನ್ನು ಗೆದ್ದುಕೊಂಡು ಕಳೆದುಳಿಯಲು ಭೂಗೋಳದ ಸನ್ನಿವೇಶಗಳೂ ಸಹಾಯಕ. ಮೀನುಗಳು ನೀರಿನಲ್ಲಿ ಸುಲಭವಾಗಿ ಈಜಲನುಕೂಲವಾದ ಆಕಾರವನ್ನೂ ಆಹಾರವನ್ನೂ ಪಡೆಯುವುದಕ್ಕೂ ಇತರ ಪ್ರಾಣಿಗಳಿಂದ ಉಂಟಾಗುವ ಗಂಡಗಳನ್ನು ತಪ್ಪಿಸಿಕೊಳ್ಳಲಿಕ್ಕೂ ಸಹಾಯಕವಾದ ರಚನೆಯನ್ನು ಪಡೆದಿವೆ. (ಸಶೇಷ.)